ಶ್ರೀರಾಮಾಯಣ ಪ್ರದೀಪ

ಶ್ರೀದೇವಿ

N. L. T. [illegible]
Sri Ramayana Pradip.

ಶ್ರೀದೇವಿ ಪ್ರಕಾಶನ
ಮಂಡ್ಯ
1989

ಶ್ರೀ ರಾಮಾಯಣ ಪ್ರದೀಪ

ಶ್ರೀದೇವಿ
ಯಾದವಾದ್ರಿ, ಮಂಡ್ಯ.

ಪ್ರಕಾಶಕರು
ಶ್ರೀದೇವಿ ಪ್ರಕಾಶನ
3018, ನೂರಡಿ ರಸ್ತೆ, ನೆಹರುನಗರ, ಮಂಡ್ಯ. (ಕರ್ನಾಟಕ)
1989

Sri Ramayana Pradeepa—(Critical Analysis by Sri Ramayana) by Smt. Sreedevi (M. N. Singaramma) and Published by Sreedevi Prakashana. 3018, 100feet Road, Nehru Nagar, Mandya (Karnataka), Second Edition 1989, Price Rs. 16—00.

© ಎಲ್ಲಾ ಹಕ್ಕುಗಳು ಲೇಖಕಿಯವರವು

1000 ಪ್ರತಿಗಳು

ಕೃತಿಗಳಿಗೆ
ವಿದ್ಯಾವಿಚಕ್ಷಣಾ ಎಂ. ಎನ್. ಶಿಂಗಾರಮ್ಮ,
(ಕಾವ್ಯನಾಮ ಶ್ರೀದೇವಿ)
3018, ನೂರಡಿ ರಸ್ತೆ, ನೆಹರುನಗರ
ಮಂಡ್ಯ-571 401
ದೂರವಾಣಿ 20897

ಬೆಲೆ : ರೂ. 16-00

ಮುದ್ರಕರು
ಶ್ರೀ ಗಣೇಶ್ ಪ್ರಿಂಟರ್ಸ್,
ಅಶೋಕನಗರ, 2ನೇ ಕ್ರಾಸ್, ಬಿ. ವಿ. ಕೆ. ರಸ್ತೆ,
ಮಂಡ್ಯ-571 401

ಮೂಲ ಲೇಖಕರು—ತಮಿಳು



ದಿವಂಗತ ಶ್ರೀ॥ ಉ॥ ವೇ॥ ನ್ಯಾಯವೇದಾಂತ ವಿದ್ವಾನ್

ಕಾರಪ್ಪನ್‌ಕಾಡು ವೆಂಕಟಾಚಾರ್ಯ ಸ್ವಾಮಿಯವರು

ಮದ್ರಾಸ್

॥ ಶ್ರೀ ॥

॥ ಶ್ರೀಮತೇ ರಾಮಾನುಜಾಯ ನಮಃ ॥

ಶ್ರೀ ಯದುಗಿರಿ ಯತಿರಾಜ ಮಠ

ಮೂಲಸಂಸ್ಥಾನ, ತಿರುನಾರಾಯಣಪುರ, ಮೇಲುಕೋಟೆ, ಪಾಂಡವಪುರ

ಕರ್ನಾಟಕ ರಾಜ್ಯ

ಶ್ರೀ ಶ್ರೀ ಯದುಗಿರಿಯತಿರಾಜ ನಾರಾಯಣರಾಮಾನುಜ ಜೀಯರ್

ಸ್ವಾಮಿಗಳವರಿಂದ ಅನುಗ್ರಹಿಸಲ್ಪಟ್ಟ

ಆಶೀರ್ವಚನ

ಶ್ರೀ ವೈಷ್ಣವರದು ಉಭಯವೇದಾಂತ. ಒಂದು ಸಂಸ್ಕೃತವಾದರೆ ಮತ್ತೊಂದು ದ್ರಾವಿಡ. ಇವೆರಡೂ ತತ್ತ್ವದರ್ಶನದ ಅವಿಭಾಜ್ಯವಾದ ಅಂಗ. ಇವೆರಡರಲ್ಲೂ ನಿರೂಪಿಸುವ ಸಾಧನೆಗಳಲ್ಲಿ ಶರಣಾಗತಿ ಅತಿ ಮುಖ್ಯವಾದುದು. ಈ ಅಂಶವನ್ನು ವಿವಿಧ ಅನುಭವಗಳ ಮೂಲಕ ವಿವರಿಸುವ ಗ್ರಂಥಗಳಲ್ಲಿ ಮುಖ್ಯವಾದವು ಎರಡು. ವಾಲ್ಮೀಕಿ ಮಹರ್ಷಿಯ ಶ್ರೀ ರಾಮಾಯಣ ಒಂದು ಶಠಕೋಪಮುನಿಗಳ ತಿರುವಾಯ್ ಮೊಳಿ ಮತ್ತೊಂದು. ಇವೆರಡೂ ಶ್ರೀವೈಷ್ಣವ ಸಿದ್ಧಾಂತದ ಎರಡು ಕಣ್ಣುಗಳು.

ವೇದ-ವೇದಾಂತಗಳಲ್ಲಿ ಅವಶ್ಯ ತಿಳಿಯಬೇಕಾದ ಅಂಶಗಳನ್ನು ಮಹರ್ಷಿಗಳು ಐದಾಗಿ ವಿಂಗಡಿಸಿದ್ದಾರೆ. (೧) ಜೀವಾತ್ಮನ ಸ್ವರೂಪ (೨) ಪರಮಾತ್ಮನ ಸ್ವರೂಪ (೩) ಪರಮಾತ್ಮನನ್ನು ಪಡೆಯುವ ಉಪಾಯ (೪) ಪರಮಾತ್ಮನನ್ನು ಪಡೆಯುವುದೆಂಬ ಪುರುಷಾರ್ಥ (೫) ಈ ಸ್ವರೂಪ-ಉಪಾಯ-ಪುರುಷಾರ್ಥಗಳ ವಿರೋಧಿವರ್ಗ. ಶರಣಾಗತನಾಗುವವನು ಈ ಐದನ್ನೂ ತಿಳಿದಿರಬೇಕು. ಇವೆಲ್ಲವನ್ನೂ ಶ್ರೀವೈಷ್ಣವಾಚಾರ್ಯರು ಮಂತ್ರರೂಪದಲ್ಲಿ ಉಪದೇಶಿಸಿಯೇ ಸಕಲ ಜಾತಿಯ ಜನರಿಗೂ ವೈಷ್ಣವ ದೀಕ್ಷೆಯನ್ನು ಕೊಡುತ್ತಾರೆ. ಈ ಮಂತ್ರಗಳು ವೇದೋಪನಿಷತ್ ಮತ್ತು ಭಗವದ್ಗೀತೆಗಳಲ್ಲಿ ಅಡಗಿವೆ. ವೇದಸಾರವಾದ ಇವುಗಳ ವೈಜ್ಞಾನಿಕ ನಿರೂಪಣೆ ಬ್ರಹ್ಮಸೂತ್ರಗಳಲ್ಲಿದೆ. ಆದುದರಿಂದ ಇವೆಲ್ಲದರ ಅಧ್ಯಯನ ಶರಣಾಗತನಿಗೆ ಅವನ ಯೋಗ್ಯತಾನುಸಾರ ಅವಶ್ಯಕ.

ಇಷ್ಟೆಲ್ಲ ಇವುಗಳ ಅಧ್ಯಯನ ಚಿಂತನಗಳನ್ನು ಮಾಡಿದರೂ ಅವು ಕೇವಲ ಶುಷ್ಕ ಎನಿಸುವುದಲ್ಲದೆ ಅನುಭವಕ್ಕೆ ಬಾರದ ವಿಚಾರಗಳೆಂಬಂತೆ ಶರಣಾಗತನಾಗುವವನಿಗೂ ಆದವನಿಗೂ ಸಹ ನಿರುಪಯುಕ್ತವಾಗಿ ಹೋದಾವು. ಹಾಗಾಗದಿರಲು ನಮಗೆಲ್ಲ

ವಾಲ್ಮೀಕಿಯ ಐತಿಹಾಸಿಕ ಅನುಭವಗಳ ಒಂದು ಪರಂಪರೆಯನ್ನೂ, ಶಠಕೋಪಮುನಿಯ ಮಾನಸಿಕ ಅನುಭವಗಳ ಒಂದು ಪರಂಪರೆಯನ್ನೂ, ನಮ್ಮ ಪೂರ್ವಾಚಾರ್ಯರು ಶ್ರೇಷ್ಠವಾದ ಕೊಡುಗೆಯಾಗಿ ನೀಡಿ ಹೋಗಿದ್ದಾರೆ. ಆದಿಯಿಂದ ಅಂತ್ಯದವರೆಗೆ ಶರಣಾಗತಿ ಪ್ರಸಂಗಗಳ ಒಂದು ದೊಡ್ಡ ಸರಪಳಿಯಂತಹ ಈ ಶ್ರೀ ರಾಮಾಯಣ ಮತ್ತು ತಿರುವಾಯ್‌ಮೊಳಿಗಳೆರಡೂ "ದೀರ್ಘಶರಣಾಗತಿ" ಎನಿಸಿವೆ. ಇವುಗಳಿಂದ ನಮಗೆ ಸರಳ ಸುಲಭವಾಗಿ ಸಕಲ ವೇದಾಂತಾರ್ಥಗಳೂ ಅನುಭವಕ್ಕೆ ಬರುತ್ತವೆ.

ಇಂತಹ ದಿವ್ಯಗ್ರಂಥಗಳಲ್ಲಿ ಎಲ್ಲ ದೇಶ-ವಿದೇಶಗಳಲ್ಲೂ ಹರಡಿ ಸಾರ್ವತ್ರಿಕವಾದ ಸಂಸ್ಕೃತ ಭಾಷಾಮಯವಾದ ಶ್ರೀ ರಾಮಾಯಣಕ್ಕೆ ತಿರುವಾಯ್‌ಮೊಳಿಗಿಂತ ಒಂದು ರೀತಿಯ ಹಿರಿಮೆ ಇದ್ದೇ ಇದೆ. ಹೀಗೆ ವಿಶ್ವಮಾನ್ಯವಾದ ತನ್ನ ಭಾಷಾರಮ್ಯತೆಯಿಂದಲೂ ಐತಿಹಾಸಿಕತೆಯಿಂದಲೂ ಶ್ರೀರಾಮಾಯಣವು ನಮ್ಮ ಹೃದಯದಲ್ಲಿ ನೆಲೆಸುವ ಸಕಲ ವೇದಾಂತಾರ್ಥಗಳನ್ನು ಸರಿಯಾಗಿ ನೋಡಿ ತಿಳಿಯಲು ಒಂದು ಉತ್ತಮವಾದ ಕೈಗನ್ನಡಿಯಂತಿದೆ.

ಪ್ರಕೃತ ಈ ಕನ್ನಡ ಗ್ರಂಥಕ್ಕೆ ಮೂಲವಾದ ಶ್ರೀ ರಾಮಾಯಣದ ತಮಿಳ್ ಉಪನ್ಯಾಸಗಳು ಆ ಕನ್ನಡಿಯ ಮೇಲಿನ ದೂಳನ್ನು ಒರಸಿ ಅದರ ನಿಜವಾದ ಪ್ರಕಾಶನಕ್ಕೆ ಬಹಳ ಮುಖ್ಯ ಸಾಧನಗಳಾಗಿವೆ. ಹಾಗೆ ಶುದ್ಧವಾದ ಕನ್ನಡಿಯನ್ನು ಜನರ ಮುಖಕ್ಕೆ ಹಿಡಿಯುವಂತಹ ಕೆಲಸ ಅಂದರೆ; ಈ ಕನ್ನಡ ಅನುವಾದ ಕಾರ್ಯ. ಈ ಅನುವಾದದಲ್ಲಿ ಮೂಲ ತಮಿಳಿನ ಶೈಲಿಯನ್ನೇ ಅನುಸರಿಸಿದ್ದರೂ ಕೆಲವೆಡೆ ಕನ್ನಡ ಭಾಷೆಯ ಮತ್ತು ಸರಳ ಸಣ್ಣ ವಾಕ್ಯಗಳ ಶೈಲಿಯನ್ನು ಅಳವಡಿಸಿಕೊಳ್ಳದಿರುವುದರಿಂದ ಸಾಮಾನ್ಯ ಓದುಗರಿಗೆ ಸ್ವಲ್ಪ ಹಿಂಸೆಯಾಗಬಹುದು. ಆದರೂ ಮೂಲ ತಮಿಳು ಉಪನ್ಯಾಸದ ಕ್ರಮವು ಶಾಸ್ತ್ರೀಯವೂ ಅತ್ಯಂತ ಪರಿಶುದ್ಧವೂ ಆದುದರಿಂದ ಅದೇ ಕ್ರಮದಲ್ಲಿರುವ ಈ ಅನುವಾದವೂ ಓದುಗರಿಗೆ ಶ್ರೀ ರಾಮಾಯಣ ಮತ್ತು ವೇದಾಂತಗಳ ರಹಸ್ಯವನ್ನು ಸ್ಪಷ್ಟವಾಗಿಯೇ ತಿಳಿಸುತ್ತದೆ.

ಮೂಲ ಉಪನ್ಯಾಸಕರಾದ ದಿವಂಗತ ಶ್ರೀ|| ಉ|| ವೇ|| ಕಾರಪ್ಪನ್‌ಕಾಡು ವೆಂಕಟಾಚಾರ್ಯರು ನ್ಯಾಯವೇದಾಂತಗಳಲ್ಲಿ ಪರಿಣತ ವಿದ್ವಾಂಸರು ಮಾತ್ರವಲ್ಲ; ಅತ್ಯಂತ ಸರಳರೂ, ಸಹೃದಯರೂ, ವಾಗ್ಮಿಗಳೂ, ಪರಿಶುದ್ಧ ಚಾರಿತ್ರರೂ, ಪ್ರಸಿದ್ಧ ಉಪನ್ಯಾಸಕರೂ ಆಗಿದ್ದರು. ತಮಿಳುನಾಡಿನವರಾದ ಅವರ ಉಪನ್ಯಾಸಗಳನ್ನು ನಮ್ಮ ಹಿಂದಿನ ಮಹಾರಾಜರೂ ಕನ್ನಡನಾಡಿನಲ್ಲಿ ಏರ್ಪಡಿಸಿ ಗೌರವಿಸಿದ್ದರು. ಆ ಬಗ್ಗೆ "ಚಿಕ್ಕ ದೇವರಾಜ ಬಿನ್ನಪ" ಎಂಬ ಕನ್ನಡ ವೇದಾಂತ ಗ್ರಂಥವನ್ನು ಕುರಿತಾದ ಆಚಾರ್ಯರ ಉಪನ್ಯಾಸಮಾಲೆ "ವಿಶಿಷ್ಟಾದ್ವೈತಸಾರ"ವಾಗಿ ಪ್ರಕಟವಾಗಿದೆ. ಆಚಾರ್ಯರು ಉಭಯ ವೇದಾಂತಗಳಲ್ಲೂ ಶ್ರೀ ವೈಷ್ಣವರ ಉಭಯ ಸಂಪ್ರದಾಯಗಳಲ್ಲೂ ಸಮರ್ಥರೂ ಪ್ರಾಮಾಣಿಕರೂ ಆದ ಏಕೈಕ ವ್ಯಕ್ತಿಯಾಗಿದ್ದರು. ಇಂದು ಅಪ್ರಾಮಾಣಿಕವಾದ ಭಿನ್ನತೆಯಿಂದ ಪರಸ್ಪರ ದೂರಸರಿಯುತ್ತಿರುವ ತೆಂಗಲೆ-ವಡಗಲೆ-ಉಭಯ

ಸಂಪ್ರದಾಯಗಳಿಗೂ ಪ್ರಾಮಾಣಿಕ ರೀತಿಯ ಸ್ವಾಭಾವಿಕವಾದ ಸೌಹಾರ್ದ ಮತ್ತು ಪರಸ್ಪರ ವಿನಿಮಯಗಳಿಂದ ಫಲತಃ ಏಕತೆಯನ್ನೇ ತೋರಿಸುವುದು ಆಚಾರ್ಯರ ವೈಶಿಷ್ಟ್ಯವಾಗಿತ್ತು.

ಅಂತಹುದರಲ್ಲಿ ಅವರ ಶಿಷ್ಯೆಯಾಗಿ ವೇದಾಂತಮಯ ಜೀವನವನ್ನೇ ನಡೆಸುತ್ತಿರುವ ಯಾದವಾದ್ರಿಯ ಶ್ರೀದೇವಿಯ ಈ "ರಾಮಾಯಣ ಪ್ರದೀಪ" ಓದುಗರಿಗೆ ಶ್ರೀವೈಷ್ಣವ ಶ್ರೀಯನ್ನು ತೋರಿಸಿಕೊಡಲು ಬಹಳ ಉತ್ತಮ ಸಾಧನ. ಇಂತಹ ಅನುವಾದ ಕಾರ್ಯದಿಂದ ಸಂತುಷ್ಟರಾಗುವ ಸಕಲ ಭಾಗವತೋತ್ತಮರ ಅನುಗ್ರಹವೂ ಶ್ರೀದೇವಿಯಿಂದ ಇಂತಹ ಇನ್ನೂ ಒಳ್ಳೆಯ ಕಾರ್ಯಗಳನ್ನು ಮಾಡಿಸಲಿ. "ಚಿರಮಭಿ ವರ್ಧತಾಂ ಶ್ರೀವೈಷ್ಣವಶ್ರೀಃ" ಎಂದು ಆಚಾರ್ಯರಾದ ಯತಿರಾಜರಾಜ ಶ್ರೀ ರಾಮಾನುಜರೂ, ಜಗಜ್ಜನನಿಯಾದ ಯದುಗಿರಿನಾಚ್ಚಿಯಾರ್ ಮತ್ತು ಜಗದೀಶ್ವರನಾದ ಸಂಪತ್ಕುಮಾರ ಭಗವಂತನೂ ಶ್ರೀ ಲಕ್ಷ್ಮೀನೃಸಿಂಹಸ್ವಾಮಿಯೂ ಅನುಗ್ರಹಿಸಲಿ.

ಶ್ರೀ ಯದುಗಿರಿ ಯತಿರಾಜ ನಾರಾಯಣ ಜೀಯರ್

ಎರಡು ಮಾತು

ರಾಮಾಯಣವು, ಜಗತ್ತಿನ ಆದಿಕಾವ್ಯಗಳಲ್ಲಿ ಪ್ರಮುಖವೂ ಶ್ರೇಷ್ಠವೂ ಆದುದೆಂದು ಪರಿಗಣಿತವಾಗಿದೆ. ಭಾರತೀಯರಿಗಂತೂ ರಾಮಾಯಣ ಧಾರ್ಮಿಕಗ್ರಂಥ, ಜೀವನ ಧರ್ಮದ ಕೈಪಿಡಿ. ಸಮಾಜಶಾಸ್ತ್ರಕ್ಕೆ ಆಕರ. ರಾಮಾಯಣ ಭಾರತೀಯರಿಗೆ ವಿಶ್ವಕೋಶ. ನಮಗೆ ಧರ್ಮ ಅರ್ಥ ಕಾಮ ಮೋಕ್ಷಗಳಿಗೆ ಸಾಧನವಾದ ಗ್ರಂಥ. ಪ್ರತಿ ಸಂಸಾರಿಗೂ ಇದು ಜೀವನದ ದಾರಿದೀಪ. ಇದು ಭಾರತೀಯತ್ವ ಮತ್ತು ಮಾನವೀಯತೆಯ ಅತ್ಯುಚ್ಚ ಆದರ್ಶಗಳ ಗಣಿ. ಹಿರಿಯರಾದ ಡಾ॥ ಡಿ. ವಿ. ಗುಂಡಪ್ಪನವರು " ಮನುಷ್ಯನ ಇಹಪರಗಳೆರಡರ ಸಾಧನೆಗೂ, ಜೀವನಸಮಸ್ಯೆಗಳನ್ನೆಲ್ಲ ಸುಗಮವಾಗಿ ನಿರ್ವಹಿಸುವುದಕ್ಕೂ ರಾಮಾಯಣವೊಂದೇ ಸಾಕು " ಎಂದು ಹೇಳಿದ್ದಾರೆ.

ರಾಮಾಯಣವು ಧಾರ್ಮಿಕ ಗ್ರಂಥಮಾತ್ರವೇ ಅಲ್ಲ. ಅದು ಧಾರ್ಮಿಕ ಗ್ರಂಥಕ್ಕಿಂತ ಹೆಚ್ಚಾಗಿ ಕಾವ್ಯ, ನವರಸ ಭರಿತವಾದ ಕಾವ್ಯ. ಅದು ಕಾಲಮಾನದಿಂದ ಮಾತ್ರವೇ ಅಲ್ಲ. ಕಾವ್ಯಗುಣದಿಂದಲೂ ಆದಿಕಾವ್ಯ. ಜಗತ್ತಿನ ಮಹಾಕವಿಗಳಿಗೆಲ್ಲ–ಭಾರತೀಯರಿಗಂತೂ ಸರಿಯೇ ಸರಿ–ವಾಲ್ಮೀಕಿಯೇ ಕವಿ ಗುರು. ಕವಿ ಶ್ರೇಷ್ಠ ಕಾಳಿದಾಸ ಭವಭೂತಿ ಬಾಣ ಭಾಸ–ಸಂಸ್ಕೃತ ಕವಿಪುಂಗವರೆಲ್ಲ ವಾಲ್ಮೀಕಿಗೆ ಋಣಿ. ರಾಮಾಯಣದಲ್ಲಿ ನವರಸಗಳ ಕೋಡಿಯೇ ಹರಿದಿದೆ. ರಾಮಾಯಣ ಜನಿಸಿದುದೇ ವ್ಯಾಧನ ಬಾಣದಿಂದ ಸತ್ತ ಪ್ರೇಮಿಗಾಗಿ, ಶೋಕಿಸಿದ ಪಕ್ಷಿಯ ಕರುಣಾ ಜನಕ ಸ್ಥಿತಿಯಿಂದ. ವಾಲ್ಮೀಕಿಯ ಮನಸ್ಸು ಜಗತ್ ಶ್ರೇಷ್ಠಕಾವ್ಯವನ್ನು ರಚಿಸಲು ಅರ್ಹವಾದ ಹದದಲ್ಲಿ ಇದ್ದಿತು. ಆದುದರಿಂದಲೇ ಅವನು ಗಿರಿ ನದಿ ಸೂರ್ಯಚಂದ್ರರು ಇರುವವರೆಗೆ ಶಾಶ್ವತವಾಗಿ ನಿಲ್ಲುವ ಕಾವ್ಯವನ್ನು ರಚಿಸಿದನು.

ಭಾರತೀಯರಿಗೆ ರಾಮಾಯಣ ಧರ್ಮಗ್ರಂಥ. ಉತ್ತಮಕಾವ್ಯ, ನೀತಿಗ್ರಂಥ. ಧರ್ಮ ನೀತಿ ಯಾವುದೂ ಬೇಡವೆನ್ನುವವರಿಗೆ ಸಹ ಅತ್ಯುತ್ತಮ ನವರಸಭರಿತವಾದ ಕಾವ್ಯ. ಆಕರ್ಷಣೀಯವಾದ ಕಥೆ ಲಲಿತವಾದ ಸರಳವಾದ ಶೈಲಿ. ಅದ್ಭುತವಾದ ವರ್ಣನಾ ಭಾಗಗಳು ಕಾವ್ಯಾಲಂಕಾರಗಳು, ಆದರ್ಶ ರಾಜ, ಆದರ್ಶ ಪತಿ, ಆದರ್ಶ ಪುತ್ರರು, ಆದರ್ಶ ಮಂತ್ರಿ, ಆದರ್ಶ ಸತಿ, ಆದರ್ಶ ಸೇವಕ, ಆದರ್ಶ ಸೇವಕ ಮಿತ್ರಗುಹ–ಇಲ್ಲಿ ಆರ್ಯ ದ್ರಾವಿಡರ ಸಂಮಿಳನವೂ ಇದೆ–ಆದರ್ಶ ಭ್ರಾತೃಗಳು ಎಲ್ಲವುಗಳ ಮಿಲನವೂ ಇದೆ.

ಭಾರತೀಯರಿಗೆ ರಾಮಾಯಣ, ಜೀವನದ ಉಸಿರು, ತೊಟ್ಟಿಲಿನಲ್ಲಿರುವಾಗಲೇ ಮಗುವಿಗೆ ರಾಮನ ಕಥೆಯು ಲಾಲಿ ಕಿವಿಗೆ ಬೀಳುತ್ತದೆ. ಅಲ್ಲಿಂದ ಮುಂದೆ ಜೀವಮಾನವೆಲ್ಲ ಅವನು ಬಯಸಲಿ ಬಿಡಲಿ ರಾಮಕಥೆ, ಕೀರ್ತನೆ, ಹರಿಕಥೆ, ನಾಟಕ, ಚಲನಚಿತ್ರ ಹೀಗೂ ಎಲ್ಲವೂ ಕಿವಿಗೆ ಕಣ್ಣಿಗೆ ಬೀಳುತ್ತವೆ. ಸಂಸ್ಕೃತಭಾಷೆ ತಿಳಿಯದಿದ್ದರೂ ಭಾರತದ

ಎಲ್ಲ ಭಾಷೆಗಳಲ್ಲಿಯೂ ರಾಮಾಯಣ ಭಾರತಗಳು ಅನುವಾದವಾಗಿರುವುದಲ್ಲದೆ ಸ್ವತಂತ್ರವಾಗಿಯೂ ಪ್ರಾಂತ ಭಾಷೆಗಳಲ್ಲಿ ರಾಮಾಯಣವನ್ನು ಬರೆದಿದ್ದಾರೆ. ಅಂತಹ ಸಂದರ್ಭಗಳಲ್ಲೆಲ್ಲ ಲೇಖಕರು ಕವಿಗಳು ತಮ್ಮ ಪ್ರಾಂತಗಳಲ್ಲಿ ಜನಪದರಲ್ಲಿ ಪ್ರಚಾರದಲ್ಲಿರುವ ಅನೇಕ ಹೊಸ ಕಥೆಗಳನ್ನು ಸೇರಿಸಿ ರಾಮಕಥೆಯನ್ನು ಹೆಚ್ಚು ಆಕರ್ಷಣೀಯವಾಗಿಯೂ ಮಾಡಿರುತ್ತಾರೆ. ಹೀಗೆ ರಾಮಾಯಣ ನಮ್ಮ ಜೀವನದಲ್ಲಿ ಹಾಸು ಹೊಕ್ಕಾಗಿ ಸೇರಿಕೊಂಡಿದೆ. ಆಧುನಿಕ ನಾಗರೀಕತೆಯ ಪ್ರಖರ ಬೆಳಕಿನಿಂದ ರಾಮಾಯಣದ ಸಂದೇಶದ ತಿರುಳು ಕೆಲವು ಆಧುನಿಕರ ಅಲಕ್ಷ್ಯಕ್ಕೆ ಈಡಾಗಿದ್ದರೂ—ಜಗತ್ತಿನ ಯಾವ ಭಾಷೆಯ ಮಹಾಕಾವ್ಯಕ್ಕೂ ಸರಿಸಮವಾಗಿ ನಿಲ್ಲಬಲ್ಲ ಅದರ ಕಾವ್ಯಸೌಂದರ್ಯ ವರ್ಣನೆ ಪಾತ್ರಗಳ ಸ್ವಭಾವ ನಿರೂಪಣೆ ಕಥೆ ಎಲ್ಲರನ್ನೂ ಆಕರ್ಷಿಸುತ್ತದೆ.

ಭಾರತ ಸಂಸ್ಕೃತಿ ಉಳಿದಿರುವುದೇ ರಾಮಾಯಣ ಭಾರತ ಸಂಸ್ಕೃತಿಗಳಿಂದ. ಭಾರತದ ಒಗ್ಗಟ್ಟು ಉಳಿದಿರುವುದೂ ಈ ಕಾವ್ಯಗಳಿಂದ. ಈ ಎರಡೂ ಕಾವ್ಯಗಳೂ ಗಂಗೆ ಯಮುನೆಯರಂತೆ—ಈ ದೇಶದ ಮೇಲೆ ಸಾವಿರಾರು ವರುಷಗಳಿಂದ ಪರದೇಶೀಯರ ಆಘಾತ ಅಪ್ಪಳಿಸಿದರೂ—ಈ ದೇಶದ ಸಂಸ್ಕೃತಿಯನ್ನೂ ಆತ್ಮವನ್ನೂ ಉಳಿಸಿದವು. ಈ ಕಾವ್ಯಗಳ ಆಧ್ಯಾತ್ಮ ಪ್ರಭಾವದಿಂದಲೇ ಗಾಂಧೀಜಿ, ಧರ್ಮ ಪ್ರಧಾನವಾದ ಸತ್ಯಾಗ್ರಹವೆಂಬ ಸಾತ್ವಿಕ ಅಸ್ತ್ರವನ್ನು ಕಂಡುಹಿಡಿದು ರಾಜಕೀಯದಲ್ಲಿ ಧರ್ಮವನ್ನು ಬೋಧಿಸಿ ಕೆಲವು ದಶಕಗಳ ಕಾಲ ಹೋರಾಡಿ ಸ್ವಾತಂತ್ರ್ಯವನ್ನು ಗಳಿಸಿದರು. ಗಾಂಧೀಜಿ, ರಾಮನಾಮ ರಾಮಭಕ್ತಿ ರಾಮನ ಆದರ್ಶದಿಂದಲೇ ಸ್ವರಾಜ್ಯವನ್ನು ಸಂಪಾದಿಸಿದರು. ಗಾಂಧೀಜಿ ಎಲ್ಲಿದ್ದರೂ ರಾಮಭಜನೆ ಪ್ರಾರ್ಥನೆಯನ್ನು ಒಂದು ದಿನವೂ ಬಿಡಲಿಲ್ಲ. ಈ ದೇಶವು ರಾಮರಾಜ್ಯವಾಗಬೇಕೆಂದು ಗಾಂಧೀಜಿ ಹೇಳುತ್ತಿದ್ದರು.

ರಾಮನು ಆದರ್ಶರಾಜನಾಗಿದ್ದ ಎಂಬುದರಲ್ಲಿ ಸಂದೇಹವೇ ಇರಲಿಲ್ಲ. ತನ್ನ ಬುದ್ಧಿಗೆ ತೋರಿದಂತೆ ಅವನು ಧರ್ಮ ಪಥದಿಂದ ಒಂದು ಎಳೆಯಷ್ಟೂ ವಿಚಲಿತನಾಗಲಿಲ್ಲ. ರಾಮನಿಗೆ ಧರ್ಮವಿಗ್ರಹ ಎಂದೇ ಹೆಸರಾಯಿತು. ಅಂದಿನ ಕಾಲದ ನಿಯಮದಂತೆ—ಈ ಕಾಲಕ್ಕೆ ಹೋಲಿಸಿದರೆ—ಅವನು ಮಾಡಿದ ಕೆಲವು ಕಾರ್ಯಗಳು—ಇಂದು ನಮಗೆ ನ್ಯಾಯವಲ್ಲವಾಗಿ ತೋರಬಹುದು-ಆದರೆ ಅಂದು ಅವು ಎಲ್ಲರೂ ಒಪ್ಪಿದ ಮೌಲ್ಯಗಳೂ ಆದರ್ಶಗಳೂ ಆಗಿದ್ದವು. ಯಾವನೋ ಒಬ್ಬ ಅಗಸ ಹೇಳಿದನೆಂದು ರಾಮನು ತುಂಬುಗರ್ಭಿಣಿ ಸೀತಾದೇವಿಯನ್ನು ಕಾಡಿಗೆ ಅಟ್ಟಿಬಿಟ್ಟನು (ಪ್ರಜೆಗಳ ತೃಪ್ತಿಗಾಗಿ) "ಸೀತೆಯಂತಹ ಸಾಧ್ವಿಮಣಿಯನ್ನು ಜಗತ್ತಿನ ಮತ್ತಾವ ಸಾಹಿತ್ಯವೂ ಸೃಷ್ಟಿಸಿಲ್ಲ" ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ.

ರಾಮಾಯಣದಲ್ಲಿ, ಮಾನವ ಜೀವಿತದ ಸೌಖ್ಯಕ್ಕಾಗಿ ಅನೇಕ ಮೌಲ್ಯಗಳು ನಿರೂಪಿತವಾಗಿವೆ. ಅವೆಲ್ಲವೂ ಸಾರ್ವಕಾಲಿಕ ಮೌಲ್ಯಗಳು. ಸೀತೆಯ ಪತಿಭಕ್ತಿ ಆಂಜನೇಯನ ಸ್ವಾಮಿನಿಷ್ಠೆ ಭರತನ ಭ್ರಾತೃಪ್ರೇಮ ಎಂದೆಂದಿಗೂ ಮಾನವ ಕಲ್ಯಾಣಕ್ಕೆ ಆವಶ್ಯಕ ಗುಣಗಳು. ರಾಮನು ಸಿಂಹಾಸನದ ಹಕ್ಕನ್ನು ಬಿಡುತ್ತಾನೆ. ಭರತನೂ

ಸಿಂಹಾಸನ ಬೇಡವೆನ್ನುತ್ತಾನೆ. ಈ ಬಗೆಯ ಒಂದು ಸನ್ನಿವೇಶ-ಕಥೆಯಾಗಿ ಸಹ ಜಗತ್ತಿನ ಇತರ ಸಾಹಿತ್ಯಗಳಲ್ಲಿ ದೊರೆಯುವುದಿಲ್ಲ. ಇಂಥ ಸಂಭವ ಭಾರತದಲ್ಲಿ ಮಾತ್ರ ನಡೆಯಬಲ್ಲದು ಎಂದು ಅರವಿಂದರು ಹೇಳಿದ್ದಾರೆ. ಭಾರತದಲ್ಲಿ ಶ್ರೀ ರಾಮನ ಹೆಸರಿನಲ್ಲಿ ಎಲ್ಲೆಲ್ಲಿಯೂ ಭಕ್ತಿಪಂಥ ಉದಿಸಿದೆ. ರಾಮಮಂದಿರ, ರಾಮಭಜನೆ, ರಾಮಾಯಣ ಪಾರಾಯಣ ಕಬೀರ ತುಳಸಿದಾಸ ತ್ಯಾಗರಾಜ ಇವರೆಲ್ಲರ ಪಂಥ ರಾಮನನ್ನು-ಒಬ್ಬ ರಾಜ ಅಥವಾ ಚಕ್ರವರ್ತಿಯ ಮಟ್ಟದಿಂದ ಮೇಲಕ್ಕೆ ಏರಿಸಿ ಭಕ್ತಿ ಪಂಥದ ಕೇಂದ್ರವನ್ನಾಗಿ ಮಾಡಿದೆ.

ವಿಶಿಷ್ಟಾದ್ವೈತ ಸಿದ್ಧಾಂತ, ತನ್ನ ದರ್ಶನದಲ್ಲಿ ರಾಮಾಯಣ ಮತ್ತು ಅದರ ಸಂದೇಶಕ್ಕೆ ಪ್ರಮುಖ ಸ್ಥಾನವನ್ನು ಕೊಟ್ಟಿದೆ. ವಿಶಿಷ್ಟಾದ್ವೈತದಲ್ಲಿ ಭಕ್ತಿಯು ಕೇಂದ್ರ ಬಿಂದು. ಪರಮಾತ್ಮನಲ್ಲಿ ಪೂರ್ಣಭಕ್ತಿ ಪೂರ್ಣ ಶರಣಾಗತಿಯೇ ಭಕ್ತನ ಉದ್ಧಾರಕ್ಕೆ ಮಾರ್ಗ. "ಮೋಕ್ಷಸಾಧನ ಸಾಮಗ್ರ್ಯಾಂ ಭಕ್ತಿರೇವ ಗರೀಯಸಿ" ಎಂದು ಶ್ರೀ ಶಂಕರರು ಹೇಳಿದ್ದರೂ ವಿಶಿಷ್ಟಾದ್ವೈತದಲ್ಲಿ ಭಕ್ತಿ ಶರಣಾಗತಿಗಳೇ ಭಕ್ತನ ಮುಖ್ಯ ಅಸ್ತ್ರ. ಇಲ್ಲಿ ಭಕ್ತಿಯೇ ಜ್ಞಾನವೂ ಕರ್ಮವೂ ಆಗಿ ಪೂರಕವಾಗುತ್ತವೆ. ತೈಲಧಾರಾವಚ್ಛಿನ್ನವಾದ ನವವಿಧ ಭಕ್ತಿಯಿಂದಲೇ ದೃಢ ಸಾಕ್ಷಾತ್ಕಾರ ಪರಮಾತ್ಮ ಸಾಯುಜ್ಯ ಸಾಧ್ಯ. ಪ್ರಹ್ಲಾದ ಧ್ರುವ ಗಜೇಂದ್ರ ಗೋಪಿಯರು ಶಬರಿ ಗೋದಾದೇವಿ ಎಲ್ಲರೂ ಭಕ್ತಿಯಿಂದಲೇ ಮುಕ್ತಿಯನ್ನು ಪಡೆದರು. ಕಾಕಾಸುರನು ರಾಮನ ವಿಷಯದಲ್ಲಿ ಘೋರವಾದ ಅಪರಾಧವನ್ನು ಮಾಡಿದರೂ, ತಿರುಗಿ ಬಂದು ಶ್ರೀ ರಾಮನನ್ನು ಶರಣು ಹೊಂದಲು ರಾಮನು ಅವನನ್ನು ಕ್ಷಮಿಸಿದನು. ರಾಮಾಯಣವೆಲ್ಲ ಪೂರ್ಣ ಶರಣಾಗತಿಯ ಮಾಲೆಯೇ ಆಗಿದೆ. ರಾಮಾನುಜಾಚಾರ್ಯರೇ ಶರಣಾಗತಿ ಗದ್ಯವನ್ನು ರಚಿಸಿದ್ದಾರೆ.

ರಾಮಾಯಣದಲ್ಲಿ ಶರಣಾಗತಿಗೆ ಅತಿ ಪ್ರಮುಖ ಸ್ಥಾನವನ್ನು ಕೊಟ್ಟಿದ್ದಾರೆ, ವಿಭೀಷಣನ ಶರಣಾಗತಿಯಲ್ಲಿ ಈ ಅಂಶದ ಪೂರ್ಣ ವಿವರಣೆ ಪೂರ್ಣ ತತ್ವ ವಿವೇಚಿತವಾಗಿದೆ. ವಿಭೀಷಣನು, ರಾಕ್ಷಸ, ಸೀತೆಯನ್ನು ಕದ್ದುಕೊಂಡು ಹೋದ ರಾವಣನ ತಮ್ಮ ಸೀತೆಯನ್ನು ಹುಡುಕಲು ಆಂಜನೇಯನು ಲಂಕೆಗೆ ಹೋದಾಗ ರಾಕ್ಷಸರು ಅವನಿಗೆ ತುಂಬ ಕಿರುಕುಳ ಕೊಟ್ಟರು. ರಾಮನ ಅಗಾಧ ಸೈನ್ಯವು, ಲಂಕೆಯನ್ನು ಮುತ್ತಲು ಬಂದಿದೆ. ರಾಮನ ಮತ್ತು, ರಾವಣನ ಗೂಢಚಾರರು ವೇಷ ಮರೆಸಿಕೊಂಡು ಪರಸ್ಪರರ ಸೈನ್ಯ ಬಲವೆಷ್ಟು ಎಂಬುದನ್ನು ಪರೀಕ್ಷಿಸಿದ್ದಾರೆ. ಇಂತಹ ಸಂದರ್ಭದಲ್ಲಿ ರಾವಣನ ತಮ್ಮ ವಿಭೀಷಣ ರಾವಣನ ಪಕ್ಷವನ್ನು ತೊರೆದು ರಾಮನಲ್ಲಿ ಶರಣಾಗತನಾಗಿ ಬಂದು ಅಂತರಿಕ್ಷದಲ್ಲಿ ನಿಂತು " ನಾನು ರಾವಣನ ತಮ್ಮ ವಿಭೀಷಣ ನಿನ್ನನ್ನು ಮರೆಹೊಕ್ಕು ಬಂದಿದ್ದೇನೆ. ನನ್ನನ್ನು ಅಂಗೀಕರಿಸಿ ಕಾಪಾಡು ಎಂದು ಎಲ್ಲರಿಗೂ ಕೇಳುವಂತೆ ಸ್ಪಷ್ಟವಾದ ಧ್ವನಿಯಲ್ಲಿ ಕೂಗುತ್ತಿದ್ದಾನೆ. ವಿಭೀಷಣನ ಪ್ರಾರ್ಥನೆ ಎಲ್ಲರಿಗೂ ರಾಮ ಲಕ್ಷ್ಮಣರಿಗೂ ರಾಮಸೇನೆಗೂ ಕೇಳಿಸಿತು.

ರಾಮನ ಸೇನೆಯಲ್ಲಿಯೇ ಗಜಿಬಿಜಿಯುಂಟಾಯಿತು. "ಇದು ರಾಕ್ಷಸರ ಮತ್ತೊಂದು ಮಾಯೆ. ಮೋಸ. ಇವರು ಶತ್ರುವಿನ ಪಕ್ಷದವರು. ನಮ್ಮ ಛಿದ್ರವನ್ನು ಕಂಡುಹಿಡಿಯುವುದಕ್ಕೆ, ನಮ್ಮ ಸೈನ್ಯದ ರಹಸ್ಯವನ್ನು ತಿಳಿಯಲು ಇವರು ಬಂದಿದ್ದಾರೆ. ಇವನನ್ನು ಹೊರಗೆ ಅಟ್ಟಿ" ಎಂದು ಸೈನಿಕರೆಲ್ಲ ಬೊಬ್ಬೆ ಹಾಕಿದರು. ಕೈಗೆ ಸಿಕ್ಕಿದ್ದರೆ ಅವರು ವಿಭೀಷಣನನ್ನೂ ಗುದ್ದುವುದಕ್ಕೂ ಹಿಂತೆಗೆಯುತ್ತಿರಲಿಲ್ಲ. ಆದರೆ ಹನುಮಂತನು ಮಧ್ಯೆ ಪ್ರವೇಶಿಸಿದನು. ಅವನು ಶ್ರೀರಾಮನಿಗೆ ಹೀಗೆ ಹೇಳಿದನು. "ವಿಭೀಷಣನು ಸ್ವಂತ ಇಚ್ಛೆಯಿಂದ ಪ್ರಾಮಾಣಿಕವಾಗಿ ಬಂದಿದ್ದಾನೆ. ನಿನ್ನಲ್ಲಿ ಶರಣು ಬಂದಿದ್ದಾನೆ. ಇದರಲ್ಲಿ ಮೋಸವಿಲ್ಲ. ಇವನು ಈ ಕಾರ್ಯವನ್ನು ರಹಸ್ಯವಾಗಿ ಮಾಡಿಲ್ಲ. ರಾವಣನಿಗೆ ಅವನು ಮಾಡಿರುವ ಪರಸತಿ ಅಪಹರಣ ಸರಿಯಾದುದಲ್ಲವೆಂದು ಅದು ಪಾಪಕಾರ್ಯವೆಂದೂ, ಇದರಿಂದ ವಂಶನಾಶವಾಗುವುದೆಂಬುದನ್ನೂ ಇವನೇ ಹೇಳಿ ಸೀತೆಯನ್ನು ಹಿಂದಕ್ಕೆ ಒಪ್ಪಿಸುವಂತೆ ಹೇಳಿದನು. ಇವನ ವಿವೇಕ, ರಾವಣನಿಗೆ ಪ್ರಿಯವಾಗಲಿಲ್ಲ. ರಾವಣನು ವಿಭೀಷಣನನ್ನೂ ಅವನ ಮಂತ್ರಿಗಳನ್ನೂ ದಂಡಿಸಿದನು. ರಾವಣನನ್ನು ಸನ್ಮಾರ್ಗಕ್ಕೆ ತರಲು ವಿಭೀಷಣನು ತನ್ನ ಕೈಲಾದ ಪ್ರಯತ್ನಗಳನ್ನೆಲ್ಲ ಮಾಡಿದ್ದಾನೆ. ರಾವಣನು ತನ್ನ ದುರ್ಮಾರ್ಗವನ್ನು ಬಿಡಲು ಒಪ್ಪಲಿಲ್ಲ. "ರಾವಣನು ಒಂದು ದುಷ್ಟ ಶಕ್ತಿ. ಏನು ಮಾಡಿದರೂ ಸನ್ಮಾರ್ಗಕ್ಕೆ ತಿರುಗುವವನಲ್ಲ. ಇವನ ಸಹವಾಸದಲ್ಲಿದ್ದರೆ ನಾನೂ ನಾಶವಾಗುವುದು ಖಂಡಿತ. ಆದುದರಿಂದ ನಾನು ರಾವಣನ ಕೆಟ್ಟ ಮತ್ತು ಪಾಪ ಕಾರ್ಯದಲ್ಲಿ ಸೇರಿದರೆ ಅವನೊಂದಿಗೆ ನಾನೂ ನಾಶವಾಗುವುದು ಖಂಡಿತ. ರಾಮನ ಮಾರ್ಗವು ಸರಿಯೆಂದು ನನಗೆ ಮನದಟ್ಟಾಗಿದೆ. ನನ್ನ ಪ್ರಾಣವನ್ನು ಉಳಿಸಿಕೊಳ್ಳುವುದಕ್ಕಾಗಿ ನಾನು ರಾಮನಲ್ಲಿ ಶರಣು ಬಂದಿದ್ದೇನೆ" ಎಂದು ವಿಭೀಷಣನು ಹೇಳುತ್ತಿದ್ದಾನೆ. ನಾನು ಲಂಕೆಯಲ್ಲಿದ್ದಾಗ ರಾಕ್ಷಸರು ನನ್ನ ಮೇಲೆ ಕೈ ಮಾಡಿದಾಗ ವಿಭೀಷಣನು ನನಗೆ ಸಹಾಯ ಮಾಡಿದನು. ಇವನು ರಾಕ್ಷಸನಾದರೂ ಇವನ ಸ್ವಭಾವದಲ್ಲಿ ರಾಕ್ಷಸತ್ವವಿಲ್ಲ. ಇವನು ಶುದ್ಧ ಸಾತ್ವಿಕ. ಇವನಿಗೆ ರಾಮನು ರಕ್ಷಣೆಯನ್ನು ಕೊಡಬೇಕು."

ಆಂಜನೇಯನು ಇಷ್ಟೆಲ್ಲ ಹೇಳಿದರೂ "ರಾಕ್ಷಸರನ್ನು ನಂಬಕೂಡದು. ನಮ್ಮ ರಾಮ ಅವರಿಗೆ ಆಶ್ರಯವನ್ನು ಕೊಡಕೂಡದು" ಎಂದು ಕಪಿಸೇನೆ ಘೋಗರೆಯಿತು. ಶ್ರೀ ರಾಮನು ಒಂದೇ ತೀರ್ಮಾನವನ್ನು ಹೇಳಿದನು. "ಶರಣು ಬಂದವರನ್ನು ಕಾವೆ" ಎಂಬುದು ನನ್ನ ಪ್ರತಿಜ್ಞೆ. ಇದು ಭಕ್ತರಿಗೆ ನಾನು ಕೊಟ್ಟ ವಚನ. ಅವನು ಎಂತಹ ಸ್ವಭಾವದವನಾಗಿರಲಿ ಎಂಥದೇ ತಪ್ಪನ್ನು ಮಾಡಿರಲಿ "ಸಕೃದೇವ ಪ್ರಪನ್ನಾಯ' ನಿಜವಾದ ಪಶ್ಚಾತ್ತಾಪದಿಂದ ನನ್ನಲ್ಲಿ ಶರಣಾಗತಿ ಮಾಡಿದರೆ ನನ್ನನ್ನು ಅವನು ತನ್ನ ಸ್ವಂತಕ್ಕೆ ಹೊಂದುತ್ತಾನೆ. ಅನಂತರ ಅವನ ಗುಣದೋಷಗಳನ್ನು ನಾನು ನೋಡುವುದಿಲ್ಲ. ಅವನು ಎಂತಹ ಪಾಪಿಯೇ ಆಗಿರಲಿ—ಸ್ವತಃ ರಾವಣನೇ ಆಗಲಿ ನನ್ನಲ್ಲಿ ಬಂದು ಶರಣಾಗತನಾದರೆ ನಾನು ಅವನನ್ನು ಕಾಯ್ದು ಮುಕ್ತಿಯನ್ನು ಕೊಡುವೆನು."

ರಾಮನು ವಿಭೀಷಣನಿಗೆ ರಕ್ಷಣೆಯನ್ನು ಕೊಟ್ಟುದು ನ್ಯಾಯವಾಯಿತು ಎಂಬುದು ಅನಂತರ, ವಿಭೀಷಣನ ನಡತೆ ಕಾರ್ಯ ರಾಮ ಕೈಂಕರ್ಯ ಮುಂತಾದವುಗಳಿಂದ ವ್ಯಕ್ತವಾಯಿತು.

ಭಗವದ್ರಾಮಾನುಜರಿಂದ ಸ್ಥಾಪಿತವಾದ ವಿಶಿಷ್ಟಾದ್ವೈತ ತತ್ವಕ್ಕೆ ಶ್ರೀ ಮದ್ರಾಮಾಯಣವೇ ಮುಖ್ಯಗ್ರಂಥ. ಆ ತತ್ವ ಪ್ರತಿಪಾದನೆಗಾಗಿ ಅನೇಕ ಗ್ರಂಥಗಳು ರಚಿತವಾಗಿವೆ. ''ಸಕೃದೇವ ಪ್ರಪನ್ನಾಯ'' ಎಂಬುದರಲ್ಲಿ ''ಒಂದು ಸಲ ಶರಣಾಗತನಾದರೆ ಎಂಬುದಷ್ಟೇ ಅಲ್ಲ, ''ಒಮ್ಮೆ ಪೂರ್ಣವಾಗಿ ಶರಣಾದರೆ'' ಎಂದು ಅರ್ಥ. ಶತ್ರುವಿನ ತಮ್ಮನೇ ಆಗಿ ರಾಕ್ಷಸನೇ ಆದರೂ, ಶರಣಾಗತನಾದರೆ ರಾಮನು ಅವನನ್ನು ಎಂದೆಂದಿಗೂ ರಕ್ಷಿಸುತ್ತಾನೆ ಎಂದು ಅರ್ಥ. ''ವಿಭೀಷಣನು ರಾಜ್ಯದ ಆಸೆಯಿಂದ ರಾಮನ ಪಕ್ಷವನ್ನು ಸೇರಿದನು. ಅವನು ಭ್ರಾತೃದ್ರೋಹಿ. ಕಷ್ಟಕಾಲದಲ್ಲಿ ತನ್ನ ವಂಶಕ್ಕೆ ಅವಮಾನ ಮಾಡಿ ಶತ್ರು ಪಕ್ಷವನ್ನು ಸೇರಿದನು ಎಂಬ ವಾದವೆಲ್ಲ ಶರಣು ಬಂದವರನ್ನು ಕಾಪಾಡುತ್ತೇನೆ'' ಎಂಬ ಭಗವಂತನ ವಾಗ್ದಾನದ ಸಂದರ್ಭದಲ್ಲಿ ಅಪ್ರಕೃತ.

ರಾಮಾನುಜ ಪಂಥದ ವಿಶಿಷ್ಟಾದ್ವೈತ ತುಂಬ ಸರಳವಾದ ನೇರವಾದ ಭಕ್ತಿಮಾರ್ಗ. ಇಲ್ಲಿ ಜಾತಿ ಪಂಥ ಯಾವುದರ ಮೇಲು ಕೀಳು ಇಲ್ಲ. ಪರಮಾತ್ಮನಲ್ಲಿ ಶರಣಾಗತಿಗೆ ಎಲ್ಲರೂ ಅರ್ಹರು. ಭಗವಂತನು ಶ್ರೀ ರಾಮನ ರೂಪದಲ್ಲಿ ಎಲ್ಲರಿಗೂ ಮೋಕ್ಷವನ್ನು ಕರುಣಿಸುತ್ತಾನೆ. ಶ್ರೀ ರಾಮನು ಪುರುಷ ಶ್ರೇಷ್ಠ. ''ಆ ಗುಣಗಳ ಮಹಿಮಾಪುರುಷ ಜಗತ್ತಿನಲ್ಲಿ ದೊರಕುವುದು ಶ್ರೀರ ಆಮರೂಪ.'' ಎಂದು ನಾರದರು ಹೇಳುತ್ತಾರೆ.

ರಾಮನು ಒಬ್ಬ ಮನುಷ್ಯ ಎಂದು ಭಾವಿಸಿದರೂ ಅವನು ಸಾಹಸ ಸತ್ಯಸಂಧತೆ ಜನಪ್ರಿಯತೆ ಪರಾಕ್ರಮಗಳಿಂದ ಆದರ್ಶ ದೇವತ್ವಕ್ಕೆ ಏರಿದ ಮಹಾಪುರುಷನೆಂದು ಭಾವಿಸಬಹುದು. ಯಾವ ಕಾಲದಲ್ಲಿಯೂ ಯಾವ ಕಾರಣಕ್ಕಾಗಿಯೂ ರಾಮ, ತನ್ನ ಧರ್ಮವನ್ನು ಬಿಡಲಿಲ್ಲ. ರಾಮ ಒಬ್ಬ ಪುರುಷ ಶ್ರೇಷ್ಠ. ''ನಿನಗೆ ಯುವರಾಜ ಪಟ್ಟಾಭಿಷೇಕ'' ವೆಂದರು. ಆಗಲಿ ಎಂದ ಪಟ್ಟಾಭಿಷೇಕವಿಲ್ಲ. ಹದಿನಾಲ್ಕು ವರುಷ ಅರಣ್ಯವಾಸ ಎಂದರು, ಅದಕ್ಕೂ ರಾಮ ವಿಚಲಿತನಾಗಲಿಲ್ಲ. ರಾಮ ಮಹಾ ಪರಾಕ್ರಮಿ. ಏಕಾಂಗಿಯಾಗಿಯೇ ದಂಡಕಾರಣ್ಯಕ್ಕೆ ಹೊರಟನು. ಆ ಕಾಲದಲ್ಲಿ ಕ್ರೂರ ಮೃಗಗಳಿಂದ ಕಾಡೂ ಅಪಾಯಕರವಾಗಿದ್ದಿತು. ಸೀತೆ ಮತ್ತು ಲಕ್ಷ್ಮಣ ಹೊರಟುದು ಅನಂತರ. ರಾಮ ಸರ್ವ ಜನಮಿತ್ರ. ನಿಜವಾದ ಜನನಾಯಕ ಪ್ರಜಾಪ್ರಭುತ್ವವಾದಿ. ಗುಹನೆಂಬ ಬೇಡ, ಜಟಾಯುವೆಂಬ ಪಕ್ಷಿ, ಸುಗ್ರೀವ ಹನುಮಂತರೆಂಬ ಕಪಿಗಳು, ಶಬರಿ ಎಂಬ ಕೆಳವರ್ಗದ ಹೆಣ್ಣು, ಜಾಂಬವಂತನೆಂಬ ಕರಡಿ, ವಿಭೀಷಣನೆಂಬ ರಾಕ್ಷಸ, ವನ್ಯಮೃಗಗಳ ಸೈನ್ಯ ಇವುಗಳನ್ನೆಲ್ಲ ಸೇರಿಸಿಕೊಂಡು ರಾವಣ ಕುಂಭಕರ್ಣ ಇಂದ್ರಜಿತ್‌ಗಳ ಮಹಾಯುದ್ಧ ರಾಕ್ಷಸ ಸೈನ್ಯವನ್ನೆಲ್ಲ ಧ್ವಂಸ ಮಾಡಿಬಿಟ್ಟನು. ಒಬ್ಬ ಚೋರನು

ತನ್ನ ಹೆಂಡತಿಯನ್ನು ಕದ್ದುಕೊಂಡು ಹೋದುದಕ್ಕೆ ಅವನ ತಲೆಗಳನ್ನು ಕತ್ತರಿಸಿ ಹಾಕಿದನು, ಹೆಂಡತಿಯ ಕಳ್ಳನನ್ನು ಗೌರವಿಸಬೇಕೆಂದು ನಮ್ಮಲ್ಲಿ ಕೆಲವರು ವಾದಿಸುತ್ತಾರೆ! ರಾಮಾಯಣವು ಅತ್ಯಂತ ಶ್ರೇಷ್ಠವಾದ ಕಾವ್ಯ, ಜಗತ್ಪ್ರಸಿದ್ಧ ಆದಿಕಾವ್ಯ. ರಷ್ಯದಲ್ಲಿ ಕಳೆದ ಮೂವತ್ತು ವರ್ಷಗಳಿಂದಲೂ ಇದರ ಬ್ಯಾಲೆ–ನರ್ತನ ಗೀತರೂಪಕ ನಡೆಯುತ್ತಿದೆ. ಥೈಲ್ಯಾಂಡಿನಲ್ಲಿ ರಾಮಾಯಣ. ಅನಾದಿ ಕಾಲದಿಂದ–ನಮ್ಮ ನಾಡಿನಲ್ಲಿ ಇರುವಂತೆಯೇ ಜನಪ್ರಿಯವೂ ಜೀವನ ಮಾರ್ಗದರ್ಶಕವೂ ಆದ ಗ್ರಂಥವಾಗಿದೆ.

ಈ ಗ್ರಂಥದ ಲೇಖಕಿಯರಾದ ಶ್ರೀಮತಿ ಶ್ರೀದೇವಿ (ವಿದ್ಯಾ ವಿಚಕ್ಷಣಾ ಎಂ. ಎಸ್. ಶಿಂಗಾರಮ್ಮ) ಅವರು ರಾಮಾನುಜೀಯ ಸಿದ್ಧಾಂತವನ್ನು ಚೆನ್ನಾಗಿ ಅರಿತು ಅನುಷ್ಠಾನದಲ್ಲಿ ಇಟ್ಟುಕೊಂಡ ನಿಷ್ಠರು. ಭಕ್ತಿಯ ಮೂಲಕ ಭಗವಂತನಲ್ಲಿ ಪೂರ್ಣ ಶರಣಾಗತಿಯೇ ರಾಮಾನುಜ ಸಿದ್ಧಾಂತ. ಇದು ರಾಮಾನುಜರು ಜಗತ್ತಿಗೆ ಅನುಗ್ರಹಿಸಿದ ಅಪಾರ ಕೊಡುಗೆ. "ಮೋಕ್ಷಕ್ಕೆ ಸರ್ವರಿಗೂ ಹಕ್ಕು ಇದೆ. ಅದು ಸೂರ್ಯ ಚಂದ್ರರು ಬಿಸಿಲು ಗಾಳಿಯಂತೆ. ಮೇಲು ಜಾತಿ ಬಡವ ಬಲ್ಲಿದ ವಿದ್ಯಾವಂತ ಅವಿದ್ಯಾವಂತ ಎಂಬ ವ್ಯತ್ಯಾಸವಿಲ್ಲ." ಎಂಬ ತತ್ವವನ್ನು ಇವರು ತಮ್ಮ ಗ್ರಂಥಗಳ ಮೂಲಕ ಪ್ರಚಾರ ಮಾಡಿದ್ದಾರೆ. ಪ್ರಕೃತಗ್ರಂಥ ರಾಮಾಯಣ ಪ್ರದೀಪ ಉತ್ತಮವಾದ ಗ್ರಂಥ. ಸರಳವಾದ ಭಾಷೆಯಲ್ಲಿ ಎಲ್ಲರಿಗೂ ಅರ್ಥವಾಗುವಂತೆ–ಬಹುಭಾಷಾ ವಿಶಾರದರಾದ ಶ್ರೀದೇವಿಯವರು ಈ ಗ್ರಂಥವನ್ನು ತಮಿಳಿನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಶ್ರೀ ವೈಷ್ಣವ ಸಂಪ್ರದಾಯ ಧರ್ಮದೃಷ್ಟಿಯಿಂದ ಇದು ಒಂದು ಉತ್ತಮ ಗ್ರಂಥ. ದೀರ್ಘಕಾಲ ಅಧ್ಯಯನ ಅಧ್ಯಾಪನಗಳನ್ನು ಮಾಡಿದವರಿಂದ ಮಾತ್ರ ಇದು ಸಾಧ್ಯ. ಒಬ್ಬ ಮಹಿಳಾ ಮಣಿ ಇಂಥ ವೇದಾಂತ ಗ್ರಂಥವನ್ನು ಬರೆದಿರುವುದು ಒಂದು ಅಪೂರ್ವಾನುಭವದಿಂದ. ಇವರು ಇಂಥ ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಗಹನವಾದ ತತ್ವಗಳನ್ನು ನೇರವಾಗಿ ಸರಳವಾದ ಶೈಲಿಯಲ್ಲಿ ಬರೆದಿರುವುದರಿಂದ ಈ ಗ್ರಂಥವು ಸಾಮಾನ್ಯ ಜನರಿಗೆ ವಿಶಿಷ್ಟಾದ್ವೈತ ತತ್ವವನ್ನೂ ರಾಮಾಯಣದ ಸಂದೇಶವನ್ನೂ ತಿಳಿಸಲು ಸಹಾಯಕವಾಗುವುದು.

ಶ್ರೀದೇವಿಯವರ ಈ ಗ್ರಂಥಕ್ಕೆ ಕನ್ನಡ ವಾಚಕರು ಎಲ್ಲಾ ಪ್ರೋತ್ಸಾಹಗಳನ್ನು ನೀಡಲೆಂದು ಹಾರೈಸುತ್ತೇನೆ.

ರಾಜಾಜಿ ನಗರ, ಬೆಂಗಳೂರು — ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್

10-1-86

ನಿವೇದನ

"ಗುರುರೇವ ಪರಮ್ ಬ್ರಹ್ಮ ಗುರುರೇವ ಪರಮ್ ಧನಮ್ ।
ಗುರುರೇವ ಪರಃ ಕಾಮೋ ಗುರುರೇವ ಪರಾಯಣಮ್ ॥

ಗುರುರೇವ ಪರಾವಿದ್ಯಾ ಗುರುರೇವ ಪರಾಗತಿಃ ।
ಯಸ್ಮಾತ್ ತದುಪದೇಷ್ಟಾಸೌ ತಸ್ಮಾತ್ ಗುರುತರೋ ಗುರುಃ
ಉಪಾಯಶ್ಚೋಪೇಯಶ್ಚ ಗುರುರೇವೇತಿ ಭಾವಯ ।"

ಗುರುವೇ ಪರಬ್ರಹ್ಮನು ; ಗುರುವೇ ಎಲ್ಲಕ್ಕಿಂತ ಮೇಲಾದ ಐಶ್ವರ್ಯ, ನಮ್ಮ ಆಕಾಂಕ್ಷೆಯ ಎಲ್ಲಾ ವಸ್ತುಗಳಿಗಿಂತ ಶ್ರೇಷ್ಠವಾದದ್ದು. ಗುರುವೇ ನಮ್ಮ ಆಶ್ರಯ ದಾತರು. ಗುರುವೇ ಬ್ರಹ್ಮವಿದ್ಯೆಯ ಸ್ವರೂಪವು. ಅವರೇ ಸರ್ವಶ್ರೇಷ್ಠವಾದ ಗತಿ. ಅವರೇ ಸಂಸಾರ ಸಾಗರವನ್ನು ದಾಟುವುದಕ್ಕೆ ಮಾರ್ಗದಾತರು. ಆದ್ದರಿಂದ ಅವರಿಗಿಂತ ಹಿರಿಯರು ಯಾರು ಇಲ್ಲ. ಉಪಾಯವು ಉಪೇಯವೂ ಅವರೇ ಆಗಿರುತ್ತಾರೆ.

ನಾನು 1968ನೆಯ ಇಸ್ವಿಯಲ್ಲಿ ಒಂದು ಸಂಶೋಧನಾ ಕೃತಿಯನ್ನು ರಚಿಸಲು ಪ್ರಯಾಗ ಸಾಹಿತ್ಯ ಸಮ್ಮೇಳನದಲ್ಲಿ ರಿಜಿಸ್ಟರ್ ಮಾಡಿಸಿದ್ದೆನು. ವಿಷಯ—

"ದಕ್ಷಿಣಭಾರತದಲ್ಲಿ ವೈಷ್ಣವಭಕ್ತಿ" ಪುಸ್ತಕದ ಶೀರ್ಷಿಕೆ "ಭಕ್ತಿ ಸಿದ್ಧಾಂಜನ" ವೆಂದು. ಆ ಗ್ರಂಥದಲ್ಲಿ ಕನ್ನಡ ತಮಿಳು ತೆಲುಗು ಮತ್ತು ಸಂಸ್ಕೃತ ಭಾಷೆಗಳಿಂದ ಸಂಶೋಧನೆ ಮಾಡಿ ಆ ಗ್ರಂಥವನ್ನು ಹಿಂದೀ ಭಾಷೆಯಲ್ಲಿ ಬರೆಯಬೇಕಾಗಿದ್ದಿತು.

ತಮಿಳು ಮತ್ತು ಸಂಸ್ಕೃತದಲ್ಲಿರುವ ವೈಷ್ಣವ ಭಕ್ತಿಯ ವಿಚಾರವನ್ನು ಅಧ್ಯಯನ ಮಾಡಲು ತಮಿಳುನಾಡಿಗೆ ಹೋದೆನು. ಮದ್ರಾಸಿನಲ್ಲಿ ನ್ಯಾಯ ವೇದಾಂತ ವಿದ್ವಾಂಸ ರಾದ ಶ್ರೀ ಉ. ವೇ. ವರದಾಚಾರ್ಯ ಸ್ವಾಮಿಗಳ ಹತ್ತಿರ ಹೋದಾಗ, ಅವರು ತಮ್ಮ ಆಚಾರ್ಯರಾದ ನ್ಯಾಯವೇದಾಂತ ವಿದ್ವಾಂಸರಾದ ಶ್ರೀ ಉ. ವೇ. ಕಾರಪ್ಪಂಕಾಡು ವೆಂಕಟಾಚಾರ್ಯ ಸ್ವಾಮಿಯವರ ಅನುಮತಿಗಾಗಿ ಅವರ ಹತ್ತಿರ ಕಳುಹಿಸಿದರು.

ನಾನು ಅವರ ಹತ್ತಿರ ಹೋದಾಗ ವಿಷಯವನ್ನೆಲ್ಲಾ ಕೇಳಿ ನಾನೇ ನಿನಗೆ ಕೆಲವಾರು ಅಧ್ಯಾಯವನ್ನು ಹೇಳುತ್ತೇನೆ ಎಂದರು.

"ಪರಬ್ರಹ್ಮಭಕ್ತಿ" ಎಂಬ ಅಧ್ಯಾಯದ ಗಹನವಾದ ವಿಷಯಗಳನ್ನು ಸರಳ ವಾಗಿಯೂ ಸ್ಪಷ್ಟವಾಗಿಯೂ ವಿವರಿಸುತ್ತಿದ್ದರು. ಅವರು ತಮಿಳಿನಲ್ಲಿ ಹೇಳುತ್ತಿದ್ದ ವಿಷಯವನ್ನು ನಾನು ಹಿಂದೀ ಭಾಷೆಯಲ್ಲಿ ರಚಿಸುತ್ತಿದ್ದೆನು.

ಮಹಾ ಮೇಧಾವಿಯೂ, ವಿದ್ವಾಂಸರೂ, ಜ್ಞಾನಿಗಳೂ ಆದ ಶ್ರೀ ಸ್ವಾಮಿಯವರು ಸೌಜನ್ಯ ಸೌಶೀಲ್ಯಾದಿ ಷಾಡ್ಗುಣ್ಯ ಪರಿಪೂರ್ಣರು. ನನಗೆ 4 ವರ್ಷಗಳು ಪಾಠ ಹೇಳಿದರು. ತಾವು ಎಲ್ಲಿ ಉಪನ್ಯಾಸ ಮಾಡಿದರು ಕರೆದುಕೊಂಡು ಹೋಗಿ ವಿಷಯ ವನ್ನು ತಿಳಿದುಕೊಳ್ಳಲು ನೆರವಾಗುತ್ತಿದ್ದರು. ಕರುಣೆ, ವಾತ್ಸಲ್ಯ, ಸ್ವೀಯರಲ್ಲಿ ಗೌರವ

ಮುಂತಾದ ಸದ್ಗುಣಗಳು ಅವರ ಸ್ವಭಾವವಾಗಿದ್ದಿತು. ಹೀಗೆ ಕಾಲಕ್ಷೇಪ ಹೇಳುತ್ತಿದ್ದಾಗ ತಾವು ಮಾಡಿದ ಉಪನ್ಯಾಸಗಳ ಸಂಗ್ರಹವಾದ "ರಾಮಾಯಣಸಾರ" ಎಂಬ ಕೃತಿಯನ್ನು ಕೊಟ್ಟು ಚೆನ್ನಾಗಿ ಓದಿಕೊಂಡು ಬಾ ಎಂದರು. ಮಾರುದಿನ ಆ ಪುಸ್ತಕವನ್ನು ಕನ್ನಡ ಭಾಷೆಯಲ್ಲಿ ಬರೆದು ಮುದ್ರಿಸಬೇಕೆಂದು ಸೂಚಿಸಿದರು. ನಾನು ಅವರ ಆದೇಶದಂತೆಯೇ ಆ "ರಾಮಾಯಣಸಾರ" ವನ್ನು ಕನ್ನಡಕ್ಕೆ ತರ್ಜುಮೆ ಮಾಡಿದನು.

ಆಗ ಅವರಿಗೆ ಬಹಳ ಸಂತೋಷವಾಗಿ ತಮ್ಮ ಪ್ರತಿರೂಪದ ಬ್ಲಾಕನ್ನು ಕೊಟ್ಟು ಆ ಪುಸ್ತಕಕ್ಕೆ ಇದನ್ನೇ ಉಪಯೋಗಿಸು ಎಂದರು. ಅನಂತರ ತಮ್ಮ ಮಗ ರಾಜಗೋಪಾಲ್‌ರವರನ್ನು ಕರೆದು ಇಂಗ್ಲೀಷಿನಲ್ಲಿ ಬರೆಸಿ ತಾವು ಹಸ್ತಾಕ್ಷರ ಹಾಕಿದರು. ಅವರ ಅಭಿಪ್ರಾಯ ತಮ್ಮ ಸಮಕ್ಷಮವೇ ಆ ಕೃತಿ ಮುದ್ರಣ ಮಾಡಬೇಕೆಂದು ತಿಳಿಸಿದರು. ಆದರೆ ನನ್ನಲ್ಲಿ ಹಣವಿಲ್ಲವಾದ್ದರಿಂದ ಈಗ ಪ್ರಕಟಗೊಂಡಿತು. ಅವರ ಆಶೀರ್ವಾದದಿಂದ ಅನೇಕ ಕೃತಿಗಳು ಬೆಳಕು ಕಂಡಿದ್ದರೂ ಈ ಕೃತಿ ಈಗ ಮುದ್ರಿತವಾಯಿತು.

ಶ್ರೀದೇವಿ

ರಾಮಾಯಣದ ವಿವೇಚನೆ

ವಾಲ್ಮೀಕಿ ಮಹರ್ಷಿಗಳ ಶ್ರೀಮದ್ರಾಮಾಯಣವನ್ನು ಆದಿಕಾವ್ಯವೆಂದು ರಸ ಲೋಲುಪರಾದ ಮಹಾಕವಿಗಳೂ ಸಹೃದಯರೂ ಮನವೊಪ್ಪಿ ಆಸ್ವಾದಿಸಿ ಆನಂದಿಸ ಬಹುದು. ಸಾಮಾಜಿಕ ಮೌಲ್ಯ ಹಾಗೂ ರಾಜನೀತಿಗಳ ಮನಮೋಹಕ ಪ್ರತಿಪಾದನೆ ಯೆಂದೂ, ಭಾರತೀಯ ಆಸ್ತಿಕರೂ ಗೌರವಿಸಬಹುದು. ಬಾಲಕರು ಸ್ವಾರಸ್ಯವಾದ ಅದರ ಕಥೆಗೇ ಮಾರು ಹೋಗಿ ನಲಿದಾಡಬಹುದು. ಧರ್ಮಸೂಕ್ಷ್ಮಗಳ ಲಲಿತ ವಿವರಣೆಯೆಂದು ಇತರರು ಸ್ವಾಗತಿಸಬಹುದು. ಸಕಲ ಮಾನವ ಕುಲಕ್ಕೂ ಸದಾ ಪ್ರಸಕ್ತವಾದ ಪರಮಪುರುಷಾರ್ಥ ಅಥವಾ ಕೇವಲ ಆನಂದಮಯವಾದ ಮೋಕ್ಷದ ವಿವೇಚನೆಯೇ ಅದರ ಅಂತರಾರ್ಥ ಮತ್ತು ಪರಮತಾತ್ಪರ್ಯವೆಂದು ವೇದಾಂತಿಗಳು ಸಿದ್ಧಾಂತಿಸಬಹುದು. ಭಾರತೀಯ ಪರಂಪರೆಯಲ್ಲಿ ಇವೆಲ್ಲಕ್ಕೂ ಸ್ಥಾನವಿದೆ. ಪರಂಪರೆಯನ್ನು ಸುಳ್ಳಿನ ಕಂತೆಯೆಂದು ಕಡೆಗಣಿಸಿ, ಪ್ರಕ್ಷಿಪ್ತಭಾಗ–ಮೂಲರಚನೆ, ಕಾಲ ದೇಶ ಮುಂತಾದ ಶುಷ್ಕ ಚರ್ಚೆಗಳನ್ನು ಅವಲಂಬಿಸಿ, ರಾಮಾಯಣ ಒಬ್ಬ ಕವಿಯ ರಚನೆಯೇ ಅಲ್ಲ; ಅಲ್ಲಿ ರಾಮನು ಭಗವಂತನ ಅವತಾರವೇ ಎಂದು ವಾದಿಸಿ ಮುಂದಿನ ಅನಾಮಧೇಯ ಪ್ರಕ್ಷೇಪಕಾರರ ಕುಕೃತ್ಯ ಎಂದು ನಿರ್ಣಯಿಸಿ ಮತಧರ್ಮ ಹೇಗೆ ಒಂದು ಕಾವ್ಯವನ್ನು ಕೆಡಿಸಬಹುದೆಂಬುದಕ್ಕೆ ರಾಮಾಯಣವೇ ನಿದರ್ಶನವೆಂದು ಪಾಶ್ಚಾತ್ಯ ಸಂಶೋಧನೆಯ ಜಾಡನ್ನು ಹಿಡಿದವರು ವಾದಿಸಲೂಬಹುದು.

ಹೀಗೆ ರಾಮಾಯಣವನ್ನು ಕುರಿತು ಭಿನ್ನದೃಷ್ಟಿಗಳಿಂದ ಭಿನ್ನವಿಚಾರಗಳನ್ನು ಪ್ರಕಟಿಸಿರುವ ಗ್ರಂಥಗಳು ಕನ್ನಡದಲ್ಲಿಯೇ ನೂರಾರಿವೆ. ಆದರೆ ಶ್ರೀಮದ್ರಾಮಾನುಜೀಯ ಶ್ರೀವೈಷ್ಣವ ಪರಂಪರೆಯಲ್ಲಿ ಮಾತ್ರ ಶ್ರೀಮದ್ರಾಮಾಯಣಕ್ಕೆ ವೇದಸಮವಾದ ಅತ್ಯುನ್ನತ ಅಗ್ರಸ್ಥಾನವಿರುವುದನ್ನು ಸಾಂಗೋಪಾಂಗವಾಗಿ ಎಳೆಎಳೆಯಾಗಿ ಬಿಡಿಸಿ ವಿವರಿಸಿರುವ ಗ್ರಂಥಗಳು ಬಹಳ ವಿರಳ. ಕಥೆಗಾಗಿ ಭಾಷಾಂತರಗಳು, ಕಾವ್ಯ ವಿಮರ್ಶೆಗಾಗಿ ಪ್ರಬಂಧಗಳು, ರಸಸ್ಥಾನಗಳ ಪ್ರದರ್ಶನಕ್ಕಾಗಿ ಹರಿಕಥಾದಿಗಳು, ನಾಟಕಾದಿಗಳು-ಇಲ್ಲವೆ ರಾಮಾಯಣದಿಂದ ಪ್ರಭಾವ ಪಡೆದು ನೂತನ ಸ್ಫೂರ್ತಿಯಿಂದ ಬಂದ ಪ್ರತಿಭಾ ಪೂರ್ಣ ನವಕಾವ್ಯಗಳು, ಇವೆಲ್ಲ ಹೇರಳವಾಗಿವೆಯೇ ವಿನಾ ತಮಿಳು ಪಾಶುರಗಳಲ್ಲಿ ಮಹಾಮಹಿಮರಾದ ಆಳ್ವಾರುಗಳೂ, ಅವರನ್ನನುಸರಿಸಿ ಸಂಸ್ಕೃತಾದಿ ಇತರ ಭಾಷೆಗಳಲ್ಲಿ ರಾಮಾನುಜೀಯರೂ ಬರೆದಿರುವ ರಾಮಾಯಣದ ಸಾರ ಅಥವಾ ತಿರುಳನ್ನು ತಿಳಿಸಿಕೊಡುವ ಗ್ರಂಥಗಳು ಇಲ್ಲ. ಈ ಕೊರತೆಯನ್ನು ಪ್ರಕೃತ ವಿದುಷಿಯರು ತಮ್ಮ ಈ ವಿವೇಚನಾ ಗ್ರಂಥದ ಪ್ರಕಟನೆಯಿಂದ ಬಹುಮಟ್ಟಿಗೆ ನಿವಾರಿಸಿ ಕನ್ನಡ ಜನತೆಗೆ ಉಪಕಾರ ಮಾಡಿದ್ದಾರೆ.

ಕಥೆಯ ವ್ಯಾಜದಿಂದ ಧರ್ಮಸ್ವರೂಪವನ್ನೂ, ಭಗವಂತನ ಕೃಪೆಯ ಲಾಭದಿಂದ ಅವನನ್ನು ಸೇರಲು ಜೀವನಿಗೆ ಅಥವಾ ಭಕ್ತನಿಗೆ ಅತ್ಯಗತ್ಯವಾಗಿರುವ 'ಶರಣಾಗತಿ' ಅಥವಾ 'ಪ್ರಪತ್ತಿ'ಯ ಬಹುಮುಖ ಸ್ವರೂಪವನ್ನೂ ಇಲ್ಲಿ ಸಾಧಾರಣವಾಗಿಯೂ ಸೋದಾಹರಣವಾಗಿಯೂ ಉತ್ತಮವಾಗಿ ವಿವೇಚಿಸಲಾಗಿದೆ. 'ಪರಮಾತ್ಮ'ನೇ ಗಂತವ್ಯಲಕ್ಷ್ಯ, ಅವನನ್ನು ಮುಟ್ಟಬೇಕಾಗಿರುವವನೇ 'ಜೀವ', ಆದರಿಂದ ಸಿದ್ಧವಾಗುವ ಪರಮ ಪದವೇ ಫಲ: ಮೋಕ್ಷ, ಫಲಸಿದ್ಧಿಗೆ ಅಡ್ಡವಾಗಿ ಬರುವ ಅಡ್ಡಿಗಳೇ 'ವಿರೋಧಿ'ಗಳು. ಅವನ್ನು ದಾಟಿಸಿ ಫಲಕ್ಕೆ ಸಾಧಕವಾಗತಕ್ಕವೇ 'ಉಪಾಯ'ಗಳು ಉಭಯವೇದಾಂತದ ಈ ಪಂಚಪ್ರಕ್ರಿಯೆಯನ್ನು ಅಮೂಲಾಗ್ರವಾಗಿ ಶ್ರೀ ರಾಮಾಯಣದ ಅಂತರಾರ್ಥ ವಿವೇಚನೆಯ ದ್ವಾರಾ ಲೇಖಕರು ವ್ಯಾಖ್ಯಾನಿಸಿದ್ದಾರೆ. ಅಲ್ಲಲ್ಲಿ ತಮ್ಮ ವಿವರಣೆಗಳಿಗೆ ಆಧಾರವಾಗಿರುವ ದ್ರಾವಿಡ ಪ್ರಬಂಧಗಳ, ವೇದಉಪನಿಷತ್ತುಗಳ, ಧರ್ಮಶಾಸ್ತ್ರಗಳ ಪ್ರಮಾಣವಚನಗಳನ್ನೂ ಉಲ್ಲೇಖಿಸಿದ್ದಾರೆ; ಆಳವಾಗಿ ವಿಶ್ಲೇಷಿಸಿದ್ದಾರೆ.

ಗ್ರಂಥದ ಶೈಲಿ ಪಾರಿಭಾಷಿಕವಾಗಿ, ಒಮ್ಮೊಮ್ಮೆ ಕನ್ನಡದ ಜಾಯಮಾನಕ್ಕೆ ಒಗ್ಗದ ವಾಕ್ಯರಚನೆಯಿಂದಾಗಿ ಗಡುಚೆನಿಸಿದರೂ, ಒಮ್ಮೊಮ್ಮೆ ಆಡುಮಾತಿನ ಸರಸ ಶಾಸ್ತ್ರಗ್ರಂಥದ ಗಾಂಭೀರ್ಯಕ್ಕೆ ಅನುಚಿತವೆನಿಸಿದರೂ, ಒಟ್ಟಿನ ಮೇಲೆ ಶ್ರದ್ಧೆಯಿಂದ ಓದುವವರಿಗೆ ಬಹುದಿಕ್ಕಿನಿಂದ ಶ್ರೀವೈಷ್ಣವ ಪರಂಪರೆಯ ಒಳನೋಟವನ್ನು ಒದಗಿಸುವ ಈ ಕನ್ನಡಾನುವಾದ ಕೃತಿ ಬಹಳ ಉಪಾದೇಯವೆನಿಸುವುದರಲ್ಲಿ ಸಂಶಯವಿಲ್ಲ. ಪ್ರಸಿದ್ಧ ಸಾಹಿತಿಗಳಾದ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಹಾಗೂ ಶ್ರೀ ಯದುಗಿರಿ ಯತಿರಾಜ ನಾರಾಯಣಜೀಯರ್ ಅವರ ಶುಭಾಶಂಸನೆಗಳನ್ನು ಪಡೆದು ಬಂದಿರುವ ಈ ಕೃತಿ ಆಸ್ತಿಕವೃಂದದಲ್ಲಿ ಮನ್ನಣೆ ಪಡೆಯಲೆಂದು ಹಾರೈಸುತ್ತೇನೆ.

ಡಾ॥ ಕೆ. ಕೃಷ್ಣಮೂರ್ತಿ

ಮಾನಸ ಗಂಗೋತ್ರಿ ವಾರ್ತಾ ಪತ್ರಿಕೆ

ಶ್ರೀ ರಾಮಾಯಣ ಪ್ರದೀಪ–ಅನು : ಶ್ರೀದೇವಿ

ಮದ್ರಾಸಿನ ಕಾರಪ್ಪನ್‌ಕಾಡು ವೆಂಕಟಾಚಾರ್ಯಸ್ವಾಮಿ ಅವರು ತಮಿಳು ಭಾಷೆಯಲ್ಲಿ 'ರಾಮಾಯಣ ಸಾರ' ಎಂಬ ಗ್ರಂಥವನ್ನು ಬರೆದಿದ್ದು, ಅವರ ಕನ್ನಡಾನುವಾದವನ್ನು 'ಶ್ರೀ ರಾಮಾಯಣ ಪ್ರದೀಪ' ಎಂಬ ಹೆಸರಿನಲ್ಲಿ ಶ್ರೀದೇವಿಯವರು ಕನ್ನಡಿಗರ ಮುಂದೆ ಇಟ್ಟಿದ್ದಾರೆ. 13 ಅಧ್ಯಾಯಗಳಿರುವ ಈ ಗ್ರಂಥದಲ್ಲಿ 'ರಾಮಾಯಣವೂ ಶರಣಾಗತಿಯೂ' ಎಂಬ ಹನ್ನೆರಡನೆಯ ಅಧ್ಯಾಯವು ಅತ್ಯಂತ ವಿಸ್ತಾರವಾಗಿದೆ. ವಿಶಿಷ್ಟಾದ್ವೈತ ಸಿದ್ಧಾಂತವು ಭಕ್ತಿಯ ಮೂಲಕ ಭಗವಂತನಲ್ಲಿ ಪೂರ್ಣ ಶರಣಾಗತಿಯನ್ನು ವಿಶೇಷವಾಗಿ ಪ್ರತಿಪಾದಿಸುತ್ತದೆ. ಆ ಹಿನ್ನೆಲೆಯಲ್ಲಿ ರಾಮಾಯಣವು ಹೇಗೆ ಹೆಜ್ಜೆಹೆಜ್ಜೆಗೂ ಸರ್ವಸಮರ್ಪಣಾಭಾವದ ಪೂರ್ಣ ಶರಣಾಗತಿಯ ತತ್ತ್ವವನ್ನು ಒಳಗೊಂಡಿದೆ ಎಂಬುದನ್ನು ಇಲ್ಲಿ ಲೇಖಕರು ಮನಮುಟ್ಟುವಂತೆ ವಿವೇಚಿಸಿದ್ದಾರೆ.

ರಾಮಾಯಣದ ಮಹಿಮೆ, ಅದರ ಅಂತರಾರ್ಥ, ಅದರಲ್ಲಿ ಅಡಕವಾಗಿರುವ ವೇದಾಂತ, ರಾಮನ ಪಾತ್ರದ ವೈಶಿಷ್ಟ್ಯ—ಈ ಮೊದಲಾದ ಸಂಗತಿಗಳು ಈ ಕೃತಿಯಲ್ಲಿ ಬಹು ಮನೋಜ್ಞವಾಗಿ ನಿರೂಪಿತವಾಗಿವೆ. ಇಂತಹ ಸದ್ಗ್ರಂಥವೊಂದನ್ನು ಶ್ರೀದೇವಿಯವರು ಕನ್ನಡಕ್ಕೆ ಕೊಡುವುದರ ಮೂಲಕ ದೊಡ್ಡ ಉಪಕಾರ ಮಾಡಿದ್ದಾರೆ. ಅನುವಾದವು ಸ್ಪಷ್ಟವೂ ಸರಳವೂ ಆಗಿದ್ದು ಸಹೃದಯರಿಗೆ ಹಿತವನ್ನುಂಟು ಮಾಡುತ್ತದೆ.

ಚೆನ್ನುಡಿ

ಶ್ರೀ ನ್ಯಾಯವೇದಾಂತ ವಿದ್ವಾನ್ ಕಾರಪ್ಪನ್‌ಕಾಡು ವೆಂಕಟಾಚಾರ್ಯಸ್ವಾಮಿಯವರು ವಿದ್ವಾಂಸರು, ಬಹುಮೇಧಾವಿ ವಿಷಯವನ್ನು ಪ್ರತಿಪಾದಿಸುವಾಗ ಒಂದು ಅಕ್ಷರ ಹೆಚ್ಚಾಗಬಾರದು ಮತ್ತು ಒಂದು ಅಕ್ಷರ ಕಡಿಮೆಯಾಗಬಾರದೆಂಬ ನಿಯಮ ಅವರದ್ದು. ಉಪನ್ಯಾಸ ಮಾಡುವಾಗಲೂ ಸುಂದರವಾದ ಸರಳ ಭಾಷೆಯಲ್ಲಿ ಕೇಳುವವರಿಗೆ ಮನದಟ್ಟಾಗುವಂತೆ ವಿಷಯವನ್ನು ವರ್ಣಿಸುತ್ತಿದ್ದರು.

ಅವರು ರಚಿಸಿದ್ದ ತಮಿಳು "ರಾಮಾಯಣ ಸಾರ" ಎಂಬ ಕೃತಿಯನ್ನು ನಾನು ಕನ್ನಡಕ್ಕೆ ತರ್ಜುಮೆ ಮಾಡಿದೆನು. ಕೆಲವೇ ದಿನಗಳಲ್ಲಿ ಕನ್ನಡಿಗರಿಗೆ 'ಶ್ರೀ ರಾಮಾಯಣ ಪ್ರದೀಪ' ಪರಮಪ್ರಿಯವಾಗಿ ಎಲ್ಲರೂ ಆಸಕ್ತಿಯಿಂದ ಖರೀದಿಸಿದರು.

ಧಾರವಾಡದ ಡಾ|| ಶ್ರೀ ಕೆ. ಕೃಷ್ಣಮೂರ್ತಿಯವರು ಸಂಸ್ಕೃತದಲ್ಲಿ ಪ್ರಕಾಂಡ ಪಂಡಿತರು. ಅವರು 1986 ರಲ್ಲೇ ಈ ಕೃತಿಯನ್ನು "ರಾಮಾಯಣದ ವಿವೇಚನ" ಎಂದು ವಿಮರ್ಶೆ ಮಾಡಿದ್ದಾರೆ.

ಅವರ ವಿಮರ್ಶಾ ಲೇಖನ T.T.D. ಮಾಸ ಪತ್ರಿಕೆ ಸಪ್ತಗಿರಿಯಲ್ಲಿ ಮುದ್ರಿತವಾಗಿತ್ತು. ಅದನ್ನೇ ದ್ವಿತೀಯ ಮುದ್ರಣದ ಮುನ್ನುಡಿಯಾಗಿ ಮುದ್ರಿಸಿರುತ್ತೇನೆ.

ಮಾನಸ ಗಂಗೋತ್ರಿ, ಮೈಸೂರಿನ ವಾರ್ತಾ ಪತ್ರಿಕೆಯಲ್ಲಿಯೂ "ಶ್ರೀ ರಾಮಾಯಣ ಪ್ರದೀಪ" ದ ವಿಚಾರ ಮುದ್ರಿತವಾಗಿತ್ತು, ಅದನ್ನೂ ಈ ದ್ವಿತೀಯ ಮುದ್ರಣದಲ್ಲಿ ಮುದ್ರಿಸಿರುತ್ತೇನೆ.

ಈ ಕೃತಿಯು ತಮಿಳಿನಲ್ಲೇ ಇದ್ದಿದ್ದರೆ ಕನ್ನಡಿಗರಿಗೆ ಇಷ್ಟು ಆಕರ್ಷಣೀಯವಾಗಿರುತ್ತಿರಲಿಲ್ಲ ಆದ್ದರಿಂದಲೇ ನಮ್ಮ ಆಚಾರ್ಯರು ಕನ್ನಡದಲ್ಲಿ ಅನುವಾದ ಮಾಡಿ ಪ್ರಕಟಿಸಬೇಕೆಂದರು.

ಪ್ರಥಮ ಮುದ್ರಣದ ಹಾಗೆಯೇ ಕನ್ನಡಿಗರು ದ್ವಿತೀಯ ಮುದ್ರಣದ ಪ್ರತಿಗಳಿಗೂ ಹೆಚ್ಚಿನ ಪ್ರೋತ್ಸಾಹ ನೀಡಬೇಕೆಂದು ಕೋರುತ್ತೇನೆ.

ಶ್ರೀದೇವಿ

ವಿಷಯ ಸೂಚಿ

ರಾಮಾಯಣದ ವಿವೇಚನೆ–ಡಾ|| ಕೆ. ಕೃಷ್ಣಮೂರ್ತಿ

ರಾಮಾಯಣದ ವಿಮರ್ಶೆ–ವಾರ್ತಾ ಸಂಚಿಕೆ ಮಾನಸಗಂಗೋತ್ರಿ

ಮುನ್ನುಡಿ–ಶ್ರೀದೇವಿ

ಆಶೀರ್ವಚನ-ಶ್ರೀಯದುಗಿರಿ ಯತಿರಾಜ ಜೀಯರ್

ಎರಡು ಮಾತು-ಶ್ರೀ ಗೋರೂರು ರಾಮಸ್ವಾಮಿ ಅಯ್ಯಂಗಾರ್

ನಿವೇದನೆ-ಶ್ರೀದೇವಿ

ಅವತಾರಿಕೆ	— ೧
ಶ್ರೀರಾಮಾಯಣದ ಮಹಿಮೆ	— ೨
ಶ್ರೀರಾಮಾಯಣದ ಸಾರಾರ್ಥ	— ೩
ವೇದಾಂತವೂ ಪರಮಾತ್ಮನೂ	— ೫
ರಾಮಾಯಣವೂ ಪರಮಾತ್ಮನೂ	— ೭
ವೇದಾಂತವೂ ಮತ್ತು ಜೀವನೂ	— ೧೦
ರಾಮಾಯಣವೂ ಮತ್ತು ಜೀವಾತ್ಮನೂ.	— ೧೩
ವೇದಾಂತವೂ ಉಪೇಯವೂ	— ೧೮
ರಾಮಾಯಣವೂ ಉಪೇಯವೂ	— ೨೩
ವೇದಾಂತವೂ ವಿರೋಧಿಯೂ	— ೨೮
ರಾಮಾಯಣವೂ ವಿರೋಧಿಯೂ	— ೩೪
ವೇದಾಂತವೂ ಉಪಾಯವೂ	— ೪೦
ರಾಮಾಯಣವೂ ಶರಣಾಗತಿಯೂ	— ೫೧
ಭಕ್ತಾಮೃತ	— ೬೩

ಶ್ರೀ ರಾಮಾಯಣ ಪ್ರದೀಪ

ಅವತಾರಿಕೆ

ಪರಮ ಪುರುಷನಾದ ಶ್ರೀಮನ್ನಾರಾಯಣನು ತನಗೇ ಸೀಮಿತವಾದ ಪರಮಪದದಲ್ಲಿ ಶ್ರೀ, ಭೂ ಮತ್ತು ನೀಳಾದೇವಿಯರೊಡಗೂಡಿ, ನಿತ್ಯರಿಂದಲೂ, ಮುಕ್ತರಿಂದಲೂ ಸೇವೆಯನ್ನು ಸ್ವೀಕರಿಸುತ್ತಾನೆ. ಈ ರೀತಿ ಆನಂದಸಾಗರದಲ್ಲಿ ತನ್ಮಯನಾಗಿದ್ದರೂ ಸಹಾ ಆ ಪರಮ ಪುರುಷನು ಈ ಭೂಲೋಕದವರೂ ಸಹ ಆ ಪರಮಪದದಲ್ಲಿರುವ ನಿತ್ಯಸೂರಿಗಳ ಹಾಗೆ ತನ್ನನ್ನು ಅನುಭವಿಸಿ ಆನಂದ ಸಾಮ್ರಾಜ್ಯವನ್ನು ಪಡೆಯಬೇಕಾದವರು ಹಾಗಿಲ್ಲದೆ ಮಾಯಾಶಬ್ದವಸ್ತುವಾದ ಮೂಲ ಪ್ರಕೃತಿಯಲ್ಲಿ ಮಗ್ನರಾಗಿದ್ದು ತಿಳುವಳಿಕೆ ಇದ್ದೂ ಅಜ್ಞಾನವಾದ ಅಚೇತನ ವಸ್ತುಗಳೊಡನೆ ಸಂಬಂಧ ಹೊಂದಿರುವುದನ್ನು ಕಂಡು ಕರುಣೆ ಹೊಂದಿದನು. ಈ ರೀತಿ ದಯಾಮಯನಾದ ಭಗವಂತನು ಈ ಲೋಕದ ಪಾಮರರನ್ನು ಉದ್ಧಾರಮಾಡುವ ಸಲುವಾಗಿ ತನ್ನನ್ನು ಅರ್ಚಿಸಿ ಕೃತಾರ್ಥರಾಗುವಂತೆ ಕಣ್ಣು, ಕಿವಿ, ಕೈ-ಕಾಲುಗಳೇ ಮೊದಲಾದ ಅಂಗಗಳಿಂದ ಕೂಡಿದ ದೇಹವನ್ನು ಕೊಟ್ಟು ಅನುಗ್ರಹಿಸಿದನು. ವಿವೇಕವನ್ನುಂಟುಮಾಡುವ ಜ್ಞಾನ, ಕಲೆ, ಶಾಸ್ತ್ರಗಳನ್ನು ತನ್ನ ಸ್ವಭಾವಾನುಗುಣವಾಗಿ ಕೃಪೆಯಿಂದ ಅನುಗ್ರಹಿಸಿದನು.

ಈ ರೀತಿ ದೈವ ಪ್ರೇರಣೆಯನ್ನು ಹೊಂದಿದ್ದರೂ ಸಹಾ ಈ ಚೇತನನು ಶಾಸ್ತ್ರಗಳು ತೋರಿಸಿದ ಮಾರ್ಗದಲ್ಲಿ ಹೋಗದೆ ವಿಷಯಾದಿ ಸುಖದಿಂದ ಆಕರ್ಷಿತನಾಗಿ ಈ ಭವವೆಂಬ ಸಾಗರದಲ್ಲಿ ಮುಳುಗುತ್ತಿರುವವನಿಗೆ ಜೀವವನ್ನುಳಿಸಿಕೊಳ್ಳಲು ಕೊಟ್ಟ ದೋಣಿ ಮರದ ಸಹಾಯದಿಂದ ದಡಕ್ಕೆ ಸೇರಿ ಜೀವವನ್ನುಳಿಸಿಕೊಳ್ಳುವ ಬದಲು ಮತ್ತೂ ಸಾಗರದೊಳಗೇ ಹೋಗುವವರ ಹಾಗೆ ವಿಷಯಾದಿ ಐಹಿಕ ಸುಖಗಳಲ್ಲಿ ಅನೇಕ ಜನ್ಮಗಳನ್ನು ಪಡೆಯುತ್ತಾನೆ.

ಇದನ್ನು ಕಂಡು ಪರಮ ಪುರುಷನು, ತನ್ನ ಆಜ್ಞೆಯನ್ನು ನೆರವೇರಿಸದೇ ಇರುವ ಈ ಜಗತ್ತಿನಲ್ಲಿ ತಾನೇ ಸಂಚರಿಸಿ, ಪ್ರಜೆಗಳನ್ನು ತನ್ನ ಆಜ್ಞೆಗೆ ಒಳಪಡಿಸಿ ಆಳುವ ಅರಸನ ಹಾಗೆ ಈ ಜಗತ್ತಿನಲ್ಲಿ ಅನೇಕ ಅವತಾರಗಳನ್ನು ಮಾಡಿ, ಮಾನವರನ್ನು ಅನುಗ್ರಹಿಸಿದನು. ಈ ಅವತಾರಗಳಲ್ಲಿ ಒಂದಾದ ಶ್ರೀರಾಮಾವತಾರವು ಸರ್ವಶ್ರೇಷ್ಠವಾದುದು.

ಶ್ರೀ ರಾಮಚಂದ್ರನು ತನ್ನ ಉಪದೇಶವಾಕ್ಯಗಳಿಂದಲೂ, ವ್ಯವಹಾರಗಳಿಂದಲೂ ಈ ಲೋಕದ ಜನರಿಗೆ ತಿಳಿಸಿದ ನೀತಿಗಳು ಅನೇಕ. ಅವು ಮುಂದಿನ ಜನಾಂಗದವರಿಗೆ ಸಹಾಯವಾಗಬೇಕೆಂಬ ಉದ್ದೇಶದಿಂದ ಚತುರ್ಮುಖ ಬ್ರಹ್ಮನು ನೂರುಕೋಟಿ ಪ್ರಮಾಣವುಳ್ಳ ಶ್ರೀರಾಮಚಂದ್ರನ ಚರಿತ್ರೆಯನ್ನು ರಚಿಸಿ ನಾರದಾದಿ ದೇವ ಋಷಿಗಳಿಗೆ ಉಪದೇಶ ಮಾಡಿದನು.

ಶ್ರೀ ರಾಮನಾಮವನ್ನೇ ಜಪಿಸುತ್ತಾ ಕಾಲವನ್ನು ಕಳೆಯುತ್ತಿದ್ದ ವಾಲ್ಮೀಕಿ ಮುನಿಯ ಹತ್ತಿರಕ್ಕೆ ನಾರದ ಋಷಿಯನ್ನು ಬ್ರಹ್ಮದೇವನು ಕಳುಹಿಸಿಕೊಟ್ಟನು. ಆಗ ಅವನು ವಾಲ್ಮೀಕಿ ಮುನಿಗೆ ಶ್ರೀ ರಾಮಚರಿತ್ರೆಯನ್ನು ರಚಿಸಲು ಆಜ್ಞೆ ಮಾಡಿದನು. ವಾಲ್ಮೀಕಿ ಮುನಿಯು ಶ್ರೀ ರಾಮಾಯಣವನ್ನು ರಚಿಸಿದನು.

ಶ್ರೀ ರಾಮಾಯಣದ ಮಹಿಮೆ

ಶ್ರೀ ಪಿಳ್ಳೈಲೋಕಾಚಾರ್ಯರು ಶ್ರೀ ರಾಮಾಯಣವನ್ನು ಇತಿಹಾಸ ಶ್ರೇಷ್ಠ ಎಂದು ಕೊಂಡಾಡಿರುತ್ತಾರೆ. ಆದರೆ, ನಾರಾಯಣರೆಂದೇ ಪ್ರಸಿದ್ಧಿ ಪಡೆದಿರುವವರು ವ್ಯಾಸರು. ಶ್ರೀ ರಾಮನಲ್ಲಿ ಅತ್ಯಧಿಕ ಭಕ್ತಿಯುಳ್ಳವರು ವಾಲ್ಮೀಕಿ ಮುನಿ. ವ್ಯಾಸರಿಂದ ರಚಿತವಾದುದು ಭಾರತ. ವಾಲ್ಮೀಕಿಯಿಂದ ರಚಿತವಾದುದು ಶ್ರೀ ರಾಮಚಂದ್ರನ ಚರಿತ್ರೆ. ಭಾರತವೆನ್ನುವ ಇತಿಹಾಸವನ್ನು ಪ್ರಶಂಸಿಸದೇ ಶ್ರೀ ರಾಮಚಂದ್ರನ ಚರಿತ್ರೆಯನ್ನು ಇತಿಹಾಸ ಶ್ರೇಷ್ಠ ಎಂದು ಹೇಳಲು ಕಾರಣವೇನೆಂದರೆ :—

"ನಾರಾಯಣ ಕಥಾಮಿಮಾಂ"—ಎಂದು ಪ್ರಾರಂಭಿಸಿ ವ್ಯಾಸರು ನಾರಾಯಣನ ಪರಿಪೂರ್ಣಾವತಾರವಾಗಿ ಕೊಂಡಾಡುವ ಶ್ರೀ ಕೃಷ್ಣ ಪರಮಾತ್ಮನ ಚರಿತ್ರೆಯನ್ನು, ಮಹಾಭಾರತದಲ್ಲಿ ಒಂದು ರೀತಿಯಾಗಿ ತಿಳಿಸಿರುವುದು ಸತ್ಯವೇ ಆದರೂ, ಯಥಾ "ಧರ್ಮಾದಯಶ್ಚಾರ್ಥಾಃ ಮುನಿವರ್ಯಾನು ಕೀರ್ತಿತಾಃ ನತಥಾ ವಾಸುದೇವಸ್ಯ ಮಹಿಮಾಹ್ಯನು ವರ್ಣಿತಃ" ॥ ಎಂದು ನಾರದರು ವ್ಯಾಸರನ್ನು ಕುರಿತು ಹೇಳಿರುವ ಹಾಗೆ ವ್ಯಾಸರು ತಮ್ಮಿಂದ ರಚಿತವಾದ ಭಾರತದಲ್ಲಿ ಪ್ರಾಪಂಚಿಕ ವಿಷಯ ಸುಖಗಳು, ಅವುಗಳ ಸಾಧನಗಳನ್ನು ಹೇಳಿರುವ ಹಾಗೆ ಶ್ರೀ ಕೃಷ್ಣಪರಮಾತ್ಮನ ಮಹಿಮೆಯನ್ನು ಹೇಳಿಲ್ಲ. ಮತ್ತು "ಯುದ್ಧ ಕೋಲಾಹಲಃ ಕೃತಿಃ"—ಎಂದು ಪ್ರಸಿದ್ಧಿ ವಿವರಿಸುವ ಹಾಗೆ, ಯುದ್ಧ ಚರಿತ್ರೆಯನ್ನೇ ಅತ್ಯಧಿಕವಾಗಿ ಪ್ರಕಟಪಡಿಸಿರುತ್ತಾರೆ. ಚತುರ್ಮುಖ ಬ್ರಹ್ಮನ ಮಾನಸಪುತ್ರರಾದ ನಾರದ ಮಹರ್ಷಿಯು ಶ್ರೀಕೃಷ್ಣ ಚರಿತ್ರೆಯನ್ನು ವ್ಯಾಸರಿಗೆ ಉಪದೇಶಿಸಿದ್ದುದಾಗಿ ತಿಳಿದು ಬಂದಿದೆ. ಮಹಾಭಾರತವನ್ನು ರಚಿಸಿಯೂ ಮನಃಕ್ಲೇಶಗೊಂಡಿದ್ದ ವ್ಯಾಸರಿಗೆ ಶ್ರೀಮದ್ಭಾಗವತದ ರಚನೆಯಿಂದ ಮನಃಕ್ಲೇಶವು ದೂರ ಸರಿದುದಾಗಿ ಅವರ ಮಾತಿನ ಆಧಾರದಿಂದಲೇ ತಿಳಿಯಬಹುದು.

"ಅಸತ್ಕೀರ್ತನ ಕಾಂತಾರ ಪರಿವರ್ತನ ಪಾಂಸುಲಾಮ್ ।
ವಾಚಂ ಶೌರಿಕಥಾಲಾಪ ಗಂಗಯೈವ ಪುನೀಮಹೇ" ॥

ನಾರದ ಮಹರ್ಷಿಯ ತಂದೆಯಾದ ಚತುರ್ಮುಖ ಬ್ರಹ್ಮನಿಂದಲೇ ಪೂಜೆಯನ್ನು ಮಾಡಿಸಿಕೊಳ್ಳುವ ಹಿರಿಮೆ ವಾಲ್ಮೀಕಿ ಮುನಿವರ್ಯರಿಗೆ ಇದ್ದಿತು. ಚತುರ್ಮುಖ ಬ್ರಹ್ಮನು ವಾಲ್ಮೀಕಿಯ ಆಶ್ರಮಕ್ಕೆ ಬಂದು ಆ ಮುನಿಯಿಂದ ಈ ಲೋಕವು ಉದ್ಧಾರವಾಗಲೆಂದು ಅಪೇಕ್ಷಿಸಿದರು ; ಆ ಮುನಿವರ್ಯನನ್ನು ಪೂಜಿಸಲು ಅಪೇಕ್ಷಿಸಿ, ತಮ್ಮ

ಮುಂದೆ ಇರುವ ಒಂದು ಆಸನವನ್ನು ತೋರಿಸಿ ಅದರಲ್ಲಿ ಕುಳಿತುಕೊಳ್ಳುವಂತೆ ಹೇಳಿದರು, ವಾಲ್ಮೀಕಿಯೂ ಸಹ ಅದೇ ರೀತಿ ಮಾಡಿದರು ಎಂದು ವಾಲ್ಮೀಕಿಯ ಹಿರಿಮೆಯನ್ನು ಹೇಳುವ ಚರಿತ್ರೆಯನ್ನು ಇಲ್ಲಿ ಕಾಣಬಹುದು.

" ವಾಲ್ಮೀಕಯೇ ಮಹರ್ಷಯೇ ಸಂದಿದೇಶಾಸನಂ ತತಃ ।
ಬ್ರಹ್ಮಣಾ ಸಮನುಜ್ಞಾತಃ ಸೋಽಪ್ಯುಪಾವಿಶದಾಸನೇ ॥ "

ಎನ್ನುವ ವಾಲ್ಮೀಕಿಯ ಮಾತುಗಳನ್ನು ಇಲ್ಲಿ ನೋಡಬಹುದು.

ಅನಂತರ, ವೇದದಿಂದಲೇ ತಿಳಿದು ಬರುವ ಪರಮ ಪುರುಷನು ದಶರಥನ ಕುಮಾರನಾಗಿ ಅವತರಿಸಿದಾಗ, ಹಾಗೆಯೇ, ಆ ವೇದವೂ ಆ ಪರಮಾತ್ಮನ ಕಲ್ಯಾಣ ಗುಣಗಳನ್ನು ಆಶ್ಚರ್ಯಕರವಾದ ಕಾರ್ಯಗಳನ್ನು ತಿಳಿಸಲು ಶ್ರೀ ವಾಲ್ಮೀಕಿ ಮುನಿಯ ಮೂಲಕ ರಾಮಾಯಣವಾಗಿ ಶ್ರೀ ರಾಮಚರಿತ್ರೆಯಾಗಿ ಅವತರಿಸಿತು ಎಂಬ ಅರ್ಥವುಳ್ಳ :—

" ವೇದ ವೇದ್ಯೇ ಪರೇ ಪುಂಸಿ ಜಾತೇ ದಶರಥಾತ್ಮಜೇ ।
ವೇದಃ ಪ್ರಾಚೇತಸಾದಾಸೀತ್ ಸಾಕ್ಷಾದ್ರಾಮಾಯಣಾತ್ಮನಾ ॥ "

ಎನ್ನುವ ಸ್ಕಾಂದ ವಚನವನ್ನು ನೋಡಿದರೆ, ಅದರ ಮಹಿಮೆಯು ಚೆನ್ನಾಗಿ ತಿಳಿಯುತ್ತದೆ.

ಹಾಗೂ, ಕೂರೇಶರ ಕುಮಾರರಾದ ಪರಾಶರ ಭಟ್ಟರು, ತಮ್ಮ ಸಹಸ್ರನಾಮ ಭಾಷ್ಯದಲ್ಲಿ " ಶ್ರೀಮದ್ರಾಮಾಯಣಮಹಾಭಾರತಂ ಶರಣಮ್ " ಎಂದು ವಿವರಿಸಿದ್ದಾರೆ. ಈ ವಾಕ್ಯದಲ್ಲಿ ಭಾರತದ ಹಿರಿಮೆಯನ್ನು ಹೇಳುವಾಗ ರಾಮಾಯಣದ ಹಿರಿಮೆಯನ್ನು ಉದಾಹರಣೆಯನ್ನಾಗಿ ತೋರಿಸಿರುವುದನ್ನು ಕಾಣಬಹುದಾದರೂ ಹಿರಿಮೆಯಲ್ಲಿ ರಾಮಾಯಣಕ್ಕೆ ಮೊದಲಿನ ಸ್ಥಾನವೆಂಬುದು ಸ್ಪಷ್ಟವಾಗಿರುತ್ತದೆ.

ಶ್ರೀ ರಾಮಾಯಣದ ಸಾರಾರ್ಥ

ಈ ರೀತಿ ಶ್ರೇಷ್ಠತೆಯನ್ನು ಹೊಂದಿರುವ ರಾಮಾಯಣದಲ್ಲಿ ಉತ್ತಮವಾದ ಸಾರಾರ್ಥ ಅನೇಕ ಉಂಟು. ಶ್ರೀ ರಾಮಾನುಜಾಚಾರ್ಯರು ತಿರುಪತಿಯಲ್ಲಿ ತಿರುಮಲೆ ನಂಬಿಯವರ ಹತ್ತಿರ ಶ್ರೀ ರಾಮಾಯಣವನ್ನು ಅಧ್ಯಯನ ಮಾಡಿದರೆಂಬುದೇ ಇದಕ್ಕೆ ಉದಾಹರಣೆ. (ನಾವು ಪಡೆಯಬೇಕಾಗಿರುವ) ಪರಮಾತ್ಮಾ, (ಪಡೆಯುವವನಾಗಿರುವ) ಜೀವಾತ್ಮಾ, (ಭಗವಂತನನ್ನು ಪಡೆಯುವುದರ) ಫಲ, (ಅವನನ್ನು) ಹೊಂದದಂತೆ ತಡೆಯುವ ವಿರೋಧಿ, (ಅವನನ್ನು ಪಡೆಯುವಂತಹ) ಉಪಾಯ ಎಂಬ ಸಾರವನ್ನು ಐದು. ಇವಕ್ಕೆ ಅರ್ಥ ಪಂಚಕವೆಂದು ಹೆಸರು—

" ಯಃ ಶ್ರಾವಯಾ ಮಾಸದ ಶಾಶ್ವತಂ ।
ರಾಮಾಯಣಂ ಲಕ್ಷ್ಮಣಯೋಗಿ ವರ್ಯಾತ್ ।

ಶ್ರೀ ಶೈಲ ನಾಥಸ್ಯ ಪಿತಾ ಮಹಂತಂ ।
ಶ್ರೀ ಶೈಲ ಪೂರ್ಣಾರ್ಯಮಹಂ ಪ್ರಪದ್ಯೇ ॥"

" ಪ್ರಾಪ್ಯಸ್ಯ ಬ್ರಹ್ಮಣೋರೂಪಂ ಪ್ರಾಪ್ತುಶ್ಚ ಪ್ರತ್ಯಗಾತ್ಮನಃ ।
ಪ್ರಾಪ್ತ್ಯುಪಾಯಂ ಫಲಂ ಪ್ರಾಪ್ತೇಃ ತಥಾಪ್ರಾಪ್ತಿ ವಿರೋಧಿಚ ।
ವದಂತಿ ಸಕಲಾ ವೇದಾಃ ಸೇತಿಹಾಸ ಪುರಾಣಕಾಃ ॥"

ಎಂಬ ವಚನವನ್ನು ಇಲ್ಲಿ ಗಮನಿಸಬೇಕು.

" ವಾಲ್ಮೀಕಿ ಮುನಿಯು ಚತುರ್ಮುಖನ ಆಜ್ಞೆಯನ್ನು ಅನುಸರಿಸಿ, ಶ್ರೀ ರಾಮಾಯಣವನ್ನು ರಚಿಸಿದ ನಂತರ, ಈ ರಾಮಾಯಣ ಚರಿತ್ರೆಯನ್ನು ಪ್ರಚಾರ ಮಾಡಬಲ್ಲವರು ಯಾರೋ ? ನನಗೆ ತಿಳಿಯದಲ್ಲ ; ಭಗವಂತನೇ ! ನೀನೇ ಅವನನ್ನು ನನಗೆ ದಯಪಾಲಿಸಬೇಕು " ಎಂದು ಆ ಪರಮಾತ್ಮನನ್ನು ಚಿಂತಿಸಿಕೊಂಡಿದ್ದರು. ಆ ಸಮಯದಲ್ಲಿ ಮುನಿ ವೇಷವನ್ನು ಧರಿಸಿರುವ ಕುಶ–ಲವರು ಆ ಮುನಿಯ ಚರಣಾರವಿಂದಗಳಲ್ಲಿ ನಮಿಸಿ ವಿನಯದಿಂದ ನಿಂತರು. ಅತ್ಯಧಿಕ ಬುದ್ಧಿಯುಳ್ಳವರೂ, ಋಗ್ವೇದ ಮೊದಲಾದ ನಾಲ್ಕು ವೇದಗಳನ್ನು ಮತ್ತು ಇತರ ಗ್ರಂಥಗಳನ್ನು ಓದಿ ತಿಳುವಳಿಕೆಯುಳ್ಳವರಾದ ಆ ಕುಶ–ಲವರುಗಳನ್ನು ಕಂಡು ಅತ್ಯಧಿಕ ಪ್ರಸನ್ನರಾಗಿ ವೇದೋಪಬೃಹ್ಮಣವಾಗಿರುವ ಶ್ರೀ ರಾಮಚರಿತ್ರೆಯನ್ನು ಅವರಿಗೆ ಉಪದೇಶ ಮಾಡಿದರು.

" ವೇದೋಪಬೃಹ್ಮಣ " ಎನ್ನುವುದಕ್ಕೆ ಅರ್ಥವೇನೆಂಬುದನ್ನು ತಿಳಿಯಬಹುದು. ಹೇಗೆ ಇಪ್ಪತ್ತನಾಲ್ಕುಸಾವಿರ ಶ್ಲೋಕಗಳನ್ನೊಳಗೊಂಡ ರಾಮಾಯಣದಲ್ಲಿ ಕೆಲವು ಭಾಗಗಳನ್ನು ಮಾತ್ರ ತಿಳಿದುಕೊಂಡವರಿಗೆ ರಾಮಾಯಣದ ಅರ್ಥ ತಿಳಿಯುವುದಿಲ್ಲವೋ ಹಾಗೆಯೇ ಅನೇಕ ವಿಭಾಗಗಳುಳ್ಳ ವೇದದಲ್ಲಿಯೂ ಕೆಲವು ವಿಷಯಗಳನ್ನು ಮಾತ್ರ ಓದಿ ತಿಳಿದಿರುವವರಿಗೆ ಆ ವೇದದ ಅರ್ಥವನ್ನು ಅರಿಯಲು ಸಾಧ್ಯವಿಲ್ಲ ಅತ್ಯಲ್ಪ ಜ್ಞಾನಿಗಳಾದ ನಾವು ವೇದವನ್ನೆಲ್ಲಾ ಓದಿ ತಿಳಿದುಕೊಳ್ಳಲು ಸಾಧ್ಯವಿಲ್ಲ. ದೀರ್ಘಕಾಲ ಪರಮ ಪುರುಷನನ್ನು ನಮಸ್ಕರಿಸಿ ಸನ್ಮಾರ್ಗದಲ್ಲಿ ನಡೆದು ನಿಜವಾದ ಸಿದ್ಧಿ ಪಡೆದಿರುವ ಮಹಾತ್ಮರುಗಳಿಗೇ ಆ ವೇದವೂ, ಅದರ ನಿಜವಾದ ಅರ್ಥವೂ ಚೆನ್ನಾಗಿ ತಿಳುವಳಿಕೆಗೆ ಬರುತ್ತದೆ. ಅಂತಹವರೇ, ಆ ಸತ್ಯವಾದ ಅರ್ಥವನ್ನು ತಿಳಿದು, ಆ ತಾತ್ಪರ್ಯವನ್ನು ಸಾರವಾಗಿ ತಿಳಿಸುವ ಗ್ರಂಥವನ್ನು ರಚಿಸಲು ಸಮರ್ಥರಾಗುವರು. " ಅಂತಹವರಲ್ಲಿ ವಾಲ್ಮೀಕಿ ಮುನಿಯೂ ಒಬ್ಬರು ; " ಆ ರೀತಿ ವೇದಾರ್ಥವನ್ನು ಸಾರವಾಗಿ ತಿಳಿಸುವ ಗ್ರಂಥಗಳಲ್ಲಿ ರಾಮಾಯಣವೂ ಒಂದು. ಇವುಗಳಿಂದ, " ವೇದಾರ್ಥಗಳನ್ನು ಸಾರವಾಗಿ ತಿಳಿಸುವ ಗ್ರಂಥ " ಉಪಬೃಹ್ಮಣ " ಎನ್ನುವುದು.

ಇಲ್ಲಿ, " ವೇದೋಪಬೃಹ್ಮಣಾರ್ಥಾಯ—ವೇದೋಪಬೃಹ್ಮಣರೂಪ ಸ್ವಗ್ರಂಥ ಪಠನಾಯೇತ್ಯರ್ಥಃ ;

ಉಪಬೃಹ್ಮಣಂ ನಾಮ ನಾನಾ ಶಾಖಾನಾಂ ಸಾರೇಣ ನಿರ್ಣೀತ ವೇದಾರ್ಥ ಪ್ರತಿಪಾದಕೋ ಗ್ರಂಥಃ ||".

ಎನ್ನುವ ಗೋವಿಂದ ರಾಜೀಯ ವ್ಯಾಖ್ಯಾನ ವಾಕ್ಯಗಳೂ "ಉಪಬೃಹ್ಮಣಂ ಸ್ಮೃತಿ ಪ್ರತಿಪನ್ನಾರ್ಥ ವಿಶದೀಕರಣಮ್" ಎಂಬುವ ಶ್ರೀ ರಾಮಾನುಜಾಚಾರ್ಯರ ವಾಕ್ಯಗಳೂ ಗಮನಿಸತಕ್ಕದ್ದು.

ಪದಾರ್ಥಗಳನ್ನು ಹೇಳುವುದು ಯಾವುದೋ ಅದು ಉಪಬೃಹ್ಮಣ ಎಂದು ಕೆಲವರು ಹೇಳುತ್ತಾರೆ. ಈ ರೀತಿ ಹೇಳಲು ಆಧಾರಗಳನ್ನು ನೋಡಿಲ್ಲ; ಮೇಲೆ ಹೇಳಿರುವ ಆಧಾರಗಳಲ್ಲಿ ಅಡಕವಾಗಿರುವ —"ನಿರ್ಣೀತಾರ್ಥ ಪ್ರತಿಪಾದಕೋ ಗ್ರಂಥಃ; ಸ್ಮೃತಿ ಪ್ರತಿಪನ್ನಾರ್ಥ ವಿಶದೀಕರಣಮ್" ಎನ್ನುವ ವಾಕ್ಯಗಳನ್ನು ನೋಡತಕ್ಕದ್ದು. ಇನ್ನು ವೇದದಲ್ಲಿ ತಿಳಿಯಪಡಿಸಿರುವ ಪರಮಾತ್ಮ ಮುಂತಾದ ವಿಧ ವಸ್ತುಗಳನ್ನು ನೋಡೋಣ.

"ವೇದಾಂತವೂ ಪರಮಾತ್ಮನೂ"

ವೇದವು ಪರಮಾತ್ಮನನ್ನು ಯಾವ ರೀತಿಯಾಗಿ ಹೇಳುತ್ತದೆ? ಅಂದರೆ, ವ್ಯಾಸರು, ಉಪನಿಷತ್ತುಗಳಲ್ಲಿ ಅಡಕವಾಗಿರುವ ಕಾರಣ ವಾಕ್ಯಗಳಿಂದ ಪರಮ ಪುರುಷನನ್ನು ಚೆನ್ನಾಗಿ ತಿಳಿಯಬಹುದು ಎನ್ನುತ್ತಾರೆ.

ಕಣ್ಣು ಮೊದಲಾದ ಬಾಹ್ಯೇಂದ್ರಿಯಗಳಿಗೆ ಕಾಣಿಸುವ ಈ ಪ್ರಪಂಚಕ್ಕೆ ಯಾವುದು ಕಾರಣವೋ, ಆ ವಸ್ತುವೇ "ಪರಮಾತ್ಮಾ" ಎನಿಸಿಕೊಳ್ಳುತ್ತದೆ.

"ಯತೋವಾ ಇಮಾನಿ ಭೂತಾನಿ ಜಾಯಂತೇ..............ತತ್‌ಬ್ರಹ್ಮ" ಎನ್ನುವ ವಾಕ್ಯವನ್ನು ನೋಡಿ.

ಆದರೆ ಉಪನಿಷತ್ತುಗಳಲ್ಲಿ ಕಾರಣವಾಕ್ಯಗಳು ಹಲವುಂಟು. ಅವುಗಳಲ್ಲಿ ಒಂದು ವಾಕ್ಯದ ಹಾಗೆ ಮತ್ತೊಂದು ವಾಕ್ಯವು ಕಾರಣ ವಸ್ತುವನ್ನು ಹೇಳದೆ ವಿರೋಧವಾಗಿ ಹೇಳಿರುವುದನ್ನು ನಾವು ಕಾಣಬಹುದು. ಉದಾಹರಣೆಯಾಗಿ "ಹಿರಣ್ಯಗರ್ಭಸ್ಸಮವರ್ತತಾಗ್ರೇ," "ನಸತ್ ನಚಾಸತ್ ಶಿವ ಏವ ಕೇವಲಃ" "ಏಕೋಹವೈ ನಾರಾಯಣ ಆಸೀತ್" ಎನ್ನುವ ವಾಕ್ಯಗಳನ್ನು ನೋಡಿದ್ದೇ ಆದರೆ ಒಂದು ವಸ್ತುವನ್ನೇ ಕಾರಣವಸ್ತುವನ್ನಾಗಿ ಹೇಳದೆ ಆಯಾ ವಾಕ್ಯಗಳಲ್ಲಿ ಬೇರೆಬೇರೆ ವಸ್ತುಗಳನ್ನು ಕಾರಣ ವಸ್ತು ಎಂದು ವಿರೋಧವಾಗಿ ಹೇಳಿರುವ ಹಾಗೆ ತೋರುತ್ತದೆ. ಹೀಗಿರುವಲ್ಲಿ ಕಾರಣವಸ್ತು ಒಂದೇ; ಆ ವಸ್ತು ನಾರಾಯಣನೇ ಎಂಬುದನ್ನು ನಾವು ನಿರ್ಧರಿಸುವುದು ಹೇಗೆ? ಎನ್ನುವ ಸಂದೇಹ ಇಲ್ಲಿ ಉಂಟಾಗಬಹುದು.

ವೇದವಾಕ್ಯಗಳನ್ನು ಬಳಸಿ ಪರಮಾತ್ಮನನ್ನು ತಿಳಿಯುವಾಗ ಈ ರೀತಿಯಾದ ಸಂದೇಹವುಂಟಾಗುವುದು ಸಹಜವೇ. ಸಂದೇಹ ಪಡುವವರಿಗೆ ಮನಸ್ಸಮಾಧಾನ ಪಡೆಯಲು ಅವಕಾಶವಿಲ್ಲ. ವೇದವು ಸ್ಪಷ್ಟವಾಗಿ ತಿಳಿಸುವ ರೀತಿಯಲ್ಲಿ ಅಳವಡಿಸಲ್ಪಟ್ಟಿಲ್ಲ.

ಅದನ್ನು, ಈಗ ಎಣಿಸತಕ್ಕದ್ದು. ಈ ಕೊರತೆಯನ್ನು ಪರಿಹರಿಸಿಕೊಳ್ಳಲು ವ್ಯಾಸರು ರಚಿಸಿರುವ ಶಾರೀರಕ ಮೀಮಾಂಸಾ ಶಾಸ್ತ್ರದಿಂದ ಸಹಾಯ ದೊರೆಯುತ್ತೆ. ವಾಲ್ಮೀಕಿ ಮುನಿಯು ರಚಿಸಿರುವ ರಾಮಾಯಣವು ಬೇರೊಂದು ರೀತಿಯಿಂದ ಸಹಾಯವನ್ನು ಮಾಡುತ್ತದೆ. ಇವುಗಳಲ್ಲಿ ಮೀಮಾಂಸಾ ಶಾಸ್ತ್ರವು ಮಾಡುವ ಸಹಾಯವನ್ನು ಮೊದಲು ಸಂಕ್ಷಿಪ್ತವಾಗಿ ನೋಡೋಣ.

ಮೀಮಾಂಸಾಶಾಸ್ತ್ರ ಯಾವುದು—ವೇದವನ್ನು ವಿಮರ್ಶಿಸುವ ಗ್ರಂಥ. ಈ ವಿಮರ್ಶೆಯನ್ನು, ಮೇಲೆ ಹೇಳಿರುವ ಉಪನಿಷತ್ ವಾಕ್ಯಗಳಲ್ಲಿ ಕೆಳ ಕಂಡಂತೆ ತಿಳಿಯಬಹುದು.

"ಹಿರಣ್ಯಗರ್ಭಃ" ಎನ್ನುವ ಮೊದಲವಾಕ್ಯ, ಎಲ್ಲಾ ನಾಶವಾದ ಕಾಲದಲ್ಲೂ, ಬ್ರಹ್ಮನು ಇದ್ದನು ಎಂಬ ಅರ್ಥವನ್ನು, "ನಸತ್ ನಚಾಸತ್" ಎಂಬ ಎರಡನೆಯ ವಾಕ್ಯವು, ಸತ್ತು ಅಸತ್ತು ಇಲ್ಲದ ಆ ಕಾಲದಲ್ಲಿ ಶಿವನು ಇದ್ದನು ಎಂಬ ಅರ್ಥವನ್ನು, "ಏಕೋಹವೈ ನಾರಾಯಣಃ" ಎನ್ನುವ ಮೂರನೆಯ ವಾಕ್ಯ, ಆ ಸಮಯದಲ್ಲಿ ನಾರಾಯಣನು ಇದ್ದನು ಎಂಬುವ ಅರ್ಥ ಉಳ್ಳದ್ದಾಗಿದೆ. ಆದರೆ, ಮೊದಲೆರಡು ವಾಕ್ಯಗಳಲ್ಲಿ ಬ್ರಹ್ಮನು ಇದ್ದನು, ಶಿವನು ಇದ್ದನು ಎಂದು ತಿಳಿಯುವ ಹಾಗೆ "ನಾರಾಯಣನು ಇಲ್ಲ" ಎಂಬುದು ತಿಳಿಯುವುದಿಲ್ಲ. ಇಲ್ಲಿ ಇದನ್ನು ಮುಖ್ಯವಾಗಿ ನೋಡತಕ್ಕದ್ದು. "ಏಕೋಹವೈ ನಾರಾಯಣ ಆಸೀತ್ ನ ಬ್ರಹ್ಮಾ ನೇಶಾನಃ" ಎನ್ನುವ ಮೂರನೆಯ ವಾಕ್ಯದಲ್ಲಿ "ನಾರಾಯಣನು ಆ ಕಾಲದಲ್ಲಿ ಇದ್ದನು" ಎಂಬುದು ಹೇಗೆ ಸ್ಪಷ್ಟವಾಗಿ ತಿಳಿಯುತ್ತದೆಯೋ, ಹಾಗೆಯೇ, "ಆ ಸಮಯದಲ್ಲಿ ಬ್ರಹ್ಮನು ಇಲ್ಲ, ಶಿವನು ಇಲ್ಲ" ಎಂಬುದು ಚೆನ್ನಾಗಿ ತಿಳಿಯುತ್ತದೆ.

ಇದರಿಂದ, ಮೇಲೆ ಹೇಳಿರುವ ಮೂರು ವಾಕ್ಯಗಳಿಗೂ ವಿರೋಧ ಸ್ವಲ್ಪವೂ ಇಲ್ಲದ ಅರ್ಥವನ್ನು ತಿಳಿಯುವುದು ಉಚಿತ. ಮೊದಲ ಎರಡು ವಾಕ್ಯಗಳಿಗೆ "ಎಲ್ಲಾ ನಾಶವಾದ ಕಾಲದಲ್ಲೂ ಬ್ರಹ್ಮನು ಮಾತ್ರ ಇದ್ದನು ; ಶಿವನು ಮಾತ್ರ ಇದ್ದನು, ಬೇರೆ ಯಾವ ವಸ್ತುವೂ ಇಲ್ಲ" ಎಂಬ ಅರ್ಥವನ್ನು ತೆಗೆದುಕೊಂಡರೆ, "ಏಕೋಹವೈ ನಾರಾಯಣ ಆಸೀತ್...." ಎಂಬ ವಾಕ್ಯವು ಸೇರುತ್ತೋ? ಸೇರುವುದಿಲ್ಲ. "ಏಕೋಹವೈ" ವಾಕ್ಯ ಸ್ಪಷ್ಟವಾಗಿ ಹೇಳುವ ಹಾಗೆ "ಎಲ್ಲಾ ಅಳಿದ ಕಾಲದಲ್ಲೂ ನಾರಾಯಣನು ಮಾತ್ರ ಇದ್ದನು ಮತ್ಯಾವುದೂ ಇಲ್ಲ" ಎಂಬ ಅರ್ಥವನ್ನು ತೆಗೆದುಕೊಂಡರೇ, ಮೊದಲ ಎರಡು ವಾಕ್ಯಗಳೂ ಹೊಂದುತ್ತದೆ. "ಎಲ್ಲಾ ವಸ್ತುಗಳೂ ಅಳಿದ ಕಾಲದಲ್ಲೂ ಅಳಿವಿಲ್ಲದ ನಾರಾಯಣನು ಇದ್ದುದ್ದಾಗಿ ತಿಳಿಸುತ್ತದೆ", ಎಂದು ಹೇಳುವಾಗ, ವಿರೋಧ ಯಾವುದು ಇಲ್ಲ. ಈ ರೀತಿ ಅನುಸಂಧಾನ ಮಾಡಿ ವೇದಾರ್ಥಗಳನ್ನು ನಿರೂಪಿಸುವ ಗ್ರಂಥವೇ ಶಾರೀರಕ ಮೀಮಾಂಸಾ ಶಾಸ್ತ್ರವಾಗುತ್ತದೆ. ಈ ಶಾಸ್ತ್ರದ ಸಹಾಯದಿಂದ ವೇದದ ಅರ್ಥವನ್ನು ನಾವು ಚೆನ್ನಾಗಿ ಕಾಣಬಹುದು. ಆದರೂ ಮೇಧಾವಿಗಳಿಗೇ ಇದು ಸಾಧ್ಯ. ಇನ್ನು ರಾಮಾಯಣವು ಮಾಡುವ ಸಹಾಯವನ್ನು ನೋಡಬಹುದು.

"ರಾಮಾಯಣವೂ ಪರಮಾತ್ಮನೂ"

ಶ್ರೀ ರಾಮಚಂದ್ರನು ಸೀತಾದೇವಿಯೊಂದಿಗೆ ವಿವಾಹವಮಾಡಿಕೊಂಡು, ಆ ದೇವಿಯೊಡನೆಯೂ ಮತ್ತು ತನ್ನ ಪರಿವಾರದೊಂದಿಗೂ ಅಯೋಧ್ಯೆಗೆ ಹಿಂತಿರುಗುವಾಗ, ಮಾರ್ಗದಲ್ಲಿ ಪರಶುರಾಮನು ಬಂದು ತಡೆದು, ತನ್ನ ಬಿಲ್ಲನ್ನು ತೆಗೆದು ನಾಣೇರಿಸುವಂತೆ, ಶ್ರೀ ರಾಮನನ್ನು ಪ್ರಾರ್ಥಿಸಿದನು ಎಂಬುದು ವಿಷಯ. ಪರಶುರಾಮನ ಕೈಯಲ್ಲಿ ಇದ್ದ ಬಿಲ್ಲಿನ ಹಿರಿಮೆ ಈ ರೀತಿಯಾಗಿದೆ :—

"ತದಿದಂ ವೈಷ್ಣವಂ ರಾಮಧನುಃ ಪರಮ ಭಾಸ್ವರಮ್ ।
ಸಮಾನಸಾರಂ ಕಾಕುತ್ಸ್ಥ ರಾದ್ರೇಣ ಧನುಷಾತ್ವಿದಮ್ ॥

ತದಾ ತು ದೇವತಾಸ್ಸರ್ವಾಃ ಪೃಚ್ಛಂತಿ ಸ್ಮ ಪಿತಾಮಹಮ್ ।
ಶಿತಿಕಂಠಸ್ಯ ವಿಷ್ಣೋಶ್ಚ ಬಲಾಬಲ ನಿರೀಕ್ಷಯಾ ॥

ಅಭಿಪ್ರಾಯಂತು ವಿಜ್ಞಾಯ ದೇವತಾನಾಂ ಪಿತಾಮಹಃ ।
ವಿರೋಧಂ ಜನಯಾಮಾಸ ತಯೋಃ ಸತ್ಯವತಾಂ ವರಃ ॥

ವಿರೋಧೇ ತು ಮಹದ್ಯುದ್ಧಮ ಭವದ್ರೋಮಹರ್ಷಣಮ್ ।
ಶಿತಿಕಂಠಸ್ಯ ವಿಷ್ಣೋಶ್ಚ ಪರಸ್ಪರ ಜಯೈಷಿಣೋಃ ॥

ತದಾತು ಜೃಂಭಿತಂ ಶೈವಂ ಧನುರ್ಭೀಮ ಪರಾಕ್ರಮಮ್ ।
ಹುಂಕಾರೇಣ ಮಹಾದೇವಃ ಸ್ತಂಭಿತೋಽಥ ತ್ರಿಲೋಚನಃ ॥

ದೇವೈಸ್ತದಾ ಸಮಾಗಮ್ಯ ಸರ್ಷಿಸಂಘೈಸ್ಸಚಾರಣೈಃ ।
ಯಾಚಿತೌ ಪ್ರಶಮಂ ತತ್ರ ಜಗ್ಮತುಸ್ತೌ ಸುರೋತ್ತಮೌ ॥

ಜೃಂಭಿತಂ ತದ್ಧನುರ್ದೃಷ್ಟ್ವಾ ಶೈವಂ ವಿಷ್ಣುಪರಾಕ್ರಮೈಃ ।
ಅಧಿಕಂ ಮೇನಿರೇ ವಿಷ್ಣುಂ ದೇವಾಸ್ಸರ್ಷಿಗಣಾಸ್ತದಾ ॥"

ಈ ಶ್ಲೋಕದ ತಾತ್ಪರ್ಯ :—

"ಈ ಬಿಲ್ಲು ವಿಷ್ಣುವಿನದು. ಮೊದಲು ಭಗವಂತನ ವರಾಹಾವತಾರ ಚರಿತ್ರೆಯನ್ನು ಬ್ರಹ್ಮನಿಂದ ಕೇಳಿ, ಆ ಭಗವಂತನ ಹಿರಿಮೆಯನ್ನು ತಿಳಿದಿದ್ದ ಎಲ್ಲಾ ದೇವತೆಗಳೂ, ಶಿವನು ತ್ರಿಪುರಸಂಹಾರ ಮಾಡಿದನಂತರ ಶಿವನ ಮತ್ತು ವಿಷ್ಣುವಿನ ಬಲಾಬಲಗಳನ್ನು ನೋಡಲು ಅಪೇಕ್ಷಿಸಿ, "ಯಾರ ಬಲ ಅತ್ಯಧಿಕವಾದದ್ದು" ಎಂದು ಬ್ರಹ್ಮನನ್ನು ಕೇಳಲು, ಆ ಚತುರ್ಮುಖನು ಶಿವನಿಗೂ ಮತ್ತು ವಿಷ್ಣುವಿಗೂ ವಿರೋಧವನ್ನುಂಟು ಮಾಡಿದನು. ಅವರಿಬ್ಬರೂ ಘೋರಯುದ್ಧವನ್ನು ಮಾಡಲು, ಆಗ ವಿಷ್ಣುವಿನ ಹುಂಕಾರದಿಂದಲೇ ಶಿವನ ಬಿಲ್ಲು ಮತ್ತು ಶಿವನೂ ಭಂಗ ಹೊಂದಿದನು. ಇನ್ನು

ಯುದ್ಧವನ್ನು ಮುಂದುವರಿಸಬೇಡಿ, ಎಂದು ದೇವತೆಗಳು ಬೇಡಿಕೊಳ್ಳಲು, ಅವರಿಬ್ಬರೂ ತಟಸ್ಥರಾದಾಗ, ವಿಷ್ಣುವಿನ ಶೌರ್ಯದಿಂದ ಶಿವನೂ ಅವನ ಬಿಲ್ಲೂ ಭಂಗ ಹೊಂದಿದ್ದನ್ನು ಕಣ್ಣಾರೆ ಕಂಡ ಮುನಿಗಳೂ, ದೇವತೆಗಳೂ ವಿಷ್ಣುವನ್ನು ಸರ್ವಶ್ರೇಷ್ಠ ದೇವನೆಂದು ನಿಶ್ಚಯಿಸಿದರು."

ಅನಂತರವೂ, ಹನುಮಂತನು ರಾವಣನ ಎದುರಿಗೆ ಶ್ರೀ ರಾಮನ ಮಹಿಮೆಯನ್ನು ಹೇಳುವ ಸ್ಥಳದಲ್ಲಿ

"ಬ್ರಹ್ಮಾ ಸ್ವಯಂಭೂಃ ಚತುರಾನನೋ ವಾ ರುದ್ರಸ್ತ್ರಿನೇತ್ರಃ
ತ್ರಿಪುರಾಂತಕೋ ವಾ ।
ಇಂದ್ರೋ ಮಹೇಂದ್ರಃ ಸುರನಾಯಕೋ ವಾ ತ್ರಾತುಂ ನ ಶಕ್ತಾಃ
ಯುಧಿ ರಾಮವಧ್ಯಮ್ ॥"

ಇದರ ತಾತ್ಪರ್ಯ :—

"ಸ್ವಯಂಭುವೂ ಚತುರ್ಮುಖನಾದ ಬ್ರಹ್ಮನೋ, ತ್ರಿಪುರಾಂತಕನೂ, ಮುಕ್ಕಣ್ಣನೂ ಆದ ಶಿವನೋ ಅಥವಾ ದೇವರಾಜನಾದ ಸುರೇಂದ್ರನೋ ಯಾರೇ ಆಗಿರಲಿ ಶ್ರೀ ರಾಮನ ಕ್ರೋಧಕ್ಕೆ ಪಾತ್ರನಾಗಿ ವಧಿಸಲ್ಪಡುವವನನ್ನು ರಕ್ಷಿಸಲಾರರು."

ಮೇಲೆ ಹೇಳಿರುವಂತೆ ದೇವತೆಗಳನ್ನು ಹೆಮ್ಮೆಯಿಂದ ಹೇಳುವ ಮಾತಿನಲ್ಲಿ "ನಾರಾಯಣನು ಶಕ್ತಿ ಇಲ್ಲದವನು" ಎಂದು ಹೇಳಿಲ್ಲ. ಇದರಿಂದ "ಶ್ರೀ ರಾಮಚಂದ್ರನೇ ನಾರಾಯಣನು" ಎಂಬ ಸತ್ಯವು ಯಾರಿಗಾದರೂ ತಿಳಿಯುತ್ತದೆ. ಆದರೂ ಸಹ. ಶ್ರೀರಾಮನಿಂದ ವಧಿಸಲ್ಪಟ್ಟು ಬಿದ್ದಿರುವ ರಾವಣನನ್ನು ಕಂಡು, ಹೃದಯವು ತತ್ತಳಿಸಿ, ಮನಗುಂದಿ, ಪ್ರಲಾಪಿಸುತ್ತಾ ಇರುವ ಮಂಡೋದರಿ ಒಂದು ರೀತಿಯಿಂದ ಸಮಾಧಾನವನ್ನು ತೆಗೆದುಕೊಂಡು. ಆ ರಾಮಚಂದ್ರನ ಹಿರಿಮೆಯನ್ನು ಕೆಳಕಂಡಂತೆ ಹೇಳುತ್ತಾಳೆ.

"ಹೇ ರಾಮಚಂದ್ರನೇ ! ನಿನ್ನ ತಿಳಿದನು ಈಶ್ವರನಿಗೂ, ಚತುರ್ಮುಖನಿಗೂ ದೈವ ನೀನೇ ಎಂಬುದನ್ನು ಇಂದು ತಿಳಿದೆನು.

ಇದನ್ನು ಕೇಳಿದ ಶ್ರೀ ರಾಮನು "ನೀನು ನನ್ನನ್ನು ತಿಳಿದ ಬಗೆ ಹೇಗೆ ?" ಎನ್ನಲು "ಶ್ರೀ ವೈಕುಂಠದಲ್ಲಿ ಶಂಖ, ಚಕ್ರ, ಗದೆ, ಇವುಗಳನ್ನು ಹಸ್ತದಲ್ಲಿ ಧರಿಸಿ, ಶ್ರೀ ವತ್ಸವೆಂಬ ಮಚ್ಚೆಯನ್ನು ವಕ್ಷಸ್ಥಲದಲ್ಲಿ ಚಿಹ್ನೆಯಾಗಿ, ಲಕ್ಷ್ಮೀದೇವಿಯೊಂದಿಗೆ ನಿತ್ಯವಾಗಿ ನೆಲೆಸಿರುವ ಶ್ರೀ ವಿಷ್ಣುವೇ ನೀನು." ಎನ್ನುತ್ತಾಳೆ.

ಅದಕ್ಕೆ ಶ್ರೀ ರಾಮನು—"ಶ್ರೀ ವಿಷ್ಣುವಾದ ನಾನು ಆ ವೈಕುಂಠವನ್ನು ಬಿಟ್ಟು ಇಲ್ಲಿಗೆ ಬರಲು ಕಾರಣ ಏನು ?" ಎಂದು ಪುನಃ ಪ್ರಶ್ನಿಸಲು, "ಎಲ್ಲಾ ಲೋಕಗಳಲ್ಲಿಯೂ ಇರುವ ಜೀವರಾಶಿಗಳಿಗೂ ನಲ್ಮೆಯನ್ನು ಮಾಡಬೇಕೆಂದು ಅಭಿಪ್ರಾಯಪಟ್ಟು, ಮನುಷ್ಯರೂಪವನ್ನು ಧರಿಸಿ ಅವತಾರ ಮಾಡಿ, ಲೋಕಕ್ಕೇ ಕಂಟಕನಾದ

ರಾವಣನನ್ನು ಕೊಲ್ಲಲು ಬಂದೆ ; ಕೊಂದಿರುತ್ತೀಯೆ " ಎನ್ನುತ್ತಾಳೆ ಮಂಡೋದರಿ. ಈ ವಾಕ್ಯಗಳನ್ನು, ಮಂಡೋದರಿಯ ಮಾತಿನಲ್ಲಿಯೇ ನೋಡಬಹುದು :—

" ತಮಸಃ ಪರಮೋಧಾತಾ ಶಂಖ-ಚಕ್ರ ಗದಾಧರಃ ।
ಶ್ರೀವತ್ಸ ವಕ್ಷಾ ನಿತ್ಯಶ್ರೀಃ ಅಜಯ್ಯ ಶ್ಶಾಶ್ವತೋ ಧ್ರುವಃ ॥
ಮಾನುಷಂ ವಪುರಾ ಸ್ಥಾಯ ವಿಷ್ಣುಸ್ಸತ್ಯ ಪರಾಕ್ರಮಃ । "

ಇನ್ನೂ ಮತ್ತೆ :—ಬ್ರಹ್ಮನು ತಿಳಿಸಿರುವುದು—

" ಸರ್ವ ಸ್ವಾಮಿಯಾದ ನಿನ್ನ ನಾಭಿ ಕಮಲದಲ್ಲಿ ಬ್ರಹ್ಮನಾಗಿರುವ ನನ್ನನ್ನು ಸೃಷ್ಟಿಸಿ ನನ್ನಲ್ಲಿ ಸೃಷ್ಟಿಯ ಕಾರ್ಯದ ಭಾರವನ್ನು ನಿಯಮಿಸಿರುವವನೂ ನೀನೇ " ಎಂಬ ಸಾರಾಂಶವುಳ್ಳ—

" ಪದ್ಮೇ ದಿವ್ಯೇಽರ್ಕ ಸಂಕಾಶೇ ನಾಭ್ಯಾಮುತ್ಪಾದ್ಯ ಮಾಮಪಿ ।
ಪ್ರಾಜಾಪತ್ಯಂ ತ್ವಯಾ ಕರ್ಮ ಮಯಿ ಸರ್ವಂ ನಿವೇಶಿತಮ್ ॥ "

ಎಂಬುವ ಮಾತುಗಳನ್ನು ನೋಡಿದಲ್ಲಿ, ನಾರಾಯಣನ ಹಿರಿಮೆಯನ್ನು ನಾವು ಚೆನ್ನಾಗಿ ತಿಳಿಯಬಹುದು.

ಇನ್ನು ಮುಂದೆ, " ಹಿರಣ್ಯಗರ್ಭಸ್ಸಮವರ್ತತಾಗ್ರೇ ", " ನಸತ್, ನಚಾಸತ್, ಶಿವ ಏವ ಕೇವಲಃ ", " ಏಕೋಹವೈ ನಾರಾಯಣ ಆಸೀತ್ ನಬ್ರಹ್ಮಾ ನೇಶಾನಃ " ಎನ್ನುವ ವಾಕ್ಯಗಳ, ಅರ್ಥ— " ಇತರೇ ಎಲ್ಲಾ ವಸ್ತುಗಳೂ ಇಲ್ಲದ ಸಮಯದಲ್ಲಿ ಶಿವನೋ, ಬ್ರಹ್ಮನೋ ಇದ್ದದ್ದಾಗಿಯೂ ಎಲ್ಲಾ ನಾಶವಾದ ಕಾಲದಲ್ಲಿ, ನಾರಾಯಣನು ಮಾತ್ರ ಇದ್ದದ್ದಾಗಿಯೂ ಸ್ಪಷ್ಟ ಪಟ್ಟಿರುತ್ತದೆ. "

ಈಗ ರಾಮಾಯಣವು ಎಲ್ಲರಿಗೂ ಚೆನ್ನಾಗಿ ತಿಳಿಯುವ ಹಾಗೆ,

1. ವಿಷ್ಣು, ಶಿವನು ಇಬ್ಬರಿಗೂ ಯುದ್ಧ ನಡೆಯುವಾಗ, ವಿಷ್ಣುವಿನ ಹಿರಿಮೆಯನ್ನು ಮುನಿಗಳೂ, ದೇವತೆಗಳೂ ಕಣ್ಣಾರೆ ಕಂಡರು.

2. ಇಂದಿರನೋ, ಶಿವನೋ, ಬ್ರಹ್ಮನೋ ಒಂದಾಗಿ ಸೇರಿ ಈ ಮೂವರೂ ಸಹ ಶ್ರೀ ರಾಮನ ಕೋಪಕ್ಕೆ ಪಾತ್ರರಾದವರನ್ನು ರಕ್ಷಿಸಲಾರರು.

3. ಈ ಜಗತ್ತಿಗೆ ಒಳ್ಳೆಯದನ್ನೂ, ಈ ರಾವಣನಿಗೆ ಅಳಿವನ್ನೂ ಉಂಟು ಮಾಡುವುದಕ್ಕೇ ಬಂದ ರಕ್ಷಕ ದೈವವಾದ ಶ್ರೀಮನ್ನಾರಾಯಣನೇ ಶ್ರೀ ರಾಮಚಂದ್ರ.

4. ಸೃಷ್ಟಿಕರ್ತನಾದ ಬ್ರಹ್ಮಾ ಸೃಷ್ಟಿಕಾರ್ಯವನ್ನು ಪರಮ ಪುರುಷನಾಗಿರುವ ಶ್ರೀ ರಾಮಚಂದ್ರನ ಕೃಪೆಯಿಂದಲೇ ಪಡೆದಿರುತ್ತಾನೆ.

ಎನ್ನುವ ಸತ್ಯಸಂಗತಿಗನುಸಾರವಾಗಿಯೇ, ಪರಶುರಾಮ, ಹನುಮಂತ, ಮಂಡೋದರಿ. ತಾರೆ, ಕಾಲಪುರುಷ ಮುಂತಾದವರ ವಾಕ್ಯಗಳಿಂದ ಸ್ಪಷ್ಟವಾಗಿದೆ.

ಮೇಲೆ ಹೇಳಿರುವ ನಿಜವಾದ ಅರ್ಥವನ್ನು ಮನಸ್ಸಿನಲ್ಲಿಟ್ಟುಕೊಂಡು " ಹಿರಣ್ಯ ಗರ್ಭಃ ", " ನಸತ್ ನಚಾಸತ್ ", " ಏಕೋಹವೈ ನಾರಾಯಣ ಆಸೀತ್ ನ ಬ್ರಹ್ಮಾ

ನೇಶಾನಃ " ಎನ್ನುವ ವಾಕ್ಯಗಳನ್ನು ನೋಡಿದರೆ ಮಂದಮತಿಗಳಿಗೂ ಕಿಂಚಿತ್ತೂ ಅನುಮಾನವಿಲ್ಲದೆ ತಿಳಿಯುತ್ತದೆ.

ಈ ರೀತಿ ನಾರಾಯಣನ ಹಿರಿಮೆಯನ್ನು, ಇತರರ ಸಾಮಾನ್ಯತೆಯ ತಾರತಮ್ಯವನ್ನು ಅಲ್ಲಲ್ಲೇ ಹಲವಾರು ವಾಕ್ಯಗಳಿಂದ ಸ್ಪಷ್ಟವಾಗಿ ತಿಳಿಯಪಡಿಸಿರುತ್ತಾರೆ. ಇನ್ನು ಜೀವಾತ್ಮನ ಸತ್ಯತೆಯನ್ನು ತಿಳಿಯೋಣ.

" ವೇದಾಂತವು ಮತ್ತು ಜೀವನು "

" ಪತಿಂ ವಿಶ್ವಸ್ಯ " ಎನ್ನುವುದು ಒಂದು ವೇದಾಂತ ವಾಕ್ಯ. ಈ ವಾಕ್ಯವು, " ಪ್ರಪಂಚವನ್ನು ಪಡೆದಿರುವವನು ಭಗವಂತ " ಎಂಬ ಅರ್ಥವುಳ್ಳದ್ದು. ಇದರಿಂದ ಈ ಪ್ರಪಂಚವು ಭಗವಂತನಿಗೆ ಸ್ವಂತ ವಸ್ತು ಎನ್ನುವುದನ್ನು ತಿಳಿಸುತ್ತದೆ. ಈ ರೀತಿ ಅವನಿಗೆ ಸ್ವಂತ ವಸ್ತುವಾಗಿರುವ ಸ್ವಭಾವವನ್ನು " ಶೇಷತ್ವ " ಎಂದು ಹೇಳುವರು.

" ಸ್ವಂತ ವಸ್ತುವಾಗಿರುವ ಹಿರಿಮೆ " ಎನ್ನುವುದನ್ನು ಸ್ವಲ್ಪ ವಿವರಿಸಿ ಹೇಳಬಹುದು. ಗಟ್ಟಿ ಚಿನ್ನವು ಒಬ್ಬನಿಗೆ ಸ್ವಂತವಸ್ತುವಾಗಿರುವುದನ್ನು ಕಾಣುತ್ತೇವೆ. ಆ ವಸ್ತುವು, ಅವನು ಐಶ್ವರ್ಯವುಳ್ಳವನಾಗಿರುವುದಕ್ಕೆ ಕಾರಣವಾಗಿಯೂ, ಅವನು ಅಪೇಕ್ಷಿಸುವ ರೀತಿಯಲ್ಲಿ, ತಾನು ಅನುಭವಿಸಲು ಪರರಿಗೆ ಉಪಕರಿಸಲೂ ಅನುಕೂಲ ಆಗುವ ಹಾಗೂ ಇರುತ್ತದೆ.

ಇದರ ಹಾಗೆಯೇ, ಜೀವನೂ ಭಗವಂತನಿಗೆ ಸ್ವಂತ ವಸ್ತುವಾಗಿರುವುದನ್ನು " ಪತಿಂ ವಿಶ್ವಸ್ಯ " ಎನ್ನುವ ವಾಕ್ಯದಲ್ಲಿ ಕಾಣುತ್ತೇವೆ. ಆ ಜೀವನು, ಪರಮಾತ್ಮನ ಐಶ್ವರ್ಯಕ್ಕೆ ಕಾರಣನಾಗಿಯೂ, ಆ ಪರಮಾತ್ಮನ ಇಚ್ಛೆಗನುಸಾರವಾಗಿ ತನ್ನನ್ನು ಅನುಭವಿಸಲೂ ಪರರಿಗುಪಕರಿಸಲು ಅನುಕೂಲನಾಗಿರುತ್ತಾನೆ. ಇಲ್ಲಿ, ಗಟ್ಟಿ ಚಿನ್ನದ ಹಾಗೆ ಶೇಷತ್ವ ಎನ್ನುವ ವಾಕ್ಯವನ್ನು ನೋಡತಕ್ಕದ್ದು. ಪ್ರೇಮದಿಂದ ಕೂಡಿದ ಈ ಶೇಷತ್ವದ ನಿಲುವೆಯನ್ನು " ದಾಸ್ಯ " ಎನ್ನುತ್ತಾರೆ. ಈ ದಾಸ್ಯವು ಜೀವನಿಗೇ ಉಂಟಾಗುವ ಒಂದು ಹಿರಿಮೆಯಾಗಿದೆ.

ಇನ್ನು " ಯಸ್ಯಾಸ್ಮಿನತಮಂತರೇಮಿ " ಎನ್ನುವ ಮತ್ತೊಂದು ವೇದವಾಕ್ಯವನ್ನು ಕಾಣೋಣ. ಈ ಭಾಗದ ಸಾರಾಂಶ :— " ಯಾವನಿಗೆ ನಾನು ದಾಸನಾಗಿ ಇರುವೆನೋ ಅವನನ್ನು ಬಿಟ್ಟು ಬೇರೊಬ್ಬರ ಹತ್ತಿರ ಹೋಗುವುದಿಲ್ಲ." ಈ ವಾಕ್ಯದಲ್ಲಿ ಅಡಕವಾಗಿರುವ " ಯಸ್ಯಾಸ್ಮಿ " ಎಂಬ ಭಾಗ " ಪತಿಂ ವಿಶ್ವಸ್ಯ " ಎನ್ನುವ ವಾಕ್ಯದಲ್ಲಿ ಸ್ಪಷ್ಟಪಟ್ಟಿರುವುದನ್ನೇ ತಿಳಿಸುತ್ತದೆ.

" ನತಮಂತರೇಮಿ " ಎಂಬ ಭಾಗದ ಅರ್ಥವನ್ನು ಸ್ವಲ್ಪ ವಿವರಿಸಿ ಹೇಳೋಣ. ಒಂದು ವಸ್ತು ಒಂದು ಕ್ಷಣವಿದ್ದರೆ ಆ ವಸ್ತುವನ್ನು " ಸತ್ತೆ " ಎನ್ನುವರು. ಎರಡು ಕ್ಷಣ ಮೊದಲು ಆಯಾ ಕಾಲದಲ್ಲಿ ಇದ್ದರೆ " ಸ್ಥಿತಿ " ಎಂದು ಹೇಳುವರು. ಪ್ರಯತ್ನವನ್ನು " ಪ್ರವೃತ್ತಿ " ಎಂದು ವರ್ಣಿಸುತ್ತಾರೆ. ಪ್ರಯತ್ನವಿಲ್ಲದಿರುವುದನ್ನು

"ನಿವೃತ್ತಿ" ಎಂದು ಹೇಳುವರು. ಈ ರೀತಿ ಒಂದೊಂದು ಜೀವನ ಸತ್ತೆ, ಸ್ಥಿತಿ, ಪ್ರವೃತ್ತಿ, ಮುಂತಾದುವುಗಳೆಲ್ಲವೂ ಪರಮಪುರುಷನಿಗೆ ವಶಪಟ್ಟಿರುವುದನ್ನು ನೋಡಿದರೆ ಜೀವನು ಪರಮಾತ್ಮನಿಗೆ ಪರತಂತ್ರನು ಎಂದು ತಿಳಿಯುತ್ತದೆ.

ಹೇಗೆ, ಅಕ್ಕಸಾಲಿಗನ ಕೈಯಲ್ಲಿ ಕೆಲಸಕ್ಕಾಗಿ ಇರುವ ಸ್ವರ್ಣವು, ಅವನು ಅದನ್ನು ಅಳಿಸಲು, ಕರಗಿಸಲು, ತಟ್ಟಲು, ನೆಟ್ಟಗೆ ಮಾಡಲೂ, ಕಾಯಿಸಲೂ, ನಾಶಮಾಡಲೂ ಮತ್ತು ಅವನ ಇಚ್ಛೆಗನುಸಾರವಾಗಿ, ಅದು ನೆಟ್ಟಗಾಗುತ್ತಲೂ ಬಗ್ಗುವುದೂ, ಉದ್ದವಾಗುವುದೂ, ರೂಪಗೊಳ್ಳುವುದೂ, ನಾಶವಾಗಲೂ ತನ್ನ ಸತ್ತೆ ಮುಂತಾದುವುಗಳನ್ನು ಬಿಟ್ಟು ಅವನ ವಶವಾಗಿರುವುದೋ. ಹಾಗೆಯೇ, "ಜೀವನು" ತನ್ನ ಸತ್ತೆ ಮುಂತಾದುವುಗಳನ್ನು ಬಿಟ್ಟು, ಭಗವಂತನು ಇಚ್ಛಿಸುವ ರೀತಿಯಲ್ಲಿ, ರೂಪುಗೊಳ್ಳಲು, ಅಳಿಯಲು ವಶಪಟ್ಟಿರುತ್ತಾನೆ ಎಂಬುವುದನ್ನು ತಿಳಿಯಬೇಕು. ಇಲ್ಲಿ ಒಬ್ಬನ ಕೆಲಸಕ್ಕೆ ವಶವಾಗಿ ಇರುವಿಕೆಯನ್ನೇ "ಪಾರತಂತ್ರ್ಯ" ಎನ್ನುವ ವಾಕ್ಯದಲ್ಲಿ ಕಾಣಬಹುದು.

ಈ "ಪಾರತಂತ್ರ್ಯ" ಶಬ್ದಾರ್ಥವನ್ನು ಚೆನ್ನಾಗಿ ನೋಡಿದರೆ "ಪರಮಾತ್ಮನೊಬ್ಬನೇ ಸ್ವತಂತ್ರನು" ಮತ್ತು ಎಲ್ಲಾ ವಸ್ತುಗಳೂ ಅಸ್ವತಂತ್ರ ಎನ್ನುವುದು ಚೆನ್ನಾಗಿ ತಿಳಿಯುತ್ತದೆ.

ಪರಮ ಪುರುಷನನ್ನು ಕುರಿತಾದ ಶೇಷತ್ವ, ಪಾರತಂತ್ರ್ಯಗಳೆರಡೂ ಸೇರಿಯೇ ಇರುವುದರಿಂದ, ಅವುಗಳನ್ನು ಬೇರೆಬೇರೆಯಾಗಿ ತಿಳಿದುಕೊಳ್ಳುವಂತೆ, ಗಟ್ಟಿಚಿನ್ನ ಕೆಲಸಕ್ಕೆ ಉಪಯೋಗಿಸಲ್ಪಡುವ ಚಿನ್ನ ಎಂಬುವ ಈ ಉದಾಹರಣೆಗಳನ್ನು ತೋರಿಸಲಾಯಿತು.

ಇವುಗಳಿಂದ, ಭಗವಂತನ ಶ್ರೇಷ್ಠತೆಯನ್ನು ಹೆಚ್ಚಿಸುವುದಕ್ಕೆ ಗುರುತಾಗಿ ಅವನ ಇಚ್ಛೆಗನುಸಾರವಾಗಿ ಉಪಯೋಗವಾಗುವಿಕೆಯನ್ನೇ "ಶೇಷತ್ವ" ಎನ್ನುವರು. ಹಾಗೆ ಉಪಯೋಗ ಪಡುವುದು ಪಾರತಂತ್ರ್ಯ ಎನ್ನುವುದನ್ನೂ ಇದಕ್ಕೆ ಪರಮಾತ್ಮನೊಂದಿರುವ ತಾರತಮ್ಯವನ್ನು ನಾವು ಚೆನ್ನಾಗಿ ತಿಳಿಯಬಹುದು.

ಇದುವರೆವಿಗೂ ಹೇಳಿರುವ "ಪತಿಂ ವಿಶ್ವಸ್ಯ", "ಯಸ್ಮಾತ್ಸ್ಮ ನತಮಂತರೇಮಿ" ಎನ್ನುವ ವಾಕ್ಯಗಳಲ್ಲಿ ಭಗವಂತನು ಸ್ವತಂತ್ರನು ಎನ್ನುವ ಅರ್ಥವನ್ನೂ, "ಜೀವನು ಭಗವಂತನಿಗೆ ಶೇಷನಾಗಿರುವುದರಿಂದ, ಪರತಂತ್ರನಾಗಿ ಇರುವನು" ಎನ್ನುವ ಅರ್ಥವೂ, "ಅವನಿಗೂ (ಪರನಿಗೂ) ಇವನಿಗೂ (ಜೀವನಿಗೂ) ವ್ಯತ್ಯಾಸ ಉಂಟು" ಎಂಬ ಅರ್ಥವನ್ನು ಚೆನ್ನಾಗಿ ತಿಳಿಸುತ್ತದೆ. ಇನ್ನು, "ತತ್ ತ್ವಮ್ ಅಸಿ" ಎನ್ನುವ ಮತ್ತೊಂದು ವೇದಾಂತ ವಾಕ್ಯವನ್ನು ನೋಡೋಣ. ಈ ವಾಕ್ಯ "ಆತ್ಮಾ ಒಂದು ವಸ್ತು ಮಾತ್ರ ಉಂಟು", "ಜೀವನಿಗೂ ಪರನಿಗೂ ವ್ಯತ್ಯಾಸವಿಲ್ಲ" ಎಂಬ ಅರ್ಥವನ್ನು ಹೊಂದಿರುವುದಾಗಿ ತಿಳಿಯುತ್ತದೆ.

ಈ ಅರ್ಥವನ್ನು "ಪತಿಂ ವಿಶ್ವಸ್ಯ", "ಯಸ್ಮಾತ್ಸ್ಮ ನತಮಂತರೇಮಿ" ಎಂಬ ವಾಕ್ಯಗಳಲ್ಲಿ, ಮೇಲೆ ಹೇಳಿರುವ ಅರ್ಥವನ್ನು ಸೇರಿಸಿ ನೋಡಿದರೆ, ಜೀವನು ಪರಮಾ

ಒಂದೇ ವಸ್ತು ಅಲ್ಲ ಬೇರೆ ಬೇರೆ ವಸ್ತುವೇ. ಒಂದೇ ಆದರೆ, "ಪತಿಂ ವಿಶ್ವಸ್ಯ" ಎನ್ನುವ ಶ್ರುತಿ ಸೇರುವುದಿಲ್ಲ. ಬೇರೆ ಎಂದರೆ "ತತ್ತ್ವಮಸಿ" ಎನ್ನುವ ಶ್ರುತಿ ಸೇರುವುದಿಲ್ಲ. ಈ ರೀತಿಯಾದ ಗೊಂದಲವುಂಟಾಗುವುದು ಸಹಜವೇ.

ಈ ಸಂದೇಹಕ್ಕೆ ಪರಿಹಾರವನ್ನು ಮೀಮಾಂಸಾ ಶಾಸ್ತ್ರರೀತಿಯಿಂದ ಕೆಳಕಂಡಂತೆ ತಿಳಿಯತಕ್ಕದ್ದು.

"ತತ್ ತ್ವಮ್ ಅಸಿ" ಎನ್ನುವ ಶ್ರುತಿಯಲ್ಲಿರುವ "ತತ್" ಎನ್ನುವ ಪದವು, ತಿಳುವಳಿಕೆ, ಜ್ಞಾನ, ಸೌಖ್ಯ ಮೊದಲಾದ ಶ್ರೇಷ್ಠ ಗುಣಗಳೊಂದಿಗೆ ಕೂಡಿರುವ ಕಾರಣ ವಸ್ತುವನ್ನು ಸೂಚಿಸಿರುವುದಾಗಿಯೂ, "ತ್ವಮ್" ಎಂಬ ಪದವು "ಶ್ವೇತಕೇತು" ಎನ್ನುವ ಜೀವನನ್ನು ಶರೀರವಾಗಿವುಳ್ಳ ಪರಮನನ್ನು ಸೂಚಿಸುತ್ತದೆ. "ಇವರಿಬ್ಬರೂ ಒಬ್ಬರೆ" ಎನ್ನುವುದು ಈ ವಾಕ್ಯದ ಅರ್ಥ. "ತತ್" ಎನ್ನುವ ಈ ಪದವು ಭಗವಂತನನ್ನು ಸೂಚಿಸುತ್ತದೆ. ಎನ್ನುವುದು ಸತ್ಯವೇ ಆದರೂ ಈ "ತ್ವಮ್" ಎನ್ನುವ ಪದವು, ಮೊದಲಿನ ವಸ್ತುವಾದ ಜೀವನನ್ನು ಕುರಿತು ಹೇಳುತ್ತದೆಯೇ ಹೊರತು, ಪರಮನವರೆಗೆ ಹೋಗುವುದಿಲ್ಲ. ಹಾಗಾದ ಪಕ್ಷದಲ್ಲಿ, "ಇದು ಅವನನ್ನು ಶರೀರವಾಗಿ ಪಡೆದಿರುವ ಪರಮನನ್ನು ಹೇಳುತ್ತದೆ ಎಂದು ನೀವುಗಳು ಹೇಳುವುದು ಹೇಗೆ?" ಎನ್ನುವ ಪ್ರಶ್ನೆ ಉಂಟಾಗಬಹುದು.

ಈ ಪ್ರಶ್ನೆಯ ಪರಿಹಾರ—"ಜಾತಿಯನ್ನು ತಿಳಿಸುವ ಶಬ್ದ ಜಾತಿಯನ್ನು ತಿಳಿಸುವುದು ಮಾತ್ರವಲ್ಲದೆ, ಜಾತಿಗೆ ಆಶ್ರಯವಾದ ವ್ಯಕ್ತಿಯನ್ನು ಹೇಗೆ ತಿಳಿಸುವುದೋ ಶರೀರವನ್ನು ಹೇಳುವ ಪದವೂ, ಶರೀರವನ್ನು ಮಾತ್ರ ತಿಳಿಸುವಷ್ಟರಲ್ಲಿಯೇ ನಿಲ್ಲದೆ ಆ ಶರೀರಕ್ಕೆ ಆಧಾರವಾಗಿವುಳ್ಳ ಆತ್ಮನವರೆಗೆ ಹೋಗುತ್ತದೆ. ಇದು ಒಂದು ರೀತಿ. ಈ ರೀತಿಯನ್ನು "ಅಪರ್ಯಾವಸಾನ ವೃತ್ತಿ" ಎಂದು ಹೇಳುತ್ತಾರೆ. "ಜೀವನು ಭಗವಂತನಿಗೆ ಶರೀರ" ಎಂಬುದು "ಯಸ್ಯಾತ್ಮಾ ಶರೀರಮ್" ಎನ್ನುವ ಶ್ರುತಿಯಿಂದ ತಿಳಿಯಬಹುದು.

ಜೀವನು ಕೈ, ಕಾಲು ಮುಂತಾದ ಆಕಾರಗಳೊಂದಿಗೆ ಕೂಡಿರುವ ಪಿಂಡವನ್ನು ಪಡೆದು ಆಶ್ರಯಿಸಿ, ಆ ಪಿಂಡವು ಮಾಡುವ ಸೇವೆಯನ್ನು ಪಡೆದು ಸಂತುಷ್ಟನಾಗಿ ಪುರುಷಾರ್ಥ ಹೊಂದುವುದನ್ನು, "ಆತ್ಮಾ" ಎಂದೂ, ಆ ಪಿಂಡವನ್ನು "ಶರೀರ"ವೆಂದೂ ತಿಳಿಯುತ್ತೇವೆ.

ಇದರ ಹಾಗೆಯೇ, ಪರಮಾತ್ಮನೂ ಅರಿವಿರುವ ಚಿತ್ತೂ, ಅರಿವಿಲ್ಲದ ಅಚಿತ್ತೂ ಆಗಿರುವ ಈ ಪ್ರಪಂಚವೂ ಮಾಡುವ ಸೇವೆಯನ್ನು ಪಡೆದು ಸಂತೋಷಗೊಳ್ಳುವುದರಿಂದ ಆ ಪರಮಾತ್ಮನು ಆತ್ಮಾ; ಈ ಪ್ರಪಂಚವು ಶರೀರ, ಎನ್ನಲು ಅಡ್ಡಿ ಇಲ್ಲ.

"ಐತದಾತ್ಮ್ಯಮಿದಂ ಸರ್ವಂ ತತ್ಸತ್ಯಂ ಸ ಆತ್ಮಾ" ಎನ್ನುವ ವಾಕ್ಯ "ತತ್ ತ್ವಮ್ ಅಸಿ" ಎನ್ನುವ ವಾಕ್ಯದೊಂದಿಗೆ ಸೇರಿದ ವಾಕ್ಯವೇ. ಈ ವಾಕ್ಯವು "ಈ

ಪ್ರಪಂಚ ಪರಮಾತ್ಮನನ್ನು ಆತ್ಮವಾಗಿ ಪಡೆದಿದೆ. ಅದು ಸತ್ಯ. ಪರಮಾತ್ಮನೇ ಆತ್ಮಾ " ಎಂಬ ತಾತ್ಪರ್ಯವುಳ್ಳದ್ದಾಗಿದೆ.

ಈ ರೀತಿ, ಮೊದಲಿನಲ್ಲಿ, ಈ ಪ್ರಪಂಚಕ್ಕೂ ಪರಮಾತ್ಮನಿಗೂ ಇರುವ ಶರೀರದ ಸ್ವಭಾವ, ಆತ್ಮನ ಸ್ವಭಾವಗಳನ್ನು ಹೇಳಿ ನಂತರ, ಶ್ವೇತಕೇತು ಎನ್ನುವ ಜೀವನನ್ನೂ ಪರಮಾತ್ಮನನ್ನು ಕ್ರಮದಿಂದ "ತ್ವಮ್ ತತ್" ಎನ್ನುವ ಪದಗಳಿಂದ ಗುರುತಿಸಿ, ಇವರಿಬ್ಬರಿಗೂ ಇರುವ ಏಕೆ ಬಿಡದ ಸಂಬಂಧದಿಂದುಂಟಾದ ಹೊಂದಾಣಿಕೆಯನ್ನು ಆ "ತತ್, ತ್ವಮ್, ಅಸಿ" ಎನ್ನುವ ಶ್ರುತಿ ತಿಳಿಯ ಪಡಿಸುವುದಾಗಿ ನಾವು ತಿಳಿದು ಕೊಂಡರೆ ಸರಿ ಹೋಗುತ್ತದೆ.

ಈಗ "ತತ್ ತ್ವಮ್ ಅಸಿ" ಎಂಬ ಶ್ರುತಿಯಲ್ಲೂ, "ಪತಿಂ ವಿಶ್ವಸ್ಯ", "ಯಸ್ಯಾತ್ಮಾ ನ ವೇದ" ಎಂಬ ಶ್ರುತಿಯಲ್ಲೂ ಇರುವ ಹಾಗೆ ಜೀವನನ್ನು ಪರಮನಿಗೆ ಶೇಷವಸ್ತುವನ್ನಾಗಿಯೂ, ಪರತಂತ್ರವಸ್ತುವಾಗಿಯೂ ಕಂಡೆವಲ್ಲವೇ? ಹೇಗೆಂದರೆ–ಜೀವನು, ಭಗವಂತನಿಗೆ ಶರೀರ ಎಂದು ಹೇಳುವಾಗಲೇ, ಆ ಜೀವನು, ಭಗವಂತನಿಗೆ ಶೇಷವಸ್ತು, ಪರತಂತ್ರ ವಸ್ತುವೂ ಆಗಿದೆ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ.

ಈ ರೀತಿ, ಮೀಮಾಂಸಾ ಶಾಸ್ತ್ರವು ಮೊದಲು ಹೇಳಿದ ಗೊಂದಲಕ್ಕೆ ಪರಿಹಾರ ವನ್ನು ತಿಳಿಸುತ್ತದೆ. ಆದರೆ, ರಾಮಾಯಣವು ಸರಳವಾಗಿ ತಿಳಿಯುವ ಹಾಗೆ ಜೀವನ ನಿಜಸ್ಥಿತಿಯನ್ನು ತಿಳಿಸುತ್ತದೆ.

"ರಾಮಾಯಣವೂ ಜೀವಾತ್ಮನೂ"

ಶ್ರೀ ರಾಮಚಂದ್ರನು, ಸೀತಾದೇವಿ ಮತ್ತು ಲಕ್ಷ್ಮಣನೊಂದಿಗೆ ವನಕ್ಕೆ ಹೋಗಿ, ಚಕ್ರವರ್ತಿಯೂ ಮರಣ ಹೊಂದಿ, ರಾಜ್ಯವು ಅರಾಜಕವಾದ ಕಾಲದಲ್ಲಿ, ಭರತನನ್ನು ರಾಜ್ಯಾಭಿಷೇಕ ಮಾಡಿಕೋ ಎಂದು ವಸಿಷ್ಠರು ಕೇಳಿಕೊಳ್ಳಲು, ಆ ಭರತನು ವಸಿಷ್ಠರನ್ನು ಕುರಿತು ಹೇಳಿರುವ ಮಾತು ಕೆಳಕಂಡಂತಿದೆ :–

"ಕಥಂ ದಶರಥಾಜ್ಜಾತೋ ಭವೇದ್ರಾಜ್ಯಾಪಹಾರಕಃ ।
ರಾಜ್ಯಂ ಚಾಹಂ ಚ ರಾಮಸ್ಯ ಧರ್ಮಂ ವಕ್ತುಮಿಹಾರ್ಹಸಿ ॥"

"ಶ್ರೀ ರಾಮಚಂದ್ರನು ವನಕ್ಕೆ ತೆರಳಿದ ನಂತರ, ಆ ಪರಮ ಪುರುಷನ ವಿಯೋಗವನ್ನು ತಡೆಯಲಾರದೆ ನನ್ನ ತಂದೆಯವರಾದ ಚಕ್ರವರ್ತಿ ಮರಣ ಹೊಂದಿದರು. ಆ ಚಕ್ರವರ್ತಿಯ ಹೊಟ್ಟೆಯಲ್ಲಿ ಹುಟ್ಟಿದ ನಾನು, ಆ ಶ್ರೀ ರಾಮನು ತೊರೆದ ರಾಜ್ಯವನ್ನು ಹೇಗೆ ತಾನೇ ತೆಗೆದುಕೊಳ್ಳಲಿ. ಹಾಗೇನಾದರೂ ಪಡೆದಿದ್ದೇ ಆದರೆ, ಚಕ್ರವರ್ತಿಯ ಹೊಟ್ಟೆಯಲ್ಲಿ ಹುಟ್ಟಿದ ಮಗ ಎಂದು ನನ್ನನ್ನು ಪ್ರಪಂಚ ಹೇಳುತ್ತದೆಯೇ ?

ಅನಂತರವೂ ನನ್ನ ನಿಜಸ್ಥಿತಿಯನ್ನು ತಿಳಿದಿದ್ದೇ ಆದರೆ ಈ ರಾಜ್ಯವನ್ನು ತೆಗೆದು ಕೊಳ್ಳಲು ಸಾಧ್ಯವಿಲ್ಲ. ಏತಕ್ಕೆಂದರೆ ನಾನು ಎನ್ನುವ ಈ ಆತ್ಮನೂ, ಈ ರಾಜ್ಯವೂ ಆ ರಾಮನಿಗೇ ಸೇರಿದ ವಸ್ತುವಾಗಿದೆ.

ಆ ಪರಮಾತ್ಮನಿಗೇ ಸೇರಿದ ಎರಡು ಸ್ವಂತ ವಸ್ತುವಿನಲ್ಲಿ, ಒಂದು ಮತ್ತೊಂದನ್ನು ಆಳಿ ಪರಿಪಾಲನೆ ಮಾಡುವುದು ನ್ಯಾಯವೇ ?

ಈ ಪ್ರಪಂಚದಲ್ಲಿ ತನಗೆ ಜನ್ಮಕೊಟ್ಟು ಸಾಕಿದ ತಂದೆಯನ್ನು ಸೆರೆಯಲ್ಲಿಟ್ಟು ರಾಜ್ಯವನ್ನು ರೀತಿಗೆ ವಿರೋಧವಾಗಿ ಪರಿಪಾಲಿಸುವುದೆಂಬುದೊಂದು ಉಂಟು. ಆ ಸ್ಥಾನವನ್ನು ನಾನು ಹೊಂದಲು ಸಾಧ್ಯವೇ ? ಈ ರೀತಿಯನ್ನನುಸರಿಸಿ ನನ್ನ ಹತ್ತಿರ ರಾಜ್ಯವನ್ನು ಕೊಡುವುದು ಸರಿಯೇ ? ನನ್ನ ಸ್ವಭಾವವನ್ನು ತಿಳಿದು ರಕ್ಷಿಸುವ ಮಾರ್ಗವನ್ನು ಹೇಳಿ ಶ್ರೀ ರಾಮನಿಗೇ ಸೇರಿದ ಎರಡು ವಸ್ತುಗಳಲ್ಲಿ, ಒಂದು ಮತ್ತೊಂದನ್ನು ಆಳಿ ಪರಿಪಾಲಿಸಬಹುದು ಎಂದರೆ ಈ ರಾಜ್ಯವೇ ನನ್ನನ್ನು ರಕ್ಷಿಸಲಿ ಎಂದು, ಒಬ್ಬನಿಗೇ ಸೇರಿದ ಒಂದು ಪೆಟ್ಟಿಗೆ, ರತ್ನ ಎಂಬ ಎರಡು ವಸ್ತುಗಳಲ್ಲಿ ಒಂದು ರಕ್ಷಿಸುವುದಾಗಿಯೂ ಮತ್ತೊಂದು ರಕ್ಷಿಸಲ್ಪಡುವುದಾಗಿಯೂ ಕಾಣಿಸುತ್ತದೆ. ಇದರ ಹಾಗೆಯೇ ಭರತನಾದ ನೀನು, ರಕ್ಷಿಸುವವನಾಗಿಯೂ ರಾಜ್ಯವು ರಕ್ಷಿಸಲ್ಪಡುವುದಾಗಿಯೂ ಆದರೇ ? ಎಂದರೆ,

ಮೇಲೆ ಹೇಳಿರುವ ಎರಡು ವಸ್ತುಗಳಲ್ಲಿ ಒಂದಾದ ರತ್ನವು ಆ ಪುರುಷನಿಂದ ಯಾವತ್ತಾದರೂ ಧರಿಸತಕ್ಕದ್ದೇ ಆಗಿದೆ. ಆ ರತ್ನವನ್ನು, ಅವನು ಒಂದು ಸಮಯ ಪೆಟ್ಟಿಗೆಯಲ್ಲಿಟ್ಟು, ಆ ಪೆಟ್ಟಿಗೆ ರಕ್ಷಿಸುವುದಾಗಿ ತಿಳಿದಿದ್ದೇ ಆದರೆ, ಇಲ್ಲವಲ್ಲವೇ? ಶ್ರೀ ರಾಮನಿಗೇ ಸೇರಿದ ಈ ರಾಜ್ಯವು ಆ ಪ್ರಭುವಿನಿಂದಲೇ ಯಾವತ್ತಿಗೂ ಧರಿಸತಕ್ಕದ್ದಲ್ಲವೇ ? ಆ ರಾಜ್ಯವಾಗಿರುವ ರತ್ನವನ್ನು ಧರಿಸಿ, ರಕ್ಷಿಸುವ ಶಕ್ತಿಯು ನನಗಿದೆಯೇ ? ನಾನು ಪೆಟ್ಟಿಗೆಯಾಗಿರಲು ತಕ್ಕವನೇ ?

ಈ ರಾಜ್ಯಕ್ಕೆ ತಿಳುವಳಿಕೆಯೂ, ಶಕ್ತಿಯೂ ಇಲ್ಲ. ಆದ್ದರಿಂದ ನನ್ನನ್ನು ರಕ್ಷಿಸಲು ಅವಕಾಶವಿಲ್ಲ. ತಿಳುವಳಿಕೆಯೂ, ಶಕ್ತಿಯೂ ಇರುವ ನಿನಗೋ ಆ ರಾಜ್ಯವನ್ನು ರಕ್ಷಿಸುವ ಯೋಗ್ಯತೆ ಇದೆ ಎಂದರೆ ನನ್ನ ಜ್ಞಾನವೂ, ಶಕ್ತಿಯೂ ಪರಮಾತ್ಮನಿಗೆ ಸೇವೆ ಮಾಡಲು ಸರಿಯಾಗಿದೆಯೋ ಹೊರತು, ಆ ಪರಮ ಪುರುಷನ ವಸ್ತುವನ್ನು ಅವನಿಗೆ ಇಲ್ಲದ ಹಾಗೆ ಮಾಡಲು ಅರ್ಹತೆ ಇಲ್ಲ.

ಇದರಿಂದ, ಭರತನ ನಿಜಸ್ಥಿತಿಯು ಜೀವನಿಗೆ ತಕ್ಕ ಒಂದು ಶ್ರೇಷ್ಠ ಸ್ಥಿತಿ ಎನ್ನುವುದು ಚೆನ್ನಾಗಿ ಪ್ರಕಾಶಿಸುವುದು.

ಇನ್ನು ಸೀತಾದೇವಿಯ ಚರಿತ್ರೆಯಲ್ಲಿ ಪಾರತಂತ್ರ್ಯ ಸ್ಥಿತಿಯನ್ನು ನೋಡುತ್ತೇವೆ. ಸೀತಾದೇವಿಗೆ ಮೂರುಸಾರಿ ವಿಯೋಗವುಂಟು. ದೇವತಾ ಸ್ತ್ರೀಯರ ಸೆರೆಯನ್ನು ಬಿಡಿಸಲು ತಾನು ಸೆರೆ ಇದ್ದಿದ್ದು ಮೊದಲ ವಿಯೋಗ, ಎರಡನೆಯ ಅಗಲಿಕೆಯು ಯಾವುದೆಂದರೆ ಲೋಕಾಪವಾದವನ್ನು ಹೋಗಲಾಡಿಸಿಕೊಳ್ಳುವುದಕ್ಕಾಗಿ ಶ್ರೀ ರಾಮನು ಆ

ದೇವಿಯನ್ನು ಕಾಡಿಗೆ ಕಳುಹಿಸಿ ಅಗಲಿದ್ದು, ಪುನಃ ಆ ದೇವಿಯು ಶ್ರೀ ರಾಮನ ಎದುರಿಗೆ ಬಂದಾಗ, ಅಗಲಿ ಪಾತಾಳ ಗೃಹಕ್ಕೆ ಹೊರಟು ಹೋಗಿದ್ದು ಮೂರನೆಯ ವಿಯೋಗ. ಈ ವಿಯೋಗಗಳಲ್ಲಿ ಎರಡನೆಯ ವಿಯೋಗದಲ್ಲಿ ಪಾರತಂತ್ರ್ಯ ಸ್ಥಿತಿ ಚೆನ್ನಾಗಿ ತಿಳಿಯುತ್ತದೆ.

ಶ್ರೀ ರಾಮನೂ ಸೀತಾದೇವಿಯೂ ಅಯೋಧ್ಯಾ ನಗರಿಯಲ್ಲಿ ಇರುವ ಸಮಯದಲ್ಲಿ ಸೀತೆಯು ಗರ್ಭಿಣಿಯಾಗಿರುವುದನ್ನು ಕಂಡನು. ಅವನು ಆ ದೇವಿಯನ್ನು ಕುರಿತು, "ಅರವತ್ತುಸಾವಿರ ವರ್ಷ ಮಕ್ಕಳಿಲ್ಲದೆ ಇದ್ದ ಚಕ್ರವರ್ತಿಯು ಹಾಗೆ ದುಃಖವನ್ನು ಅನುಭವಿಸದೆ ಸುಲಭವಾಗಿಯೇ ಪುತ್ರನೆಂಬ ಪುರುಷಾರ್ಥವು ದೊರೆತು ಬಿಟ್ಟಿತು! ಅವಶ್ಯವಾಗಿ ಅನುಭವಿಸಬೇಕಲ್ಲದೆ ತಡೆಯಲಾಗದ ಆಶೆ ಹೊಂದಿರುವ ನೀನು ಏನನ್ನು ಅಪೇಕ್ಷಿಸುತ್ತೀಯೆ? ಎಲ್ಲವನ್ನೂ ಹೇಳು. ಒಳಗೂ, ಹೊರಗೂ, ಇರುವ ಆಕಾಂಕ್ಷೆಗಳನ್ನು ತಿಳಿಸು"

"ಅಪತ್ಯಲಾಭೋ ವೈದೇಹಿ ಮಮಾಯಂ ಸಮುಪಸ್ಥಿತಃ ।
ಕಿಮಿಚ್ಛಸಿ ಸಕಾಮಾ ತ್ವಂ ಬ್ರೂಹಿ ಸರ್ವಂ ವರಾನನೇ ॥"

ಎಂದು ಹೇಳಿದನು.

ಇದನ್ನು ಕೇಳಿದ ಸೀತೆಯು ಶ್ರೀ ರಾಮನನ್ನು ಕುರಿತು ಕೇಳಿಕೊಂಡ ಮಾತು ಯಾವುದೆಂದರೆ :–

"ತಪೋವನಾನಿ ಪುಣ್ಯಾನಿ ದ್ರಷ್ಟುಮಿಚ್ಛಾಮಿ ರಾಘವ ।
ಗಂಗಾತೀರ ನಿವಿಷ್ಟಾನಿ ಋಷೀಣಾಂ ಪುಣ್ಯಕರ್ಮಣಾಮ್ ।
ಫಲ ಮೂಲಾಶಿನಾಂ ವೀರಪಾದ ಮೂಲೇಷು ವರ್ತಿತುಂ ।
ಏಷಮೇ ಪರಮಃ ಕಾಮಃ ॥"

ಇದರ ತಾತ್ಪರ್ಯ :–"ಶ್ರೀ ರಾಘವನೇ! ಗೆಡ್ಡೆ, ಗೆಣಸು, ಹಣ್ಣು ಹಂಪಲುಗಳನ್ನು ತಿನ್ನುವವರೂ, ಸತ್ವಗುಣವುಳ್ಳವರೂ ಆದ ಮಹಾತ್ಮರ ಚರಣಾರವಿಂದಗಳಲ್ಲಿ ಒಂದು ದಿನವಾದರೂ ತಂಗಿ, ಗಂಗಾತೀರದಲ್ಲಿರುವ ತಪೋವನಗಳನ್ನು ನೋಡಲು ಆಸೆ ಪಡುತ್ತೇನೆ. ಇದೇ ನನಗೆ ಒಳಗೂ ಹೊರಗೂ ಇರುವ ಆಸೆಯಾಗಿದೆ" ಎಂದಳು. ಈ ಮಾತನ್ನು ಕೇಳಿದ ಶ್ರೀ ರಾಮನು ಲೋಕಾಪವಾದವನ್ನು ಹೋಗಲಾಡಿಸಬೇಕೆಂಬ ಮನಸ್ಸಿರುವವನಾದ್ದರಿಂದ ಆ ದೇವಿಯ ಆಸೆಯನ್ನೇ ನೆರವೇರಿಸುವ ಹಾಗೆ, ಅದೇ ರೀತಿ ಕಳುಹಿಸಿದನು. ಇದೇ ಎರಡನೆಯ ವಿಯೋಗ. ಈ ವಿಯೋಗಕ್ಕೆ ಫಲ–ಶ್ರೀ ರಾಮನು ತನ್ನನ್ನು ಅರಮನೆಯಲ್ಲಿಡಲಿ ಅಥವಾ ಅರಣ್ಯದಲ್ಲಿ ಬಿಟ್ಟರಲಿ ಆ ಭಗವಂತನ ಮನೋಭಿಪ್ರಾಯದಂತೆಯೇ ಅನುಸರಿಸಿ ನಡೆಯಬೇಕಾದದ್ದು ಪಾರತಂತ್ರ್ಯ ಸ್ಥಿತಿಯನ್ನು ಪ್ರಕಾಶಪಡಿಸುವುದಾಗಿದೆ.

" ಸಂಬಂಧ ವ್ಯತ್ಯಾಸವಿಲ್ಲದೆ ಆ ಭಗವಂತನ ಮನೋಭಿಪ್ರಾಯವನ್ನೇ ಅನುಸರಿಸಿ ನಡೆಯಬೇಕಾದ ಸ್ಥಿತಿ."

ಸೀತಾದೇವಿಯು ಅಶೋಕವನದಲ್ಲಿ ಸೆರೆ ಇರುವಾಗ, ರಾವಣನಿಂದಲೂ, ರಾಕ್ಷಸಿಯರಿಂದಲೂ ಅನುಭವಿಸಿದ ಕಷ್ಟಗಳು ಮಿತಿ ಮೀರಿತ್ತು. ಆ ದೇವಿಯ ಎದುರಿಗೇ ರಾವಣನು, ಸೀತೆಗೆ ವಿರುದ್ಧವಾಗಿ ಹೇಳಿರುವ ಮಾತುಗಳು ಅನೇಕವುಂಟು. ಅವುಗಳಲ್ಲಿ ಒಂದು ಕೆಳಕಂಡಂತೆ ಇದೆ–

" ಅರಗಿಣಿಯಂತಹವಳೇ! ನಾನು ನಿನ್ನನ್ನು ತರುವುದಕ್ಕೆ ಮೊದಲೇ ನಿನ್ನ ಪತಿಯಾದ ರಾಮನು ಮರಣ ಹೊಂದಿದನು. ಅವನು ಸಾಯುವಾಗ ಹಾ ಸೀತಾ! ಹಾ ಲಕ್ಷ್ಮಣಾ! ಎಂದು ಹೇಳಿದ್ದನ್ನು ಕಿವಿಯಾರೆ ಕೇಳಿರುವೆ ; ಹಾಗಿರುವಲ್ಲಿ, ರಾಮನನ್ನು ಸೇರಬೇಕೆಂದು ಇಷ್ಟಪಡುತ್ತೀಯಲ್ಲ! ಇದು ಎಂತಹ ಅಜ್ಞಾನ ? ಒಳ್ಳೆಯ ಅದೃಷ್ಟ ನನ್ನನ್ನು ನಿನ್ನ ಹತ್ತಿರ ಸೇರಿಸಿರುವಾಗ ಅದನ್ನು ಅವಮಾನಪಡಿಸಿ ನನ್ನನ್ನು ತಿರಸ್ಕರಿಸುವುದು ಸರಿಯೇ ? " ಇಲ್ಲ.

ಪ್ರಶ್ನೆಗಳಲ್ಲಿ ಒಬ್ಬನಾದ ರಾವಣನು ತಾಯಿಯಾದ ದೇವಿಯ ಮುಂದೆಯೇ ಹೇಳುವ ಮಾತೇ ? ಇದು! ಹೀಗೆಯೇ ರಾಕ್ಷಸಿಯರೂ ತಮತಮಗೆ ತೋರಿದ ರೀತಿಯಲ್ಲಿ ಕಠೋರವಾಗಿ ಹೇಳಿದ ಕ್ರಮ ಪ್ರಪಂಚಕ್ಕೆ ತಿಳಿದಿದೆ. ಬಿಲ್ಲಿನ ಕೂರಲಗನ್ನು ತಪ್ಪಿಸಿಕೊಳ್ಳಬಹುದು ; ಕಟುವಾಕ್ಯಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ?

" ತೀಯಿನಾರ್ ಶುಟ್ಟಪುಣ್ಣುಳ್ಳಾರುಮಾರಾತೇ ನಾವಿನಾರ್ ಶುಟ್ಟವಡು " ಎನ್ನುವ ಮಾತನ್ನು ಇಲ್ಲಿ ನೋಡತಕ್ಕದ್ದು.

ಈ ರೀತಿ ಇದ್ದರೂ ಮುಗಿದು ಹೋಗಲಿಲ್ಲ. ಆ ದೇವಿಯು ಅಶೋಕವನದಲ್ಲಿ ಜೀವವನ್ನು ಧರಿಸಿರಲು ಕಾರಣವೇನೆಂದರೆ,

" ನಮಗೆ ಯಜಮಾನನಾದ ರಾಮನು ನನ್ನಲ್ಲಿ ಮಿತಿಮೀರಿದ ಪ್ರೀತಿಯುಳ್ಳವನೂ, ಜಗದೇಕ ವೀರನು ಆಗಿರುವುದರಿಂದ ರಾವಣನನ್ನು ಕೊಲ್ಲುವುದು ಸತ್ಯ. ಕೊಂದು ನನ್ನನ್ನು ಹುಡುಕುವಲ್ಲಿ, 'ಸೀತೆಯು ಮರಣಹೊಂದಿ ಕೆಲವು ತಿಂಗಳುಗಳಾಯಿತಲ್ಲ" ಎಂದರೆ, ತಣ್ಣೀರಿನ ಚಪ್ಪರದಲ್ಲಿ ಬಂದು, ಒಡೆದು ಉರುಳಿ ಬಿದ್ದಿರುವ ತಣ್ಣೀರಿನ ಮಡಕೆಯನ್ನು ನೋಡಿ ತಪಿಸುವ ಬಾಯಾರಿದವನ ಹಾಗೆ ಆ ಪ್ರಭುವಿನ ಸ್ಥಿತಿಯಾಗುತ್ತದೆ. ಆ ಪರಮಾತ್ಮನಿಗಾಗಿಯೇ ನಾವು ಜೀವಿಸಿರುವುದು ನಮ್ಮ ಸ್ಥಿತಿಗೆ ತಕ್ಕ ಕಾರ್ಯವಲ್ಲವೇ ? " ಎಂದು ಇದ್ದದ್ದೇ ಕಾರಣವಾಗಿದೆ.

ಇಲ್ಲಿ ಶ್ರೀ ರಾಮನ ಮನಸ್ಸಿನ ಅಭಿಪ್ರಾಯವನ್ನು ಅನುಸರಿಸಿ ಇರುವ ಸ್ಥಿತಿಯನ್ನು ನಾವು ಚೆನ್ನಾಗಿ ತಿಳಿಯಬಹುದು.

ಈ ಅರ್ಥವನ್ನು ನಾವು ಎರಡನೆಯ ವಿಯೋಗ ಮತ್ತು ಆ ವಿಯೋಗದಲ್ಲಿ ನಡೆದ ಕಾರ್ಯಗಳನ್ನು ನೋಡಿದ್ದೇ ಆದರೆ, ಒಂದು ಸಂದೇಹವುಂಟಾಗುವುದು.

ಎರಡನೆಯ ವಿಯೋಗವು ಯಾವುದು ? ಲೋಕಾಪವಾದವನ್ನು ಹೋಗಲಾಡಿಸಿ

ಕೊಳ್ಳುವುದಕ್ಕಾಗಿ ಶ್ರೀ ರಾಮನು ಸೀತಾದೇವಿಯನ್ನು ಕಾಡಿಗೆ ಕಳುಹಿಸಿ ಬಿಟ್ಟಿದ್ದು ಇದನ್ನು ನೋಡಿದರೆ ಸೀತಾದೇವಿಯಲ್ಲಿ ಶ್ರೀ ರಾಮನಿಗೆ ಎಳ್ಳಷ್ಟೂ ಪ್ರೇಮವಿಲ್ಲ ಎನ್ನುವುದು ತಿಳಿಯುತ್ತದೆ. ಆ ದೇವಿಯೂ ತನ್ನ ಜೀವವನ್ನು ಇಟ್ಟುಕೊಂಡಿರುವುದು ಶ್ರೀ ರಾಮನಿಗಾಗಿಯೇ ಎಂಬುದು " ನಹಿಮೇ ಜೀವಿತೇನಾರ್ಥಃ " ಎಂದು ಅವಳು ಹೇಳಿರುವುದರಿಂದಲೇ ತಿಳಿಯುತ್ತದೆ.

ಅಶೋಕವನದಲ್ಲಿ ಇರುವ ಸಮಯದಲ್ಲಿ, ರಾವಣನಿಂದಲೂ, ರಾಕ್ಷಸಿಯರಿಂದಲೂ ಹೇಳಲಾರದ ದುಃಖವನ್ನು ಅನುಭವಿಸಿದ್ದರೂ ಶ್ರೀ ರಾಮನಿಗಾಗಿಯೇ ಪ್ರಾಣಧಾರಣೆ ಮಾಡಿದ್ದು ?

ಈ ಸಂದೇಹಕ್ಕೆ ಪರಿಹಾರ ಯಾವುದು? ಅತ್ಯಂತ ವ್ಯಾಕುಲಿತನಾಗಿದ್ದ ಲಕ್ಷ್ಮಣನು ಗಂಗಾತೀರವನ್ನು ಸೇರಿದ ನಂತರ ದೇವಿಯ ಸನ್ನಿಧಾನದಲ್ಲಿ, ಶ್ರೀ ರಾಮನು ಕಾಡಿಗೆ ಕಳುಹಿಸಿದ್ದಕ್ಕೆ ಫಲವಾಗಿ ಲೋಕಾಪವಾದ ಪರಿಹಾರವನ್ನು ತಿಳುಹಿಸಿದನು. ಅದನ್ನು ಕೇಳಿದ ದೇವಿಯು, ಅತ್ಯಧಿಕ ವ್ಯಾಕುಲ ಚಿತ್ತಳಾಗಿ ಬಿಕ್ಕಳಿಸಿ ಹೇಳುವಾಗ ತಿಳಿಸಿದ ಮಾತುಗಳಲ್ಲಿ ಒಂದು.

" ನಖಲ್ವದ್ಯೈವ ಸೌಮಿತ್ರೇ ಜೀವಿತಂ ಜಾಹ್ನವೀ ಜಲೇ ।
ತ್ಯಜೇಯಂ ರಾಘವಂ ವಂಶೇ ಭರ್ತುರ್ಮಾಪರಿಹಾಸ್ಯತಿ ॥ "

ಇದರ ತಾತ್ಪರ್ಯ :-

"ಲಕ್ಷ್ಮಣನೇ ! ಶ್ರೀ ರಾಮಚಂದ್ರನನ್ನು ತೋರಿಸುವ ರಘು ಸಂತಾನವು ಆ ರಾಮಚಂದ್ರನ ವಂಶದಲ್ಲಿ ಇಲ್ಲದೆ ಅಳಿದು ಹೋಗ ಬಾರದೆಂಬುದಕ್ಕಾಗಿ. ಇಲ್ಲವಾದಲ್ಲಿ ಗಂಗಾ ಜಲದಲ್ಲಿ ಈಗಲೇ ಪ್ರಾಣವನ್ನು ಬಿಡಲು ತಕ್ಕವಳಾಗಿದ್ದೇನೆ."

ಈ ಅರ್ಥವನ್ನು ನೋಡುವಲ್ಲಿ, ಶ್ರೀ ರಾಮನಿಗೋಸ್ಕರ ಜೀವವನ್ನು ಧರಿಸ ಬೇಕಾಗಿಲ್ಲ. ಆ ಪ್ರಭುವು ಇಟ್ಟಿದ್ದ ಸಂತತಿಗೋಸ್ಕರ ಆ ದೇವಿಯು ಈ ವಿಯೋಗದಲ್ಲಿ ಜೀವವನ್ನು ಧರಿಸಿದ್ದಾಗಿ ತಿಳಿಯುತ್ತದೆ. ಇದನ್ನು ನೋಡುವವರಿಗೆ ಮೇಲೆ ಹೇಳಿರುವ ಸಂದೇಹಕ್ಕೆ ಪರಿಹಾರ ಚೆನ್ನಾಗಿ ತಿಳಿಯುತ್ತದೆ.

ಇಲ್ಲಿ ದುಃಖದ ಹೊರೆಯಿಂದ ಮರಣಪ್ರಾಯರಾದರೂ ಮೃತಿಯನ್ನು ಹೊಂದದೆ ಭಗವಂತನ ನೆನಪನ್ನೇ ಅನುಸರಿಸಿ ತನ್ನ ಪ್ರಾಣವನ್ನು ನೋಡಿ ಕೊಂಡಿರುವಂತಹ ಪಾರತಂತ್ರ್ಯವೇ ಪ್ರಕಾಶಿಸುತ್ತದೆ.

ಎನ್ನುವ ಮಣವಾಳ ಮಾಮುನಿಗಳ ಅಭಿಪ್ರಾಯವನ್ನು ತಿಳಿಯತಕ್ಕದ್ದು. ಈ ಮಾತಿನಲ್ಲಿ ಹೇಳಿರುವ " ಪೆರುಮಾಳ್ ನಿನ್ನವೆ ಪಿನ್‌ಶೆನ್ರು " ಎನ್ನುವುದಕ್ಕೆ ಕುಶ-ಲವರುಗಳ ಅವತಾರವನ್ನು ಶ್ರೀ ರಾಮನು ಇಷ್ಟ ಪಟ್ಟಿದ್ದನು. ಆದ್ದರಿಂದ, ಈಗ ನಾನು ಪ್ರಾಣಧಾರಣೆ ಮಾಡಿರಬೇಕಾದದ್ದು ಆ ಭಗವಂತನಿಗೆ ಇಷ್ಟ ಎನ್ನುವ ಅಭಿಪ್ರಾಯವನ್ನು, " ಅಪತ್ಯಲಾಭೋ ವೈದೇಹಿ " ಎನ್ನುವ ಆ ಪ್ರಭುವಿನ ಮಾತನ್ನು

ಅದಕ್ಕೆ ಮೂಲವಾದ ಅವನ ಮನಸ್ಸಿನ 'ಇಚ್ಛೆಯನ್ನು' ಅನುಸರಿಸಿ ಪುರುಷಾರ್ಥವನ್ನು ಪಡೆದಿದ್ದು ಎಂಬುದೇ ಅರ್ಥ.

ಇನ್ನು, ಇಲ್ಲಿ ಆ ದೇವಿಯು ಕುಶ-ಲವರುಗಳು ಜನ್ಮವೆತ್ತಿದ ಅನಂತರವೂ, ಜೀವಿಸಿರುವುದಕ್ಕೆ ಕಾರಣ ಯಾವುದು ? ಎನ್ನುವ ಪ್ರಶ್ನೆ ಕೆಲವರಿಗೆ ಉಂಟಾಗಬಹುದು. ಶ್ರೀ ರಾಮನಿಗಾಗಿಯೋ ಅವನ ಸಾನಿಧ್ಯಕ್ಕಾಗಿಯೋ ಆ ದೇವಿಯು ಜೀವಿಸಿರಬೇಕಾಗಿರಲಿಲ್ಲ.

ಈ ಪ್ರಶ್ನೆಗೆ ಉತ್ತರ ಕೇಳುವಂತೆ—"ಯಜಮಾನನು ಯಜಮಾನಿಗೆ ಕೊಡುವ ಹಿರಿಮೆಯನ್ನು, ಆ ಶ್ರೇಷ್ಠತೆಯನ್ನು ಪಡೆಯಲು ಕಾರಣವಾಗಿ ಆ ಯಜಮಾನನಿಂದ ಉಪಚರಿಸಲು ತಕ್ಕವನಾಗಿಯೂ ಪ್ರಶಂಸಿಸಲ್ಪಡುವವನಾಗಿಯೂ ಇರುವುದರಿಂದ ಪ್ರಾಣವನ್ನೋ, ಪ್ರಾಣಕ್ಕಿಂತಲೂ ಹಿರಿದಾದುದೊಂದನ್ನೋ, ಬಿಟ್ಟಾದರೂ ಯಜಮಾನನ ಇಚ್ಛೆಯನ್ನು ನೆರವೇರಿಸುವಳಂತೆ ಯಜಮಾನಿ."

ಈ ರೀತಿಯಲ್ಲಿ "ಪತಿರ್ಹಿ ದೈವತಂ ನಾರ್ಯಾಃ ಪತಿರ್ಬಂಧುಃ ಪತಿರ್ಗತಿಃ । ಪ್ರಾಣೈರಪಿ ಪ್ರಿಯಂ ತಸ್ಮಾತ್, ಭರ್ತುಃ ಕಾರ್ಯಂ ವಿಶೇಷತಃ ॥"

ಇಲ್ಲಿ "ಪರರಿಗಾಗಿ ಪ್ರಾಣವನ್ನು ಧರಿಸಿರಬೇಕು. ಪರತಂತ್ರರಿಗೆ ಮುಕ್ತಾಯ ಇಷ್ಟವಿದ್ದರೂ ಮಾಡಲು ಕೂಡದು." ಎನ್ನುವುದನ್ನು ತಿಳಿಯಬೇಕು.

ಸೀತಾದೇವಿಯು ಕುಶ-ಲವರು ಹುಟ್ಟಿದ ನಂತರ ಶ್ರೀ ರಾಮನ ಸಾನಿಧ್ಯಕ್ಕಾಗಿ ಜೀವ ಧರಿಸಿರಬೇಕಾಗಿಲ್ಲ ಎಂದರೂ ಆ ದೇವಿಯು ತನ್ನ ಯೋಗ್ಯತೆಗೆ ತಕ್ಕ ಮೇಲೆ ಹೇಳಿರುವ ರೀತಿಯಲ್ಲಿ ಬದುಕಿಂಬು ಸಾವಿನಲ್ಲೇ ಇದ್ದಳೆಂಬುದನ್ನು ನಾವು ತಿಳಿಯಬೇಕು. ಈ ರೀತಿ ಇದ್ದದ್ದಕ್ಕೆ ಕಾರಣ ಶ್ರೀ ರಾಮನ ಮನೋಭಿಪ್ರಾಯವೇ ಆಗಿದ್ದಿತು. ಇಲ್ಲಿ ಮನೋಭಿಪ್ರಾಯವೆನ್ನುವುದು ಯಾವುದು ? ಎಂದರೆ ಸೀತಾದೇವಿಯು ಪತಿವ್ರತೆ ಮಾತ್ರವೇ ಅಲ್ಲದೆ, ಮತ್ತು ಅನೇಕ ಸದ್ಗುಣಗಳುಳ್ಳವಳೆಂದೂ ಹನುಮಂತನು ಸೀತೆಯನ್ನು ಬಹಳವಾಗಿ ಪ್ರಶಂಸಿಸಿರುತ್ತಾನೆ.

ಈ ದುಷ್ಟ ಪ್ರಸಂಗವು ತನ್ನ ಯೋಗ್ಯತೆಗೆ ತಕ್ಕುದಾದ ದೋಷವನ್ನು ಹೇಳಿಬಿಟ್ಟಿತು. ಆದರೂ, ದಿನಗಳು ಕಳೆಯುತ್ತಾ, ಕಳೆಯುತ್ತಾ ಈ ದೋಷಭರಿತವಾದ ಜಗತ್ತಿಗೇ, ಆ ದೇವಿಯು ಕಿಂಚಿತ್ತೂ ದೋಷವುಳ್ಳವಳಲ್ಲ ಎಂಬ ಪ್ರಭಾವವು ಚೆನ್ನಾಗಿ ತಿಳಿಯುತ್ತದೆ. ಆ ಸಮಯದಲ್ಲಿ ಮಕ್ಕಳೊಂದಿಗೆ ಆ ದೇವಿಯನ್ನು ಕರೆದುಕೊಳ್ಳುವುದೇ ನಮಗೆ ಒಳ್ಳೆಯದು." ಆದ್ದರಿಂದ ಆ ದೇವಿಯು ಈಗ ಪ್ರಾಣತ್ಯಾಗ ಮಾಡಬಾರದು" ಎನ್ನುವುದೇ ಅಭಿಪ್ರಾಯ. ಇದಕ್ಕೆ ತಕ್ಕ ಪ್ರಮಾಣ ಯಾವುದು ?

ಎಂದರೆ, ಮೂರನೆಯ ವಿಶ್ಲೇಷ ಉಂಟಾಗುವಾಗ ಆ ವಿಯೋಗವನ್ನು ಕುರಿತು ಹೇಳುವ ಸ್ಥಳದಲ್ಲಿ ವಾಲ್ಮೀಕಿ ಮುನಿಯು, ಶ್ರೀ ರಾಮನ ಸಾನಿಧ್ಯಕ್ಕೆ ಬಂದು ಸಂಕೋಚದಿಂದ ನಿಲ್ಲುವ ಸೀತಾದೇವಿಯನ್ನು ಕುರಿತು, "ಇವಳು ಕಿಂಚಿತ್ತೂ ದೋಷವಿಲ್ಲದ ಒಳ್ಳೆಯ ಸ್ವಭಾವವುಳ್ಳವಳು, ಸ್ವಲ್ಪ ಮಾತ್ರವೂ ಪಾಪವಿಲ್ಲದವಳು; ಶ್ರೀ ರಾಮನನ್ನ

ಲ್ಲದೆ ಮತ್ತೊಬ್ಬರನ್ನು ಮನಸ್ಸಿನಲ್ಲೂ ಚಿಂತಿಸಿಲ್ಲ. ಆ ಪ್ರಭುವನ್ನೇ ದೈವವನ್ನಾಗಿ ನೆನೆದಿರುವವಳು.'' ''ಇದಂ ಶರಣ್ಯ ಸಮಾಚಾರಂ ಅಪಾಪಾ ಪತಿ ದೇವಾ '' ಎಂದು ಹೇಳಿರುವುದನ್ನು, ಶ್ರೀ ರಾಮಚಂದ್ರನೂ,—

'' ಸ್ವಲ್ಪ ಮಾತ್ರವೂ ದೋಷವಿಲ್ಲದವಳು ಈ ದೇವಿ ಎಂಬುದನ್ನು ತಿಳಿದಿರುವೆನು. ''ಅಪಾಪೇತ್ಯಭಿಜಾನತಾ'' ಋಷಿವರ್ಯರಾದ ತಾವು ಹೇಳಿರುವುದೇ ಸಾಕು. (ವಿಶದೇವಂ ಮಹಾ ಭಾಗ ಯಥಾ ವದಸಿ ಧರ್ಮ ವಿತ್.) ಆದರೂ ಸಹ ಈ ಗುಂಪಿನಲ್ಲಿ ಪ್ರಪಂಚವು ನಂಬುವ ಹಾಗೆ ತನ್ನ ಪಾತಿವ್ರತ್ಯವನ್ನು ಪ್ರಕಟಪಡಿಸಬೇಕು '' ಎಂದು ಹೇಳಿರುವುದನ್ನು ನೋಡುವಲ್ಲಿ, ಮೇಲೆ ಹೇಳಿರುವ ಅಭಿಪ್ರಾಯ ಸ್ಪಷ್ಟಪಡುತ್ತದೆ. ಪರತಂತ್ರ ಜನ್ಮದಲ್ಲಿ ಹುಟ್ಟಿದವರಿಗೆ ನೆನೆಸಿದಾಗ ಮರಣವುಂಟಾಗುತ್ತದೆಯೋ ? ಹಾಗೆ ನೆನೆಸಿದಾಗ ಮರಣ ಹೊಂದಿದರೆ, ಪಾರತಂತ್ರ್ಯವಾಗಿರುವ ಸ್ಥಿತಿ ದೊರೆಯುವುದೋ ? ಎಂಬ ಅಭಿಪ್ರಾಯವುಳ್ಳ '' ಮನಾಯಮ್ ವಕ್ಕುಯಿರಿಯೋಸ್ಪಲ್ ವಿಸ್ವಯೋನ್ ಪೆಶ್ ಪಿರಂದೇ'' ಎನ್ನುವ ಆಳ್ವಾರ್ ಸಿರಿ ನುಡಿಯನ್ನು ಇಲ್ಲಿ ಕಾಣಬಹುದು. ಇದುವರೆವಿಗೂ ಹೇಳಿರುವ ಭರತ, ಸೀತಾದೇವಿ ಇವರಿಬ್ಬರ ಚರಿತ್ರೆಯನ್ನು ನಾವು ಮನಸ್ಸಿಟ್ಟು ಚೆನ್ನಾಗಿ ನೋಡುವಲ್ಲಿ ; ಶ್ರೀ ರಾಮನಿಗೆ ರಾಜ್ಯವೂ, ಭರತನೂ, ಸೀತಾದೇವಿಯೂ ಈ ಜೀವನೂ ತನ್ನ ವಸ್ತುವನ್ನಾಗಿ ತಿಳಿದಿರುವುದು ಆ ಭಗವಂತನಿಗೇ ಸೇರಿದ ಸ್ವಂತ ವಸ್ತುವೇ ಆಗಿದೆ, ಎನ್ನುವುದು ಚೆನ್ನಾಗಿ ತಿಳಿಯುತ್ತದೆ. ಈ ರೀತಿ ಜೀವನ ನಿಜವಾದ ಸ್ಥಿತಿಯನ್ನು ರಾಮಾಯಣದಲ್ಲಿ ಕಂಡೆವು. ಇನ್ನು '' ಉಪೇಯ '' ಎಂಬುದರ ಫಲವನ್ನು ಕುರಿತು ವಿಚಾರ ಮಾಡೋಣ.

'' ವೇದಾಂತವೂ ಉಪೇಯವೂ ''

ಈ ಪ್ರಪಂಚಕ್ಕೆ ಪುನಃ ಬಾರದಂತಹ ಮೋಕ್ಷ ಸಾಮ್ರಾಜ್ಯವನ್ನು ನೀಡುವ ಮಾರ್ಗದಲ್ಲಿ ಹೋಗಿ, ಶ್ರೀ ವೈಕುಂಠದಲ್ಲಿ ಪರಮಾತ್ಮನನ್ನು ಸೇರಿ ಅವನನ್ನು, ಅವನ ಶ್ರೇಷ್ಠ ಗುಣಗಳನ್ನು, ದಿವ್ಯಮಂಗಳ ವಿಗ್ರಹವನ್ನು ಪ್ರೀತಿಯಿಂದ ಅನುಭವಿಸಿ, ಆ ಅನುಭವದಿಂದುಂಟಾದ, ಆನಂದ ಹೆಚ್ಚಲು ಅವನ ಮನಸಂತೋಷವುಂಟಾಗುವ ಹಾಗೆ ಕೈಂಕರ್ಯವನ್ನು ಮಾಡಿ ಬಾಳುವುದು, ಈ ರೀತಿಯ ಜೀವನವೇ '' ಉಪೇಯ '' ಎಂಬ ಮೋಕ್ಷ ಸಾಮ್ರಾಜ್ಯ ಎಂದು ಜ್ಞಾನಿಗಳು ಹೇಳುವರು.

ಇಲ್ಲಿ, ಭಗವಂತನನ್ನು ಭಜನೆ ಮಾಡುವವರು, ಮೋಕ್ಷ ಸಾಮ್ರಾಜ್ಯಕ್ಕೆ ಹೋಗುವವರನ್ನು ಕಂಡು, ಉಪಚರಿಸಿ ಮಾರ್ಗದರ್ಶಕ ದೈವವನ್ನು ಅರ್ಚಿಸಿ ಸಿದ್ಧಿಯನ್ನು ಪಡೆಯುತ್ತಾರೆ ಎನ್ನುವ ಸಾರಾಂಶವುಳ್ಳ '' ತೇರ್ಚಿಷಮಭಿಸಂಭವಂತಿ '' ಎನ್ನುವ ವಾಕ್ಯವೂ '' ಭಗವಂತನನ್ನು ಭಜಿಸುವವರು ಆ ಭಗವಂತನನ್ನೇ ಪಡೆಯುವರು '' ಎಂಬ ತಾತ್ಪರ್ಯವುಳ್ಳ, '' ಬ್ರಹ್ಮ ವಿದಾಪ್ನೋತಿ ಪರಮ್ '' ಎನ್ನುವ ವೇದಾಂತ ವಾಕ್ಯವೂ, '' ಅತ್ಯಧಿಕ ವೈಭವಯುಕ್ತನಾದ ಭಗವಂತನನ್ನು ಪಡೆದು, ಅನುಭವಿಸಿ, ಆನಂದವನ್ನು

ಪಡೆಯೋಣ '' ಪರಮಪದದಲ್ಲಿ ಮುಕ್ತನು ಪರಮಾತ್ಮನೊಂದಿಗೆ ಅವನ ಶ್ರೇಷ್ಠ ಕಲ್ಯಾಣ ಗುಣಗಳನ್ನು ಅನುಭವಿಸುತ್ತಾನೆ. ಯಾವತ್ತಿಗೂ ಆ ಪರಮಪುರುಷನ ದಿವ್ಯಮಂಗಳ ವಿಗ್ರಹವನ್ನು ನೇತ್ರಾನಂದಕರವಾಗಿ ದರ್ಶನ ಮಾಡುವಂತಹವರು ನಿತ್ಯರು '' ಎಂಬ ತಾತ್ಪರ್ಯವನ್ನು ತೋರಿಸುವ—

'' ರಸಂ ಹ್ಯೇವಾಯಂ ಲಬ್ಧ್ವಾನಂದೀ ಭವತಿ ''

'' ಪರಮೇ ವ್ಯೋಮನ್ ಸೋಽಶ್ನುತೆ ಸರ್ವಾನ್ ಕಾಮಾನ್ ಸಹ ಬ್ರಹ್ಮಣಾ ವಿಪಶ್ಚಿತಾ | ''. '' ಸದಾ ಪಶ್ಯಂತಿ ಸೂರಯಃ '' ಎನ್ನುವ ವೇದಾಂತ ವಾಕ್ಯಗಳನ್ನು ಇಲ್ಲಿ ಕಾಣತಕ್ಕದ್ದು. ಆದರೆ ಪರಮ ಪುರುಷನ ಮನಸಂತೋಷ ಪಡುವಂತೆ ಕೈಂಕರ್ಯ ಮಾಡಿ ಜೀವಿಸುವುದೇ ಈ ಚೇತನನಿಗೆ ಹಿರಿದಾದ ಧರ್ಮ ಎನ್ನುವುದಕ್ಕೆ ಸೂಕ್ತ ಪ್ರಮಾಣ ಯಾವುದೆಂದರೆ :----

ಈ ಪ್ರಶ್ನೆಗೆ ಉತ್ತರ ಕೆಳಕಂಡಂತೆ — '' ಜೀವನು ಕೈ, ಕಾಲು ಮೊದಲಾದ ಅವಯವಗಳೊಂದಿಗೆ ಕೂಡಿರುವ ಶರೀರವನ್ನು ಆಧಾರವಾಗಿ ಹೊಂದಿ, ಆ ಅವಯವವು ಮಾಡುವ ಸೇವೆಯನ್ನು ಪಡೆದು ಸಂತೋಷ ಪಡುವ ಹಾಗೆ, ಆ ಜೀವನು ಆತ್ಮಾ ಆ ಅವಯವ ಶರೀರ '' ಎನ್ನುವುದು ಹೇಗೋ ಹಾಗೆಯೇ - '' ಪರಮಾತ್ಮನು ಜೀವನನ್ನು ಹೊತ್ತು, ಹೊಂದಿ, ಆ ಜೀವನು ಮಾಡುವ ಕೈಂಕರ್ಯವನ್ನು ಪಡೆದು ಸಂತುಷ್ಟನಾಗುವ ಹಾಗೆ ಆ ಪರಮಾತ್ಮಾ ಆತ್ಮಾ ; ಆ ಜೀವನು ಶರೀರ '' ಎನ್ನುವುದನ್ನು ನಾವು ತಿಳಿಯಬಹುದು. ಜೀವನಿಗೂ, ಆತ್ಮನಿಗೂ ಅವನೇ ಆತ್ಮಾ.

ಇಲ್ಲಿ '' ಯಸ್ಯಾತ್ಮಾ ಶರೀರಮ್ '' ಎನ್ನುವ ವೇದಾಂತ ವಾಕ್ಯವನ್ನು ಪ್ರಮಾಣ ವಾಕ್ಯವನ್ನಾಗಿ ಕಾಣತಕ್ಕದ್ದು. ಇದರಿಂದ ತಿಳಿಬರುವ ಸಾರಾಂಶವೇನು ? ಎಂದರೆ, ಈ ಶ್ರುತಿ '' ಜೀವನು ಪರಮ ಪುರುಷನಿಗೆ ಶರೀರ '' ಎಂದು ಹೇಳಿದಾಗಲೇ, '' ಈ ಚೇತನನಿಗೆ ಶ್ರೇಷ್ಠವಾದ ಹಿರಿಮೆ ಭಗವಂತನಿಗೆ ಕೈಂಕರ್ಯವನ್ನು ಮಾಡುವುದೇ '' ಎನ್ನುವುದನ್ನು ಹೇಳಿದೆ. ಆದರೆ, ಈ ದಾಸ್ಯ ವೃತ್ತಿ ಪ್ರಾಪಂಚಿಕ ರೀತಿಯಲ್ಲಿ ಕಷ್ಟವನ್ನುಂಟು ಮಾಡುವುದಾಗಿದ್ದರೂ, '' ಮತ್ತೊಬ್ಬರಿಗೆ ಸೇವೆ ಮಾಡುವುದು ಕಷ್ಟಕರವಾಗಿರುವುದು '', ಎಂದು ಶಾಸ್ತ್ರಗಳಲ್ಲಿ ಹೇಳಿರುವುದರಿಂದಲೂ, ಮನು ಮುಂತಾದ ಹಿರಿಯರು ; '' ಕೈಂಕರ್ಯದಲ್ಲಿ ದಾಸ್ಯವೃತ್ತಿ ಕೀಳವರ್ಜಿತವಾದುದು ; ಸುಖದಿಂದ ಕೂಡಿರುವುದು '' ಎಂದು ಸ್ಪಷ್ಟವಾಗಿ ಪ್ರಕಟ ಪಡಿಸಿರುತ್ತಾರೆ.

ಸತ್ಯತೆಯು ಈ ರೀತಿ ಇರಲು, '' ದುಃಖವೆಂಬುದು ಲವಲೇಶವೂ ಇಲ್ಲದೆ ಮಹದಾನಂದವನ್ನೇ ಅನುಭವಿಸಿಕೊಂಡಿರುವ ಮೋಕ್ಷದೆಶೆಯಲ್ಲಿಯೂ, ಜೀವನಿಗೆ ಈ ಶರಣಾಗತಿ ಕೈಂಕರ್ಯವುಂಟು '' ಎಂದು ಹೇಳುತ್ತದೆ ಪುರುಷಾರ್ಥ. ಇದು ಸಮರ್ಪಕವಾಗುವುದು ಹೇಗೆ ? ಎಂಬ ಪ್ರಶ್ನೆ ಇಲ್ಲಿ ಉಂಟಾಗುತ್ತದೆ.

ಈ ಪ್ರಶ್ನೆಗೆ ಉತ್ತರ ಕೆಳಕಂಡಂತೆ :–

ಶರಣಾಗತಿ ಕೈಂಕರ್ಯ ಎಲ್ಲಾ ಕಡೆಯಲ್ಲಿಯೂ ದಾಸ್ಯವೃತ್ತಿ, ಕಷ್ಟವನ್ನೇ ಕೊಡುವಂತಹುದಾಗಿದೆ ಎಂಬುದಿಲ್ಲ.

"ಕಾಳಿದಾಸನು ತಾನು ಪ್ರೀತಿಸಿದ ಬೆಲೆವೆಣ್ಣಿಗೆ ತಣ್ಣೀರನ್ನು ತಂದು ಕೊಡುವುದು ಮುಂತಾದ ಕೆಲಸಗಳನ್ನು ಸಂತೋಷ, ಸಂಭ್ರಮಗಳೊಂದಿಗೆ ಮಾಡಿಕೊಂಡು ಬಂದನು", ಎಂಬುದು ಚರಿತ್ರಾರ್ಹವಾದ ಸಂಗತಿ. ಅದರ ಹಾಗೆಯೇ ಪರಮಾತ್ಮನಿಗೆ ಮಾಡುವ ಸೇವೆಯೂ ಪ್ರಿಯವಾಗಿಯೇ ಇರುತ್ತದೆ.

ಕಾಳಿದಾಸನು ತಾನು ಪ್ರೀತಿಸಿದ ವೇಶ್ಯೆಯ ಸೌಂದರ್ಯ ಮುಂತಾದ ಗುಣಗಳಲ್ಲಿ ಮಗ್ನನಾಗಿ, ಸಂತೋಷದಿಂದ, ಅಲ್ಲಿ ಸೇವೆ ಮಾಡಿದನೆಂದರೆ ಆ ಸೇವೆಯು ರುಚಿಕರವಾಗಿದ್ದಿತೆನ್ನಬಹುದು.

ಇಲ್ಲಿ ಭಗವಂತನಿಗೆ ಸೌಂದರ್ಯ ಮೊದಲಾದ ಗುಣಗಳುಂಟೋ? ನಿರ್ಗುಣನೆಂದು ವೇದಾಂತಗಳಲ್ಲಿ ಹೇಳಲ್ಪಟ್ಟಿದೆಯಲ್ಲ, ಹೀಗೆ ಗುಣರಹಿತನಾದ ಆ ಭಗವಂತನಲ್ಲಿ ಈ ಜೀವನ ಹೃದಯವು ಇಷ್ಟವುಳ್ಳದ್ದಾಗಿರುವುದೇ? ಇಷ್ಟಪಡುವುದಿಲ್ಲ. ಮನಸ್ಸಿಗೆ ಆಕರ್ಷಣವಿಲ್ಲದ ಸ್ಥಳದಲ್ಲಿ ಪ್ರೇಮವುಂಟಾಗುವುದು ಹೇಗೆ? ಎಂದು ಕೆಲವರು ಅಭಿಪ್ರಾಯ ಪಡಬಹುದು.

ಭಗವಂತನು ನಿರ್ಗುಣನೆಂದು ಹೇಳುವ ವೇದಾಂತ ವಾಕ್ಯಕ್ಕೆ, "ಗುಣವೊಂದೂ ಇಲ್ಲದವನೆಂದು ಅಭಿಪ್ರಾಯವಲ್ಲ;" ಮತ್ತೆ ಇನ್ನೇನು ಅಭಿಪ್ರಾಯವೋ ಎಂದರೆ, "ಕೆಟ್ಟಗುಣಗಳು ಕೊಂಚವೂ ಇಲ್ಲದವನು" ಎಂಬುದೇ ತಾತ್ಪರ್ಯ.

"ಶ್ರೇಷ್ಠ ಗುಣಗಳು ಇಲ್ಲದವನೆಂದು ತಿಳಿದದ್ದೇ ಆದರೆ ಜ್ಞಾನ, ಶಕ್ತಿ ಮುಂತಾದ ಅಸಾಧಾರಣವಾದ ಗುಣಗಳುಳ್ಳವನೆಂದು ಪ್ರಸಿದ್ಧಿ ಪಡೆದಿರುವವನಂತೆ ಪರಮಾತ್ಮ" ಎಂಬ ತಾತ್ಪರ್ಯವುಳ್ಳ—

"ಯಸ್ಸರ್ವಜ್ಞಃ" "ಪರಾಸ್ಯಶಕ್ತಿಃ" ಎನ್ನುವ ಅನೇಕ ವೇದಾಂತ ವಾಕ್ಯಗಳೊಡನೆ ವಿರೋಧವುಂಟಾಗುತ್ತದೆ. ಈ ರೀತಿಯಿಂದ ಶ್ರೇಷ್ಠ ಗುಣ ಕೂಟ ಇರುವವನು ಎನ್ನುವ ವೇದಾಂತ ವಾಕ್ಯ ಸರಿ ಹೊಂದುವ ರೀತಿಯಲ್ಲಿಯೂ, ಈ ಜೀವನು ಭಗವಂತನ ಶ್ರೇಷ್ಠ ಗುಣಗಳಲ್ಲಿ ಆಕರ್ಷಿತನಾಗಿ, ಪ್ರೀತಿಸಿ, ಕೈಂಕರ್ಯ, ದಾಸ್ಯವೃತ್ತಿಯನ್ನು ಪಡೆಯುವುದರಿಂದಲೂ, ಇಲ್ಲಿಯೂ ಸೇವಾ ಕೈಂಕರ್ಯ ಹಿತಕರವಾಗಿಯೇ ಇದೆ ಎನ್ನುವುದರಲ್ಲಿ ಅಡ್ಡಿ ಏನೂ ಇಲ್ಲ.

ಈವರೆವಿಗೂ ಹೇಳಿದ್ದರಲ್ಲಿ ವೇದಾಂತ ವಾಕ್ಯಗಳನ್ನು ಅನುಸರಿಸಿಯೇ ಪರಮಪುರುಷನ ಮನಸ್ಸಂತೋಷ ಪಡಿಸುವ ಹಾಗೆ ಕೈಂಕರ್ಯ ಮಾಡುವುದೇ ಮೋಕ್ಷ ಪುರುಷಾರ್ಥ ಎಂಬುವನ್ನು ತಿಳಿದೆವು.

ಇನ್ನು, "ಬ್ರಹ್ಮವೇದ ಬ್ರಹ್ಮೈವ ಭವತಿ" ಎಂಬ ಬೇರೊಂದು ವೇದಾಂತ ವಾಕ್ಯವನ್ನು, ಆ ವಾಕ್ಯದಲ್ಲಿ ಏನು ಕಾಣುವ ತಾತ್ಪರ್ಯಾರ್ಥವನ್ನು ನೋಡೋಣ.

ಒಬ್ಬನು ಭ್ರಮೆಯಿಂದ ಕಪ್ಪೆಚಿಪ್ಪನ್ನು ಅದರ ನಿಜಸ್ಥಿತಿ ತಿಳಿಯದೆ ಬೆಳ್ಳಿ

ಎಂದು ತಿಳಿಯುತ್ತಾನೆ. ಆ ತಿಳುವಳಿಕೆ ಭ್ರಮೆ ಎನ್ನಲ್ಪಡುತ್ತದೆ. ಆ ಭ್ರಮೆ ಇರುವಾಗ ಬೆಳ್ಳಿ ಎಂದೇ ನಿಶ್ಚಯಿಸಿ, ಅದನ್ನು ತೆಗೆದುಕೊಳ್ಳಲು ಹೋಗುತ್ತಾನೆ. ಹಾಗೆ, ಅಲ್ಲಿ ಹೋಗಿ ತೆಗೆದುಕೊಂಡು ನೋಡುವಲ್ಲಿ "ಇದು ಬೆಳ್ಳಿಯಲ್ಲ, ಚಿಪ್ಪು" ಎನ್ನುವ ಅದರ ನಿಜಸ್ಥಿತಿಯು ಅರಿವಾಗುತ್ತದೆ. ಆಗ, ಆ ಕಪ್ಪೆಚಿಪ್ಪನ್ನು ಹೊರತು, ಬೆಳ್ಳಿಯೊ ಅಥವಾ ಅದರ ಪ್ರತಿರೂಪವೋ ಇಲ್ಲ; ಕಪ್ಪೆಚಿಪ್ಪು ಮಾತ್ರ ಕಾಣುತ್ತದೆ. ಇದರ ಹಾಗೆಯೇ—

ಬ್ರಹ್ಮವಾಗಿರುವುದು ಭ್ರಮೆಯಿಂದ ಪ್ರಪಂಚವಾಗಿ ತೋರುವುದು. "ತತ್ತ್ವಮ್ ಅಸಿ" ಎಂಬ ವಾಕ್ಯಗಳಿಂದ, "ಆತ್ಮಾ ಒಂದು ಮಾತ್ರ ಉಂಟು ಎಂಬ ಸತ್ಯತೆಯನ್ನು ನೋಡುವಾಗ, ಈ ಪ್ರಪಂಚವೂ ಅದರ ದೃಶ್ಯಗಳೂ ಒಂದೂ ಇರುವುದಿಲ್ಲ. ಆ ಪರಬ್ರಹ್ಮ ಮಾತ್ರ ಇರುತ್ತದೆ. ಆ ರೀತಿಯಾಗಿ ಆ ಬ್ರಹ್ಮನು ಒಬ್ಬನೇ ಇರುವುದೇ ಮೋಕ್ಷ, ಪುರುಷಾರ್ಥ. ಇದೇ ಮೇಲೆ ಹೇಳಿರುವ ವಾಕ್ಯದಿಂದ ತೋರುವ ತಾತ್ಪರ್ಯ

ಈ ಅಭಿಪ್ರಾಯವನ್ನು ಮೊದಲು ಹೇಳಿದ "ದಾಸ್ಯವೃತ್ತಿ ಕೈಂಕರ್ಯವೇ ಮೋಕ್ಷ ಪುರುಷಾರ್ಥ" ಎಂಬ ಸಾರಾಂಶವನ್ನು ಒಂದಾಗಿ ಸೇರಿಸಿ ನೋಡುವವರಿಗೆ ಸಂದೇಹವುಂಟಾಗುವುದು ಸಹಜವೇ ಆಗಿದೆ.

ಈ ಸಂದೇಹವನ್ನು ಮೀಮಾಂಸಾ ಶಾಸ್ತ್ರವನ್ನನುಸರಿಸಿ ಹೋಗಿಸಿಕೊಳ್ಳುವುದೇ ಆದರೆ, "ಬ್ರಹ್ಮವೇದ ಬ್ರಹ್ಮೈವ ಭವತಿ" ಎನ್ನುವ ವಾಕ್ಯವು, "ಆತ್ಮನ ಸತ್ಯತೆಯನ್ನು ಇರುವ ಹಾಗೆ ತಿಳಿದು ಕೊಳ್ಳುವವನು ಪರಬ್ರಹ್ಮನಾಗಿಯೇ ಆಗುವನು" ಎಂಬ ಅರ್ಥವನ್ನು ತಿಳಿಸುವುದಿಲ್ಲ; ಮತ್ತೆ ಯಾವ ತಾತ್ಪರ್ಯವನ್ನು ಹೇಳುತ್ತದೆ! ಎಂದರೆ, ಮೇಲೆ ಹೇಳಿರುವ ಹಾಗೆ "ನಿಜಸ್ಥಿತಿಯನ್ನು ತಿಳಿದಂತಹವನು, ಮೋಕ್ಷ ದೆಶೆಯಲ್ಲಿ ಭಗವಂತನೊಂದಿಗೆ ಅತ್ಯಧಿಕ ಸಾರೂಪ್ಯವನ್ನು ಪಡೆದಿರುವನಂತೆ" ಎನ್ನುವ ತಾತ್ಪರ್ಯವನ್ನೇ ಹೇಳುತ್ತದೆ.

ಈ ವಾಕ್ಯಗಳಲ್ಲಿ ಅಡಕವಾಗಿರುವ "ಬ್ರಹ್ಮೈವ ಭವತಿ" ಎನ್ನುವ ಭಾಗದಲ್ಲಿ "ಬ್ರಹ್ಮವಾಗಿ ಆಗುವವನು" ಎನ್ನುವ ಅರ್ಥ ಕಂಡು ಬರುತ್ತದೆ. ಒಂದು ರೀತಿಯಿಂದ ನಿಜವೇ. ಈ ಅರ್ಥವನ್ನೇ ತೆಗೆದು ಕೊಂಡರೆ ಜೀವನಿಗೂ ಪರಮನಿಗೂ ಇರುವ ತಾರತಮ್ಯವನ್ನು ಅನೇಕ ವಿಧವಾಗಿ ಹೇಳುವ ಕೆಲವು ವೇದಾಂತ ವಾಕ್ಯಗಳೊಂದಿಗೆ ವಿರೋಧ ವುಂಟಾಗುತ್ತದೆ.

ಮುಂದೆ ಚೇತನನು ಅರ್ಚಿರಾದಿಮಾರ್ಗದಲ್ಲಿ ಹೋಗುವುದು, ಶ್ರೀ ವೈಕುಂಠದಲ್ಲಿ ಪರಮ ಪುರುಷನನ್ನು ಸೇರುವುದು. ಅವನನ್ನು ಅವನ ಶ್ರೇಷ್ಠ, ಕಲ್ಯಾಣ ಗುಣಗಳನ್ನು ಅನುಭವಿಸುವುದು. ಆನಂದವನ್ನು ಪಡೆಯುವುದು, ಕೈಂಕರ್ಯವನ್ನು ಮಾಡುವುದು, ಆ ಪರಮ ಪುರುಷನನ್ನು ಸಂತುಷ್ಟಪಡಿಸುವುದು ಎನ್ನುವ ಸದ್ಗುಣಗಳನ್ನು ತಿಳಿಯಪಡಿಸುವ ಅನೇಕ ವಾಕ್ಯಗಳನ್ನು ನೋಡಿದೆವು.

ಅತ್ಯಂತ ಸಾಮ್ಯವುಳ್ಳ ಎರಡು ವಸ್ತುಗಳನ್ನು ಆ ಸಾಮ್ಯತೆಗನುಸಾರವಾಗಿ ಒಂದಾಗಿ ಹೇಳುವುದು, ಕೆಲಸಮಾಡುವುದು, ನಡವಳಿಕೆಗಳಲ್ಲಿ ಒಂದಾಗಿರುವುದೇ

ಆಗಿರುತ್ತದೆ. ಕಮಲ ಪುಷ್ಪದಂತಿರುವ ನೇತ್ರಗಳನ್ನು ಆ ಪುಷ್ಪವನ್ನಾಗಿಯೇ ಹೇಳುವವರಲ್ಲವೆ ?

"ತಾವಿ ವೈಯಂ ಕೊಂಡ ತಡಂ ತಾಮರೈ" ಎಂದು ಈ ರೀತಿಯನ್ನನುಸರಿಸಿ "ಬ್ರಹ್ಮೈವ ಭವತಿ" ಎನ್ನುವ ಶ್ರುತಿಯಲ್ಲಿ ಮೇಲೆ ಹೇಳಿರುವಂತೆ ಸರಿಯಾದ ಸಾಮ್ಯವಿರುವ ವಸ್ತುವನ್ನು ಕಾಣುವುದೇ ಉಚಿತ.

ಆದರೆ, ಯಜಮಾನ, ಸೇವಕ ಇಬ್ಬರಲ್ಲಿ ಯಜಮಾನನಿಗೆ ಉತ್ಕರ್ಷ, ಕೀರ್ತಿಯೂ, ಸೇವಕನಿಗೆ ನಿಕೃಷ್ಟತೆಯೂ ಕಾಣಿಸುತ್ತದೆ. ಇದೇ ರೀತಿ, ಯಜಮಾನನಾದ ಭಗವಂತನಿಗೆ ಹಿರಿಮೆಯೂ, ಸೇವಕನಾದ ಜೀವನಿಗೆ ಕಿಂಕರತ್ವವಿದೆ ಎಂದೇ ತಿಳಿದುಕೊಳ್ಳಬೇಕು. ಹಾಗೆಯೇ ಶಾಸ್ತ್ರ ಪ್ರಮಾಣಗಳು ಹೇಳುತ್ತವೆ.

ನಿಜಸ್ಥಿತಿ ಹೀಗಿರುವಲ್ಲಿ, ಪರಮಾತ್ಮನಿಗೂ, ಜೀವಾತ್ಮನಿಗೂ ಅತ್ಯಧಿಕ ಹೊಂದಿಕೆ ಇದೆ ಎಂದು ಹೇಳುವುದು ಹೇಗೆ ಎಂದು ಕೆಲವರು ಕೇಳಬಹುದು. ಒಬ್ಬ ಅರಸನಿಗೆ ಅವನ ಮಗನನ್ನು ಸೇವಕನೆಂದೂ, ಅರಸನೊಂದಿಗೆ ಬಹಳ ಹೊಂದಿಕೊಂಡಿರುವವನು ಅವನ ಮಗ ಎಂದು ಕಾಣುತ್ತೇವೆ. ಇದರ ಹಾಗೆಯೇ ಇಲ್ಲಿ ಬ್ರಹ್ಮನಿಗೆ ಜೀವನು ಸೇವಕನೆಂದು, ಆ ಬ್ರಹ್ಮನೊಂದಿಗೆ ಅತ್ಯಧಿಕ ಹೊಂದಿಕೊಂಡಿರುವವನು ಎಂಬ ಅರ್ಥವುಳ್ಳ "ಅಹಂ ಬ್ರಹ್ಮಾಸ್ಮಿ" ಎಂಬ ವಾಕ್ಯವನ್ನು ಕಾಣಬಹುದು.

ಅರಸನ ಮಗನು ಅರಸನಲ್ಲವೇ ?

ಈ ರೀತಿ ಉಪೇಯವನ್ನು ಸೂಚಿಸುವ ವೇದಾಂತ ವಾಕ್ಯಗಳ ಅರ್ಥವನ್ನು ಮೀಮಾಂಸಾ ಶಾಸ್ತ್ರವನ್ನು ಅನುಸರಿಸಿ, ಸ್ವಲ್ಪವೂ ಸಂದೇಹವಿಲ್ಲದೆ ತಿಳಿದೆವು. ಇನ್ನು, ರಾಮಾಯಣದಲ್ಲಿ ಈ ಉಪೇಯವನ್ನು ಕಾಣುತ್ತೇವೆ.

"ರಾಮಾಯಣವೂ ಉಪೇಯವೂ"

ಮೊದಲಲ್ಲಿ ಪರಮಾತ್ಮನ ಅನುಗ್ರಹಕ್ಕೆ ಪಾತ್ರನಾದವನನ್ನು ಪರಮಾತ್ಮನೆಂದೇ ಶ್ರುತಿ ಸಾರುತ್ತದೆ. ಇದನ್ನು ರಾಮಾಯಣ ಯಾವ ರೀತಿ ತಿಳಿಸುತ್ತದೆ ಎಂಬುದನ್ನು ನೋಡೋಣ.

ಹನುಮಂತನು ಅಶೋಕವನದಲ್ಲಿ ಸೀತಾದೇವಿಗೆ ನಮಸ್ಕರಿಸಿ ನಿಲ್ಲುವಾಗ, ಆ ದೇವಿಯು, ಹನುಮಂತನನ್ನು ಕುರಿತು, ಇವನು ರಾಮ ದೂತನೋ ಅಲ್ಲವೋ? ಎಂದು ಸಂದೇಹಗೊಂಡು, ನಿಜಸ್ಥಿತಿಯನ್ನು ತಿಳಿಯಲು ಅಪೇಕ್ಷಿಸಿ, "ಇಕ್ಷ್ವಾಕು ವಂಶದಲ್ಲಿ ಜನಿಸಿದ ಪುರುಷೋತ್ತಮರುಗಳಾದ ರಾಮ--ಲಕ್ಷ್ಮಣರಿಗೂ, ವಾನರರುಗಳಾದ ಸುಗ್ರೀವ ಮುಂತಾದವರಿಗೂ ಮೈತ್ರಿ ಏರ್ಪಡಲು ಕಾರಣ ಯಾವುದೋ ? ಹೇಗೆ ಉಂಟಾಯಿತು ?" ಎಂದು ಪ್ರಶ್ನಿಸಿರುವುದನ್ನು ನಾವು ತಿಳಿದೇ ಇದ್ದೇವೆ.

ಆ ಪ್ರಶ್ನೆಗೆ ಉತ್ತರವನ್ನು ಹೇಳುವಾಗ ಹನುಮಂತನು ಹೇಳಿರುವ ಮಾತುಗಳು,

" ರಾಮ ಸುಗ್ರೀವಯೋರೈಕ್ಯಂ ದೇವ್ಯೇವಂ ಸಮಜಾಯತ " ಎನ್ನುವುದು. ಈ ಮಾತುಗಳ ಅರ್ಥ ಕೆಳಕಂಡಂತೆ ಇದೆ–

" ಪುರುಷೋತ್ತಮನಾದ ರಾಮನು ಅತ್ಯಂತ ಹಿರಿಯನೂ ಅಗಣಿತ ಸದ್ಗುಣಗಳಿಂದ ಕೂಡಿರುವವನು. ಕಪಿಯಾಗಿರುವ ಸುಗ್ರೀವನೋ ಅತ್ಯಂತ ಕೆಳಮಟ್ಟದವನು. ಆ ಭಗವಂತನು ಈ ಕಪಿಯೊಂದಿಗೆ ಸ್ನೇಹಮಾಡಿಕೊಳ್ಳುವುದಕ್ಕೆ ತಕ್ಕ ಕಾರಣ ಇವನಲ್ಲಿರುವುದು ಯಾವುದು ನನಗೆ ತಿಳಿದು ಬರುವುದಿಲ್ಲ. ಅಮ್ಮಾ ! ಶ್ರೀ ರಾಮಚಂದ್ರ ಸುಗ್ರೀವರು ಇಬ್ಬರೂ ಒಬ್ಬರೆನ್ನುವ ಹಾಗೆ, ಅವರಿಬ್ಬರಿಗೂ ಇರುವ ಮಿತ್ರತ್ವವನ್ನು ಮಾತ್ರ ತಿಳಿದಿರುವೆನು. ಶ್ರೀ ರಾಮಚಂದ್ರನ ಧರ್ಮಪತ್ನಿಯಾಗಿರುವ ತಾಯಿಯವರಿಗೆ ಲಕ್ಷ್ಮಣನು ದೂತನಾಗಿ ಬರುವುದು ಉಚಿತವಾಗಿದೆ ಎಂದು ಹೇಳಬಹುದು. ನಾನೋ ಸುಗ್ರೀವನ ಸೇವಕರಲ್ಲಿ ಬಹಳ ಚಿಕ್ಕವನು. ಈ ರೀತಿ ಅತ್ಯಂತ ಅಕಿಂಚನನಾದ ಈ ಸೇವಕನು, ದೂತನಾಗಿ ಬರುವ ಹಾಗೆ ಅವರಿಬ್ಬರಿಗೂ ಮೈತ್ರಿ ಏರ್ಪಟ್ಟಿದೆ ಎಂದರೆ ; ಆ ಸ್ನೇಹ ಯಾವ ರೀತಿಯದಾಗಿದೆ ಎಂಬುದಕ್ಕೆ ನಾನು ಉತ್ತರವನ್ನು ಹೇಳಬೇಕೇ ?

ಕಪಿಯೂ ಹೇಳಿದ, ರಾಮಚಂದ್ರನೂ ಸುಗ್ರೀವನೂ, ನಿಜವಾಗಿಯೂ ಬೇರೆ ಬೇರೆ ವಸ್ತುವಾಗಿಯೇ ಇರುವವರು. ಆದರೂ, ಸಮ ಸುಖದುಃಖಗಳನ್ನು ಸಮಾನವಾಗಿ ಪಡೆದಿರುವರಂತೆ. ಅದು ಯಾವುದೆಂದರೆ–ಶ್ರೀ ರಾಮನ ಸುಖದುಃಖಗಳನ್ನು ಸುಗ್ರೀವನೂ, ಸುಗ್ರೀವನ ಸುಖ-ದುಃಖಗಳನ್ನು ಶ್ರೀ ರಾಮನೂ ಪಡೆದಿದ್ದಾರೆ. ಈ ರೀತಿ ಇವರಿಬ್ಬರಿಗೂ ಒಮ್ಮತವಿರುವುದನ್ನು ಕುರಿತು, ಇಬ್ಬರೂ ಒಬ್ಬರಾಗಿಯೇ ತೋರಿ ಬರುತ್ತಾರೆ.

ಇದರ ಹಾಗೆಯೇ ಮೋಕ್ಷ ಪುರುಷಾರ್ಥವನ್ನು ಪಡೆದಿದ್ದೇ ಆದರೆ ಪರಮಾತ್ಮನಿಗೂ ಜೀವನಿಗೂ ನಿಜಸ್ಥಿತಿಯಲ್ಲಿ ವ್ಯತ್ಯಾಸವುಂಟು. ಹಾಗಿದ್ದರೂ, ಅತ್ಯಧಿಕ ಸಾಮ್ಯವನ್ನು ಕುರಿತು, ಜೀವನು ಬ್ರಹ್ಮವಾಗಿ ಆಗುತ್ತಾನೆ. ಪುರುಷಾರ್ಥವನ್ನು ಪಡೆಯುತ್ತಾನೆಂಬುದು ಇಲ್ಲಿ ಸ್ಪಷ್ಟವಾಗಿ ತಿಳಿಯುತ್ತದೆ.

ರಾಮಾಯಣವು ಈ ರೀತಿಯಾಗಿ " ಬ್ರಹ್ಮೈವ ಭವತಿ " ಎನ್ನುವ ಅರ್ಥವನ್ನು, ಸಂದೇಹವು ಸ್ವಲ್ಪವೂ ಇಲ್ಲದ ಹಾಗೆ, ಸರಳವಾಗಿ ತಿಳಿಯುವ ಹಾಗೆ ಹೇಳಿರುವುದನ್ನು ಕಂಡೆವು.

ಇನ್ನು ಲಕ್ಷ್ಮಣನ ಚರಿತ್ರೆಯಲ್ಲಿ " ಭಗವಂತನಿಗೆ ಸೇವೆ ಮಾಡಿ ಸಂತುಷ್ಟಪಡಿಸುವುದೇ, ಈ ಜೀವನಿಗೆ ಶ್ರೇಷ್ಠವಾದ ಕರ್ತವ್ಯ ಎನ್ನುವುದನ್ನು ನೋಡೋಣ.

ರಾಮಾಯಣವು ಹೇಳಿರುವ ಹಾಗೆ, " ಲಕ್ಷ್ಮಣನಿಗೆ ಸೇರಿದ ಉತ್ತಮವಾದ ಶ್ರೇಷ್ಠತೆಯನ್ನು, ಕ್ಷುಧ್ಬಾಧೆಯಿಂದ ಪೀಡಿತರಾದವರು ಅಗಿರುವ ಅಡಿಗೆಯನ್ನು ತಿನ್ನಬೇಕು, ಆಗುವ ಅನ್ನವನ್ನು ತಿನ್ನಬೇಕೆನ್ನುವಂತೆ, ಕಾಡಿಗೆ ಹೋಗಿರುವಾಗ ಲಕ್ಷ್ಮಣನು ವಿಯೋಗವನ್ನು ಸಹಿಸಲಾಗದೆ ಕೈಂಕರ್ಯವನ್ನು ಮಾಡಬೇಕು, ಎಲ್ಲಾ ಸೇವೆಯನ್ನು ಮಾಡಬೇಕು ಎನ್ನುತ್ತಾನೆ ; ರಾಜಧಾನಿಗೆ ಬಂದ ನಂತರವೂ, ಕಾಡಿನಲ್ಲಿ

ತಾನೇ ಸೇವೆ ಮಾಡಿ ಅಭ್ಯಾಸವಾದ್ದರಿಂದ ಒಂದು ಕೈಯಲ್ಲಿ ಚಾಮರವನ್ನೂ, ಮತ್ತೊಂದು ಕೈಯಲ್ಲಿ ಕೊಡೆಯನ್ನೂ ಹಿಡಿದು ಕೈಂಕರ್ಯವನ್ನು ಮಾಡಿದನು". ಎನ್ನುವ ಸೂತ್ರದಲ್ಲಿ ಪಿಳ್ಳೈಲೋಕಾಚಾರ್ಯರು ಅತ್ಯದ್ಭುತವಾಗಿ ವಿವರಿಸುತ್ತಾರೆ. ಈ ಸೂತ್ರದ ತಾತ್ಪರ್ಯ—

ಅತ್ಯಧಿಕ ಹಸಿವುಳ್ಳವರು ತಮ್ಮ ಕ್ಷುದ್ಬಾಧೆಯನ್ನು ತಡೆಯಲಾರದೆ ಸಿದ್ಧವಾದ ಅನ್ನವನ್ನು, ಸಿದ್ಧವಾಗಿರುವ ಅನ್ನವನ್ನು ತಾವೇ ತಿನ್ನಬೇಕೆನ್ನುತ್ತಾರೆ, ಇವರ ಹಾಗೆಯೇ ಲಕ್ಷ್ಮಣನೂ, ಶ್ರೀರಾಮನಿಗೆ ತಾನೇ ಎಲ್ಲಾ ಕೈಂಕರ್ಯವನ್ನೂ ಮಾಡಬೇಕೆಂದು ಇಚ್ಛಿಸುತ್ತಾನೆ. ಈ ಲಕ್ಷ್ಮಣನು ಹುಟ್ಟುವಾಗಲೇ ಪರಿಮಳದಿಂದ ಕೂಡಿರುವ ತುಳಸಿಯ ಹಾಗೆ ಜನ್ಮತಃ ರಾಮ ಭಕ್ತಿಯೊಂದಿಗೆ ಅವತರಿಸಿರುವನಂತೆ.

ಆದ್ದರಿಂದ, ಶ್ರೀ ರಾಮಚಂದ್ರನು ಅರಣ್ಯಕ್ಕೆ ಹೊರಡುವಾಗ, ಅವನೊಂದಿಗೆ ಲಕ್ಷ್ಮಣನು ಹೋಗಬೇಕೆಂದು ಪ್ರಯತ್ನಿಸಿದನು. ಆ ಪ್ರಯತ್ನವನ್ನು ಕಂಡು ರಾಘವನು, "ಲಕ್ಷ್ಮಣಾ! ನೀನು ಈ ಅಯೋಧ್ಯಾನಗರಿಯಲ್ಲಿಯೇ ಇರು" ಎಂದು ಹೇಳುತ್ತಾನೆ. ಆಗ ಲಕ್ಷ್ಮಣನು ಆ ರಾಮಚಂದ್ರನ ವಿಯೋಗದಿಂದ ತನ್ನ ಪ್ರಾಣ ಉಳಿಯಲಾರದೆಂಬ ತನ್ನ ಸ್ಥಿತಿಯನ್ನು ಕುರಿತು, "ನಾಣೇರಿಸಿದ ಬಿಲ್ಲನ್ನು ಹೊತ್ತು, ನಿನಗಿಂತ ಮೊದಲೇ ಹೋಗಿ ಅಲ್ಲಲ್ಲಿ ದಾರಿ ತೋರಿಸಿಯೂ, ಗೆಡ್ಡೆ, ಗೆಣಸುಗಳನ್ನು, ಕಂದ ಮೂಲ ಫಲಗಳನು ಹುಡುಕಿತಂದು ಸೇವೆಯನ್ನು, ನಿನಗೆ ಮಾಡುವೆನು, ನನ್ನನ್ನು ಕರೆದುಕೊಂಡು ಹೋಗು ಎಂದು ಬೇಡಿಕೊಂಡನು.

"ಸ್ವಾಮಿಯವರಿಗೆ ಸೇವೆ ಮಾಡದೆ ನಾನು ಜೀವಿಸಿರಲಾರೆನು. ಆದರೆ ಸ್ವಾಮಿಯವರು ಸೇವೆಯನ್ನು ಪಡೆಯದೆಯೋ, ಪ್ರಾಣವನ್ನು ಧರಿಸುವರಾಗಿದ್ದೀರಿ. ಆದರೂ, ನನ್ನಿಂದ ಕೈಂಕರ್ಯ ಮಾಡಿಸಿಕೊಂಡರೆ ಸ್ವಾಮಿಯವರಿಗೂ ಹಿರಿಮೆಯುಂಟು. ಸೀತಾದೇವಿಯೂ, ತಾವು ಇಬ್ಬರೂ ಬೆಟ್ಟದ ತಪ್ಪಲಿನಲ್ಲಿ ವಿಹಾರ ಮಾಡುವಾಗಲೂ, ಅಹರ್ನಿಶಿ ಎಲ್ಲಾ ಸೇವೆಯನ್ನು ಮಾಡಬೇಕು. ನನ್ನ ಪ್ರಾರ್ಥನೆಯನ್ನು ಒಪ್ಪಿ, ತಮ್ಮ ಇಚ್ಛೆಗನುಸಾರವಾಗಿ ನನ್ನಿಂದ ಕೈಂಕರ್ಯವನ್ನು ಸ್ವೀಕರಿಸಬೇಕು" ಎಂದು ಆಸೆ ಪಟ್ಟನಂತೆ.

ಇನ್ನು ಮತ್ತೆ, ತಾನೇ ಅಡಿಗೆ ಮಾಡಿ ತಾನೇ ಭೋಜನ ಮಾಡುವ ಒಬ್ಬನು, ದಿನೇ ದಿನೇ, ತನ್ನ ಹೊಟ್ಟೆಯನ್ನು ಹಿರಿದಾಗಿ ಮಾಡಿಕೊಳ್ಳುತ್ತಾನೆ; ಬೇರೆಯವರೊಂದಿಗೆ ಊಟ ಮಾಡಲು ಇಷ್ಟಪಡುವುದಿಲ್ಲ. ಇವನ ಹಾಗೆಯೇ, ಲಕ್ಷ್ಮಣನೂ, ತಾನೇ ಕಾಡಿನಲ್ಲಿ ಸೀತಾ–ರಾಮರೆಂಬ ದಂಪತಿಗಳಿಗೆ, ಎಲ್ಲಾ ಕೈಂಕರ್ಯಗಳನ್ನೂ ಮಾಡಿ—ಮಾಡಿ ಕೈಂಕರ್ಯದ ರುಚಿಯನ್ನು ನೋಡಿರುವನು; ಭರತನೇ ಮೊದಲಾದವರೊಂದಿಗೆ ಸೇರಿ ತಾನೂ ಒಂದು ಕೈಂಕರ್ಯ ಮಾಡಲು ಒಪ್ಪುವವನಾಗಿಲ್ಲ. ಈ ರೀತಿ ಒಪ್ಪದಿದ್ದನ್ನು ಎಲ್ಲಿ ಕಂಡೆವು? ಎಂದರೆ. ಶ್ರೀ ರಾಮಚಂದ್ರನು ವನವಾಸವನ್ನು ಮುಗಿಸಿ, ಪುನಃ ಅಯೋಧ್ಯೆಗೆ ಹಿಂತಿರುಗಿ. ರಾಜ್ಯಾಭಿಷೇಕ ಮಾಡಿಕೊಳ್ಳುವಾಗ ಒಂದು ಕೈಲಿ

ಖನಿತ್ರಿಯನ್ನು ಎತ್ತಿ ಹಿಡಿದು, ಮತ್ತೊಂದು ಕೈಲಿ ಬಳ್ಳಿಯ ಹಾರೆಯನ್ನು ಬೀಸುತ್ತಾ, ಎರಡು ಕೈಂಕರ್ಯಗಳನ್ನೂ ಒಂದೇ ಸಮಯದಲ್ಲಿ ಮಾಡಿದನು.

ಇಲ್ಲಿ, "ನಚ ಸೀತಾ ತ್ವಯಾ ಹೀನಾನ ಚಾಹಮಪಿ ರಾಘವ...ಜಲಾನ್ಮತ್ಸ್ಯಾ ವಿವೋದ್ಧೃತೌ।

ಧನುರಾದಾಯ ಸಗುಣಂ...ಅಗ್ರತಸ್ತೇ ಗಮಿಷ್ಯಾಮಿ ಪಂಥಾನ ಮನು ದರ್ಶಯನ್। ಆಹರಿಷ್ಯಾಮಿ ತೇ ನಿತ್ಯಂ ಮೂಲಾನಿಚ ಫಲಾನಿಚ॥"

"ಭವಾಂಸ್ತು, ಸಹ ವೈದೇಹ್ಯಾ ಗಿರಿ ಸಾನುಷು ರಂಸ್ಯತೇ। ಅಹಂಸರ್ವಂ ಕರಿಷ್ಯಾಮಿ ಜಾಗ್ರತಃ ಸ್ವಪತಶ್ಚ ತೇ॥"

"ಶ್ರೂಯತಾಮಿತಿ ಸಾಂವದ। ಭಕ್ತ್ಯಾ ಚಿ.ಚಾಮರಂ ದಿವ್ಯಂ ಧೃತವಾನ್ ಲಕ್ಷ್ಮಣಸ್ತದಾ॥"

ಎಂಬುದನ್ನು ಕಾಣತಕ್ಕದ್ದು. ಇನ್ನು,

ಇಲ್ಲಿ ಮತ್ತೊಂದು ಮುಖ್ಯವಾದ ವಸ್ತುವನ್ನು ವಿಮರ್ಶಿಸಿ ತಿಳಿಯಬೇಕಾದ್ದು ಅವಶ್ಯಕ. ಮುಂದೆ ಹೇಳಿರುವ ಭಾಗಗಳಲ್ಲಿ, "ಶ್ರೀ ರಾಮಚಂದ್ರನು, ಬ್ರಹ್ಮಶಬ್ದ ವಾಚ್ಯನಾದ ನಾರಾಯಣನೇ" ಎನ್ನುವುದು ನಮಗೆ ತಿಳಿದು ಬರುತ್ತದೆ. ಆದರೂ ಸಹ, "ಆ ಪರಮಾತ್ಮನು, ಶ್ರೇಷ್ಠ ಸದ್ಗುಣಗಳಿಲ್ಲದವನೇ? ಅಲ್ಲ, ದೋಷಗುಣಗಳು ಕಿಂಚಿತ್ತೂ ಇಲ್ಲದೆ; ಶ್ರೀ ಕಲ್ಯಾಣಗುಣ ತುಂಬಿ ಇರುವವನೇ?" ರಾಮಾಯಣವು ಪರಮಾತ್ಮನನ್ನು ಹೇಳುವುದು ಯಾವ ರೀತಿ ಎಂಬ ಪ್ರಶ್ನೆ ಇಲ್ಲಿ ಉಂಟಾಗುವುದು ಯೋಗ್ಯವಾದದ್ದೇ. ಇದಕ್ಕೆ ಉತ್ತರ ಕೆಳಕಂಡಂತೆ—

ಒಂದು ಗ್ರಂಥದ ಸತ್ಯವಾದ ಅರ್ಥವನ್ನು ತಿಳಿಯುವಾಗ, ಆ ರೀತಿ ತಿಳಿಯುವು ದಕ್ಕೆ ಅನೇಕ ಕಾರಣವುಂಟು; ಆ ಮಾರ್ಗವನ್ನು ಅನುಸರಿಸಿ ನೋಡುವಲ್ಲಿ ಸತ್ಯತೆಯು ಚೆನ್ನಾಗಿ ತಿಳಿಯುತ್ತದೆ. ರಾಮಾಯಣವು ಮೊದಲಿನಲ್ಲೂ, ಮಧ್ಯದಲ್ಲಿಯೂ, ಕೊನೆ ಯಲ್ಲಿಯೂ ಭಗವಂತನನ್ನು ಯಾವ ರೀತಿ ಹೇಳುತ್ತದೆಯೋ, ಅದನ್ನು ಅದೇ ರೀತಿ ಪ್ರಕಟ ಪಡಿಸಿದ್ದೇ ಅದರ ಮೇಲೆ ಹೇಳಿರುವ ಮಾರ್ಗವಾಗುತ್ತದೆ.

ರಾಮಾಯಣವು ಮೊಟ್ಟ ಮೊದಲಿನಲ್ಲಿ ಶ್ರೀ ರಾಮನನ್ನು ಹೇಳುವುದು ಯಾವ ರೀತಿ ಎಂದರೆ, "ಸದ್ಗುಣಗಳು ಇಲ್ಲದವ" ಎಂದು ಹೇಳಲಿಲ್ಲ; ಕೆಟ್ಟ ಗುಣಗಳು ಸ್ವಲ್ಪವೂ ಇಲ್ಲದೆ, ಶ್ರೇಷ್ಠಗುಣಗಳನ್ನೇ ಪಡೆದಿರುವವನು ಎಂದೇ ಹೇಳುತ್ತದೆ.

ನಾರದ ಮುನಿವರ್ಯರನ್ನು ಕುರಿತು, ವಾಲ್ಮೀಕಿ ಋಷಿಯು ಅತ್ಯಂತ ವಿನಯ ದಿಂದ, "ಈ ಕಾಲದಲ್ಲಿ ಪ್ರಪಂಚದಲ್ಲಿ ಶೀಲ-ಸದ್ಗುಣ ಮೊದಲಾದ ಎಲ್ಲಾ ಒಳ್ಳೆಯ ಗುಣಗಳನ್ನು ಹೊಂದಿರುವವನು ಯಾರು?" ಎಂದು ಕೇಳಲು, ಆ ನಾರದ ಮುನಿಯು, "ಇಕ್ಷ್ವಾಕುವಂಶದಲ್ಲಿ ಅವತಾರ ಪಡೆದಿರುವ ಶ್ರೀ ರಾಮಚಂದ್ರ. ಸಮಸ್ತ ಕಲ್ಯಾಣ ಗುಣಗಳೊಂದಿಗೆ ಕೂಡಿ ಇರುವವನು. ಹೇಗೆ ಸಮುದ್ರವು ತನ್ನೊಳಗಡೆ ಶ್ರೇಷ್ಠರತ್ನ ಮುಂತಾದ ವಸ್ತುಗಳನ್ನು ಮತ್ತೊಬ್ಬರು ಕಾಣದೆ ಇರುವ ಹಾಗೆ ಮರೆಸಿ ಇಟ್ಟು

ಕೊಂಡಿರುವುದೋ, ಹಾಗೆಯೇ, ಶ್ರೀ ರಾಮಚಂದ್ರನು ತನ್ನಲ್ಲಿರುವ ಶ್ರೇಷ್ಠವಾದ ಗುಣಗಳನ್ನು ಮತ್ತೊಬ್ಬರು ತಿಳಿಯದ ಹಾಗೆ ಮರೆಸಿ ಇಟ್ಟಿರುವನು. ಶೌರ್ಯಸಾಹಸದಲ್ಲಿ ವಿಷ್ಣುವಿನಂತಹವನು. ಹದಿನಾರು ಕಲೆಗಳಿಂದ ಕೂಡಿರುವ ಪೂರ್ಣಚಂದ್ರನಂತೆ ನೋಡಲು ಪ್ರಿಯವುಳ್ಳವನು; ಕಾಲಾಗ್ನಿಯಂತೆ ಕ್ರೋಧವುಳ್ಳವನು; ತಾಳ್ಮೆಯಲ್ಲಿ ಭೂಮಾತೆಯಂತೆ; ಸತ್ಯದಲ್ಲಿ ಧರ್ಮದೇವತೆಯೇ ಪ್ರತ್ಯಕ್ಷನಾಗಿರುವವನಂತೆ '' ಎಂದು ಉತ್ತರವನ್ನು ಹೇಳಿದನು.

ಇಲ್ಲಿ, ''ಕೋನ್ವಸ್ಮಿನ್ ಸಾಂಪ್ರತಂ ಲೋಕೇ ಗುಣವಾನ್ ಕಶ್ಚ ವೀರ್ಯವಾನ್'' ಎನ್ನುವ ವಾಲ್ಮೀಕಿ ಮುನಿಯ ಮಾತನ್ನು,

'' ಇಕ್ಷ್ವಾಕು ವಂಶ ಪ್ರಭವೋ ರಾಮೋನಾಮ ಜನೈಃ ಶ್ರುತಃ ।
ಸಮುದ್ರ ಇವ ಗಾಂಭೀರ್ಯೇ ವಿಷ್ಣುನಾ ಸದೃಶೋವೀರ್ಯೇ
ಸೋಮವತ್ಪ್ರಿಯ ದರ್ಶನಃ ।
ಕಾಲಾಗ್ನಿ ಸದೃಶಃ ಕ್ರೋಧೇ ಕ್ಷಮಯಾ ಪೃಥ್ವೀ ಸಮಃ ।
ಸತ್ಯೇ ಧರ್ಮ ಇವಾಪರಃ ॥ ''—ಎನ್ನುವ ನಾರದ ಮಹರ್ಷಿಯ ಮಾತುಗಳನ್ನು ಕಾಣುತ್ತೇವೆ. ಈ ರೀತಿ ವೇದಾರ್ಥವನ್ನು ಸ್ಪಷ್ಟವಾಗಿ ತಿಳಿಸಲು (ಉಪಬೃಹ್ಮಣವಾಗಿರುವ) ರಾಮಾಯಣದ ಮೊದಮೊದಲಿನಲ್ಲಿಯೇ ಶ್ರೀರಾಮನ ಕಲ್ಯಾಣಗುಣಗಳನ್ನು ಆಚಾರ್ಯನು ಶಿಷ್ಯನಿಗೆ ಹೇಳಿರುವ ರೀತಿಯಲ್ಲಿ ಅತಿ ಸರಳವಾಗಿ ತಿಳಿಸಿರುವುದನ್ನು ಕಂಡೆವು. ಇನ್ನು ಮುಂದೆಯೂ ಮಧ್ಯಭಾಗದಲ್ಲಿ ಇದೇ ರೀತಿಯಲ್ಲಿ ಕಾಣುತ್ತೇವೆ.

ಅಯೋಧ್ಯಾಕಾಂಡದ ಮೊದಲಿನಲ್ಲಿ ಹೇಳಿರುವ ವಿಚಾರವು ಈ ಕೆಳಕಂಡಂತೆ ಇದೆ. ದಶರಥ ಮಹಾರಾಜನು ತುಂಬಿದ ಸಭೆಯಲ್ಲಿ ಸಭಾಸದರನ್ನು ಕುರಿತು ಈ ರೀತಿಯಾಗಿ ಬಿನ್ನವಿಸಿಕೊಂಡನು. ನಾನು ಆಳುತ್ತಿರುವ ಈ ರಾಜ್ಯವು ಅತಿವಿಸ್ತಾರವಾದುದು. ಇದನ್ನು ನನಗಿಂತ ಪೂರ್ವಜರು ಅತಿ ದಕ್ಷತೆಯಿಂದ ಆಳಿ ಮನಃಪೂರ್ವಕವಾಗಿ ರಕ್ಷಿಸಿಕೊಂಡು ಬಂದರು. ಅವರ ವಂಶದಲ್ಲಿ ಹುಟ್ಟಿದ ನಾನು, ಮನುಧರ್ಮವನ್ನು ಅನುಸರಿಸಿ ನನ್ನ ಜ್ಞಾನ ಶಕ್ತಿಗಳಿಗನುಸಾರವಾಗಿ ಇದುವರೆವಿಗೂ ರಕ್ಷಿಸಿಕೊಂಡು ಬಂದೆನು. ನನ್ನ ಈ ಶರೀರವು ವೃದ್ಧಾಪ್ಯವನ್ನು ಧರಿಸಿತು. ಆದ್ದರಿಂದ ಅರಸುತನದ ಗದ್ದುಗೆಯನ್ನು ಶ್ರೀ ರಾಮಚಂದ್ರನಿಗೆ ಒಪ್ಪಿಸಿ ಉಳಿದ ಆಯುವನ್ನು ವಿಯೋಗಚಿಂತನೆಯಿಂದ ಕಳೆಯಲು ಇಷ್ಟಪಡುತ್ತೇನೆ. ಶ್ರೀ ರಾಮಚಂದ್ರ ಮೂರ್ತಿಗೆ ರಾಜ್ಯಾಭಿಷೇಕವನ್ನು ಮಾಡಿ, ರಾಜ್ಯವನ್ನು ಸಂಪೂರ್ಣವಾಗಿ ಅವನಿಗೆ ಒಪ್ಪಿಸುವ ಈ ಕಾರ್ಯವನ್ನು ನೀವೆಲ್ಲರೂ ಅನುಮೋದಿಸಿ, ನಿಮ್ಮ ನಿಮ್ಮ ಅಭಿಪ್ರಾಯವನ್ನು ತಿಳಿಸಬೇಕೆಂದು ಪ್ರಾರ್ಥಿಸುತ್ತೇನೆ ಎಂದನು.

ಈ ವಿಚಾರವನ್ನು ಕೇಳಿದ ಸಭಾಸದರೆಲ್ಲರೂ ಅಪರಿಮಿತ ಆನಂದವನ್ನು ಹೊಂದಿದರು ಮತ್ತು ಜೋರಾಗಿ ಘೋಷಣೆಗಳನ್ನು ಮಾಡಿದರು. ಆ ಮಹಾಘೋಷದಿಂದ ಹೊರಟ ಪ್ರತಿಧ್ವನಿಯಿಂದ ಅಲ್ಲಿನ ವಿಮಾನವು ಅಲ್ಲಾಡಿತು. ಈ ರೀತಿಯಾಗಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದ ಪುರಜನರು ಈಗಲೇ ಶ್ರೀ ರಾಮಚಂದ್ರನು

ರಾಜ್ಯಾಭಿಷಿಕ್ತನಾಗಿ ಕಿರೀಟವನ್ನು ಧರಿಸಿ, ಪಟ್ಟದಾನೆಯ ಮೇಲೆ ಕುಳಿತು ಛತ್ರ ಚಾಮರಗಳ ನೆರಳಿನಲ್ಲಿ ಮೆರವಣಿಗೆ ಬರುವ ಸೌಂದರ್ಯವನ್ನು ಕಾಣಬೇಕೆನ್ನುತ್ತಾರೆ.

ಹೀಗೆ ತಮ್ಮ ಹರ್ಷವನ್ನು ವ್ಯಕ್ತಪಡಿಸಿದ ಜನರನ್ನು ಕುರಿತು ದಶರಥ ಮಹಾಚಕ್ರವರ್ತಿಯು ಎಲ್ಲ ! ನೀವೆಲ್ಲರೂ ಉಚ್ಚಸ್ವರದಲ್ಲಿ ಘೋಷಣೆ ಮಾಡುವುದನ್ನು ನೋಡಿದರೆ ಇದುವರೆವಿಗೂ ನಿಮಗೆ ತೊಂದರೆ ಕೊಡುವಂತಹ ದಶರಥನು ರಾಜ್ಯವಾಳಿದನು. ಇಂತಹ ರಾಜನನ್ನು ಬಿಟ್ಟು, ಸಾತ್ವಿಕ ಪ್ರಕೃತಿಯುಳ್ಳ ಶ್ರೀ ರಾಮಚಂದ್ರನು ಈ ರಾಜ್ಯವನ್ನು ವಹಿಸಿಕೊಂಡು ರಕ್ಷಿಸುತ್ತಾನೆ. ನಮಗೆ ಇನ್ನು ಒಳ್ಳೆಯಕಾಲ ಎನ್ನುವ ಅಭಿಪ್ರಾಯವು ತಿಳಿದುಬರುತ್ತದೆ. ಈ ರೀತಿಯಾಗಿ ನನ್ನನ್ನು ತಿರಸ್ಕರಿಸಲು ನನ್ನಲ್ಲಿ ಏನಾದರೂ ದೋಷವನ್ನು ಕಂಡಿರಾ ಎನ್ನುತ್ತಾನೆ.

ದಶರಥ ಚಕ್ರವರ್ತಿಯ ಈ ಮಾತುಗಳನ್ನು ಕೇಳಿದ ಪುರಜನರು ಒಂದೇ ಅಭಿಪ್ರಾಯದಿಂದ ಮಹಾರಾಜಾಧಿರಾಜನೇ ಆಳಿದ ಮಹಾಸ್ವಾಮಿಯವರಿಗೂ ಒಂದು ದೋಷವುಂಟು. ಅದೇನೆಂದರೆ, ಅಪಾರವಾದ ಗುಣಸಾಗರನೇ ಆದ ಶ್ರೀ ರಾಮಚಂದ್ರನನ್ನೇ ತಾವು ಪುತ್ರನನ್ನಾಗಿ ಪಡೆದಿರುವುದೇ ತಮಗಿರುವ ದೋಷ. ಆದ್ದರಿಂದ ಸ್ವಾಮಿಯವರನ್ನು ಇಷ್ಟ ಪಡುವುದಿಲ್ಲಾ.

ಈ ರೀತಿ ರಾಮಾಯಣದ ಮಧ್ಯಭಾಗದಲ್ಲಿ ಶ್ರೀ ರಾಮನ ಅನಂತ ಕಲ್ಯಾಣ ಗುಣಗಳನ್ನು ಸಂಕ್ಷಿಪ್ತವಾಗಿ ತಿಳಿದುಕೊಂಡೆವು. ಇನ್ನು ಮುಂದೆ ಅಂತ್ಯಭಾಗದಲ್ಲಿ ಏನಿದೆ ಎಂದು ಕಾಣುತ್ತೇವೆ.

ಶ್ರೀ ರಾಮಚಂದ್ರನು ಹದಿನಾಲ್ಕು ವರ್ಷ ವನವಾಸವನ್ನು ಮಾಡಿ, ಅಲ್ಲಿಂದ ಪುನಃ ಅಯೋಧ್ಯೆಗೆ ಹಿಂತಿರುಗಿ, ರಾಜ್ಯಾಭಿಷೇಕವನ್ನು ಮಾಡಿಕೊಂಡು ಹನ್ನೊಂದು ಸಾವಿರ ವರ್ಷಗಳ ಪರ್ಯಂತದವರೆವಿಗೂ ಆಳಿ ರಾಜ್ಯವನ್ನು ರಕ್ಷಿಸಿದನು. ಎಂಬುದು ಈ ಮಾತು ಚರಿತ್ರಾರ್ಹವಾದುದು ಮತ್ತು ಸತ್ಯವಾದುದು. ಶ್ರೀ ರಾಮಚಂದ್ರನ ಆಳ್ವಿಕೆಯನ್ನು ಸಮೃದ್ಧಿಯಾಗಿ ಕಂಡು ಆನಂದಿತರಾದ ಶ್ರೀ ವಾಲ್ಮೀಕಿಯು ಈ ರೀತಿ ಹೇಳಿರುತ್ತಾರೆ.

ಸರ್ವಂ ಮುದಿತಮೇವಾಸೀತ್ ।
ಸರ್ವೋಧರ್ಮಪರೋಽಭವತ್ ॥

ಶ್ರೀ ರಾಮಚಂದ್ರನ ಆಳ್ವಿಕೆಯಲ್ಲಿ ಪ್ರಜೆಗಳೆಲ್ಲರೂ ಮನಸ್ಸಂತೋಷದಿಂದಲೂ, ಅವರವರಿಗೆ ಉಚಿತವಾದ ಧರ್ಮದಲ್ಲಿ ನಿರತರಾಗಿದ್ದವರೂ ಆಗಿದ್ದರೆಂಬುದಾಗಿ ಶ್ರೀ ವಾಲ್ಮೀಕಿ ಮುನಿಯು ಹೇಳಿರುತ್ತಾರೆ. ಈ ರೀತಿ ಸರ್ವ ಸಮೃದ್ಧಿಯಾಗಿರಲು ಕಾರಣವೇನೆಂದರೆ, ಶ್ರೀ ರಾಮಚಂದ್ರನ ಅಪರಿಮಿತವಾದ ಸದ್ಗುಣಗಳೇ ಕಾರಣವಾಗಿದೆ. " ರಾಮೋರಾಜ್ಯ ಮುಪಾಸಿತ್ವಾ " ಎಂಬ ವಚನದಂತೆ, ಶ್ರೀ ರಾಮನು ತನ್ನ ತೇಜಸ್ಸಿನಿಂದ ಪ್ರಜೆಗಳನ್ನು ಅದಗಿಸಿ, ಭಯಪಡಿಸಿ ಎಂದೂ ಆಳಿದವನಲ್ಲಾ. ಬದಲಾಗಿ ತನ್ನ ಸದ್ಗುಣಗಳಿಗೆ ಸದೃಶವಾದ ಮತ್ತು ಪ್ರಿಯವಾದ ವಾಕ್ಯಗಳಿಂದ ಜನರ ಮನಸ್ಸನ್ನು ಅರಿತು ವಶಪಡಿಸಿಕೊಂಡು ಆಳಿದನೆನ್ನುತ್ತಾರೆ.

ಈ ರೀತಿಯಾಗಿ ರಾಮಾಯಣದಲ್ಲಿ ಶ್ರೀ ರಾಮಚಂದ್ರನು ಅಪಾರವಾದ ಸದ್ಗುಣಗಳಿಂದ ಕೂಡಿದವನು ಎಂದು ತಿಳಿದೆವು. ಲಕ್ಷ್ಮಣನು ಶ್ರೀ ರಾಮಚಂದ್ರನ ಸದ್ಗುಣಗಳಿಗೆ ಅತ್ಯಧಿಕವಾಗಿ ಮರುಳುಪಟ್ಟು ಪ್ರೇಮದಿಂದ ಎಲ್ಲಾ ಕೈಂಕರ್ಯವನ್ನು ಶ್ರೀ ರಾಮನಿಗೆ ಮಾಡಿದನು ಎಂಬುದನ್ನು ನಾವು "ಗುಣೈರ್ದಾಸ್ಯ ಮುಪಾಗತಃ" ಎಂಬ ಆ ಲಕ್ಷ್ಮಣನ ವಾಕ್ಯದಿಂದಲೇ ಚೆನ್ನಾಗಿ ತಿಳಿಯಬಹುದು.

ಈ ರೀತಿ ರಾಮಾಯಣದಲ್ಲಿ ಉಪಾಯವನ್ನು ನೋಡಿದೆವು. ಇನ್ನು ಐದು ವಸ್ತುಗಳಲ್ಲಿ ಒಂದಾಗಿರುವ ವಿರೋಧಿಯನ್ನು ಕಾಣುತ್ತೇವೆ.

"ವೇದಾಂತವೂ ವಿರೋಧಿಯೂ"

ಇದುವರೆವಿಗೂ ಭಗವಂತನನ್ನು ಜೀವನು ಪಡೆಯಲು ಯಾವುದು ಅಡ್ಡಿಯಾಗಿರುತ್ತದೆಯೋ ಅದನ್ನು ವಿರೋಧಿ ಎಂಬುದಾಗಿ ಹೇಳಿದೆವು. ವೇದಾಂತವು ಅಜ್ಞಾನ, ಕರ್ಮ, ಪ್ರಕೃತಿ ಸಂಬಂಧ ಮೊದಲಾದುವುಗಳನ್ನು ವಿರೋಧಿಯಾಗಿ ಹೇಳಿದೆ. ಇದನ್ನೇ ಸ್ವಲ್ಪ ವಿವರವಾಗಿ ತಿಳಿಯಬಹುದು.

ಅಜ್ಞಾನ ಎಂದರೆ, ಕೈ ಕಾಲು ಮುಂತಾದ ಅವಯವಗಳಿಂದ ಕೂಡಿದ ಪಿಂಡವೇ ಆತ್ಮಾ ಎಂದು ತಿಳಿಯುವ ಅಭಿಪ್ರಾಯ. ತಾನು ಭಗವಂತನಿಗೆ ಸ್ವಂತದವನಲ್ಲ. ತನಗಾಗಿಯೇ ಇರುವವನು ಎಂದು ತಿಳಿಯುವ ವಿಚಾರವು, ದೇಹಾತ್ಮಾಭಿಮಾನ ಎನ್ನುವುದು ಮತ್ತೊಂದು ಸ್ವಾತಂತ್ರ್ಯಾಭಿಮಾನ ಎಂದು ಹೇಳಲ್ಪಡುತ್ತದೆ.

ದೇಹಾತ್ಮಾಭಿಮಾನವನ್ನು ಉದಾಹರಣೆಗಳೊಂದಿಗೆ ವಿವರವಾಗಿ ತಿಳಿಯೋಣ. ಕಬ್ಬಿಣದ ತುಂಡು ಮತ್ತು ಬೆಂಕಿ ಈ ಎರಡೂ ಬೇರೆ ಬೇರೆ ವಸ್ತುಗಳಾಗಿದ್ದರೂ, ಬೆಂಕಿಯಲ್ಲಿಟ್ಟು ಚೆನ್ನಾಗಿ ಕಾಯಿಸಿದ ಆ ಕಬ್ಬಿಣದ ತುಂಡು ಬೆಂಕಿಯ ಸಂಬಂಧದಿಂದ ಬೆಂಕಿಯ ಹಾಗೆಯೇ ಹೇಗೆ ತೋರುತ್ತದೆಯೋ ಹಾಗೆಯೇ ಆತ್ಮಾ ಮತ್ತು ಶರೀರ ಬೇರೆ ಬೇರೆ ವಸ್ತುಗಳಾಗಿದ್ದರೂ ಆ ಆತ್ಮನೂ ಶರೀರ ಸಂಬಂಧದ ಆಧಿಕ್ಯದಿಂದ ಶರೀರವಾಗಿಯೇ ತೋರುತ್ತದೆ ಎಂಬುದನ್ನು ತಿಳಿಯಬೇಕು.

ಈ ರೀತಿ ಶರೀರವೇ ಆತ್ಮ ಎಂದು ತಿಳಿದಿದ್ದೇ ಆದರೆ, ನಿಜಸ್ಥಿತಿಯನ್ನು ಸ್ವಲ್ಪವೂ ತಿಳಿಯಲಾಗುವುದಿಲ್ಲ. ಆದ್ದರಿಂದ ಜೀವನನ್ನು ನಿದ್ರಿಸುವವನಾಗಿಯೇ ಇರುವವನೆಂಬ "ಅನಾದಿಮಾಯಯಾ ಸುಪ್ತಃ" ಎಂಬ ಶ್ರುತಿಯು ವ್ಯಕ್ತವಾಗುತ್ತದೆ. ಈ ಹೇಳಲ್ಪಟ್ಟ ಶ್ರುತಿಯಲ್ಲಿ ಮಾಯಯಾ ಶಬ್ದವು ಸತ್ತ್ವ, ರಜಸ್ ಮತ್ತು ತಮಸ್ ಎಂಬ ಮೂರು ಗುಣಗಳಿಂದ ಕೂಡಿದ ಪ್ರಕೃತಿ ಎನ್ನುವ ಅಚಿತ್ತನ್ನು ಹೇಳುವ ಮಾರ್ಗದಲ್ಲಿ ಶರೀರ ಎಂಬ ವಸ್ತುವನ್ನು ಸೂಚಿಸುತ್ತದೆ. ಊಟ, ನಿದ್ರೆಗಳನ್ನು ಬಯಸಿ ಅವುಗಳನ್ನು ಪಡೆಯಲು ಬಳಲಿ ಅಲೆಯುವಾಗಲೂ, ಜೀವನಿಗೆ ಈ ಅಜ್ಞಾನವು ಉಂಟು. ಆದರಿಂದ ಸ್ವಲ್ಪ ಮಾತ್ರವೂ ಕ್ಷೇಮವಿಲ್ಲ. ಯಾವಾಗ ಅಜ್ಞಾನವು ತನ್ನ ಸುಷುಪ್ತ್ಯವಸ್ಥೆಯನ್ನು ನೀಗಿ ಸತ್ಯತೆಯನ್ನು ತಿಳಿಯುತ್ತದೆಯೋ ಆಗ ಮಾತ್ರ ಸುಖವುಂಟು.

“ಅನಾದಿಮಾಯಯಾ ಸುಪ್ತಃ” ಎನ್ನುವ ವಾಕ್ಯದೊಂದಿಗೆ ಸಂಬಂಧವಿರುವ “ಯದಾಜೀವಃ ಪ್ರಬುಧ್ಯತೇ” ಎನ್ನುವ ಶ್ರುತಿಯನ್ನು ಕಾಣುವವರಿಗೆ ದೇಹಾತ್ಮಾಭಿಮಾನವು ಅಡ್ಡಿ ಎನ್ನುವುದು ಚೆನ್ನಾಗಿ ತಿಳಿಯುತ್ತದೆ. ಈ ರೀತಿ ದೇಹಾತ್ಮಾಭಿಮಾನವನ್ನು ಸಂಕ್ಷಿಪ್ತವಾಗಿ ತಿಳಿದೆವು. ಇನ್ನು ಮುಂದೆ ಸ್ವಾತಂತ್ರ್ಯಾಭಿಮಾನವನ್ನು ತಿಳಿಯಬಹುದು.

“ಆತ್ಮನು ತಿಳಿವಳಿಕೆ ಉಳ್ಳವನು” ಎನ್ನುವಾಗಲೇ ಸ್ವತಂತ್ರನು ಎಂದು ತಿಳಿಯುತ್ತದೆ. ಹೇಗೆ ಎಂದರೆ, ಈ ಜೀವನು ಮೊದಲಿನಲ್ಲಿ ಒಂದು ವಸ್ತುವನ್ನು ಯಥಾಸ್ಥಿತಿಯಾಗಿ ತಿಳಿಯುತ್ತಾನೆ. ಅನಂತರ ಆ ವಸ್ತುವಿನ ಶ್ರೇಷ್ಠತೆಯನ್ನು ಕುರಿತು ಅದನ್ನು ಇಚ್ಛಿಸುತ್ತಾನೆ; ಅದಕ್ಕೆ ತಕ್ಕ ಕಾರಣವನ್ನು ಹುಡುಕುತ್ತಾನೆ, ಕೊನೆಯಲ್ಲಿ ಅದನ್ನು ಪಡೆದು ಸುಖದ ಅನುಭವವನ್ನು ಹೊಂದುತ್ತಾನೆ.

“ಜಾನಾತಿ, ಇಚ್ಛತಿ ಯತತೇ ಕರೋತಿ, ಅನುಭವತಿ” ಎನ್ನುತ್ತಾರೆ. ಇವುಗಳನ್ನು ನೋಡುವಲ್ಲಿ ಜ್ಞಾನಿಯಾದ ಜೀವನು, ತನಗಾಗಿ ಒಂದನ್ನು ಅಪೇಕ್ಷಿಸಿ, ಪ್ರಯತ್ನದಿಂದ ಅದನ್ನು ಪಡೆದು ಸುಖಿಸುವನೆಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಇವನನ್ನು “ಸ್ವತಂತ್ರನೆಂದು ಹೇಳುತ್ತಾರೆ.”

ಅಷ್ಟಾಕ್ಷರದಲ್ಲಿ ಮೊದಲ ಪದ ಪ್ರಣವ. ಆ ಪ್ರಣವ ಅ, ಉ, ಮ ಎಂಬ ಅಕ್ಷರವು. ಆ ಮೂರರಲ್ಲಿ “ಮ” ಎಂಬ ಅಕ್ಷರ ಜ್ಞಾನಿಯಾದ ಚೇತನನ್ನು ಸೂಚಿಸುತ್ತದೆ.

ತಿಳಿವಳಿಕೆ ಉಳ್ಳವನು “ಮ” ಎಂಬ ಅಕ್ಷರದಿಂದಲೂ ನಾನು ಇದನ್ನು ತಿಳಿದಿರುತ್ತೇನೆ ಎನ್ನುವ ಅನುಭವದಿಂದಲೂ “ಜೀವನು ಸ್ವತಂತ್ರನು” ಎಂಬುದನ್ನು ನಾವು ತಿಳಿಯಬಹುದು. ಈ ರೀತಿ ತನ್ನನ್ನು ಸ್ವತಂತ್ರನೆಂದು, ತನ್ನ ಇಷ್ಟಕ್ಕೆ ಅನುಸಾರವಾದ ವಿಚಾರದಲ್ಲಿ ಪ್ರಯತ್ನಪಟ್ಟು, ಪಡೆದು, ಅನುಭವಿಸುವುದಾಗಿ ತಿಳಿಯುವ ಸಮಯದಲ್ಲಿ, ನಿಜವಾದ ಜ್ಞಾನವನ್ನು ಪಡೆದಿರುವುದಿಲ್ಲ. ತನ್ನ ಸ್ಥಿತಿಗನುಸಾರವಾದ ಫಲವನ್ನು ಪಡೆಯಲಾರನು.

ಆದುದರಿಂದಲೇ, ಅಷ್ಟಾಕ್ಷರದ ಮಧ್ಯದಲ್ಲಿ ಅಡಕವಾಗಿರುವ “ನಮಃ” ಎನ್ನುವ ವಾಕ್ಯವು “ಮ” ಎಂಬ ಅಕ್ಷರದಿಂದ ತಿಳಿದಿರುವ ಜೀವನಸ್ವಾತಂತ್ರ್ಯ ಸ್ಥಿತಿಯನ್ನು ಇಲ್ಲದ ಹಾಗೇ ಮಾಡಿ ಪಾರತಂತ್ರ್ಯ ನಿಲುವೇ, ಇವನಿಗೆ ಯೋಗ್ಯವಾದ ಹಿರಿಮೆಯನ್ನು ಉಂಟುಮಾಡುವುದೆಂದು ತಿಳಿಯಪಡಿಸುತ್ತದೆ. “ನಮಃ” ಎನ್ನುವುದರಲ್ಲಿ “ಮನ” ಎನ್ನುವ ಅಕ್ಷರಗಳು ವಿಭಾಗ ಮಾಡಿ ಸೇರಿಸಿ “ನನಗೆ ನಾನು ಇಲ್ಲ”. ಭಗವಂತನಿಗೇ ಸೇರಿದವನು ಎಂಬ ವಿಚಾರವನ್ನುಳ್ಳದ್ದಾಗಿದೆ. ಇದನ್ನೇ ಮುಂದೆ ತಿಳಿಯಪಡಿಸಿದೆ.

“ಪಾರತಂತ್ರ್ಯ ಸ್ಥಿತಿಯು ತನಗೆ ನಿಜವಾಗಿಯೂ ತಿಳಿದದ್ದೇ ಆದರೆ, ಒಳ್ಳೆಯದಾಗುತ್ತದೆ. ಆ ಪಾರತಂತ್ರ್ಯ ಸ್ಥಿತಿಗೆ ವ್ಯತಿರಿಕ್ತವಾಗಿ ಸ್ವಾತಂತ್ರ್ಯಸ್ಥಿತಿಯನ್ನು ತಿಳಿದದ್ದೇ

ಆದರೆ ಒಳ್ಳೆಯದಾಗುವುದಿಲ್ಲ ಎನ್ನುವುದು ಅಷ್ಟಾಕ್ಷರ ಮಂತ್ರದಲ್ಲಿ ತಿಳಿದು ಬಂದ ಸಾರಾರ್ಥವಾದುದರಿಂದ ಸ್ವಾತಂತ್ರ್ಯಾಭಿಮಾನ'' ಅಡ್ಡಿ ಎನ್ನುವುದು ಸುಸ್ಪಷ್ಟವಾಗಿದೆ.

ಇನ್ನು ಮುಂದೆ ಕರ್ಮವು ಅಡ್ಡಿ ಎಂಬುದನ್ನು ತಿಳಿಯೋಣ: ಪುಣ್ಯ, ಪಾಪ, ಕರ್ಮ ಎಂಬುದು ವ್ಯಕ್ತವಾಗುತ್ತದೆ. ಈ ಕರ್ಮ ಭಗವಂತನನ್ನು ಸೇರಗೊಡಿಸದೇ ಅಡ್ಡಿಯನ್ನುಂಟು ಮಾಡುತ್ತದೆ. ಆದ್ದರಿಂದ, ''ವಿರೋಧಿ'' ಎನ್ನಲ್ಪಡುತ್ತದೆ.

ಆದರೆ, ಅನೃತವನ್ನು ಹೇಳುವುದು ಮುಂತಾದುದು ಪಾಪವೆಂದು ಹೇಳಿದರೆ, ಅದನ್ನು ನಮ್ಮ ಮನಸ್ಸು ಒಪ್ಪುವ ಹಾಗೆ, ಪುಣ್ಯವೂ ಅಡ್ಡಿ ಎಂದರೆ ಅದನ್ನು ನಮ್ಮ ಮನಸ್ಸು ಒಪ್ಪುತ್ತದೆಯೇ ಖಂಡಿತಾ ಇಲ್ಲ. ಸತ್ಕರ್ಮ ಈ ರೀತಿ ಇರುವಲ್ಲಿ ಪುಣ್ಯವನ್ನು ಅಡ್ಡಿ ಎನ್ನುವುದು ಹೇಗೆ ಎಂದು ಕೆಲವರಿಗೆ ಇಲ್ಲಿ ಸಂದೇಹವುಂಟಾಗಬಹುದು. ಇದಕ್ಕೆ ಪರಿಹಾರ ಈ ಕೆಳಕಂಡಂತೆ ಇದೆ. ಬುಭುಕ್ಷು, ಮುಮುಕ್ಷು ಎಂದು ಮನುಷ್ಯರನ್ನು ಎರಡು ರೀತಿ ನೋಡಬೇಕು. ಸುಖವನ್ನು ಅಪೇಕ್ಷಿಸುವವನು ಬುಭುಕ್ಷುವೆಂದೂ, ಪರಮಾತ್ಮನನ್ನು ಪಡೆಯಬೇಕೆಂದು ಇಚ್ಛಿಸುವವನನ್ನು ಮುಮುಕ್ಷು ಎಂದೂ ಕರೆಯುತ್ತಾರೆ. ಬುಭುಕ್ಷುವಿನ ನಿಲುವಿಗೆ ಏರ್ಪಟ್ಟ ಪಾಪ, ಪುಣ್ಯಗಳ ಒಂದೊಂದು ಒಳ್ಳೆಯದಕ್ಕೂ ಪುಣ್ಯವೇ ಕಾರಣ ಎಂದು ಹೇಳಲ್ಪಟ್ಟಿದೆ. ಉದಾಹರಣೆಗೆ ಈ ಪ್ರಪಂಚದಲ್ಲಿ ಪಶು, ಭೂಮಿ, ಪುತ್ರ ಮುಂತಾದ ಒಳ್ಳೆಯದಕ್ಕೆ ಕಾರಣವಾಗಿರುವ ಪುಣ್ಯಗಳನ್ನು ನಾವು ಕಾಣಬಹುದು. ಈ ಪುಣ್ಯವು ಪರಮ ಪುರುಷನನ್ನು ಅಪೇಕ್ಷಿಸುವವರಿಗೆ (ಮುಮುಕ್ಷುವಿಗೆ) ಪಾಪ–ಪುಣ್ಯಗಳ ಫಲವನ್ನು ಕೊಟ್ಟು ತಡೆಯಾಗಿರುವುದರಿಂದ, ಪಾಪಗಳೇ ಆಗುತ್ತದೆ.

''ಅಶ್ವ ಇವ ರೋಮಾಣಿ ವಿಧೂಯ ಪಾಪಂ'' ಎಂಬ ಶ್ರುತಿ ವಾಕ್ಯದಲ್ಲಿ ಕುದುರೆಯು ತನ್ನ ಕೂದಲನ್ನು ಒದರುವ ಹಾಗೆ ಪಾಪ–ಪುಣ್ಯಗಳನ್ನು ಒದರಿಬಿಡು. ಪರಮಾತ್ಮನ ಲೋಕವನ್ನು ಈ ಜೀವನು ಪಡೆಯಬೇಕೆನ್ನುವುದಾದರೆ, ಕರ್ಮ ಅಡ್ಡಿ ಎಂದು ತಿಳಿದು ಬರುತ್ತದೆ.

''ಪುಣ್ಯ–ಪಾಪ ವಿಧೂಯ ನಿರಂಜನಃ ಪರಮಂ ಸಾಮ್ಯ ಮುಪೈತಿ'' ಎಂಬ ವಾಕ್ಯವನ್ನು ಇಲ್ಲಿ ವ್ಯಕ್ತಪಡಿಸಿದೆ.

ಈ ಅಭಿಪ್ರಾಯದಿಂದ, ಅನೃತವನ್ನು ಹೇಳುವುದರಲ್ಲಿ ನಿಶ್ರೇಯಸರಾದವರನ್ನು ಹೇಳಿದ್ದರಿಂದ ಕರ್ಮವು ಅಡ್ಡಿ ಎನ್ನುವುದನ್ನು ತಿಳಿಯುತ್ತೇವೆ. ''ಪ್ರಕೃತಿ ಸಂಬಂಧ'' ಎಂಬಲ್ಲಿ ಪ್ರಕೃತಿ ಎಂಬ ನುಡಿ ದೇವ ಶರೀರ, ಮಾನವ ಶರೀರ ತಿರ್ಯಗ್‌ಸ್ಥಾವರ ಶರೀರ ಎಂದು ನಾಲ್ಕು ವಿಧಗಳಲ್ಲಿರುವ ಅಚಿತ್ತನ್ನು ಸೂಚಿಸುತ್ತದೆ. ಸಂಬಂಧ ಎನ್ನುವ ಮಾತು ಅಂಥಾ ಶರೀರಕ್ಕೂ ಮತ್ತು ಆತ್ಮನಿಗೂ ಇರುವ ವ್ಯವಹಾರವನ್ನು ಸೂಚಿಸುತ್ತದೆ. ಈ ಸಂಬಂಧವು ಭಗವಂತನನ್ನು ಸೇರಿ ಸಂಪೂರ್ಣವಾಗಿ ಅನುಭವಿಸಿ, ಕೈಂಕರ್ಯವನ್ನು ಮಾಡಿ ಅವನನ್ನು ಸಂತುಷ್ಟ ಪಡಿಸಲು ಅಡ್ಡಿಯಾಗಿರುತ್ತದೆ.

ಈ ವಿಷಯವು ''ತಸ್ಯತಾವದೇವ ಚಿರಂ ಯಾವನ್ನ ವಿಮೋಕ್ಷ್ಯೆ ಅಥಸಂಪತ್ಸ್ಯೇ''

ಎನ್ನುವ ಶ್ರುತಿಯಿಂದ ಚೆನ್ನಾಗಿ ವಿದಿತವಾಗುತ್ತದೆ. ಈ ಶ್ರುತಿಯ ತಾತ್ಪರ್ಯ – "ಸತ್" ಎನ್ನುವ ಪರಮಾತ್ಮನನ್ನು ಬಯಸುವವನಿಗೆ ಈ ಶರೀರ ಸಂಬಂಧ ಇರುವವರೆಗೆ ವಿಳಂಬವಾಗುತ್ತದೆ. ಶರೀರ ಸಂಬಂಧವು ಮುಂದುವರಿಯದಂತೆ ಬಿಟ್ಟ ನಂತರ ಪರಮಾತ್ಮನನ್ನು ಪಡೆಯುತ್ತಾನೆ ಎಂಬುದು ಮತ್ತು ಇದರಿಂದ "ಶರೀರವು ಅಡ್ಡಿ" ಎನ್ನುವುದು ಸುಸ್ಪಷ್ಟವಾಗಿ ಪ್ರಕೃತಿ ಸಂಬಂಧವು ತಡೆ ಎಂಬುದು ತಿಳಿಯುತ್ತದೆ.

ಮೇಲೆ ತಿಳಿಸಿರುವ ಅಜ್ಞಾನ ಮುಂತಾದವುಗಳ ಹಾಗೆ ಅಜ್ಞಾನ ವಾಸನೆ, ಕರ್ಮ ವಾಸನೆ, ರುಚಿ ಮುಂತಾದವು ಪರಮಾತ್ಮನನ್ನು ಹೊಂದಲಾಗದಂತೆ ತಡೆಯನ್ನುಂಟು ಮಾಡುತ್ತದೆ. ಸರ್ಪ ಮುಂತಾದವುಗಳನ್ನು ಕಾಣುವಾಗ ಉಂಟಾಗುವ ಗಾಬರಿ ಮುಂತಾದವುಗಳಿಗೆ ಕಾರಣ ನಮ್ಮಲ್ಲಡಗಿರುವ ಅಜ್ಞಾನ ವಾಸನೆಯೇ ಆಗಿರುತ್ತದೆ.

ಕರ್ಮವಾಸನೆ ಯಾವುದೆಂದರೆ, ಪಾಪಕಾರ್ಯಗಳನ್ನೋ ಪುಣ್ಯಕಾರ್ಯಗಳೆಂಬುದನ್ನೋ ತಿಳಿಯದೇ, "ತೃಣ ಛೇದಕಂಡೂಯನಾದಿಗಳ್ ಪೋಲ್" ಎಂಬಂತೆ ಕಾರಣವು "ರುಚಿ" ಯೇ ಆಗಿರುತ್ತದೆ.

ಈ ರೀತಿ ಅಜ್ಞಾನ, ಕರ್ಮ, ಪ್ರಕೃತಿ ಸಂಬಂಧವಾದ ಅಜ್ಞಾನವಾಸನೆ, ಕರ್ಮವಾಸನೆ, ರುಚಿ ಇವುಗಳು ಪರಮಾತ್ಮನನ್ನು ಪಡೆಯಲು ಅಡ್ಡಿಯನ್ನುಂಟುಮಾಡುವುವು ಎಂಬುದಾಗಿ ತಿಳಿಯುತ್ತದೆ. ಮತ್ತೆ ಕೆಲವು ವೇದಾಂತಿಗಳ ಪ್ರಕಾರ "ಅಡ್ಡಿ" ಎಂಬ ಪದ ವಾಕ್ಯಾರ್ಥವನ್ನು ವಿವರಿಸಿದೆ.

"ತದ್ಯಥಾ ಹಿರಣ್ಯ ನಿಧಿಂ ನಿಹಿತ ಮಕ್ಷೇತ್ರಜ್ಞಾ ಉಪರ್ಯುಪರಿ
ಸಂಚರಂತೋ ನವಿಂದೇಯುಃ ಏವಮೇವೇಮಾಃ ಸರ್ವಾಃ ಪ್ರಜಾಃ
ಅಹರಹರ್ಗಚ್ಛಂತ್ಯ ಏತಂ ಬ್ರಹ್ಮಲೋಕಂ ನವಿಂದಂತಿ ಅನೃತೇನ
ಹಿ ಪ್ರತ್ಯೂಢಾಃ" ! ಎಂಬುದೇ ವೇದಾಂತ ವಾಕ್ಯ. ಈ ವಾಕ್ಯದ ಅರ್ಥ —

ಭೂಮಿಯ ಕೆಳಗೆ ಅಡಗಿಸಿಟ್ಟಿರುವ ವಸ್ತುವನ್ನು ಆ ಸ್ಥಳದ ವೈಶಿಷ್ಟ್ಯವನ್ನು ತಿಳಿಯದವರು ದಿನವಿಡೀ ಅದೇ ಭೂಮಿಯ ಮೇಲೆ ಸಂಚರಿಸುವರಾಗಿದ್ದಾಗ್ಯೂ ಹೇಗೆ ಆ ವಸ್ತುವನ್ನು ಪಡೆಯಲು ಅಸಮರ್ಥರಾಗಿರುವರೋ, ಹಾಗೆಯೇ ಅತ್ಯಧಿಕ ಶ್ರೇಷ್ಠ ಫಲವುಳ್ಳವನೂ, ಆತ್ಮನೂ ಆಗಿರುವ ಪರಮಾತ್ಮನನ್ನು ತಿಳಿಯದವನು, ಎಲ್ಲಾ ಸಮಯದಲ್ಲಿಯೂ ಅವನೊಂದಿಗೆ ಒಂದು ರೀತಿಯ ಸಂಬಂಧವನ್ನು ಹೊಂದಿದ್ದಾಗ್ಯೂ ಸಹ ಅವನನ್ನು ಪಡೆಯಲಾರನು. ಇವರು ಅನೃತವಾದ ಕಿಂಚಿತ್ ಅಜ್ಞಾನದಿಂದ ಆತ್ಮಾವಿನ ಸ್ಥಾನದಲ್ಲಿ ಇದ್ದರೂ ಸಹ ಆಕರ್ಷಿಸಲ್ಪಟ್ಟು ಮರೆತವರಾಗಿ ಇರುವರು ಎಂಬಂತೆ.

ಮುಂದೆ ತಿಳಿಸುವ ವಸ್ತುವನ್ನು ತಿಳಿಯೋಣ. ಕಪ್ಪೆ ಚಿಪ್ಪು ಬೆಳ್ಳಿಯಾಗಿ ತೋರಲು ಅಜ್ಞಾನ (ದೋಷ)ವೇ ಕಾರಣವೆಂಬುದು ಹೇಗೆ ಲೋಕಾನುಭವದಲ್ಲಿ

ತಿಳಿಯುತ್ತದೆಯೋ ಹಾಗೆಯೇ ಬ್ರಹ್ಮನು ಪ್ರಪಂಚವಾಗಿ ಕಾಣಲು ಕಾರಣ ಅಜ್ಞಾನವೆಂಬ ದೋಷವೇ ಆಗಿರುತ್ತದೆ. ಈ ವಿಚಾರವು ವೇದ ಪ್ರಮಾಣ್ಯಗಳಿಂದ ದೃಢಪಡುತ್ತದೆ. ಆ ದೋಷವು ಅವಿದ್ಯೆ, ಅಜ್ಞಾನ ಎಂಬುವ ಶಬ್ದಗಳಿಂದ ಸೂಚಿಸಲ್ಪಟ್ಟಿರುತ್ತದೆ. ಆ ಅಜ್ಞಾನವೂ ಮತ್ತು ಅದರಿಂದುಂಟಾಗುವ ಪ್ರಾಪಂಚಿಕ ದೃಶ್ಯಗಳೂ ಅನೃತವೆಂದು ತಿಳಿಯುತ್ತದೆ.

"ತತ್, ತ್ವಮ್, ಅಸಿ" ಎಂಬ ವೇದ ವಾಕ್ಯದಿಂದ "ಆತ್ಮಾ" ಒಬ್ಬನೇ ಸತ್ಯವಾದುದು ಎಂಬ ನಿಜಸ್ಥಿತಿಯು ಅರಿವುಂಟಾದಾಗ ಮೇಲೆ ಹೇಳಿರುವ ಅಜ್ಞಾನಗಳೂ ಅದರಿಂದುಂಟಾಗುವ ಕಾರ್ಯಗಳೂ ನಾಶವಾಗುವುದರಿಂದ ಅವು ಅನೃತ ವಸ್ತುಗಳು ಎಂದು ಸ್ಪಷ್ಟವಾಗಿ ತಿಳಿಸುತ್ತದೆ. ಇದನ್ನೇ ಮೇಲೆ ಹೇಳಿರುವ ಶ್ರುತಿ ವಾಕ್ಯವು ಪುಷ್ಟೀಕರಿಸುವ ಅನೃತ ಶಬ್ದವು ಎಂದು ತಿಳಿಯಬೇಕು. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ನೋಡುವವರಿಗೆ ಮೇಲೆ ತಿಳಿಸಿದ "ತದ್ಯಥಾ ಹಿರಣ್ಯ ನಿಧಿಂ............ ... ಅನೃತೇನ ಹಿ ಪ್ರತ್ಯೂಢಾಃ" ಎಂಬ ಶ್ರುತಿ ವಾಕ್ಯಕ್ಕೆ ಮೇಲೆ ತಿಳಿಸಿರುವ ಅರ್ಥವನ್ನು ತಾಳಿ ನೋಡಿದರೆ ಸರಿಹೊಂದುವುದಿಲ್ಲ ಎಂದು ತಿಳಿದುಬರುತ್ತದೆ. ಮತ್ತು ಇದರ ತಾತ್ಪರ್ಯವನ್ನು ಹೀಗೆ ವಿವರಿಸಿದೆ. ಒಬ್ಬನು ತಾನು ಮಾಡುವ ಕರ್ಮಫಲದಲ್ಲಿ ಕಿಂಚಿತ್ತು ಆಸೆಯಿಲ್ಲದೇ ಭಗವಂತನ ಸಂತೋಷೋಲ್ಲಾಸಗಳಿಗಾಗಿಯೇ "ಸರ್ವಂ ಶ್ರೀ ಕೃಷ್ಣಾರ್ಪಣಮಸ್ತು" ಎಂಬಂತೆ ಮಾಡುವುದೇ ಆಗಿದ್ದರೆ, ಆ ಕರ್ಮವನ್ನು "ಋತಂ" ಎಂದೂ ಹೀಗಲ್ಲದೇ ಸುಖದುಃಖಗಳಲ್ಲಿ ಒಂದೊಂದು ಫಲವನ್ನಪೇಕ್ಷಿಸಿ ಮಾಡುವ ಕರ್ಮವು ಆ ಭಗವಂತನನ್ನು ಪಡೆಯಲು ಅಡ್ಡಿಯಾಗಿರುವುದರಿಂದ ಮೇಲೆ ಹೇಳಿರುವ ಹಾಗೆ ಈ ಸ್ಥಳದಲ್ಲಿ ಸಂದೇಹ ಪಡಲು ಅವಕಾಶವಿಲ್ಲ.

"ಅಶ್ವ ಇವ ರೋಮಾಣಿ, ವಿಧೂಯ, ಪಾಪಮ್" ಎಂಬ ಶ್ರುತಿ ವಾಕ್ಯದಂತೆ ಆತ್ಮನು ಸಮಸ್ತ ಪಾಪಗಳನ್ನು ಒದರಿ ಪರಮಾತ್ಮನನ್ನು ಪಡೆಯುತ್ತಾನೆ ಎಂಬಂತೆ, "ಏತಂಬ್ರಹ್ಮ ಲೋಕಂ ನವಿಂದಂತಿ ಅನೃತೇನ ಹಿಪ್ರತ್ಯೂಢಾಃ"—ಈ ಶ್ರುತಿ ವಾಕ್ಯವು "ಪಾಪವುಳ್ಳವರು ಪರಮಾತ್ಮನನ್ನು ಪಡೆಯಲಾರರು" ಎಂಬ ತಾತ್ಪರ್ಯವುಳ್ಳದ್ದಾಗಿದೆ. ಆದ್ದರಿಂದ ಇಲ್ಲಿ ವಿರೋಧಕ್ಕೆ ಕಿಂಚಿತ್ತಾದರೂ ಅವಕಾಶವಿಲ್ಲವಾಗಿದೆ. ಆದುದರಿಂದ ಅನೃತ ಶಬ್ದವು ಸುಳ್ಳು ವಸ್ತುವನ್ನು ಪ್ರತಿಪಾದಿಸುತ್ತದೆ ಎಂದು ಹೇಳುವಾಗ ಯಾವ ಅಡ್ಡಿಯೂ ಇಲ್ಲವೆಂಬುದು ಸರ್ವಸಾಮಾನ್ಯರಿಗೂ ವಿದಿತವಾಗುತ್ತದೆ.

ಹೀಗೆ ಮೀಮಾಂಸಾ ಶಾಸ್ತ್ರ ರೀತಿಯನ್ನು ಅನುಸರಿಸಿ ವಸ್ತು ತತ್ತ್ವವನ್ನು ನೋಡುವವರಿಗೆ ಸಂದೇಹಕ್ಕೆ ಆಸ್ಪದವೇ ಇಲ್ಲ ಎಂಬುದನ್ನು ತಿಳಿದೆವು. ಇನ್ನು ಮುಂದೆ "ರಾಮಾಯಣದಲ್ಲಿ ವಿರೋಧಿಯು" ಎಂಬುದನ್ನು ತಿಳಿಯೋಣ.

" ರಾಮಾಯಣವೂ ವಿರೋಧಿಯೂ "

ರಾಮಾಯಣವು ವಿರೋಧಿಯನ್ನು ಸತ್ಯವಸ್ತುವನ್ನಾಗಿಯೇ ತಿಳಿಯಪಡಿಸುತ್ತದೆ ಎಂಬುದನ್ನು ನಿರೂಪಿಸುತ್ತೇವೆ. ಇದು ಸತ್ಯ ; ಇದು ಅಸತ್ಯ ಎಂಬುದನ್ನು ನಾವು ಪ್ರಕಟಪಡಿಸುವುದು ಹೇಗೆಂದರೆ, ಸಾಮಾನ್ಯರಿಗೂ ಸುಲಭವಾಗಿ ತಿಳಿಯುವಂತೆ ಒಂದು ಉದಾಹರಣೆಯನ್ನು ತೋರಿಸುತ್ತೇವೆ.

ಒಬ್ಬನು ಮೊದಲು ಒಂದು ಕಪ್ಪೆ ಚಿಪ್ಪನ್ನು ಬೆಳ್ಳಿ ಎಂದು ತಿಳಿದು ಅದನ್ನು ತೆಗೆದುಕೊಳ್ಳಲು ಹೋಗಿ, ಅನಂತರ ಇದು ಚಿಪ್ಪು ಬೆಳ್ಳಿಯಲ್ಲ ಎಂಬ ನಿಜವನ್ನು ತಿಳಿದು ಅದನ್ನು ತೆಗೆದುಕೊಳ್ಳದೇ ಬಿಟ್ಟು ಬಿಡುತ್ತಾನೆ. ಆದ್ದರಿಂದ ಪ್ರಕೃತ ಸಂದರ್ಭದಲ್ಲಿ " ಬೆಳ್ಳಿಯು ಅನೃತವಸ್ತು " ಎಂಬುದು ಸ್ಪಷ್ಟವಾಗಿದೆ.

ಬೇರೊಬ್ಬನು ಬೆಳ್ಳಿಯನ್ನೇ ಬೆಳ್ಳಿಯೆಂದು ತಿಳಿದು ಅದನ್ನು ತೆಗೆದುಕೊಳ್ಳಲು ಹೋಗಿ ಅದರಿಂದುಂಟಾಗುವ ಒಳ್ಳೆಯ ಫಲವನ್ನು ಪಡೆಯುತ್ತಾನೆ. ಇಲ್ಲಿ ಬೆಳ್ಳಿಯು ಒಳ್ಳೆಯ ವಸ್ತು ಮತ್ತು ಸತ್ಯ ವಸ್ತು ಎಂದು ನಿರೂಪಿತವಾಗಿದೆ.

ಈ ರೀತಿಯನ್ನನುಸರಿಸಿ ರಾಮಾಯಣವು ಸತ್ಯ, ಅಸತ್ಯವನ್ನು ತಿಳಿಯಪಡಿಸುತ್ತದೆ. ಯಾವ ಸಂದರ್ಭದಲ್ಲಿ ಎಂದರೆ, ಹನುಮಂತನು ಶ್ರೀ ರಾಮಚಂದ್ರನ ಕಲ್ಯಾಣಗುಣಗಳು ಸ್ವಲ್ಪವೂ ವ್ಯವಹಾರವಿಲ್ಲದ ಲಂಕೆಯ ಅಶೋಕವನದಲ್ಲಿ ಹೋಗಿ ಸೇರಿ ಶೀತಲವಾಗಿಯೂ, ಇಂಪಾಗಿಯೂ ಇರುವಂತಹ ರಾಮನಾಮವನ್ನು ಹೇಳುವಲ್ಲಿ ಅದನ್ನು ಕಿವಿಯಲ್ಲಿ ಕೇಳಿದ ಸೀತಾದೇವಿಯು ಮೊದ ಮೊದಲು, ಶ್ರೀ ರಾಮನಾಮವು ಕಿವಿಯಲ್ಲಿ ಕೇಳಿದುದು ಬರಿಯ ಭ್ರಮೆಯೋ, ವಾತಗತಿಯೋ ಅಥವಾ ಉನ್ಮಾದದಿಂದುಂಟಾದ ವಿಕಾರವೋ ಎಂಬುದಾಗಿ ಸಂದೇಹ ಪಡುತ್ತಾಳೆ. ಅನಂತರ ಹನುಮಂತನು ಸೀತಾದೇವಿಯ ಎದುರಿಗೆ ಹೋಗಿ ಕೈ ಮುಗಿದು ನಿಲ್ಲುತ್ತಾನೆ. ಅನಂತರ ಸೀತಾಮಾತೆಯು ಇದು ಸತ್ಯ ಎಂದು ಮನಸ್ಸಿಗೆ ತಿಳಿದು ಸಂತೋಷಗೊಳ್ಳುತ್ತಾಳೆ. ಇದನ್ನೇ ಈ ಕೆಳಕಂಡ ಶ್ಲೋಕವು ತಿಳಿಸುತ್ತದೆ.

" ಕಿಂನುಸ್ಯಾಚ್ಚಿತ್ತ ಮೋಹೋಽಯಂ ಭವೇದ್ವಾತಗತಿಸ್ತ್ವಿಯಮ್ ।
ಉನ್ಮಾದ ಜೋ ವಿಕಾರೋ ವಾ ಸ್ಯಾದಿಯಂ ಮೃಗತೃಷ್ಣಿಕಾ ॥
ಅಥವಾನಾಯಮುನ್ಮಾದೋ ಮೋಹೋಽಪ್ಯುನ್ಮಾದ ಲಕ್ಷಣಃ ।
ಸಂಬುಧ್ಯೇ ಚಾಹಮಾತ್ಮಾನ ಮಿಮಂ ಚಾಪಿ ವನೌಕಸಮ್ ॥ "

ತನ್ನ ಯಜಮಾನನನ್ನು ಅಗಲಿದ ಯಜಮಾನಿಯು ಆತನ ವಿಚಾರವನ್ನು ಕೇಳುವುದರಲ್ಲಿ ಇಷ್ಟವುಂಟಾಗುವುದು ಯೋಗ್ಯವಾಗಿದೆ. ಆ ಚಿಂತೆಯ ಒಂದು ಸ್ಥಿತಿಯನ್ನು ಚಿತ್ತಮೋಹ ಎನ್ನುವರು. ಊಟ, ನಿದ್ರೆಗಳಿಲ್ಲದೇ ಇರುವಾಗ, ವಾತ, ಪಿತ್ತ, ಶ್ಲೇಷ್ಮ ಆದಿ ಧಾತುಗಳಿಗೆ ಚಾಂಚಲ್ಯವುಂಟಾಗುತ್ತದೆ. ಆ ಚಂಚಲತೆಯಿಂದುಂಟಾಗುವ ಪವಮಾನದ ಒಂದು ಸ್ಥಿತಿಗೆ " ವಾತಗತಿ " ಎಂದು ಹೆಸರು. ಆ ಸ್ಥಿತಿಯಲ್ಲಿರುವ

ಭ್ರಮೆಯನ್ನು ಇಲ್ಲಿ "ಪಾತಗತಿ" ಎಂದು ಹೇಳುವರು. ಯಜಮಾನನನ್ನು ಅಗಲಿದ ಯಜಮಾನಿಗೆ ಉಂಟಾಗುವ ಒಂದು ಸ್ಥಿತಿಯನ್ನು ಉನ್ಮಾದವೆಂದು ಪ್ರಕಟಿಸುತ್ತಾರೆ. ಆ ಉನ್ಮಾದದಿಂದುಂಟಾಗುವ ಭ್ರಮೆಯನ್ನು ಉನ್ಮಾದ ಜನ್ಯ ವಿಕಾರ ಎಂದು ಹೇಳುವರು. ಮೃಗತೃಷ್ಣೆಯಂತೆ ಒಂದನ್ನು ಮತ್ತೊಂದನ್ನಾಗಿ ತಿಳಿಯುವುದು ಮತ್ತು ಬಿಸಿಲ್ಗುದುರೆಯನ್ನು ತಣ್ಣೀರೆಂದು ಭ್ರಮಿಸುವುದು.

ಇಲ್ಲಿ ಸೀತಾದೇವಿಯು, ಮೊದಲು ಹನುಮಂತನ ಮಾತುಗಳನ್ನು ಸುಳ್ಳೆಂದು ಭ್ರಮಿಸಿ ಅನಂತರ ತಕ್ಕ ಉದಾಹರಣೆಗಳಿಂದ ಇದು ಅನೃತವಲ್ಲ, ಸತ್ಯವಾದುದೆಂಬುದಾಗಿ ತಿಳಿಯಪಡಿಸಿರುವುದು ಸರ್ಗ ವೇದ್ಯವಾಗಿದೆ. ಅಂತೆಯೇ ಬ್ರಹ್ಮವು ಪ್ರಪಂಚವಾಗಿ ಕಾಣುವುದಕ್ಕೆ ಕಾರಣ ಅಜ್ಞಾನವೂ, ಪ್ರಾಪಂಚಿಕ ಸುಖ ಮತ್ತು ದೃಶ್ಯಗಳೂ ಪ್ರಪಂಚ ಇವುಗಳು ಅನೃತ ವಸ್ತುಗಳು ಎಂದು ತಿಳಿಯಪಡಿಸುವುದಕ್ಕೆ ತಕ್ಕ ಉದಾಹರಣೆಗಳು ದೊರಕಿವೆ; ಆದರೆ, ನಾವು ಭ್ರಮೆಗೊಳಗಾಗುವ ಸಂಭವವೇ ಇಲ್ಲ. ಹಾಗೆ ಪ್ರಪಂಚದಲ್ಲಿಯೂ, ಶಾಸ್ತ್ರಗಳಲ್ಲಿಯೂ ಉದಾಹರಣೆ ಕಾಣಸಿಗದೇ ಇರುವುದೇ ಆಗಿದೆ ಎಂಬುದನ್ನು ಇಲ್ಲಿ ಮುಖ್ಯವಾಗಿ ಕಾಣತಕ್ಕದ್ದು. ಇನ್ನು ದೇಹಾತ್ಮಾಭಿಮಾನವೂ, ಸ್ವಾತಂತ್ರ್ಯಾಭಿಮಾನವೂ ಪರಮಾತ್ಮನನ್ನು ಪಡೆದು ಅನುಭವಿಸಲು ನಿಜವಾದ ಅಡ್ಡಿಯಂತೆ ಎನ್ನುವುದನ್ನು ರಾಮಾಯಣದಲ್ಲಿ ಕಾಣುತ್ತೇವೆ.

ಮುಂದೆ ಬರುವ ವಿಷಯವನ್ನು ಗಮನಿಸಬೇಕಾದದ್ದು ಸೂಕ್ತ. ಒಬ್ಬನು ಭಗವಂತನನ್ನು ಕುರಿತಾದ ವಿಷಯವನ್ನು ತಿಳಿದಿರುವವನಾಗಿದ್ದರೆ ಅವನು "ಸತ್ತು" ಎಂದೂ ದೇಶಕಾಲ ಸಂಬಂಧವಾದ ಆ ತಿಳಿವಳಿಕೆಯನ್ನು ಪಡೆಯದೇ ಇರುವವನು "ಅಸತ್ತು" ಎಂದು ವೇದಾಂತವು ತಿಳಿಸುತ್ತದೆ.

"ಸಂತಮೇನಮ್" "ಅಸನ್ನೇವಸಭವತಿ" ಒಬ್ಬನು ಪರಮಾತ್ಮನನ್ನು ಕುರಿತಾದ ಜ್ಞಾನವನ್ನು ಪಡೆದಿದ್ದರೂ ಆ ಜ್ಞಾನಕ್ಕೆ ತಕ್ಕ ಪ್ರೇಮವನ್ನು ಆದರವನ್ನು ಭಗವಂತನಲ್ಲಿ ಮಾಡದಿದ್ದರೆ, ಅವನನ್ನು "ಸತ್ತು" ಎಂದೋ "ಅಸತ್ತು" ಎಂದೋ ಮೇಲೆ ಹೇಳಿರುವ ಶ್ರುತಿ ತಿಳಿಸಿಲ್ಲ. ಆದರೂ ಕೂಡ ಅವನೂ ಅಸತ್ತು ಎಂದೇ ಹೇಳಬೇಕು. ಅವನು ಜ್ಞಾನವನ್ನು ಪಡೆದೂ ಪ್ರೇಮವನ್ನು ಮಾಡದೇ ಇರುವುದರಿಂದ ಅವನಿಗೆ ಅಜ್ಞಾನವೂ ದೋಷವೂ ಅಧಿಕವಂತೆ.

ಇದರ ಹಾಗೆ, ಒಬ್ಬನು ಜೀವನಾದ ತನ್ನನ್ನು ದೇಹವಾಗಿಯೋ ಸ್ವತಂತ್ರನನ್ನಾಗಿಯೋ ತಿಳಿಯಲಿಲ್ಲಾ; ಅಂತಹವನು ತನ್ನ ನಿಜಸ್ಥಿತಿಯನ್ನು ಒಂದು ರೀತಿಯಲ್ಲಿ ತಿಳಿದವನೇ ಆಗಿರುತ್ತಾನೆ. ಆದರೂ ಸಹ ಅವನು ದೇಹಾತ್ಮಾಭಿಮಾನ, ಮತ್ತು ಸ್ವಾತಂತ್ರ್ಯಾಭಿಮಾನ ದೋಷವುಳ್ಳವನು. ಯಾವ ರೀತಿಯಾದ ಗುಣವನ್ನು ಪಡೆಯುತ್ತಾನೆಯೋ ಆ ರೀತಿಯಾದ ಚರಿತ್ರೆ ಉಳ್ಳವನಾಗಿದ್ದರೆ, ಪರಮಾತ್ಮನನ್ನು ಅನುಭವಿಸಿ ಬಾಳಲಾರದೇ ನಾಶವಾಗುತ್ತಾನೆಂಬುದು ಒಂದು ಶ್ರೇಷ್ಠ ಸತ್ಯವಾಗಿದೆ.

ಈ ಸತ್ಯಸಂಗತಿಯನ್ನು ರಾಮಾಯಣವು, ಚಕ್ರವರ್ತಿಯಾದ ದಶರಥನ ಚರಿತ್ರೆ

ಯಲ್ಲಿ ನಡತೆಯಲ್ಲಿ ಸ್ಪಷ್ಟವಾಗಿ ತಿಳಿಸುತ್ತದೆ. ಎಲ್ಲಿ ಯಾವ ರೀತಿ ಎಂದರೆ, ದಶರಥನು ವಸಿಷ್ಠರನ್ನು ಕುಲಗುರುವಾಗಿ ಪಡೆದಿದ್ದನು. ಅಶ್ವಮೇಧಯಾಗ ಮತ್ತು ಪುತ್ರ ಕಾಮೇಷ್ಟಿ ಮುಂತಾದ ಯಾಗಗಳನ್ನು ಮಾಡಿರುವನು. ಆದ್ದರಿಂದ ಆತ್ಮನ ನಿಜ ಸ್ಥಿತಿಯನ್ನು ತಿಳಿಯದಿದ್ದವನಲ್ಲ. ಹೀಗಿರುವಲ್ಲಿಯೂ ಶ್ರೀ ರಾಮನಿಗೆ ರಾಜ್ಯಾಭಿಷೇಕವನ್ನು ಮಾಡಲು ನಿಶ್ಚಯಿಸಿ ತನ್ನ ಪ್ರಿಯ ಮಹಿಷಿಯಾದ ಕೈಕೇಯಿಯ ಹತ್ತಿರ ಹೋಗಿ ತಿಳಿಸಲು, ಆಗ ಕೈಕೇಯಿಯು ಭರತನಿಗೆ ರಾಜ್ಯಾಭಿಷೇಕ ಮಾಡಿ, ಶ್ರೀ ರಾಮಚಂದ್ರನು ಹದಿನಾಲ್ಕು ವರ್ಷಕಾಲ ವನವಾಸಕ್ಕೆ ಕಳುಹಿಸಬೇಕು ಎಂದು ಬೇಡಿಕೊಳ್ಳಲು ದಶರಥ ಮಹಾರಾಜನು ತನ್ನ ಹೆಂಡತಿಯ ಆ ಬೇಡಿಕೆಗೆ ಒಳಪಟ್ಟನು. ಇದರಂತೆ ಶ್ರೀ ರಾಮಚಂದ್ರನು ಸೀತಾ ಸಮೇತನಾಗಿ ಅನುಜನಾದ ಲಕ್ಷ್ಮಣನೊಂದಿಗೆ ವನಕ್ಕೆ ತೆರಳಿದನು.

ಈ ವಿಚಾರವನ್ನು ಹೇಳುವ ಸ್ಥಳದಲ್ಲಿ ರಾಮಾಯಣವು ದಶರಥ ಚಕ್ರವರ್ತಿಯನ್ನು ಅನೇಕ ಸ್ಥಳಗಳಲ್ಲಿ ಕೈಕೇಯಿಯಲ್ಲಿ ಮೋಹಿತನಾದವನು ಎಂದೇ ನಿಂದಿಸಿ ಹೇಳಿದೆ. "ಕಾಮಾಕಮುಲಿತಪತ್ಪ್ರಸ್ತ್ರೀ ಮುಮಾಣಿಮನುತಾಪಿಂದಮ್" ಎನ್ನುವುದನ್ನು ಇದರ ಹಾಗಿರುವ ವಚನಗಳನ್ನು ಇಲ್ಲಿ ಕಾಣಬಹುದು. ಒಬ್ಬನಿಗೆ ಆತ್ಮನ ನಿಜ ಸ್ಥಿತಿಯು ಇರುವ ಹಾಗೆಯೇ ಇದ್ದಿದ್ದೇ ಆದರೆ, ಹೆಣ್ಣಿನ ವ್ಯಾಮೋಹವು ಸ್ವಲ್ಪವೂ ಇರುವುದಿಲ್ಲ. "ಕಾಮಿ" ಎಂದು ಹೇಳುವಾಗ ಹೆಣ್ಣಿನ ಮೋಹವು ಉಂಟು ಎಂದು ಚೆನ್ನಾಗಿ ತಿಳಿಯುತ್ತದೆಯಲ್ಲವೇ ? ದೇಹಾತ್ಮಾಭಿಮಾನ, ಸ್ವಾತಂತ್ರ್ಯಾಭಿಮಾನ ಪಡೆದಿರುವಂತಹವನ ಚರಿತ್ರೆಯೇ ಅಲ್ಲವೇ ? ಇದು. ಆ ಕಾಲದಲ್ಲಿಯೇ ಪರಮ ಪುರುಷನಾದ ಶ್ರೀ ರಾಮನನ್ನು ಅನುಭವಿಸಿ ಬಾಳಲಾರದೇ ಮರಣ ಹೊಂದಿದನು.

ಆದರೆ ದಶರಥನು ಶ್ರೀ ರಾಮನನ್ನಗಲಿ ಮರಣವನ್ನು ಹೊಂದಲು ಮತ್ತೊಂದು ಕಾರಣವೂ ಇದೆ. ಕೈಕೇಯಿಗೆ ಎರಡು ವರಗಳ ವಚನವನ್ನಿತ್ತುದರಿಂದಲೂ ಇದಕ್ಕೆ ಕಟ್ಟು ಬಿದ್ದು ಶ್ರೀ ರಾಮಚಂದ್ರನೆಂಬ ಧರ್ಮವನ್ನು ತೊರೆದು ಬಿಟ್ಟದ್ದರಿಂದ ಆ ಪರಮಾತ್ಮನನ್ನು ಅಗಲಬೇಕಾಯಿತು. ಸತ್ಯ ಎಂಬುದು ಧರ್ಮವೇ ಆದರೂ, ಶ್ರೀ ರಾಮ ಪ್ರಭುವೆಂಬ ಸರ್ವ ಶ್ರೇಷ್ಠ ಧರ್ಮವನ್ನು ನೋಡುವಲ್ಲಿ ಆ ಸತ್ಯ ಎಂಬ ಧರ್ಮವನ್ನು ಒಂದು ವಸ್ತುವನ್ನಾಗಿ ಪರಿಗಣಿಸದೆ ಕಸಕ್ಕಿಂತ ಕಡೆಯಾಗಿ ಕಂಡ ದಶರಥ ಮಹಾರಾಜನು ಸತ್ಯವನ್ನು ಕಡೆಗಣಿಸಿದ್ದರಿಂದ ಆ ಪರಮಾತ್ಮನನ್ನು ತೊರೆದು ಅವನನ್ನು ಅನುಭವಿಸಲಾಗಲಿಲ್ಲ. ಇದಕ್ಕೆ ಕಾರಣ ಶ್ರೀ ರಾಮಚಂದ್ರನು ಸರ್ವ ಶ್ರೇಷ್ಠನೆಂಬುದನ್ನು "ಉಪಾಯ" ವನ್ನು ಕುರಿತು ಹೇಳುವ ಭಾಗದಲ್ಲಿ ಕಾಣಬಹುದು. ಇದನ್ನು ಪಿಳ್ಳೆಲೋಕಾಚಾರ್ಯರು "ಚಕ್ರವರ್ತಿಯು ಹಾಗೆ ಕಳೆದುಕೊಳ್ಳುವುದಕ್ಕೆ ನಿದರ್ಶನ" ಎಂದು ಹೇಳಿರುತ್ತಾರೆ.

ನಿಜ ಸ್ಥಿತಿಯು ಈ ರೀತಿ ಇರುವಾಗ ಕೈಕೇಯಿಯಲ್ಲಿರುವ ಆಸೆಯೂ ಶ್ರೀ ರಾಮನನ್ನಗಲಲು ಒಂದು ಕಾರಣವೆಂದರೆ ದೋಷವಿಲ್ಲ. ಇತರ ವಿಚಾರಗಳಲ್ಲಿ ತೊಡಗಿರು

ಷವನಿಗೆ ಭಗವಂತನು ದೊರೆಯಲಾರನು. ಎಲ್ಲವನ್ನೂ ಬಿಟ್ಟರೆ ಪರಮಾತ್ಮನನ್ನು ಪಡೆಯಬಹುದು ಎಂದು ಶಾಸ್ತ್ರದಲ್ಲಿ ಹೇಳಿರುವ ಒಂದು ಶ್ರೇಷ್ಠ ಸತ್ಯ. ಈ ರೀತಿಯಾದ ದೇಹಾತ್ಮಾಭಿಮಾನ, ಸ್ವಾತಂತ್ರ್ಯಾಭಿಮಾನ ಇವುಗಳ ತಡೆಯನ್ನು ಕಂಡೆವು.

ಇನ್ನು ರಾಮಾಯಣದಲ್ಲಿ "ಕರ್ಮವು ಭಗವಂತನನ್ನು" ಕಳೆದು ಕೊಳ್ಳುವಂತೆ ಮಾಡುತ್ತದೆ ಎಂಬುದನ್ನು ನೋಡೋಣ. ಶ್ರೀ ರಾಮಚಂದ್ರನು ಸರ್ವ ಶ್ರೇಷ್ಠನಾದ ಭಗವಂತನು, ಸೀತಾಮಾತೆಯು ಸಾಕ್ಷಾತ್ ಲಕ್ಷ್ಮೀದೇವಿ ಎಂಬುದು ಸತ್ಯ. ಶ್ರೀ ರಾಮನಿಗೆ ಪಾಪ, ಪುಣ್ಯಗಳ ಸಂಬಂಧವಿಲ್ಲ ಎಂಬುದು ಸತ್ಯವೇ ಆದರೂ ಸೀತಾಮಾತೆಯು ಜೀವನು ಹೀಗಿರಲು ಭಗವಂತನನ್ನು ಅಗಲಲು ಹೇಗೆ ಸಂಭವಿಸಿತು? ಎಂಬುದನ್ನು ತನ್ನ ಚರಿತ್ರೆಯಲ್ಲಿ ತೋರಿಸಿರುತ್ತಾರೆ. ಇದನ್ನು ಮೊದಲು ತಿಳಿಯಬೇಕಾದದ್ದು ಅತ್ಯಾವಶ್ಯಕ. ಶ್ರೀ ರಾಮಚಂದ್ರನು ವನಕ್ಕೆ ತೆರಳುವಾಗ, ಸೀತಾದೇವಿಯ ಸೌಖ್ಯವನ್ನು ವನವಾಸದ ಕಷ್ಟವನ್ನು ಕುರಿತು ವನವಾಸವನ್ನು ಮುಗಿಸಿಕೊಂಡು ತಾನು ಬರುವವರೆಗೆ ಅಯೋಧ್ಯೆಯಲ್ಲಿಯೇ ಇರಬೇಕೆಂದು ಕೇಳಿಕೊಂಡರೂ ಆ ದೇವಿಯು ಭಗವಂತನ ವಿಯೋಗವನ್ನು ಸಹಿಸಲಾರದೇ ತನ್ನನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗಬೇಕೆಂದು ಬಯಸುತ್ತಾಳೆ. ಅನೇಕ ಸಾರಿ ಪ್ರಾರ್ಥಿಸಿಯೂ ಒಪ್ಪದೇ ಇದ್ದ ಶ್ರೀ ರಾಮನನ್ನು ಕುರಿತು ಸೀತೆಯು ನನ್ನ ತಂದೆಯಾದ ಜನಕನು ನನ್ನನ್ನು ಪೌರುಷವಿರುವವನಿಗೆ ಕೊಡದೇ ಹೆಣ್ಣಿಗೇ ಕೊಟ್ಟುಬಿಟ್ಟರು. ಶ್ರೀ ರಾಮನು ಆಂತರಿಕವಾಗಿ ಹೆಣ್ಣೆಯನ್ನು ಹೊರಕೋಟಕ್ಕೆ ಪುರುಷರಾಗಿರುವರಲ್ಲವೇ? ನೀವು ಆಂತರಿಕವಾಗಿಯೂ ಪುರುಷರಾಗಿದ್ದರೆ, ಹೀಗೆ ನನ್ನನ್ನು ಬಿಟ್ಟು ಹೋಗುತ್ತೇನೆಂದು ಹೇಗೆ ತಾನೇ ಹೇಳುತ್ತಿದ್ದೀರಿ? ಎಂದು ಪ್ರಶ್ನೆ ಹಾಕುತ್ತಾಳೆ. "ಸ್ತ್ರಿಯಂ ಪುರುಷ ವಿಗ್ರಹಂ" ಎನ್ನುತ್ತಾಳೆ ಎನ್ನುವುದು ಚರಿತ್ರಾರ್ಹವಾದ ಸಂಗತಿ.

ತನ್ನ ಚರಿತ್ರೆಯಿಂದ ಪ್ರಸಂಗಕ್ಕೆ ಒಳ್ಳೆಯದನ್ನುಂಟುಮಾಡಲು ಬಂದ ಸೀತಾದೇವಿಯು ಪುರುಷೋತ್ತಮನಾದ ಶ್ರೀ ರಾಮನನ್ನು ಕುರಿತು ನನ್ನ ತಂದೆಯವರು ಹೆಣ್ಣಿಗೆ ಹೆಣ್ಣನ್ನು ಕೊಟ್ಟರು ಎಂದು ಹೇಳುವುದು ನ್ಯಾಯವಾಗಿದೆಯೇ? ಈ ರೀತಿ ಹೇಳಿರುವುದು ಭಗವದಪಚಾರವಲ್ಲವೇ ಇದನ್ನು ಮೊದಲು ಇಲ್ಲಿ ಸೂಚಿಸತಕ್ಕದ್ದು.

ಅನಂತರವೂ ರಾಮಾಯಣದಲ್ಲಿಯೇ ಬೇರೊಂದು ವಿಷಯವನ್ನು ಕಾಣತಕ್ಕದ್ದಾಗಿದೆ. ಶ್ರೀ ರಾಮನು ಸೀತೆಯಲ್ಲಿರುವ ಅತ್ಯಧಿಕ ಪ್ರೇಮಾತಿಶಯದಿಂದ ಮಾರೀಚನೆಂಬ ಮಾಯಾಮೃಗದ ಹಿಂದೆ ಹೋಗಿ ಆ ಮೃಗವನ್ನು ಬಾಣದಿಂದ ಹೊಡೆದು ಕೊಂದನು. ಆ ಸಮಯದಲ್ಲಿ ಮಾರೀಚನು ಮೃಗರೂಪವನ್ನು ಬಿಟ್ಟು ತನ್ನ ನಿಜರೂಪವಾದ ಶರೀರದೊಂದಿಗೇ ಪ್ರಾಣವನ್ನು ಬಿಟ್ಟನು. ಹಾಗೆ ಪ್ರಾಣಬಿಡುವ ಸಂದರ್ಭದಲ್ಲಿ ಶ್ರೀ ರಾಮನ ಕಂಠವನ್ನು ಅನುಸರಿಸಿ ತನ್ನ ಧ್ವನಿಯಲ್ಲಿ ಹಾ! ಸೀತೆ! ಹಾ! ಲಕ್ಷ್ಮಣ! ಎಂದು ಕೂಗಿ ತನ್ನ ಪ್ರಾಣವನ್ನು ಬಿಟ್ಟನು. ಆ ಧ್ವನಿಯನ್ನು ಕೇಳಿದ ಸೀತೆಯು ಭಯಗೊಂಡವಳಾಗಿ ಹತ್ತಿರದಲ್ಲಿದ್ದ ಲಕ್ಷ್ಮಣನನ್ನು ಅಣ್ಣನ ರಕ್ಷಣೆಗೆ ಹೋಗಬೇಕೆನ್ನಲು

ಶ್ರೀ ರಾಮನ ಸರ್ವಶ್ರೇಷ್ಠತೆಯನ್ನು ತಿಳಿದಿದ್ದ ಲಕ್ಷ್ಮಣನು ಸುಮ್ಮನೆ ಇದ್ದನು. ಸೀತಾದೇವಿಯು ಲಕ್ಷ್ಮಣನ ಔದಾಸೀನ್ಯವನ್ನು ನೋಡಿ ಅನಾರ್ಯ, ಅಕರುಣಾರಂಭ, ನೃಶಂಸ, ಕುಲಪಾಂಸನ ಇತ್ಯಾದಿ ಕಠೋರ ನಿಂದೆಗಳಿಂದ ಚುಚ್ಚಿ ನಿಂದಿಸಿದಳು.

ಲಕ್ಷ್ಮಣನು ಸ್ವಾಭಾವಿಕವಾಗಿಯೇ ಶ್ರೀ ರಾಮನಲ್ಲಿ ಅತ್ಯಧಿಕವಾದ ಪ್ರೇಮ, ಶ್ರದ್ಧೆಯುಳ್ಳವನು. ಈ ರೀತಿ ಅತ್ಯಧಿಕ ಭ್ರಾತೃ ಸ್ನೇಹವನ್ನುಳ್ಳ ಲಕ್ಷ್ಮಣನನ್ನು ಕುರಿತು ಹೇಳಬಾರದ ಶಬ್ದಗಳಿಂದ ಲಕ್ಷ್ಮಣಾ ನೀನು ನಿಶ್ಚಯವಾಗಿ ನನ್ನ ಮೇಲೆ ಕಣ್ಣಿಟ್ಟಿರುವೆ. ಆದಕಾರಣ ಕಪಟವೇಷದಿಂದ ಅರಣ್ಯಕ್ಕೆ ಬಂದಿರುವೆ ಎಂದು ಮುಂತಾಗಿ ಮೇಲ್ಕಂಡಂತೆ ನಿಂದಿಸಿದಳು. ಇದು ಸೀತಾದೇವಿಗೆ ಸರಿಯೇ ? ಇದು ಭಾಗವತಾಪಚಾರ ವಲ್ಲವೇ ? ಇದನ್ನು ಎರಡನೆಯದಾಗಿ ಇಲ್ಲಿ ಕಾಣತಕ್ಕದ್ದು.

ಈ ರೀತಿ ಪರಮಾತ್ಮನಲ್ಲಿಯೂ, ಭಾಗವತೋತ್ತಮನಾದ ಲಕ್ಷ್ಮಣನಲ್ಲಿಯೂ ಸೀತಾದೇವಿಯು ನಡೆದುಕೊಂಡ ಕಾರಣಕ್ಕಾಗಿ ಪರಮಾತ್ಮನನ್ನಗಲೀ ಅಶೋಕವನದಲ್ಲಿ ರಾಕ್ಷಸಿಯರ ನಡುವೆ ಇದ್ದು ಕಷ್ಟಪಡಬೇಕಾಯಿತು ಎಂಬುದನ್ನು ನಾವು ಇಲ್ಲಿ ತಿಳಿಯಬೇಕು. ಇದನ್ನು ಸೀತಾದೇವಿಯು ಹೇಳಿರುವ " ಮಮೈವ ದುಷ್ಕೃತಂ ಕಿಂಚಿತ್ ಮಹದಸ್ತಿ ನ ಸಂಶಯಃ " ಎನ್ನುವ ಮಾತಿನಿಂದ ಚೆನ್ನಾಗಿ ತಿಳಿಯಬಹುದು. ಈ ಮಾತಿನಲ್ಲಿ ಶ್ರೀ ರಾಮನಿಗೆ ಮಾಡಿದ ಅಪರಾಧವನ್ನು " ಕಿಂಚಿತ್ " ಎನ್ನುವ ಶಬ್ದವೂ, ಲಕ್ಷ್ಮಣನಲ್ಲಿ ಮಾಡಿದ ಅಪರಾಧವನ್ನು " ಮಹತ್ " ಎನ್ನುವ ಶಬ್ದವೂ ಹೇಳುತ್ತವೆ ಎಂದು ನಾವು ಚೆನ್ನಾಗಿ ತಿಳಿಯಬಹುದು. ಈ ರೀತಿ ಕರ್ಮವು ಪರಮಾತ್ಮನನ್ನು ಅಗಲುವಂತೆ ಮಾಡುತ್ತದೆ ಎಂಬುದನ್ನು ಒಂದು ರೀತಿಯಿಂದ ಸೀತಾದೇವಿಯ ಚರಿತ್ರೆಯಲ್ಲಿ ಕಂಡೆವು. ಇನ್ನು ಪ್ರಕೃತಿ ಸಂಬಂಧವು ತಡೆ ಎಂಬುದನ್ನು ರಾಮಾಯಣದಲ್ಲಿಯೇ ಕೆಲವು ಸ್ಥಳಗಳಲ್ಲಿ ತೋರಿಸುತ್ತವೆ.

(1) ಶ್ರೀ ರಾಮನು ಸೀತಾ, ಲಕ್ಷ್ಮಣರೊಡಗೂಡಿ ಶರಭಂಗರ ಆಶ್ರಮಕ್ಕೆ ಬರುವ ಸಮಯದಲ್ಲಿ ಇಂದ್ರನು ಶರಭಂಗರ ಹತ್ತಿರ ಬಂದು ವಾರ್ತಾಲಾಪದಲ್ಲಿ ತೊಡಗಿದ್ದನು. ಆಗ ಶ್ರೀ ರಾಮನನ್ನು ನೋಡಿ, ಈ ರಾಮನು ಮತ್ತಾರಿಂದಲೂ ಆಗದ ಅಸಾಧ್ಯವಾದ ಕಾರ್ಯವಾದ ರಾವಣವಧೆಯನ್ನು ಮಾಡಲು ಇಚ್ಛಿಸಿ ಅವತಾರ ಹೊಂದಿರುವನು. ಅದನ್ನು ನೆರವೇರಿಸಿದ ನಂತರ ಇವನನ್ನು ನೋಡುವುದು ಉತ್ತಮ ಎಂದು ಹೇಳಿ ಶರಭಂಗರ ಆಜ್ಞೆಯನ್ನು ಪಡೆದು, ರಥವನ್ನು ಹತ್ತಿ ತನ್ನ ಲೋಕಕ್ಕೆ ತೆರಳಿದನು. ಇಂದ್ರನು ಹೋದನಂತರ ಶ್ರೀ ರಾಮಚಂದ್ರನು ಶರಭಂಗರಲ್ಲಿ ಹೋಗಿ ಅವರ ಚರಣಾರವಿಂದಗಳಲ್ಲಿ ನಮಸ್ಕರಿಸಿದನು. ಅನಂತರ ಅವರಲ್ಲಿ ಇಂದ್ರನು ಬಂದು ಹೋದ ವಿಚಾರವನ್ನು ಕುರಿತು ಪ್ರಶ್ನಿಸಿದನು. ಆ ಪ್ರಶ್ನೆಗೆ ಉತ್ತರವಾಗಿ ಶರಭಂಗರು ಈ ಕೆಳಗೆ ವಿವರಿಸಿರುವ ಉತ್ತರ ನೀಡಿದರು.

" ಮಾಮೇಷ ವರದೋ ರಾಮ ಬ್ರಹ್ಮಲೋಕಂ ನಿನೀಷತಿ ।
ಜಿತಮುಗ್ರೇಣ ತಪಸಾ ದುಷ್ಪ್ರಾಪಮಕೃತಾತ್ಮಭಿಃ ॥

ಅಹಂ ಜ್ಞಾತ್ವಾ ನರವ್ಯಾಘ್ರ ವರ್ತಮಾನಮದೂರತಃ ।
ಬ್ರಹ್ಮಲೋಕಂ ನಗಚ್ಛಾಮಿ ತ್ವಾಮದೃಷ್ಟ್ವಾ ಪ್ರಿಯಾತಿಥಿಮ್ ॥
ತ್ವಯಾಹಂ ಪುರುಷವ್ಯಾಘ್ರ ಧಾರ್ಮಿಕೇಣ ಮಹಾತ್ಮನಾ ।
ಸಮಾಗಮ್ಯ ಗಮಿಷ್ಯಾಮಿ ತ್ರಿದಿವಂ ದೇವ ಸೇವಿತಮ್ ॥ "

ಈ ಶ್ಲೋಕದ ತಾತ್ಪರ್ಯವೇನೆಂದರೆ, ಶ್ರೀ ರಾಮಚಂದ್ರನೇ ಎಲ್ಲರಿಗೂ ಒಳ್ಳೆಯದನ್ನು ಉಂಟುಮಾಡುವ ಈ ಇಂದ್ರನು ಬ್ರಹ್ಮನ ಆಜ್ಞೆಯಿಂದ ಆ ಬ್ರಹ್ಮ ಲೋಕಕ್ಕೆ ನನ್ನನ್ನು ಕರೆದುಕೊಂಡು ಹೋಗಲು ಇಚ್ಛಿಸುತ್ತಾನೆ. ನಾನು ಇಷ್ಟು ಸಮೀಪವಾಗಿ ಪ್ರತ್ಯಕ್ಷ ನಾಗಿರುವ ಪರಮಪುರುಷನಾದ ನಿನ್ನನ್ನು ಜ್ಞಾನ ಚಕ್ಷುಸ್ಸಿನಿಂದ ನೋಡಿರುವುದರಿಂದ, ಅತ್ಯಂತ ಪ್ರಿಯನಾದ ನಿನ್ನನ್ನು ಬಾಹ್ಯನೇತ್ರಗಳಿಂದಲೂ ಕಂಡು ಆನಂದಿಸಲು ಇಚ್ಛಿಸಿ (ಪುನಃ ಆಪಾಗಮನ ದೋಷದಿಂದ ಕೂಡಿರುವ) ಬ್ರಹ್ಮ ಲೋಕಕ್ಕೆ ಹೋಗಲು ಇಷ್ಟ ವಿಲ್ಲದೇ ಇರುತ್ತೇನೆ. ಅತಿ ಶ್ರೇಷ್ಠ ಧರ್ಮವೆಂದು ಹೇಳಲ್ಪಡುವ ಪರಮಾತ್ಮನಾಗಿರುವ ನಿನ್ನ ಸೌಲಭ್ಯಕ್ಕೆ ಅಧೀನನಾಗಿ ನಂತರ, ಅನಂತ, ಗರುಡ ಮುಂತಾದ ನಿತ್ಯರುಗಳಿಂದ ಸೇವಿಸಲ್ಪಡುತ್ತಿರುವ ನಿನ್ನನ್ನು ವೈಕುಂಠದಲ್ಲಿ ಸೇರಲು ಇಚ್ಛಿಸುತ್ತೇನೆ ಎನ್ನುವುದಾಗಿದೆ.

ಶರಭಂಗರು ಈ ರೀತಿ ಹೇಳಿ, ಶ್ರೀ ರಾಮನನ್ನು ಕುರಿತು, ಶ್ರೀ ರಾಮಚಂದ್ರ, ನೀನು ನನ್ನನ್ನು ಸ್ವಲ್ಪ ಹೊತ್ತು ಕಟಾಕ್ಷಿಸಬೇಕು ಎಂದು ಅಪೇಕ್ಷಿಸಿ ಆ ಭಗವಂತನ ಎದುರಿಗೇ ಪ್ರಜ್ವಲಿಸುತ್ತಿರುವ ಹೋಮಾಗ್ನಿಯಲ್ಲಿ ಬ್ರಹ್ಮ ಮೇಧ ಮಂತ್ರಗಳನ್ನು ಜಪಿಸಿ ಕೊಂಡು ಅದರಲ್ಲಿ ಪ್ರವೇಶಿಸಿ, ಸರ್ಪವು ತನ್ನ ಪೊರೆಯನ್ನು ಕಳಚುವಂತೆ ಈ ಮನುಷ್ಯ ಶರೀರವನ್ನು ಬಿಟ್ಟು ಅರ್ಚಿರಾದಿ ಮಾರ್ಗದಲ್ಲಿ ಹೋಗಿ ಪರಮಪದದಲ್ಲಿ ಪರಮಾತ್ಮ ನನ್ನು ಸೇರಿ ಆನಂದಿತರಾದರು ಎಂಬುದು ಶರಭಂಗರ ಚರಿತ್ರಾರ್ಹವಾದ ಸತ್ಯ.

(2) ಶ್ರೀ ರಾಮಚಂದ್ರನ ಪ್ರಿಯ ಪತ್ನಿಯಾದ ಸೀತೆಯನ್ನು ಮತ್ತು ಅಪ ರೊಬ್ಬನಿಗೇ ಸ್ವಂತವಾದ ವಸ್ತುವನ್ನು ನ್ಯಾಯ ವಿರುದ್ಧವಾಗಿ ಅಪೇಕ್ಷಿಸಿ ತನಗೇ ಮಾಡಿ ಕೊಳ್ಳಬೇಕೆಂದು ರಾವಣನು ಎತ್ತಿಕೊಂಡು ಹೋಗುವ ಸಮಯದಲ್ಲಿ ಅದನ್ನು ತಿಳಿದ ಜಟಾಯುವು ತನ್ನ ಪ್ರಾಣವಿರುವವರೆವಿಗೂ ಆ ರಾವಣನೊಂದಿಗೆ ಹೋರಾಡಿದನು. ಅಂತ್ಯದಲ್ಲಿ ಆ ಪಾಪಿಯಿಂದಲೇ ಸೀತಾದೇವಿಗಾಗಿ ಪ್ರಾಣವನ್ನು ಬಿಡಬೇಕಾಯಿತು. ಪರಮ ಪುರುಷನಾದ ಶ್ರೀ ರಾಮನು ಸೀತಾದೇವಿಯನ್ನು ಹುಡುಕಿಕೊಂಡು ಬರುವಾಗ "ಆಯುಷ್ಮನ್" ಎಂದು ಪರಮಾತ್ಮನಾದ ಶ್ರೀ ರಾಮನಿಗೆ ಮಂಗಳವನ್ನು ಹಾಡಿದನು. ಆ ನೀಚನಾದ ರಾವಣನು ನಿನ್ನ ಪ್ರಾಣವಾದ ಸೀತೆಯನ್ನೂ ಮತ್ತು ನನ್ನ ಪ್ರಾಣ ವನ್ನೂ ತೆಗೆದುಕೊಂಡು ಹೋಗಿಬಿಟ್ಟನು ಎಂಬ ಸತ್ಯವನ್ನರುಹಿ ಪ್ರಾಣ ಬಿಟ್ಟನು. ಜಟಾಯುವಿಗೆ ಶ್ರೀ ರಾಮನು ಬ್ರಹ್ಮಮೇಧ ಸಂಸ್ಕಾರವನ್ನು ಮಾಡಿ "ಗಚ್ಛಲೋಕಾ ನನುತ್ತಮಾನ್ " ಎಂಬಂತೆ ವಿಷ್ಣುಲೋಕವನ್ನು ಕೊಟ್ಟು ಅನುಗ್ರಹಿಸಿದನೆಂಬುದೇ ಜಟಾಯುವಿನ ವೃತ್ತಾಂತದ ಸಾರಾಂಶವಾಗಿದೆ.

(3) ಶಬರಿ ಎಂಬ ಬೇಡ ವೃದ್ಧೆಯು ತನ್ನ ಆಶ್ರಮಕ್ಕೆ ಪದಾರ್ಪಣೆ ಮಾಡಿದ ಶ್ರೀ ರಾಮ, ಲಕ್ಷ್ಮಣರಿಗೆ ಅತ್ಯಧಿಕ ಪ್ರೇಮದೊಂದಿಗೆ ಹಣ್ಣುಗಳನ್ನು ಪಕ್ವವಾಗಿದೆಯೋ ಇಲ್ಲವೋ, ರುಚಿಯಾದುದೋ ಇಲ್ಲವೋ ಎಂಬುದಾಗಿ ಎಂಜಲು ಮಾಡಿ, ತನಗೆ ಈ ಹಣ್ಣುಗಳು ರಾಮನು ತಿನ್ನಲು ಯೋಗ್ಯವಾದುದು ಎಂಬುದಾಗಿ ತೃಪ್ತಿಪಡಿಸಿಕೊಂಡು ಅತಿ ಪ್ರೇಮದಿಂದ ಶ್ರೀ ರಾಮ, ಲಕ್ಷ್ಮಣರಿಗೆ ಕೊಟ್ಟು ಉಪಚರಿಸಿದಳು. ಶ್ರೀ ರಾಮನು ಅವಳ ಉಪಚಾರದಿಂದ ಕೃತಕೃತ್ಯನಾಗಿ ಅವಳಿಗೆ ವಿಷ್ಣುಲೋಕವನ್ನನುಗ್ರಹಿಸಿದನು. ಇಲ್ಲಿ ಶಬರಿಯು "ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ" ಎಂಬ ಗೀತೆಯ ನುಡಿಯಂತೆ, ಶಬರಿಯು ನಿಷ್ಕಳಂಕ ಪ್ರೇಮದಿಂದ ಪರಮಾತ್ಮನನ್ನು ಪೂಜಿಸಿ, ಅವನ ಸಾಯುಜ್ಯವನ್ನು ಹೊಂದಿದಳು ಎಂಬುದೇ ಶಬರಿಯ ಚರಿತ್ರೆ. ಇಲ್ಲಿ

"ಚಕ್ಷುಷಾ ತವ ಸೌಮ್ಯೇನ ಪೂತಾಸ್ಮಿ ರಘುನಂದನ ।
ಪಾದಮೂಲಂ ಗಮಿಷ್ಯ ಮಿತ್ಯಾಮಿ॥" ಎಂಬುವ

ಮಾತುಗಳನ್ನು ನೋಡತಕ್ಕದ್ದು. ಮೇಲೆ ವಿವರಿಸಿರುವ ಮೂರು ಸಂದರ್ಭಗಳಲ್ಲಿಯೂ ಶರಭಂಗರು, ಜಟಾಯು ಮತ್ತು ಶಬರಿ ಇವರೆಲ್ಲರೂ ಶ್ರೀ ರಾಮನ ಸೌಶೀಲ್ಯಗುಣಗಳಿಗೆ ವಶರಾಗಿ ತಮ್ಮ ತಮ್ಮ ಭೌತಿಕ ನಶ್ವರವಾದ ದೇಹವನ್ನು ತ್ಯಾಗಮಾಡಿ ಆ ಪರಮಾತ್ಮನ ಚರಣಾರವಿಂದವನ್ನು ಪಡೆದರೆಂದು ತಿಳಿಯುವುದರಿಂದ ಸಂಸಾರವನ್ನು ಅಳಿಸುವುದಕ್ಕೆ ದೇಹವು ತಡೆ ಎನ್ನುವುದು ಚೆನ್ನಾಗಿ ತಿಳಿಯುತ್ತದೆ.

ದೇಹಾತ್ಮಾಭಿಮಾನ ಮೊದಲಾದುವು ಅನೃತ ವಸ್ತುಗಳಾಗಿಯೇ ಇರುವುದು ಅವರ ಕಾರ್ಯ ಅಭಿವೃದ್ಧಿ ಹೊಂದಲು ಅವಕಾಶವಿಲ್ಲ. ಈ ರೀತಿಯಾಗಿ ರಾಮಾಯಣದಲ್ಲಿ ವಿರೋಧಿಯ ನಿವೃತ್ತಿಯನ್ನು ಕಂಡೆವು. ಇನ್ನು ಮುಂದೆ "ಉಪಾಯವನ್ನು" ಕುರಿತು ವಿಮರ್ಶಿಸೋಣ.

"ವೇದಾಂತವೂ ಉಪಾಯವೂ"

ವೇದಾಂತವು, ಜೀವನು ಪರಮಾತ್ಮನನ್ನು ಪಡೆಯಲು ಯಾವುದು ಸಾಧನವೆಂದು ತಿಳಿಸುತ್ತದೋ ಅದನ್ನು ಉಪಾಯ ಎಂದು ಹೇಳುವುದು. ಆ ವೇದಾಂತವು ಹೇಳಿರುವ ಉಪಾಯ ಯಾವುದು? ಎಂದರೆ ಈ ರೀತಿ ಮುಂದೆ ವಿವರಿಸಿದೆ. ಈ ಪ್ರಪಂಚವನ್ನು ಆಯಾ ಕಾಲದಲ್ಲಿ ಸೃಷ್ಟಿ, ಸ್ಥಿತಿ, ಲಯಾದಿಗಳಲ್ಲಿ ರಕ್ಷಿಸುವವನು ಯಾವನೋ ಅವನನ್ನು ಪರಮಾತ್ಮನೆಂದು ಕರೆಯುತ್ತಾರೆ. ಆ ಪರಮಾತ್ಮನನ್ನು ಅವನ ಶ್ರೇಷ್ಠವಾದ ಸದ್ಗುಣಗಳನ್ನು, ದಿವ್ಯಮಂಗಳ ವಿಗ್ರಹವನ್ನು ಮನಸ್ಸಿನಲ್ಲಿ ಸ್ಮರಿಸಿ ಪ್ರೀತಿಯಿಂದ ಚಿಂತಿಸಿ ಧ್ಯಾನಿಸುವುದೇ ಭಕ್ತಿ. ಈ ಭಕ್ತಿಯೂ ಚೇತನನು ಭಗವಂತನನ್ನು ಪಡೆದು ಬಾಳುವುದಕ್ಕೆ ಶ್ರೇಷ್ಠವಾದ ಸಾಧನ. ಇಲ್ಲಿ "ಕಾರಣಂತುಧ್ಯೇಯಃ" ಎಂಬ ಶ್ರುತಿ ವಾಕ್ಯವನ್ನು ಉದಾಹರಣೆಯಾಗಿ ಕಾಣತಕ್ಕದ್ದು.

ಈ ಭಕ್ತಿಯನ್ನು ಒಬ್ಬನು ಶಾಸ್ತ್ರವು ಹೇಳಿರುವ ಹಾಗೆ ಮಾಡಿ ಮುಗಿಸಿ ಉತ್ತಮವಾದ ಜ್ಞಾನವನ್ನು, ಭಕ್ತಿಯನ್ನು ಪಡೆಯುತ್ತಾನೋ ಅವನು ಭಗವಂತನನ್ನು ಅಗಲಲು ಕಾರಣವಿಲ್ಲ. ಭಗವಂತನ ಚರಣಾರವಿಂದಗಳಲ್ಲಿ ಶರಣಾಗತಿಯನ್ನೇ ಮಾಡಿ ಅವನನ್ನು ಪಡೆದು ಬಾಳಬಹುದು.

ಅವರು ಭಗವಂತನ ಚರಣಾರವಿಂದಗಳನ್ನೇ ತಮಗೆ ಆಶ್ರಯವೆಂದು ತಿಳಿದು ಸಂತೋಷಗೊಳ್ಳುತ್ತಾರೆ. ಇವರೇ ಅತ್ಯಂತ ಹಿರಿಮೆಯುಳ್ಳವರಾಗುತ್ತಾರೆ. ಶರಣಾಗತಿಯಾವುದು ? ನನಗೆ ಸ್ವಲ್ಪವೂ ಸದ್ಗುಣಗಳಿಲ್ಲ. ಎಲ್ಲಾ ದೋಷಗಳೂ ಉಂಟು. ಬೇರೆ ರಕ್ಷಕರು ಯಾರೂ ಇಲ್ಲ ಎನ್ನುವ ತನ್ನ ಸ್ಥಿತಿಯನ್ನು ಸಂಕೋಚವಿಲ್ಲದೇ ಪುರುಷಕಾರ ಭೂತೆಯಾದ ಲಕ್ಷ್ಮೀದೇವಿಯನ್ನು ಮುಂದಿಟ್ಟುಕೊಂಡು ಪರಮಾತ್ಮನ ಪಾದಾರವಿಂದಗಳನ್ನೇ ಸಾಧನವಾಗಿ ಪಡೆಯಬಹುದು. ಈ ಶರಣಾಗತಿಗೆ "ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ" ಎನ್ನುವ ಶ್ರುತಿ ವಾಕ್ಯವು ತಕ್ಕ ಪ್ರಮಾಣವಾಗುತ್ತದೆ.

ಈ ರೀತಿ ಭಕ್ತಿಯನ್ನೂ, ಶರಣಾಗತಿಯನ್ನೂ ಚೇತನನು ಪಡೆಯಲು ಸಾಧನವಾದ ವಾಕ್ಯಗಳನ್ನು ನೋಡಿದೆವು.

ಕೆಲವರು "ಬ್ರಹ್ಮವಾಗಿ ಮಾತ್ರ ಇರುವುದು ಮೋಕ್ಷ ಎಂದೂ, ಅದನ್ನು ಪಡೆಯಲು 'ಆತ್ಮಾ' ಒಂದು ಮಾತ್ರ ಸತ್ಯವಸ್ತು ಎನ್ನುವ ಶ್ರುತಿ ವಾಕ್ಯಗಳಿಂದುಂಟಾಗುವ ಜ್ಞಾನವು ಸಾಧನ" ಎಂದು ತಿಳಿಯುತ್ತಾರೆ.

"ಬ್ರಹ್ಮವೇದ ಬ್ರಹ್ಮೈವ ಭವತಿ" ಎನ್ನುವ ವಾಕ್ಯವನ್ನು ಆಧಾರವಾಗಿ ತೋರಿಸುವರು.

ಇದನ್ನು ಕೇಳುವವರಿಗೆ ಮನಸ್ಸು ಚಂಚಲವಾಗುವುದು ಸಹಜವೇ. ಈ ಸಂದೇಹಕ್ಕೆ ಮೀಮಾಂಸಾ ಶಾಸ್ತ್ರರೀತಿಯನ್ನು ಅನುಸರಿಸಿ ಒಂದು ಪರಿಹಾರವನ್ನು ಸಂಕ್ಷಿಪ್ತವಾಗಿ ಹೇಳುತ್ತೇವೆ.

ಒಬ್ಬನ ಪ್ರಯತ್ನ ಶಕ್ತಿಯಿಂದ ಯಾವುದು ಉಂಟಾಗುತ್ತದೆಯೋ, ಅದನ್ನು "ಪುರುಷತಂತ್ರ" ಎಂದೂ, ಒಬ್ಬನ ಪ್ರಯತ್ನ ಸ್ವಲ್ಪ ಮಾತ್ರವೂ ಇಲ್ಲದೆ ಇದ್ದು ಯಾವುದು ಪ್ರಮಾಣದಿಂದಲೇ ಉಂಟಾಗುತ್ತದೆಯೋ ಅದನ್ನು ಪ್ರಮಾಣತಂತ್ರ ಎಂದೂ ಶಾಸ್ತ್ರ ಹೇಳುತ್ತದೆ.

ಮೇಲೆ ಹೇಳಿರುವ ಪರಮಾತ್ಮನನ್ನು ಕುರಿತು ಧ್ಯಾನಿಸುವ ಚಿಂತನೆಯನ್ನು ಭಗವಂತನ ಚರಣಾರವಿಂದಗಳನ್ನು ಉಪಾಯವಾಗಿ ಪಡೆಯುವ ಪುರುಷಾರ್ಥವನ್ನು ಒಬ್ಬನು ಪ್ರಯತ್ನದಿಂದ ಮಾಡುವಾಗ ಉಂಟಾಗುವುದು ಪುರುಷತಂತ್ರ, ಮತ್ತೆ ಕೆಲವರು ಹೇಳುವ ಹಾಗೆ,

"ತತ್, ತ್ವಮ್, ಅಸಿ" ಎನ್ನುವ ಶ್ರುತಿಯಿಂದ "ಆತ್ಮಾ ಒಂದು ಮಾತ್ರ ಸತ್ಯವಸ್ತು" ಎನ್ನುವ ಜ್ಞಾನವು ಉಂಟಾದಾಗ, ಪ್ರಯತ್ನಶಕ್ತಿ (ಭಕ್ತಿಪ್ರಪತ್ತಿಗಳ ಹಾಗೆ)

ಬೇಡದೆ ಇರಲು ಆ ಜ್ಞಾನವು ಪ್ರಮಾಣತಂತ್ರ. ಇದನ್ನು ನಾವು ಮನಸ್ಸಿನಲ್ಲಿ ತೆಗೆದುಕೊಂಡು ಕೆಳಕಂಡಂತೆ ಆಲೋಚನೆ ಮಾಡಬೇಕಾದದ್ದು ಆವಶ್ಯಕವಾಗುತ್ತದೆ.

"ಶ್ರುತಿ ವಾಕ್ಯದಿಂದ ಉಂಟಾಗುವ" ಆತ್ಮಾ ಒಂದು ಮಾತ್ರ ಸತ್ಯವಸ್ತು" ಎನ್ನುವ ಜ್ಞಾನವು ಮೋಕ್ಷಸಾಧನವಾಗಿದ್ದರೆ, ಪುರುಷತಂತ್ರವಾದ ಭಕ್ತಿಯನ್ನೋ, ಶರಣಾಗತಿಯನ್ನೋ ಆ ಶ್ರುತಿವಾಕ್ಯ ಬೋಧನವನ್ನು ಕುರಿತು ಚರ್ಚೆ ಮಾಡಲು ಅವಕಾಶವುಂಟೆ? ಇಲ್ಲ.

ನಂತರವೂ "ಬ್ರಹ್ಮವೇದ ಬ್ರಹ್ಮೈವ ಭವತಿ" ಎನ್ನುವ ಶ್ರುತಿಯಲ್ಲಿ ಅಡಕವಾಗಿರುವ "ಬ್ರಹ್ಮೈವ ಭವತಿ" ಎನ್ನುವ ಅರ್ಥವನ್ನೂ "ತತ್, ತ್ವಮ್, ಅಸಿ," ಎನ್ನುವುದರ ನಿಜವಾದ ಅರ್ಥದ ರೀತಿಯಲ್ಲಿಯೇ "ವೇದಾಂತವೂ, ಉಪಾಯವೂ", "ವೇದಾಂತವು ಜೀವನು" ಭಾಗಗಳಲ್ಲಿ ಹೇಳಿರುತ್ತೇನೆ ನೋಡತಕ್ಕದ್ದು.

ಈ ರೀತಿ ಅತ್ಯಂತ ಸಂಕ್ಷಿಪ್ತವಾಗಿ ಮೀಮಾಂಸಾ ಶಾಸ್ತ್ರ ರೀತಿಯನ್ನು ಅನುಸರಿಸಿ ಮೇಲೆ ಹೇಳಿರುವ ಪರಿಹಾರವನ್ನು ನೋಡಿದೆವು. ಇನ್ನು ವೇದಾಂತದಲ್ಲಿ ನಿರ್ಣಯಿಸಿರುವ ವಸ್ತುವನ್ನು ತೋರಿಸುತ್ತೇವೆ.

ಇಲ್ಲಿ ಕೆಳಕಂಡಂತೆ ವೇದಾಂತದಲ್ಲಿ ನಿರ್ಣಯಿಸಿರುವ ವಸ್ತುಗಳನ್ನು ಕಾಣತಕ್ಕದ್ದು. ಪರಮಾತ್ಮನನ್ನು ಕುರಿತು ಧ್ಯಾನಿಸುವ ಚಿಂತನವು (ಚಿಂತಿಸುವ ಧ್ಯಾನವು) ಅವನನ್ನು ಪಡೆಯಲು ಕಾರಣ ಎಂಬುದು ಒಂದು ರೀತಿಯಲ್ಲಿ ನಿಜವೇ ಆದರೂ ಆ ಪರಮಾತ್ಮನ ಚರಣಾರವಿಂದಗಳನ್ನೇ ಆಶ್ರಯವಾಗಿ ತೆಗೆದುಕೊಂಡು, ಅದನ್ನೇ ಪಡೆಯುವುದು ಅತ್ಯಧಿಕವಾಗಿ ಶ್ರೇಷ್ಠವಾದ ರೀತಿಯಾಗಿದೆ. ಇದಕ್ಕೆ ಅನೇಕ ಉದಾಹರಣೆಗಳುಂಟು.

ಜ್ಞಾನಿಗಳಲ್ಲಿ ಸರ್ವಶ್ರೇಷ್ಠರಾದವರು ಭೀಷ್ಮರು. ಅವರು ಶರತಲ್ಪದಲ್ಲಿರುವಾಗ ಧರ್ಮರಾಜನಿಗೆ ಅನೇಕ ಧರ್ಮಗಳನ್ನು ಉಪದೇಶ ಮಾಡಿದರು. ಆ ರೀತಿ ಉಪದೇಶ ಪಡೆದ ಧರ್ಮರಾಯನು ಅವರು ಧರ್ಮಗಳನ್ನು ಉಪದೇಶ ಮಾಡುವಾಗ ಪ್ರತಿ ಒಂದೂ ಶ್ರೇಷ್ಠ ಧರ್ಮಗಳೆಂದು ತಿಳಿಯುವುದರಿಂದ ಇವುಗಳೆಲ್ಲಕ್ಕಿಂತಲೂ ಶ್ರೇಷ್ಠವಾದ ಧರ್ಮವನ್ನು ತಿಳಿಯ ಬೇಕೆಂದು ಅಪೇಕ್ಷಿಸಿ ತಮ್ಮ ಜಿಜ್ಞಾಸೆಗೆ ತಕ್ಕ ಹಾಗೆ ಆ ಭೀಷ್ಮರನ್ನು ಕುರಿತು "ತಾವು ಎಲ್ಲಕ್ಕಿಂತ ಶ್ರೇಷ್ಠಧರ್ಮವೆಂದು ಇಷ್ಟಪಡುವುದು ಯಾವುದು? ಎಂದು ಪ್ರಶ್ನಿಸಿದನು. ಅದಕ್ಕೆ ಭೀಷ್ಮರು "ನಾರಾಯಣನ ದಿವ್ಯನಾಮಗಳ ನಾಮ ಸಂಕೀರ್ತನ" ಮಾಡುವುದೇ ಸರ್ವ ಶ್ರೇಷ್ಠವಾದ ಧರ್ಮವೆಂದು ಹೇಳಿರುತ್ತಾರೆ.

ಇದನ್ನು ಶ್ರೀ ವಿಷ್ಣು ಸಹಸ್ರನಾಮಾಧ್ಯಾಯದಲ್ಲಿ ಕಾಣಬಹುದು.

ಇದನ್ನು ನಾವು ಮನಸ್ಸಿನಲ್ಲಿಟ್ಟುಕೊಂಡು ಅತ್ಯಧಿಕ ಶ್ರೇಷ್ಠ ಪ್ರಮಾಣವೆಂದು ಪ್ರಶಂಸಿಸಲ್ಪಟ್ಟ ವೇದದಲ್ಲಿ ಹೇಳಿರುವ ಧರ್ಮಗಳಲ್ಲಿ ಆ ವೇದವು ಅಧಿಕವಾಗಿ ಇಷ್ಟಪಡುವ ಧರ್ಮ ಯಾವುದು? ಎಂಬುದನ್ನು ಅನುಸಂಧಾನ ಮಾಡಿ ನೋಡಬೇಕಾದದ್ದು ಆವಶ್ಯಕ. ಆ ರೀತಿ ಗಹನವಾಗಿ ಆಲೋಚಿಸಿ ನೋಡಿದ್ದೇ ಆದರೆ ಶರಣಾಗತಿ ಎನ್ನುವ ಧರ್ಮವನ್ನೇ ವೇದವು ಅತ್ಯಂತ ಇಷ್ಟಪಡುತ್ತದೆ ಎನ್ನುವುದು ತಿಳಿಯುತ್ತದೆ.

ಆದರೆ ಶ್ರೀ ಭೀಷ್ಮರು ತಾವು ಇಷ್ಟ ಪಡುವ ಧರ್ಮವನ್ನು ತಿಳಿಸುವಾಗ "ಏಷಮೇ ಸರ್ವಧರ್ಮಾಣಾಂ ಧರ್ಮೋಽಧಿಕತಮೋಮತಃ" ಎಂದು ಯಾವ ರೀತಿ ಸ್ಪಷ್ಟವಾಗಿ ತಿಳಿಸಿರುವರೋ, ಅಲ್ಲಿ ವೇದವೂ ಶರಣಾಗತಿಯನ್ನು ತಾನು ಇಷ್ಟ ಪಡುವ ಧರ್ಮವಾಗಿ ತಿಳಿಯಪಡಿಸಿರುವುದೇ ? ಎಂದು ಕೆಲವರು ಸಂದೇಹ ಪಡಬಹುದು.

ಈ ಸಂದೇಹಕ್ಕೆ ಕಿಂಚಿತ್ತೂ ಅವಕಾಶವಿಲ್ಲ ಹೇಗೆ ? ಎಂದರೆ ಭೀಷ್ಮರು ಇಷ್ಟಪಟ್ಟ ಧರ್ಮ "ಪರಮಾತ್ಮನ ನಾಮ ಸಂಕೀರ್ತನೆ" ಎನ್ನುವುದಕ್ಕೆ ಅವರ "ಏಷಮೇ" ಎನ್ನುವ ನುಡಿಯನ್ನು ಆಧಾರವಾಗಿ ಅಲ್ಲಿ ನೋಡಿದೆವು. ಇಲ್ಲಿ ವೇದಪುರುಷನ ಆಚಾರವನ್ನೇ ಕೆಳಕಂಡಂತೆ ಕಾಣಬಹುದು.

ಈ ಪ್ರಪಂಚಕ್ಕೆ ಕಾರಣನಾದ ಭಗವಂತನನ್ನು ಪ್ರೀತಿಯಿಂದ ಧ್ಯಾನಿಸತಕ್ಕವನು ಎಂದು ಭಕ್ತಿಯನ್ನು ಶ್ರುತಿ ಹೇಳಿಬಿಟ್ಟಿತು. ಅದಕ್ಕೆ ಕಾರಣನಾದ ಭಗವಂತನನ್ನು ಮೋಕ್ಷಾಪೇಕ್ಷಿಯಾದ ತಾನು ಆಶ್ರಯಿಸುತ್ತೇನೆ ಎಂದು ಶರಣಾಗತಿಯಲ್ಲಿ ತನ್ನ ಅನುಷ್ಠಾನ ಇರುವುದಾಗಿ ತಿಳಿಯಪಡಿಸುತ್ತಾನೆ. ಇಲ್ಲಿ ಮೇಲೆ ಹೇಳಿರುವ "ಕಾರಣಂತು ಧ್ಯೇಯಃ ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ" ಎನ್ನುವ ಶ್ರುತಿವಾಕ್ಯಗಳನ್ನು ನೋಡತಕ್ಕದ್ದು. ಶ್ರೀ ಭೀಷ್ಮರ ವಾಣಿಗಿಂತಲೂ ವೇದಪುರುಷನ ಆಚರಣೆ ಪ್ರಬಲವಲ್ಲವೇ ?

ಈ ರೀತಿ ವೇದದಲ್ಲಿ ಉದಾಹರಣೆಯನ್ನು ನೋಡಿದೆವು. ಇನ್ನು ಪರಮ ಪುರುಷನ ಸಿರಿನುಡಿಗಳಲ್ಲಿಯೂ ತಕ್ಕ ಪ್ರಮಾಣವನ್ನು ನೋಡುತ್ತೇವೆ.

ಪರಮಾತ್ಮನು ಅರ್ಜುನನನ್ನು ಕುರಿತು ಅನುಗ್ರಹಿಸಿದ ದಿವ್ಯಶಾಸ್ತ್ರ "ಭಗವದ್ಗೀತೆ" ಎಂಬುದನ್ನು ಪ್ರಪಂಚ ಅರಿತಿದ್ದೇ ಆಗಿದೆ. ಆ ಗೀತೆಯಲ್ಲಿರುವ 18 ಅಧ್ಯಾಯಗಳಲ್ಲಿಯೂ, ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗ ಎನ್ನುವ ಧರ್ಮಗಳನ್ನು ಸ್ಪಷ್ಟವಾಗಿ ಆ ಪರಮಾತ್ಮನು ಉಪದೇಶ ಮಾಡಿರುವುದನ್ನು, ಅದನ್ನು ಅನುಭವಿಸಿರುವವರು ತಿಳಿದೇ ಇರುವರು. (ನಾನು ಮಾಡುವವನು) ಈ ಕರ್ಮವು ನನ್ನದು, ನನಗೆ ಈ ಫಲವು ಬೇಕು, ಎನ್ನುವ ಭಾವನೆಗಳನ್ನು ಪೂರ್ಣವಾಗಿ ತೊರೆದು ಭಗವಂತನು ಮನಸ್ಸಂತೋಷಪಡುವ ಹಾಗೆ ತನ್ನ ಜಾತಿಗೂ, ಆಶ್ರಮಕ್ಕೂ ತಕ್ಕ ಕರ್ಮಗಳನ್ನು ಮಾಡುವುದೇ ಕರ್ಮಯೋಗ. ಈ ರೀತಿ ಉಚಿತವಾದ ಕಾಲದಲ್ಲಿ ಕರ್ಮಯೋಗವನ್ನು ಮಾಡಿ ಅದರಿಂದ ಚಿತ್ತಶುದ್ಧಿಯನ್ನು ಪಡೆದು ಆ ಮನಸ್ಸನ್ನು ಇಟ್ಟುಕೊಂಡು ಜೀವನಾಗಿರುವ ತನ್ನನ್ನು ಚಿಂತಿಸುವ ಧ್ಯಾನವೇ ಜ್ಞಾನಯೋಗ ?

ಸತ್ಯತೆಯು ಈ ರೀತಿ ಇದ್ದರೂ ಆ ಪರಮ ಪುರುಷನು ಆ ಗೀತೆಯ ಕೊನೆಯಲ್ಲಿ ಹೇಳಿರುವ "ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ" ಎನ್ನುವ ಮಾತನ್ನು ನೋಡಿದರೇ ಶರಣಾಗತಿಯೇ ಅವನು ಇಷ್ಟಪಟ್ಟ ಧರ್ಮ ಎನ್ನುವುದು ತಿಳಿಯುತ್ತದೆ. ಇದನ್ನು ಸ್ವಲ್ಪ ವಿವರಿಸಿ ಹೇಳುತ್ತೇನೆ.

ಪಿಳ್ಳೈಲೋಕಾಚಾರ್ಯರು "ಧರ್ಮ ಸಂಸ್ಥಾಪನವನ್ನು ಮಾಡಲು ಹುಟ್ಟಿದವನು

ತಾನೇ "ಸಮಸ್ತ ಧರ್ಮಗಳನ್ನೂ ಬಿಡು. ನನ್ನನ್ನು ಹೊಂದು" ಎನ್ನುವುದರಿಂದ ಸಾಕ್ಷಾತ್ ಧರ್ಮ ತಾನೇ ಎನ್ನುವುದು" ಎಂದು ಹೇಳಿರುತ್ತಾರೆ.

ಇದರ ತಾತ್ಪರ್ಯ :—ಧರ್ಮವನ್ನು ಸ್ಥಾಪಿಸುವುದಕ್ಕಾಗಿಯೇ ಅವತಾರವನ್ನು ಮಾಡಿದ ಕೃಷ್ಣ ಭಗವಂತನು "ತನ್ನಿಂದ ಉಪದೇಶ ಮಾಡಲ್ಪಟ್ಟಿರುವುದನ್ನು ಒಂದು ರೀತಿಯಿಂದ ಮೋಕ್ಷ ಪುರುಷಾರ್ಥಗಳನ್ನು ತರುವಂತಹ ಕರ್ಮ, ಜ್ಞಾನ, ಭಕ್ತಿ ಎಲ್ಲವನ್ನೂ ಬಿಟ್ಟು ನನ್ನೊಬ್ಬನನ್ನೇ ಸೇರು, ಎನ್ನುವುದರಿಂದ, ಅವನೇ ಪ್ರತ್ಯಕ್ಷವಾಗಿ ಫಲವನ್ನು ಕೊಡುವಂತಹ ಧರ್ಮ" ಎನ್ನುವುದು ಮೇಲೆ ಹೇಳಿರುವ ಕರ್ಮ, ಜ್ಞಾನ, ಭಕ್ತಿಗಳಲ್ಲಿ ಯಾವುದೇ ಆಗಲಿ ನೇರವಾಗಿ ಫಲವನ್ನು ಕೊಡುವಂತಹ ಧರ್ಮಗಳಲ್ಲ ಎಂದೂ ಚೆನ್ನಾಗಿ ತಿಳಿಯುತ್ತದೆ.

ಹಾಗೂ "ಭಕ್ತಿ ಚಪಲನು" ಜೀವನು ಮಾಡುವ ಭಕ್ತಿಯಲ್ಲಿ ಅತ್ಯಂತ ಇಷ್ಟವುಳ್ಳವನು, ಎಂದು ಪ್ರಸಿದ್ಧಿಯನ್ನು ಪಡೆದ ಪರಮ ಪುರುಷನು ಆ ಭಕ್ತಿಯನ್ನು ಅನೇಕ ಕಡೆಗಳಲ್ಲಿ ನಾನಾ ರೀತಿ ವಿಸ್ತಾರವಾಗಿ ಹೇಳಿ ಕೊನೆಯಲ್ಲಿ "ಅದನ್ನು ಬಿಡು ನನ್ನನ್ನು ಹೊಂದು" ಎಂದು ಹೇಳುವುದರಿಂದ ಆ ಭಕ್ತಿಯಲ್ಲಿ ತಾನಾಗಿರುವ ಧರ್ಮವನ್ನೇ ತಾನು ಇಷ್ಟ ಪಟ್ಟಿದ್ದ ಎಂಬುದೂ ಇಲ್ಲಿ ಸುಸ್ಪಷ್ಟ!

ಈ ರೀತಿ ಭಗವಂತನು ಅಪೇಕ್ಷಿಸಿದ ಧರ್ಮ ಶರಣಾಗತಿ ಎಂಬುದನ್ನು ನೋಡಿದೆವು. ವೇದವನ್ನು ಶ್ರೇಷ್ಠ ಪ್ರಮಾಣವೆಂದು ತೆಗೆದುಕೊಂಡು, ಆ ವೇದದ ಅರ್ಥವನ್ನು ಇರುವ ಹಾಗೆಯೇ ತಿಳಿದು, ಆ ಜ್ಞಾನವನ್ನು ಅನುಸರಿಸಿ ನಡೆಯುವವರು ಯಾರೋ ಅವರೇ ವೈದಿಕರೆಂದು ಪ್ರಶಂಸಿಸಲು ಅರ್ಹರು ಆ ವೈದಿಕರು. "ಮಯರ್ವರ ಮದಿನಲಮ್" ಅರುಳ ಪಡೆದ ನಮ್ಮಾಳ್ವಾರ್ರು, ಶ್ರೇಷ್ಠತೆಯನ್ನು ಪಡೆದವರಾಗಿರುತ್ತಾರೆ. ಅವರು ಅತ್ಯಧಿಕ ಶ್ರೇಷ್ಠ ಭಕ್ತಿಯನ್ನು ಪಡೆದಿದ್ದೂ ತಮಗೆ ಭಗವಂತನಲ್ಲಿರುವ ಆ ಭಕ್ತಿ ಅವನನ್ನು ಪಡೆಯುವುದಕ್ಕೆ ಕಾರಣವಾಗಿ ತಿಳಿಯದೆ ಅವನ ಚರಣಾರವಿಂದಗಳನ್ನೇ ಕಾರಣವಾಗಿ ತಿಳಿದಿದ್ದವರು ಎಂಬುದೂ ಅತ್ಯಂತ ಪ್ರಸಿದ್ಧ. ಇದರ ಹಾಗೆಯೇ "ಅವನ ಚರಣಾರವಿಂದಗಳನ್ನೇ ಉಪಾಯವಾಗಿ ಪಡೆದು ಸಂತುಷ್ಟರಾದ ತಮ್ಮ ಆಚಾರ್ಯರುಗಳೂ ಶರಣಾಗತಿ ಧರ್ಮವನ್ನೇ ಇಚ್ಛಿಸಿದ್ದರು" ಎನ್ನುವುದೂ ಸಹ ಸುಸ್ಪಷ್ಟ.

ಈ ರೀತಿ ವೇದವು, ವೇದ್ಯ ವೇದದ ಮುಖ್ಯ ಪುರುಷನಾದ ಪರಮ ಪುರುಷ ವೈದಿಕರು ಮುಂತಾಗಿ ಈ ಮೂವರೂ ಅತ್ಯಧಿಕವಾಗಿ ಅಪೇಕ್ಷಿಸುವ ಧರ್ಮ "ಶರಣಾಗತಿ" ಎನ್ನುವುದನ್ನು ನೋಡಿದೆವು. ಈ ಶರಣಾಗತಿಯನ್ನೇ ರಾಮಾಯಣವು ವಿವರಿಸಿ ಹೇಳುತ್ತದೆ ಎನ್ನುವುದನ್ನು ಇನ್ನು ನೋಡಬಹುದು.

ಆದರೆ ಪರಮಾತ್ಮ, ಜೀವಾತ್ಮ, ಉಪೇಯ, ವಿರೋಧಿ ಎನ್ನುವ (ಐದು ವಸ್ತುಗಳಲ್ಲಿ ಸೇರಿರುವ) ನಾಲ್ಕು ವಸ್ತುಗಳನ್ನು ಸ್ಪಷ್ಟವಾಗಿ ತಿಳಿಸುವುದನ್ನು ಈ ಪ್ರಬಂಧದಲ್ಲಿಯೇ ನೋಡಿರುತ್ತೇವೆ. ಆದರೂ ಶರಣಾಗತಿ ಧರ್ಮವನ್ನು ಪ್ರಕಟಪಡಿಸುವುದರಲ್ಲಿ

ರಾಮಾಯಣವು ಇಷ್ಟವುಳ್ಳದ್ದಾಗಿಯೂ, ರಾಮಾಯಣವು ಶರಣಾಗತಿ ಶಾಸ್ತ್ರವೆಂದು ಪ್ರಸಿದ್ಧಿ ಪಡೆದಿರುವುದರಿಂದಲೂ, ಶರಣಾಗತಿ ಧರ್ಮವನ್ನೇ ರಾಮಾಯಣವು ವಿವರಿಸಿ ಹೇಳುತ್ತದೆ ಎನ್ನುವುದರಲ್ಲಿ ಅಚ್ಚರಿ ಏನೂ ಇರಲಾರದು. ಈ ಭಾಗದಲ್ಲಿ ಶರಣಾಗತಿ ಧರ್ಮದ ಸತ್ಯತೆಯನ್ನು ನಾವು ತಿಳಿಯಬಹುದು.

"ಭಗವಂತನ ಎದುರಿಗೆ ತನ್ನ ಸ್ಥಿತಿಯನ್ನು ಸಂಕೋಚವಿಲ್ಲದೆ ತಿಳಿಸಿ ಸಾಕ್ಷಾತ್ ಲಕ್ಷ್ಮೀದೇವಿಯನ್ನು ಪುರುಷಕಾರವಾಗಿ ಮುಂದಿಟ್ಟು ಭಗವಂತನನ್ನು ಸಾಧನವಾಗಿ ಪಡೆಯುವುದು ಶರಣಾಗತಿ" ಎಂದು ಮೊದಲು ಹೇಳಿದೆವು. ಇಲ್ಲಿ ಚೇತನನಿಂದ ಮಾಡುವ ಶರಣಾಗತಿ ಪುರುಷಾರ್ಥಕ್ಕೆ ಸಾಧನವೇ ? ಅಥವಾ ಈ ಚೇತನನು ಮಾಡುವ ಶರಣಾಗತಿಗೆ ಪಾತ್ರನಾದ ಭಗವಂತನೇ ಪುರುಷಾರ್ಥಕ್ಕೆ ಸಾಧನನೇ ? ಎಂಬ ಸಂದೇಹ ತೋರುವುದು ಯೋಗ್ಯವೇ ಆಗಿದೆ.

ಪಿಳ್ಳೈಲೋಕಾಚಾರ್ಯರು "ಪಡೆಯಬೇಕಾದ ಭಗವಂತನನ್ನು ಪಡೆಯಲು ಪುರುಷಾರ್ಥವೇ ಸಾಧನ ಪಡೆಯುವುದು ಸಾಧನವಲ್ಲ" ಎಂದು ಹೇಳುತ್ತಾರೆ. ಚೇತನನಲ್ಲಿ ಹೊಂದುವಿಕೆ ಅಧಿಕಾರಿ ವಿಶೇಷಣವಾಗಿ ಮನಸ್ಸಿನಲ್ಲಿ ಎಣಿಸಿರುತ್ತಾರೆ.

ದೇಶಿಕರು ಚೇತನನಲ್ಲಿ ಇರುವ ಹೊಂದುವಿಕೆ (ಸ್ವಗತ ಸ್ವೀಕಾರ) ಭಕ್ತಿಸಾಧನದಲ್ಲಿ ಭಗವಂತನನ್ನು ಪಡೆದು ತರುತ್ತದೆ ಎಂದೂ ಆ ಸಾಧನದಲ್ಲಿರುವ ಭಗವಂತನೇ ಪುರುಷಾರ್ಥಕ್ಕೆ ಸಾಧನವೆಂದೂ ಮನಸ್ಸಿನಲ್ಲಿ ಎಣಿಸಿರುತ್ತಾರೆ.

ಇಲ್ಲಿ ಮೊದಲು ಈ ಇಬ್ಬರು ಆಚಾರ್ಯರುಗಳ ಅಭಿಪ್ರಾಯಗಳನ್ನು ತಕ್ಕ ಉದಾಹರಣೆಗಳೊಂದಿಗೆ ಸರಿಯಾಗಿ ವಿವರಿಸಿ ಅರ್ಥತಾರತಮ್ಯಗಳನ್ನು ತೋರಿಸಿ ನಂತರ ರಾಮಾಯಣದಲ್ಲಿ ಶರಣಾಗತಿ ಹೇಳಿರುವ ರೀತಿ ಇಂತಹದ್ದು ಎನ್ನುವುದನ್ನು ತಿಳಿಸುತ್ತೇವೆ.

ಪಿಳ್ಳೈಲೋಕಾಚಾರ್ಯರ ಅಭಿಪ್ರಾಯ ಕೆಳಕಂಡಂತೆ ಇದೆ : "ಧರ್ಮ" ಎಂಬ ಪದಿ ಯಾವುದು, ಅಪೇಕ್ಷಿಸುವ ಫಲಕ್ಕೆ ಕಾರಣವೋ, ಅದನ್ನು ಸೂಚಿಸುವುದಾಗಿದೆ. ಪರಮ ಪುರುಷನು ಅವರವರು ಅಪೇಕ್ಷಿಸುವ ಫಲಕ್ಕೆ ಕಾರಣನಾಗಿರುವುದರಿಂದ "ಶಾಸ್ತ್ರಧರ್ಮ" ಎಂಬ ಮಾತುಗಳಿಂದ ಅವನನ್ನು ಸೂಚಿಸುತ್ತದೆ, "ರಾಮೋ ವಿಗ್ರಹವಾನ್ ಧರ್ಮಃ" "ಕೃಷ್ಣಂ ಧರ್ಮಂ ಸನಾತನಂ" ಎನ್ನುವ ವಾಕ್ಯಗಳನ್ನು ನಾವು ಇಲ್ಲಿ ಕಾಣಬೇಕಾದದ್ದು ಉಚಿತ. ಅನಂತರವೂ ಈ ಪರಮ ಪುರುಷನೆಂಬ ಹಿರಿಯ ಧರ್ಮವು ಶ್ರೇಷ್ಠವುಳ್ಳದ್ದಾಗಿದೆ.

ಯಾವ ರೀತಿ ಎಂದರೆ :–

ಎಲ್ಲಾ ಧರ್ಮಗಳಿಗೂ ಭಗವಂತನೆಂಬ ಧರ್ಮಕ್ಕೂ ಅತ್ಯಧಿಕ ವ್ಯತ್ಯಾಸವುಂಟು, ಹೇಗೆ ಎಂದರೆ : ಇತರ ಧರ್ಮಗಳು ಏನೇ ಆಗಿರಲಿ ಅದು ಬೇರೊಂದರ ಸಹಾಯವಿಲ್ಲದೆ ಇರಲಾರದು. ಪರಮಾತ್ಮನೋ ಆ ರೀತಿ ಬೇರೊಂದರ ಸಹಾಯವನ್ನು

ಅಪೇಕ್ಷಿಸುವುದಿಲ್ಲ, ಎನ್ನುವುದು ಮಾತ್ರವಲ್ಲ; ಆ ರೀತಿ ಸಹಾಯವನ್ನು ಇಚ್ಛಿಸುವವನೂ ಅಲ್ಲ.

ಭಗವಂತನನ್ನು ಕುರಿತು ಚಿಂತಿಸುವ ಧ್ಯಾನಭಕ್ತಿ ಎಂಬುದನ್ನು ನಾವು ತಿಳಿದೇ ಇದ್ದೇವೆ. ಈ ಭಕ್ತಿ ತಾನು ಉತ್ಪನ್ನವಾಗುವಾಗ ಚೇತನನ ಪ್ರಯತ್ನವನ್ನು ಅಪೇಕ್ಷಿಸುತ್ತದೆ. ಈ ಚೇತನನು ಶಾಸ್ತ್ರ ಹೇಳುವ ಹಾಗೆ ಮೊದಲಿನಲ್ಲಿ ಇಂತಹುದು ಭಕ್ತಿ ಎನ್ನುವುದನ್ನು ತಿಳಿದು, ಆ ರೀತಿ ತಿಳಿದ ಹಾಗೆ ಪ್ರಯತ್ನಿಸಿ ಮಾಡುವಾಗ ತಾನಾಗಿಯೇ ಉತ್ಪನ್ನವಾಗುತ್ತದೆ; ಪ್ರಯತ್ನಪಟ್ಟು ಮಾಡದೆ ಇದ್ದದ್ದೇ ಆದರೆ ಉಂಟಾಗುವುದಿಲ್ಲ.

ಅನಂತರವೂ ಈ ಭಕ್ತಿ ಫಲವನ್ನು ಕೊಡುವಾಗ ಹಾಗೆ ಮಾಡುವಂತಹ ಜ್ಞಾನ ಶಕ್ತಿಗಳನ್ನು ಪಡೆದಿದ್ದರೂ, ಅತ್ಯಧಿಕ ಜ್ಞಾನ ಶಕ್ತಿಗಳುಳ್ಳ ಭಗವಂತನನ್ನು ಸಹಾಯವಾಗಿ ಅಪೇಕ್ಷಿಸುತ್ತದೆ. ಇದರಿಂದ "ಭಕ್ತಿ" ತಾನು ಉತ್ಪನ್ನವಾಗುವಾಗ ಚೇತನನ ಪ್ರಯತ್ನವನ್ನು ಅಪೇಕ್ಷಿಸುತ್ತದೆ. ಫಲವನ್ನು ಕೊಡುವಾಗ ಭಗವಂತನನ್ನು ಅಪೇಕ್ಷಿಸುತ್ತದೆ ಎನ್ನುವುದು ಚೆನ್ನಾಗಿ ತಿಳಿಯುತ್ತದೆ.

ಹಾಗಿದ್ದರೂ, ಚಿತ್ತವು ಶುದ್ಧವಾಗಿ ಇಲ್ಲದೆ ಇರುವಾಗ ಆ ಮನಸ್ಸು ಭಗವಂತನನ್ನು ಚಿಂತಿಸಲು ಅನುಕೂಲವಾಗಿರುವುದಿಲ್ಲ. ಆದ್ದರಿಂದ ಯಾವುದನ್ನು ಮಾಡಿದರೆ ಚಿತ್ತಶುದ್ಧಿ ಉಂಟಾಗುತ್ತದೆಯೋ ಅದನ್ನು ಮಾಡಿದರೆ ಚಿತ್ತಶುದ್ಧಿಯುಂಟಾಗುತ್ತದೆ. ಈ ಚಿತ್ತಶುದ್ಧಿಯನ್ನು ಕರ್ಮಯೋಗ ಮಾಡಿ ಪಡೆಯಬಹುದು. ಇದನ್ನು ನೋಡಿದ್ದರಲ್ಲಿ ಭಕ್ತಿಯನ್ನು ಮಾಡುವುದಕ್ಕೆ ಚಿತ್ತಶುದ್ಧಿಯು ಅರ್ಹವಾಗಿರುವುದಿಲ್ಲ. ಆದ್ದರಿಂದ "ಭಕ್ತಿ" ಚಿತ್ತಶುದ್ಧಿಯ ಮಾರ್ಗದಿಂದ ಕರ್ಮಯೋಗವನ್ನು ಸಹಾಯವಾಗಿ ಕೋರುತ್ತದೆ ಎಂಬುದು ಚೆನ್ನಾಗಿ ಪ್ರಕಟಪಡುತ್ತದೆ. ಚಿತ್ತಶುದ್ಧಿ ಎಂದರೆ :—ಮನಃಶಾಂತಿ, ಸಂಯಮ.

ಇನ್ನೂ ಈ ರೀತಿಯಾಗಿ ಭಕ್ತಿಗೆ ಸಹಾಯವಾದ ಅನೇಕ ವಿಷಯಗಳನ್ನು ಶಾಸ್ತ್ರಗಳಲ್ಲಿ ಕಾಣಬಹುದು.

ಪರಮಾತ್ಮನೆಂಬ ಧರ್ಮಕ್ಕೋ ಒಂದು ಸಹಾಯವನ್ನೂ ಹೇಳುವುದಕ್ಕೆ ಇಲ್ಲ. ನಿತ್ಯವಾಗಿ ಉತ್ಪತ್ತಿ, ವಿನಾಶ ಎಂಬುದೇ ಇಲ್ಲದವನು. ಜ್ಞಾನಾನಂದಮಯನೂ, ಶಕ್ತಿಸಂಪನ್ನನೂ, ಆಗಿರುವುದರಿಂದ ಫಲವನ್ನು ಕೊಡುವಾಗ ಬೇರೆಯವರ ಸಹಾಯವನ್ನು ಅಪೇಕ್ಷಿಸುವುದಿಲ್ಲ. ಸ್ವಾಭಾವಿಕವಾಗಿಯೇ ಅತ್ಯಧಿಕ ಹಿರಿಮೆಯುಳ್ಳವನಾದುದರಿಂದ ಆ ಶ್ರೇಷ್ಠತೆಯನ್ನು ಪಡೆಯಲು ಮತ್ತೊಂದನ್ನು ಅಪೇಕ್ಷಿಸುವುದಕ್ಕೆ ಅವಕಾಶವಿಲ್ಲ.

ಸಾಧಾರಣವಾಗಿ ಹಿರಿಮೆಯುಳ್ಳವನೆಂಬುದೇ ಅಲ್ಲ; ತನ್ನ ವ್ಯವಹಾರದಿಂದ ಇತರರಿಗೂ ಹಿರಿಮೆಯನ್ನುಂಟು ಮಾಡುವನು.

ಮತ್ತೂ, ಮತ್ತಾವುದರ ಸಹಾಯವನ್ನೂ ಭಗವಂತನು ಅಪೇಕ್ಷಿಸನು ಎನ್ನುವುದಕ್ಕೆ ಕೆಳಕಂಡ ಚರಿತ್ರೆಯನ್ನು ಎತ್ತಿ ತೋರಿಸಬಹುದು. ಇಂದ್ರಜಿತ್ತಿನ ಬ್ರಹ್ಮಾಸ್ತ್ರದಿಂದ ಕಟ್ಟಲ್ಪಟ್ಟ ಹನುಮಂತನನ್ನು ರಾಕ್ಷಸರು ಮೇಲೆ ಸೆಣಬಿನ ಹಗ್ಗದಿಂದ ಕಟ್ಟಲು ಆ ಬ್ರಹ್ಮಾಸ್ತ್ರ ಸಡಿಲವಾಯಿತು. ಹಾಗೆ ಸಡಿಲವಾದರೂ ರಾವಣನ ನಿಜ ಸ್ಥಿತಿಯನ್ನು

ತಿಳಿಯಲು ಅಪೇಕ್ಷಿಸಿ ಬಂಧಿಸಲ್ಪಟ್ಟವನ ಹಾಗೆ ಆ ಹನುಮಂತನಿರಲು, ಅವನನ್ನು ಆ ರಾಕ್ಷಸರು ರಾವಣನ ಹತ್ತಿರ ಎಳೆದುಕೊಂಡು ಹೋದರು. ಈ ಚರಿತ್ರೆಯಲ್ಲಿ ಬೇರೊಂದರಿಂದ ಬಂಧಿಸಿದ್ದನ್ನು ಬ್ರಹ್ಮಾಸ್ತ್ರ ಸಹಿಸಲಿಲ್ಲ, ಎನ್ನುವುದು ಸ್ಪಷ್ಟ. ಇದರ ಹಾಗೆಯೇ ಭಗವಂತನೂ ಮತ್ತೊಂದರ ಸಹಾಯವನ್ನು ಸಹಿಸಲಾರನು ಎಂಬ ಸತ್ಯವನ್ನು ಇಲ್ಲಿ ಕಾಣಬೇಕು. ಈ ರೀತಿಯಾಗಿ ಭಗವಂತನಿಗೂ ಇತರೇ ಧರ್ಮಗಳಿಗೂ ಇರುವ ತಾರತಮ್ಯವನ್ನೂ ಭಗವಂತನಿಗಿರುವ ಶ್ರೇಷ್ಠತೆಯನ್ನು ತಿಳಿದೆವು.

ಮೇಲೆ ಹೇಳಿರುವಂತೆ, ಭಗವಂತನು ಬೇರೆ ಯಾವುದರ ಸಹಾಯವನ್ನೂ ಕಿಂಚಿತ್ತೂ ಅಪೇಕ್ಷಿಸಲಾರನು ಎನ್ನುವುದಕ್ಕೆ ತಕ್ಕ ಉದಾಹರಣೆ ಯಾವುದು ಎಂದರೆ ಶರಣಾಗತಿಯನ್ನು ಹೇಳುವ ಉದಾಹರಣೆಗಳು ಅನೇಕವುಂಟು. ಅವು ಯಾವುವು ? "ಮಾಮೇವ ಯೇ ಪ್ರಪದ್ಯಂತೇ." "ತಮೇವ ಚಾದ್ಯಂ ಪುರುಷಂ ಪ್ರಪದ್ಯೇತ್," "ತ್ವಮೇವೋಪಾಯ ಭೂತೋ ಮೇ ಭವ" "ಆರೆನಕ್ಕು ನಿನ್ ಪಾದಮೇ ಶರಣಾಗ ತಂದೊಳಿಂದಾಯ್" ಎನ್ನುವಂತೆ.

ಈ ಉದಾಹರಣೆಗನುಸಾರವಾಗಿಯೇ ಯಾರು ಕೆಲವರು ನನ್ನನ್ನು ಅವಲಂಬಿಸುತ್ತಾರೋ ಆ ಆದಿಪುರುಷನನ್ನೇ ಪಡೆಯುವವರಾಗಿದ್ದಾರೆ. ನೀನೇ ನನಗೆ ಉಪಾಯವಾಗಿ ಬೇಕು "ನನಗೆ ಉಪಾಯವನ್ನು ತರುವ ಸ್ಥಳದಲ್ಲಿ ನಿನ್ನ ಪಾದ ಪದ್ಮಗಳನ್ನೇ ಉಪಾಯವಾಗಿ ಕೊಟ್ಟಿರುತ್ತೀಯೆ" ಎನ್ನುವ ತಾತ್ಪರ್ಯವನ್ನು ಕಾಣತಕ್ಕದ್ದು.

ಮೇಲೆ ಹೇಳಿರುವ ಉದಾಹರಣೆಗಳಲ್ಲಿ ಉಪಾಯ ವಸ್ತುವನ್ನು ಸೂಚಿಸುವ ನುಡಿಯನ್ನು ಸೇರಿಸಿಯೇ 'ಏವ' ಎನ್ನುವ ಮಾತುಗಳನ್ನು ಕಾಣುತ್ತೇವೆ. ಈ ಮಾತುಗಳು ಇಲ್ಲಿ ಬೇರೆಯ ಸ್ಥಿತಿ ವಸ್ತುವನ್ನು ಪಡೆದಿರುವುದಂತೆ, ಅದು ಯಾವುದು ? ಭಗವಂತನೇ ಅವನನ್ನು ಪಡೆಯಲು ಮುಖ್ಯ ಕಾರಣ. ಬೇರೆ ಒಂದೂ ಮುಖ್ಯ ಕಾರಣವಾಗಿಯೋ, ಸಹಾಯಕ ಕಾರಣವಾಗಿಯೋ ಅಲ್ಲ ಎನ್ನುವುದು ತಿಳಿಯುತ್ತದೆ.

ಈ ಸಾರಾಂಶವನ್ನು ನೋಡುವಲ್ಲಿ ಚೇತನನಲ್ಲಿರುವ ಉದ್ಯಮ ಕಾರಣವಲ್ಲ; ಪಡೆಯಬೇಕಾದ ಭಗವಂತನೇ ಕಾರಣ ಎಂಬುದು ಸ್ಪಷ್ಟವಾಗಿ ಕಾಣುತ್ತದೆ. ಇನ್ನೂ ಈ ಚೇತನನು ಭಗವಂತನನ್ನು ಪಡೆಯಲು ಮಾಡುವ ಪುರುಷಾರ್ಥಕ್ಕೆ ಕಾರಣವಲ್ಲ. ಎನ್ನುವುದನ್ನು "ತಂಹ ದೇವಮಾತ್ಮ ಬುದ್ಧಿಪ್ರಕಾಶಮ್" ಎನ್ನುವ ಶ್ರುತಿಯಲ್ಲಿಯೂ ನಾವು ಚೆನ್ನಾಗಿ ಕಾಣಬಹುದು. ಈ ಶ್ರುತಿಯ ಅರ್ಥ ಭಗವಂತನು ಉಪಾಯ ಎನ್ನುವ ಜ್ಞಾನವನ್ನು ಆ ಭಗವಂತನ ಕೃಪೆಯಿಂದಲೇ ಪಡೆಯಬೇಕು ಎನ್ನುವುದು.

ಈ ಶ್ರುತಿ ಮೊದಲು ಹೇಳಿದ "ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ" ಎನ್ನುವ ವಾಕ್ಯದೊಂದಿಗೆ ಸೇರಿರುವುದರಿಂದ "ಭಗವಂತನೇ ಉಪಾಯ" ಎನ್ನುವ ತಿಳುವಳಿಕೆಯನ್ನು ಯಾವ ಭಗವಂತನು ತನ್ನ ಕೃಪೆಯಿಂದ ಪ್ರಕಾಶಗೊಳಿಸುತ್ತಾನೋ ಆ ಭಗವಂತನನ್ನೇ ಮೋಕ್ಷ ಪುರುಷಾರ್ಥವೆನ್ನುವ ನಾನು (ವೇದಸ್ವರೂಪನು) ಉಪಾಯವಾಗಿ ಪಡೆಯುತ್ತೇನೆ, ಎನ್ನುವ ತಾತ್ಪರ್ಯವನ್ನು ಇಲ್ಲಿ ಕಾಣತಕ್ಕದ್ದಾಗಿದೆ.

ಈ ಅಭಿಪ್ರಾಯವನ್ನು ಗಹನವಾಗಿ ಆಲೋಚಿಸಿ ನೋಡಿದ್ದೇ ಆದರೆ ಮೊದಲಿನಲ್ಲಿ ಭಗವಂತನ ಅನುಗ್ರಹಕ್ಕೆ ಪಾತ್ರನಾದ ನಂತರ ಅವನ ಕೃಪೆಯಿಂದ "ಭಗವಂತನೇ ಉಪಾಯ" ಎಂಬುವ ಜ್ಞಾನವನ್ನು ಪಡೆದು ಅದರ ನಂತರ ಭಗವಂತನನ್ನು ಉಪಾಯವಾಗಿ ಪಡೆಯುತ್ತಾರೆ ಎನ್ನುವ ಕ್ರಮ ಚೆನ್ನಾಗಿ ತಿಳಿದು ಬರುತ್ತದೆ.

ಭಗವಂತನನ್ನು ಉಪಾಯವಾಗಿ ಪಡೆಯುವುದಕ್ಕೆ ಆ ರೀತಿಯ ಸ್ವೀಕಾರ ಅವಶ್ಯಕ. ಉಪಾಯವಾಗಿ ಪಡೆಯಬೇಕು ಎನ್ನುವ ಆಸೆಯೇ ಕಾರಣ. ಆ ಆಸೆ ಉಂಟಾಗಲು "ಭಗವಂತನು ಉಪಾಯ" ಎಂಬುವ ಜ್ಞಾನವೇ ಕಾರಣ. ಆ ಜ್ಞಾನವನ್ನು ಪಡೆಯುವುದಕ್ಕೆ ಆ ಭಗವಂತನ ಕೃಪೆಯೇ ಸಾಧನ ಎಂಬುದನ್ನು ಬೇರೊಂದು ಮಾರ್ಗದಿಂದ ಪಡೆದು ಸರಿಹೊಂದಿರುವುದನ್ನು ಇಲ್ಲಿ ತಿಳಿಯತಕ್ಕದಾಗಿದೆ.

ಈ ಅಭಿಪ್ರಾಯವನ್ನು ನಮ್ಮಾಳ್ವಾರ್‌ರವರೂ—"ಎನ್ ಉಣರ್ವಿನುಳ್ಳೇ ಇರುತ್ತಿನೇನ್, ಅದುವುಮ್ ಅವನ ದಿನ್ನರುಳೇ" ಎಂದು ತಮ್ಮ ಶ್ರೀ ನುಡಿಗಳಿಂದ ಪ್ರಕಟಪಡಿಸಿರುತ್ತಾರೆ. ಈ ಚೇತನನು ಭಗವಂತನನ್ನು ಪಡೆದ ನಂತರ ಇವನ ಕಷ್ಟಗಳೆಲ್ಲಾ ಪರಿಹಾರವಾಗಿ ಸುಖವನ್ನು ಅನುಭವಿಸುವ ಹಾಗೆಯೇ ಈ ಎರಡಕ್ಕೂ ಮೊದಲು ಈ ಚೇತನನಲ್ಲಿರುವ ಆದರವು ಆ ಭಗವಂತನಿಂದಲೇ ಉಂಟಾಗುತ್ತದೆ. ಎನ್ನುವ ನಿರ್ದಿಷ್ಟವಾದ ಸತ್ಯ ವಸ್ತುವೂ ಇಲ್ಲಿ ಚೆನ್ನಾಗಿ ತಿಳಿಯುತ್ತದೆ.

ಇಲ್ಲಿ ಕೆಳಗೆ ಹೇಳುವುದನ್ನು ನೋಡಬಹುದು.

ತಂದೆಯಾದವನು ತನ್ನ ಮಗನಿಗೆ "ಗಾಯತ್ರಿ" ಎಂಬ ಮಂತ್ರವನ್ನು ಶಾಸ್ತ್ರ ರೀತಿಯಿಂದ ಉಪದೇಶಿಸುತ್ತಾನೆ. ಅದನ್ನು ತಿಳಿದುಕೊಂಡ ಆ ಪುತ್ರನೂ ತನ್ನ ತಂದೆಯು ತನ್ನ ಕೈಯಲ್ಲಿ ಕೊಟ್ಟ ಹಣವನ್ನು ಆ ತಂದೆಗೇ ತನ್ನ ಕೃತಜ್ಞತೆಗೆ ತಕ್ಕ ಹಾಗೆ ಕೊಡುತ್ತಾನೆ

ಇದರ ಹಾಗೆ ಭಗವಂತನು ಕೊಟ್ಟ ತಿಳುವಳಿಕೆಯನ್ನೂ, ಆಸೆಯನ್ನೂ ಪಡೆದ ಈ ಚೇತನನು ಆ ಭಗವಂತನು ಅನುಗ್ರಹಿಸಿದ ಕೃಪೆಯಿಂದಲೇ ಆ ಭಗವಂತನನ್ನು ಉಪಾಯವಾಗಿ ಪಡೆಯುತ್ತಾನೆ. ಆದ್ದರಿಂದ ಆ ಸಂಬಂಧ ಉಪಾಯ ತನ್ನದು ಎನ್ನುವುದಕ್ಕೆ ಅವಕಾಶವಿಲ್ಲ.

ಈವರೆವಿಗೂ ಹೇಳಿರುವುದರಲ್ಲಿ ಭಗವಂತನನ್ನು ಪಡೆಯುವ ಸ್ಥಿತಿ ಸಾಧನವಲ್ಲ. ಭಗವಂತನೇ ಮುಖ್ಯಧರ್ಮ ಎನ್ನುವುದನ್ನು ತಿಳಿದೆವು. ಆದರೆ ಈ ಅನುಗ್ರಹವು ಚೇತನನಿಗೆ ಪುರುಷಾರ್ಥವನ್ನು ಪಡೆಯುವಾಗ ಸಹಾಯ ಮಾಡುವುದು ಹೇಗೆ? ಎಂದರೆ ಅಧಿಕಾರಿ ವಿಶೇಷಣವಾಗಿ ಸಹಾಯವನ್ನು ನೀಡುತ್ತವೆ. ಇವನ್ನು ಸ್ವಲ್ಪ ವಿವರಿಸಿ ಹೇಳುತ್ತೇನೆ.

ಶಾಸ್ತ್ರಗಳಲ್ಲಿ ಉಪಾಯ, ಅಂಗ, ಫಲ ಎಂದು ಹೇಳಿರುವುದನ್ನು ನಾವು ಕಾಣಬಹುದು. ಭಗವಂತನನ್ನು ಪಡೆದು ಅವನನ್ನೂ ಅವನ ಶ್ರೇಷ್ಠ ಗುಣಗಳನ್ನೂ ದಿವ್ಯ ಮಂಗಳ ವಿಗ್ರಹವನ್ನೂ ಪ್ರೀತಿಯೊಂದಿಗೆ ಅನುಭವಿಸಿ ಆ ಅನುಭವದಿಂದುಂಟಾದ ಆನಂದ ಹೊರಹೊಮ್ಮಿ ಪ್ರೇರೇಪಿಸಲು ಅದರಿಂದ ಮಾಡುವ ದಾಸ್ಯ ಕೈಂಕರ್ಯವೇ ಅತ್ಯಂತ

ಶ್ರೇಷ್ಠಫಲ. ಈ ಫಲವನ್ನು ಪಡೆಯುವುದಕ್ಕೆ ಭಗವಂತನೇ ಉಪಾಯ. ಈ ಉಪಾಯವನ್ನು (ಭಗವಂತನನ್ನು) ಒಬ್ಬನು ಪಡೆಯುವಾಗ ಇತರ ಎಲ್ಲಾ ಧರ್ಮಗಳನ್ನೂ ಬಿಟ್ಟರೇ ಪಡೆಯಬಹುದಾಗಿದೆ. ಇದಕ್ಕೆ "ಸರ್ವಧರ್ಮಾನ್ ಪರಿತ್ಯಜ್ಯ" ಎನ್ನುವ ಶ್ರೀ ಕೃಷ್ಣಪರಮಾತ್ಮನ ನುಡಿಗಳೇ ತಕ್ಕ ಉದಾಹರಣೆಯಾಗಿದೆ.

ಭೋಜನ ಮಾಡುವವನೊಬ್ಬನು ಮೊದಲು ಸ್ನಾನಮಾಡಿಯೇ ನಂತರ ಊಟ ಮಾಡಬೇಕು ಎಂದು "ಸ್ನಾತ್ವಾಭುಂಜೀತ" ಎಂದು ಹೇಗೆ ಶಾಸ್ತ್ರ ಹೇಳುತ್ತದೆಯೋ, ಹಾಗೆಯೇ ಶ್ರೀ ಕೃಷ್ಣಪರಮಾತ್ಮನೂ ಪರಮ ಪುರುಷನಾಗಿರುವ ನನ್ನನ್ನು ಪಡೆಯಲು ಇತರ ಎಲ್ಲಾ ಧರ್ಮಗಳನ್ನೂ ಪೂರ್ಣವಾಗಿ ಬಿಟ್ಟುಬಿಡು, ನನ್ನನ್ನು ಹೊಂದು ಎಂದು ಹೇಳಿರುವನಲ್ಲವೇ ! ಈ ರೀತಿ ಇತರ ಎಲ್ಲಾ ಧರ್ಮಗಳನ್ನೂ ಬಿಡು ಎನ್ನುವುದು ಅಂಗವಂತೆ.

ಈ ಚೇತನನಲ್ಲಿರುವ ಸಂಬಂಧವೋ ಉಪಾಯವೋ ಅಲ್ಲ. ಅಂಗವೂ ಅಲ್ಲ. ಆದರೂ ಈ ಚೇತನನು ಸಂಬಂಧವನ್ನು ಪಡೆದಿದ್ದರೇ ಅದರ ಮೇಲೆ ಹೇಳಿರುವ ಫಲವನ್ನು ಪಡೆಯಬಹುದು. ಸಂಬಂಧ ಪಡೆಯದಿದ್ದರೆ ಫಲವನ್ನು ಪಡೆಯಲಾರನು.

ಈ ರೀತಿ ಚೇತನನೊಂದಿಗಿರುವ ಸಂಬಂಧ, ಉಪಾಯ, ಅಂಗ ಇವುಗಳಿಂದ ಬೇರೆಯಾದದ್ದು, ಫಲವುಂಟಾಗುವಾಗ ಪ್ರಾರ್ಥಿಸುವುದಾಗಿಯೂ ಇರುವುದರಿಂದ ಇದು ಅಧಿಕಾರಿ ವಿಶೇಷಣ.

"ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।
ಅಹಂತ್ವಾಂ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ ॥" ಎನ್ನುವ ಮಾತನ್ನು ಕಾಣತಕ್ಕದ್ದು.

ಈ ವಾಣಿಯಲ್ಲಿ "ಸರ್ವಧರ್ಮಾನ್ ಪರಿತ್ಯಜ್ಯ" ಎನ್ನುವ ಸ್ಥಳದಲ್ಲಿ ಮೊದಲು ಹೇಳಿದ ಹಾಗೆ ಇತರ ಎಲ್ಲಾ ಧರ್ಮಗಳನ್ನೂ ತೊರೆದು ಬಿಡು, ಎಂಬುವ ಅಂಗವನ್ನು "ಮಾಮ್" ಎನ್ನುವ ಭಾಗದಲ್ಲಿ ಭಗವಂತನಾಗಿರುವ ಉಪಾಯವನ್ನು "ಏಕಂ" ಎನ್ನುವ ಸ್ಥಳದಲ್ಲಿ ಇವನಲ್ಲಿರುವ ಸಂಬಂಧ ಉಪಾಯವಲ್ಲ, ಭಗವಂತನು ಬೇರೊಂದರ ಸಹಾಯವನ್ನು ಅಪೇಕ್ಷಿಸುವುದಿಲ್ಲ ಎನ್ನುವುದನ್ನೂ "ವ್ರಜ" ಎನ್ನುವ ಸ್ಥಳದಲ್ಲಿ ಇವನು ಪಡೆದಿರುವ ಸಂಬಂಧವನ್ನು "ತ್ವಾ" ಎನ್ನುವಲ್ಲಿ ಸಂಬಂಧವನ್ನುಂಟು ಮಾಡಿದ ಚೇತನನಾಗಿರುವ ಅಧಿಕಾರಿಯನ್ನು ಹೇಳುವ ಮುಖಾಂತರ ಸಂಬಂಧವುಳ್ಳ ಅಧಿಕಾರಿ ವಿಶೇಷಣವನ್ನು "ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ" ಎನ್ನುವ ಸ್ಥಳದಲ್ಲಿ ಭಗವಂತನನ್ನು ಹೊಂದಲು ಆಗದೆ ತಡೆಯಾಗಿರುವ ಪಾಪವನ್ನು ದೂರಗೊಳಿಸಿ ನಿವಾರಣೆ ಮಾಡಿ, ಕೃಷ್ಣ ಪರಮಾತ್ಮನು ಪ್ರಕಟಪಡಿಸಿರುವುದು ಸ್ಪಷ್ಟ.

ಅನಂತರವೂ "ತನಕ್ಕಡಿಮೈ ಪಟ್ಟದು, ತಾನರಿಯಾ ನೇಲುಂ, ಮನತ್ತಾಲ್ಯಿಲ ವೃಷ್ಟದಾಂ, ಮಾಲ್ಯೆ................ ಮನತ್ತಿಡರ್ಕ್ಕ ಪರಿಯಾಂ ವಣ್ಣಮಿಯಂಬುಮಿದೆ ಪಲ್ಲಾಂಡ್ ಮಾಯಿನಾರ ಪೇರ್ ಪಿರಪಾರ್ ಪಂಡ್ಮ ಮಾಟಿ, ಎನ್ನುವ ಪೂರ್ಣ,

ಳ್ವಾರ ಶ್ಲೋಕವೂ ಇಲ್ಲಿ ಅನುಭವಿಸತಕ್ಕದ್ದು. ಈ ಹಾಡಿನ ಮೊದಲ ನುಡಿಯಲ್ಲಿ ದೊರೆಯುವ ತಾತ್ಪರ್ಯ–

"ಈ ಚೇತನನು ಭಗವಂತನಿಗೆ ಸೇರಿದವನು ತಾನು "ಉಪಾಯಪ್ಪೊರುಳ್" (ಯುಕ್ತ) ಅರ್ಹವಸ್ತು ಎನ್ನುವ ಸತ್ಯತೆಯನ್ನು ತಿಳಿದುಕೊಳ್ಳುವ ಶಕ್ತಿ ಪಡೆಯದೆ ಇದ್ದರೂ, ಹಿರಿಯರು ಅನುಸರಿಸುವ ರೀತಿಯನ್ನು ನೋಡಿದ್ದರೂ ಸಹ ಭಗವಂತನನ್ನು ತನ್ನ ಮನಸ್ಸಿನಲ್ಲಿ ಸ್ಮರಿಸಿ ಇರುವವರು ಎನ್ನುವುದಾಗಿದೆ.

ಇನ್ನು ಚರಣದ ಸಾರಾಂಶ ವಸ್ತುವನ್ನು ನೋಡುತ್ತೇವೆ (ಈ ಚೇತನನಿಗೆ ಮೊದಲು ಹೇಳಿದ ತರಹ) ಇಷ್ಟನ್ನು ಮಾತ್ರ ಉಂಟಾದರೂ, ಭಗವಂತನು ಇವನ ವಿರೋಧಿಯನ್ನು ಹೋಗಲಾಡಿಸಿ, ಇವನಿಗೆ ತನ್ನನ್ನು ತಾನೇ ತಂದುಕೊಡುವನು. ಹೇಗೆ ? ಎಂದರೆ :–

ಕಾಡು ಮೇಡಾಗಿರುವ ಭೂಮಿಯನ್ನು ಕೆರೆಯಾಗಿ ತೋಡುತ್ತೇವೆ. ಈ ಕಾರ್ಯವು ಮಳೆ ಬರುವುದಕ್ಕೆ ಕಾರಣವಲ್ಲ. ನಾವು ಕೆರೆಯನ್ನು ತೋಡುತ್ತೇವೆಂದು ಮಳೆ ಬರುತ್ತದೆಯೋ ? ಇಲ್ಲ. ಇದರಿಂದ ಕೆರೆಯನ್ನು ಅಗೆಯುವುದು ಮಳೆ ಬರಲು ಕಾರಣವಲ್ಲ ಎನ್ನುವುದು ಪ್ರಪಂಚದಲ್ಲಿ ತಿಳಿದಿರುವ ವಿಷಯವೇ ಆಗಿದೆ. ಆದರೆ ಕೆರೆ ತೋಡುವುದು ಮಳೆ ಬರುವುದಕ್ಕೆ ಕಾರಣವಲ್ಲದಿದ್ದರೆ ಹಾಗೆ ಅಗೆಯುವುದು ಫಲವುಳ್ಳದ್ದಲ್ಲವಲ್ಲವೇ ಎಂದು ಎಣಿಸಬಾರದು. ಪರಮಾತ್ಮನ ಇಚ್ಛೆಗನುಸಾರವಾಗಿ ಮಳೆ ಬರುವಾಗ ಆ ಮಳೆ ನೀರನ್ನು ಆ ಕಾಡಿನ ದಿಣ್ಣೆಯು (ಗುಡ್ಡವು) ತಡೆಯುತ್ತದೆಯೋ, ಆ ದಿಣ್ಣೆಯನ್ನು ಸಮಪಡಿಸಿ ಮಡುವನ್ನಾಗಿ ಮಾಡಿ ಇಟ್ಟಿದ್ದೇ ಆದರೆ ಮಳೆಯು ಬಂದಾಗ ಆ ಮಳೆಯ ನೀರನ್ನು ಆ ಕೆರೆಯು ತಡೆದು ತನ್ನಲ್ಲಿ ಇಟ್ಟುಕೊಳ್ಳುತ್ತದೆ ? ಎನ್ನುವುದೇ ತಾತ್ಪರ್ಯ.

ಇದರಿಂದ ಕೆರೆಯನ್ನು ಅಗೆಯುವುದು ಮಳೆಯ ನೀರನ್ನು ನಾಶ ಮಾಡದೆ ಇರಲು ಅಲ್ಲದೆ ಮಳೆ ಬರಲು ಅಲ್ಲ ಎಂಬುದನ್ನು ಚೆನ್ನಾಗಿ ತಿಳಿದೆವು.

ಇಲ್ಲಿ ಭಗವಂತನನ್ನು ಉಪಾಯವಾಗಿ ಪಡೆಯದೆ ಇರುವವರನ್ನು ಕಾಡುಗುಡ್ಡದ ಹಾಗೂ, ಭಗವಂತನನ್ನು ಉಪಾಯವಾಗಿ ಪಡೆಯುವ ಸಂಬಂಧವನ್ನೂ ಕೆರೆಯ ಹಾಗೆ ಎಂದೂ ಹೇಳಲು ಸಾಧ್ಯ. ಚೇತನನಲ್ಲಿರುವ ಭಗವಂತನ ಕರುಣಾಭರಿತವಾದ ಅನುಗ್ರಹವನ್ನು ಪಡೆಯುವುದಕ್ಕೆ ಒಂದು ರೀತಿಯಿಂದ ಸಹಾಯವಾಗುತ್ತದೆಯೇ ಹೊರತು, ಆ ಪರಮಾತ್ಮನ ಕೃಪೆಯುಂಟಾಗಲು ಸಾಧನವಾಗಲಾರದು ಎನ್ನುವುದೇ ನಿರ್ಧಾರವಾದ ವಿಷಯ.

ಇದರಿಂದ "ಕೆರೆಯನ್ನು ತೋಡುವ ಹಾಗೆ" ಚೇತನನು ಭಗವಂತನನ್ನು ಹೊಂದುವುದಾಗಿ ಮಾಡುವ ಕಾರ್ಯ ಉಪಾಯ ಭೂತವಲ್ಲ; ಕೆರೆಯನ್ನು ತೋಡುವುದು ಮಾತ್ರ, ಯಾವ ರೀತಿ ಫಲದಾಯಕವಲ್ಲವೋ, ಅದೇ ರೀತಿ ಭಗವಂತನನ್ನು ಉಪಾಯವಾಗಿ ಹೊಂದುವುದೂ ಫಲದಾಯಕವಲ್ಲ ಎನ್ನುವುದನ್ನು ಇಲ್ಲಿ ಸಾರತತ್ತ್ವ

ವಾಗಿ ನೋಡಿದೆವು. ಈ ಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟುಕೊಂಡು ಪಿಳ್ಳೈಲೋಕಾಚಾರ್ಯರು ಪ್ರಪತ್ತಿಯನ್ನು ಅಧಿಕಾರಿ ವಿಶೇಷಣ ಎಂದು ನಿರ್ಧರಿಸಿರುತ್ತಾರೆ.

ಇದುವರೆವಿಗೂ ಪಿಳ್ಳೈಲೋಕಾಚಾರ್ಯರ ಅಭಿಪ್ರಾಯವನ್ನು ಸಂಕ್ಷಿಪ್ತವಾಗಿ ನೋಡಿದೆವು. ಇನ್ನು ದೇಶಿಕರ ಅಭಿಪ್ರಾಯವನ್ನೂ ನೋಡಬೇಕು.

ಭಗವಂತನನ್ನು ಧ್ಯಾನಿಸುವ ಚಿಂತೆ "ಭಕ್ತಿ" ಎಂಬುದನ್ನು ಮೊದಲೇ ಹೇಳಿರುವೆವು. ಈ ಭಕ್ತಿಯನ್ನು ತಕ್ಕ ಜ್ಞಾನ ಮತ್ತು ಸಂಬಂಧವುಳ್ಳವನು, ಇವನೇ ಮೋಕ್ಷ ಸಾಧನವನ್ನಾಗಿ ಮಾಡುತ್ತಾನೆ. ಜ್ಞಾನವೂ, ಸಂಬಂಧವೂ ಇಲ್ಲದವನೋ ಎಂದರೆ ಭಕ್ತಿಯನ್ನು ಮಾಡದೆ ಇದ್ದರೂ, ಮೋಕ್ಷ ಪುರುಷಾರ್ಥಗಳನ್ನು ಕಳೆದುಕೊಳ್ಳಬೇಕಾಗಿರುವುದಿಲ್ಲ. ಭಗವಂತನನ್ನು ಉಪಾಯ ಭೂತನನ್ನಾಗಿ ಪಡೆದರೆ ಆ ಭಗವಂತನು ಭಕ್ತಿ ಸಾಧನದಲ್ಲಿ ಬಂದು ಸೇರುತ್ತಾನೆ. ಆ ರೀತಿ ಬಂದು ಸೇರಿದ ಭಗವಂತನು (ಭಕ್ತಿಯ ಜಾಗದಲ್ಲಿ ಭಕ್ತಿ ಹೇಗೆ ಮೋಕ್ಷ ಪುರುಷಾರ್ಥಕ್ಕೆ ಸಾಧನವೋ ಹಾಗೆಯೇ) ಮೋಕ್ಷಕ್ಕೆ ಉಪಾಯನಾಗುತ್ತಾನೆ. ಈ ರೀತಿ ಪ್ರಪತ್ತಿ ಭಗವಂತನು ಬೇರೊಂದು ಉಪಾಯವಾಗಿರುವ ಭಕ್ತಿಸಾಧನದಲ್ಲಿ ಬಂದು ಸೇರಿದ್ದಕ್ಕೆ ಕಾರಣವಲ್ಲದೆ, ನೇರವಾಗಿ ಮೋಕ್ಷ ಪುರುಷಾರ್ಥಗಳನ್ನು ಪಡೆಯಲು ಕಾರಣವಲ್ಲ. ಪರಮಾತ್ಮನು ಆ ಪುರುಷಾರ್ಥಕ್ಕೆ ಕಾರಣ. ಈ ರೀತಿ ದೇಶಿಕರ ಅಭಿಪ್ರಾಯವನ್ನು ಸಂಕ್ಷಿಪ್ತವಾಗಿ ತಿಳಿದುಕೊಂಡೆವು.

ಮೇಲೆ ಹೇಳಿರುವ ಎರಡು ಪಕ್ಷಗಳಲ್ಲಿಯೂ ಪ್ರಪತ್ತಿಯನ್ನು ಅಧಿಕಾರಿ ವಿಶೇಷಣವಾಗಿ ಒಬ್ಬರೂ, ಭಗವಂತನು ಭಕ್ತಿಸಾಧನದಲ್ಲಿ ಬಂದು ಸೇರುವುದಕ್ಕೆ ಕಾರಣವಾಗಿ ಮತ್ತೊಬ್ಬರೂ ಅಭಿಪ್ರಾಯ ಪಟ್ಟಿರುವುದನ್ನು ಕಾಣುತ್ತೇವೆ. ಇದನ್ನು ನೋಡುವಲ್ಲಿ ಈ ಇಬ್ಬರು ಆಚಾರ್ಯರುಗಳ ವಿಚಾರದಲ್ಲಿ ತಾರತಮ್ಯ ಉಂಟು ಎಂಬುದು ಸುಸ್ಪಷ್ಟ.

ಆದರೂ ಸಹ ಪರಮಾತ್ಮನು ನೇರವಾಗಿ ಮೋಕ್ಷ ಪುರುಷಾರ್ಥವನ್ನು ನೀಡಲು "ಉಪಾಯಭೂತ" ಎನ್ನುವುದನ್ನು ಈ ಇಬ್ಬರು ಆಚಾರ್ಯರುಗಳೂ ಮನಸ್ಸಿನಲ್ಲಿ ಭಿನ್ನಾಭಿಪ್ರಾಯವಿಲ್ಲದೇ ಅಂಗೀಕರಿಸಿದ್ದಾರೆಂಬುದು ಚೆನ್ನಾಗಿ ಇಲ್ಲಿ ತಿಳಿಯುತ್ತದೆ (ಈ ಮನೋಭಿಪ್ರಾಯ ಒಂದೇ ಅಭಿಪ್ರಾಯವನ್ನು ಇಲ್ಲಿ ಅನುಭವಿಸತಕ್ಕದ್ದು).

ಇನ್ನು ರಾಮಾಯಣವು ಶರಣಾಗತಿ ಧರ್ಮವನ್ನು ನಿರೂಪಿಸುವುದನ್ನು ಸ್ವಲ್ಪ ವಿವರಿಸಿ ಹೇಳುತ್ತೇವೆ.

"ರಾಮಾಯಣವೂ—ಶರಣಾಗತಿಯೂ"

ದಶರಥ ಚಕ್ರವರ್ತಿ ಪುತ್ರ ಭಾಗ್ಯವನ್ನು ಅಪೇಕ್ಷಿಸಿ ಯಾಗಮಾಡುವ ಸಮಯ. ಆ ಸಮಯದಲ್ಲಿ ಚತುರಾನನಾದಿ ದೇವತೆಗಳೂ ಇತರ ಮಹರ್ಷಿಗಳೂ ಆ ಯಾಗದಲ್ಲಿ ತಮ್ಮ ತಮ್ಮ ಹವಿಸ್ಸನ್ನು ಪಡೆಯಲು ಅಪೇಕ್ಷಿಸಿ ಎಲ್ಲರೂ ಒಂದಾಗಿ ಬಂದಿದ್ದರು. ಹಾಗೆ ಬಂದಿರುವ ದೇವತೆಗಳೇ ಮುಂತಾದವರುಗಳು ಬ್ರಹ್ಮನನ್ನು ಕುರಿತು "ಓ ಭಗವಂತನೇ! ತಮ್ಮ ಕೃಪೆಯನ್ನು ಪಡೆದು ಅತ್ಯಧಿಕ ಪರಾಕ್ರಮವುಳ್ಳ

ರಾವಣನು ನಮ್ಮೆಲ್ಲರನ್ನೂ ತೊಂದರೆ ಪಡಿಸುತ್ತಿದ್ದಾನೆ. ನಾವುಗಳು ಅವನನ್ನು ಅಡಗಿಸಲು ಸಾಧ್ಯವಿಲ್ಲದೆ ಇದ್ದೇವೆ. ಆದ್ದರಿಂದ ನೀವುಗಳು ಅವನನ್ನು ಕೊಲ್ಲುವುದಕ್ಕೆ ತಕ್ಕ ಉಪಾಯವನ್ನು ವಿಚಾರಮಾಡಿ ತಿಳಿಸಬೇಕು '' ಎಂದು ಪ್ರಾರ್ಥಿಸಿಕೊಂಡರು.

ಈ ರೀತಿ ಬೇಡುವ ಸಮಯದಲ್ಲಿ ಚಕ್ರವರ್ತಿ ಯಾಗ ಮಾಡುವ ಸ್ಥಳದಲ್ಲಿ ಪ್ರಸಿದ್ಧಿ ಪಡೆದವನೂ, ಶಂಖ, ಚಕ್ರ, ಗದೆಯನ್ನು ಧರಿಸಿರುವವನೂ, ವಸ್ತ್ರಾಭರಣದಿಂದ ಅಲಂಕರಿಸಲ್ಪಟ್ಟವನೂ, ಎಲ್ಲಾ ವಸ್ತುಗಳಲ್ಲಿಯೂ ಹರಡಿರುವವನೂ, ಈ ಪ್ರಪಂಚಕ್ಕೆ ಸ್ವಾಮಿಯೂ ಆದ ನಾರಾಯಣನು ವೈಕುಂಠದಿಂದ ದಯಮಾಡಿಸಿದನು. ಹೀಗೆ ಪರಮ ಪುರುಷನು ದಯಮಾಡಿಸಿದ ವಿಚಾರವನ್ನು ಹೇಳುವ ಮಾತುಗಳು :—

'' ಏತಸ್ಮಿನ್ನಂತರೇ ವಿಷ್ಣುಃ ಉಪಯಾತೋ ಮಹಾದ್ಯುತಿಃ ।
ಶಂಖ ಚಕ್ರ ಗದಾಪಾಣಿಃ ಪೀತವಾಸಾ ಜಗತ್ಪತಿಃ ॥ ''

ಈ ಮಾತುಗಳಲ್ಲಿ ಶರಣಾಗತಿಧರ್ಮದ ಸಿದ್ಧಾಂತವನ್ನು ನಾವು ತಿಳಿಯಬಹುದು (1) '' ಧರ್ಮ '' ಎಂಬ ನುಡಿ ಯಾವ ಫಲಕ್ಕೆ ಸಾಧನವೋ, ಅದನ್ನು ಸೂಚಿಸುವ ಭಗವಂತನು ಆಯಾ ಒಳ್ಳೆಯದಕ್ಕೆ ಕಾರಣನಾಗಿರುವುದರಿಂದ '' ಧರ್ಮ '' ಶಬ್ದದಿಂದ ಸೂಚಿಸಲ್ಪಡುತ್ತಾನೆ. ಅವನು ನಿತ್ಯನಾಗಿರುವವನು ಆದ್ದರಿಂದ ಇತರ ಧರ್ಮಗಳಲ್ಲಿ ಯಾವುದಾದರೂ ಒಂದು ಹಾಗೆ ಪ್ರಯತ್ನ ಶಕ್ತಿಯಿಂದಲೇ ಏರ್ಪಡುವುದೂ ಹಾಗಲ್ಲದೆ ಭಗವಂತನು ಸೃಷ್ಟಿಸಲ್ಪಟ್ಟವನಲ್ಲ ಎಂದು ಮೊದಲೇ ಹೇಳಿರುತ್ತೇವೆ.

ಇದನ್ನು ಕೆಲವರು ನೋಡಿದರೆ ಅವರವರು ಅಪೇಕ್ಷಿಸಿದ ಫಲ ಆಯಾಕಾಲದಲ್ಲಿ ಯಾವ ಅಡ್ಡಿಯೂ ಇಲ್ಲದೆ ಭಗವಂತನಾಗಿರುವ ಧರ್ಮದಿಂದ ಪಡೆಯಲು ಅಡ್ಡಿ ಏನು ಎಂಬ ಅರ್ಥವು ಬರುತ್ತದೆ. ಆದರೂ ಹೀಗೆ ಬರೆಯಲು ಅವಕಾಶವಿಲ್ಲ. ಏಕೆಂದರೆ ಪರಮಾತ್ಮನಾಗಿರುವ ಧರ್ಮ ಸರ್ವರಿಗೂ, ಸರ್ವಕಾಲದಲ್ಲೂ ಉಂಟು ಎನ್ನುವುದು ಒಂದು ರೀತಿಯಿಂದ ಸತ್ಯವೇ ಆದರೂ ಆ ಭಗವಂತನಾಗಿರುವ ಧರ್ಮ ದುಃಖವನ್ನು ನಿವರ್ತಿಮಾಡಿ ಸುಖವನ್ನುಂಟುಮಾಡಿ ಇವನನ್ನು ನೋಡುವಲ್ಲಿ ಇವನ ಪ್ರಾರ್ಥನೆಯನ್ನು ಅಪೇಕ್ಷಿಸುತ್ತದೆ. '' ರಕ್ಷ್ಯಾಪೇಕ್ಷಾಂ ಪ್ರತೀಕ್ಷತೇ '' ಎಂಬ ಪ್ರಮಾಣ ವಚನವನ್ನು ಇಲ್ಲಿ ಕಾಣತಕ್ಕದ್ದು.

ಇದರಿಂದ ''ರಕ್ಷಣೆ'' ಎಂಬ ಕಾರ್ಯವನ್ನು ಕೃಪೆಯಾಗಿ ಉಳ್ಳ ಪರಮಾತ್ಮನು ಈ ಚೇತನನ ಬೇಡಿಕೆಗಳನ್ನು ಅಪೇಕ್ಷಿಸಿಯೇ ಇವನನ್ನು ರಕ್ಷಿಸುತ್ತಾನೆ ಎನ್ನುವ ಶರಣಾಗತಿಯನ್ನು ಕುರಿತು ಒಂದು ಸತ್ಯವನ್ನು ನಾವು ತಿಳಿಯಬಹುದು.

ಈ ನಿಜಸ್ಥಿತಿಯು ಮೇಲೆ ಹೇಳಿರುವ '' ಏತಸ್ಮಿನ್ ಅಂತರೇ '' ಎನ್ನುವ ಮಾತಿನಲ್ಲಿ ಚೆನ್ನಾಗಿ ತಿಳಿಯುತ್ತದೆ ಹೇಗೆ ಎಂದರೆ :—

''ಭಗವಂತನು'' ಇತರೇ ದೇವತೆಗಳ ಹಾಗೆ ತನ್ನ ಹವಿಸ್ಸನ್ನು ಪಡೆದು ಭುಜಿಸಲು ಯಾಗ ಭೂಮಿಗೆ ದಯಮಾಡಿಸಿದನು ಎನ್ನುವುದು ಇಲ್ಲಿ ಸತ್ಯವಲ್ಲ. ಹಾಗೆ ಹವಿಸ್ಸನ್ನು ಪಡೆದು ಭುಜಿಸಬೇಕೆಂಬ ಮನಸ್ಸಿದ್ದರೆ, ಅವರುಗಳ ಹಾಗೆ ಆ ಯಾಗ ಶಾಲೆಗೆ ಮೊದಲೇ

ಬರುತ್ತಿದ್ದನಲ್ಲವೆ ? ಶಂಖ, ಚಕ್ರ, ಗದಾಪಾಣಿಯಾಗಿ, ವಸ್ತ್ರಾಭರಣಗಳಿಂದಲಂಕೃತನಾಗಿ ಯಜ್ಞಕ್ಕೆ ಬರುವವನ ಹಾಗೆ ಬರಬೇಕೆ ?

ಹಾಗಾದರೆ ಸತ್ಯ ಸ್ಥಿತಿ ಏನು ಎಂದರೆ, "ಏತಸ್ಮಿನ್ನಂತರೇ" ಎನ್ನುವುದನ್ನು ಇಲ್ಲಿ ಚೆನ್ನಾಗಿ ನೋಡಿದರೆ ತಿಳಿದುಬರುತ್ತದೆ. ಈ ಮಾತುಗಳಲ್ಲಿ ಬ್ರಹ್ಮನನ್ನು ಕುರಿತು ದುಃಖಗಳು ಕಳೆದು ಸುಖವುಂಟಾಗುವ ಹಾಗೆ ತಾವು ವಿಚಾರಮಾಡಿ ಹೇಳಬೇಕು ಎಂದು ದೇವತೆಗಳು ಬೇಡಿದ ಸಮಯದಲ್ಲಿ ಭಗವಂತನು ದಯಮಾಡಿಸಿದನು ಎನ್ನುವುದನ್ನು ಹೇಳಿರುವುದರಿಂದ "ಪರಮಾತ್ಮನು" ಈ ಚೇತನನ ಪ್ರಾರ್ಥನೆಯನ್ನು ಅಪೇಕ್ಷಿಸಿ ರಕ್ಷಿಸುತ್ತಾನೆ ಎಂಬುದು ಸುಸ್ಪಷ್ಟ.

"ಬ್ರಹ್ಮಾಸ್ತ್ರವು ಹೇಗೆ ಸೆಣಬಿನ ಹಗ್ಗದ ಬಂಧನವನ್ನು ಸಹಿಸುವುದಿಲ್ಲವೋ, ಹಾಗೆಯೇ ಭಗವಂತನೂ, ಬೇರೊಂದರ ಸಂಬಂಧವನ್ನು ಸಹಿಸಲಾರನು, ಎಂದು ಮೊದಲು ಹೇಳಿದ್ದಿರಿ. ಈಗ ಈ ಚೇತನನ ಪ್ರಾರ್ಥನೆಯನ್ನು ನಿರೀಕ್ಷಿಸಿಯೇ ಇವನ ಕೆಲಸವನ್ನು ಮಾಡುತ್ತಾನೆ ಎಂದು ಹೇಳುವಿರಿ. ಈ ಎರಡು ಅಭಿಪ್ರಾಯಗಳೂ ಹೇಗೆ ಹೊಂದಿಕೆಯಾಗುವುವು, ಎಂದು ಕೆಲವರು ಇಲ್ಲಿ ಪ್ರಶ್ನಿಸಬಹುದು.

ಒಬ್ಬನು ಬೇರೊಬ್ಬರ ಸಹಾಯ ಸ್ವಲ್ಪವೂ ಇಲ್ಲದೆ ಅಡಿಗೆಯನ್ನು ಮಾಡಬಲ್ಲನು. ಅವನನ್ನು ಬೇರೊಬ್ಬನು ತನ್ನ ಮನೆಯ "ಶುಭಂಗು" (ವಿಶೇಷ) ಕಾರ್ಯಗಳ ನಿಮಿತ್ತವಾಗಿ ಅಡಿಗೆಯನ್ನು ಮಾಡಬೇಕೆಂದು ಬೇಡಿಕೊಳ್ಳುತ್ತಾನೆ. ಆ ರೀತಿ ಬೇಡಲ್ಪಟ್ಟ ಅವನೂ ಸಹ ಆ ಪ್ರಾರ್ಥನೆಗೊಳಪಟ್ಟು ಅಡಿಗೆಯನ್ನು ಮಾಡುತ್ತಾನೆ.

ಈ ಸ್ಥಳದಲ್ಲಿ "ಬೇರೊಬ್ಬರ ಸಹಾಯ ಸ್ವಲ್ಪವೂ ಬೇಡದವನು ಇವನು ಎಂದು ಹೇಳುವಿರಾ ? ಇವನು ಅಡಿಗೆ ನಿಮಿತ್ತವಾಗಿ ಬೇಡಿದವರ ಪ್ರಾರ್ಥನೆಯನ್ನು ಅಪೇಕ್ಷಿಸಿ ತಾನೇ ಬಂದು ಅಡಿಗೆ ಮಾಡಿದನು" ಎಂದು ವಿರೋಧವಾಗಿ ಕಾಣುವ ಹಾಗೆ ಹೇಳುವವರೂ ಉಂಟೇ ? ಇಲ್ಲಿ ಅರ್ಥವೇನು ? ಅಡಿಗೆ ಮಾಡುವವನು ಅಡಿಗೆ ಮಾಡುವಾಗ ಬೇಡಿದವರ ಸಹಾಯವನ್ನು ಸ್ವಲ್ಪವೂ ಅಪೇಕ್ಷಿಸದೆ ಇರುವುದು. ಅದು ಅವನ ಹಿರಿಮೆಯನ್ನು ಬೇರೆಯವರ ಸಹಾಯ ಸ್ವಲ್ಪವೂ ಇಲ್ಲದೆ ಅಡಿಗೆಯನ್ನು ಮಾಡಬಲ್ಲವನಾಗಿರುವುದಕ್ಕೆ ನ್ಯೂನತೆ, ಲೋಪ ಇರುವುದು ಯುಕ್ತವಲ್ಲ. ನ್ಯೂನತೆ, ಲೋಪ ಅವನಿಗೆ ಇಲ್ಲ.

ಇದರ ಹಾಗೆಯೇ ಭಗವಂತನಾಗಿರುವ ಧರ್ಮ. ಈ ಚೇತನನು ಕಾರ್ಯ ಮಾಡುವಾಗ ಬೇರೆಯವರ ಸಹಾಯವನ್ನು ಬೇಡಿದರೆ ಆ ಧರ್ಮದ ಶ್ರೇಷ್ಠತೆಗೆ ಆ ಬೇಡಿಕೆಯು ನ್ಯೂನತೆಯನ್ನುಂಟು ಮಾಡುತ್ತದೆ. ಆ ರೀತಿ ಬೇಡದಿದ್ದರೆ ಮೊದಲು ಹೇಳಿದ ಆ ಹಿರಿಮೆಗೆ (ಬೇರೆಯವರ ಸಹಾಯದ ಅಗತ್ಯವಿಲ್ಲದವನಿಗೆ) ಯಾವ ಕೊರತೆಯನ್ನೂ ಹೇಳಲು ಅವಕಾಶವಿಲ್ಲ.

ಹೀಗೆ ಚೇತನನ ಪ್ರಾರ್ಥನೆಯನ್ನು ಅಪೇಕ್ಷಿಸಿ ಭಗವಂತನು ಇವನ ಕೆಲಸವನ್ನು ಮಾಡುತ್ತಾನೆ ಎಂಬ ಸತ್ಯವನ್ನು ತಿಳಿದೆವು. ಇನ್ನು ಈ ಮಾತುಗಳಲ್ಲಿ ಶರಣಾಗತಿಯ

ವಿಚಾರವಾಗಿ ಮತ್ತೊಂದು ಸತ್ಯವನ್ನು ನಾವು ಕಾಣೋಣ. ಆ ಮತ್ತೊಂದು ಸತ್ಯ ಯಾವುದು ಎಂದರೆ

ಭಗವಂತನು ಸರ್ವಶಕ್ತನು, ಚಿತ್ತು, ಅಚಿತ್ತು, ಸ್ವಂತವಸ್ತು ಎಂದು ಮೊದಲೇ ಹೇಳಿದ್ದೇವೆ. "ಸ್ವಂತವಸ್ತು ಉಳ್ಳವನು" ಸ್ವಂತವಸ್ತು ಉಳ್ಳವನು ಎಂಬ ಸತ್ಯವನ್ನು ಎರಡರಲ್ಲಿ ತನ್ನದಾಗಿರುವುದನ್ನು ನೋಡಿ ರಕ್ಷಿಸುವ ಹೊಣೆಗಾರಿಕೆ ಅವನಿಗೆ ಯಾವತ್ತಿಗೂ ಇದೆ. ಆ ಸ್ವಂತವಸ್ತು ತಿಳುವಳಿಕೆಯುಳ್ಳ ಜ್ಞಾನಿಯಾಗಿದ್ದರೆ, ಆ ಜೀವನ ಅಗಲಿಕೆಯನ್ನು ಕಂಡು ತಕ್ಷಣ ಬಂದು ರಕ್ಷಿಸುವವನು ಪರಮಾತ್ಮ. ಈ ಸತ್ಯವನ್ನು "ಜಗತ್ಪತಿ" ಎಂಬ ವಾಕ್ಯವನ್ನು ನೋಡಿದ್ದೇ ಆದರೆ ಚೆನ್ನಾಗಿ ತಿಳಿಯಬಹುದು. ಈ ನುಡಿ "ಪ್ರಪಂಚಕ್ಕೆ ಸ್ವಾಮಿ" ಎನ್ನುವ ವಸ್ತುವನ್ನು ತೋರಿಸಿ ನಿಲ್ಲುವುದರಿಂದ "ಈ ಪ್ರಪಂಚ ಸತ್ಯವಸ್ತು", "ಭಗವಂತನು ಒಡೆಯ" ಎಂಬುದು ಇಲ್ಲಿ ಸ್ಪಷ್ಟವಲ್ಲವೇ ? ರಾವಣನಿಂದ ಕಷ್ಟಕ್ಕೊಳಗಾದ ದೇವತೆಗಳೇ ಮೊದಲಾದವರಿಗುಂಟಾದ ಅಗಲಿಕೆಯನ್ನು ಕಂಡು ತಕ್ಷಣ ಭಗವಂತನು ದಯಮಾಡಿಸಿದನು, ಎಂಬುದನ್ನು ಇಲ್ಲಿ ಕಾಣಬಹುದಲ್ಲವೆ ?

ಮೇಲೆ ಹೇಳಿರುವ ಸತ್ಯವನ್ನು ನೋಡಿದ್ದೇ ಆದರೆ ಈ ಚೇತನನು ಭಗವಂತನೆಂಬ ಧರ್ಮದಿಂದ ತನ್ನ ಸ್ಥಿತಿಗನುಸಾರವಾಗಿ ಸುಖವನ್ನು ಪಡೆಯುವಾಗ ಚೇತನನಾಗಿರುವ ಈ ವಸ್ತುವು ಭಗವಂತನೊಬ್ಬನಿಂದಲೇ ರಕ್ಷಿಸಲು ತಕ್ಕದ್ದಾಗಿದೆ. ಭಗವಂತನು ಹೀಗೆ ರಕ್ಷಿಸುವಾಗ ಅವನು ಮಾಡುವ ರಕ್ಷಣೆಯನ್ನು ಬೇಡವೆನ್ನದೆ ಇರುವುದು ಇವನಿಗೆ ಸ್ವಭಾವ ಸಿದ್ಧವಲ್ಲ ಎನ್ನುವ ಸಾರಾಂಶ ಸುಸ್ಪಷ್ಟ.

ಇನ್ನು ಈ ರಾಮಾಯಣದಲ್ಲಿಯೇ ಈ ಚೇತನನು ಭಗವಂತನನ್ನು ಶರಣು ಹೊಂದಬೇಕಾದರೆ ಸಾಕ್ಷಾತ್ ಲಕ್ಷ್ಮೀದೇವಿಯನ್ನು ಮುಂದಿಟ್ಟುಕೊಂಡು ಹೋಗುವುದು ಉತ್ತಮವಾಗಿರುತ್ತವೆ ಎನ್ನುವ ಸಾರತತ್ತ್ವವನ್ನು ಇನ್ನು ನಾವು ನೋಡುತ್ತೇವೆ. ಈ ವಿಚಾರವನ್ನು ರಾಮಾಯಣವು ಅನೇಕ ರೀತಿಯಲ್ಲಿ ತಿಳಿಸಿರುತ್ತದೆ.

ಭಗವಂತನೂ, ಲಕ್ಷ್ಮೀದೇವಿಯೂ, ಈ ಚೇತನನನ್ನು ರಕ್ಷಿಸುವವರು. ಭಗವಂತನು ಚೇತನನ ದುಃಖ ಕಳೆದು ಸುಖವನ್ನು ಅನುಭವಿಸಲು ಕಾರಣ.

ಪುರುಷಕಾರ ಭೂತೆಯಾದ ಲಕ್ಷ್ಮೀದೇವಿಯೋ, ಈ ಚೇತನನು ಭಗವಂತನನ್ನು ಆಶ್ರಯಿಸುವಾಗಲೇ ಪುರುಷಕಾರವಾಗಿದ್ದು ಸಹಾಯವನ್ನು ಮಾಡುವಳು.

ಪುರುಷಕಾರವಾಗಿದ್ದು ಸಹಾಯ ಮಾಡುವುದು ಯಾವುದು :—ಈ ಚೇತನನು ಪರಮಾತ್ಮನನ್ನು ಆಶ್ರಯಿಸುವ ಸಮಯದಲ್ಲಿ ತಿಳಿದೋ, ತಿಳುವಳಿಕೆ ಇಲ್ಲದೆಯೋ ಅಸಂಖ್ಯಾತ ಪಾಪಗಳನ್ನು ಮಾಡಿರುವುದರಿಂದ "ಇವನು ತನ್ನ ಮುಂದೆಯೇ ನಿಲ್ಲುವಾಗ ಅತ್ಯಧಿಕ ಜ್ಞಾನಿಯಾದ ತನಗೆ ಇವನ ಪಾಪಗಳು ಎಲ್ಲಾ ಜ್ಞಾಪಕಕ್ಕೆ ಬರುವುದರಿಂದಲೂ ಅಂಥಾ ಪಾಪಗಳಿಗೆ ತಕ್ಕ ಫಲವನ್ನು ಕೊಟ್ಟು ಸನ್ಮಾರ್ಗದಲ್ಲಿ ತಾನು ನಡೆಸುವವನಾಗಿರುವುದರಿಂದ ಕ್ರೋಧಿತನಾಗಿ ಈ ಚೇತನನನ್ನು ಕಣ್ಣೆತ್ತಿಯೂ ನೋಡುವುದಿಲ್ಲ. ಆ ರೀತಿ ಇರುವಲ್ಲಿ ಆ ಪರಮಾತ್ಮನಿಗೆ ಅವನಿಗೂ (ಪರಮಾತ್ಮನಿಗೂ) ಇವನಿಗೂ

(ಚೇತನನಿಗೂ) ಇರುವ ಸಂಬಂಧವನ್ನು ಇವನ ಸ್ಥಿತಿಯನ್ನು ತಿಳಿಸಿ, ಕರುಣೆಯನ್ನು ಇವನ ಪಾಪವನ್ನು ಸಹಿಸುವ ಶಕ್ತಿಯನ್ನುಂಟುಮಾಡಿ ಇವನನ್ನು ರಕ್ಷಿಸುವ ಹಾಗೆ ಮಾಡಿ ಆ ಪರಮಾತ್ಮನು ಇವನನ್ನು ಪುನಃ ಸ್ವೀಕರಿಸುವಂತೆ ಲಕ್ಷ್ಮೀದೇವಿಯು ಸಹಾಯ ಮಾಡುತ್ತಾಳೆ. ಈ ರೀತಿ ಸಹಾಯ ಮಾಡುವುದೇ ಪುರುಷಕಾರ.

ಶರಣಾಗತಿ ಧರ್ಮವಾದ ಈ ಸತ್ಯವನ್ನು ರಾಮಾಯಣದ ನಿರ್ಣಯವಾದ ವಸ್ತುವನ್ನಾಗಿ ಕೆಳಕಂಡಂತೆ ಪೆರಿಯವಾಚ್ಛಾನ್ ಪಿಳ್ಳೈ ಹೇಳಿರುತ್ತಾರೆ :–

ಅವಳು ಪುರುಷಕಾರವಾಗಿ ಅವನನ್ನು ಅನುಸರಿಸುವುದೇ ಫಲವ್ಯಾಪ್ತವಾಗಿದೆ, ಇದೇ ಕಾಕಾಸುರ ವಿಭೀಷಣಾದಿಗಳ ಹತ್ತಿರ ಕಾಣಬಹುದು. ಅವಳನ್ನು ಅನಾಧರಿಸಿ ಇವನನ್ನು ಪಡೆಯ ಬೇಕೆಂದು ಶೂರ್ಪಣಖಿಯು ಅನರ್ಥವನ್ನು ಅನುಭವಿಸಿದಳು. ಭಗವಂತನಿಲ್ಲದೆ ಲಕ್ಷ್ಮೀದೇವಿಯನ್ನು ಪಡೆಯಬೇಕೆಂಬ ರಾವಣನು ಅನರ್ಥಕ್ಕೊಳಗಾದನು. ಇಬ್ಬರನ್ನೂ ಹೊಂದಿದರೆ ಶ್ರೀ ವಿಭೀಷಣನ ಹಾಗೆ ಬಾಳಬಹುದು.

ಇದರ ಅರ್ಥವನ್ನು ತಿಳಿಸುತ್ತೇವೆ :–

ಮೊದಲಿನಲ್ಲಿ ಕಾಕಾಸುರನ ವಿಚಾರವನ್ನು ನೋಡೋಣ. ಚಿತ್ರಕೂಟದಲ್ಲಿ ಶ್ರೀ ರಾಮಚಂದ್ರನು ಸೀತಾದೇವಿಯ ಮಡಿಲಿನಲ್ಲಿ ನಿದ್ರಿಸುವ ಸಮಯ. ಆ ಕಾಲದಲ್ಲಿ ಇಂದ್ರನ ಪುತ್ರನೂ ದುರ್ಬುದ್ಧಿಯಿಂದ, ಕಾಕರೂಪವನ್ನು ಧರಿಸಿರುವವನೂ ಆದ ಕಾಕಾಸುರನು ಸೀತಾದೇವಿಯ ಹತ್ತಿರ ಬಂದು ಎದೆಯಲ್ಲಿ ಹುಣ್ಣನ್ನು ಮಾಡಿದನು. ಆ ದೇವಿಯು ದುಃಖವನ್ನು ತಡೆಯಲಾರದೆ ತನ್ನ ಮಡಿಲಲ್ಲಿ ನಿದ್ರಿಸುವ ಭಗವಂತನನ್ನು ಎಬ್ಬಿಸಿದಳು. ಎದ್ದು ನೋಡಿದ ಭಗವಂತನು ಆ ಕಾಕಾಸುರನ ಪಾಪಕಾರ್ಯವನ್ನು ಕಣ್ಣಾರೆ ಕಂಡು, ಬ್ರಹ್ಮಾಸ್ತ್ರವನ್ನು ಆ ಕಾಗೆಯ ಮೇಲೆ ಪ್ರಯೋಗಿಸಿದನು. ಅದು ಕೂಡ ಆ ಅಸ್ತ್ರದಿಂದ ಅಟ್ಟಿಸಲ್ಪಟ್ಟದ್ದಾಗಿ, ಒಂದೊಂದು ಸ್ಥಳದಲ್ಲಿಯೂ ಅನೇಕ ಬಾರಿ ಹೋಗಿಯೂ, ರಕ್ಷಣೆಯು ದೊರೆಯದೆ, ದಿಕ್ಕೆಟ್ಟು ಕೊನೆಗೆ ಆ ಭಗವಂತನಿದ್ದ ಸ್ಥಳಕ್ಕೇ ಬಂದು ಕೆಳಗೆ ಬಿದ್ದಿತು. ಭೂಮಿಯಲ್ಲಿ ತಲೆಯೂ, ಮಡಿಲಲ್ಲಿ ಕಾಲುಗಳೂ ಆಗಿ ಬಿದ್ದಿತು. ಆ ಕಾಗೆಯ ಸ್ಥಿತಿಯನ್ನು ನೋಡಿ ಸೀತಾದೇವಿಯು ಆ ಕಾಗೆಯನ್ನು ರಕ್ಷಿಸುವಂತೆ, ಪರಮಾತ್ಮನನ್ನು ಬೇಡಿಕೊಂಡಳು. ಆ ಪರಮಾತ್ಮನೂ ಅಸ್ತ್ರವು ಫಲವಿಲ್ಲದ್ದಾಗಿ ಆಗದೆ ಇರುವುದಕ್ಕಾಗಿ ಅದರಿಂದ ಆ ಕಾಗೆಯ ಕಣ್ಣನ್ನು ನಾಶಮಾಡಿ ಅವನಿಗೆ ಜೀವದಾನ ಮಾಡಿ ಅವನ್ನು ರಕ್ಷಿಸಿದನು. ಎನ್ನುವುದೇ ಕಾಕಾಸುರನ ಚರಿತ್ರೆ.

ಈ ವಿಚಾರ :–ಸ ಪಿತ್ರಾ ಚ ಪರಿತ್ಯಕ್ತಃ ಸುರೈಶ್ಚ ಸಮಹರ್ಷಿಭಿಃ ।

ತ್ರೀನ್ ಲೋಕಾನ್ ಸಂ ಪರಿಕ್ರಮ್ಯ ತಮೇವ ಶರಣಂ ಗತಃ ॥

ಎನ್ನುವ ರಾಮಾಯಣದ ಸುಂದರ ಕಾಂಡದಲ್ಲಿ ಇರುವ ವಾರ್ತೆಗಳು.

ಸೀತಾದೇವಿಯ ಹತ್ತಿರ ರಾವಣನೂ, ಕಾಕಾಸುರನೂ ಸಹಿಸಲಾಗದ ದುಃಖವನ್ನುಂಟು ಮಾಡಿದರು. ಆದರೂ ರಾವಣನಿಗಿಂತಲೂ, ಕಾಕಾಸುರನಿಗೆ ಪಾಪ ಅಧಿಕ. ಹೇಗೆ ಎಂದರೆ, ರಾವಣನು ಆ ದೇವಿಯನ್ನು ಎತ್ತಿಕೊಂಡು ಅಶೋಕವನದಲ್ಲಿ ಸೆರೆಯ

ಲ್ಲಿಟ್ಟು ತಾನೂ ಮತ್ತು ವಿಕಾಕ್ಷಿ ಮೊದಲಾದ ರಾಕ್ಷಸಿಯರೂ ಅನೇಕ ಸಾರಿ ಹೇಳಬಾರದ ಮಾತುಗಳನ್ನು ಹೇಳಿ ತೊಂದರೆ ಕೊಟ್ಟಿದ್ದು ನಿಜವೇ ಆದರೂ ಕಾಕಾಸುರನ ಹಾಗೆ ಆ ದೇವಿಗೆ ಹುಣ್ಣನ್ನು ಮಾಡಲಿಲ್ಲ. ಆದ್ದರಿಂದ ಕಾಕಾಸುರನ ಪಾಪ ಅಧಿಕ.

ಈ ಕಾಕಾಸುರನು ಬ್ರಹ್ಮಾಸ್ತ್ರದಿಂದ ಹೊಡೆಲ್ಪಟ್ಟು ಎಲ್ಲಿಯೂ ಆಶ್ರಯ ಸಿಕ್ಕದೆ ಏನೂ ದಿಕ್ಕುತೋರದೆ ಪರಮಾತ್ಮನ ಎದುರಿಗೆ ಬಿದ್ದಹಾಗೆ, ರಾವಣನೂ, ಶ್ರೀ ರಾಮನೊಂದಿಗೆ ಯುದ್ಧ ಮಾಡುವಾಗ ಆ ಭಗವಂತನ ಬಾಣಗಳಿಂದ ಪೆಟ್ಟನ್ನು ತಿಂದು ಕೈಯಲ್ಲಿರುವ ಬಾಣಗಳು ಬಿದ್ದು ರಕ್ತದಿಂದ ತೊಯ್ದು ತನಗೆ ತಕ್ಕ ಸ್ಥಳವನ್ನು ಬಿಟ್ಟು ಬಿದ್ದಿದ್ದನೆಂದು ವಾಲ್ಮೀಕಿ ಮುನಿಯು ಆವನ ವಿಷಯವಾಗಿ ತಿಳಿಸಿದ್ದಾರೆ. " ಈ ರೀತಿ ದಿಕ್ಕುಗೆಟ್ಟು ಬಿದ್ದಿದ್ದನು " ಎಂಬುದು ಕಾಕಾಸುರ ಮತ್ತು ರಾವಣ ಇಬ್ಬರಿಗೂ ಒಂದೇ ಆಗಿದ್ದರೂ ರಾವಣನಿಗಿಂತಲೂ ಕಾಕಾಸುರನು ಅಧಿಕ ಪಾಪಿಷ್ಠನಾಗಿರುವುದು.

ರಾವಣನು ಲಂಕಾಪಟ್ಟಣದೊಂದಿಗೆ ನಾಶವಾದರೂ, ಕಾಕಾಸುರನು (ಕಣ್ಣನ್ನು ಮಾತ್ರ ಕಳೆದುಕೊಂಡದ್ದು) ಪ್ರಾಣವನ್ನು ಕಳೆದುಕೊಳ್ಳದೆ ಇದ್ದದ್ದಕ್ಕೆ ಕಾರಣ ಯಾವುದು ಎಂದರೆ ಕಾಕನಿಗೆ ಸೀತಾದೇವಿಯು ಎದುರಿಗೆ ಆ ದೇವಿಯ ಕರುಣೆಗೆ ಪಾತ್ರನಾದನು. ಆದ್ದರಿಂದ ಜೀವದಾನವನ್ನು ಪಡೆದನು. ರಾವಣನಿಗೋ ಆ ದೇವಿಯು ಎದುರಿನಲ್ಲಿ ಅವಳೆದುರಾಗುವ ಕರುಣೆಯನ್ನು ತೋರಲಾಗಲಿಲ್ಲ; ಆದರಿಂದ ಮಡಿದನು. ಈ ಸತ್ಯದ ಜೊತೆಗೆ ರಾವಣನ ವಿಚಾರವನ್ನು ಕಾಕಾಸುರನ ಚರಿತ್ರೆಯನ್ನು ಸೇರಿಸಿ ನೋಡಿದ್ದೇ ಆದರೆ ಚೆನ್ನಾಗಿ ತಿಳಿಯುತ್ತದೆ.

ಇಲ್ಲಿ ಇವಳ ಸಾನಿಧ್ಯದಲ್ಲಿ ಕಾಕಾಸುರನು ರಕ್ಷಣೆಯನ್ನು ಪಡೆದನು. ಅದಿಲ್ಲದೆ ಇರುವುದರಿಂದ ರಾವಣನು ಮಡಿದನು ಎನ್ನುವ ಪಿಳ್ಳೈಲೋಕಾಚಾರ್ಯರ ಮಾತುಗಳೂ. " ಇವಳ ಸಾನಿಧ್ಯದಲ್ಲಿ ಅಪರಾಧವನ್ನು ಹೊರಗೆಳೆಸುವ ಪ್ರಯತ್ನಮಾಡಿ ಬ್ರಹ್ಮಾಸ್ತ್ರಕ್ಕೆ ಪಡೆದು ತಲೆಯನ್ನು ಕಳೆದುಕೊಳ್ಳುವ ಕಾಕನು ತನ್ನನ್ನು ಉಳಿಸಿಕೊಂಡನು. ಹಾಗಿರುವ ಇವಳ ಸಾನಿಧ್ಯವು ಇಲ್ಲದೇ ಇರುವುದರಿಂದ " ಪ್ರೋಕ್ಷಟ್ಟಿ ", ದಿಕ್ಕುಗೆಟ್ಟು ನಿರ್ಜೀವನಾಗಿ ಬಿದ್ದಿರುವ ಸ್ಥಿತಿಯನ್ನು ಯೋಚಿಸಿದ್ದೇ ಆದರೆ ಕಾಕಾಸುರನ ಅಪರಾಧಕ್ಕಿಂತ ರಾವಣನ ಅಪರಾಧವು ಮಿಗಿಲಾದ್ದರಿಂದ ರಾಮಬಾಣಕ್ಕೆ ಸಿಕ್ಕಿ ಸತ್ತು ಹೋದನೆಂಬುದನ್ನು ಮಣವಾಳ ಮಾಮುನಿಗಳ ಮಾತಿನಿಂದಲೇ ತಿಳಿಯತಕ್ಕದ್ದು.

ಈವರೆವಿಗೂ ಹೇಳಿದ ಕಾಕಾಸುರನ ಚರಿತ್ರೆಯಿಂದ " ಅತ್ಯಧಿಕ ಪಾಪಿಷ್ಠನೂ ದೇವಿಯನ್ನು ಮುಂದಿಟ್ಟುಕೊಂಡಿದ್ದರಿಂದ ಭಗವಂತನ ಕೃಪೆಗೆ ಪಾತ್ರನಾಗಿ ಸುಖವನ್ನು ಬಾಳನ್ನು ಪಡೆದನು ಎನ್ನುವ ಸತ್ಯಾರ್ಥವು ಚೆನ್ನಾಗಿ ತಿಳಿಯುತ್ತದೆ.

ಅನಂತರವೂ ರಾವಣನೂ, ಶೂರ್ಪಣಖಿಯೂ, ವಿಭೀಷಣನೂ ಒಂದೇ ಮನೆಯಲ್ಲಿ ಹುಟ್ಟಿದವರು. ರಾವಣನು ಭಗವಂತನನ್ನು ಸಂಪೂರ್ಣವಾಗಿ ತೊರೆದು ಸೀತಾದೇವಿಯನ್ನು ಮಾತ್ರ ನ್ಯಾಯಕ್ಕೆ ವಿರೋಧವಾಗಿ ಅಪೇಕ್ಷಿಸಿದನು. ಶೂರ್ಪಣಖಿ ಯಾವರೋ ದೇವಿಯನ್ನು ಬಿಟ್ಟು ಶ್ರೀ ರಾಮನನ್ನು ಮಾತ್ರ ನ್ಯಾಯ ವಿರುದ್ಧವಾಗಿ

ಇಷ್ಟಪಟ್ಟಳು "ದೇವಿಯನ್ನು ಬಿಟ್ಟು ಎನ್ನುವುದು ಮಾತ್ರವಲ್ಲ. ಅವಳನ್ನು ತನಗೆ ಅಡ್ಡಿ ಎಂದು ಹೇಳಿ ಅವಳನ್ನು ನಾಶಮಾಡಲು ಪ್ರಯತ್ನಿಸಿದಳು. ಇವರಿಬ್ಬರೂ ಸ್ವಲ್ಪ ಮಾತ್ರವೂ ಸುಖವನ್ನು ಪಡೆಯಲಿಲ್ಲ. ವಿಭೀಷಣನು ರಾವಣ, ಶೂರ್ಪಣಖಿಯ ರೊಂದಿಗೆ ಜನ್ಮ ಪಡೆದಿದ್ದರೂ, ಇವರಿಬ್ಬರ ಹಾಗೆ ರೀತಿಗೆ ವಿರುದ್ಧವಾಗಿ ಒಬ್ಬರನ್ನು ಬಿಟ್ಟು ಮತ್ತೊಬ್ಬರನ್ನು ಮಾತ್ರ ಅಪೇಕ್ಷಿಸದೆ, ಭಗವಂತನನ್ನೂ ಮತ್ತು ದೇವಿಯನ್ನು ಇಬ್ಬರನ್ನೂ ನ್ಯಾಯರೀತಿಯಿಂದ ಅಪೇಕ್ಷಿಸಿ, ಇನ್ನೂ ಬಾಳುತ್ತಿದ್ದಾನಲ್ಲವೆ? ಈಗಲೂ ಶ್ರೀರಂಗದಲ್ಲಿ ವಿಭೀಷಣನನ್ನು ರಕ್ಷಿಸುತ್ತಿದ್ದಾನಲ್ಲವೇ? ಈ ಸ್ಥಳದಲ್ಲಿ "ತೆನ್ದಿಶೈ ಇಲಂಗೈ ನೋಕ್ಕಿ" ತನ್ನ ಕೊರತೆಯನ್ನು ನೀಗುವುದಾಗಿದೆ. ತಾಯಿಯೂ ಪ್ರಜೆಗಳಿಗೆ ಸ್ತನ್ಯಪಾನ ಮಾಡಿಸಿ, ಅವರ ಸಂತೋಷವನ್ನು ಕಾಣಲು ಸಹಾಯವಾಗುವ ಹಾಗೆ ಎನ್ನುವ ಪೆರಿಯವಾಚ್ಚಾನ್ ರವರ ನುಡಿಯನ್ನು ಕಾಣತಕ್ಕದ್ದು.

ಮೇಲೆ ಹೇಳಿರುವ ಎರಡು ವಿಷಯಗಳಲ್ಲಿಯೂ ವಿಭೀಷಣನು ಇನ್ನೂ ಭಗವಂತನ ಕೃಪೆಗೆ ಪಾತ್ರನಾಗಿ ಬಾಳುತ್ತಿದ್ದಾನೆ ಎನ್ನುವುದು ತಿಳಿಯುತ್ತದೆ.

ಈವರೆವಿಗೂ ಹೇಳಿದ್ದರಿಂದ ಈ ಚೇತನನು ಭಗವಂತನನ್ನು ಪಡೆಯುವಾಗ ಲಕ್ಷ್ಮೀದೇವಿಯನ್ನು ಮುಂದಿಟ್ಟುಕೊಂಡು ಹೋದರೆ ಉತ್ತಮವಾಗುವುದು ಎಂಬುದನ್ನು ಒಂದು ರೀತಿಯಲ್ಲಿ ಕಂಡೆವು.

ಇನ್ನು ಈ ಚೇತನನು ಭಗವಂತನನ್ನು ಉಪಾಯ ಭೂತನನ್ನಾಗಿ ಪಡೆಯುವಾಗ ಇವನು "ಪತ್ಯುಃ ಅಪ್ರತ್ಯುದಕ್" ಮಾಡುವ ಉಪಾಯ ಪ್ರಯತ್ನ ಆ ಭಗವಂತನ ಮನಸ್ಸನ್ನು ಅನುಸರಿಸಿ ಇರಬೇಕು ಎನ್ನುವುದು ಶರಣಾಗತಿಯನ್ನು ಕುರಿತಾದ ಒಂದು ಸತ್ಯವಾಗಿದೆ. ಈ ನಿಜಸ್ಥಿತಿಯನ್ನು ಭರತನ ಚರಿತ್ರೆಯಲ್ಲಿ ನಾವು ತಿಳಿಯಬಹುದು.

"ಗೂನಿಯ ಹೇಳಿಕೆಯ ಮೇರೆಗೆ ಕೈಕೇಯಿಯು ಭರತನಿಗೆ ರಾಜ್ಯಾಭಿಷೇಕವನ್ನೂ, ಶ್ರೀ ರಾಮಚಂದ್ರನಿಗೆ ವನವಾಸವನ್ನೂ ಕೇಳಿದಳು. ಶ್ರೀ ರಾಮನು ವನಕ್ಕೆ ಹೋಗಲು, ಅದರಿಂದ ಚಕ್ರವರ್ತಿ ಮಡಿಯಲು, ಕೇಕಯದೇಶದಿಂದ ಅಯೋಧ್ಯೆಗೆ ಹಿಂತಿರುಗಿದ ಭರತನು ಈ ಸಮಾಚಾರಗಳನ್ನು ತಿಳಿದು, ಚಕ್ರವರ್ತಿಗೆ ಮಾಡಬೇಕಾದ ಕ್ರಿಯಾಕರ್ಮಗಳನ್ನು ಸಂಪೂರ್ಣವಾಗಿ ನೆರವೇರಿಸಿ ಚಿತ್ರಕೂಟಕ್ಕೆ ಹೋಗಿ, ಶ್ರೀರಾಮಚಂದ್ರನ ಚರಣಾರವಿಂದಗಳನ್ನು ಉಪಾಯವಾಗಿ ಪಡೆದು ಕೂಡಲೇ ಅಯೋಧ್ಯಾ ನಗರಿಗೆ ಮರುಬರಮಾಡಿಸಿ ರಾಜ್ಯಾಭಿಷೇಕವನ್ನು ಮಾಡಿಕೊಳ್ಳಬೇಕು" ಎಂದು ಆರ್ತನಾಗಿ ಬೇಡುವ ಸ್ಥಳವೂ, ಆ ಪರಮಾತ್ಮನು ಆ ಮಾತುಗಳಿಗೊಪ್ಪದೆ ಇರಲು ಆ ಸಮಯದಲ್ಲಿ ಅವನ ಪಾದರಕ್ಷೆಯನ್ನು ಪುರುಷಾರ್ಥವಾಗಿ ಪಡೆದು ಪುನಃ ನಂದಿಗ್ರಾಮಕ್ಕೆ ಬಂದು ಆ ಪಾದರಕ್ಷೆಗಳಿಗೆ ಅಭಿಷೇಕವನ್ನು ಮಾಡಿ, ಅವುಗಳಿಗೆ ಪರತಂತ್ರನಾಗಿ ಹದಿನಾಲ್ಕುವರ್ಷ ಪರಮ ಪುರುಷನಾದ ಶ್ರೀ ರಾಮನ ಆಗಮನವನ್ನು ನಿರೀಕ್ಷಿಸುತ್ತಾ ಕಾಲವನ್ನು ಕಳೆಯುತ್ತಿದ್ದನು ಎನ್ನುವುದೇ ಆ ಭರತನ ಚರಿತ್ರೆ.

ಈ ವಿಷಯವನ್ನು ನೋಡುವಲ್ಲಿ "ಶ್ರೀ ರಾಮನು ಅಯೋಧ್ಯಾನಗರಿಗೆ ಹಿಂತಿರುಗಿ ರಾಜ್ಯಾಭಿಷೇಕವನ್ನು ಮಾಡಿಕೊಳ್ಳುವಲ್ಲಿ ಫಲ ಎಂಬುದು. "ಆ ಫಲಕ್ಕೆ ಅವನ ಪಾದ ಪದ್ಮಗಳೇ ಉಪಾಯ" ಎನ್ನುವುದು ಭರತನ ಅಭಿಪ್ರಾಯದಲ್ಲಿದೆ ಎನ್ನುವುದೂ ಚೆನ್ನಾಗಿ ತಿಳಿಯುತ್ತದೆ.

ಇಲ್ಲಿ ವಾಲ್ಮೀಕಿ ಮುನಿಯು ಈ ಚರಿತ್ರೆಯನ್ನು ಹೇಳುವಾಗ "ಅಭಿಷಿಂಚಸ್ವ ಚಾದ್ಯೈವ" ಎಂದೂ "ಏವಮುಕ್ತ್ವಾ ಮಹಾಬಾಹುಃ ಸಬಾಷ್ಪಃ ಕೈಕೇಯೀ ಸುತಃ । ರಾಮಸ್ಯ ಶಿರಸಾ ಪಾದೌ ಜಗ್ರಾಹ ವಿಧಿವತ್ಪುನಃ ॥" ಎಂದು ಹೇಳಿರುವುದನ್ನು ಎಣಿಸ ತಕ್ಕದ್ದು.

ಮೇಲೆ ಹೇಳಿರುವ ಮಾತುಗಳಲ್ಲಿ "ಅದ್ಯೈವ ಅಭಿಷಿಂಚಸ್ವ" ಎನ್ನುವ ಪದಗಳಲ್ಲಿ "ಭರತನು ಇಷ್ಟಪಡುವ ಸಮಯದಲ್ಲಿಯೇ ರಾಜ್ಯಾಭಿಷೇಕವನ್ನು ಮಾಡಿಕೊಳ್ಳುವುದು. ಆ ಭರತನು ಅಪೇಕ್ಷಿಸಿದ ಫಲ ಎನ್ನುವುದು 'ಸಬಾಷ್ಪಃ' ಎನ್ನುವುದರಲ್ಲಿ ಭರತನಿಗೆ ಆರ್ತಿಯುಳ್ಳವನು" ಎನ್ನುವುದೂ, "ರಾಮಸ್ಯ ಪಾದೌ ಶಿರಸಾ ಜಗ್ರಾಹ" ಎನ್ನುವ ವಾಕ್ಯದಲ್ಲಿ ಭರತನು ಶ್ರೀ ರಾಮಚಂದ್ರನ ಚರಣಾರವಿಂದಗಳನ್ನೇ ಉಪಾಯವಾಗಿ ಪಡೆದವನೆಂಬುದೂ "ವಿಧಿವತ್" ಎನ್ನುವುದರಲ್ಲಿ ಭರತನು ಆ ರೀತಿಗನುಸಾರವಾಗಿ ಪಡೆದವನು ಎಂಬುದು ಚೆನ್ನಾಗಿ ತಿಳಿಯುತ್ತದೆ.

ಈ ಅರ್ಥವನ್ನು ಮನಸಾರೆ ನೋಡುವವರಿಗೆ ಭರತನು ಆರ್ತನಾಗಿ ರೀತಿಯನ್ನನು ಸರಿಸಿ ಚರಣವನ್ನು ಆಶ್ರಯಿಸಿದವನು ಎನ್ನುವುದು ಸ್ಪಷ್ಟ. ಆರ್ತಿಯಿಂದ ಶರಣಾಗತನಾದವನಿಗೆ ಆಗಲೇ ಫಲಪ್ರದ ಎಂಬ ಶಾಸ್ತ್ರವು ಹೇಳುತ್ತದೆ. ಆ ರೀತಿ ಭರತನು ಫಲವನ್ನು ಪಡೆದನೇ ? ಎಂದರೆ ಪಡೆಯಲಿಲ್ಲವೆಂದೇ ವಾಲ್ಮೀಕಿ ಮುನಿಯು ಹೇಳಿರುತ್ತಾರೆ.

"ಸಕಾಮ ಮನವಾಪ್ಯೈವ ರಾಮಪಾದಾವುಪಸ್ಪೃಶನ್। ನಂದಿಗ್ರಾಮೇಽಕರೋ ದ್ರಾಜ್ಯಂ ರಾಮಾಗಮನ ಕಾಂಕ್ಷಯಾ" ಎನ್ನುವ ವಾಲ್ಮೀಕಿ ಮುನಿಯ ಮಾತುಗಳನ್ನು ಇಲ್ಲಿ ನೋಡತಕ್ಕದ್ದು.

ಈ ಮಾತುಗಳಲ್ಲಿ ಅಡಕವಾಗಿರುವ "ಸಕಾಮ ಮನವಾಪ್ಯೈವ" ಎನ್ನುವ ಪದಗಳಲ್ಲಿ ಭರತನು ಶ್ರೀ ರಾಮಚಂದ್ರನಲ್ಲಿ ತಾನು ಅಪೇಕ್ಷಿಸಿದ ಪುರುಷಾರ್ಥವನ್ನು ಪಡೆಯಲಿಲ್ಲ ಎಂಬುದು ಸುಸ್ಪಷ್ಟ.

ಇಲ್ಲಿ ಭರತನು ನಿಯಮಾನುಸಾರವಾಗಿ ಪ್ರಾರ್ಥಿಸಿದ್ದರೂ ಫಲವನ್ನು ಪಡೆಯದಿದ್ದುದಕ್ಕೆ ಕಾರಣ ಏನು ? ಎಂದರೆ ಇದಕ್ಕೆ ಪರಿಹಾರವಾಗಿ ಮೊದಲು ಕೆಲವರು ಹೇಳುವ ಹಾಗೆ ಕೆಲವು ತಾತ್ಪರ್ಯಗಳನ್ನು ಹೇಳುವೆವು.

(1) ಚಕ್ರವರ್ತಿಯು ಯಾಗ ಮಾಡುತ್ತಿದ್ದ ಸ್ಥಳಕ್ಕೆ ಭಗವಂತನು ದಯಮಾಡಿಸಿದಾಗ ದೇವಾದಿದೇವತೆಗಳು ಆ ಪರಮಾತ್ಮನು ಮನುಷ್ಯರೂಪದಲ್ಲಿ ಅವತಾರ ಮಾಡಿ ರಾವಣನನ್ನು ನಾಶಮಾಡಬೇಕೆಂದು ಪ್ರಾರ್ಥಿಸಿಕೊಂಡು ಅವನ ಶರಣಾಗತಿಯನ್ನು

ಮಾಡಿದ್ದು ಚರಿತ್ರಾರ್ಹವಾದ ಸಂಗತಿ. ಆ ಶರಣಾಗತಿ ಮೊದಲು ದೇವತೆಗಳಿಂದ ಮಾಡಲ್ಪಟ್ಟಿದ್ದು.

ಆ ದೇವತೆಗಳು ಪ್ರಾರ್ಥಿಸಿದ ಫಲವನ್ನು ಕೊಡಲು ಮನಸ್ಸಿನಲ್ಲಿ ಸಂಕಲ್ಪಿಸಿ, ವನವಾಸವೆಂಬ ವ್ಯಾಜ್ಯದಿಂದ ದಯಮಾಡಿಸಿರುವ ಸಮಯದಲ್ಲಿ ಭರತನು ಆರ್ತನಾಗಿ ಶರಣಾಗತನಾದ ವಿಚಾರವನ್ನು ನಾವು ತಿಳಿದಿರುತ್ತೇವೆ. ಇದರಿಂದ ಭರತನು ಮಾಡಿದ ಶರಣಾಗತಿ ಅನಂತರ ಮಾಡಿದ್ದು ಎನ್ನುವುದು ಸ್ಪಷ್ಟ. ಮೊದಲು ಮಾಡಿದ ದೇವತೆಗಳ ಶರಣಾಗತಿಗೆ ಮೊದಲು ಫಲವನ್ನು ನೀಡಿ, ಅನಂತರ ಮಾಡಿದ ಭರತನ ಶರಣಾಗತಿಗೆ ಫಲವನ್ನು ಕೊಡುವುದು ನ್ಯಾಯ ಎಂದು ಸಂಕಲ್ಪಿಸಿ ಭರತನ ಇಷ್ಟಕ್ಕಾಗಿ ಆಗಲೀ ಶ್ರೀ ರಾಮನು ಅಯೋಧ್ಯಾನಗರಿಗೆ ಹಿಂತಿರುಗಿ ರಾಜ್ಯಾಭಿಷೇಕವನ್ನು ಮಾಡಿಕೊಳ್ಳಲಿಲ್ಲ. ಇದು ಮೊದಲ ಪರಿಹಾರ.

(2) ಶ್ರೀ ರಾಮಚಂದ್ರನ ಮನಸ್ಸು ನೋಯುವ ಹಾಗೆ ಭರತನಿಗೆ ಕೆಲವು ಪಾಪಗಳು ಇರಬಹುದು. ಸ್ಥೂಲವಾಗಿ ಪ್ರತ್ಯಕ್ಷವಾಗಿ ಕಾಣದಿರುವ ಹಾಗೆ ಕೆಲವು ಪಾಪಗಳಿರಬಹುದು ಎಂದು ಊಹಿಸಬಹುದಲ್ಲವೇ ? ಈ ರೀತಿ ಹೇಳುವುದು ಎರಡನೆಯ ಪರಿಹಾರ.

(3) ಈ ಶರಣಾಗತಿಗೆ ಕೆಲವು ಅಂಗಗಳು ಸಹಾಯ ಮಾಡುವಂತಹವೂ ಉಂಟು. ಹಿರಿಯರನ್ನು ಮುಂದಿಟ್ಟುಕೊಂಡು ಲಕ್ಷ್ಮೀದೇವಿಯನ್ನು ಪುರುಷಕಾರವಾಗಿ ಹೊಂದದೇ ಹೋದುದು. ಆ ಅಂಗಗಳೂ ಆದೇ ಭರತನು ಫಲವನ್ನು ಪಡೆಯದೆ ಇರುವುದಕ್ಕೆ ಕಾರಣ. ಆ ಅಂಗಗಳಲ್ಲಿ ಯಾವುದೋ ಒಂದೆರಡು ಕಡಮೆಯಿರಬಹುದು. ಇದು ಮೂರನೆಯ ಪರಿಹಾರ.

(4) ಶ್ರೀ ರಾಮನು ತಂದೆ, ತಾಯಿ ಇವರನ್ನು ಪೂಜಿಸಿದರೆ ಒಳ್ಳೆಯದಾಗುತ್ತದೆ ಎನ್ನುವ ನ್ಯಾಯವನ್ನು ತನ್ನ ನಡೆವಳಿಕೆಯಲ್ಲಿ ತೋರಿಸಿ ಸ್ಥಾಪಿಸಲು ಬಂದವನು ತನ್ನ ತಾಯಿ ಎಂಬುವ ಬಲತಾಯಿ ಎಂಬ ಭೇದವಿಲ್ಲದವನು. ಕೈಕೇಯಿ ಬಲತಾಯಿಯಾಗಿದ್ದರೂ ಆ ತಾಯಿಯ ಮಾತನ್ನು ಅನುಸರಿಸಿ ರಾಜ್ಯವನ್ನು ತೊರೆದ ಪರಮ ಪುರುಷನಲ್ಲವೇ ? ಆ ಭಗವಂತನು ಪೂಜಿಸಿದ ಕೈಕೇಯಿಯನ್ನು ಭರತನು ಅನೇಕ ರೀತಿಯಲ್ಲಿ ನಿಂದಿಸಿ ಮಾತನಾಡಿದ್ದು ಅವನ ಮನಸ್ಸನ್ನು ಬಹಳವಾಗಿ ವ್ಯಥೆಗೊಳಿಸಿತು. ಆದ್ದರಿಂದ ಭರತನ ಇಚ್ಛಾನುಸಾರವಾಗಿ ನಡೆಯಲಿಲ್ಲ "ಮಾತರಂ ರಕ್ಷಕೈಕೇಯೀಂ" ಎನ್ನುವ ಶ್ರೀ ರಾಮಚಂದ್ರನ ಮಾತುಗಳೂ "ಪೂಜಿತಾ ಮಾಮಿಕಾ ಮಾತಾ" ಎನ್ನುವ ಭರತನ ಮಾತುಗಳನ್ನು ಇಲ್ಲಿ ಕಾಣತಕ್ಕದ್ದು.

ಚಿತ್ರಕೂಟದಲ್ಲಿ ಪಾದರಕ್ಷೆಯನ್ನು ಅನುಗ್ರಹಿಸುವ ಸಮಯದಲ್ಲಿ ಶ್ರೀ ರಾಮಚಂದ್ರನು ಹೇಳಿದ್ದ ಮೊದಲ ಮಾತು. ಹದಿನಾಲ್ಕು ವರ್ಷ ವನವಾಸ ಮಾಡಿ ನಂತರ ನಂದಿಗ್ರಾಮದಲ್ಲಿ ದಯಮಾಡಿಸಿರುವ ಶ್ರೀ ರಾಮನೊಂದಿಗೆ ಭರತನು ಹೇಳಿರುವ ವಾಕ್ಯಗಳು :—

“ ಪ್ರಾಜಿತಾ ಮಹಾವೀರಾ ಪರಾತಾ ” ಎನ್ನುವುದು ನಾಲ್ಕನೆಯ ಪರಿಹಾರ.

(1) ದೇವತೆಗಳ ಶರಣಾಗತಿಯನ್ನು ತಿಳಿಸುವ ಸ್ಥಳದಲ್ಲಿ “ ರಾವಣನ ನಾಶವನ್ನು ಕುರಿತು ಶರಣಾಗತಿ ಪಡೆದಿರುವುದಾಗಿ ಹೇಳಲ್ಪಟ್ಟಿದ್ದಲ್ಲದೆ, ಕಾಲವನ್ನು ಕುರಿತು ಹೇಳಿದ್ದಿಲ್ಲ.”

ಆದನ್ನು ನಾವು ತಿಳಿಯಬೇಕಾದುದು ಆವಶ್ಯಕ. ಆ ಸ್ಥಳದಲ್ಲಿರುವ ದೇವತೆಗಳ ಮಾತುಗಳು :— “ ವಿಷ್ಣೋ ಸಮರೇ ಜಹಿರಾವಣಂ ” ಎನ್ನುವುದು. ಭರತನು ಶರಣು ಹೊಂದುವಾಗ “ಅದ್ಯೈವ” (ಈಗಲೇ) ಎಂದು ಸಮಯವನ್ನು ಕುರಿತು ಹೇಳಿರುವುದು ಸುಸ್ಪಷ್ಟ. ಇದರಿಂದ ಏನು ತಿಳಿದ ಹಾಗಾಯಿತು ಎಂದರೆ—

ದೇವತೆಗಳೂ ಭರತನೂ ತಮತಮಗೆ ಸ್ವಂತವಾದ “ ರಾವಣನ ನಾಶ ” ಅಯೋಧ್ಯೆಗೆ ಹಿಂತಿರುಗಿ ರಾಜ್ಯಾಭಿಷೇಕವನ್ನು ಮಾಡಿಕೊಳ್ಳುವುದು ” ಎನ್ನುವ ಫಲವನ್ನು ಒಂದೇ ಸಮಯದಲ್ಲಿ ಕೇಳಿದ್ದರೆ ಪ್ರಯೋಜನ ಕುರಿತಾದ ವಿರೋಧವುಂಟಾಗುತ್ತಿತ್ತು. ಆ ವಿರೋಧವು ತೀರುವ ಹಾಗೆ ಭಗವಂತನೂ” ಮೊದಲು ಮಾಡಿದ ದೇವತೆಗಳ ಶರಣಾಗತಿಗೆ ಮೊದಲೂ, ಅನಂತರ ಮಾಡಿದ ಭರತನ ಶರಣಾಗತಿಗೆ ನಂತರವೂ ಫಲವನ್ನು ಕೊಡುವುದು ಸರಿ ಎಂದು ಮನಸ್ಸಿನಲ್ಲಿ ಸಂಕಲ್ಪಿಸಿ ಭರತನಿಗೆ ಅದೇ ಸಮಯದಲ್ಲಿ ಸಹಾಯಮಾಡಲು ಒಪ್ಪಲಿಲ್ಲ ಎನ್ನಬಹುದು. ದೇವತೆಗಳೂ ಭರತನೂ ತಮ ತಮಗೆ ಬೇಕಾದ ಫಲವನ್ನು ಒಂದೇ ಸಮಯದಲ್ಲಿ ಪಡೆಯಬೇಕೆಂದು ಅಪೇಕ್ಷಿಸಿ ಪರಮಾತ್ಮನನ್ನು ಬೇಡಿಕೊಂಡವರಾಗಿ ಹೇಳಿಲ್ಲ.

ಭರತನಾದರೋ ಕಾಲವನ್ನು ಸೂಚಿಸದೆ ತನಗೆ ಬೇಕಾದ ಫಲವನ್ನು ಶರಣಾಗತನಾಗಿ ಬೇಡಿಕೊಂಡಿರುವವನಾದ್ದರಿಂದ ಪರಮಾತ್ಮನು ಆ ಭರತನಿಗೆ ಆ ಕಾಲದಲ್ಲಿಯೇ ಅನುಗ್ರಹಿಸದಿದ್ದರೆ ಈ ವಿಮರ್ಶೆಗೆ ಅವಕಾಶವಿರುತ್ತಿರಲಿಲ್ಲ. ಆ ಭರತನೋ “ ಈಗಲೇ ರಾಜ್ಯಾಭಿಷೇಕವನ್ನು ಮಾಡಿಕೊಳ್ಳಬೇಕು ” ಎಂದು ಸಮಯವನ್ನು ತಿಳಿಸಿಯೇ ಶರಣವನ್ನು ಆಶ್ರಯಿಸಿರುವವನಲ್ಲವೇ ! ಆದ್ದರಿಂದ ಮೊದಲ ಪರಿಹಾರ ತೆಗೆದುಕೊಳ್ಳಬೇಕಾಗಿಲ್ಲ.

(2) ಭರತನ ಜನ್ಮದ ವಿಷಯವಾದ ನಿಜಸ್ಥಿತಿಯನ್ನು ತಿಳಿದರೆ ಶ್ರೀ ರಾಮನು ಹೇಗೆ ಪಾಪರಹಿತನಾಗಿರುವನೋ, ಹಾಗೆಯೇ ಆ ಭರತನೂ ಪಾಪವಿಲ್ಲದೆ ಇದ್ದಿದ್ದರೆ, “ಆ ಭರತನಿಗೆ ಶ್ರೀ ರಾಮನ ಮನಸ್ಸು ನೋಯುವ ಹಾಗೆ ಕೆಲವು ಪಾಪಗಳು ಉಂಟು” ಎಂದು ಹೇಳಲು ಅವಕಾಶವಿಲ್ಲ. ಇದರಿಂದ ಎರಡನೆಯ ಪರಿಹಾರವೂ ಸರಿಹೊಂದುವುದಿಲ್ಲವೆಂಬುದು ಸುಸ್ಪಷ್ಟ.

(3) “ ರಾಮಸ್ಯ ಶಿರಸಾ ಪಾದೌ ಜಗ್ರಾಹ ವಿಧಿವತ್ ಪುನಃ ” ಎನ್ನುವುದರಲ್ಲಿ ಇರುವ “ ವಿಧಿವತ್ ” ಎನ್ನುವ ಪದವನ್ನು ನೋಡಿದರೆ ಭಗವಂತನನ್ನು ಉಪಾಯಭೂತನನ್ನಾಗಿ ಪಡೆಯುವಲ್ಲಿ ನೀತಿಗನುಸಾರವಾಗಿ ನಡೆದವನು ಭರತನೆಂದು ಚೆನ್ನಾಗಿ ತಿಳಿಯುವುದಲ್ಲವೇ ? ಆದ್ದರಿಂದ ಮೂರನೆಯ ಪರಿಹಾರಕ್ಕೆ ಅವಕಾಶವಿಲ್ಲ.

(4) ನಾಲ್ಕನೆಯ ಪರಿಹಾರ ರಾಮಾಯಣದಲ್ಲಿ ಒಂದು ರೀತಿಯಾಗಿ ಹೇಳಿದೆ ಎನ್ನುವುದು ನಿಜವೇ ಆದರೂ, ಅದನ್ನು ಪರಿಹಾರವಾಗಿ ತೆಗೆದುಕೊಳ್ಳಲು ಅವಕಾಶವಿಲ್ಲ. ಇದನ್ನು ಸ್ವಲ್ಪ ವಿವರಿಸಿ ಹೇಳುತ್ತೇನೆ.

ಶ್ರೀ ರಾಮನು ಪರಮಾತ್ಮನು, ಭರತನು ಜೀವನು, ಎನ್ನುವ ಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟುಕೊಂಡು ಕೆಳಕಂಡ ಸತ್ಯವನ್ನು ಕಾಣಬೇಕು. ಭಗವಂತನು ಎಲ್ಲಾ ಚೇತನರಿಗೂ ಯಾವತ್ತಿಗೂ ಪ್ರಿಯನಾದ ತಾಯಿ ಮತ್ತು ತಂದೆಯಾಗಿರುವನು. ಈ ರೀತಿ ತಾಯಿಯಾಗಿಯೂ, ತಂದೆಯಾಗಿಯೂ ಇರುವುದು ಕರ್ಮದಿಂದಲ್ಲ. ಪರಮಾತ್ಮನಿಗೂ, ಚೇತನನಿಗೂ ಇರುವ ನವವಿಧ ಸಂಬಂಧವಿದೆಯಲ್ಲವೇ ? ಈ ರೀತಿಯಾದ ಸಂಬಂಧ ಲಕ್ಷ್ಮಣನಿಗೂ ರಾಮನಿಗೂ ಹೇಗೆ ಯಾವತ್ತಿಗೂ ಇದೆಯೋ ಆ ರೀತಿಯೇ ಭರತನಿಗೂ, ಕೈಕೇಯಿಗೂ ಉಂಟೋ ? ಇಲ್ಲವಲ್ಲವೇ ? ಲಕ್ಷ್ಮಣನು (ರಾಜ್ಯಾಭಿಷೇಕಕ್ಕೆ ಇಟ್ಟ ಮುಹೂರ್ತದಲ್ಲಿ ಜಟೆಯನ್ನು ಧರಿಸಿ ಕಾಡಿಗೆ ಹೋಗುವಂತೆ ಮಾಡಿದ ಕೈಕೇಯಿಯು ಹಾಗೆ ವಿರೋಧವಾದ ಕೆಲಸವನ್ನು ಮಾಡದೆ ಇದ್ದರೂ) ದಶರಥನನ್ನೂ, ಸುಮಿತ್ರಾದೇವಿಯನ್ನೂ ಪ್ರಿಯ ಮಾತಾಪಿತೃಗಳೆಂದು ಪರಿಗಣಿಸದೆ ಶ್ರೀ ರಾಮಚಂದ್ರನನ್ನೇ ತಾಯಿ, ತಂದೆ, ಮತ್ತು ಇತರ ಎಲ್ಲಾ ಸಂಬಂಧವೆಂದು ತಿಳಿದು ಆ ರಾಮನನ್ನೇ ಹಿಂಬಾಲಿಸಿ ಅವನ ಮನಸ್ಸಂತೋಷ ಪಡುವ ಹಾಗೆ ಸೇವೆ ಮಾಡಲು ಹೋದನಲ್ಲವೇ ?

ಈ ರೀತಿ ಲಕ್ಷ್ಮಣನು ಹೋಗಲು ಕಾರಣ ಆ ಲಕ್ಷ್ಮಣನಿಗೆ ಶ್ರೀ ರಾಮಚಂದ್ರನಲ್ಲಿರುವ ಅತಿಶಯವಾದ ಭಕ್ತಿಯೇ ಕಾರಣ.

ಈ ಲಕ್ಷ್ಮಣನ ಹಾಗೆ ಭರತನೂ ಅತ್ಯಧಿಕ ರಾಮ ಭಕ್ತಿ ಪಡೆದವನಲ್ಲವೇ ? ಮೇಲೆ ಹೇಳಿದ ಹಾಗೆ ವಿರೋಧ ಭಾವನೆಯುಳ್ಳ ಆ ಕೈಕೇಯಿಯಲ್ಲಿ ಆ ಭರತನಿಗೆ ಮನಸ್ಸು ಇಷ್ಟಪಡುತ್ತದೆಯೇ ಅವನು ತನ್ನ ತಾಯಿಯನ್ನು ತೊರೆದಿದ್ದು ಶಾಸ್ತ್ರರೀತಿಯಿಂದ ನೋಡಿದರೆ ದೋಷವಾಗುತ್ತದೆಯೇ ?

ಪರಮಾತ್ಮನಲ್ಲಿ ವಿರೋಧವನ್ನು ಮಾಡಿದ ತಾಯಿಯನ್ನು ಬಿಟ್ಟು ಬಿಡುವುದು ಶಾಸ್ತ್ರದ ಸತ್ಯವಾದ ಮಾರ್ಗವಲ್ಲವೇ ?

ಈ ಸತ್ಯತೆಯನ್ನು ಕಾಣುವಲ್ಲಿ '' ನಾಲ್ಕನೆಯ ಪರಿಹಾರ ಪರಿಹಾರವಾಗುವುದಿಲ್ಲ '' ಎನ್ನುವುದು ಸ್ಪಷ್ಟ.

ಆದರೆ ಶ್ರೀ ರಾಮನು '' ಮಾತರಂ ರಕ್ಷ ಕೈಕೇಯೀಂ ಮಾರೋಷಂ ಕುರುತಾಂ ಪ್ರತಿ '' ಎಂದು ಹೇಳಿರುತ್ತಾನೆ. ಭರತನೂ ಹದಿನಾಲ್ಕು ವರ್ಷ ವನವಾಸ ಮಾಡಿ ಪುನಃ ನಂದಿಗ್ರಾಮಕ್ಕೆ ದಯಮಾಡಿಸಿರುವ ಶ್ರೀ ರಾಮನನ್ನು ಕುರಿತು '' ಪೂಜಿತಾ ಮಾಮಿಕಾ ಮಾತಾ '' ಎಂದು ಭಗವದಭಿಪ್ರಾಯವನ್ನು ಅನುಸರಿಸಿ ಮಾಡಿದ ತನ್ನ ಕಾರ್ಯವನ್ನು ಹೇಳಿರುತ್ತಾನೆ ಎಂದು '' ಭಗವದಭಿಪ್ರಾಯವನ್ನು ಅನುಸರಿಸಿ '' ಎಂದು ಕೆಲವರು ಪುನಃ ವಿರೋಧಿಸಿ ಹಠವಾಗಿ ಹೇಳಬಹುದು.

ಈ ಪರಿಹಾರವನ್ನು ಮುಖ್ಯವಾಗಿ ನಮ್ಮ ಆಚಾರ್ಯರುಗಳು ಮನಸ್ಸಿಗೆ ತೆಗೆದು ಕೊಳ್ಳಲಿಲ್ಲ. ಚೇತನನ ನಿಜಸ್ಥಿತಿಯನ್ನು ತಿಳಿದಲ್ಲಿ ಕೈಕೇಯಿಯನ್ನು ಭರತನು ವಿರೋಧಿಸಿದ್ದು ಮೇಲೆ ಹೇಳಿದ ಹಾಗೆ ದೋಷವುಂಟಾಗುತ್ತದೆಯೋ ?

ನಂತರವೂ ರಾಮಾಯಣದಲ್ಲಿ ಈ ಭಾಗದಲ್ಲಿಯೇ ಒಂದೆರಡು ಸತ್ಯತೆಯನ್ನು ಕಿಷ್ಕಿಂಧಾಕಾಂಡದಲ್ಲಿ ಒಂದು ಸತ್ಯವನ್ನು ಇಲ್ಲಿ ಎತ್ತಿ ತೋರಿಸುತ್ತೇನೆ.

(1) ತಂದೆ ಆಚಾರ್ಯ ಈ ಇಬ್ಬರಲ್ಲಿ ತಂದೆಯು ಶರೀರವನ್ನುಂಟುಮಾಡಿ ಆ ಶರೀರವನ್ನು ಬೆಳೆಸುವವನು, ಆಚಾರ್ಯನೋ ಎಂದರೆ ಜ್ಞಾನವನ್ನುಂಟು ಮಾಡಿ ಆತ್ಮವನ್ನು ಬೆಳೆಸುವನು. ಇಬ್ಬರೂ ಸಹಾಯಕರೇ ಆದರೂ ಜ್ಞಾನವೃದ್ಧಿಯನ್ನುಂಟು ಮಾಡುವ ಆಚಾರ್ಯನ ಹಿರಿಮೆಯೇ ಶ್ರೇಷ್ಠವಾದದ್ದು.

" ಸಹಿ ವಿದ್ಯಾತಃ ತಂ ಜನಯತಿ ತಚ್ಛ್ರೇಷ್ಠಂ ಜನ್ಮ ಗರೀಯಾನ್ ಬ್ರಹ್ಮದಃ ಪಿತಾ ॥ ಎನ್ನುವ ವಾಕ್ಯವನ್ನು ಕಾಣತಕ್ಕದ್ದು, ಆದ್ದರಿಂದ ಆಚಾರ್ಯನ ಆಜ್ಞೆಯನ್ನು ಅನುಸರಿಸಿ ನಡೆಯುವುದು ಅತಿ ಮುಖ್ಯವಾಗಿದೆ.

ಈ ಸತ್ಯತೆಯನ್ನು ತಿಳಿಯಪಡಿಸಿ ವಸಿಷ್ಠರು " ಹೇ ರಾಘವಾ ! ನಿನಗೂ ನಿನ್ನ ತಂದೆಯವರಿಗೂ ನಾನು ಆಚಾರ್ಯನು. ಆದ್ದರಿಂದ ನನ್ನ ಮಾತಿನಂತೆ ನೀನು ವನವಾಸವನ್ನು ಬಿಟ್ಟುಬಿಟ್ಟು ಈ ರಾಜ್ಯವನ್ನು ಪಡೆದು ರಾಜ್ಯಾಭಿಷೇಕವನ್ನು ಮಾಡಿಕೊಳ್ಳುವುದು ಉಚಿತ ಎಂದು ಹೇಳಿರುತ್ತಾರೆ.

ಅನಂತರವೂ ಸ್ವತಂತ್ರನಾದ ಪರಮಾತ್ಮನಿಗೆ ಆಶ್ರಿತ ಪಾರತಂತ್ರ್ಯವೂ ಉಂಟು. ಅದು ಅವನಿಗೆ ಅತ್ಯಧಿಕ ಮಹಿಮೆಯುಳ್ಳ ಹಿರಿಮೆ. ಆಶ್ರಿತ ಪಾರತಂತ್ರ್ಯ ಯಾವುದು ? ಪರಮಾತ್ಮನಾಗಿರುವ ತಾನು ತನ್ನನ್ನು ಪ್ರೇಮದಿಂದ ಆದರಿಸಿದವರಿಗೆ ಅವರನ್ನು ಹೊಂದಿ ಅವರ ಸೇವೆಯನ್ನು ಮಾಡುತ್ತಾನೆ. ಶ್ರೀ ಕೃಷ್ಣಪರಮಾತ್ಮನು ಪಂಚ ಪಾಂಡವರಿಗೆ ದೂತನಾಗಿಯೂ, ಸಾರಥಿಯಾಗಿಯೂ ಇದ್ದು ಕೀಳು ಮಟ್ಟದ ಕೆಲಸವನ್ನು ಮಾಡಿದನಲ್ಲವೆ ?

ವಸಿಷ್ಠರು ಮೇಲೆ ಹೇಳಿರುವ ಸತ್ಯವನ್ನು ತಿಳಿಯಪಡಿಸಿ "ಹೇ ರಘು ಕುಲತಿಲಕ ! ನೀನು ಪರಮಾತ್ಮನಲ್ಲವೆ ! ಭರತನು ಭಕ್ತಿಯುಳ್ಳವರಲ್ಲಿ ಸರ್ವಶ್ರೇಷ್ಠನಲ್ಲವೇ ? ಆದ್ದರಿಂದ ಆ ಭರತನ ಹತ್ತಿರ ಪರತಂತ್ರನಾಗಿ ಅವನನ್ನು ಹೊಂದಿಕೊಂಡು ಮಾಡುವುದು ನಿನಗೆ ಹಿರಿಮೆಯನ್ನುಂಟು ಮಾಡುವ ಕಾರ್ಯವಲ್ಲವೆ ? ಈಗ ಪ್ರಾರ್ಥಿಸುವ ಹಾಗೆ ನೀನು ಕಿರೀಟಧಾರಣೆ ಮಾಡದೆ ಇದ್ದರೆ ನಿನ್ನದಾಗಿರುವ ಸರ್ವಶ್ರೇಷ್ಠವಾದ ಹಿರಿಮೆಯನ್ನು ಕಳೆದುಕೊಂಡು ಬಿಡುತ್ತೀಯೋ ಎಂದೂ ಹೇಳಿರುತ್ತಾರೆ.

ಈ ರೀತಿ ವಸಿಷ್ಠರು ಶ್ರೀ ರಾಮನನ್ನು ಕುರಿತು ಹೇಳಿರುವ ಸತ್ಯ ಸಂಗತಿಯನ್ನು ಕೆಳಕಂಡ ಆ ವಸಿಷ್ಠರ ಮಾತಿನಲ್ಲಿ ನಾವು ಕಾಣಬಹುದು :—

ಪ್ರಜ್ಞಾಂ ದದಾತಿ ಚಾಚಾರ್ಯಸ್ತಸ್ಮಾತ್ಸ ಗುರುರುಚ್ಯತೇ ।
ಸೋಽಹಂ ತೇ ಪಿತುರಾಚಾರ್ಯಸ್ತವ ಚೈವ ಪರಂತಪ ॥

ಮಮ ತ್ವಂ ವಚನಂ ಕುರ್ವನ್ನಾತಿವರ್ತೇಃ ಸತಾಂಗತಿಮ್ ।
ಭರತಸ್ಯ ವಚಃ ಕುರ್ವನ್ಯಾಚಮಾನಸ್ಯ ರಾಘವ ।
ಆತ್ಮಾನಂ ನಾತಿವರ್ತೇಸ್ತ್ವಂ ಸತ್ಯ ಧರ್ಮ ಪರಾಕ್ರಮ ॥

ಈ ರೀತಿ ವಸಿಷ್ಠರನ್ನು ಕುರಿತು ಹೇಳಿದ ಶ್ರೀ ರಾಮನ ಉತ್ತರ ಯಾವುದು ? ಎಂದರೆ :—" ಲೋಕದಲ್ಲಿ ಗೋಡೆ ಇದ್ದರೆ ಚಿತ್ರವನ್ನು ಬರೆಯುತ್ತಾನೆ " ಎನ್ನುವ ಒಂದು ನೀತಿ ಇದೆ. ಈ ನ್ಯಾಯವನ್ನು ಮನಸ್ಸಿನಲ್ಲಿಟ್ಟುಕೊಂಡು, ಶ್ರೀ ರಾಮನು ಕೆಳಕಂಡಂತೆ ಉತ್ತರವನ್ನು ಹೇಳುತ್ತಾನೆ.

ಆಚಾರ್ಯನು ಜ್ಞಾನವನ್ನುಂಟು ಮಾಡುವುದಕ್ಕೂ ಅವಕಾಶವಿದೆ. ಶರೀರವನ್ನು ಪಡೆದಿರುವವನಿಗೆ ಜ್ಞಾನವುಂಟಾಗುವುದಕ್ಕೆ ಆಚಾರ್ಯನ ಸಹಾಯ ಪಡೆಯಲು ಅವಕಾಶ ವುಂಟು. ಆದರಿಂದ ಶರೀರ, ಚಿತ್ರವನ್ನು ಬರೆಯುವುದಕ್ಕೆ ಗೋಡೆಯು ಹಾಗೆ ಜ್ಞಾನ ವುಂಟಾಗುವುದಕ್ಕೆ ಅತ್ಯಂತ ಮುಖ್ಯ ಎಂದು ತಿಳಿಯುತ್ತದೆ.

ಹೀಗೆ ಅತ್ಯಧಿಕ ಮುಖ್ಯವಾಗಿರುವ ಶರೀರವನ್ನುಂಟುಮಾಡಿ, ಬೆಳೆಸುವುದಕ್ಕೆ ತಾಯಿ, ತಂದೆಯರು ವ್ರತವನ್ನು ಮಾಡಿ, ಹತ್ತು ತಿಂಗಳು ಹೊತ್ತು ಹಡೆದು ನಂತರವೂ ಇವನಿಗೆ ತಿಳಿವಳಿಕೆಯಿಲ್ಲದ ಶೈಶವಾವಸ್ಥೆಯಲ್ಲಿ ಇವನ ಪರವಾಗಿ ಕಷ್ಟಪಟ್ಟು ಅನೇಕ ರೀತಿಯಲ್ಲಿ ಸಹಾಯ ಮಾಡುವವರಾದ್ದರಿಂದ, ಆಚಾರ್ಯನಿಗಿಂತ ಅಧಿಕ ಮೇಲ್ಪಟ್ಟವ ರಾಗಿರುತ್ತಾರೆ. ಆಚಾರ್ಯನಿಗಿಂತಲೂ ತಂದೆಗೆ ಶ್ರೇಷ್ಠತೆಯುಂಟು. ಆ ಆಚಾರ್ಯ ವಚನಕ್ಕೂ ತಂದೆಯ ವಚನಕ್ಕೂ ಹೊಂದಿಕೆ ಉಂಟು. ಪರಿಸ್ಥಿತಿ ಈ ರೀತಿ ಇರಲು ಪಿತೃವಾಕ್ಯ ಪರಿಪಾಲನೆ ಮಾಡುವುದೇ ಉಚಿತ ಎಂದು ಶ್ರೀ ರಾಮನ ಉತ್ತರವಾಗಿರು ತ್ತದೆ.

ಈ ಸ್ಥಳದಲ್ಲಿ " ಸಹಿರಾಜಾ ಜನಯಿತಾ ಪಿತಾ ದಶರಥೋ ಮಮ ।
ಆಜ್ಞಾತಂ ಯನ್ಮಯಾ ತಸ್ಯ ನ ತನ್ಮಿಥ್ಯಾ ಭವಿಷ್ಯತಿ ॥ "
ಎನ್ನುವ ಶ್ರೀ ರಾಮಚಂದ್ರನ ಮಾತನ್ನು ಅನುಸಂಧಿಸಬೇಕು.

ಇದನ್ನು ಸ್ವಲ್ಪ ವಿಮರ್ಶಿಸೋಣ " ರಾಮಾ ! ಆಶ್ರಿತ ಪಾರತಂತ್ರ್ಯವಾಗಿರುವ ನಿನ್ನ ಶ್ರೇಷ್ಠ ಹಿರಿಮೆಯನ್ನು ನೀನು ತೊರೆದು ಬಿಡಬೇಡ, ಭರತನ ಇಚ್ಛೆಯನ್ನು ನೆರವೇರಿಸು " ಎಂದು ವಸಿಷ್ಠರು ಹೇಳಿದ್ದಕ್ಕೆ ಶ್ರೀ ರಾಮಚಂದ್ರನು ಯಾವ ಉತ್ತರ ವನ್ನು ಹೇಳಿಲ್ಲ.

ಶ್ರೀ ರಾಮನು ಇಷ್ಟಪಟ್ಟ ಹಾಗೆ " ತಾಯಿ ತಂದೆಗಳಿಗೆ ಶ್ರೇಷ್ಠತೆಯುಂಟು " ಎನ್ನುವುದು ಒಂದು ರೀತಿಯಿಂದ ಸತ್ಯವೇ ಆಗಿದೆ. ಆದರೂ ಸಹ "ಆಚಾರ್ಯನಿಗಿಂತಲೂ ತಾಯಿ ತಂದೆಗೆ ಶ್ರೇಷ್ಠತೆಯುಂಟು " ಎಂದುಕೊಂಡರೆ ಅವರುಗಳಲ್ಲಿಯೂ ಆಚಾರ್ಯ ನಿಗೆ ಶ್ರೇಷ್ಠತೆಯನ್ನು ಹೇಳುವ ಅನೇಕ ಶಾಸ್ತ್ರಗಳೊಡನೆ ವಿರೋಧವುಂಟಾಗುತ್ತದೆ.

ನಂತರವೂ ತಾಯಿ ತಂದೆಯವರನ್ನು ಬಿಟ್ಟು ಬಿಡು, ಎಂದು ಹೇಳಿರುವ ಶಾಸ್ತ್ರದ ಹಾಗೆ, ಆಚಾರ್ಯರನ್ನು ಬಿಡು ಎಂದು ಹೇಳಿರುವ ಶಾಸ್ತ್ರವೂ ಉಂಟೋ ? ಇಲ್ಲ, ಅಕ್ಷರ ಕಲಿಸಿದವನನ್ನು ಶಾಸ್ತ್ರ ಬಿಡು ಎಂದು ಹೇಳಿರುವುದು ಸತ್ಯ, "ಶ್ರೇಷ್ಠವಾದ ಅಷ್ಟಾಕ್ಷರ ಮಂತ್ರವನ್ನು ಉಪದೇಶ ಮಾಡಿದವನು ಪರಮಾತ್ಮನಿಗಿಂತ ಶ್ರೇಷ್ಠನಾದವನು ಎಂದು ಶಾಸ್ತ್ರ ನಿಜಸ್ಥಿತಿಯನ್ನು ಹೇಳುತ್ತದೆಯಲ್ಲವೇ ? ಈ ಪ್ರಪಂಚದಲ್ಲಿ ತನ್ನ ಉಪದೇಶ ವಾಕ್ಯಗಳಿಂದಲೂ, ಕಾರ್ಯಗಳಿಂದಲೂ ಅಂಥಾ ಕ್ರಮವನ್ನು ಸ್ಥಾಪಿಸಲು ಅವತಾರ ಮಾಡಿದವನು. ಆದೇ ರೀತಿ ಸ್ಥಾಪಿಸಿದವನಾದ ಶ್ರೀ ರಾಮಚಂದ್ರನು "ಆಚಾರ್ಯನ ವಾಕ್ಯ ಆದರಿಸಲು ತಕ್ಕದಲ್ಲ, ತಂದೆಯ ವಚನವೇ ಆದರಿಸಲು ತಕ್ಕದ್ದು" ಎಂದು ಹೇಳಿದ್ದೇ ಆದರೆ ಆ ಪರಮಾತ್ಮನನ್ನು ಯಾರು ವಿರೋಧಿಸಬಲ್ಲರು? ಸ್ವತಂತ್ರನನ್ನು ವಿರೋಧಿಸಿ ಹೇಳಲು ಸಾಧ್ಯವೇ ? ಅವನ ಮನಸ್ಸು, ಆಗಲೇ ಅಯೋಧ್ಯೆಗೆ ಹಿಂತಿರುಗಿ ರಾಜ್ಯಾಭಿಷೇಕ ಮಾಡಿಕೊಳ್ಳಲು ಇಷ್ಟಪಡಲಿಲ್ಲ ಎನ್ನುವುದೇ ಹೊರತು ಬೇರೆ ಅಭಿಪ್ರಾಯ ಅವನ ಮಾತಿಗೆ ಇಲ್ಲ.

ಈ ಅಭಿಪ್ರಾಯವು ಈ ಭಾಗದಲ್ಲಿಯೇ ಇರುವ ಬೇರೊಂದು ಭರತನ ಚರಿತ್ರೆಯಲ್ಲಿ ನೋಡುವಲ್ಲಿ ನಿಶ್ಚಯವಾಗುವುದರಿಂದ ಆ ವಿಚಾರವನ್ನು ಇಲ್ಲಿ ಎತ್ತಿ ತೋರಿಸುತ್ತೇವೆ,

ಭರತನು ತನ್ನ ಪ್ರಾರ್ಥನೆಗೆ ಶ್ರೀ ರಾಮನು ಸ್ವಲ್ಪವೂ ಒಪ್ಪದೆ ಇರುವುದರಿಂದ ಆ ಶ್ರೀ ರಾಮಚಂದ್ರನ ಆಶ್ರಮದ ಬಾಗಿಲಲ್ಲಿ (ಅವನು ಅಯೋಧ್ಯೆಗೆ ಹಿಂತಿರುಗಿ ರಾಜ್ಯಾಭಿಷೇಕ ಮಾಡಿಕೊಳ್ಳುವವರೆಗೆ) ಉಪವಾಸವಿದ್ದು ದರ್ಭೆಗಳನ್ನು ಹಾಸಿ ಅದರ ಮೇಲೆ ಬಿದ್ದಿರುತ್ತೇನೆ ಎಂದು ಎಣಿಸಿ ಸುಮಂತ್ರನನ್ನು ದರ್ಭೆಗಳನ್ನು ತೆಗೆದುಕೊಂಡು ಬಾ ಎಂದು ಅಜ್ಞಾಪಿಸಿದನು. ಇದನ್ನು ಕೇಳಿದ ಸುಮಂತ್ರನು ಭರತನ ಈ ವ್ಯವಹಾರ ಶ್ರೀ ರಾಮನ ಮನಸ್ಸಿಗೆ ಇಷ್ಟವಿಲ್ಲದೆಂದು, ಒಂದು ರೀತಿಯಿಂದ ತಿಳಿದುಕೊಂಡು ಆ ಭರತನು ಆಜ್ಞಾಪಿಸಿದ ಹಾಗೆ ಮಾಡದೆ ಇದ್ದನು. ಆ ಸಮಯದಲ್ಲಿ ಭರತನೇ ತಾನು ನೆನೆಸಿದ ಹಾಗೇ ದರ್ಭೆಗಳನ್ನು ಹರಡಿ ಅದರ ಮೇಲೆ ಮಲಗಲು ಪ್ರಯತ್ನಿಸಿದನು.

ಇದನ್ನು ಕಣ್ಣಾರೆ ಕಂಡ ಶ್ರೀ ರಾಮಚಂದ್ರನು ಭರತನನ್ನು ನೋಡಿ ಹೇಳಿದ ಮಾತುಗಳು : "ಅಪ್ಪಾ ! ನಾನು ಒಡೆಯ ನೀನು ನನ್ನ ಸ್ವಂತ ವಸ್ತು. ಈ ರೀತಿ ಪಡೆದಿರುವ ನಿನ್ನನ್ನು ಸ್ವಂತದವನಾದ ನಾನು ನನ್ನ ಇಷ್ಟಕ್ಕೆ ಅನುಸಾರವಾದ ಉಪಯೋಗವನ್ನು ಮಾಡಿಕೊಳ್ಳಬೇಕೆಂದು ಇಷ್ಟಪಟ್ಟೆನು. ಈ ರೀತಿ ಅಪೇಕ್ಷಿಸಿ ಉಪಯೋಗ ಮಾಡಿಕೊಳ್ಳಲು, ನನಗೆ ಮಾಡಲಾಗದ ಕಾರ್ಯವಾಗಿ ನಿನ್ನ ಮನಸ್ಸಿನಲ್ಲಿ ತೋರಿದ್ದು ಮಾತ್ರವಲ್ಲದೆ, ಸ್ವಂತ ವಸ್ತುವಾದ ನೀನು ನನ್ನ ಪರಿಸ್ಥಿತಿಗೆ ತಕ್ಕದ್ದಲ್ಲ ಸ್ವತಂತ್ರನಾದ ನನ್ನನ್ನು ಅಡಗಿಸಿ ಒಳ್ಳೆಯ ಮಾರ್ಗದಲ್ಲಿ ನಡೆಸುವುದಾಗಿ ನೀನು ಯೋಚಿಸಿರುವ ಈ ಕಾರ್ಯವನ್ನು (ಆಶ್ರಮದ ಬಾಗಿಲಲ್ಲಿ ದರ್ಭೆಯನ್ನು ಹಾಸಿ ಅನಶನ

ಹಿರುವ ಕಾರ್ಯ ಮಾಡಿ, ಇದರಿಂದ ನಿಶ್ಚಿಂತನಾಗಿರುವ ನನ್ನ ಸ್ಥಿತಿಗನುಸಾರವಾಗಿ ಇಲ್ಲದೆ ಇರುವುದನ್ನು ನೀನು ಎಸಗಿರುವುದು ಮಾಡಬಾರದ ಕೆಲಸ (ನಿನ್ನನ್ನು ನನ್ನ ಇಷ್ಟಕ್ಕನುಸಾರವಾಗಿ ಉಪಯೋಗ ಮಾಡುವ ಕಾರ್ಯ) ವನ್ನು ತಡೆಯುವ ಹಾಗೆ ಇರುವುದೆಂದೂ, " ನನ್ನ ಕೆಲಸ ನನಗೆ ತಕ್ಕುದ್ದಾಗಿದೆ " ಎಂಬುದನ್ನು ನಾನು ತಿಳಿಸಲು ಬೇಕೇ ? ನಿನ್ನ ಕಾರ್ಯ ನಿನಗೆ ತಕ್ಕುದ್ದಾಗಿದೆಯೋ ? ಸರಿಯಲ್ಲ ಎನ್ನುವುದನ್ನು ತಿಳಿಸುವೆನು.

ಬ್ರಾಹ್ಮಣನು ಒಬ್ಬ ತನ್ನ ತಂದೆ " ಈ ಕ್ಷಣ ಕೊಡಬೇಕು " ಎಂದು ಸಮಯ ವನ್ನು ಕುರಿತು ಸಾಲವಾಗಿ ಹಣವನ್ನು ಒಬ್ಬನಿಗೆ ಕೊಟ್ಟಿರುತ್ತಾನೆ. ಆ ರೀತಿ ಸಾಲ ಪಡೆದವನು ಸಾಲಗಾರನಾದ ಬ್ರಾಹ್ಮಣನಿಗೆ ಕೊಡಬೇಕಾದ ಹಣವನ್ನು ನಿಗದಿಯಾದ ಸಮಯದಲ್ಲಿ ಕೊಡದೆ ತಪ್ಪಿದ್ದೇ ಆದರೆ, ಆ ಸಾಲ ಕೊಟ್ಟವನು ಸಾಲಗಾರನ ಮನೆಯ ಬಾಗಿಲಲ್ಲಿ ನೀನು ಈಗ ಕೊಡಬೇಕೆಂದು ಇಷ್ಟಪಟ್ಟು ಹಾಗೆ ದರ್ಭೆಗಳನ್ನು ಹರಡಿ ಮಲಗಿದರೆ ಸರಿಯಾಗಿರುತ್ತೆ. ಇದು ಬ್ರಾಹ್ಮಣ ಧರ್ಮ. ಕ್ಷತ್ರಿಯನಾದ ನಿನಗೆ ತಕ್ಕದ್ದಲ್ಲ. ನೀನು ಮತ್ತೊಂದು ಜಾತಿಯವರ ನ್ಯಾಯವನ್ನು ಅನುಸರಿಸಿದ್ದರಿಂದ ನಿನಗೆ ಪಾಪವುಂಟಾಗುತ್ತದೆ. ಆ ಪಾಪವು ಹೋಗುವ ಹಾಗೆ " ಇನ್ನು ಈ ರೀತಿ ಯಾದ ಪಾಪಕಾರ್ಯವನ್ನು ನಾನು ಮಾಡುವುದಿಲ್ಲವೆಂದು ಶಪಥ ಮಾಡಿ, ಕಣ್ಣೀರನ್ನು ಮುಟ್ಟಿ ನನ್ನನ್ನು ಸ್ಪರ್ಶಿಸು " ಇದೇ ಆ ಪಾಪ ಕಾರ್ಯಕ್ಕೆ ತಕ್ಕ ಉಚಿತವಾದ ಪರಿ ಹಾರ ಕಾರ್ಯ. " ಶೀಘ್ರೋ ಪುರಸ್ತ್ಯಜ್ಯಾಲಾಯಾ ಯಾವನ್ನ ಪ್ರತಿಯಾಸ್ಯತಿ " ಎನ್ನು ವುದು ಭರತನ ಮಾತು.

" ಕಿಂ ಮಾಂ ಭರತ ಕುರ್ವಾಣಂ ತಾತ ಪ್ರತ್ಯುಪವೇಕ್ಷ್ಯಸಿ ।
ಬ್ರಾಹ್ಮಣೋ ಹ್ಯೇಕ ಪಾರ್ಶ್ವೇನ ನರಾನ್ ರೋದ್ಧುಮಿಹಾರ್ಹತಿ ॥
ನತು ಮೂರ್ಧಾಭಿಷಿಕ್ತಾನಾಂ ವಿಧಿಃ ಪ್ರತ್ಯುಪವೇಶನೇ ।
ಉತ್ತಿಷ್ಠ ತ್ವಂ ಮಹಾಬಾಹೋ ಮಾಂ ಚ ಸ್ಪೃಶ ತಥೋದಕಮ್ ॥ "

ಈ ರೀತಿ ಭರತನೂ ಪರಿಹಾರ ಕಾರ್ಯ ಮಾಡಿದ್ದಾಗಿ ಚರಿತ್ರೆ. ಇದರಲ್ಲಿ ಕೇಳಿಕಂಡಂತೆ ಸತ್ಯತೆಯನ್ನು ತಿಳಿಯತಕ್ಕದ್ದು. ಶ್ರೀ ರಾಮನು ಚಕ್ರವರ್ತಿಯ ಪುತ್ರನಾಗಿದ್ದುದರಿಂದ ಕ್ಷತ್ರಿಯನೇ ಆಗುತ್ತಾನೆ.

ಅನಂತರವೂ ಈ ಪರಮ ಪುರುಷನ ಚರಣಾರವಿಂದಗಳ ಪಾದರಕ್ಷೆಯು ಅಭಿಷಿಕ್ತ ವಾಗಿರುವುದರಿಂದ " ಈ ಪರಮ ಪುರುಷನು ಮೂರ್ಧಾಭಿಷಿಕ್ತನಾದ ಕ್ಷತ್ರಿಯನು ಎಂದು ಹೇಳಲು ಅಡ್ಡಿ ಏನೂ ಇಲ್ಲ. ಆದರೂ ಸಹ ಈ ರಾಮಚಂದ್ರನು ವಾನರ ಪಡೆ ಗಳೊಂದಿಗೆ ಸಮುದ್ರ ತೀರದಲ್ಲಿ ಸೇರಿ ಕುಳಿಯುತ್ತಿರುವ ಆ ಸಮುದ್ರವನ್ನು ನೋಡಿದ ಸಮಯದಲ್ಲಿ ಆ ರೀತಿಯಾದ ಸಾಗರವನ್ನು ದಾಟಿ ಹೋಗುವ ಉಪಾಯ ಯಾವುದೋ ? ಎಂದು ಆಲೋಚಿಸಿ ನೋಡುವಲ್ಲಿ ಆ ಪರಮ ಪುರುಷನು ಈ ಸಮುದ್ರವನ್ನು ದಾಟಿ

ಆ ಕಡೆ ದಡವನ್ನು ಸೇರಲು, ಸಮುದ್ರರಾಜನನ್ನು ಕುರಿತು ಆತನ ಕೃಪೆಯನ್ನು ಪಡೆಯುವಂತೆ ಈ ಸಮುದ್ರ ತೀರದಲ್ಲಿ ದರ್ಭೆಗಳನ್ನು ಹಾಸಿ, ಅದರ ಮೇಲೆ ಶಯನಿಸುವುದು, ಅಣೆಕಟ್ಟುವುದು. ಈ ಸಮುದ್ರದಲ್ಲಿ ಸ್ವಲ್ಪ ತಣ್ಣೀರೂ ಇಲ್ಲದಂತೆ ಒಣಗುವ ಹಾಗೆ ಮಾಡುವುದು ಎನ್ನುವ ಉಪಾಯಗಳು ಉಂಟು. ಅವುಗಳಲ್ಲಿ ಸಮುದ್ರ ತೀರದಲ್ಲಿ ದರ್ಭೆಗಳನ್ನು ಹಾಸಿ ಮಲಗುವುದೇ ಶ್ರೇಷ್ಠ ಉಪಾಯ ಎಂದು ಹೇಳಲ್ಪಟ್ಟಿದೆ.

"ತಪಸಾ ಸೇತುಬಂಧೇನ ಸಾಗರೋಚ್ಛೋಷಣೇನ ವಾ ।
ಸರ್ವಥಾ ಸುಸಮರ್ಥೋಽಸ್ಮಿ ಸಾಗರಸ್ಯಾಸ್ಯ ಲಂಘನೇ ॥"

ಎನ್ನುವ ಆ ಶ್ರೀ ರಾಮನ ಮಾತುಗಳನ್ನು ಇಲ್ಲಿ ಕಾಣತಕ್ಕದ್ದು.

ಈ ಸ್ಥಳದಲ್ಲಿ "ತಪಸಾ" ಎಂಬುವ ಮಾತನ್ನು ನೋಡತಕ್ಕದ್ದು. ಮತ್ತು "ಧರ್ಮಾತ್ಮಾ" ಎಂದು ಕೊಂಡಾಡುವ ವಿಭೀಷಣನೂ ಶ್ರೀ ರಾಮಚಂದ್ರನು ಈ ರೀತಿಯಾಗಿ ಸಮುದ್ರರಾಜನನ್ನು ಎದುರು ನೋಡುತ್ತಾ ಇರುವುದು ಉಚಿತ ಎಂದು ಹೇಳುತ್ತಾನೆ.

ಶ್ರೀ ರಾಮಚಂದ್ರನು ಸಮುದ್ರರಾಜನನ್ನು ಕುರಿತು ದರ್ಭಶಯನದಲ್ಲಿ ಶರಣಾಗಿದ್ದನೆಂಬುದು ಚರಿತ್ರಾರ್ಹವಾದ ಸತ್ಯ. ಅಭಿಷೇಕವಿಲ್ಲದ ಭರತನನ್ನು ಕುರಿತು ಇದು ಬ್ರಾಹ್ಮಣರಿಗಾಗಲೀ ಅಭಿಷೇಕ ಮಾಡಿಕೊಂಡಿರುವ ಕ್ಷತ್ರಿಯನು ಈ ರೀತಿ ಆಚರಿಸುವುದು "ದೋಷ" ಎಂದು ಹೇಳಿರುವ ಭಗವಂತನು ಮೇಲೆ ಹೇಳಿರುವ ಪ್ರಕಾರ ಅಭಿಷಿಕ್ತ ಕ್ಷತ್ರಿಯನಾದ ತಾನು ಈ ರೀತಿ ಮಾಡಿರುವುದು ನ್ಯಾಯವೇ ?

ಇನ್ನೂ ಭರತನು ಶ್ರೀ ರಾಮನ ನಂತರ ಹುಟ್ಟಿದ ತಮ್ಮನಾದ್ದರಿಂದ ಅಭಿಷಿಕ್ತನಾಗಲು ಅರ್ಹನಾಗಿರಲಿಲ್ಲ. ಕೇಕಯನಗರದಿಂದ ಅಯೋಧ್ಯಾನಗರಿಗೆ ಬಂದು ತನ್ನ ತಾಯಿಯ ಗೃಹದಲ್ಲಿ ತನ್ನ ತಂದೆಯಾದ ದಶರಥನು ಸ್ವರ್ಗಸ್ಥನಾದುದನ್ನು ಕೇಳಿ ಭೂಮಿಯಲ್ಲಿ ಬಿದ್ದು ಹೊರಳಾಡಿ ಅಳುವ ಸಮಯದಲ್ಲಿ ತನ್ನ ತಾಯಿಯಾದ ಕೈಕೇಯಿ "ರಾಜನ್" ಎಂದು ಕರೆಯಲು ಆ ರೀತಿ ಕರೆಯುವುದನ್ನೇ ಸಹಿಸಲಾರದವನಾಗಿದ್ದನಲ್ಲವೆ ?

ನಂತರವೂ ಕುಲಗುರುವೂ ತನ್ನ ಗುರುವಾದ ಶ್ರೀ ರಾಮನಿಗೂ ಗುರುವಾದ ವಸಿಷ್ಠರು "ಈ ರಾಜ್ಯವನ್ನು ಸ್ವೀಕರಿಸಿ ಅಭಿಷಿಕ್ತನಾಗು" ಎಂದು ಹೇಳುವ ಸಮಯದಲ್ಲಿ ಅವರನ್ನೂ ಸಹ ಅತ್ಯಧಿಕ ಶ್ರೇಷ್ಠರೆಂದು ಎಣಿಸದೆ, ಅನೇಕ ರೀತಿಯಲ್ಲಿ ತಿರಸ್ಕಾರವಾದ ಮಾತನ್ನಾಡಿ, ಈ ರಾಜ್ಯವೂ ಶ್ರೀ ರಾಮಚಂದ್ರನ ಸ್ವಂತವಸ್ತುವಾಗಿ ನಿಜಸ್ಥಿತಿ ಇರಲು, ನಾನು ಈ ರಾಜ್ಯವನ್ನು ಸ್ವೀಕರಿಸುವುದು ಹೇಗೆ ? ಎಂದು ರಾಜದರಬಾರಿನಲ್ಲಿ ಪ್ರಕಾಶಿಸಿದ ಮಹಾನುಭಾವನಲ್ಲವೇ ?

ಮತ್ತು ಮೇಲೆ ಹೇಳಿರುವುದು ಮಾತ್ರವೇ ಅಲ್ಲ. ಅದಲ್ಲದೇ ಪ್ರತ್ಯಕ್ಷವಾಗಿ ಬಂದವನಾದ ಆ ಭರತನು ತಾಯಂದಿರೂ, ಮಂತ್ರಿಗಳೂ, ವಸಿಷ್ಠರೂ, ಜಾಬಾಲೀ ಮುಂತಾದ ಹಿರಿಯರೂ, ಜನಗಳೂ, ಕುದುರೆಗಳೂ ಮೊದಲಾದ ಅಯೋಧ್ಯೆಯಲ್ಲಿರುವ

ಎಲ್ಲರನ್ನು ಒಂದಾಗಿ ಸೇರಿಸಿ ಕರೆದುಕೊಂಡು ಆ ದಿಕ್ಕಿಗೆ ಕೈ ಮುಗಿದು ಚಿತ್ರಕೂಟಕ್ಕೆ ಹೋಗಿ ಸೇರಿದನು. ಶ್ರೀ ರಾಮನ ಚರಣಾರವಿಂದಗಳಲ್ಲಿ ಬೇರುಕಿತ್ತ ಮರದ ಹಾಗೆ ಬಿದ್ದುದನ್ನು, ತನ್ನನ್ನೇ ಅವನ ಅಡಿದಾವರೆಗಳಲ್ಲಿ ಇಟ್ಟು ಬೇಡಿಕೊಂಡವನಲ್ಲವೆ ?

ಈ ಭರತನ ನಿಷ್ಠೆಯು ಹೀಗಿರಲು ಇವನಿಗೂ ದೋಷವುಂಟೋ ? ಇವನು ಕ್ಷತ್ರಿಯನಾಗಿದ್ದರೂ ಮೂರ್ಧಾಭಿಷಿಕ್ತನೆಂದು ಹೇಳಲು ಅವಕಾಶವುಂಟೋ ? ಪಾಪಕ್ಕೇ ಅವಕಾಶವಿಲ್ಲದ ಸಮಯದಲ್ಲಿ ಪರಮ ಪುರುಷನು ಪರಿಹಾರವನ್ನು ಮಾಡಲು ಆಜ್ಞೆ ಮಾಡಿದ್ದು ಸರಿಯಾಗುತ್ತದೆಯೇ ?

ಆದರೆ ಭರತನು ಶ್ರೀ ರಾಮಚಂದ್ರನ ಆಜ್ಞೆ ಮಾಡಿದ ಪ್ರಕಾರ ಪರಿಹಾರವನ್ನು ಮಾಡಿರುವನು, ಎಂದು ಕೆಲವರು ಕೇಳಬಹುದು. "ಶ್ರೀ ರಾಮಚಂದ್ರನು ವನಕ್ಕೆ ತೆರಳಲು ನಾನೇ ಕಾರಣನು" ಎಂದು ಹೇಳಿದವನೂ, ಸ್ವಪ್ನದಲ್ಲಿ ಪಾಪವು ಸ್ವಲ್ಪ ಮಾತ್ರವೂ ಇಲ್ಲದೆ ಇರುವವನಾದ ಭರತನು ತನ್ನ ಸ್ಥಿತಿಗೆ ಅನುಗುಣವಾದ ಪರಿಹಾರವನ್ನು ಮಾಡಿದನೇ ಹೊರತು, ಪಾಪವಿದ್ದು ಪರಿಹಾರ ಮಾಡಿದನೆಂಬುದು ಹೇಗಾಗುತ್ತದೆಯೋ ? ಇದೇ ಮೇಲೆ ಹೇಳಿರುವ ಪ್ರಶ್ನೆಗೆ ಉತ್ತರವಾಗುತ್ತೆ.

ತನ್ನ ಸ್ಥಿತಿಗನುಸಾರವಾಗಿ ನಡೆದುಕೊಳ್ಳುವ ಭರತನು ಸ್ವಾಮಿಯಾದ ಶ್ರೀ ರಾಮಚಂದ್ರನ ಎದುರಿಗೆ, ಆ ರಾಮನ ಮನಸ್ಸಿಗೆ ಇಷ್ಟವಿಲ್ಲದ "ದರ್ಭೆಗಳನ್ನು ಹರಡಿ ಮಲಗುವುದು" ಎನ್ನುವ ಕಾರ್ಯವನ್ನು ಮಾಡುವುದಕ್ಕೆ ಪ್ರಯತ್ನಿಸಿದ್ದು ನ್ಯಾಯವೇ ? ಎಂದು ಕೆಲವರಿಗೆ ಇಲ್ಲಿ ಸಂದೇಹವುಂಟಾಗಬಹುದು. ಈ ಶಂಕೆಗೆ ಪರಿಹಾರವನ್ನು ತಿಳಿಸುತ್ತೇನೆ.

ಆ ಭರತನು ಭಗವಂತನ ಇಚ್ಛೆಗೆ ಅನುಸಾರ ನಡೆಯುವ ಸ್ಥಿತಿಗೆ ಸರಿಯಲ್ಲದ ಕಾರ್ಯವನ್ನು (ದರ್ಭೆಗಳನ್ನು ಹರಡಿ ಅದರ ಮೇಲೆ ಮಲಗುವುದು) ಮಾಡಲು ಪ್ರಯತ್ನಿಸಿದ್ದು ಶ್ರೀ ರಾಮನಲ್ಲಿರುವ ಭಕ್ತ್ಯತಿಶಯದಿಂದಲ್ಲವೆ ? ಬೇರೆ ಕಾರಣದಿಂದುಂಟಾದುದಲ್ಲ.

ನಮ್ಮಾಳ್ವಾರ್ ತಿರುಮಂಗೈ ಆಳ್ವಾರಂತಹವರು ಭಗವಂತನನ್ನು ಪಡೆಯದಿದ್ದಾಗ ಆ ಪರಮಾತ್ಮನನ್ನು ನ್ಯಾಯ ವಿರುದ್ಧವಾಗಿಯಾದರೂ ಪಡೆಯಬೇಕು ಎಂದೆಣಿಸಿ ಹಠತೊಡಗಿ, ಮಡಲೂರುವುದು, ದೂತ್ಯವನ್ನು ಕಳುಹಿಸುವುದು, ಮೊದಲಾದ ಕಾರ್ಯಗಳನ್ನು ತಮ್ಮ ಸ್ಥಿತಿಗೆ ಸರಿಯಲ್ಲದಿದ್ದರೂ ಮಾಡಬೇಕೆಂದೆಣಿಸಿ ಮಾಡಿರುತ್ತಾರೆ. ಈ ರೀತಿ ಇವರುಗಳು ಅಪೇಕ್ಷಿಸಿ ಮಾಡಿರುವುದು ಹೇಗೆ ಭಕ್ತಿಯ ಹಿರಿಮೆಯಿಂದಲೋ, ಹಾಗೆಯೇ ಭರತನ ಕಾರ್ಯವೂ ಭಕ್ತ್ಯತಿಶಯದಿಂದಲೇ ಎನ್ನುವುದನ್ನು ನಾವು ತಿಳಿಯಬಹುದು.

ಇದುವರೆವಿಗೂ ಹೇಳಿರುವುದರಿಂದ ತಿಳಿದ ವಿಷಯ ಯಾವುದು ಎಂದರೆ "ಶ್ರೀ ರಾಮನ ಮನಸ್ಸಿಗೆ ಭರತನ ಕಾರ್ಯ ಇಷ್ಟವಿಲ್ಲ" ಎಂಬುದೇ ತಿಳಿದು ಬಂದ ಸಂಗತಿ.

ಆದರೆ ನಂತರವೂ ಕೆಲವರು “ ಮಾತರಂ ರಕ್ಷ ಕೈಕೇಯೀಂ ‘ ಅಜ್ಞಾತವಾನ್ ಯಾನ್ ಮಯಾಗತಸ್ಯ ’ ಭ್ರಾತ್ರಿತ್ಯಾ ತ್ವಮ್ ” ಎಂದು ಮೊದಲು ಹೇಳಿದ ವಾಕ್ಯಗಳಲ್ಲಿ ಶ್ರೀ ರಾಮಚಂದ್ರನು “ ಭರತಾ ” ಕೈಕೇಯಿಯನ್ನು ತಿರಸ್ಕರಿಸಕೂಡದು, ಎಂದೂ ಆಚಾರ್ಯನಿಗಿಂತ ತಂದೆಯವರಿಗೆ ಹಿರಿಮೆ ಉಂಟು ; ಆದ್ದರಿಂದ ಅವರ ವಚನವೇ ನನಗೆ ಆದರಿಸಲು ಯೋಗ್ಯವಾದುದು ಎಂದೂ ಭರತಾ ! ನೀನು ಪಾಪ ಮಾಡಿರುವನಾದ್ದರಿಂದ ಪರಿಹಾರವನ್ನು ಮಾಡು ಎಂದು ಪ್ರಕಟವಾಗಿ ಹೇಳಿರುವುದರಿಂದ, ಹಾಗೆ ಬಹಿರಂಗವಾಗಿ ಹೇಳಿರುವುದನ್ನು ಕಾರಣವಾಗಿ ತೆಗೆದುಕೊಳ್ಳದೆ ಅದನ್ನು ತುಚ್ಛವಾಗಿ ಕಂಡು ಮಾತನಾಡಿದ್ದು ಶ್ರೀ ರಾಮಚಂದ್ರನ ಮನಸ್ಸಿಗೆ ಹಿತವಲ್ಲದುದರಿಂದ ಭರತನು ಫಲವನ್ನು ಪಡೆಯದಿದ್ದುದಕ್ಕೆ ಕಾರಣವೆಂದು ಹೇಳದೆ ಇರುವುದು ಒಪ್ಪುತ್ತದೆಯೇ ? “ ಹೊರಗೆ ಕಾಣಿಸುವ ವಸ್ತುವನ್ನು ಬಿಟ್ಟುಬಿಟ್ಟು ಅಂತರಾರ್ಥ ತೆಗೆದುಕೊಳ್ಳುವುದು ಒಳ್ಳೆಯ ಮಾರ್ಗವಾಗುತ್ತದೆ ” ಎನ್ನುವುದನ್ನು ದೃಷ್ಟಾಂತದಿಂದ ತೋರಿಸಿ ಹೇಳಿದರೆ ಚೆನ್ನಾಗಿ ತಿಳಿಯುತ್ತದೆ.

“ ಶ್ರೀ ರಾಮಚಂದ್ರನು ಸುಗ್ರೀವನೊಂದಿಗೆ ಸ್ನೇಹವನ್ನು ಮಾಡಿದನು. ಸುಗ್ರೀವನು ಅಪೇಕ್ಷಿಸಿದ ಹಾಗೆ ವಾಲಿಯನ್ನು ಕೊಂದು ಕಿಷ್ಕಿಂಧಾರಾಜ್ಯವನ್ನು ರುಮೆ ಎಂಬ ಸುಗ್ರೀವನ ಪತ್ನಿಯನ್ನೂ ಆ ಸುಗ್ರೀವನು ಪಡೆದು ಮೊದಲಿನ ಹಾಗೆ ಬಾಳಲು ಸಹಾಯ ಪಡೆದನು.

ಆ ರೀತಿ ಸಹಾಯವನ್ನು ಪಡೆಯುವಾಗ ಸುಗ್ರೀವನು ನೇಬುವ ಹಾಗೆ ಎಲ್ಲಾ ಕೆಲಸವನ್ನು ಮಾಡಿಕೊಟ್ಟನು ಎಂದು ನಮ್ಮ ಆಚಾರ್ಯರುಗಳು ಪರಮ ಪುರುಷನ ಶ್ರೇಷ್ಠಗುಣಗಳನ್ನು ಪ್ರಶಂಸಿಸಿ ಹೇಳುವುದುಂಟು. ಹಾಗೆ ವಾಲಿಯನ್ನು ವಧೆ ಮಾಡುವಾಗ ಆ ವಾಲಿಗೂ ಸುಗ್ರೀವನಿಗೂ ನಡೆದ ಯುದ್ಧ ಎರಡು. ಮೊದಲು ನಡೆದ ಯುದ್ಧದಲ್ಲಿ ಶ್ರೀ ರಾಮನು ವಾಲಿಯನ್ನು ಹೊಡೆದು ಕೊಲ್ಲದೆ ಬಿಟ್ಟಿರುತ್ತಾನೆ. ಆ ಯುದ್ಧದಲ್ಲಿ ಸುಗ್ರೀವನು ತನ್ನಿಂದಾದಷ್ಟು ಯುದ್ಧ ವಿಷಯವನ್ನು ತಿಳಿದಿದ್ದೂ, ಶ್ರೀ ರಾಮನ ಆಣತಿಯಂತೆ ಬಾಣವನ್ನು ಬಿಟ್ಟು ವಾಲಿಯನ್ನು ಕೊಲ್ಲದೆ ಇರುವುದರಿಂದ ಹೊಡೆತವನ್ನು ತಡೆಯಲಾರದೆ ಬೆನ್ನು ತಿರುಗಿಸಿಕೊಂಡು ಓಡಿಬಿಟ್ಟನು ಎಂಬುದು ವೃತ್ತಾಂತ.

ಈ ರೀತಿ ಓಡಿ ಬಂದ ಸುಗ್ರೀವನು “ ಹೇ ರಾಮಾ ! ನೀನು ಏಕೆ ಹೇಳಿದ ಹಾಗೆ ವಾಲಿಯನ್ನು ಹೊಡೆಯಲಿಲ್ಲ ” ಎಂದು ಪ್ರಶ್ನಿಸಿದನು. ಈ ಪ್ರಶ್ನೆಗೆ ಶ್ರೀ ರಾಮನು ಉತ್ತರವನ್ನು ಹೇಳುವಾಗ ಹೇಳಿದ ಮಾತುಗಳು :

ಸುಗ್ರೀವ ಶ್ರೂಯತಾಂತಾತ ಕ್ರೋಧಶ್ಚ ವ್ಯಪನೀಯತಾಮ್ ।
ಕಾರಣಂ ಯೇನ ಬಾಣೋಽಯಂ ನಮಯಾ ಸವಿಸರ್ಜಿತಃ ॥
ಅಲಂಕಾರೇಣ ವೇಷೇಣ ಪ್ರಮಾಣೇನ ಗತೇನಚ ।
ತ್ವಂಚ ಸುಗ್ರೀವ ವಾಲೀಚ ಸದೃಶೌ ಸ್ಥಃ ಪರಸ್ಪರಮ್ ॥

ಸ್ವರೇಣ ವರ್ಚಸಾ ಚೈವ ಪ್ರೇಕ್ಷಿತೇನ ಚ ವಾನರ ।
ವಿಕ್ರಮೇಣ ಚ ವಾಕ್ಯೈಶ್ಚ ವ್ಯಕ್ತಿಂ ವಾಂ ನೋಪಲಕ್ಷಯೇ ॥
ತತೋಽಹಂ ರೂಪ ಸಾದೃಶ್ಯಾತ್ ಮೋಹಿತೋ ವಾನರೋತ್ತಮ ।
ನೋತ್ಸೃಜಾಮಿ ಮಹಾವೇಗಂ ಶರಂ ಶತ್ರು ನಿಬರ್ಹಣಮ್ ॥

ಎನ್ನುವುದಾಗಿದೆ. ಇದರ ಸಾಧಾರಣವಾದ ಅರ್ಥ —

ಸುಗ್ರೀವಾ ! ಒಂದೇ ರೀತಿಯಲ್ಲಿ ರೂಪವಿನ್ಯಾಸದಲ್ಲಿಯೂ, ಎತ್ತರದಲ್ಲಿಯೂ, ನಡೆಯುವುದರಲ್ಲಿಯೂ, ಧ್ವನಿಯಲ್ಲಿಯೂ, ತೇಜಸ್ಸಿನಲ್ಲಿಯೂ, ದೃಷ್ಟಿಯಲ್ಲಿಯೂ, ಪರಾಕ್ರಮದಲ್ಲಿಯೂ, ವಾಕ್ಯಗಳಲ್ಲಿಯೂ, ನೀನೂ, ವಾಲಿಯೂ, ಒಬ್ಬರನೊಬ್ಬರ ಸಮಾನರಾಗಿರುವುದರಿಂದ ನಿಮ್ಮಿಬ್ಬರಲ್ಲಿ "ಇಂತಹವನು ವಾಲಿ, ಇವನು ಸುಗ್ರೀವ" ಎನ್ನುವುದನ್ನು ನನ್ನಿಂದ ತಿಳಿದುಕೊಳ್ಳಲಾಗಲಿಲ್ಲ. ಈ ಸಂದೇಹದಲ್ಲಿ ನಾನು ಬಾಣವನ್ನು ಬಿಟ್ಟರೆ, ಅದು ಒಂದು ಸಮಯ ನಿನ್ನ ಮೇಲೆ ಬಿದ್ದು ವಿಪತ್ತು ಬರುತ್ತೊ, ಎಂದು ಹೆದರಿ ನಾನು ಹಾಗೆಯೇ ಇದ್ದು ಬಿಟ್ಟೆನು.

ಈ ಸಾಧಾರಣ ಅರ್ಥವನ್ನು ಇಲ್ಲಿ ತೆಗೆದುಕೊಂಡರೆ ಸರಿಹೊಂದುತ್ತದೆಯೇ ? ಎಂಬುದನ್ನೇ ನಾವು ಆಳವಾಗಿ ಗಮನಿಸಬೇಕಾದ ವಿಷಯ. ಅತ್ಯಧಿಕ ಬುದ್ಧಿವಂತನಾದ ಶ್ರೀ ರಾಮಚಂದ್ರನು ಸುಗ್ರೀವನಿಗೂ, ವಾಲಿಗೂ ಇರುವ ವ್ಯತ್ಯಾಸವನ್ನು ಸುಲಭವಾಗಿಯೂ ತಿಳಿದುಕೊಳ್ಳಲಾರದವನೇ, ತಿಳಿದಿರಲಿಲ್ಲವೇ ! ಸಾಮಾನ್ಯ ಬುದ್ಧಿ ಉಳ್ಳವನೂ ಕೂಡ "ಪೆಟ್ಟನ್ನು ತಿಂದವನು ಸುಗ್ರೀವ, ಹೊಡೆಯುವವನು ವಾಲಿ" ಎನ್ನುವುದನ್ನು ಸ್ವಲ್ಪದರಲ್ಲಿಯೇ ತಿಳಿದುಕೊಳ್ಳಬಹುದಾದ ವಿಷಯವನ್ನು "ನನ್ನಿಂದ ತಿಳಿದುಕೊಳ್ಳಲಾಗಲಿಲ್ಲ" ಎಂದು ಶ್ರೀ ರಾಮನು ಹೇಳುತ್ತಾನೆಯಲ್ಲ, ಇದು ಸರಿಹೊಂದುತ್ತದೆಯೇ, ಇದರಲ್ಲಿ ನಮ್ಮ ಆಚಾರ್ಯರುಗಳ ಮನೋಭಿಪ್ರಾಯವನ್ನು ಹೇಳುವೆವು. ನಿಜಸ್ಥಿತಿಯನ್ನು ತಿಳಿಯ ತಕ್ಕದ್ದು. ಪರಮ ಪುರುಷನು ಚೇತನನನ್ನು ಕುರಿತು ನೀನು ನನ್ನ ಹತ್ತಿರ ನಿನಗಿರುವ ಪ್ರೀತಿಯನ್ನು ನನ್ನ ಪ್ರೀತಿಗೊಳಪಟ್ಟವರಲ್ಲಿಯೂ ಇಡು, ಹಾಗೆ ನನ್ನ ಪ್ರೀತಿ ಪಾತ್ರರಲ್ಲಿ ಪ್ರೇಮವನ್ನು ಮಾಡದೆ ಇದ್ದರೆ, ಅವರ ಹತ್ತಿರ ಅಪರಾಧವನ್ನು ಮಾಡುವವನಾಗುತ್ತೀಯೆ : ಆದ್ದರಿಂದ ನಿನಗೆ ಮಹತ್ವ ನಾಶವುಂಟಾಗುತ್ತದೆ ಎಂದು ತಿಳಿಯಬೇಡ. ನಿನ್ನೊಂದಿಗೆ ಸಂಬಂಧಪಟ್ಟಿರುವ ಈ ಪ್ರಪಂಚವೂ ನಾಶವಾಗಿ ಬಿಡುತ್ತದೆ ಎಂದು ಹೇಳಿರುತ್ತಾರೆ.

"ಯಾ ಪ್ರೀತಿರ್ಮಯಿ ಸಂವೃತ್ತಾ ಮದ್ಭಕ್ತೇಷು ಸದಾಸ್ತು ತೇ ।
ಅವಮಾನ ಕ್ರಿಯಾ ತೇಷಾಂ ಸಂಹರತ್ಯಖಿಲಂ ಜಗತ್ ॥"

ಎನ್ನುವ ಪರಮ ಪುರುಷನ ಸಿರಿನುಡಿಗಳನ್ನು ಅನುಭವಿಸ ತಕ್ಕದ್ದಾಗಿದೆ.

ಇದರಿಂದ ನಾವು ಒಂದು ಸತ್ಯವನ್ನು ತಿಳಿಯಬಹುದು :—

ಒಬ್ಬ ಚೇತನನು ಭಗವಂತನನ್ನು ನ್ಯಾಯ ರೀತಿಯಿಂದ ಪಡೆದಿದ್ದರೂ ತಾನು ಇಚ್ಛಿಸಿದ ಫಲವನ್ನು ಪಡೆಯುವಾಗ, ಅವನ ಭಕ್ತರುಗಳಲ್ಲಿ ಅಪರಾಧವು ಸ್ವಲ್ಪವೂ ಇಲ್ಲದೆ ಇರುವುದು ಆವಶ್ಯಕವಾಗುತ್ತದೆ. ಈ ರೀತಿಯಾಗಿ ಅಪರಾಧವನ್ನು ಹೊಂದಿದ್ದರೆ ಫಲವನ್ನು ಪಡೆಯಲಾಗುವುದಿಲ್ಲ. ಶರಣಾಗತಿ ಧರ್ಮವನ್ನು ನಾವು ತಿಳಿದುಕೊಳ್ಳುವಾಗ "ಪರಮಾತ್ಮನ ಭಕ್ತರುಗಳಲ್ಲಿ ಕಿಂಚಿತ್ತು ಅಪರಾಧ ಮಾಡದಿದ್ದರೆ ಅದು ಒಂದು ರೀತಿ" ಎನ್ನುವುದನ್ನು ತಿಳಿದುಕೊಳ್ಳಬೇಕು.

ಈ ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಂಡು ಸುಗ್ರೀವನ ವೃತ್ತಾಂತವನ್ನು ವಿಮರ್ಶಿಸಬೇಕು. ಸುಗ್ರೀವನು ಶ್ರೀ ರಾಮಚಂದ್ರನಲ್ಲಿ ಅತ್ಯಧಿಕ ಪ್ರೇಮವುಳ್ಳವನು ಎಂಬುದು ನಿಜವೇ ಆದರೂ, ಲಕ್ಷ್ಮಣನಲ್ಲಿ ಹೇಗೆ ಪ್ರೇಮವನ್ನು ತೋರಿಸಬೇಕೋ ಹಾಗೆ ತೋರಿಸಲಿಲ್ಲ. ಶ್ರೀ ರಾಮಚಂದ್ರನೂ, ಸುಗ್ರೀವನೂ ಅಗ್ನಿಸಾಕ್ಷಿಯಾಗಿ ಮಿತ್ರತ್ವವನ್ನು ಮಾಡಿಕೊಳ್ಳುತ್ತಾರೆ. ಆ ರೀತಿ ಸ್ನೇಹವನ್ನು ಬೆಳಸಿದ ಮೇಲೆ ಸುಗ್ರೀವನು ಎಲೆಯೂ, ಹೂವೂ ತುಂಬಿರುವ ಒಂದು ಮರದ ಕೊಂಬೆಯನ್ನು ಒಡೆದು ಭೂಮಿಯ ಮೇಲೆ ಹಾಕಿ, ಅದರ ಮೇಲೆ ಶ್ರೀ ರಾಮನೊಡನೆ ಕುಳಿತುಕೊಂಡು, ಆ ಭಗವಂತನ ಹತ್ತಿರ ತನ್ನ ದುಃಖವನ್ನು ಹೋಗಲಾಡಿಸುವ ಹಾಗೆ ಪ್ರಾರ್ಥಿಸಿಕೊಳ್ಳುತ್ತಾನೆ. ಹೀಗೆ ಸುಗ್ರೀವನೂ, ಶ್ರೀ ರಾಮನೂ ಎಲೆಯೂ ಹೂವೂ ತುಂಬಿರುವ ಒಂದು ರೆಂಬೆಯ ಮೇಲೆ ಸ್ವಲ್ಪ ಸಮಯ ಕುಳಿತುಕೊಂಡು, ಒಬ್ಬರೊಡನೊಬ್ಬರು ಮಾತನಾಡಿಕೊಂಡಿದ್ದರೆಂದು ಚರಿತ್ರೆಯಲ್ಲಿ ಹೇಳಲ್ಪಟ್ಟಿದೆ. ಆದರೆ ಒಂದು ಸಮಯವಾದರೂ ಲಕ್ಷ್ಮಣನನ್ನು ಸುಗ್ರೀವನು ಈ ರೀತಿ ಆಸನವನ್ನು ಕೊಟ್ಟು ಉಪಚರಿಸಿದ್ದಾಗಿ ರಾಮಾಯಣದಲ್ಲಿ ಹೇಳಲ್ಪಟ್ಟಿಲ್ಲ. ಇಲ್ಲಿ

> ತತಃ ಸ ಪರ್ಣಬಹುಲಾಂ ಭಿತ್ತ್ವಾ ಶಾಖಾಂ ಸುಪುಷ್ಪಿತಾಂ ।
> ಸಾಲಸ್ಯಾಸ್ತೀರ್ಯ ಸುಗ್ರೀವೋ ನಿಷಸಾದ ಸರಾಘವಃ ॥
> ಲಕ್ಷ್ಮಣಾಯಾಥ ಸಂಹೃಷ್ಟೋ ಹನುಮಾನ್ ಪ್ಲವಗರ್ಷಭಃ ।
> ಶಾಖಾಂ ಚಂದನ ವೃಕ್ಷಸ್ಯ ದದೌ ಪರಮ ಪುಷ್ಪಿತಾಮ್ ॥

ಎನ್ನುವುದನ್ನು ನೋಡತಕ್ಕದ್ದು.

ಸುಗ್ರೀವನ ಈ ಕಾರ್ಯವನ್ನು ನೋಡುವಾಗ ಲಕ್ಷ್ಮಣನ ಹತ್ತಿರ ಪ್ರೀತಿ ಇಲ್ಲದ ಅಪರಾಧವುಂಟು ಎನ್ನುವುದು ಚೆನ್ನಾಗಿ ತಿಳಿಯುತ್ತದೆ. ಈ ಕಾರ್ಯವನ್ನು ಶ್ರೀ ರಾಮಚಂದ್ರನು ಕಣ್ಣಾರೆ ಕಂಡದ್ದರಿಂದ ಮೊದಲು ಸುಗ್ರೀವನೂ ವಾಲಿಯೂ ಯುದ್ಧಮಾಡುವಾಗ ವಾಲಿಯನ್ನು ಹೊಡೆಯಲು ಅವನ ಮನಸ್ಸು ಒಪ್ಪದೆ ಇದ್ದಿತು.

ನಂತರ ಸುಗ್ರೀವನು ತನ್ನ ಕಾರ್ಯವನ್ನು ತಿಳಿದು ಲಕ್ಷ್ಮಣನಲ್ಲಿ ಹಾಗೆ ಪ್ರೀತಿಯನ್ನು ತೋರಿಸಬೇಕೋ ಹಾಗೆ ಮಾಡಿದನೆಂದು ಕಂಡು ಬರುವುದಿಲ್ಲ. ಹಾಗಾದರೂ

ತನ್ನನ್ನು ಪಡೆದವರನ್ನು ತನ್ನ ದಾಸರಲ್ಲಿ ಅಭಿಮಾನಕ್ಕೆ ಪಾತ್ರರನ್ನಾಗಿ ಮಾಡುವುದೆಂಬುದು ಪರಮ ಪುರುಷನ ಒಂದು ಶ್ರೇಷ್ಠವಾದ ನೀತಿ. ಈ ನ್ಯಾಯವನ್ನು ಮನಸ್ಸಿನಲ್ಲಿಟ್ಟು ಸುಗ್ರೀವನ ಕತ್ತಿಗೆ ಲಕ್ಷ್ಮಣನ ಕೈಯಿಂದ ಗುರುತಿಗಾಗಿ ಗಜಪುಷ್ಪಮಾಲೆಯನ್ನು ಹಾಕುವ ಮೂಲಕ ಆ ಭಾಗವತೋತ್ತಮನ ಪ್ರೇಮಕ್ಕೆ ಒಳಪಡಿಸಿ ವಾಲಿಯನ್ನು ಎರಡನೆಯ ದಿನದ ಯುದ್ಧದಲ್ಲಿ ಕೊಂದು ಸುಗ್ರೀವನಿಗೆ ಅವನು ಕೇಳಿದ ಫಲವನ್ನು ಅನುಗ್ರಹಿಸುತ್ತಾನೆ. ಶ್ರೀ ರಾಮಚಂದ್ರನು ಇಲ್ಲಿ

"ಕೃತಾಭಿಜ್ಞಾನ ಚಿಹ್ನಸ್ತ್ವಂ ಅನಯಾ ಗಜಸಾಹ್ವಯಾ ।
ಲಕ್ಷ್ಮಣೇನ ಸಮುತ್ಪಾಟ್ಯ ಏಷಾ ಕಂಠೇ ಕೃತಾ ತವ ॥"

ಈವರೆವಿಗೂ ಹೇಳಿದ ಸುಗ್ರೀವನ ವೃತ್ತಾಂತದಲ್ಲಿ ಆಳವಾಗಿ ಆಲೋಚನೆ ಮಾಡಿ ನೋಡುವಾಗ ಹೊರನೋಟದಲ್ಲಿ ಸತ್ಯವು ಇಲ್ಲ. ಒಳನೋಟದಲ್ಲಿಯೇ ಉತ್ತಮನ ಉಕ್ತಿಗೆ ಅಭಿಪ್ರಾಯ ಉಂಟು, ಎಂದು ಹೇಗೆ ತೋರುತ್ತದೆಯೋ ಹಾಗೆಯೇ ಭರತನ ಶರಣಾಗತಿ ಪಂಕ್ತಿಯಲ್ಲಿ ಅಡಕವಾಗಿರುವ ಪುರುಷೋತ್ತಮನ "ಪಾಪಿರಾ ರಕ್ಷ ಕ್ಷಮೇಯೋನಾರ್ ಅಪ್ಪಾರ್ಥಮಾಯನ್ ಮಾಡಾಹವನ್ ಉತ್ತಿಷ್ಠ ಕ್ಷಮಾಳ್" ಎನ್ನುವ ಹೇಳಿಕೆಗಳಿಗೂ ಸಾಧಾರಣವಾದ ಪದ್ಯದಲ್ಲಿ ಅಭಿಮತವಿಲ್ಲ. ಅಂತರಾರ್ಥದಲ್ಲಿಯೇ "ಇಷ್ಟ" ಎಂಬುದನ್ನು ನಾವು ತಿಳಿಯಬೇಕಾದುದು ಅವಶ್ಯಕ.

ಆದ್ದರಿಂದ ಭರತನು ಶ್ರೀ ರಾಮನನ್ನು ನ್ಯಾಯರೀತಿಯಿಂದ ಹೊಂದಿದ್ದರೂ ಆ ಪುರುಷಾರ್ಥವು ಶ್ರೀ ರಾಮನ ಮನಸ್ಸಿಗೆ ಇಷ್ಟವಿಲ್ಲದ್ದರಿಂದ ಫಲವಿಲ್ಲವೆಂದು ತಿಳಿದೆವು. ಈ ವಿಷಯವನ್ನು ಲೇಖಕರ ಹಾಡಿಯಲ್ಲಿಯೂ ಕಾಣೋಣ.

"ರಾಮೋ ರಾಜ್ಯಂ ಪಿತುಃ ಭಿಯಾಶ್ಚ ಸಮ್ಮತಂ ಚ ಪ್ರಜಾನಾಂ ಮಹಾತ್ಮನೇ
ಶರಣ ಭರತೇ ಸರ್ವಮಾದೀ ದದೌಚ ॥ ಹೇತಾವೇತತ್ ನಮಃ ಜನಿತರಾ ಪಾದುಕಾ
ಗ್ರಾಹ್ಯಭಿಷೇಕಃ ದುರ್ವಿಜ್ಞಾನ ಸ್ವಕೃತಂ ಮಹೋದಯಂ ಪ್ರಮಾಣಂ ॥"

ಈ ವಾಕ್ಯಗಳ ಅರ್ಥ :—

ದಶರಥ ಚಕ್ರವರ್ತಿ ಶ್ರೀ ರಾಮಚಂದ್ರನಿಗೆ ರಾಜ್ಯಾಭಿಷೇಕ ಮಾಡಿ, ರಾಜ್ಯ ಭಾರವನ್ನು ಆ ಪರಮ ಪುರುಷನ ಹತ್ತಿರ ಕೊಡಲು ನಿಶ್ಚಯಿಸಿದನು. ಆ ಚಕ್ರವರ್ತಿಯ ಇಷ್ಟವನ್ನು ಪ್ರಜೆಗಳೆಲ್ಲರೂ ಒಮ್ಮತದಿಂದ ಇಷ್ಟಪಟ್ಟರು. ಆ ಚಕ್ರವರ್ತಿಯ ಪಟ್ಟದ ರಾಣಿಯಾದ ಕೈಕೇಯಿಯು, ಭರತನಿಗೆ ರಾಜ್ಯಾಭಿಷೇಕ ಮಾಡಿ ರಾಜ್ಯಭಾರವನ್ನು ಅವನ ಹತ್ತಿರ ಇರಿಸಬೇಕೆಂದು ವರ ಕೇಳಿದಳು. ಸತ್ಯವಾದಿಯಾದ ಚಕ್ರವರ್ತಿಯೂ ಅದೇ ರೀತಿ ಕೊಟ್ಟನು. ಆದರೆ ಚಕ್ರವರ್ತಿ ಅಪೇಕ್ಷಿಸಿದ ಹಾಗೆ ಶ್ರೀ ರಾಮನಿಗೂ, ಕೈಕೇಯಿ ಅಪೇಕ್ಷಿಸಿದ ಹಾಗೆ ಭರತನಿಗೂ ರಾಜ್ಯಾಭಿಷೇಕವಾಗುವುದಿಲ್ಲ. ಒಬ್ಬರೂ ಒಂದು ನಿಮಿಷವೂ ಯೋಚಿಸದ ಶ್ರೀರಾಮಚಂದ್ರನ ಪಾದುಕೆಗಳಿಗೆ ಅಭಿಷೇಕವು ಚೆನ್ನಾಗಿ ನಡೆಯಿತು. ಇದಕ್ಕೆ ಕಾರಣ ಭಗವಂತನ ಸಂಕಲ್ಪವೇ ಆಗಿದೆ.

ಈ ಮಾತುಗಳಲ್ಲಿ " ಶ್ರೀ ರಾಮನು ಅಯೋಧ್ಯಾನಗರಿಗೆ ಹಿಂತಿರುಗಿ ರಾಜ್ಯಾಭಿಷೇಕ ಮಾಡಿಕೊಳ್ಳಬೇಕು " ಭರತನ ಅಭಿಪ್ರಾಯವುಳ್ಳ ಶಬ್ದದಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿಲ್ಲ ಎಂಬುದು ಒಂದು ರೀತಿಯಿಂದ ನಿಜವೇ ಆದರೂ ಚಕ್ರವರ್ತಿಗೂ ಪ್ರಜೆಗಳಿಗೂ ಶ್ರೀ ರಾಮಾಭಿಷೇಕವು ಯಾವ ರೀತಿ ಇಷ್ಟವೋ ಅದೇ ರೀತಿ ಭರತನಿಗೂ ಇಷ್ಟ. ಆದರೆ ಭಗವಂತನಾದ ಶ್ರೀರಾಮನಿಗೆ ಇಷ್ಟವಿಲ್ಲವಾದ್ದರಿಂದ ಸಾಧ್ಯವಾಗಲಿಲ್ಲ.

ಈ ನಿರಿನುಡಿಗಳನ್ನೂ ಇದರ ತಾತ್ಪರ್ಯವನ್ನೂ ಅನುಭವಿಸುವವರಿಗೆ ಶ್ರೀ ರಾಮನ ಮನಸ್ಸಿಗೆ ಇಷ್ಟವಿಲ್ಲ. ಆದ್ದರಿಂದ ಭರತನು ಪ್ರಾರ್ಥಿಸಿದ್ದು ನಡೆಯಲಿಲ್ಲ ಎಂಬುದು ಚೆನ್ನಾಗಿ ಸ್ಪಷ್ಟಪಡುತ್ತದೆ.

ಈವರೆವಿಗೂ ಹೇಳಿದ್ದರಲ್ಲಿ " ಭಗವಂತನು ಸರ್ವ ಶ್ರೇಷ್ಠನಾದ ಧರ್ಮ ಎನ್ನುವುದು." ಆ ಭಗವಂತನು ಚೇತನನ ಬೇಡಿಕೆಯನ್ನು ತನ್ನನ್ನು ಹೊಂದುವಾಗ ಮಹಾಲಕ್ಷ್ಮಿಯನ್ನು ಪುರುಷಕಾರವಾಗಿ ಮುಂದಿಡುವುದನ್ನು ಅಪೇಕ್ಷಿಸುತ್ತಾನೆ ಎನ್ನುವುದೂ " ಈ ಚೇತನನು ಆ ಭಗವಂತನನ್ನು ಪಡೆಯುವಾಗ ಅವನ ಮನಸ್ಸಿಗೆ ಹಿತವಾಗಿ ಇರಬೇಕು " ಎನ್ನುವುದನ್ನು ರಾಮಾಯಣದಲ್ಲಿಯೇ ಒಂದು ರೀತಿ ತಿಳಿಯತಕ್ಕದ್ದಾಗಿದೆ. ಇನ್ನು ಈ ರೀತಿಯಾದ ಧರ್ಮವು ರಾಮಾಯಣದಲ್ಲಿ ಸ್ಥಾಪಿಸಲ್ಪಟ್ಟು ಇರುವ ಸ್ಥಳವನ್ನು ನೋಡೋಣ.

ಆದರೆ "ಧರ್ಮವು ಎರಡು ವಿಧವಾಗಿರುತ್ತದೆ. ಈ ಚೇತನನು ಪ್ರಯತ್ನಿಸಿ ಮಾಡುವಾಗ ಉಂಟಾಗುವುದು ಒಂದು, ಯಾವಾಗಲೂ ಇರುವುದು ಮತ್ತೊಂದು. ಭಗವಂತನೆಂದು ಇರುವ ಶ್ರೇಷ್ಠಧರ್ಮವೊಂದು, ಎಂದು ಮೊದಲೇ ಹೇಳಿದ್ದೇವೆ.

ಈ ಅಭಿಪ್ರಾಯವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ನೋಡುವವರಿಗೆ ಚೇತನನು ಪ್ರಯತ್ನಿಸಿ ಮಾಡುವಾಗ, ಉಂಟಾಗುವ ಧರ್ಮ ದಿನೇ ದಿನೇ ನಾಶಹೊಂದುವುದರಿಂದ ಆ ಧರ್ಮ ಸ್ಥಿರವಾಗಿರಬೇಕಾದರೆ ಒಂದು ವಸ್ತು ಬೇಕು. ಎಲ್ಲೆಲ್ಲಿಯೂ ನಿತ್ಯವಾಗಿರುವ ಭಗವಂತನೆಂಬ ಧರ್ಮವನ್ನು ಪರಮಾತ್ಮನು ಅವತಾರ ಮಾಡಿ ಸ್ಥಾಪಿಸುವುದಾದರೂ ಏಕೆ ? ಎನ್ನುವ ಸಂದೇಹವುಂಟಾಗಬಹುದು. ಈ ಸಂಶಯಕ್ಕೆ ರಾಮಾಯಣದ ವಿಭೀಷಣ ಶರಣಾಗತಿ ಭಾಗದಲ್ಲಿ ಅಡಕವಾಗಿರುವ ಮಾತುಗಳನ್ನು ವಿವರಿಸುತ್ತೇನೆ.

"ಶ್ರೀ ರಾಮಚಂದ್ರನು ಸಮುದ್ರತೀರದಲ್ಲಿ ವಾನರಸೇನೆಗಳೊಂದಿಗೂ, ಸುಗ್ರೀವ ಲಕ್ಷ್ಮಣರೊಂದಿಗೂ ಇರುವ ಸಮಯದಲ್ಲಿ ಆ ಲಂಕೆಯಲ್ಲಿ ರಾವಣನು ತನಗೆ ಹಿತವಚನವನ್ನು ಹೇಳಿದ ವಿಭೀಷಣನನ್ನು ಅನೇಕ ರೀತಿಯಲ್ಲಿ ನಿಂದಿಸಲು, ಆ ನಿಂದೆಯನ್ನು ಸಹಿಸಲಾರದೆ, ಆ ವಿಭೀಷಣನು ಗದೆಯನ್ನು ಕೈಯಲ್ಲಿ ಹಿಡಿದು, ನಾಲ್ಕು ರಾಕ್ಷಸರುಗಳೊಂದಿಗೆ ಆಕಾಶಮಾರ್ಗವಾಗಿ ಹೊರಟು " ವಡಕ್ಕರೈಯ್ಯ ಅಕ್ಕೊಂಡಾರ್ " ಎಂಬ ಉತ್ತರ ತೀರದ ಆಕಾಶದಲ್ಲಿಯೇ ನಿಂತಿರಲು, ಅದನ್ನು ಕಂಡ ಎಲ್ಲಾ ವಾನರರುಗಳೂ ರಾವಣನ ತಮ್ಮನಾಗಿದ್ದರೂ, ಲಂಕೆಯಿಂದ ಬಂದಿದ್ದರೂ, ಈ ರಾಕ್ಷಸನಿಂದ ಭಗವಂತನಿಗೆ ಏನು ತೊಂದರೆ ಬರುತ್ತದೋ ಎಂದು ತಮ್ಮ ಪ್ರೇಮಕ್ಕೆ ತಕ್ಕ ಹಾಗೆ ಅಂಜಿ, ಆ

ರಾಕ್ಷಸರನ್ನು ನಾಶಮಾಡಲು ನಿಶ್ಚಯಿಸಿ, ತಮ್ಮ ಕೈಗಳಲ್ಲಿ ಮರಗಳನ್ನು, ಪರ್ವತ ಶಿಖರಗಳನ್ನು ಇಟ್ಟು ಸಿದ್ಧರಾಗಿರಲು ಆ ವಾನರರುಗಳ ಸ್ಥಿತಿಯನ್ನು ಕಣ್ಣಾರೆ ಕಂಡಿದ್ದರೂ, ಅವರುಗಳ ರಾಮಭಕ್ತಿಯನ್ನು ಪ್ರಶಂಸಿಸಿ, 'ವಾನರರುಗಳ ಮುಖಾಂತರ ಶ್ರೀರಾಮನನ್ನು ಹೊಂದುವುದೇ ನ್ಯಾಯ' ಎಂದು ನಿಶ್ಚಯಿಸಿ ಆ ಕಪಿಗಳನ್ನು ಗೌರವದಿಂದ ಕಂಡು ಅವರುಗಳನ್ನು ಮುಂದಿಟ್ಟುಕೊಂಡು ಶ್ರೀ ರಾಮನನ್ನು ಪಡೆದಿರುತ್ತಾನೆ. 'ವಿಭೀಷಣ' ಎನ್ನುವ ವ್ಯಾಖ್ಯಾಂಶವನ್ನು ಇಲ್ಲಿ ಮೊದಲು ತಿಳಿಯಬೇಕು."

ಈ ರೀತಿ ಶ್ರೀ ರಾಮಚಂದ್ರನನ್ನು ವಿಭೀಷಣನು ಸೇರುವ ಕಾಲದಲ್ಲಿ ವಿಭೀಷಣನು ಹೇಳಿದ ವಾಕ್ಯಗಳು :—

1. ರಾವಣೋ ನಾಮ ದುರ್ವೃತ್ತೋ ರಾಕ್ಷಸೋ ರಾಕ್ಷಸೇಶ್ವರಃ ।
ತಸ್ಯಾಹಮ್ ಅನುಜೋ ಭ್ರಾತಾ ವಿಭೀಷಣ ಇತಿ ಶ್ರುತಃ ॥

2. ತೇನ ಸೀತಾ ಜನಸ್ಥಾನಾದ್ಧೃತಾ ಹತ್ವಾ ಜಟಾಯುಷಮ್ ।
ರುದ್ಧಾ ಚ ವಿವಶಾ ದೀನಾ ರಾಕ್ಷಸೀಭಿಸ್ ಸುರಕ್ಷಿತಾ ॥

3. ತಮಹಂ ಹೇತುಭಿರ್ವಾಕ್ಯೈರ್ವಿವಿಧೈಶ್ಚ ನ್ಯದರ್ಶಯಮ್ ।
ಸಾಧು ನಿರ್ಯಾತ್ಯತಾಮ್ ಸೀತಾ ರಾಮಾಯೇತಿ ಪುನಃ ಪುನಃ ॥

4. ಸ ಚ ನ ಪ್ರತಿ ಜಗ್ರಾಹ ರಾವಣಃ ಕಾಲಚೋದಿತಃ ।
ಉಚ್ಯಮಾನಮ್ ಹಿತಂ ವಾಕ್ಯಮ್ ವಿಪರೀತ ಇವೌಷಧಂ ॥

5. ಸೋಽಹಮ್ ಪರುಷಿತಸ್ತೇನ ದಾಸವಚ್ಚಾವಮಾನಿತಃ ।
ತ್ಯಕ್ತ್ವಾ ಪುತ್ರಾಂಶ್ಚ ದಾರಾಂಶ್ಚ ರಾಘವಂ ಶರಣಂ ಗತಃ ॥

6. ಸರ್ವಲೋಕ ಶರಣ್ಯಾಯ ರಾಘವಾಯ ಮಹಾತ್ಮನೇ ।
ನಿವೇದಯತ ಮಾಂ ಕ್ಷಿಪ್ರಂ ವಿಭೀಷಣ ಮುಪಸ್ಥಿತಂ ॥

ಇದರ ತಾತ್ಪರ್ಯ

(1) ಭಗವಂತನನ್ನು ಸೇರುವವನು ತನ್ನ ದೋಷಗಳನ್ನು ನಿರ್ವಂಚನೆಯಾಗಿ ಹೇಳಿ ಅವನನ್ನು ಹೊಂದಬೇಕು ಎನ್ನುವ ನ್ಯಾಯವನ್ನು ಕೈಕೊಂಡ ವಿಭೀಷಣನು ಶ್ರೀ ರಾಮನಿಗೆ ಸ್ವಂತದವನಾಗಿ ಇರುವುದಲ್ಲದೆ ಪ್ರಪಂಚವನ್ನೆಲ್ಲಾ ನಡುಗಿಸುವ ಹಾಗೆ ಮಾಡುವವನೂ ಈ ರೀತಿ ದೋಷವುಳ್ಳವನೆಂದು ಪ್ರಸಿದ್ಧಿ ಪಡೆದವನೂ, ದುರ್ನಡತೆಯುಳ್ಳವನೂ, ರಾಕ್ಷಸನೂ, ಎಲ್ಲರಿಗೂ ಈಶ್ವರನೂ ಆದ ರಾವಣನಿಗೂ ಸ್ವಂತದವನಾಗಿದ್ದು ಈವರೆವಿಗೂ ಅವನಿಗೆ ಸೇವೆ ಮಾಡಿ ಅವನೊಂದಿಗೆ ಹತ್ತು ತಿಂಗಳು ಇದ್ದು ಜನಿಸಿದವನೂ ಎಲ್ಲರನ್ನೂ ನಡುಗಿಸುವವನೂ ಆದ್ದರಿಂದ ವಿಭೀಷಣ ಎಂದು ಪ್ರಸಿದ್ಧಿ ಪಡೆದವನು 'ನಾನು' ನಾನು. ಸೆನ್ನುವಿರಲು ಹೇಳಿದ ರಾವಣನಿಗೆ ಅವನಿಗೆ ಸೇರಿದ

ದೋಷಗಳು ಮಾತ್ರವಲ್ಲದು. ನನಗೆ ನನ್ನದಾಗಿರುವ ದೋಷಗಳೂ ಅವನ ಸಂಪರ್ಕ ದಿಂದುಂಟಾದ ಪಾಪಗಳೂ ಇವೆ. ಆದ್ದರಿಂದ ನನ್ನ ಪಾಪಗಳು ಅತ್ಯಧಿಕ ಎನ್ನುತ್ತಾನೆ.

(2) ಅನಂತರವೂ ಆ ವಿಭೀಷಣನು ಹೇಳಿದ್ದೇನೆಂದರೆ : ಆ ರಾವಣನು ಅಯೋಧ್ಯೆಯಲ್ಲಿರುವುದು ನಿಜ ಎನ್ನುವಂತೆ ಆಯುಧಕ್ಕೆ ಮತ್ತೂ ಹಿತಕರವಾದ ಜನ ಸ್ಥಾನದಿಂದ ಸಂಚಾರವನ್ನೂ, ಪ್ರಾಣವನ್ನೂ ಬೇರ್ಪಡಿಸುವಂತೆ ಸೀತಾದೇವಿಯನ್ನು ಶ್ರೀ ರಾಮಚಂದ್ರನನ್ನು ಬೇರ್ಪಡಿಸಿ ಆ ರಾಮಭದ್ರನಿಗೆ ಪ್ರಾಣಸಮಾನನಾದ ಜಟಾಯು ವನ್ನು ಕೊಂದು ತನ್ನ ಅಶೋಕವನದಲ್ಲಿ ಆ ಸೀತಾದೇವಿಯನ್ನು ತಂದಿಟ್ಟು ಎಲ್ಲಿಯೂ ಹೋಗಗೊಡದೆ ರಾಕ್ಷಸಿಯರನ್ನು ಕಾವಲಾಗಿ ಇಟ್ಟಿದ್ದನು. ಹಾಗೂ ಸೀತಾದೇವಿಯ ಹತ್ತಿರವೂ ಜಟಾಯುವಿನಲ್ಲಿಯೂ ಅಸಾಧ್ಯವಾದ ಅಪರಾಧವನ್ನು ಮಾಡಿದವನಾದ ರಾವಣನ ನಂತರ ಹುಟ್ಟಿದವನು ನಾನು ಎನ್ನುವುದು.

(3) ಹಾಗೂ ಆ ವಿಭೀಷಣನು ಹೇಳಿದ್ದು ಯಾವುದೆಂದರೆ :—ಹೇ ರಾವಣಾ ! ನೀನು ರಾಮಚಂದ್ರನಿಗೆ ಸೇರಿದ ಆ ಸೀತಾದೇವಿಯನ್ನು ಆ ಭಗವಂತನ ಹತ್ತಿರ ಪುನಃ ಕರೆದುಕೊಂಡು ಹೋಗಿ ಸೇರಿಸಿಬಿಡು ಎಂದೂ " ನಾನು ಹೇಳಿದ ಹಾಗೆ ಮಾಡದಿದ್ದರೆ ನೀನು ನಾಶವಾಗುತ್ತೀ ಎಂದು ಅವನಿಗೆ ಆಗಾಗ್ಗೆ ತಿಳಿಯಪಡಿಸಿದೆನು " ಎನ್ನುವಂತೆ.

(4) ಇನ್ನು ಕಷ್ಟಸಂಪರ್ಕಗೋಸ್ಕರವಾಗಿ ಬಿಟ್ಟನು ಸಾಯಬೇಕಾದವನು ಔಷಧ ವನ್ನು ಹೇಗೆ ತೆಗೆದುಕೊಳ್ಳದ ಇರುತ್ತಾನೋ, ಹಾಗೆಯೇ ಯಮನಿಂದ ತೊಂದರೆಗೊಳ ಗಾದ ಆ ರಾವಣನು ನಾನು ಹೇಳಿದ ಹಿತವಚನಗಳನ್ನು ಕಿವಿಗೆ ಹಾಕಿಕೊಳ್ಳಲೇ ಇಲ್ಲ ಎಂದೂ ಹೇಳಿದನು ವಿಭೀಷಣ.

(5) ಮತ್ತೂ ವಿಭೀಷಣನು ವಿವರಿಸಿದ್ದೇನೆಂದರೆ :—ನನ್ನ ಹಿತವಚನವನ್ನು ಹೇಳಿದ್ದೇ ಕಾರಣವಾಗಿ, ಅವನೂ, ಅವನನ್ನು ಸೇರಿದವರೂ ನನ್ನನ್ನು ಅವಮಾನ ಪಡಿಸಿ ದರು. ಆದ್ದರಿಂದ ನನ್ನ ಪತ್ನಿಯರನ್ನೂ, ಪುತ್ರರುಗಳನ್ನೂ ಬಿಟ್ಟು ಬಿಟ್ಟು ಶ್ರೀ ರಾಮ ಚಂದ್ರನನ್ನೇ ಗತಿಯನ್ನಾಗಿ ಬಂದನು ನಾನು ಎನ್ನುತ್ತಾನೆ.

(6) ಈ ರೀತಿ ಹೇಳಿ ನಂತರವೂ ಆ ವಿಭೀಷಣನು ಬೇಡಿಕೊಂಡದ್ದು ಯಾವುದು? " ವಾನರ ವೀರರೇ ! ಭಗವಂತನು ಯಾವ ಚೇತನನನ್ನು ರಕ್ಷಿಸಬೇಕೆಂದು ಮನಸ್ಸಿನಲ್ಲಿ ಎಣಿಸುತ್ತಾನೋ, ಆ ಚೇತನನೇ ಧನ್ಯಾತ್ಮನಾಗುತ್ತಾನೆ. ಆ ಪರಮಾತ್ಮನಾದ ಶ್ರೀ ರಾಮಚಂದ್ರನು ಈ ವಿಭೀಷಣನನ್ನು ರಕ್ಷಿಸುವ ಮನಸ್ಸುಳ್ಳವನಾಗಿದ್ದಾರೆ. ಇವನಿಗೆ ಸೌಭಾಗ್ಯ ಉಂಟು, ಆ ಸೌಭಾಗ್ಯವನ್ನು ನಾನು ಪಡೆಯಬೇಕು. "

ಆ ರೀತಿ ಹೇಳುತ್ತಿರುವವನನ್ನು ವಾನರರು ಮಾಡಬೇಕಾದ್ದು ಏನು ? ಎಂದರೆ ಅತ್ಯಧಿಕ ಆರ್ತನಾಗಿ ಆ ಲಂಕೆಯಿಂದ ಬಂದಿರುವ ಈ ವಿಭೀಷಣನನ್ನು ಶ್ರೀ ರಾಮಚಂದ್ರನಿಗೆ ಪರಿಚಯ ಮಾಡಿಕೊಡಬೇಕು.

ನೀವುಗಳು ನನ್ನ ಆಗಮನವನ್ನು ತಿಳಿಸುವ ಸಮಯದಲ್ಲಿ " ಶ್ರೀ ರಾಮ ಚಂದ್ರನಿಗೆ ಈ ವಿಭೀಷಣನು ಶರಣಾದರೆ ಉತ್ತಮ " ಎನ್ನುವ ನನಗಿರುವ ಈ

ಅಭಿರುಚಿ ಪರಿವರ್ತನೆ ಆಗುವುದಕ್ಕೆ ಮೊದಲು ಅತಿ ಶೀಘ್ರವಾಗಿ ತಿಳಿಸಿದರೆ ಒಳ್ಳೆಯದು, ನನ್ನನ್ನು ಆ ಶ್ರೀ ರಾಮನು ಮನಸಂತೋಷದಿಂದ ಸ್ವೀಕರಿಸಿ ಸೇವೆಯನ್ನು ಸಲ್ಲಿಸುವ ಹಾಗೆ ಮಾಡುವುದು, ನಿಮಗೆ ತಕ್ಕ ಸೇವೆಯಾಗದೆ ಆ ಭಗವಂತನು ಸ್ವೀಕರಿಸಿ ಸೇವೆಯನ್ನು ಪಡೆದು ಸಂತುಷ್ಟನಾದರೆ ಅವನಿಗೆ ಅದು ಉಚಿತವಾಗಿರುತ್ತದೆ.

ನೀವುಗಳು ಈ ಚೇತನನನ್ನು ಪರಮಾತ್ಮನು ಸಂತೋಷದಿಂದ ಸ್ವೀಕರಿಸುವ ಹಾಗೆ ಮಾಡುವವರಾದ್ದರಿಂದ ಆ ರೀತಿ ಮಾಡದಿದ್ದರೆ, ನಿಮ್ಮ ಸ್ಥಿತಿ ನಿಮ್ಮನ್ನು ಬಿಟ್ಟು ಬೇರೆಯಾಗುವುದಲ್ಲವೆ ? ಆದ್ದರಿಂದ ನಿಮಗೆ ಚ್ಯುತಿ ಉಂಟು

ಆ ಭಗವಂತನು ನೀವುಗಳು ನನ್ನ ಆಗಮನವನ್ನು ತಿಳಿಸಿದ ನಂತರವೂ ಕೂಗುವುದೂ, ಬಿಡುವುದನ್ನು ಮಾಡದೆ ಇದ್ದರೆ, ನನ್ನನ್ನು ಮನಸ್ಸಿಗೆ ತೆಗೆದುಕೊಂಡು ಸೇವೆಯನ್ನು ತೆಗೆದುಕೊಳ್ಳದೇ ಇದ್ದರೆ, ಆ ಪರಮಾತ್ಮನು ತನ್ನ ಸ್ಥಿತಿಯಿಂದಲೂ ತಪ್ಪಿದವನಾಗುವನಲ್ಲವೇ ?

ಭಗವಂತನಲ್ಲಿ ಅತ್ಯಧಿಕ ಪ್ರೀತಿಯನ್ನು ಪಡೆದಿರುವ ನಿಮ್ಮಗಳನ್ನು ಆ ಪರಮಾತ್ಮನನ್ನೂ ಸಂತೋಷ ಪಡಿಸುವುದು ದಾಸನಾದ ನನ್ನ ಸ್ಥಿತಿಗೆ ತಕ್ಕದಾದದ್ದು ಸರಿಹೊಂದುವುದಾಗಿರುತ್ತೆ. ಆ ರೀತಿ ಒಪ್ಪಿಕೊಳ್ಳದಿದ್ದರೆ ನಾನು ಇರುವುದು. ಅದು ನನ್ನ ಸ್ಥಿತಿಗೆ ನಾಶವನ್ನುಂಟುಮಾಡುತ್ತದೆಯಲ್ಲವೆ ? ಒಪ್ಪಿಕೊಳ್ಳದೆ ಇರುವಾಗಲೇ ಅಳಿವನ್ನುಂಟುಮಾಡುವುದೆನ್ನುವಾಗ, ನಿಮ್ಮನ್ನೂ ಆ ಭಗವಂತನನ್ನು ನಿಮಗೂ ಅವನಿಗೂ ಇರುವ ಅಂತಹ ಸ್ಥಿತಿಯಲ್ಲಿ ನಿಂತೂ ಕಡೆಗಣಿಸುವ ದೃಷ್ಟಿಯಿಂದ ನಾಶ ಹೊಂದಿದ್ದೇ ಆದರೆ ನನ್ನ ಗತಿ ಏನಾಗಬಹುದು ?

ಆದ್ದರಿಂದ ನೀವುಗಳು ನನ್ನ ಆಗಮನವನ್ನು ತಕ್ಷಣ ತಿಳಿಸಿದರೆ ನಿಮಗೆ ಒಳ್ಳೆಯದಾಗುತ್ತೆ. ಆ ಪರಮಾತ್ಮನು ನನ್ನನ್ನು ಸ್ವೀಕರಿಸಿ ಸೇವೆಯನ್ನು ಮಾಡಿಸಿಕೊಳ್ಳುವಾಗ ಅವನಿಗೆ ಹಿರಿಮೆಯುಂಟು. ನಾನು ನಿಮ್ಮ ಗುಂಪಿನಲ್ಲಿ ಒಬ್ಬನಾಗಿ ಸೇವೆ ಮಾಡುವಾಗ ನನಗೂ ಒಳ್ಳೆಯದಾಗುತ್ತೆ. ಈ ರೀತಿಯಾಗಿ ಎಲ್ಲರೂ ಕ್ಷೇಮವನ್ನು ಪಡೆದು ಬಾಳುವ ಹಾಗೆ ನೀವು ತಿಳಿಸಿದರೆ ಉತ್ತಮ.

ಎಲ್ಲಾ ಲೋಕಗಳನ್ನು ರಕ್ಷಿಸುವನು ಪರಮಾತ್ಮನಲ್ಲವೆ ? ಆ ಸರ್ವಲೋಕಗಳಲ್ಲಿ ನಾನೂ ಒಬ್ಬನಲ್ಲವೇ ? ಆ ಭಗವಂತನ ಅನುಗ್ರಹಕ್ಕೆ ಪಾತ್ರರಾಗದವರೂ ಉಂಟೋ ? ರಾವಣನ ತಮ್ಮನೂ, ಶತ್ರುವೂ ಆದ ನನ್ನನ್ನು ಪರಮಾತ್ಮನಿಗೆ ತಿಳಿಯಪಡಿಸುವುದು ಏಕೆ ? ಎನ್ನಬೇಡಿ, ಈ ಪ್ರಪಂಚದಲ್ಲಿರುವವರೆಲ್ಲರೂ ಒಂದಾಗಿ ಸೇರಿ, ಪ್ರತಿಭಟಿಸಿದರೂ ಆ ಒಬ್ಬನಾದ ಪರಮಾತ್ಮನಿಗೆ ಕೇಡುಂಟಾಗಲು ಶಕ್ತಿಶಾಲಿಗಳೂ ಅಪಾಯವುಂಟೋ ? ಶರಣ ಹೊಂದಿದವರನ್ನು ರಕ್ಷಿಸುವ ವಂಶದಲ್ಲಿ ಅವತರಿಸಿದ ಮಹಾತ್ಮನಲ್ಲವೇ ? ಆ ಪರಮಾತ್ಮನ ಅವನ ಪರವಾಗಿ ಎಲ್ಲರಿಗೂ ಒಳ್ಳೆಯದಾಗುವ ಹಾಗೆ ತಿಳಿಯಪಡಿಸಿರಿ ಎನ್ನುವೆನು.

ಆ ರೀತಿ ವಿಭೀಷಣನು ತಿಳಿಸುವ ಸಮಯದಲ್ಲಿ ಶ್ರೀ ರಾಮನಲ್ಲಿ ಆಶ್ರಿತರು

ಪ್ರೇಮವನ್ನಿಟ್ಟಿದ್ದ ಸುಗ್ರೀವನು ಮೇಲೆ ಹೇಳಿರುವ ವಿಭೀಷಣನ ಮಾತುಗಳನ್ನು ಕೇಳಿ ಅತ್ಯಧಿಕ ವೇಗದಿಂದ ಭಗವಂತನ ಹತ್ತಿರ ಹೋಗಿ ಒಂದು ಮಾತನ್ನು ಬಿನ್ನವಿಸಿಕೊಂಡನು.

"ಅಯೋಧ್ಯಾ ನಗರವನ್ನು ಬಿಟ್ಟು ಬಂದು ಅನೇಕ ದಿನಗಳಾಯಿತಲ್ಲ. ರಾಜನೀತಿಯನ್ನು ಮರೆತೆಯೋ. ಈ ಸ್ಥಳವು ಲಂಕೆಗೆ ಅತಿ ಸಮೀಪವಲ್ಲವೇ ? ರಾವಣನ ಅನೀತಿಗಳು ತಿಳಿಯಲಿಲ್ಲವೋ ? ಒಬ್ಬನು 'ಶರಣು' ಎನ್ನುವ ನುಡಿಯನ್ನು ಹೇಳಿದಾಗ ಈ ವಿಷಯಗಳನ್ನು ಮರೆತು ಬಿಡಬಹುದೇ ? "

ವಧ್ಯತಾಂ ಏಷ ತೀವ್ರೇಣ ದಂಡೇನ ಸಚಿವೈಸ್ಸಹ ।
ರಾವಣಸ್ಯ ನೃಶಂಸಸ್ಯ ಭ್ರಾತಾಹ್ಯೇಷ ವಿಭೀಷಣಃ ॥

ಇವನನ್ನು ಬಂಧಿಸಿ ಇಟ್ಟರೆ ಮಾರೀಚನ ಹಾಗೆ ಬರುವ ಸಮಯದಲ್ಲಿ ತೊಂದರೆ ಹೆಚ್ಚು. ಅಂತಹ ಬಾಣಗಳಿಂದ ಬಿಡುಗಡೆ ಮಾಡಲಾರೆವು. ಕೊಂದೇಬಿಡುವೆವು. ಆ ರೀತಿ ಕೊಲ್ಲುವಾಗ ಮೊದಲು ಸ್ವಾಮಿಯವರನ್ನು ಒಳ್ಳೆಯತನದಿಂದ ಸೇರಿಸಿಕೊಳ್ಳಲು ಬಂದ ಈ ನಾಲ್ವರನ್ನೂ ತಲೆ ಕತ್ತರಿಸಿ ಇವನ ಕೈಯಲ್ಲಿ ಕೊಟ್ಟು ನಂತರ ಇವನನ್ನು ಕೊಲ್ಲುತ್ತೇವೆ. ಇವನು ರಾವಣನ ಒಡಹುಟ್ಟಿದವನಲ್ಲವೆ ? ಆ ರಾವಣನು ಹೆತ್ತ ತಾಯಿಯನ್ನು ತಂದೆಯನ್ನು ನೋಡದೆ ಇರುವವನಲ್ಲವೆ ? ಪ್ರಾಣವನ್ನೂ ಶರೀರವನ್ನೂ ಬೇರ್ಪಡಿಸಿದ ಹಾಗೆ ಯಾವಾಗಲೂ ಅಗಲದ ಸೀತಾದೇವಿಯನ್ನೂ ಪರಮಾತ್ಮನಾದ ಸ್ವಾಮಿಯವರನ್ನೂ ಸಮುದ್ರ ಒಂದು ಕಡೆ ಪರ್ವತ ಒಂದು ಕಡೆ ಮಾಡಿದ ಕಾರ್ಯಕ್ಕೆ ಇವನೂ ಒಂದು ಅಂಗ ಎಂದು ಹೇಳುವ ಹಾಗೆ ತಿಳಿದುಬಿಡುವವನಲ್ಲವೆ ? ಎನ್ನುವುದೆ ಆ ಸುಗ್ರೀವನು ಹೇಳಿರುವ ಮಾತುಗಳು.

ಈ ಮಾತುಗಳನ್ನು ಕೇಳಿಸಿಕೊಂಡ ಶ್ರೀ ರಾಮಚಂದ್ರನು ವಾನರರುಗಳನ್ನು ನೋಡಿ ಹೇಳಿದ ಮಾತುಗಳು ಯಾವುದೆಂದರೆ :—

"ಸುಹೃದಾಹ್ಯರ್ಥ ಕೃಚ್ಛ್ರೇಷು ಯುಕ್ತಂ ಬುದ್ಧಿಮತಾ ಸತಾ ।
ಸಮರ್ಥೇನಾಪಿ ಸಂದೇಷ್ಟುಂ ಶಾಶ್ವತೀಂ ಭೂತಿ ಮಿಚ್ಛತಾ ॥

ಈ ಮಾತುಗಳ ತಾತ್ಪರ್ಯ ಕೆಳಕಂಡಂತೆ ಇದೆ :—

"ವಾನರರುಗಳೇ ! ನಮ್ಮನ್ನು ಶರಣು ಹೊಂದಿರುವ ವಿಭೀಷಣನು ತನ್ನನ್ನು ನಾವು ಸ್ವೀಕರಿಸದಿದ್ದರೆ ಜೀವಿಸಲಾರ.

ಈ ವಿಭೀಷಣನನ್ನು ನಾವು ಸ್ವೀಕರಿಸಿದರೆ ನಿಮ್ಮ ಮಹಾರಾಜರು ಜೀವಿಸಲಾರರು. ಶರಣು ಹೊಂದಿದವನನ್ನು ಸ್ವೀಕರಿಸುವುದೂ ನಮ್ಮಲ್ಲಿ ಅತ್ಯಧಿಕ ಪ್ರೇಮವುಳ್ಳ ಮಹಾರಾಜರ ಮಾತನ್ನು ಕೇಳುವುದು ನಮಗೆ ಶ್ರೇಷ್ಠ. ನಲ್ಮೆ ಆಶ್ರಯಿಸಿ ಬಂದವನನ್ನು ದಯಾಗುಣವುಳ್ಳ ಕುಲದಲ್ಲಿ ಹುಟ್ಟಿದ ರಾಮನು ಶರಣು ಹೊಂದಿದವ

ರನ್ನು ಕೈಬಿಟ್ಟನೆನ್ನುತ್ತಾರೆ. ಮಹಾರಾಜರು ಹೇಳಿದ್ದನ್ನು ಮಾಡದಿದ್ದರೆ, ತನ್ನನ್ನು ಪಡೆದವರ ಹತ್ತಿರ ಪರತಂತ್ರನಾಗಿರುವವನು, ಸುಗ್ರೀವನೂ ಹೇಳಿದ್ದನ್ನು ಮಾಡಲಿಲ್ಲ ಎನ್ನುತ್ತಾರೆ.

ಈ ರೀತಿ ಎರಡು ವಿಚಾರಗಳನ್ನೂ ಮಾಡಲೇ ಬೇಕಾಗಿರುವುದರಿಂದ ಒಂದಕ್ಕೊಂದು ವಿರೋಧವಾಗಿರುವುದರಿಂದ ಮಾಡುವುದೇ ? ಇಲ್ಲವೇ ಮಾಡಲಾರದೆ ಬಿಟ್ಟು ಬಿಡುವುದೇ ಎಂದು ಪರಿತಪಿಸುವ ಸ್ಥಿತಿಯಲ್ಲಿರುವ ನನಗೆ ಇದು ಮಾಡಲು ಯೋಗ್ಯ, ಇದು ಮಾಡಬಾರದು ಎಂದು ತಿಳಿದಂತಹವರು, ನೆನಸಿದ್ದನ್ನು ನಡೆಸುವಂತಹ ಚಿತ್ತವೃತ್ತಿಗಳು ನಾಶವಾಗುವ ವಸ್ತುವಿನಲ್ಲಿ ದೃಷ್ಟಿ ಇಡದ, ಅತ್ಯಧಿಕ ಪ್ರೇಮವನ್ನು ಅಪೇಕ್ಷಿಸುವವರೂ, ನೊಂದವರನ್ನು ಕಂಡರೆ ತಡೆಯಲಾರದೆ ಅಯ್ಯೋ, ಎಂದಿರುವವರೂ ಉತ್ತಮ ಸ್ನೇಹಿತರುಗಳೂ ಆದ ನೀವುಗಳು ನನ್ನ ದುಃಖ ನೀಗುವಂತೆ ಆಲೋಚಿಸಿ ಹೇಳುವುದು ಸೂಕ್ತವಲ್ಲವೆ ಹೇಳಿರಿ. ಮೇಲೆ ಹೇಳಿರುವ ಮಾತಿನಲ್ಲಿ ಅಡಕವಾಗಿರುವ " ಶಾಶ್ವತೀಂ ಭೂತಿಂ ಇಚ್ಛತಾಂ " ಎನ್ನುವ ವಾಕ್ಯ ಇಲ್ಲಿ ಆಳವಾಗಿ ಅಭ್ಯಸಿಸತಕ್ಕದ್ದು.

ಈ ಭಾಗದಲ್ಲಿ ಪ್ರಕಟವಾಗುವ ಶ್ರೀ ರಾಮಚಂದ್ರನ ಮನೋಭಿಪ್ರಾಯ ಅತ್ಯಂತ ಸುಂದರವಾದದ್ದು. ಆ ತಾತ್ಪರ್ಯವೇನು :— ನಿಮ್ಮ ಮಹಾರಾಜರು ನಮ್ಮ ಶರೀರಕ್ಕೆ ರಾವಣನ ತಮ್ಮನಾದ ವಿಭೀಷಣನಿಂದ ಏನು ತೊಂದರೆ ಬರುತ್ತದೆಯೋ ? ಎಂದು ಭಯ ಪಡುತ್ತಾರೆ. ಈ ಶರೀರವು ಯಾವತ್ತಿಗೂ ನಾಶವಾಗದೆ ಇರುವ ಸ್ಥಿರವಸ್ತುವಲ್ಲ. ಶರಣಾಗತನಾದವನು ಯಾವನಾದರೂ ಆಗಿರಬಹುದು. ಅವನನ್ನು ಬಿಡದೆ ರಕ್ಷಿಸುವಾಗ ಉಂಟಾಗುವ ಪ್ರಶಂಸನೀಯ ಶರೀರವು ಯಾವತ್ತಿಗೂ ನಾಶವಾಗುವುದಿಲ್ಲ. ನೀವು ಹೇಳುವ ಮಾತುಗಳು ನಮಗೆ ಪ್ರಶಂಸನೀಯ ಶರೀರವನ್ನುಂಟು ಮಾಡುವುದಾಗಿರಬೇಕು ಎನ್ನುವುದಾಗಿದೆ.

ಮೇಲೆ ಹೇಳಿರುವ ಸಾರಾಂಶವನ್ನು ನೋಡಿದ್ದರಲ್ಲಿ ಯಾವತ್ತಿಗೂ ಇರುವ ನಿತ್ಯನಾದ ಭಗವಂತನೊಬ್ಬ ಧರ್ಮಕ್ಕೂ ಒಂದು ವಿಧವಾದ ಬಾಂಧವ್ಯ ಏರ್ಪಡಲು ಅವಕಾಶವುಂಟು ಎನ್ನುವುದು ಚೆನ್ನಾಗಿ ಪ್ರಕಟವಾಗುತ್ತದೆ. ಶ್ರೀ ರಾಮಚಂದ್ರನು ವಿಭೀಷಣನನ್ನು ಬಿಡದೆ ರಕ್ಷಿಸುವುದಾದರೆ ಆ ಭಗವಂತನನ್ನು ಬಿಟ್ಟು ಧರ್ಮದ ಮೇಲ್ಮೆ (ಆಶ್ರಯಿಸಿದವರಿಗೆ ನಲ್ಮೆ ನೀಡುವಂತಹ) ಆಗಲಾರದು. ಸುಗ್ರೀವನು ಅತ್ಯಧಿಕ ಪ್ರೇಮಾತಿಶಯದಿಂದ ತತ್ತರಿಸಿ ವಿಭೀಷಣನನ್ನು ಕೊಂದೇ ತೀರಬೇಕು ಎಂದು ಹೇಳಿದ ಮಾತು ಧರ್ಮವಾಗಿರುವ ರಾಮನನ್ನು ಒಂದು ರೀತಿಯಿಂದ ನಾಶಮಾಡುವುದಾಗಿದೆಯಲ್ಲವೇ ?

ಇಲ್ಲಿ ಶ್ರೀ ರಾಮಚಂದ್ರನು ತಾನಾಗಿರುವ ಧರ್ಮವನ್ನು ನಾಶಮಾಡಲು ಅವಕಾಶಕೊಡದೆ, ನೆಲೆಯಾಗಿ ಸ್ಥಾಪಿಸುವ ಉಪಾಯವು ಯಾವುದೋ ? ಎಂದರೆ ತನ್ನನ್ನು ಹೊಂದಿದವರು ಯಾವತ್ತಿಗೂ ನನ್ನ ಇಷ್ಟವನ್ನು ಅನುಸರಿಸದೆ ಇರಲಾರರು. ಹಾಗೂ ಅನುಸರಿಸದ ಒಬ್ಬ ಆಶ್ರಿತನಿದ್ದರೆ, ಆ ಆಶ್ರಿತನ (ತನ್ನನ್ನು ಹೊಂದಿದವನ) ಮನಃ

ಕ್ಲೇಶವನ್ನು ಇತರ ಆಶ್ರಿತರುಗಳಿಂದ ಪರಿವರ್ತಿಸಿ ಅವನನ್ನು ತನ್ನ ವಶಪಡಿಸಿ. ತನ್ನನ್ನು ತನ್ನ ಸ್ಥಿತಿಯಿಂದ ಸಡಿಲಗೊಳಿಸದೆ. ತನ್ನನ್ನು ಕುರಿತು ಪ್ರಾರ್ಥಿಸುವುದೇ ಅವನು ತನ್ನನ್ನು ಸ್ಥಿರಗೊಳಿಸುವುದೇ ಆ ಬಹುಮಾನವಾಗಿದೆ. ಇದೇ ಶ್ರೀ ರಾಮಚಂದ್ರನು ಅವತಾರ ಮಾಡಿ ಸ್ಥಿರಪಡಿಸುವ ಮುಖ್ಯ ಧರ್ಮ ಸ್ಥಾಪನೆಯಾಗಿದೆ.

ಈ "ಸುಸ್ಮಿತಃ" ಎನ್ನುವ ಮಾತುಗಳು ಹೇಳುವ ರೀತಿಯಲ್ಲಿ ಶ್ರೀ ರಾಮಚಂದ್ರನು ವಾನರರುಗಳನ್ನು ಸಮಯವಾಗಿ ಕೇಳಲು, ಆ ವಾನರರುಗಳೆಲ್ಲರೂ ತಮ್ಮ ಇಷ್ಟವನ್ನು ತಿಳಿಯಪಡಿಸುವಂಥವರಾಗಿ. ಅಂಗದನು, ಶರಭನು, ಜಾಂಬವಾನ್, ಮೈಂದ, ಹನುಮಾನ್ ಮುಂತಾದ ಈ ಐದು ಜನಗಳೂ ಒಂದಾಗಿ ಒಂದೇ ಕಾಲದವರಾಗಿದ್ದು. ಆ ಶ್ರೀ ರಾಮನ ಸಾನಿಧ್ಯದಲ್ಲಿ ಅವನ ಒಳ್ಳೆಯದನ್ನೇ ನೆನಸಿ, ಬೇರೆ ಕಡೆ ಗಮನವನ್ನು ಬಿಟ್ಟು, ಕ್ರಮವಾಗಿ ಇಷ್ಟವಾದದ್ದನ್ನು ಬೇರೆ ಬೇರೆಯಾಗಿ ಬಿನ್ನವಿಸಿಕೊಂಡದ್ದಾಗಿ ಇಲ್ಲಿ ವೃತ್ತಾಂತವನ್ನು ತಿಳಿಯತಕ್ಕದ್ದು.

"ಅಂಗದನು ಹೇಳುವ ಮಾತುಗಳು ಅದರ ತಾತ್ಪರ್ಯ"

"ಅರ್ಥಾನರ್ಥೌ ವಿನಿಶ್ಚಿತ್ಯ ವ್ಯವಸಾಯಂ ಭಜೇತ ಚ ।
ಗುಣತಃ ಸಂಗ್ರಹಂ ಕುರ್ಯಾತ್ ದೋಷತಸ್ತು ವಿಸರ್ಜಯೇತ ॥"

ಎನ್ನುವುದೇ ಆ ಮಾತಾಗಿದೆ.

"ಶ್ರೀ ರಾಮನು ತನ್ನನ್ನೇ ಆತ್ಮೀಯನಾಗಿ ಪಡೆದವನನ್ನು ಬಿಡಲಾರದವನು ಸುಗ್ರೀವನು ವಿಭೀಷಣನನ್ನು ಕೊಲ್ಲಬೇಕೆಂದಿರುವನು.

ಈ ಇಬ್ಬರ ಭಿನ್ನಾಭಿಪ್ರಾಯದಲ್ಲಿ ಒಂದನ್ನು ಬಿಟ್ಟು ಮತ್ತೊಂದನ್ನು ತೆಗೆದುಕೊಳ್ಳುವಾಗ ವಿಭೀಷಣನ ಪರಿಸ್ಥಿತಿಯನ್ನು ಚೆನ್ನಾಗಿ ಆಲೋಚಿಸಿ ನೋಡಬೇಕಾದದ್ದು ಅವಶ್ಯಕ. ಆ ರೀತಿ ಆಲೋಚಿಸಿ ನೋಡುವಲ್ಲಿ ದೋಷವುಳ್ಳ ವಿಭೀಷಣನು ತ್ಯಾಗ ಮಾಡಲು ತಕ್ಕವನು. ಅತ್ಯಧಿಕ ಗುಣವುಳ್ಳವನಾದರೆ ವಿಭೀಷಣನು ಸ್ವೀಕರಿಸಲು ತಕ್ಕವನು. ಆದ್ದರಿಂದ ವಿಭೀಷಣನನ್ನು ಕುರಿತು ಆಲೋಚಿಸ ಬೇಕಾದದ್ದು ಅತಿ ಮುಖ್ಯವಾದ ವಿಷಯ ಎಂಬುದೇ ಆ ಮಾತಿನ ತಾತ್ಪರ್ಯ.

ಈ ರೀತಿ ಅಂಗದನು ಹೇಳಿದ ನಂತರ ಶರಭನು ತನ್ನ ಇಷ್ಟವನ್ನು ಹೇ ಪುರುಷಶ್ರೇಷ್ಠನೇ ಈ ವಿಭೀಷಣನ ನಡತೆಯು ನಮಗೆ ಚೆನ್ನಾಗಿ ತಿಳಿಯದೆ ಇರುವುದರಿಂದ ಅದನ್ನು ತಿಳಿಯುವುದಕ್ಕೆ ಮೊದಲೇ ದೂತನನ್ನು ಕಳುಹಿಸಬೇಕು.

—"ಕ್ಷಿಪ್ರಮಸ್ಮಿನ್ನರವ್ಯಾಘ್ರ ಚಾರಃ ಪ್ರತಿವಿಧೀಯತಾಂ" ಎಂದು ಹೇಳಿರುತ್ತಾನೆ.

ಈ ರೀತಿ ಶರಭನು ಹೇಳಿದನಂತರ ಜಾಂಬವಾನ್ ತಿಳಿಸಿದನೆಂದರೆ :—ಈ ವಿಭೀಷಣನು ರಾವಣನ ಹತ್ತಿರದಿಂದ ಬಂದವನು ಎನ್ನುವುದು ಮಾತ್ರವಲ್ಲದೆ ಬರಲು ತಕ್ಕ ಸ್ಥಳವಲ್ಲದ ಸ್ಥಳದಲ್ಲಿಯೂ ಬಂದವನು. ಆದ್ದರಿಂದ ಯೋಚಿಸತಕ್ಕವನು "ಅದೇಶಕಾಲೇ ಸಂಪ್ರಾಪ್ತಃ ಸರ್ವಥಾ ಶಂಕಯಿತವ್ಯಯಂ" ಎನ್ನುವುದು.

ಈ ರೀತಿ ಜಾಂಬವಂತನು ತನ್ನ ಇಷ್ಟವನ್ನು ಹೇಳಿದ ನಂತರ ಮೈಂದನು " ಈ ವಿಭೀಷಣನನ್ನು ನಮ್ಮೊಂದಿಗೆ ಸೇರಿಸಿಕೊಂಡು ಇವನ ಒಳ್ಳೆಯದು ಕೆಟ್ಟದ್ದನ್ನು ಚೆನ್ನಾಗಿ ತಿಳಿದು ಆನಂತರ ನಡೆಯುವುದು ಸರಿ " ಭಾವಮಸ್ಯ ತು ವಿಜ್ಞಾಯ ತತ್ತ್ವತಸ್ತ್ವಂ ಕರಿಷ್ಯಸಿ " ಎಂದು ಹೇಳಿದನು.

ಈ ನಾಲ್ಕು ವಾನರರುಗಳೂ ಈ ರೀತಿ ಹೇಳಿದನಂತರ ಹನುಮಂತನು ಈ ನಾಲ್ಕು ಜನರ ಇಷ್ಟವನ್ನು ಕಂಡು ತನ್ನ ವಿಚಾರವನ್ನು ಶ್ರೀ ರಾಮನ ಸಾನಿಧ್ಯದಲ್ಲಿ ವಿನ್ನವಿಸಿಕೊಂಡನು. ಇಲ್ಲಿ ಹನುಮಂತನ ಮಾತುಗಳನ್ನು ಆ ವಾನರರುಗಳ ತಾತ್ಪರ್ಯವನ್ನೂ ಕೇಳುವಂತೆ ಸುಗ್ರೀವನನ್ನು ಕುರಿತು ಹೇಳುತ್ತಾನೆ :—ಒಬ್ಬರನ್ನು ಗೆಲ್ಲಬೇಕೆಂದಾಗಲೀ, ಒಬ್ಬರಲ್ಲಿ ಅಸೂಯೆಯಿಂದಾಗಲಿ, ನಾನು ಹಿರಿಯವನೆಂದಾಗಲೀ, ಒಂದು ಫಲವನ್ನು ಅಪೇಕ್ಷಿಸಿ ಪಕ್ಷಪಾತದಿಂದಾಗಲೀ ಹೇಳುವುದಿಲ್ಲ, ಶ್ರೀ ರಾಮಚಂದ್ರನ ಸದ್ಗುಣಗಳನ್ನು ಕಂಡು, ಸಬುದ್ಧಿಯನ್ನು ಹೇಳುತ್ತೇನೆ ಎನ್ನುತ್ತಾನೆ ಹನುಮಂತ.

ಈ ರೀತಿ ಹೇಳಿ ಆ ಹನುಮಂತನು ಅಂಗದನ ಅಭಿಪ್ರಾಯಕ್ಕೆ ಹೇಳಿರುವ ದೋಷ ಯಾವುದು ?

ಈ ವಿಭೀಷಣನ ಹತ್ತಿರ ಗುಣವನ್ನು ಕಂಡು ಸ್ವೀಕರಿಸಬೇಕು. ದೋಷ ಕಂಡು ಬಂದರೆ ಬಿಟ್ಟು ಬಿಡಬೇಕು " ಎನ್ನುವ ಅಭಿಪ್ರಾಯವು ಶ್ರೇಷ್ಠವಾದುದಲ್ಲ ಏಕೆಂದರೆ ಇವನನ್ನು ನಮ್ಮ ಕೆಲಸಕ್ಕೆ ಆಧಾರವಾಗಿ ಇಟ್ಟುಕೊಳ್ಳದಿದ್ದರೆ. ಇವನ ಒಳ್ಳೆಯ ತನವನ್ನು ತಿಳಿಯಲಾಗುವುದಿಲ್ಲ. ಒಳ್ಳೆಯ ತನವನ್ನು ತಿಳಿದುಕೊಳ್ಳದೆ ನಂಬಲಾಗುವುದಿಲ್ಲ. ಆದ್ದರಿಂದ ಇವನನ್ನು ವಿಮರ್ಶಿಸಲಾಗುವುದಿಲ್ಲ.

" ಅಶಕ್ತೇ ನಿಯೋಗಾತ್ ಸಾಮರ್ಥ್ಯಮವಬೋದ್ಧುಂ ನ ಶಕ್ಯತೇ ।

ಸಹಸಾ ವಿನಿಯೋಗೋ ಹಿ ದೋಷವಾನ್ ಪ್ರತಿಭಾತಿ ಮಾ ॥ " ಎನ್ನುವುದು ಅನಂತರ ಶರಭನ ಅಭಿಪ್ರಾಯಕ್ಕೆ ಹೇಳಿರುವ ಕೊರತೆ ಏನು :—ಈ ವಿಭೀಷಣನ ಎದುರಿಗೇ ನಿಲ್ಲಲು ದೂತನನ್ನು ಕಳುಹಿಸಿ ಇವನು ಒಳ್ಳೆಯದು ಕೆಟ್ಟದ್ದನ್ನು ತಿಳಿದು ಆ ಪ್ರಕಾರಕ್ಕೆ ಸರಿಯಾಗಿ ನಡೆದುಕೊಳ್ಳೋಣ " ಎನ್ನುವ ವಿಚಾರವು ಉತ್ತಮವಾದುದಲ್ಲ.

" ಚಾರ ಪ್ರಣಿಹಿತಂ ಯುಕ್ತಂ ಯದುಕ್ತಂ ಸಚಿವೈಸ್ತವ ।

ಅರ್ಥಸ್ಯಾಸಂಭವಾತ್ ತತ್ರ ಕಾರಣಂ ನೋಪಪದ್ಯತೇ ॥ " ಎನ್ನುವುದು ನಂತರ ಜಾಂಬವಂತನ ವಿಚಾರಕ್ಕೆ ವಿವರಿಸುವ ಅಭಿಪ್ರಾಯವೇನು :—

" ಈ ವಿಭೀಷಣನು ಅತ್ಯಧಿಕ ತಮೋ ಗುಣವುಳ್ಳವನಂತೆ, ಇವರನ್ನು ತೊರೆದರೆ ಪಡೆಯುವವನಂತೆ, ಆದ್ದರಿಂದ ತ್ಯಾಗಮಾಡತಕ್ಕವನು, ವಿಭೀಷಣನನ್ನು ಬಿಡದೆ ಇದ್ದರೆ ಆವನ ಪಾಪಕಾರ್ಯದಿಂದ ಅವನ ಜೊತೆ ಅವನಿಗೆ ಬೆಂಬಲಿಗನಾದ ಇವನೂ ನಾಶವಾಗುತ್ತಾನೆ.

ಶ್ರೀ ರಾಮಚಂದ್ರನೇ, ರಜೋಗುಣ, ತಮೋಗುಣ ಕಿಂಚಿತ್ತೂ ಇಲ್ಲದ ಸತ್ವ

ಸತ್ವಗುಣವುಳ್ಳವನು, ದುಃಖನಿವರ್ತನಮಾಡಿ ಸುಖವನ್ನು ನೀಡಿದವನು, ಇತರರನ್ನು ಬಾಳಿಸುವವನು ಆದ್ದರಿಂದ ಹೊಂದಲ್ಪಡುವವನು ಈ ಶ್ರೀ ರಾಮಚಂದ್ರನನ್ನು ಆಶ್ರಯಿಸಿ ಇವನ ಕೃಪೆಯಿಂದ ಪರಮಾತ್ಮನ ಚರಣಾರವಿಂದಗಳ ಹತ್ತಿರ ಸೇರಿ ಸೇವೆ ಮಾಡಿ ಬಾಳನ್ನು ಅನುಗೊಳಿಸಬಹುದು.

ಈ ರೀತಿ ರಾವಣನಿಗೂ ಶ್ರೀ ರಾಮಚಂದ್ರನಿಗೂ ಇರುವ ಒಳ್ಳೆಯ ಕೆಟ್ಟದ್ದನ್ನು ಕಂಡವನಂತೆ ವಿಭೀಷಣನು ಅನಂತರವೂ ರಾವಣನ ಕೀಳುತನವನ್ನು ಶ್ರೀ ರಾಮಚಂದ್ರನ ಪೌರುಷವನ್ನು ಚೆನ್ನಾಗಿ ತಿಳಿದಿರುತ್ತಾನೆ; ಆದ್ದರಿಂದಲೇ ಅಂತಃಕರಣ ಪೂರ್ವಕವಾಗಿಯೇ ಪರಮ ಪುರುಷನನ್ನು ಆಶ್ರಯಿಸಿ ಬಂದು ಸೇರಿದನು ಬರುವುದಕ್ಕೆ ಈ ಸ್ಥಳವೂ ಕಾಲವೂ ಏನೂ ಅಡ್ಡಿಯಿಲ್ಲ.

"ಸ ಏಷ ದೇಶಃ ಕಾಲಶ್ಚ ಭವತೀ ಹ ಯಥಾ ತಥಾ ।
ಪುರುಷಾತ್ಪುರುಷಂ ಪ್ರಾಪ್ಯ ತಥಾ ದೋಷ ಗುಣಾವಪಿ ॥
ದೌರಾತ್ಮ್ಯಂ ರಾವಣೇ ದೃಷ್ಟ್ವಾ ವಿಕ್ರಮಂ ಚ ತಥಾ ತ್ವಯಿ ।
ಯುಕ್ತಮಾಗಮನಂ ತಸ್ಯ ಸದೃಶಂ ತಸ್ಯ ಬುದ್ಧಿತಃ ॥" ಎನ್ನುವುದು.

ಒಬ್ಬನು ಕರ್ಮಯೋಗವನ್ನು ಮಾಡುತ್ತಾನೆ. ಆ ಕರ್ಮಯೋಗವಾಗಿರುವ ಧರ್ಮ ಪರಿಶುದ್ಧವಾದ ಸ್ಥಳದಲ್ಲಿ ಮಾಡಲ್ಪಟ್ಟದ್ದೇ ಆದರೆ ಅದಕ್ಕೆ ನಲ್ಮೆ ಉಂಟು, ಅದರಿಂದುಂಟಾಗುವ ಫಲವೂ ದೊರೆಯುತ್ತದೆ. ಈ ಧರ್ಮದ ಹಾಗೆ ಸ್ಥಳ ಕಾಲ ಮುಂತಾದವುಗಳಿಂದ ಭಗವಂತನಾದ ಧರ್ಮಕ್ಕೆ ಉಂಟಾಗುವ ನಲ್ಮೆಯ ಫಲವನ್ನು ಹೇಳಲು ಶಾಸ್ತ್ರವು ಅವಕಾಶ ಕೊಡಲಿಲ್ಲವಲ್ಲವೇ ?

ಶ್ರೀ ರಾಮ ಪ್ರಭುವಾದ ಧರ್ಮವನ್ನೇ ಆಶ್ರಯವಾಗಿ ಪಡೆಯಲು ಬಂದ ವಿಭೀಷಣನಿಗೆ, ಆ ರೀತಿ ಆಶ್ರಯಿಸುವ ಸಮಯದಲ್ಲಿ ಯಾವುದಾದರೊಂದು ಸ್ಥಳವೂ, ಕಾಲವೂ ದೊರೆಯುವುದಾದರೆ ಇಂತಹ ಕಾಲ ಇಂತಹ ಸಮಯ ಎನ್ನುವುದಿಲ್ಲ. ವಾಲ್ಮೀಕಿ ಮುನಿಗಳು ಈ ಸತ್ಯತೆಯನ್ನು ಹನುಮಂತನ ಮುಖಾಂತರ ಪ್ರಕಟಪಡಿಸುತ್ತಾರೆ. ಕರ್ಮಯೋಗ ಯಾವುದು ? ಭಗವಂತನ ಮನಸಂತೋಷ ಪಡುವ ಹಾಗೆ ತನಗೆ ಸೇರಿದ ಧರ್ಮವನ್ನು ಶಾಸ್ತ್ರ ರೀತಿಯನ್ನನುಸರಿಸಿ ಮಾಡುವುದು. ಈ ರೀತಿ ಜಾಂಬವಂತನ ವಿಚಾರಕ್ಕೆ ದೋಷವನ್ನು ಹೇಳಿ ಮೈಂದನ ವಿಚಾರಕ್ಕೂ ದೋಷವನ್ನು ಹೇಳಿರುತ್ತಾನೆ ಹನುಮಂತ. ಆ ಕೊರತೆ ಏನು ? ಈ ವಿಭೀಷಣನನ್ನು ಒಂದು ಕೆಲಸದಲ್ಲಿ ನಿಯೋಜಿಸಿ ಆ ಕಾರ್ಯವನ್ನು ಮಾಡಿಸಿ ಅದರಿಂದ ಇವನ ಅಭಿಪ್ರಾಯವನ್ನು ತಿಳಿಯಬಹುದು. ಎನ್ನುವ ವಿಚಾರವೂ ಉತ್ತಮವಾದುದಲ್ಲ. ಏಕೆಂದರೆ ಎದುರು ಪಕ್ಷದವನು ತನ್ನ ಕೆಲಸದಲ್ಲಿ ಚತುರನಾಗಿದ್ದರೆ ತನ್ನ ಅಭಿಪ್ರಾಯವನ್ನು ಪ್ರಕಟಪಡಿಸದೆ ನಡೆದುಕೊಳ್ಳುತ್ತಾನೆ. ಆದ್ದರಿಂದ ತಕ್ಷಣ ಅವನ ನಡತೆಯನ್ನು ತಿಳಿದು ಕೊಳ್ಳಲಾಗುವುದಿಲ್ಲ.

"ಅಶಕ್ಯಂ ಸಹಸಾ ರಾಜನ್ ಭಾವೋ ವೇತ್ತುಂ ಪರಸ್ಯವೈ" ಎಂದು. ಈ ರೀತಿ ಅಂಗದ ಮುಂತಾದವರ ವಿಚಾರಕ್ಕೆ ಕೊರತೆಯನ್ನು ಹೇಳಿ ಹನುಮಂತನು ತನ್ನ ಅಭಿಪ್ರಾಯವನ್ನು ಚೆನ್ನಾಗಿ ತಿಳಿಸಿರುತ್ತಾನೆ.

ಈ ವಿಭೀಷಣನನ್ನು ನೋಡುವಾಗ, ಇವನಿಂದಾದ ದೋಷಗಳನ್ನು ಹೇಳುವ ಕಾರ್ಯ ಯಾವುದೂ ಕಂಡು ಬರಲಿಲ್ಲ. ಬಹಳ ಪೆಟ್ಟು ತಿಂದವನು ತಾಯಿಯ ಹತ್ತಿರ ಬರುವ ಹಾಗೆ ಇವನ ಮುಖವು ಶಾಂತಿಯಿಂದಿರುವ ಹಾಗೆ ಕಂಡು ಬರುತ್ತದೆ. ಇವನು ಕೆಟ್ಟವನಾಗಿದ್ದರೆ ಇವನಿಗೆ ವಿರೋಧವನ್ನು ಮಾಡಲು ಪ್ರಯತ್ನಿಸಿದ ವಾನರರನ್ನು ಪ್ರವಾಹರೂಪವಾದ ಪ್ರೀತಿ ಉಳ್ಳವನಾಗಿ ಈ ರೀತಿಯಾದ ಮಾತುಗಳನ್ನು ಹೇಳಲು ಅವಕಾಶವುಂಟೇ ? ಹೇಳುತ್ತಿದ್ದನೋ ? ಇವನ ಧ್ವನಿಯು ಗದ್ಗದಿತವಾಗಿದೆಯೇ ? ಆದರೆ, ಆ ಅಭಿಪ್ರಾಯವನ್ನು ಮರೆಸಲು ಯತ್ನಿಸಿದರೂ ಅದನ್ನು ಅವನ ಮುಖ ಪ್ರಕಟಪಡಿಸಿ ಬಿಡುತ್ತದೆಯಲ್ಲವೇ ? ಆದ್ದರಿಂದ ಇವನು ಕಷ್ಟಕ್ಕೊಳಗಾಗಿರುವವನೇ ಆಗಿರುತ್ತಾನೆ.

ಬೇರೆಯವರಿಗೆ ಅಸಾಧ್ಯವಾದ ಶ್ರೀ ರಾಮನ ಪ್ರಯತ್ನವನ್ನು. ರಾವಣನ ಕೆಟ್ಟ ಚರಿತ್ರೆಯನ್ನು ಚೆನ್ನಾಗಿ ತಿಳಿದು, ದುಷ್ಟನಾದ ವಾಲಿಯನ್ನು ಕೊಂದು ಕಿಷ್ಕಿಂದಾ ರಾಜ್ಯವನ್ನು ಸುಗ್ರೀವನಿಗೆ ವಶಮಾಡಿ ಕೊಟ್ಟಿದ್ದನ್ನು ಕೇಳಿ ಅದೇ ರೀತಿ ರಾವಣನನ್ನು ಕೊಂದು ಲಂಕಾ ರಾಜ್ಯವನ್ನು ತನಗೆ ವಶಪಡಿಸಿ ಕೊಡುತ್ತಾನೆಂದು ದೃಢವಾಗಿ ನಂಬಿ, ಈ ವಿಭೀಷಣನು ಇಲ್ಲಿಗೆ ಬಂದನೆಂಬುದು ನನ್ನ ಅಭಿಪ್ರಾಯ. ಇವನ ಸ್ಥಿತಿಯನ್ನು ನಿಜವಾಗಿಯೂ ತಿಳಿದರೆ ಇವನನ್ನು ಸ್ವೀಕರಿಸಲು ತಕ್ಕವನೇ. ಇದೇ ಹನುಮಂತನು ಹೇಳಿದ ವಿಚಾರ. ಇಲ್ಲಿ ಹನುಮಂತನ ಮಾತುಗಳು ಕೆಳಕಂಡಂತೆ :—

"ಉದ್ಯೋಗಂ ತವ ಸಂಪ್ರೇಕ್ಷ್ಯ ಮಿಥ್ಯಾವೃತ್ತಂ ಚ ರಾವಣಮ್ ।
ವಾಲಿನಂ ಚ ಹತಂ ಶ್ರುತ್ವಾ ಸುಗ್ರೀವಂ ಚಾಭಿಷೇಚಿತಂ ॥
ರಾಜ್ಯಂ ಪ್ರಾರ್ಥಯಮಾನಸ್ತು ಬುದ್ಧಿಪೂರ್ವಂ ಇಹಾಗತಃ ।
ಏತಾವತ್ತು ಪುರಸ್ಕೃತ್ಯ ವಿದ್ಯತೇತಸ್ಯ ಸಂಗ್ರಹಃ ।"

ಈ ರೀತಿ ಹನುಮಂತನು ಹೇಳಿರುವ ಮಾತುಗಳನ್ನು ಕಪಿಯಾರೇ ಕೇಳಿ ಸುಗ್ರೀವನೇ ಮೊದಲಾದವರು, ಶರಣು ಹೊಂದಿದ ವಿಭೀಷಣನನ್ನು ಸ್ವೀಕರಿಸಕೂಡದು ಎಂದು ಹೇಳಿದಾಗ ಶ್ರೀ ರಾಮಚಂದ್ರನು ಮನಸ್ಸಮಾಧಾನವನ್ನು ಹೊಂದಿದನು.

ಇಲ್ಲಿ "ಅಥರಾಮಃ ಪ್ರಸನ್ನಾತ್ಮಾ" ಎನ್ನುವ ವಾಲ್ಮೀಕಿ ಮುನಿಯ ವಾಕ್ಯವೂ "ಅಥರಾಮಃ" ಅನಂತರ ಭಗವಂತನು ಸಮಾಧಾನ ಹೊಂದಿದನು. ಹನುಮಂತನ ಮಾತಿನಿಂದ ಸಂತುಷ್ಟನಾದನು, ಪ್ರಸನ್ನನಾದನು.

ಧರ್ಮ ಉಂಟಾದರೆ ಧರ್ಮವು ಉಂಟಾಗುತ್ತದೆಯನ್ನುವ ಪರಿಯಾಣಾತ್ಮಾನ್ ರವರ ನಿರಿಮದಿಯನ್ನು ಅನುಭವಿಸತಕ್ಕದ್ದು.

ಇನ್ನು ಶ್ರೀ ರಾಮಚಂದ್ರನ ಅಭಿಪ್ರಾಯವನ್ನು ನೋಡೋಣ—

ಶ್ರೀ ರಾಮಚಂದ್ರನು ಅಂಗದ ಮುಂತಾದವರನ್ನು ಕುರಿತು ತನ್ನ ಅಭಿಪ್ರಾಯವನ್ನು ಹೇಳುವುದಕ್ಕೆ ಮೊದಲು, ತನ್ನ ಶ್ರೇಷ್ಠ ಗುಣಗಳಿಗನುಸಾರವಾಗಿ—"ನಿಮ್ಮ ಮಾತುಗಳನ್ನು ನಾನು ಕೇಳಿದ ಹಾಗೆಯೇ, ಈ ವಿಭೀಷಣನನ್ನು ಕುರಿತು ನಾನು ಹೇಳುವ ಮಾತುಗಳನ್ನು ನೀವೂ ಕಿವಿಗೊಟ್ಟು ಕೇಳಬೇಕು" ಎಂದು ವಿನಯದಿಂದ ಕೇಳಿಕೊಂಡಿರುತ್ತಾನೆ. ಹೀಗೆ ಕರುಣಾ ಭರಿತವಾಗಿ ಶ್ರೀ ರಾಮನು ಕೇಳಿಕೊಂಡ ಮಾತುಗಳು ಯಾವುವೆಂದರೆ—

"ಮಿತ್ರ ಭಾವೇನ ಸಂಪ್ರಾಪ್ತಂ ನ ತ್ಯಜೇಯಂ ಕಥಂಚನ ।

ದೋಷೋ ಯದ್ಯಪಿ ತಸ್ಯಸ್ಯಾತ್ ಸತಾ ಮೇತದ ಗರ್ಹಿತಂ ॥ ಎನ್ನುವುವು.

ಶ್ರೀ ರಾಮ ಪ್ರಭುವು ಸಮುದ್ರ ತೀರದಲ್ಲಿ ವಾನರರ ಗುಂಪಿನಲ್ಲಿ ಹೇಳಿದ "ಮಿತ್ರಭಾವೇನ" ಎನ್ನುವ ಈ ಮಾತುಗಳು ಶ್ರೀ ಕೃಷ್ಣನು ಭಗವದ್ಗೀತೆಯ ಅಂತ್ಯದಲ್ಲಿ ಹೇಳಿರುವ "ಸರ್ವಧರ್ಮಾನ್" ಎನ್ನುವ ಮಾತಿನ ಹಾಗೆ ಇದೆ.

ಶ್ರೀ ಕೃಷ್ಣ ಭಗವಂತನು ಗೀತೆಯಲ್ಲಿ ಕರ್ಮಯೋಗ (ಭಗವಂತನ ಮುಖೋಲ್ಲಾಸಕ್ಕಾಗಿ ಮಾಡುವ ಜೀವನಾಗಿರುವ ತನಗೆ ಸೇರದ ಧರ್ಮ) ಜ್ಞಾನಯೋಗ (ಅಂತಃಕರಣವಾಗಿ ಕಷ್ಟ ಹೊಂದಿದವನು ಚಿಂತಿಸುವ ಜೀವಾತ್ಮನನ್ನು ಕುರಿತು ಚಿಂತನೆ) ಭಕ್ತಿಯೋಗ (ಪರಮಾತ್ಮನನ್ನು ಕುರಿತಾದ ಚಿಂತನೆ) ಆದ ಈ ಉಪಾಯಗಳನ್ನು ವಿಸ್ತರಿಸಿ ಹೇಳಿ ಕೊನೆಯಲ್ಲಿ ಇವುಗಳನ್ನು ಬಿಟ್ಟು ಬಿಟ್ಟು ಪರಮಾತ್ಮನಾಗಿರುವ ತನ್ನನ್ನೇ ಪಡೆಯುವಂತೆ ಆಜ್ಞೆ ಮಾಡಿರುತ್ತಾನೆ.

ಶ್ರೀ ರಾಮಚಂದ್ರನು ಇಲ್ಲಿ ಅಂಗದನು, ಶರಭನು ಹೇಳಿದ ಅಭಿಪ್ರಾಯವನ್ನು ತಳ್ಳಿಹಾಕಿ ಅಂತ್ಯದಲ್ಲಿ ತನಗೇ ಸೇರಿದ ಶ್ರೇಷ್ಠ ಅಭಿಮತವನ್ನು ನಿರ್ದಿಷ್ಟವಾಗಿ ತಿಳಿಸಿರುತ್ತಾನೆ.

ಶ್ರೀ ಕೃಷ್ಣನು ಸಂಪತ್ತನ್ನು ಕಳೆದುಕೊಂಡ ಅರ್ಜುನನನ್ನು ಶ್ರೇಷ್ಠನನ್ನಾಗಿ ಮಾಡಿ ಕೊನೆಯಲ್ಲಿ "ಸರ್ವಧರ್ಮಾನ್" ಎಂದು ಹೇಳಿದ ಹಾಗೆ ಶ್ರೀ ರಾಮಚಂದ್ರನೂ ಲಂಕೆಯನ್ನು ತೊರೆದ ವಿಭೀಷಣನನ್ನು ಲಂಕೆಯನ್ನು ಪಡೆಯುವಂತೆ ಮಾಡುವ ಕೊನೆಯ ವಾಕ್ಯ "ಮಿತ್ರ ಭಾವೇನ" ಎಂದು ಹೇಳಿರುತ್ತಾನೆ.

ಅಲ್ಲಿ ಶ್ರೀ ಕೃಷ್ಣನು ಸೇನೆಯ ಮಧ್ಯದಲ್ಲಿ ಅರ್ಜುನನ ಶೋಕವು ನಿವೃತ್ತಿಯಾಗಲು ಆ ಮಾತನ್ನು ಹೇಳಿರುವ ಹಾಗೆ ಇಲ್ಲಿಯೂ, ಶ್ರೀ ರಾಮಚಂದ್ರನು ಸೇನೆಯ ಮಧ್ಯದಲ್ಲಿ ವಿಭೀಷಣನ ಶೋಕವು ದೂರವಾಗಲು ಈ ಮಾತುಗಳನ್ನು ಹೇಳಿರುತ್ತಾನೆ.

ನಮ್ಮ ಆಚಾರ್ಯರುಗಳು "ತಿರುತ್ತೇರ್ ತಟ್ಟಿಲ್ ವಾರ್ತೈ" "ಕಡಲ್‌ಕರೈ ವಾರ್ತೈ" ಎನ್ನುವ (ಶ್ರೀ ಕೃಷ್ಣ ಭಗವಾನ್, ಶ್ರೀ ರಾಮಚಂದ್ರ ಈ ಇಬ್ಬರು ಅವತಾರ ಪುರುಷರುಗಳು) ಈ ಎರಡು ಮಾತುಗಳನ್ನೂ ಎಲ್ಲಾ ಚೇತನರುಗಳ ಕ್ಷೇಮವನ್ನು ಅಭಿವೃದ್ಧಿಪಡಿಸುವ ಹಿರಿಮೆಯುಳ್ಳವನು. ಮೇಲೆ ಹೇಳಿರುವ ಹಾಗೆ ಸತ್ಯಮತ್ಯವುಳ್ಳವ

ರಾಪ್ಸ್ವರೀದ, ಪ್ರೀತಿಯಿಂದ ತಾವೂ ಆದರಿಸಿ ತಮ್ಮ ಚರಣಾರವಿಂದಗಳಲ್ಲಿ ಸಂಬಂಧ ಪಡೆದವರಿಗೆ ಉಪದೇಶ ಮಾಡಿಯೂ ಇರುತ್ತಾರೆ ಎನ್ನುವುದನ್ನು "ಯಾವ ಚೇತನನಿಗೆ" ಈ ಎರಡು ಮಾತುಗಳಲ್ಲಿ ಒಳ್ಳೆಯ ಗೌರವವುಂಟೋ ಆ ಚೇತನನೇ ಶ್ರೀ ವೈಷ್ಣವನು ಎಂದು ಪ್ರಶಂಸಿಸಲ್ಪಡುತ್ತಾನೆ ಎನ್ನುವುದನ್ನು ನಾವು ಇಲ್ಲಿ ತಿಳಿಯುವುದು ಆವಶ್ಯಕ.

ನಿಜಸ್ಥಿತಿಯು ಈ ರೀತಿಯಾದರೂ, ಪೆರಿಯವಾಚ್ಚಾನ್ ಪಿಳ್ಳೈ ಶ್ರೀ ರಾಮಚಂದ್ರನ ಮಾತಿಗೆ ಹೆಚ್ಚು ಶ್ರೇಷ್ಠತೆಯನ್ನು ಮನಸ್ಸಿನಲ್ಲಿಟ್ಟು ಹೇಳಿರುತ್ತಾರೆ.

ಅಲ್ಲಿ "ಶರಣಾಗತಾತ್ಮವಸಾಯಮ್" ಹೇಳಿಯಿತ್ತು, ಇಲ್ಲಿ "ಶರಣ್ಯಾತ್ಮವಸಾಯಮ್" ಹೇಳಲ್ಪಡುತ್ತದೆ. ಅಲ್ಲಿ ಶರಣಾಗತರನ್ನು ಪಾಪಗಳಿಂದ ಬಿಡಿಸುತ್ತೇನೆ ಎಂದು ಹೇಳುತ್ತದೆ. ಇಲ್ಲಿ ನಾನು ಬಿಡೆನು ಎಂದು ಹೇಳುತ್ತದೆ ಎನ್ನುವ ಪೆರಿಯವಾಚ್ಚಾನ್ ಪಿಳ್ಳೈಯವರ ಸಿರಿನುಡಿಗಳನ್ನು ಅವಶ್ಯವಾಗಿ ಅನುಭವಕ್ಕೆ ತೆಗೆದುಕೊಳ್ಳಬೇಕು.

ಈ ಮಾತುಗಳ ಅಭಿಪ್ರಾಯವನ್ನು ಸ್ವಲ್ಪ ವಿವರಿಸಿ ಹೇಳುತ್ತೇವೆ:—ಭಗವಂತನನ್ನು ಪಡೆಯಲು ಯಾವನು ಆ ಭಗವಂತನನ್ನೇ ಕಾರಣವಾಗಿ ಹೊಂದುತ್ತಾನೋ, ಅವನನ್ನು ಶರಣಾಗತನೆನ್ನುತ್ತಾರೆ. ಆ ಶರಣಾಗತನಿಗೆ ಸೇರಿದ ದೃಢವಾದ ಅಭಿಪ್ರಾಯವನ್ನು (ಭಗವಂತನು ಈ ವಸ್ತುವನ್ನು ಯಾವತ್ತಿಗೂ ಬಿಡುವುದಿಲ್ಲ) ನಿರೀಕ್ಷಿಸಿಯೇ ಇರುತ್ತಾನೆ, ಎಂಬ ಅಭಿಪ್ರಾಯವನ್ನು "ಅಧ್ಯವಸಾಯ" ಎಂದು ಹೇಳುವರು.

ಈ ಅಭಿಪ್ರಾಯವು ಭಗವಂತನ ಚರಣಾರವಿಂದಗಳನ್ನು ಉಪಾಯವಾಗಿ ಆಶ್ರಯಿಸಿ ಪುರುಷಾರ್ಥವನ್ನು ಪಡೆಯುವವನಿಗೆ ಸುಲಭವಾಗಿರುತ್ತದೆ. ಈ ಸೌಕರ್ಯವನ್ನು ಕೆಳಕಂಡಂತೆ ನಾವು ತಿಳಿಯಬಹುದು.

ಒಬ್ಬನು ಹಡಗಿನಲ್ಲಿ ಸಮುದ್ರವನ್ನು ದಾಟಿ, ತಾನು ಇಷ್ಟಪಟ್ಟ ಸ್ಥಳಕ್ಕೆ ಹೋಗುತ್ತಾನೆ. ಆ ರೀತಿ ಹೋಗುವವನಿಗೆ ಸಹಾಯವಾಗಿ (ಈ ಹಡಗು ಅತ್ಯಾವಶ್ಯಕವಾದುದು. ಇದು ನಮ್ಮನ್ನು ಇಚ್ಛಿಸಿದ ಸ್ಥಳಕ್ಕೆ ಕರೆದುಕೊಂಡು ಹೋಗಿ ಸೇರಿಸಿ ಬಿಡುತ್ತದೆ ಎಂಬ) ಕಾಣುತ್ತೇವೆ ಅಲ್ಲವೆ ?

ಇದರ ಹಾಗೆಯೇ. ಈ ಜೀವನು ಭಗವಂತನೆಂಬ ಹಡಗನ್ನು ಹತ್ತಿ ಸಂಸಾರವೆಂಬ ಮಹಾಸಾಗರವನ್ನು ದಾಟಿ, ತಾನು ಅಪೇಕ್ಷಿಸಿದ ಶ್ರೀ ವೈಕುಂಠವಾದ ಪರಮಪದಕ್ಕೆ ಹೋಗಬೇಕಾಗಿರುವುದರಿಂದ, ಪರಮಾತ್ಮನಾದ ಹಡಗು ಅತ್ಯಾವಶ್ಯಕವಾದುದು. ಈ ಹಡಗು ನಮ್ಮನ್ನು ಪರಮಪದಕ್ಕೆ ಕರೆದುಕೊಂಡು ಹೋಗಿ ಸೇರಿಸುತ್ತದೆ ಎನ್ನುವ ದೃಢವಾದ ಅಭಿಪ್ರಾಯವನ್ನು ಇಟ್ಟುಕೊಂಡವನಲ್ಲವೆ ?

ಇಲ್ಲಿ ಒಂದು ಬುತ್ತಿಯಲ್ಲಿ ನಂಬಿಕೆ ಇಟ್ಟುಕೊಂಡು ಆರು ತಿಂಗಳಿಗೆ ಬೇಕಾದ ಊಟ, ನೀರುಗಳನ್ನು ತೆಗೆದುಕೊಂಡು ಸಮುದ್ರದಲ್ಲಿ ಪ್ರವೇಶಿಸುತ್ತಾನೆ. ಹಾಗೆಯೇ ಮೋಕ್ಷಕ್ಕೆ ಹೋಗಲು ನಮಗೆ ಭಗವದ್ವಿಷಯವೆಂಬ ಸಾಧನೆ ಬೇಕಲ್ಲವೆ? ನಂಬಿಳ್ಳೈಯವರ ವಿಚಾರವನ್ನು ಗ್ರಹಿಸತಕ್ಕದ್ದು.

ಈ ವಿಷಯವನ್ನು ಅರಿಯುವಾಗ "ಭಗವಂತನಾದ ಹಡಗನ್ನು ಹತ್ತಿ ಹೋಗು

ವನಿಗೆ ಅತ್ಯಂತ ದೃಢವಾದ ಅಭಿಪ್ರಾಯವಿರಬೇಕು. ಆ ಮನಸ್ಸು ಈ ಜೀವನ ಸ್ಥಿತಿಯನ್ನು ನೋಡುವಲ್ಲಿ ದೃಢತೆ ಉಂಟಾಗುವುದು ಕಷ್ಟ.

ಆದರೂ ಸಹ ಆಳವಾದ ಸಮುದ್ರವನ್ನು ದಾಟುವಾಗ ಆ ರೀತಿ ದಾಟುವುದಕ್ಕೆ ಸಾಧನವಾದ ಹಡಗಿನಲ್ಲಿ ಇಟ್ಟಿರುವ ನಂಬಿಕೆಯು ಹಾಗಿರುವ ವಿಶ್ವಾಸವಾದರೂ, ಈ ಜೀವನಿಗಿರುವುದು ಅವಶ್ಯವಲ್ಲವೆ ?

" ಈ ದೃಢವಾದ ಅಭಿಪ್ರಾಯವು ಪರಮ ಪುರುಷನಾಗಿರುವ ನನ್ನನ್ನು ಆಶ್ರಯಿಸಿರುವವನಿಗೆ (ಶರಣಾಗತನಿಗೆ) ಸಾಧ್ಯವಾಗುತ್ತೆ ಎಂಬುದನ್ನು ತಿಳಿಯ ಪಡಿಸಿರುತ್ತಾರೆ." " ಸರ್ವಧರ್ಮಾನ್ " ಎನ್ನುವ ಮಾತಿನಲ್ಲಿ ಶ್ರೀಕೃಷ್ಣ ಪರಮಾತ್ಮ ಎನ್ನುವ ತತ್ವವು ಅಡಗಿದೆ.

ನಂತರವೂ ಆ ಕೃಷ್ಣ ಪರಮಾತ್ಮನು ಮೇಲೆ ಹೇಳಿರುವ ಮಾತುಗಳಿಂದಲೇ, ಈ ರೀತಿ ದೃಢವಾದ ಅಭಿಪ್ರಾಯವಿರುವ ಚೇತನನನ್ನು, ನನ್ನನ್ನು ಹೊಂದದಂತೆ ತಡೆಯುವ ಪಾಪಗಳಿಂದಲೂ ಬಿಡುಗಡೆ ಮಾಡುತ್ತೇನೆ ಎಂದೂ ಉಪದೇಶ ಮಾಡಿರುತ್ತಾನೆ.

ಇದುವರೆವಿಗೂ "ಶರಣಾಗತಾಧ್ಯವಸಾಯಂ" ಹೇಳಿದ್ದಾಯಿತು, ಶರಣಾಗತನನ್ನು ಪಾಪಗಳಿಂದಲೂ ವಿಮುಕ್ತಗೊಳಿಸುತ್ತೇನೆ ಎನ್ನುವ ಭಾಗದ ತಾತ್ಪರ್ಯವನ್ನು ಕಂಡೆವು. ಇನ್ನು " ಶರಣ್ಯಾಧ್ಯವಸಾಯಂ " ಎನ್ನುವುದರ ಸಾರಾಂಶವನ್ನು ನೋಡೋಣ.

" ಶರಣ್ಯಂ " ಎನ್ನುವುದಕ್ಕೆ ದುಃಖ ನಿವೃತ್ತಿ ಮಾಡಿ ಸುಖವನ್ನು ನೀಡುತ್ತಾನೆ. ಭಗವಂತ ಎಂದು ಅರ್ಥ ಆ ಪರಮಾತ್ಮನ ದೃಢವಾದ ವಿಚಾರವನ್ನು (ಈ ಜೀವವನ್ನು ಯಾವತ್ತಿಗೂ ಬಿಡಲಾರೆನು ರಕ್ಷಿಸಿಯೇ ತೀರುತ್ತೇನೆ) ಎನ್ನುವ ಭಗವಂತನ ಅನುಗ್ರಹವನ್ನು " ಶರಣ್ಯಾಧ್ಯವಸಾಯಂ " ಎಂದು ಹೇಳುವರು.

ಈ ಅಧ್ಯವಸಾಯವನ್ನು " ಈ ಜೀವವನ್ನು ಪರಮಾತ್ಮನಾದ ನಾನು ಬಿಡುವುದಿಲ್ಲ " ಎಂದು ಹೇಳುವುದನ್ನು ಇಲ್ಲಿ ಶ್ರೀ ರಾಮಚಂದ್ರನ ಮಾತಿನಲ್ಲಿ ನಾವು ಚೆನ್ನಾಗಿ ತಿಳಿಯಬಹುದು.

ಜೀವನ ದೃಢವಾದ ಅಭಿಪ್ರಾಯ, ಭಗವಂತನ ದೃಢಸಂಕಲ್ಪ, ಇವು ಎರಡೂ ಈ ಜೀವನು ಪುರುಷಾರ್ಥವನ್ನು ಪಡೆಯುವಾಗ ಅವಶ್ಯಕ ಎಂದರೂ, ಇವನ ಅಭಿಪ್ರಾಯಕ್ಕಿಂತಲೂ ಅವನ ಸಂಕಲ್ಪ ಅತಿಮುಖ್ಯವಾದುದಲ್ಲವೇ ?

ಈ ಚೇತನನು " ಭಗವಂತನು ಈ ವಸ್ತುವನ್ನು ರಕ್ಷಿಸದೆ ಬಿಟ್ಟು ಬಿಡುವುದಿಲ್ಲ, ರಕ್ಷಿಸಿಯೇ ತೀರುತ್ತಾನೆ" ಎನ್ನುವ ನಂಬಿಕೆ ಇಟ್ಟಿದ್ದರೂ, ಭಗವಂತನ ಇಚ್ಛೆಯಿಂದಲೇ ಇವನಿಗೆ ಕ್ಷೇಮವಾಗುವುದು ನಿಶ್ಚಯವಲ್ಲವೇ ?

ಈ ಚೇತನನು " ಭಗವಂತನು ಈ ವಸ್ತುವನ್ನು ರಕ್ಷಿಸಿಯೇ ತೀರಬೇಕು " ಎಂದು ಸಂಕಲ್ಪಿಸದೆ ಇರಬಹುದು. ಇವನು ಮೋಕ್ಷವನ್ನು ಪಡೆಯಲಾಗುತ್ತದೆಯೇ? ಆಗುವುದಿಲ್ಲವಲ್ಲವೇ ? ಇದರ ಹಾಗೆ ಪಾಪಮುಕ್ತನನ್ನಾಗಿ ಮಾಡಲು ಭಗವಂತನು ಇವನನ್ನೂ ಬಿಡದೆ ಇರುವುದು ಅತಿ ಮುಖ್ಯವಾದ ವಿಷಯ.

ಇಲ್ಲಿ ನಿನ್ನ ಮನಸ್ಸಿನಿಂದ ಏನನ್ನು ನೆನಸಿದ್ದೆ.

" ಉನ್ ಮನತ್ತಾಲ್ ಎನ್‌ನಿನೈಂದಿರುಂದಾಯ್ ಇಡವೆಂದ್ರೈ ಎಂದೈಪಿರಾನೇ, ಎನ್ನುವ ತಿರುಮಂಗೈ ಆಳ್ವಾರವರ ಸಿರಿನುಡಿಗಳನ್ನು ತಿಳಿದುಕೊಳ್ಳಬೇಕು.

ನಿಜ ಸ್ಥಿತಿಯು ಹೀಗಿರಲು "ಶ್ರೀ ಕೃಷ್ಣ ಪರಮಾತ್ಮನ ಮಾತಿಗಿಂತಲೂ" ಶ್ರೀ ರಾಮಚಂದ್ರನ ಮಾತಿಗೆ ಹಿರಿಮೆಯುಂಟು " ಎನ್ನುವುದು ಚೆನ್ನಾಗಿ ತಿಳಿಯುತ್ತದೆ.

ಇದುವರೆವಿಗೂ " ಮಿತ್ರಭಾವೇನ " ಎನ್ನುವ ಈ ಮಾತಿನ ಶ್ರೇಷ್ಠತೆಯನ್ನು ಕಂಡೆವು. ಇನ್ನು ಈ ಮಾತಿನ ತಾತ್ಪರ್ಯವನ್ನು ಸಂಕ್ಷಿಪ್ತವಾಗಿ ನೋಡೋಣ.

" ನಂಬುವಂತಹ ಕಾರ್ಯಗಳಿಂದ ನಮ್ಮನ್ನು ಆಶ್ರಯಿಸಿ ಬಂದ ಈ ವಿಭೀಷಣನನ್ನು ಯಾವರೀತಿಯಿಂದಲೂ, ಕೇವಲ ಊಹಾಮಾತ್ರದಿಂದಲೂ ಬಿಡಲು ನನಗೆ ಇಷ್ಟವಿಲ್ಲ. ಈ ವಿಭೀಷಣನಿಗೆ ದೋಷಗಳಿದ್ದರೂ ಇವನು ನೆನಸಿದ ಕಾರ್ಯವನ್ನು ಪಡೆಯುವನಾಗುತ್ತಾನೆ. ಇವನನ್ನು ಸ್ವೀಕರಿಸುವುದು ಹಿರಿಯರಿಗೆ ನಿಂದಿಸಲು ತಕ್ಕುದಲ್ಲವಂತೆ " ಎನ್ನುವುದು ಮೇಲೆ ಹೇಳಿರುವ ಮನಸ್ಸಿನ ತಾತ್ಪರ್ಯ.

ಈ ರೀತಿ ತನ್ನ ಮನಸ್ಸಿನ ಇಚ್ಛೆಯನ್ನು ತಿಳಿಸಿಯೂ, ಅತ್ಯಧಿಕ ಪ್ರೇಮಾತಿಶಯವನ್ನು ಪಡೆದಿರುವ ಸುಗ್ರೀವನು ಸ್ವಲ್ಪ ಮಾತ್ರವೂ ತಿಳಿವನ್ನು ಹೊಂದದೆ, ಆ ರಾಮಚಂದ್ರನ ಎದುರಿಗೆ " ವಿಭೀಷಣನನ್ನು ಸ್ವೀಕರಿಸಲು ಯೋಗ್ಯನಲ್ಲ " ಎಂಬುದು ಕೆಲವು ನೀತಿಗಳಿಂದ ನಿರೂಪಿಸಿ ತಿಳಿಸಿರುತ್ತಾನೆ.

ಆ ಹೇಳಿಕೆಗೆ ಶ್ರೀ ರಾಮನು ಉತ್ತರ ಹೇಳುವಾಗ, ಆ ಪರಮಾತ್ಮನ ವಾಣಿಯಿಂದ ಹೊರಟ " ಮಿತ್ರಭಾವೇನ " ಎನ್ನುವ ಮಾತಿನಂತಹ ಅತಿ ಶ್ರೇಷ್ಠವಾದದ್ದು ಎಲ್ಲಾ ಚೇತನರಿಗೂ ಮೋಕ್ಷವನ್ನುಂಟು ಮಾಡುವಂತಹುದೂ ಆದ ವಾಕ್ಯಗಳು.

" ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ ।

ಅಭಯಂ ಸರ್ವಭೂತೇಭ್ಯಃ ದದಾಮ್ಯೇತದ್ವ್ರತಂ ಮಮ ॥

ಈ ವಾಕ್ಯಾಂಶಗಳ ಸಾರಾಂಶವನ್ನು ನೋಡುವಾಗ, ಸುಗ್ರೀವನ ಪ್ರಶ್ನೆಗಳಿಗೆ ಶ್ರೀ ರಾಮಚಂದ್ರನು ಉತ್ತರ ಕೊಟ್ಟಿರುವುದನ್ನು ನಾವು ನೋಡಿದರೆ ಉತ್ತಮ.

ಸುಗ್ರೀವನು ಶ್ರೀ ರಾಮಚಂದ್ರನನ್ನು ನೋಡಿ " ಹೇ ರಾಮಾ ! ನೀನು ಪುರುಷೋತ್ತಮನು. ನಿನ್ನನ್ನು ನ್ಯಾಯ ರೀತಿಯಿಂದ ಉಪಾಯವಾಗಿ ಹೊಂದಿದವನನ್ನು ರಕ್ಷಿಸುವುದು ನಿನಗೆ ತಕ್ಕ ಧರ್ಮವೇ ಆಗಿದೆ. ಶಾಸ್ತ್ರವು ಶರಣಾಗತಿಯನ್ನು ಒಂದು ಸಮಯ ಮಾಡಿದರೆ ಒಳ್ಳೆಯದು, ಅನೇಕ ಸಾರಿ ಮಾಡಬಾರದು ಎಂದು ಹೇಳಿದೆ. ಈ ವಿಭೀಷಣನೋ ಶಾಸ್ತ್ರವು ಹೇಳುವ ರೀತಿಯನ್ನು ಅನುಸರಿಸದೆ " ರಾಘವಂ ಶರಣಂ ಗತಃ, " "ಭವಂತಂ ಶರಣಂ ಗತಃ" "ಪಾದಯೋಃ ಶರಣಾನ್ವೇಷೀ ನಿಪಪಾತ" ಎಂದು ಮೂರು ಸಾರಿ ಶರಣವನ್ನು ಆಶ್ರಯಿಸಿರುವನಲ್ಲವೇ ಆದ್ದರಿಂದ ಇವನು ಸ್ವೀಕರಿಸಲು ತಕ್ಕವನಲ್ಲ ಎಂದು ಹೇಳಿದನು.

ಇದಕ್ಕೆ ಶ್ರೀ ರಾಮನು ಹೇಳಿದ ಉತ್ತರ :-

"ಸಕೃದೇವ" ಈ ವಿಭೀಷಣನು ನೀತಿಯಿಂದಲೇ ನಮ್ಮನ್ನು ಆಶ್ರಯಿಸಿದವನೇ ಆಗಿರುವನು. ಹೇಗೆ? ಎಂದರೆ, ರಾವಣನಿಂದ ಅತ್ಯಧಿಕ ಅವಮಾನಿತನಾದ ವಿಭೀಷಣನು ನಮ್ಮನ್ನು ಕುರಿತು, ನಾಲ್ಕು ಜನ ರಾಕ್ಷಸರೊಂದಿಗೆ ಆಕಾಶದಲ್ಲಿ ಹೊರಟಾಗಲೇ ನೀವು ಅವನನ್ನು ಶತ್ರುವೆಂದು ತಿಳಿದು ಸಂದೇಹಪಡಲು ನಿಮಗೆ ಆ ಸಂದೇಹ ನಿವೃತ್ತಿಯಾಗಬೇಕೆಂದು ಎಣಿಸಿ, ನನ್ನನ್ನು ಶತ್ರುವಾಗಿ ತಿಳಿಯಬಾರದು. ನಾನು ಶ್ರೀ ರಾಮನನ್ನು ಶರಣು ಹೊಂದಲು ಬಂದವನು ಎನ್ನುವ ನಿಜಸ್ಥಿತಿಯ ಮಾತುಗಳನ್ನು ನಿಮಗೆ ತಿಳಿಯಪಡಿಸಿದ ಮಾತುಗಳೇ "ರಾಘವಂ ಶರಣಂಗತಃ" ನಿಮ್ಮ ಮಾತುಗಳಿಂದ ನಾವುಗಳು ಸಂದೇಹ ಪಟ್ಟೇವೇ? ಎಂದು ಶಂಕಿಸಿ ನಮ್ಮನ್ನು ಜಾಗ್ರತಗೊಳಿಸಲು ಹೇಳಿದ ಮಾತುಗಳು "ಭವಂತಂ ಶರಣಂ ಗತಃ" ಎನ್ನುವುದು.

ಸತ್ಕೃತಿಯಲ್ಲಿ ನೀತಿಯನ್ನು ತಪ್ಪದೆ ನಮ್ಮನ್ನು ಶರಣು ಹೊಂದುವಾಗ ಹೇಳಿದ ಮಾತುಗಳು "ಪಾದಯೋಃ ಶರಣಾನ್ವೇಷಿ ನಿಪಪಾತ" ಎನ್ನುವುದು. ಆದ್ದರಿಂದ ಇವನನ್ನು ಸ್ವೀಕರಿಸಲು ತಕ್ಕವನೇ ಆಗಿರುವನು.

ಇದನ್ನು ಕೇಳಿಸಿಕೊಂಡ ನಂತರವೂ ಸುಗ್ರೀವನು ಹೇಳಿದ ವಿಚಾರ :—

"ಈ ವಿಭೀಷಣನು ಸ್ವಾಮಿಯವರನ್ನು ಶರಣಾಗತಿ ಮಾಡಿದವನಲ್ಲ. ಹೇಗೆ? ಎಂದರೆ ವಧೆ ಮಾಡಬೇಕೆಂಬ ನಮ್ಮ ಮಾತುಗಳನ್ನು ಕೇಳಿ "ವೇರಪಿ" ಕೂಗಿ ಹೋಗಲು ನಿಂತವನಲ್ಲವೇ? ಇವನು! ಆದ್ದರಿಂದ ಇವನು ಸ್ವೀಕರಿಸಲು ಯೋಗ್ಯನಲ್ಲ.

ಇದಕ್ಕೆ ಶ್ರೀ ರಾಮಚಂದ್ರನ ಉತ್ತರ :—

"ಪ್ರಪನ್ನಾಯೈವ" ನಾವು ಈ ರೀತಿ ಇವನನ್ನು ಸ್ವೀಕರಿಸುವುದು ನ್ಯಾಯವೋ, ನ್ಯಾಯವಲ್ಲವೋ, ಎಂದು ಅಸಮಂಜಸಕ್ಕೊಳಪಡಬೇಕಾಗಿಲ್ಲ. ದೃಢವಾಗಿ ನಮ್ಮನ್ನೇ ಆಶ್ರಯಿಸಿ ಇರುವವನು ಇವನು.

ಇದನ್ನು ಕೇಳಿಕೊಂಡ ಸುಗ್ರೀವನು ಈ ವಿಭೀಷಣನು ಸ್ವಾಮಿಯವರನ್ನು ಅತ್ಯಧಿಕ ಹಿತೈಷಿಯೆಂದು ಎಣಿಸದೆ, ಲಂಕೆಯನ್ನು ಪಡೆಯಲು ಅಪೇಕ್ಷಿಸಿ ಬಂದವನಲ್ಲವೇ? ಸ್ವಾಮಿಯವರಿಗೆ ದಾಸನಾದ ಹನುಮಂತನಲ್ಲವೇ "ರಾಜ್ಯಂ ಪ್ರಾರ್ಥಯಮಾನಶ್ಚ" ಎಂದು ಈ ವಿಭೀಷಣನಿಗಿರುವ ಸ್ಥಿತಿಯನ್ನು (ಲಂಕೆಯಲ್ಲಿ ತಿಳಿಸಿರುವ ವಿಷಯಗಳನ್ನು) ಸ್ಪಷ್ಟವಾಗಿ ತಿಳಿಸಿ, ತನ್ನ ಆಸೆಗಳನ್ನು ಮೊದಲು ಪ್ರಕಟ ಪಡಿಸಿರುತ್ತಾರೆ. ಆದ್ದರಿಂದ ಇವನು ಸ್ವೀಕಾರ ಮಾಡಲು ಯೋಗ್ಯನಲ್ಲ ಎನ್ನುತ್ತಾನೆ.

ಇದಕ್ಕೆ ಶ್ರೀ ರಾಮಚಂದ್ರನು ಹೇಳಿದ ಮಾತು "ತವಾಸ್ಮೀತಿ ಚ ಯಾಚತೇ" ಹನುಮಂತನು ರಾವಣನ ಎದುರಿಗೆ ನಮ್ಮ ಹಿರಿಮೆಯನ್ನು ಹೇಳುವಾಗ, ಆ ರಾವಣನು ಅದನ್ನು ಸಹಿಸಲಾರದೆ ಆ ಹನುಮಂತನನ್ನು ಕೊಲ್ಲಬೇಕೆಂದು ತನ್ನ ಸೇವಕರಿಗೆ ಆಜ್ಞೆ ಮಾಡಿದನು. ಆ ಸಮಯದಲ್ಲಿ ಇದ್ದ ವಿಭೀಷಣನು "ದೂತನನ್ನು ಕೊಲ್ಲಬಾರದು" ಎಂದು ತಡೆದನು. ಆ ರೀತಿ ತಡೆದು ತನಗೆ ಒಳ್ಳೆಯದನ್ನು ಮಾಡಿರುವವರನ್ನು ಅರಿತ ಹನುಮಂತನು ಲಂಕಾ ರಾಜ್ಯವನ್ನು ವಿಭೀಷಣನಿಗೆ ಕೊಡಬೇಕೆಂದು

ತಾನು ಅಪೇಕ್ಷಿಸಿ "ರಾಜ್ಯಂ ಪ್ರಾರ್ಥಯೇ ಪರಂತಪ" ಎಂದು ಹೇಳಿರುವನೇ ಹೊರತು ವಿಭೀಷಣನು ಸಾಮ್ರಾಜ್ಯವನ್ನು ಅಪೇಕ್ಷಿಸಲಿಲ್ಲ.

ಅನಂತರವೂ ನಮ್ಮ ತಮ್ಮನಾದ ಲಕ್ಷ್ಮಣನು ನಮ್ಮನ್ನು ಅಪೇಕ್ಷಿಸಿ, ನಮ್ಮನ್ನು ಅಗಲದೆ ನಮ್ಮೊಂದಿಗೆ ಇದ್ದು ನಮಗೆ ಮನಸ್ಸಂತೋಷವಾಗುವ ಹಾಗೆ, ನಮ್ಮನ್ನೇ ಶ್ರೇಷ್ಠ ಫಲವಾಗಿ ಪಡೆಯುತ್ತಾನೋ ಹಾಗೆಯೇ ಈ ವಿಭೀಷಣನೂ ಸಹ ನಮ್ಮನ್ನೇ ಶ್ರೇಷ್ಠ ಫಲವಾಗಿ ಅಪೇಕ್ಷಿಸಿ ನಮಗೇ ಸೇವೆ ಮಾಡಲು ಬಂದವನಾಗಿರುತ್ತಾನೆ (ತವ, ಚ, ಅಸ್ಮಿ ಇತಿ ಯಾಚತೇ) ಎನ್ನುವ ಪದಗಳನ್ನು "ಚ", ಎನ್ನುವ ನುಡಿಯನ್ನು "ಏ" ವಕಾರ ವಸ್ತುವಿನಲ್ಲಿ ತೆಗೆದುಕೊಂಡು ನೋಡಿದ, "ಶ್ರೀ ರಾಮನಾಗಿರುವ ನಿನಗೆ, ದಾಸನಾಗಿರುತ್ತೇನೆ. ಎಂದು ಅಪೇಕ್ಷಿಸುವವನು "ಪುರುಷ" ಆದಕ್ಕಾಗಿ ಎನ್ನುವ ಏನ್ನು ಇಲ್ಲಿ ದೊರೆಯುತ್ತದೆಯಲ್ಲವೇ ?

ಇದನ್ನು ಕೇಳಿದ ಸುಗ್ರೀವನು ನಂತರವೂ ಶ್ರೀ ರಾಮನನ್ನು ಕುರಿತು "ಹೇ ರಾಮಾ! ವಿಭೀಷಣನ ಶರಣಾಗತಿ ನ್ಯಾಯ ವಿರುದ್ಧವಾದುದು" ಎಂದು ನಾನು ಹೇಳಿದ್ದಕ್ಕೆ ನೀನು ಉತ್ತರವನ್ನು ತಿಳಿಸಿದೆ. ನೀನು "ಅನುಗ್ರಹಿಸುವ ಫಲ ಯಾವುದು" ಎಂದನು.

ಇದನ್ನು ಕೇಳಿದ ಶ್ರೀ ರಾಮಚಂದ್ರನು "ದೇವತೆಗಳು ಮನುಷ್ಯರು ಮುಂತಾದ ಎಲ್ಲಾ ಜಂತುಗಳಿಂದಲೂ, ಭಯವನ್ನು ದೂರಗೊಳಿಸಿ ಒಳ್ಳೆಯದನ್ನುಂಟು ಮಾಡುತ್ತೇನೆ," ಎಂದು ಹೇಳಿ ಈ ಪ್ರಪಂಚದಲ್ಲಿರುವವರೆಲ್ಲರಿಗೂ ದುಃಖ ನಿವೃತ್ತಿಯಾಗಿ ಸುಖವನ್ನುಂಟು ಮಾಡುವುದು ನಮಗೇ ಸೇರಿದ ಧರ್ಮವಲ್ಲವೇ! ಸುಗ್ರೀವಾ ಇದನ್ನು ನೀನು ಪಾಲಿಸಿದರೆ ಉತ್ತಮ" ಎಂದು ಹೇಳಿರುತ್ತಾನೆ. (ಅಭಯಂ ಸರ್ವ ಭೂತೇಭ್ಯಃ ದದಾಮಿ ಏತದ್ವ್ರತಂ ಮಮ).

ಈ ರೀತಿ ತನ್ನ ದೃಢವಾದ ಸಂಕಲ್ಪವನ್ನು ಪ್ರಕಟ ಪಡಿಸಿದ ಸ್ಥಳದಲ್ಲಿಯೂ, ಸುಗ್ರೀವನಿಗೆ ಸಮಾಧಾನವಾಗಲಿಲ್ಲ. ಆ ಸಮಯದಲ್ಲಿ ತನ್ನ "ಮಿಡುಕ್ಕೈಯುಂ" ಸಾಮರ್ಥ್ಯವನ್ನು ಅವನ ಮನಸ್ಸಿಗೆ ತಿಳಿಯುವ ಹಾಗೆ ಶೋಕ ನಿವೃತ್ತಿಯಾಗಲು ಹೇಳುತ್ತಾನೆ.

"ಪಿಶಾಚಾನ್ ದಾನವಾನ್ ಯಕ್ಷಾನ್ ಪೃಥಿವ್ಯಾಂ ಚೈವ ರಾಕ್ಷಸಾನ್ ।

ಅಂಗುಲ್ಯಗ್ರೇಣ ತಾನ್ ಹನ್ಯಾಮಿಚ್ಛನ್ ಹರಿಗಣೇಶ್ವರ" ॥ ಎನ್ನುವುದು ದೃಢತೆಯನ್ನು ತಿಳಿಸುವ ವಾಕ್ಯಗಳು.

ಇದರ ತಾತ್ಪರ್ಯ :- "ಸುಗ್ರೀವ! ಪಿಶಾಚಿಗಳನ್ನೂ, ರಾಕ್ಷಸರುಗಳನ್ನೂ, ಅಸುರರುಗಳನ್ನೂ ಈ ಭೂಮಿಯಲ್ಲಿರುವ ರಾಕ್ಷಸರುಗಳನ್ನೂ ಇವರೆಲ್ಲರನ್ನು ನಾಶ ಮಾಡುವುದಕ್ಕೆ ನಮ್ಮ ಬಲವೆಲ್ಲಾ ಬೇಡ, ಆಯುಧವೂ ಬೇಡ, ನನ್ನ ಕಿರು ಬೆರಳೂ ಬೇಡ, ಕಿರುಬೆಟ್ಟಿನ ತುದಿಯೇ ಸಾಕು. ಆದರೆ ನಮ್ಮ ವಿರೋಧಿಗಳ ಗುಂಪು ಅಳಿಯದೆ ಇರುವು

ದೇತಕ್ಕೆ ? ಎನ್ನಬಹುದು. ಪ್ರೇಮದಿಂದಲ್ಲ, ನಾನು ಮಾಡಬೇಕೆಂದು ಸಂಕಲ್ಪಿಸಿಲ್ಲ, ಹಾಗಿದ್ದದ್ದರಿಂದ ಆ ಗುಂಪು ನಾಶವಾಗದೆ ಇರಲು ಕಾರಣ.

ನನ್ನ ಪ್ರಾಣವನ್ನು ತೊಂದರೆ ಗೀಡು ಮಾಡಿದ ರಾವಣನನ್ನು ಕೊಲ್ಲದೆ ಇರಲು ಕಾರಣವೇನು ? ಎಂದು ಕೇಳಬಹುದು. ಈ ವಿಭೀಷಣನ ಹಾಗೆ ಜೀವರೊಂದಿಗೆ ತಲೆ ಬಾಗಿದರೆ ಅವನೂ, ಅವನನ್ನು ಸೇರಿದವರೂ ಬಾಳಬಹುದಲ್ಲವೆ ? ಇದೇ ಆ ರೀತಿ ಇರಲು ಕಾರಣವಾಗಿದೆ. ವಾಲಿಯನ್ನು ಹೊಡೆದು ಸಾಯಿಸಿದಾಗ ತಾನೇ ಕಿಷ್ಕಿಂಧೆಯ ಸಾಮ್ರಾಜ್ಯ ವನ್ನು ನೀನು ಪಡೆದು ವಾನರ ಸೈನ್ಯಕ್ಕೆ ರಾಜನಾದದ್ದು, ಎನ್ನುವುದಾಗಿದೆ. ಇಲ್ಲಿ ಕೆಳ ಕಂಡಂತೆ ಸತ್ಯವನ್ನು ಕಾಣತಕ್ಕದ್ದು ಯಾವನು ತನ್ನ ಇಚ್ಛೆಯಿಂದ ಈ ಪ್ರಪಂಚವನ್ನು ಸೃಷ್ಟಿಸಿ, ಸ್ಥಿತಿಯಲ್ಲಿಟ್ಟು ಸಂಹಾರ ಮಾಡುತ್ತಾನೋ, ಅವನೇ ಅತ್ಯಂತ ಶ್ರೇಷ್ಠದೈವ '' ಎನ್ನುವುದು ವೇದಾಂತಗಳ ಸತ್ಯ ಸಂಗತಿಯಾಗಿರುತ್ತದೆ. ಆ ರೀತಿ ಸರ್ವಶ್ರೇಷ್ಠದೈವ ಶ್ರೀ ರಾಮಚಂದ್ರ ಎನ್ನುವುದನ್ನು ಈ ಪ್ರಸಂಗ ತಿಳಿದೇ ಇದೆ. ಆ ರಾಮಚಂದ್ರನಿಗೆ '' ಈ ರಾವಣನನ್ನೂ ಲಂಕೆಯನ್ನೂ ನಾಶಮಾಡುವುದು ವಿಷಯವೇ ''.

ದೇವತೆಗಳ ಬೇಡಿಕೆಗೆ ವಶಪಟ್ಟು, ತನ್ನ ಹಿರಿಮೆಯನ್ನು ಇತರರು ತಿಳಿಯದೆ ಇರುವಂತೆ, ಮಾನವ ಶರೀರದಂತಹ ತನ್ನ ಶರೀರವನ್ನು ಮರೆಸಿಕೊಂಡಿರುವವನಾದ, ರಾವಣ ವಧೆಯಾದ ನಂತರವೂ, ಬ್ರಹ್ಮ, ಶಿವ, ಮೊದಲಾದವರು ಹೇ ರಾಮಾ ! ನೀನು ನಾರಾಯಣನೆಂದು ನಿಜವನ್ನು ತಿಳಿದು ಹೇಳುವಾಗ ತನ್ನನ್ನು ಮನುಷ್ಯನೆಂದೇ ಹೇಳಿ ಕೊಂಡವನೂ, ಪರದೇವತೆಯೂ, ಪರಮ ಪುರುಷನೂ ಆದ ಶ್ರೀ ರಾಮಚಂದ್ರನು ತಾನಾಗಿಯೇ ಇರುವ ಧರ್ಮವನ್ನು ಸ್ಥಾಪಿಸುವ ಸ್ಥಳದಲ್ಲಿ '' ಮಿತ್ರಭಾವೇನ '' ಎನ್ನುವ ಮಾತಿನ ಮುಖಾಂತರ ತನ್ನ ದೃಢವಾದ ಅಭಿಪ್ರಾಯವನ್ನು ಹೇಳಿರುವುದರಲ್ಲಿಯೇ ಇಲ್ಲದೆ ತನ್ನ ಇಚ್ಛೆಯಿಂದಲೇ ಈ ಪ್ರಪಂಚವನ್ನು ಸೃಷ್ಟಿಸಿ, ಪಾಲಿಸಿ, ನಾಶಮಾಡಲು ಸಮರ್ಥನಾದವನಿಗೆ ಲಂಕೆಯನ್ನೂ, ರಾವಣನನ್ನೂ ಸಂಹಾರ ಮಾಡಲು ಕಷ್ಟವೇ ? ತನಗೆ ಇರುವ ಶ್ರೇಷ್ಠ ಹಿರಿಮೆಯನ್ನು ಪ್ರಕಟ ಪಡಿಸಿ ಹೇಳಿ ಈ ರೀತಿಯಿಂದ ''ಸುಗ್ರೀವ ನಾಗಿರುವ ಆಶ್ರಿತನಿಗೆ ತಾನು ವಶಪಟ್ಟಿರುವುದು '' ಎನ್ನುವುದು ತನಗಿರುವ ಶ್ರೇಷ್ಠತೆ ಯನ್ನು ಕಳೆದುಕೊಳ್ಳದೆ ತಡೆದು, ತನಗೆ ಸೇರಿದ ಧರ್ಮದ ಮಹಿಮೆಯನ್ನು ಸ್ಥಾಪಿಸಿ ವಿಭೀಷಣನನ್ನು ಕಾಪಾಡಿದ ಚರಿತ್ರೆಯು ಅತ್ಯಂತ ಆಶ್ಚರ್ಯಕರವಾದುದಲ್ಲವೇ ?

ಶ್ರೀ ರಾಮನು ಈ ರೀತಿ ಹೇಳಿದ ನಂತರವೂ

'' ಆನಯೈನಂ ಹರಿಶ್ರೇಷ್ಠ ದತ್ತಮಸ್ಯಾಭಯಂ ಮಯಾ ।

ವಿಭೀಷಣೋವಾ ಸುಗ್ರೀವ ಯದಿವಾ ರಾವಣ ಸ್ವಯಮ್ '' ಎನ್ನುವುದು ಈ ಮಾತುಗಳ ಅರ್ಥವನ್ನು ನಿರ್ದಿಷ್ಟವಾದ ವಿಷಯದಲ್ಲಿ ನ್ಯಾಯವಾಗಿ ಇಲ್ಲಿ ನೋಡೋಣ '' ಸುಗ್ರೀವನೇ ! ತನ್ನ ಆಗಮನವನ್ನು ರಾಘವನಾಗಿರುವ ನನ್ನ ಹತ್ತಿರ ತಿಳಿಸುವಂತೆ ಈ ವಿಭೀಷಣನು ಬೇಡಿಕೊಂಡಿರುವನಲ್ಲವೆ ! ಇವನ ಮನಸ್ಸಿನ ಸಂಕಟ ದೂರವಾಗಿ ನಮ್ಮ ಹತ್ತಿರವೇ ಸೇರಲು ನಾವು ಅವನನ್ನು ಸ್ವೀಕರಿಸುವುದಕ್ಕೆ ನೀನು ಹೋಗಿ ಅವನನ್ನು

ಕರೆವರಲ್ಲವೆ ? ಆದ್ದರಿಂದ ಅವನನ್ನು ಕರೆದುಕೊಂಡು ಬರಬೇಕು. ತ್ಯಜಿಸಬೇಕಾದ ಎಲ್ಲಾ ವಸ್ತುಗಳನ್ನು ಬಿಟ್ಟು ನಮ್ಮನ್ನು ಶರಣು ಹೊಂದಿರುವ ಇವನಿಗೆ ನಮ್ಮಿಂದಾದ ಒಳ್ಳೆಯದನ್ನು ಮಾಡಬೇಕು.

ಹೀಗೆ ಹೇಳಿದನಂತರ ವಿಭೀಷಣನನ್ನು ಕರೆದುಕೊಂಡು ಬರಲು ಹೋದ ಸುಗ್ರೀವನನ್ನು ಕುರಿತು ಪುನಃ ಶ್ರೀ ರಾಮನು ಹೇಳಿದ ವಿಷಯು ಯಾವುದು ? ವಿಭೀಷಣನನ್ನು ತಾನೇ ಕರೆದುಕೊಂಡು ಬರುವಂತೆ ಹೇಳಿದನೆಂದಲ್ಲವೆ ?–ಹಿಂತಿರುಗಿದ ರಾವಣನೇ ಆಗಿದ್ದರೂ ಕರೆದುಕೊಂಡು ಬರಬೇಕು. ವಿಭೀಷಣನನ್ನು ನಮ್ಮವನನ್ನಾಗಿ ಮಾಡಿಕೊಂಡದ್ದೇ ಆದರೆ, ನಮ್ಮ ಹತ್ತಿರ ಪುಣ್ಯವಂತನನ್ನು ಪಡೆದುಕೊಂಡವರಾಗುತ್ತೇವೆ. ಈ ವಿಭೀಷಣನೊಂದಿಗೆ ಬಂದ ನಾಲ್ಕು ರಾಕ್ಷಸರೂ ರಕ್ಷಿಸಲ್ಪಡುತ್ತಾರೆ. ಬಂದವನು ಸತ್ಯತೆಯಲ್ಲಿ ರಾವಣನಾಗಿದ್ದರೆ, ಆ ರಾವಣನನ್ನು ಸ್ವೀಕರಿಸಿದರೆ, ಶ್ರೀ ರಾಮನಾದ ನನಗೆ ಅತಿಶಯವಾಗುತ್ತದೆ. ಲಂಕೆಯಲ್ಲಿರುವ ಎಲ್ಲಾ ರಾಕ್ಷಸರೂ ಬದುಕುವರೆಂದು ಅಪೇಕ್ಷಿಸುವವರಾಗುತ್ತೇವೆ. ನಮಗೆ ಬರುವ ಎಲ್ಲಾ ಹಿರಿಮೆಯೂ ಪ್ರಿಯ ಮಿತ್ರನಾದ ನಿನ್ನದಲ್ಲವೇ, ಎನ್ನುವ ಹಾಗೆ ಹೇಳಿರುವ ಮಾತಿನ ನಿಜವಾದ ಅಭಿಪ್ರಾಯವಾಗಿದೆ.

ಇಲ್ಲಿ ಸುಗ್ರೀವನು ಒಳಪಟ್ಟದ್ದು. ಶ್ರೀ ರಾಮಚಂದ್ರನು ತಾನೇ ಸ್ವತಃ ವಿಭೀಷಣನನ್ನು ಕರೆದು ಸ್ವೀಕರಿಸದೆ, ಸುಗ್ರೀವನನ್ನು ಕಳುಹಿಸಿಯೇ ಕರೆದುಕೊಂಡು ಬರಲು ಆಜ್ಞೆ ಮಾಡಿರುವುದಕ್ಕೆ ಅಭಿಪ್ರಾಯವೇನು ಎಂದರೆ,

'' ಶ್ರೀ ರಾಮನಿಗೆ ಆಶ್ರಿತ ಪಾರತಂತ್ರ್ಯ '' ಎಂಬ ಹಿರಿಮೆ ಉಂಟು. ಅದು ಏನೆಂದರೆ ತನ್ನನ್ನು ಆಶ್ರಯಿಸಿದವನಿಗೆ ವಶಪಟ್ಟಿರುವುದಂತೆ. ಎಂದು ಈ ಪ್ರಬಂಧದಲ್ಲಿ ಆಗಾಗ್ಗೆ ಹೇಳಿರುತ್ತೇವೆ ಅಲ್ಲವೇ ? ತಾನಾಗಿಯೇ ವಿಭೀಷಣನನ್ನು ಕರೆದು ಸ್ವೀಕರಿಸುವಾಗ, ಆ ಹಿರಿಮೆ ಅವನಲ್ಲಿ ಸ್ಥಿರಪಟ್ಟಿರುವುದೋ ; ನಾಶವಾಗಿ ಅಳಿದು ಹೋಗುವುದಲ್ಲವೇ ? ಆದ್ದರಿಂದ ಸುಗ್ರೀವನನ್ನು ಕಳುಹಿಸಿಯೇ ಸ್ವೀಕರಿಸಿದನು. ಇದು ನಮ್ಮ ಆಚಾರ್ಯರುಗಳಿಂದಲೇ ಇಲ್ಲಿ ಸಮಾಧಾನವಾಗಿ ಹೇಳಿರುವಂತಹ ಒಂದು ಸತ್ಯ ಸಂಗತಿ.

ಅನಂತರವೂ ವಿಭೀಷಣನು ಶ್ರೀ ರಾಮಚಂದ್ರನಲ್ಲಿ ಅತ್ಯಧಿಕ ಪ್ರೀತಿ ಉಳ್ಳವನು '' ಆ ವಿಭೀಷಣನನ್ನು ಕೊಲ್ಲಬೇಕು '' ಎಂದು ಸುಗ್ರೀವನು ಹೇಳಿದ್ದು ಆ ಸುಗ್ರೀವನಿಗೆ ಮಹಾಪಾಪವಲ್ಲವೆ ? ತನ್ನನ್ನು ಬಿಟ್ಟು ಬಿಟ್ಟು ತನ್ನ ದಾಸರ ಹತ್ತಿರ ಪ್ರೇಮ ಮಾಡುವುದು ಒಳ್ಳೆಯದು ಎನ್ನುವುದು ಆ ರೀತಿ ಪ್ರೇಮ ಮಾಡದೆ ಇದ್ದರೆ '' ಮಹಾಪಾಪ '' ಎನ್ನುವುದೂ, ಆ ಪಾಪವುಳ್ಳವನು ಮಾತ್ರವಲ್ಲದೆ, ಅವನೊಂದಿಗೆ ವ್ಯವಹಾರವನ್ನು ಇಟ್ಟುಕೊಂಡಿರುವ ಈ ಪ್ರಪಂಚವೂ ನಾಶವಾಗಿ ಬಿಡುತ್ತದೆ ಎನ್ನುವುದೂ ಪರಮ ಪುರುಷನಿಂದ ಹೇಳಲ್ಪಟ್ಟ ಶ್ರೇಷ್ಠ ಸಂಗತಿ.

ಸತ್ಯತೆಯು ಈ ರೀತಿ ಇರಲು '' ಸುಗ್ರೀವನು ವಿಭೀಷಣನನ್ನು ಕೊಲ್ಲಬೇಕು '' ಎಂದು ಹೇಳಿರುವುದು ಅತ್ಯಗಾಧವಾದ ಮಹಾಪಾಪವಲ್ಲವೇ ? ಶ್ರೀ ರಾಮ ಪ್ರಭುವು ಆಶ್ರಿತರಲ್ಲಿ ಅತ್ಯಧಿಕ ಪ್ರೇಮವುಳ್ಳವನಾಗಿರುವುದರಿಂದಲೂ, ಸುಗ್ರೀವನು ಆ ಆಶ್ರಿತ

ರಲ್ಲಿ ಒಬ್ಬನಾದ್ದರಿಂದಲೂ, ಆ ಸುಗ್ರೀವನ ಪಾಪ ನಿವೃತ್ತಿಯಾಗಿ, ಸಖ್ಯವನ್ನು ಪಡೆಯಬೇಕೆಂಬ ಇಚ್ಛೆಯುಳ್ಳವನಾಗಿ ಆ ಸುಗ್ರೀವನನ್ನೇ ಕರೆದುಕೊಂಡು ಬರಲು ಆಜ್ಞಾಪಿಸಿದನು ಎನ್ನುವುದು ಇಲ್ಲಿ ಒಂದು ನಿಜವಾದ ತಾತ್ಪರ್ಯ.

ಮತ್ತೂ ಇಲ್ಲಿ ತಿಳಿಯಬೇಕಾದ ಒಂದು ಸತ್ಯ ಉಂಟು. ಭಗವಂತನನ್ನು ಜೀವನು ಪಡೆಯುವ ಪುರುಷಾರ್ಥ "ಸ್ವಗತ ಸ್ವೀಕಾರ" ಎನ್ನಲ್ಪಡುತ್ತದೆ. ಭಗವಂತನು ಒಬ್ಬ ಚೇತನನನ್ನು ತನಗೇ ಶೇಷವೆಂದು ನಿರೀಕ್ಷಿಸಲ್ಪಡುವವನ ಹಾಗೆ ಅಪೇಕ್ಷಿಸಿ, ಅವನೇ ಇವನನ್ನು ಮೇಲೆ ಬಿದ್ದು ಹೊಂದುವುದು ಎನ್ನುವುದನ್ನು "ಪರಗತ ಸ್ವೀಕಾರ" ಎಂದು ವಿವರಿಸುತ್ತಾನೆ.

ಇಲ್ಲಿ ಮೊದಲಿನದಕ್ಕೆ "ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೆ" ಎನ್ನುವ ವಾಕ್ಯವೂ, ನಂತರದಕ್ಕೆ "ಯಮೇವೈಷ ವೃಣುತೇ ತೇನ ಲಭ್ಯಃ"—ಯಾವ ಚೇತನನನ್ನು ಭಗವಂತನೇ ಅನುಗ್ರಹಿಸಿ ಅಪೇಕ್ಷಿಸುತ್ತಾನೋ, ಅವನಿಂದ ಆ ಭಗವಂತನನ್ನು ಪಡೆಯಬಹುದು ಎನ್ನುವ ವಾಕ್ಯವೂ ತಕ್ಕ ಉದಾಹರಣೆಗಳಾಗಿವೆ.

"ಜೀವನು ಭಗವಂತನನ್ನು ಪಡೆಯುವಾಗ, ಹೇಗೆ ಮಹಾಲಕ್ಷ್ಮಿಯನ್ನು ಪುರುಷಕಾರವಾಗಿ ಮುಂದಿಟ್ಟುಕೊಂಡು ಪಡೆಯುತ್ತಾನೋ ಹಾಗೆಯೇ ಭಗವಂತನೂ ಒಬ್ಬ ಚೇತನನನ್ನು ತಾನಾಗಿಯೇ ಸ್ವೀಕರಿಸುವಾಗ ಮಹಾಲಕ್ಷ್ಮಿಯಾದ ಶ್ರೀದೇವಿಯನ್ನೋ ಅಲ್ಲವೆ ಮಾತೆಯ ಸ್ಥಾನದಲ್ಲಿರುವ ಒಬ್ಬ ಭಾಗವತೋತ್ತಮನನ್ನೋ ಮುಂದಿಟ್ಟುಕೊಂಡೇ ಸ್ವೀಕರಿಸುತ್ತಾನೆ ಎಂಬುದೂ ಸಹ ಒಂದು ಶ್ರೇಷ್ಠ ಸತ್ಯ.

ಈ ರೀತಿಯನ್ನು ಈ ರಾಮಾಯಣದಲ್ಲಿ ಅನೇಕ ಸ್ಥಳಗಳಲ್ಲಿ ನಾವು ಕಾಣಬಹುದು.

ಸೀತಾದೇವಿಯನ್ನು ಮುಂದಿಟ್ಟು ಶೃಂಗಿಬೇರಪುರದಲ್ಲಿ ಗುಹನನ್ನು ಸ್ವೀಕರಿಸಿರುವುದನ್ನು ನಾವು ಕಾಣಬಹುದು.

"ಗುಹೇನ ಸಹಿತೋ ರಾಮಃ" ಎನ್ನುವ ವಾಕ್ಯ ಇಲ್ಲಿ ನೋಡತಕ್ಕದ್ದು. ಈ ವಾಕ್ಯದಲ್ಲಿ ಗುಹನು ಶ್ರೀ ರಾಮಚಂದ್ರನೊಡನೆ ಸೇರಿದನು ಎಂದು ಹೇಳಿಲ್ಲ. ಶ್ರೀ ರಾಮಚಂದ್ರನು ಗುಹನು ಇರುವ ಕಡೆ ದಯಮಾಡಿಸಿ ಆ ಗುಹನೊಂದಿಗೆ ಸೇರಿದನು ಎಂದೇ ಹೇಳಿದೆ. ಇದರಿಂದ "ಭಗವಂತನು ಚೇತನನನ್ನು ಅವನಿರುವ ಸ್ಥಳದಲ್ಲಿ ದಯಮಾಡಿಸಿ ಪ್ರೀತಿಸಿ ಸ್ವೀಕರಿಸುತ್ತಾನೆ ಎನ್ನುವುದು ಸುಸ್ಪಷ್ಟ. ಹೀಗೆ ಸ್ವೀಕರಿಸುವಲ್ಲಿ ಸೀತಾದೇವಿಯನ್ನು ಮುಂದಿಟ್ಟುಕೊಂಡೇ ಸ್ವೀಕರಿಸಿದನು, ಶ್ರೀ ರಾಮಚಂದ್ರ ಎನ್ನುವುದನ್ನು ತಿರುಮಂಗೈ ಆಳ್ವಾರವರು "ಮಾಳೈಪರ್ಣಮಡನೋಕ್ಕಿ" ಎನ್ನುವ ವಾಕ್ಯದಿಂದ ಅನುಗ್ರಹಿಸಿರುವುದನ್ನು ಕಾಣಬಹುದು.

ಈ ಗುಹನ ಚರಿತ್ರೆಯು ಹಾಗೆಯೇ ಈ ವಿಭೀಷಣನ ಚರಿತ್ರೆಯೂ ಇದೆ "ವಿಭೀಷಣೇನಾಶು ಜಗಾಮಸಂಗಮಮ್" ಎನ್ನುವುದು ಇಲ್ಲಿ ವಾಕ್ಯ. ಈ ವಾಕ್ಯದಲ್ಲಿಯೂ ಶ್ರೀ ರಾಮಚಂದ್ರನೂ ವಿಭೀಷಣನೊಂದಿಗೆ ಸೇರಿದ ಹಾಗೆಯೇ ಹೇಳಿರುತ್ತದೆ. ಇಲ್ಲಿ ಸೀತಾದೇವಿಯ ಸ್ಥಾನದಲ್ಲಿರುವ ಸುಗ್ರೀವನನ್ನು ಮುಂದಿಟ್ಟುಕೊಂಡು ವಿಭೀಷಣ

ನನ್ನು ಸ್ವೀಕರಿಸುವುದು ಸತ್ಯ "ಅನಘ್ಯಂ ಪರಿತ್ಯಜ್ಯ" ಎನ್ನುವ ಮಾತಿನಿಂದ ಸುಸ್ಪಷ್ಟ.

ಆದರೆ "ಜೀವಾತ್ಮಾ ಭಗವಂತನನ್ನು ಪಡೆಯುವಾಗ ತಾನು ಅಪಾರ ದೋಷವುಳ್ಳವನಾಗಿರುವುದರಿಂದ ಪುರುಷಕಾರಭೂತೆಯಾದ ಮಹಾಲಕ್ಷ್ಮಿಯನ್ನು ಮುಂದಿಟ್ಟುಕೊಳ್ಳುವುದು ಆ ದೋಷಗಳನ್ನು ಸಹಿಸುವುದು" ಎನ್ನಬಹುದು. ಭಗವಂತನು ಚೇತನನನ್ನು ತನಗಾಗಿ ನಿರೀಕ್ಷಿಸುವುದಾಗಿ ಅಭಿಪ್ರಾಯ ಪಟ್ಟು ತಾನಾಗಿಯೇ ಸ್ವೀಕರಿಸುವಾಗ ದೇವಿಯನ್ನೋ ಅಥವಾ ಆಸ್ಥಾನದಲ್ಲಿರುವ ಒಬ್ಬ ಭಾಗವತೋತ್ತಮನನ್ನೋ ಮುಂದೆ ಕಳುಹಿಸುವುದು ಯಾವ ಫಲವನ್ನು ಅಪೇಕ್ಷಿಸಿಯೋ ಈ ಪರಮಾತ್ಮನಿಗೆ ಕಿಂಚಿತ್ತೂ ದೋಷವಿಲ್ಲವಲ್ಲವೇ ? ಎಂದು ಕೆಲವರಿಗೆ ಇಲ್ಲಿ ಸಂದೇಹ ಉಂಟಾಗಬಹುದು ಅದಕ್ಕೆ ಪರಿಹಾರ :–

ಭಗವಂತನಿಗೂ ಕೊರತೆ ಉಂಟು. ಆ ಪಾಪವು ಯಾವುದು ಎಂದರೆ ಭಗವಂತನಿಗೂ ಚೇತನನಿಗೂ ಇರುವ ಸಂಬಂಧ ಯಾವತ್ತಿಗೂ ಉಂಟು. ನಾಶಮಾಡಿದರೂ ಅಳಿಯದೆ ಇರುವುದೆ ಈ ವಿಧವಾದ ಸಂಬಂಧವನ್ನೂ ತನ್ನ ಕರುಣಾಭರಿತವಾದ ಗುಣಗಳನ್ನು ಇದುವರೆಗೂ ನೋಡದೆ ಈ ಚೇತನನು ಮಾಡಿದ ಪಾಪಗಳನ್ನು ಕಂಡು ಇವನನ್ನು ತೊರೆದು ಸಂಸಾರದಲ್ಲಿ ಇಟ್ಟಿರುವವನಾದ್ದರಿಂದ ಈಗ ಮುಂದೆ ಬಂದು ಸ್ವೀಕರಿಸಲು ಶಕ್ಯವಾಗಿದ್ದರೂ, ಪರಮಾತ್ಮನನ್ನು ಈ ಚೇತನನು ತಿರಸ್ಕರಿಸಿ ಅಗಲಬಹುದಲ್ಲವೆ ?

ಈ ರೀತಿ ಆಗಲದೆ ಈ ಚೇತನನು ತನ್ನ ವಶದಲ್ಲಿ ಬರಬೇಕಾದರೆ, ಭಗವಂತನಿಗೂ ಮಹಾಲಕ್ಷ್ಮಿಯನ್ನೋ ಅಥವಾ ಅವರ ಸ್ಥಾನದಲ್ಲಿರುವವರನ್ನೋ ಮುಂದೆ ಕಳುಹಿಸುವುದು ಹಿತಕರವಾಗಿರುತ್ತದೆ.

ಇಲ್ಲಿ "ಇವನು ಮುಂದೆ ಮಾಡುವವರನ್ನು ಅವನು ಮುಂದಿಡುತ್ತಾನೆ ಎನ್ನುವುದನ್ನು ಅಭಯಪ್ರಧಾನದಲ್ಲಿಯೂ ಕಾಣಬಹುದು. ಇವರಿಬ್ಬರು ಮುಂದೆ ಮಾಡುವುದೂ ತಮ್ಮ ತಮ್ಮ ದೋಷಗಳನ್ನು ಶಮನಗೊಳಿಸುವುದಕ್ಕಾಗಿಯೇ" ಎನ್ನುವ ಪಿಳ್ಳೈಲೋಕಾಚಾರ್ಯರ ಸಿರಿನುಡಿಗಳನ್ನು ಸ್ಮರಿಸತಕ್ಕದ್ದು.

ಈ ರೀತಿ ಶ್ರೀ ರಾಮಚಂದ್ರನು ವಿಭೀಷಣನನ್ನು ತಾನಾಗಿಯೇ ಸ್ವೀಕರಿಸದೆ "ಸುಗ್ರೀವನನ್ನು ಕರೆದುಕೊಂಡು ಬಾ" ಎಂದು ಅನುಗ್ರಹಿಸಿರುವುದಕ್ಕೆ ಅನೇಕ ಸತ್ಯ ವಿಷಯಗಳನ್ನು ನೋಡಿದೆವು.

ಈ ಸ್ಥಳದಲ್ಲಿ ಸುಗ್ರೀವನು ಶ್ರೀ ರಾಮಚಂದ್ರನ ಅನುಮತಿಯಂತೆ ಕರೆದುಕೊಂಡು ಬರಲು ವಿಭೀಷಣನು ಬಂದು ಪರಮಾತ್ಮನಾದ ಶ್ರೀ ರಾಮನನ್ನು ಆಶ್ರಯಿಸಿ, ನಮಸ್ಕರಿಸಿ ಬಾಳಿದನೆಂಬುದು ಚರಿತ್ರಾರ್ಹವಾದ ಸತ್ಯ. ಇಲ್ಲಿ ಭಗವಂತನಾದ ಧರ್ಮವು ಸ್ಥಿರವಾಗಿರುವುದನ್ನು ಕಂಡೆವು ?

ಹಾಗೆ ಶ್ರೀದೇವಿಗೆ ಪತಿಯಾದ ಭಗವಂತನು ಈ ಪ್ರಪಂಚದಲ್ಲಿ ಮಾಡಿರುವ

ಅವತಾರಗಳಲ್ಲಿ ಸರ್ವಶ್ರೇಷ್ಠವಾದ ಅವತಾರ ರಾಮಾವತಾರ ಎಂಬುದೂ ಹಾಗೆ ಆ ಪರಮಾತ್ಮನು ಉತ್ಕೃಷ್ಟವಾದ ಅವತಾರ ಮಾಡಿದಾಗ ಅವನನ್ನು ಸ್ತುತಿಸುವ ವೇದವೂ ವಾಲ್ಮೀಕಿ ಮುನಿಯ ಹತ್ತಿರದಿಂದ ಶ್ರೀ ರಾಮಾಯಣವಾಗಿ ಅವತಾರ ಮಾಡಿದೆ.

ಆ ರಾಮಾಯಣವು ಅತ್ಯಧಿಕ ಶ್ರೇಷ್ಠತೆ ಉಳ್ಳದ್ದು. ಮೋಕ್ಷ ಪುರುಷಾರ್ಥಗಳನ್ನು ಅಪೇಕ್ಷಿಸುವವರು ಅವಶ್ಯವಾಗಿ ತಿಳಿದುಕೊಳ್ಳಬೇಕಾದ ವಿಷಯ ಐದು. ಅವು ಪರಮಾತ್ಮಾ, ಜೀವಾತ್ಮಾ, ಉಪೇಯ, ವಿರೋಧಿ, ಉಪಾಯ, ಎನ್ನುವುದು.

ನಾರಾಯಣನು ಪರಮಾತ್ಮನು. ಆ ಪರಮಾತ್ಮನಿಗೆ ಶೇಷನಾಗಿಯೂ, ಪರತಂತ್ರನಾಗಿಯೂ ಇರುವವನು ಜೀವನು. ಆ ಪರಮಾತ್ಮನ ಮನಸ್ಸಂತೋಷಗೊಳ್ಳುವಂತೆ (ಸೇವೆ) ಕೈಂಕರ್ಯವನ್ನು ಮಾಡುವುದೇ ಮೋಕ್ಷ ಪುರುಷಾರ್ಥವೆನ್ನುವ ಉಪೇಯ. ಆ ಪುರುಷಾರ್ಥವನ್ನು ಇದುವರೆಗೂ ಜೀವನು ಪಡೆಯಲಾರದಂತೆ ಅಡ್ಡಿಮಾಡಿರುವ ಅಜ್ಞಾನ ಮುಂತಾದ ವಿರೋಧಿ. ಈ ವಿರೋಧಿಯನ್ನು ದೂರಗೊಳಿಸುವುದಕ್ಕೆ ತಕ್ಕ ಸಾಧನ ಭಕ್ತಿ–ಪ್ರಪತ್ತಿಗಳು ಎಂದು ವೇದಾಂತವು ಹೇಳುತ್ತದೆ. ವೇದದ ಶ್ರೇಷ್ಠ ಅವತಾರವಾದ ರಾಮಾಯಣವು ವೇದಾಂತವು ಹೇಳುವ ಹಾಗೆ ಐದು ವಸ್ತುಗಳನ್ನು ಚೆನ್ನಾಗಿ ಪ್ರಕಟಪಡಿಸುತ್ತೆ. ವೇದಾಂತವು ಮಾತ್ರ ತಾನು ಅತ್ಯಧಿಕ ಶ್ರೇಷ್ಠ ಪ್ರಮಾಣವಾಗಿದ್ದೂ, ಈ ಐದು ವಸ್ತುಗಳನ್ನು ಸ್ವಲ್ಪ ಮಾತ್ರವೂ ಸಂದೇಹವಿಲ್ಲದೆ ತಿಳಿಯಪಡಿಸಲಾರದ್ದರಿಂದ ಆ ವೇದಾಂತವು ಮೀಮಾಂಸಾ ಶಾಸ್ತ್ರ, ಇತಿಹಾಸವಾದ ರಾಮಾಯಣ ಮುಂತಾದವುಗಳ ಸಹಾಯವನ್ನು ಅಪೇಕ್ಷಿಸುತ್ತದೆ.

ಮೀಮಾಂಸಾ ಶಾಸ್ತ್ರವು ಮಾಡುವ ಸಹಾಯ ಶ್ರೇಷ್ಠವಾಗಿದ್ದರೂ ವೇದಾವಿಗಳಿಗೆ ಮಾತ್ರ ಅದು ಉಪಯೋಗಕ್ಕೆ ಬರುತ್ತದೆ. ಶ್ರೀ ರಾಮಾಯಣವು ಮೇಲೆ ಹೇಳಿರುವ ಐದು ವಸ್ತುಗಳನ್ನು ಚೆನ್ನಾಗಿ ತಿಳಿಯಪಡಿಸುವುದಾಗಿದ್ದರೂ, ಶರಣಾಗತಿ ಎನ್ನುವ ಉಪಾಯವನ್ನೇ ಪ್ರಶಸ್ತವಾಗಿ, ಸ್ಪಷ್ಟವಾಗಿ ಹೇಳುವುದರಲ್ಲಿ ಅಧಿಕ ಅಭಿಲಾಷೆಯುಳ್ಳದ್ದಾಗಿದೆ. ಆದ್ದರಿಂದಲೇ

"ಶರಣಾಗತಿಶಾಸ್ತ್ರಮ್" ಎಂದು ಶ್ರೀ ರಾಮಾಯಣವು ಪ್ರಸಿದ್ಧಿ ಪಡೆದಿರುತ್ತದೆ. ಶರಣಾಗತಿ ಧರ್ಮವನ್ನು ಕುರಿತಾದ ಅನೇಕ ಸತ್ಯಗಳನ್ನು ಶ್ರೀ ರಾಮಾಯಣವು ಆಯಾ ಸ್ಥಳಗಳಲ್ಲಿ ವಿಸ್ತಾರವಾಗಿಯೂ, ಸ್ಪಷ್ಟವಾಗಿಯೂ, ಸುಂದರವಾಗಿಯೂ ವಿವರಿಸುತ್ತದೆ. ಈ ಪ್ರಬಂಧದ ಅನೇಕ ಭಾಗಗಳಲ್ಲಿ ತಿಳಿದುಕೊಳ್ಳಬಹುದು.

ಭಕ್ತಾಮೃತ

ಶ್ರೀ ರಾಮಾವತಾರವೆಂದರೆ ಶ್ರೀ ಪರಾಶರ ಭಟ್ಟರಿಗೆ ಅಪರಿಮಿತವಾದ ಪಕ್ಷಪಾತ. ಶ್ರೀ ರಾಮ ಪಕ್ಷಪಾತಿಗಳಾದ ಭಟ್ಟರು ತಮ್ಮ ಸಹಸ್ರನಾಮ ಭಾಷ್ಯದಲ್ಲಿ ರಾಮೋ ವಿರಾಮೋ ವಿರತಃ " ಇತ್ಯಾದಿಯಾದ ದಿವ್ಯನಾಮಗಳಿಗೆ ಮೊದಲು "ಪರರ್ಧಿಃ ಪರಮಸ್ಪಷ್ಟಃ" ಎನ್ನುವ ಸ್ಥಳದಲ್ಲಿ "ಇತೋಽಮೃತ ಸಂಜೀವನಂ ರಾಮಚರಿತಂ" ಎಂದು ಅನುಗ್ರಹಿಸಿರುವರು. ಪರರ್ಧಿಃ ಎನ್ನುವ ಶ್ರೇಷ್ಠವಾದ ಹೆಸರು ಮೊದಲಾದುದು ಮೃತಸಂಜೀವಿನಿಯಾದ ರಾಮ ಕಥೆಯನ್ನು ಹೇಳುತ್ತದೆ ಎನ್ನುವ ಹಾಗೆ ಪರರ್ಧಿಃ ಪರಮಸ್ಪಷ್ಟಃ ತುಷ್ಟಃ ಪುಷ್ಟಃ ಶುಭೇಕ್ಷಣಃ ರಾಮಃ ವಿರಾಮಃ ವಿರತಃ ಮಾರ್ಗಃ ನೇಯಃ ನಯಃ ಅನಯಃ ವೀರಃ ಶಕ್ತಿಮತಾಂಶ್ರೇಷ್ಠಃ ಧರ್ಮಃ ಧರ್ಮವಿದುತ್ತಮಃ " ಎನ್ನುವ ಹದಿನಾರು ದಿವ್ಯನಾಮಗಳು ರಾಮಚರಿತ್ರೆಯನ್ನು ತಿಳಿಸುತ್ತವೆಂಬುದು ಮನಸ್ಸಿಗೆ ಬಂದಿದ್ದರಿಂದ ಈ ಶ್ರೇಷ್ಠವಾದ ಹೆಸರುಗಳನ್ನು ತಿಳಿಸುವ ಮುಖಾಂತರ ಶ್ರೀ ರಾಮ ಗುಣಾನುಭವವನ್ನು ಮಾಡುತ್ತೇನೆ. ಆದ್ದರಿಂದಲೇ ಈ ಪ್ರಬಂಧಕ್ಕೆ "ಭಕ್ತಾಮೃತ" ಎಂದು ಹೆಸರು ಇಟ್ಟಿರುತ್ತೇನೆ.

1. ಪರರ್ಧಿಃ –ಪರಾಋದ್ಧಿಃ ಯಸ್ಯ ಸಃ–ಪರರ್ಧಿಃ–ಋದ್ಧಿಯಾದದ್ದು ಸಮೃದ್ಧಿ ಅತ್ಯಧಿಕ ಸಮೃದ್ಧಿಯುಳ್ಳವನು ಎಂಬಂತೆ. ಸಂಪತ್ತಿನಿಂದ ಕೂಡಿರುವವನೆಂದು ಆಳ್ವಾರ್‌ಗಳು ಅನೇಕ ಸ್ಥಳಗಳಲ್ಲಿ "ಶೆಲ್ವಂ ಮಲ್ಗುಡಿ ತಿರುವಿಣ್ಣಗರ್" "ಶೆಲ್ವಮ್ ಮಲ್ಲಿಯಮರ್ಕಣಂದ ತಿರುಕ್ಕೋಳೂರ್" "ಶೆಲ್ವಮಲ್ಗುಶೀರ್ ತಿರುಕುಡಂದೈ" ಎಂದು ವಿವರಿಸುತ್ತಾರೆ. ಈ ಸ್ಥಳಗಳಲ್ಲಿ ಕಲ್ಯಾಣಗುಣ ಸಮೃದ್ಧಿಯನ್ನೇ ಮುಖ್ಯವಾದ ಐಶ್ವರ್ಯವನ್ನಾಗಿ ವ್ಯಾಖ್ಯಾನಮಾಡಿ ಅನುಗ್ರಹಿಸುತ್ತಾರೆ.

"ಭವಾನ್ ಸರ್ವತ್ರೈವ ತು ಅಗಣಿತ ಮಹಾ ಮಂಗಳ ಗುಣಃ" ಎಂದು ಆಳ್ವಾರುಗಳು ಕೂರೇಶರ ಮಾತಿನಂತೆ ಹೇಳಿರುವ ಹಾಗೆ ಪರಮಾತ್ಮನ ರೂಪಗಳೆಲ್ಲದರಲ್ಲಿಯೂ ಗುಣಪೂರ್ತಿ ಕಡಿಮೆ ಇಲ್ಲದಿದ್ದರೂ ಶ್ರೀ ರಾಮಾವತಾರದಲ್ಲಿ ಮಾತ್ರ ಗುಣಪೌಷ್ಕಲ್ಯವನ್ನು ಅತ್ಯಧಿಕವಾಗಿ ಕಾಣಬಹುದಾಗಿದೆ. ಶ್ರೀ ರಾಮಾಯಣದಲ್ಲಿ ನೂಲು ಹಾಕಿ ಯಾವ ಸ್ಥಳದಲ್ಲಿ ನೋಡಿದರೂ ಅದೂ ಸ್ಥಳವೆಲ್ಲಾ ಗುಣಕೀರ್ತನ ಪ್ರಚುರವಾಗಿಯೇ ಕಂಡು ಬರುತ್ತದೆ.

ಶ್ರೀ ರಾಮಾಯಣದ ಪ್ರಾರಂಭವೇ ಗುಣಗಳನ್ನು ಕುರಿತಾದ ಪ್ರಶ್ನೋತ್ತರ. ಚಕ್ರವರ್ತಿಯು ಮಗನಿಗೆ ರಾಜ್ಯಾಭಿಷೇಕವನ್ನು ಮಾಡಿ ತಾನು ತಪಸ್ಸಿಗೆ ಹೋಗಬೇಕೆಂದು ಅಪೇಕ್ಷಿಸಿ, ಬೃಹತ್ಸಭೆಯನ್ನು ಸೇರಿಸಿ ಪ್ರಜೆಗಳ ಅಭಿಪ್ರಾಯವನ್ನು ಕೇಳುವಾಗ ಅನೇಕ ವರ್ಷ ಸಹಸ್ರೋ ವೃದ್ಧಸ್ತ್ವಮಸಿ ಪಾರ್ಥಿವ ! "ವೃದ್ಧನೇ ! ತೊಲಗಿ ಹೋಗು,

ವೃದ್ಧ ತೊಲಗಿ ಹೋಗು'' ಎನ್ನುತ್ತಾರೆ. ಅನಂತರ ಚಕ್ರವರ್ತಿಯು ಪ್ರಜೆಗಳನ್ನು ಕುರಿತು, ನಿಮ್ಮನ್ನು ಕೇಳದೆಯೇ ನಾನು ವಸಿಷ್ಠಾದಿಗಳೊಂದಿಗೆ ನಿರ್ಣಯಿಸಿ ಬಿಟ್ಟುದಾಗಿ ವ್ಯರೂ ಕೂಡ ನಿಮಗೆ ಒಂದು ಹೆಮ್ಮೆಯುಂಟು ಮಾಡಲು ಕೇಳಿದೆನು ; ನೀವುಗಳು ಕೂಡ ಹಿರಿಮೆಯಿಂದ ಉತ್ತರವನ್ನು ಹೇಳಬಹುದಾಗಿದ್ದಿತು. ''ನಿಮ್ಮ ಇಷ್ಟದ ಹಾಗೆ ಮಾಡಬಹುದು'' ಎಂದು ವಿನಯದಿಂದ ಹೇಳ ಬಹುದಾಗಿದ್ದಿತು. ಅದನ್ನು ಬಿಟ್ಟು ಇದುವರೆವಿಗೂ ನಾನು ಅಧರ್ಮವಾಗಿ ರಾಜ್ಯವನ್ನು ಆಳಿದ ಹಾಗೂ, ನೀವು ನನ್ನಿಂದ ಬಿಡುಗಡೆ ಹೊಂದಲು ಸಮಯವನ್ನು ಕಾದು ನೋಡುತ್ತಿರುವ ಹಾಗೂ, ತೋರಿಸಿ ನನ್ನ ಹತ್ತಿರ ಅತ್ಯಂತ ತಿರಸ್ಕಾರವಾಗಿ ಮಾತನ್ನಾಡಿದಿರಲ್ಲ. ನಾನು ಮಾಡಿದ ತಪ್ಪು ಯಾವುದು ? ಎಂದು ಕೇಳುತ್ತಾನೆ. ಅದಕ್ಕೆ ಪ್ರಜೆಗಳ ಪ್ರತ್ಯುತ್ತರವೇನೆಂದರೆ, (ಬಹವೋ ನೃಪಕಲ್ಯಾಣ ಗುಣಾಃ ಪುತ್ರಸ್ಯ ಸಂತಿತೇ) ಮಹಾ ಪ್ರಭೋ ! ತಮ್ಮ ಹತ್ತಿರ ಯಾವ ದೋಷವನ್ನೂ ಕಂಡು ಹೇಳಲಿಲ್ಲ. ನೀವು ಪಡೆದ ಪುತ್ರನು ''ಗುಣಾನಾಮಾ ಕರೋ ಮಹಾನ್'' ಎನ್ನುವ ಹಾಗೆ ಇರುವುದರಿಂದ ಅವನ ಆಶ್ರಯದಲ್ಲಿ ಬಾಳ ಬೇಕೆಂಬ ಆಸೆಯಲ್ಲದೆ ಮತ್ತೇನೂ ಇಲ್ಲ ಎನ್ನುತ್ತಾರೆ. ಶ್ರೀ ರಾಮನ ಗುಣಗಳನ್ನು ಬಾಯಿಂದ ಹೇಳಿ ಆನಂದ ಬಾಷ್ಪವನ್ನು ಸುರಿಸುತ್ತಾರೆ. (ಅಯೋಧ್ಯಾಕಾಂಡ ೨. ನೇ ಸರ್ಗ) ಈ ರೀತಿಯಾಗಿ ಪ್ರತಿಯೊಂದು ಕಾಂಡದಲ್ಲಿಯೂ, ರಾಮನ ಗುಣಗಳನ್ನು ಒಂದೊಂದು ಸರ್ಗದಲ್ಲಿಯೂ, ಪ್ರತಿಯೊಬ್ಬರ ಬಾಯಿಯಲ್ಲಿಯೂ ಹೇಳಲ್ಪಡುವುದರಿಂದ ಈ ರೀತಿಯಾದ ಗುಣ ಸಮೃದ್ಧಿಯನ್ನು ತೋರಿಸಿ ಪರದ್ಧಿಃ ಎನ್ನಲಾಗುತ್ತದೆ. ಇನ್ನು ''ಪರೇ ಕ್ಷಾವರ್ ಋದ್ಧಿ ದೇವ (ಸ್ವಸ್ಯ) ಋದ್ಧಿಃ ಯಸ್ಯ'' ಎಂದುಕೊಂಡು ಪರಸಮೃದ್ಧಿಯೇ ಪುರುಷಾರ್ಥವೆಂದು ಇರುವವನು ರಾಮನು ಎಂದು ಅಭಿಪ್ರಾಯ ಪಡಬಹುದು. ಸುಗ್ರೀವ ವಿಭೀಷಣಾದಿಗಳಿಗೆ ಪಟ್ಟಾಭಿಷೇಕ ನಡೆಸದೆ ತಾನು ಅಭಿಷಿಕ್ತನಾಗುವುದಿಲ್ಲವೆಂದು ಇದ್ದುದರಿಂದ ಈ ಶ್ರೇಷ್ಠಗುಣವು ಚೆನ್ನಾಗಿ ಪ್ರಕಾಶಿಸುತ್ತದೆ.

''ತ್ವಯಿ ಕಿಂಚಿತ್ ಸಮಾಪನ್ನೇ ಕಿಂ ಕಾರ್ಯಂ ಸೀತಯಾ ಮಮ'' ಎನ್ನುವ ಸ್ಥಳ ಪರಸಮೃದ್ಧಿಯನ್ನೇ ಅಪೇಕ್ಷಿಸುವನು ಭಗವಂತ ಎನ್ನುವುದಕ್ಕೆ ತಕ್ಕ ಉದಾಹರಣೆ ಯಾಗಿದೆ.

ಲಂಕಾದ್ವಾರದಲ್ಲಿ ಶ್ರೀ ರಾಮಚಂದ್ರನು ನಿಲ್ಲುವಲ್ಲಿ ರಾವಣನು ಗೋಪುರದ ಶಿಖರದಲ್ಲಿ ಕಾಣಿಸಿಕೊಂಡಾಗ ''ರಾಜ ದ್ರೋಹಿಯಾದವನು ಪರಮಾತ್ಮನ ಎದುರಿಗೆ ನಿಲ್ಲುವುದೇಕೆ ?'' ಎಂದು ಸುಗ್ರೀವ ಮಹಾರಾಜನು ಅವನ ಮೇಲೆ ಎರಗಿದ್ದು ಅವನನ್ನು ಗೆದ್ದು ಬಂದಾಗ ಪರಮಾತ್ಮನು (ಏವಂ ಸಾಹಸಯುಕ್ತಾನಿ ನ ಕುರ್ವಂತಿ ಜನೇಶ್ವರಾಃ) ಕೆಲವರನ್ನು ಎದುರಿಸ ಬೇಕಾದರೆ ಪರಿಜನರನ್ನಲ್ಲದೇ ಕಳುಹಿಸಬೇಕು, ಮುಖ್ಯರಾದರೇ ಮೇಲೆ ಬೀಳುವುದೇ ? (ತ್ವಯಿ ಕಿಂಚಿತ್ ಸಮಾಪನ್ನೇ ಕಿಂ ಕಾರ್ಯಂ ಸೀತಯಾ ಮಮ ?) ಸೀತಾದೇವಿಯನ್ನು ಪಡೆಯುವುದಕ್ಕಲ್ಲದೇ ನಾವು ಇಷ್ಟು ಕಷ್ಟ ಪಡುವುದು ; ನಿಮ್ಮ ಒಬ್ಬರಿಗೆ ಏನಾದರೂ ಕುಂದುಂಟಾಗಿದ್ದೇ ಆದರೆ ಆ ದೇವಿಯಿಂದ

ತಾನೇ ನನಗೇನು ? ಎಂದು ಹೇಳುತ್ತಾನೆ. ಇಲ್ಲಿ ಭಗವಂತನು ಪರಸಮೃದ್ಧಿಗೆ ವಿರೋಧವಿಲ್ಲದೆ ಸ್ವಸಮೃದ್ಧಿಯನ್ನು ಅಪೇಕ್ಷಿಸುವವನೆಂದು ಪ್ರಕಟವಾಗುತ್ತದೆ. ಈ ದಿವ್ಯನಾಮದ ಮಹಿಮೆಯನ್ನು ಇನ್ನೂ ವರ್ಣಿಸ ಬಹುದು. ಆದರೆ ಇಷ್ಟು ಮಾತ್ರ ಸಾಕು.

2. **ಪರಮಸ್ಪಷ್ಟಃ**—" ನ ಚಕ್ಷುಷಾ ಪಶ್ಯತಿ ಕಶ್ಚನೈನಂ " " ನ ಮಾಂಸ ಚಕ್ಷುರಭಿವೀಕ್ಷತೇ ತಮ್ " " ಎನ್ನೇನಂ ಕಳಕಣ್ಣಾಲ್ ಕಾಣಾದ ಅಪ್ಪರೈ " ಮುಂತಾದ ಯಾರ ಕಣ್ಣಿಗೂ ಕಾಣದಿರುವ ಆಕಾರವನ್ನು ಎಲ್ಲರೂ ಕಂಡು ಸಂತುಷ್ಟರಾಗುವ ಹಾಗೆ ಅತ್ಯಂತ ಸ್ಪಷ್ಟ ಮಾಡಿಕೊಟ್ಟವನೆಂದು ಆಳ್ವಾರ್ ಅತಿಮಾನುಷಸ್ತವದಲ್ಲಿ (10) " ಕ್ಷೋದೀಯಸಿ ಸೋಽಪಿ ಹಿ ಜನಸ್ಯ ಕೃತೇ ಕೃತೀತ್ವಮ್ ಆತ್ಮಾವತೀರ್ಯ ನನು ಲೋಚನ ಗೋಚರೋ ಭೂ" ಎಂದು ಹೇಳಿರುವುದನ್ನು ಇಲ್ಲಿ ಸ್ಮರಿಸಬೇಕು. "ಸ್ಪಷ್ಟಃ" ಎನ್ನುವ ಪದಕ್ಕೆ ಪರಮ ತತ್ವವನ್ನು ಸ್ಪಷ್ಟವಾಗಿ ಪಡೆದವರು ಎಂಬ ಅರ್ಥ ಭಟ್ಟರ ಭಾಷ್ಯದಲ್ಲಿ ಪ್ರಕಾಶಿಸುತ್ತದೆ. ಪರತತ್ವವನ್ನು ಬಿಟ್ಟು ಬಂದು ಅವತಾರಮಾಡಿರುವುದು ಕೆಲವರಿಗೆ ಸ್ಪಷ್ಟವಾಗಿ ತಿಳಿಯದೆ ಇರುವುದೆಂಬುದನ್ನು ರಾಮಾಯಣದಿಂದ ತಿಳಿಯುತ್ತೇವೆ. ಪರಮಾತ್ಮನ ಅರಣ್ಯವಾಸ ಪ್ರಸಂಗದಲ್ಲಿ ದುಃಖಿತಳಾದ ಕೌಸಲ್ಯಾದೇವಿಯನ್ನು ಸಮಾಧಾನ ಪಡಿಸುವ ಸುಮಿತ್ರೆ "ಸೂರ್ಯಸ್ಯಾಪಿ ಭವೇತ್ ಸೂರ್ಯಃ......ದೈವತಂ ದೇವತಾನಾಂಚ " ಇತ್ಯಾದಿಗಳಿಂದ ಪರಮಾತ್ಮನ ಪರತ್ವವನ್ನು ತಾನು ಸ್ಪಷ್ಟವಾಗಿ ತಿಳಿದು ಮಾತನಾಡುತ್ತಾಳೆ. ರಾವಣನು ಮರಣ ಹೊಂದಿದ ಸ್ಮಶಾನ ಭೂಮಿಯಲ್ಲಿ ಬಂದು ಪ್ರಲಾಪಿಸುವ ಮಂಡೋದರಿ—"ವ್ಯಕ್ತಮೇಷ ಮಹಾಯೋಗೀ ಪರಮಾತ್ಮಾ ಸನಾತನಃ...ಅನಾದಿಮಧ್ಯ ನಿಧನಃ...ತಮಸಃ ಪರಮೋಧಾತಾ...ಶಂಖ ಚಕ್ರ ಗದಾಧರಃ ಶ್ರೀವತ್ಸವಕ್ಷಾ ನಿತ್ಯಶ್ರೀಃ ಅಜಯ್ಯಃ ಶಾಶ್ವತೋ ಧ್ರುವಃ ಮಾನುಷಂ ರೂಪ ಮಾಸ್ಥಾಯ ವಿಷ್ಣುಸ್ಸತ್ಯ ಪರಾಕ್ರಮಃ" ಮುಂತಾದ ವಾಕ್ಯಗಳಿಂದ ಪರಮಾತ್ಮನ ಪರತ್ವವನ್ನು ಅತ್ಯಂತ ಸ್ಪಷ್ಟವಾಗಿ ಕಂಡು ಹೇಳುತ್ತಾಳೆ. ಪಂಪಾ ತೀರದಲ್ಲಿ ಮೊಟ್ಟ ಮೊದಲು ಕಾಣಲು ಬಂದ ಹನುಮಂತನು "ಆಯತಾಶ್ಚ ಸುವೃತ್ತಾಶ್ಚ ಬಾಹವಃ ಪರಿಘೋಪಮಾಃ ಸರ್ವಭೂಷಣ ಭೂಷಾರ್ಹಾಃ ಕಿಮರ್ಥಂ ನ ವಿಭೂಷಿತಾಃ" ? ಎಂದು ಕೇಳುತ್ತಾನೆ. ಇಲ್ಲಿ "ಆಯತಾಶ್ಚ, ಸುವೃತ್ತಾಶ್ಚ, ಬಾಹವಃ ತೇ ಪರಿಘೋಪಮಾಃ" ಎಂಬ ದ್ವಿವಚನವಾಗಿ ಶ್ಲೋಕವು ಹೊಂದಿರುವುದರಿಂದ ಬಹುವಚನದಿಂದ ಹೇಳಿರುವುದನ್ನು ಕುರಿತು ಗೋವಿಂದರಾಜರು ಬರೆಯುತ್ತಾರೆ, " ಹನುಮತೋ ಭಕ್ತತ್ವೇನ ತಸ್ಯ ಚತುರ್ಭುಜಾವೇಕ್ಷಣ ಪ್ರಸಕ್ತ್ಯೋ ಭವತ್ " ಎಂದು. ಅದೇನೆಂದರೆ ಹನುಮಂತನು ಪರಮ ಭಕ್ತನಾದ್ದರಿಂದ ಅವನಿಗೆ ನಿಜರೂಪವನ್ನು ತೋರಿಸಿದರೆಂದು. ಅತ ಆ ದಿನವೂ ಕೂಡ ಸಮುದ್ರ ಶರಣಾಗತಿ ಪ್ರಕರಣದಲ್ಲಿ ಪರಮಾತ್ಮನು ತಲೆದಿಂಬಾಗಿ ಇಟ್ಟುಕೊಂಡ ಬಾಹುವನ್ನು ವರ್ಣಿಸುವ ವಾಲ್ಮೀಕಿಮುನಿಯು " ಭುಜೈಃ ಪರಮನಾರೀಣಾಂ ಅಭಿಮೃಷ್ಟ ಮನೇಕಧಾ " ಎನ್ನುತ್ತಾರೆ. ಇಲ್ಲಿ ಪರಮನಾರಿಗಳನ್ನಾಗಿ ಹೇಳಿದ ಶ್ರೀದೇವಿ

ಭೂದೇವಿ ನೀಳಾದೇವಿಗಳೇ ಎಂದು ವ್ಯಾಖ್ಯಾನ. ಆದ್ದರಿಂದಲೇ ವಾಲ್ಮೀಕಿ ಮುನಿಯೂ ಭಗವಂತನ ಪರತ್ವ ವೇಷವನ್ನು ಸ್ಪಷ್ಟವಾಗಿ ಕಂಡವರೆಂದು ತಿಳಿಯುತ್ತದೆ. ಈ ರೀತಿಯಾಗಿ ಭಗವಂತನ ಪರಮ ಸ್ಪಷ್ಟತ್ವವು ನಿರೂಪಿತವಾಯಿತು.

3. **ತುಷ್ಟಃ**–ಸಂತುಷ್ಟ ಎನ್ನುವ ಹಾಗೆ ಪರಮಾತ್ಮನ ಅವತಾರವನ್ನು ವರ್ಣಿಸುವ ನಮ್ಮಾಳ್ವಾರ್ "ನಾಟ್ಟಿಲ್ ಪಿರಂದು ಪಡಾದನ ಪಟ್ಟು ಮನಿಸರಕ್ಕಾಯ್" ಎನ್ನುತ್ತಾರೆ. "ಕರ್ಮ ಪರ್ವತಗಳಾದ ಸಂಸಾರಿಗಳುಮ ಪಡಾದ ಕಷ್ಟಂಗಳೆಲ್ಲಾಂ ಪಟ್ಟು" ಎನ್ನುತ್ತಾರೆ. ವ್ಯಾಖ್ಯಾನಕರುಗಳು. "ದುಃಖ ಸಂವೇದನಾಯೈವ ರಾಮೇ ಚೈತನ್ಯ ಮಾಹಿತಂ" (ಉತ್ತರ ರಾಮ ಚರಿತೆ) ಭಗವಂತನು ತಾನೇ ಹೇಳಿದ್ದಾಗಿ ಭವಭೂತಿ ಕವಿ ಬರೆಯುತ್ತಾನೆ. ಇದರಿಂದ ಪರಮಾತ್ಮನ ಮನಸ್ಸು ಸಂತೋಷವುಳ್ಳದಾಗಿದೆಯೆಂದು ತಿಳಿಯಲು ಅವಕಾಶವುಂಟು. ಸತ್ಯತೆಯು ಆ ರೀತಿ ಇಲ್ಲ. ಸಂಸಾರಿಗಳ ಸಮುಜ್ಜೀವನಾರ್ಥವಾಗಿ ಬಂದು ಅವತರಿಸಿದನೆಂದು ಮನಸ್ಸಂತೋಷದಿಂದಲೇ ಇರುತ್ತಾರೆ. ಕಿರೀಟ ಧಾರಣೆ ಮಾಡಿಕೊಂಡು ರಾಜ್ಯವಾಳುತ್ತೇನೆಂದು ಇರುವಾಗ, ಜಡೆಯನ್ನು ಧರಿಸಿ ನಾರುಮಡಿಯನ್ನುಟ್ಟು ಕಾಡಿಗೆ ಹೋಗಲು ಆಜ್ಞಾಪಿಸಿದಾಗ, ಎಷ್ಟೋ ದುಃಖದಿಂದ ಇದ್ದದ್ದಾಗಿ ಕೆಲವರು ತಿಳಿಯಬಹುದು. ಆದರೆ ಪರಮ ಸಂತೋಷವಾಗಿಯೇ ಭಗವಂತನು ಇದ್ದನು.

"ರಾಜ್ಯಂ ವಾ ವನವಾಸೋವಾ ವನವಾಸೋ ಮಹೋದಯಃ" ಎಂದನಲ್ಲವೇ ಪರಮಾತ್ಮ! ಇಲ್ಲಿ ಕಂಬರ ಮಾತು ಅತ್ಯದ್ಭುತವಾಗಿದೆ. ವನವಾಸದ ಆಜ್ಞೆಯನ್ನು ಪಡೆಯುವುದಕ್ಕೆ ಮೊದಲು ಶ್ರೀ ರಾಮಚಂದ್ರನ ಮುಖಮಂಡಲವು ತಾವರೆಯ ಹೂವಿನಂತೆ ಇತ್ತಂತೆ. ವನವಾಸದ ಆಜ್ಞೆಯನ್ನು ಪಡೆದನಂತರ ಆ ಮುಖ ಮಂಡಲವು ಆಗ ತಾನೇ ವಿಕಸಿತವಾದ ಕೆಂದಾವರೆಯನ್ನು ಮೀರಿದ ಪ್ರಫುಲ್ಲತೆಯುಳ್ಳದ್ದಾಗಿತ್ತು. ಕಠೋರವಾದ ವನಕ್ಕೆ ಹೋಗಬೇಕಾಯಿತೆಂದು ಸ್ವಲ್ಪ ಮಾತ್ರವೂ ದುಃಖಿಸದೆ ಪ್ರಾಕೃತವಾದ ವನಗಿರಿಗಳಲ್ಲಿ ಸತ್ಪುರುಷರ ಸೇವೆ ಮಾಡಲು ಅವಕಾಶ ದೊರೆತದ್ದಕ್ಕಾಗಿ ಪರಮ ಸಂತೋಷಗೊಂಡನೆಂಬುದೇ ಆಗಿದೆ. "ಉತ್ಸವೇಷು ಚ ಸರ್ವೇಷು ಪಿತೇವ ಪರಿತುಷ್ಯತಿ" ಎಂದು ಪ್ರಜೆಗಳ ಎದುರಿಗೆ ಕಂಡು ಹೇಳಿದ ಹಾಗೆ ತನ್ನ ದೇಶದಲ್ಲಿರುವವರಿಗೆ ಉಂಟಾಗುವ ಸಂತೋಷವನ್ನು ತನ್ನ ಸಂತೋಷವನ್ನಾಗಿ ತೆಗೆದುಕೊಂಡು ಆನಂದಿಸುವವನು. "ಅಭಿಷಿಚ್ಯ ವಿಭೀಷಣಂ ವಿಜ್ವರಃ ಪ್ರಮುಮೋದಹ" ಎನ್ನುವ ಹಾಗೆಯೇ ಪ್ರೀತಿಯುಳ್ಳವರನ್ನು ಸಂತೋಷ ಪಡಿಸಿ ತಾನು ಸಂತೋಷಾತಿಶಯವನ್ನು ಹೊಂದುವವನು.

4. **ಪುಷ್ಟಃ**–ಇದು ಕೂಡ ಮೇಲೆ ತುಷ್ಟಃ ಎಂಬ ಶ್ರೇಷ್ಠ ಹೆಸರಿನಿಂದ ಹೇಳಿದ ಸಂತುಷ್ಟಿಯನ್ನೇ ಚೆನ್ನಾಗಿ ಸ್ಥಿರ ಪಡಿಸುತ್ತದೆ. ಅಂದರೆ ತಾನು ಹೊಂದುವ ಸಂತೋಷದಿಂದ ಪ್ರಸನ್ನನಾಗುವನು "ಉಳ್ಳತ್ತಿನ್ ಮಹಿಳ್ಚ್ಚಿ ಉಡಲಿಲೇ ತರಿಯಾಂ" ಎನ್ನು

ವುದರಿಂದ ಪೃಥಕ್ಕವಾದ ಸಂತೋಷವನ್ನು ಮುಖ ಮಂಡಲವು ಪ್ರಕಟಿಸುವುದಾಗಿರುತ್ತೆ. ವನವಾಸದ ಆಜ್ಞೆಯನ್ನು ಪಡೆದಾಗ "ವನವಾಸೋಮಹೋದಯಃ" ಎಂದು ಹೇಳಿದ್ದು ಕೃತ್ರಿಮವೆಂದು ನೆನಸದಂತೆ ಮುಖಮಂಡಲದಲ್ಲಿ ಪ್ರಫುಲ್ಲತೆಯು ತೋರುತ್ತಿತ್ತು. ವನವಾಸ ಪ್ರಾಪ್ತವಾದದ್ದು ಪರಮ ಸಂತೋಷಕ್ಕೆ ಹೇತುವೆಂದು ಹೇಳಿರುವುದನ್ನು ಸ್ವಲ್ಪ ವಿಚಾರ ಮಾಡಿದರೆ ಅಪೋಕ್ತಿಯೇ ಹೊರತು ಸತ್ಯೋಕ್ತಿಯಲ್ಲವೆಂದು ಹೇಳಬಹುದಾಗಿದೆ. (ಹೇಗೆ ಎಂದರೆ) ಅನಂತರ ಅರಣ್ಯ ಕಾಂಡದಲ್ಲಿ ಸೀತಾವಿಯೋಗ ಪ್ರಾಪ್ತವಾದಾಗ ದುಃಖದಿಂದ ಪರಿತಪಿಸುವ ಪರಮಾತ್ಮನು "ರಾಜ್ಯಾತ್ ಭ್ರಂಶೋ ವನೇವಾಸೋ ನಷ್ಟಾ ಸೀತಾ ಹತೋದ್ವಿಜಃ ಈದೃಶೀಯಂ ಮಮಾ ಲಕ್ಷ್ಮೀಃ ನಿರ್ದಹೇತ್ ಅಪಿ ಪಾವಕಂ" ಎಂದು ಹೇಳಿ ಪ್ರಲಾಪಿಸುತ್ತಾನೆ. "ಅಯ್ಯೋ! ರಾಜ್ಯವನ್ನು ತೊರೆದೆನಲ್ಲಾ! ಕಾಡಿನಲ್ಲಿ ಬಂದು ವನವಾಸ ಮಾಡಬೇಕಾಯಿತಲ್ಲಾ!" ಎಂದು ಹೇಳುವುದು "ವನವಾಸೋಮಹೋದಯಃ" ಎನ್ನುವುದಕ್ಕೆ ನೇರ ವಿರೋಧವಲ್ಲವೆ? ವನವಾಸದ ಆಜ್ಞೆ ಸಂತೋಷಕರವಾಗಿದ್ದರೆ "ರಾಜ್ಯಾತ್ ಭ್ರಂಶಃ" ಎಂದೂ, ವನೇವಾಸಃ ಎಂದು ಹೇಳಲು ಕಾರಣ ತೋರಿಬರುತ್ತದೆಯೇ—ಈದೃಶೀಯಂ ಮಮಾಲಕ್ಷ್ಮೀಃ ಎಂದು ರಾಜ್ಯಭ್ರಂಶ ವನವಾಸಗಳನ್ನು ದೌರ್ಭಾಗ್ಯವೆಂದಲ್ಲವೇ? ಇದು ಹೊಂದುವುದು ಹೇಗೆ "ರಾಜ್ಯನಾಶೋಪಕರ್ಷತಿ" "ವನವಾಸೋಮಹೋದಯಃ" ಎಂದು ಹೇಳಿ ಹೋದ ಆ ರಾಮನೇ ಈಗ ಅನರ್ಥವೆಂದು ಹೇಳುವುದೇಕೆಂದರೆ, ಆಶ್ರಿತ ಸಂರಕ್ಷಣಕ್ಕೂ ಋಷಿಗಳನ್ನು ರಕ್ಷಿಸುವುದಕ್ಕೆಂದೇ ವನಕ್ಕೆ ಹೋಗಿದ್ದುದರಿಂದ ಅದಕ್ಕೆ ವಿರೋಧವಾಗಿದ್ದುದರಿಂದ ಹೀಗೆ ಹೇಳಿರುತ್ತಾರೆ. ದೇವಿಯ ವಿಯೋಗದಿಂದಲೂ, ಹಿರಿಯನಾದ ಜಟಾಯುವನ್ನು ಕಳೆದುಕೊಂಡುದಲ್ಲದೆ ಇದಕ್ಕೆ ಮೂಲ ಕಾರಣ; ಈಗ ಅನರ್ಥವಾಗಿ ತೋರಿತು-ಎನ್ನುವುದು ನಂಬಿಳ್ಳೈಯವರ ಶ್ರೀಸೂಕ್ತಿ. ಇದನ್ನು ಸ್ವಲ್ಪ ವಿವರಿಸುತ್ತೇನೆ. ವನಕ್ಕೆ ಹೊರಡುವಾಗ ಏತಕ್ಕೆ ಸಂತೋಷವೆಂದರೆ-ದೇವಿಯೊಡನೆ ಏಕಾಂತವಾಸ ಮಾಡುತ್ತೇನೆ. ಪರಮ ಭಾಗವತರೊಂದಿಗೆ ಸಹವಾಸವನ್ನು ಮಾಡುತ್ತೇನೆ ಎಂದು. ಈ ರೀತಿಯಾದ ಮನೋರಥದಿಂದ ರಾಮನಿಗೆ ಸಂತೋಷವುಂಟಾಯಿತು. ನೆನಸಿಕೊಂಡ ಹಾಗೆಯೇ ಪುರುಷಾರ್ಥವು ದೊರೆಯುತ್ತಾ ಬಂದಿತು. "ವೈದೇಹೀ ರಮಸೇ ಕಚ್ಚಿತ್ ಚಿತ್ರಕೂಟೇಮಯಾ ಸಹ" ಎಂದು ಮನಸ್ಸಂತೋಷವುಂಟಾಗುವ ಹಾಗೆ ದೇವಿಯೊಂದಿಗೆ ಸೇರಿ ಇದ್ದು ಸಂತೋಷವುಂಟಾಯಿತು. "ಇಹಪತ್ಸ್ಯಾಮಿ ಸೌಮಿತ್ರೇ! ಸಾರ್ಧಮೇತೇನ ಪಕ್ಷಿಣಾ" ಎಂದು ಜಟಾಯು ಮಹಾರಾಜನ ಪಕ್ಷದ ಛಾಯೆಯಲ್ಲಿ ಅಡಗಿಕೊಂಡಿರಲೂ ಒದಗಿತು, ಈ ಸ್ಥಿತಿಯಲ್ಲಿ "ಹಾ ಹಂತ ಹಂತ ನಳಿನೀಂ ಗಜ ಉಜ್ಜಹಾರ" ಎನ್ನುವಂತೆ ದೇವಿಯನ್ನೂ ಅಗಲಿ ಜಟಾಯು ಮಹಾರಾಜರನ್ನು ಪೂರ್ಣವಾಗಿ ತೊರೆಯ ಬೇಕಾಗಿ ಬಂದಿತು, ಈ ದುಃಖವು ಹೇಳಿಸಿದ ಮಾತಲ್ಲವೆ "ರಾಜ್ಯಾತ್ ಭ್ರಂಶೋ ವನೇವಾಸಃ" ಎನ್ನುವುದು? ಇದರಿಂದ ಕಾಡಿಗೆ ಹೊರಡುವಾಗಲೇ ಸಂತೋಷವಿಲ್ಲದೆ ವ್ಯಸನದಿಂದ ಹೊರಟಿದ್ದಾಗಿ ಎಣಿಸಲು ಯೋಗ್ಯವೆ? ಪರಮ ಕುತೂಹಲದಿಂದ ಮಹೋತ್ಸವವನ್ನು ದರ್ಶನ ಮಾಡಬೇಕೆಂದು

ದಿವ್ಯ ಕ್ಷೇತ್ರಕ್ಕೆ ಹೋದವರು ಅಲ್ಲಿ ಸ್ಥಳವೂ, ಊಟ, ಕುಡಿಯಲು ನೀರೂ ದೊರೆಯದೆ, ಬಿಸಿಲಿನಲ್ಲೂ, ಮಳೆಯಲ್ಲೂ ಪರಿತಪಿಸ ಬೇಕಾಯಿತೆಂದುಕೊಳ್ಳೋಣ. ಆಗ ಏಕೆ ಮನೆಯನ್ನು ಬಿಟ್ಟು ಇಲ್ಲಿ ಬಂದು ದುಃಖಿಸುತ್ತೇವೆ! ಹಾಗೆಂದು ಬಗೆದರೆ ಇವರಿಂದ ಊರನ್ನು ಬಿಟ್ಟು ಹೊರಡುವಾಗ ಇದ್ದ ಕುತೂಹಲವನ್ನು ಇಲ್ಲವೆನ್ನುವುದಕ್ಕಾಗುತ್ತದೆಯೇ ? ಲಂಕೆಗೆ ಹೋದ ಹನುಮಂತನು ಅಶೋಕವನದಲ್ಲಿ ಸೀತಾದೇವಿಯನ್ನು ನೋಡಿದ ತಕ್ಷಣ "ಅನಯಾಹೀನಃ ಪ್ರಭುಃ ಧಾರಯತಿ ಆತ್ಮನೋ ದೇಹಂ ನ ಶೋಕೇನ ಅವಸೀದತಿ" ಎಂದು ಹೇಳಿದ್ದು ಪರಮಾತ್ಮನನ್ನು ಗ್ರಹಿಸುವುದರ ಹಾಗೆ ಇದ್ದರೂ ಬಾಡದೆ ಕೃಶಿಸದೆ ತೃಪ್ತರಾಗಿಯೇ ಇದ್ದಾರೆ ಎಂದು ತೋರಿಸಿದ ಹಾಗೆ ತೆಗೆದುಕೊಳ್ಳಬಹುದು. ಇಲ್ಲವಾದರೆ "ಜೀವತಿ" ಎಂದು ಮೊದಲಿನ ವಾಕ್ಯದೊಂದಿಗೆ ಮುಗಿಸದೆ "ಧಾರಯತಿ ಆತ್ಮನೋ ದೇಹಂ" ಎನ್ನುವ ಅಸ್ವಾರಸ್ಯ ದೇಹಪುಷ್ಟಿಯನ್ನು ಅಂತರಂಗವಾಗಿ ತೋರಿಸುವ ಹಾಗೆ ಇದೆ.

5. **ಶುಭೇಕ್ಷಣಃ**—ಪರಮಾತ್ಮನ ನೇತ್ರ ಸೌಂದರ್ಯದಲ್ಲಿ ಮುಗ್ಧರಾದವರಲ್ಲಿ ಚಕ್ರವರ್ತಿ, ಶಬರಿ, ಹನುಮಂತ ಮೊದಲಾದವರು, "ಏನ್‌ಕೇಳ್ತಿಯ್ಯಕ್ಕ್ಯಕ್ಕ" ನಿನ್ನ ಪುತ್ರನನ್ನು ಹೋಗಗೊಡೆ ಎಂದು ವಿಶ್ವಾಮಿತ್ರ ಮುನಿಯವರು ಬೇಡಿದಾಗ "ಊನ ಷೋಡಶವರ್ಷೋ ಮೇ ರಾಮೋ ರಾಜೀವ ಲೋಚನಃ" ಎಂದು ಉತ್ತರ ಹೇಳಿದ ಚಕ್ರವರ್ತಿಯ ಅಭಿಪ್ರಾಯ ಹಲವಿಧವಾಗುಂಟು. ಅವುಗಳಲ್ಲಿ ಒಂದು ತಾತ್ಪರ್ಯ ಈ ನಯನಾಭಿರಾಮನನ್ನು ಬಿಟ್ಟು ಅಗಲಿ ಹೇಗೆ ತಾನೇ ಜೀವಿಸಿರಲಿ ಎಂದು ಶಬರಿಯು ತನ್ನಾಶ್ರಮಕ್ಕೆ ಬರುತ್ತಿರುವ ಪರಮಾತ್ಮನನ್ನು ಕಂಡಕ್ಷಣವೇ "ಚಕ್ಷುಷಾ ತವ ಸೌಮ್ಯೇನ ಪೂತಾಸ್ಮಿ ರಘುನಂದನ !" ಎಂದು ಅವರ ನೇತ್ರ ಸೌಂದರ್ಯದಲ್ಲಿ ತಾನು ಆಕರ್ಷಿತಳಾದುದನ್ನು ತಿಳಿಸಿದಳು. ಹನುಮಂತನೊಂದಿಗೆ "ಯಾನಿ ರಾಮಸ್ಯ ಚಿಹ್ನಾನಿ...ತಾನಿ ಭೂಯಃ ಸಮಾಚಕ್ಷ್ವ" ಎಂದು ಪರಮಾತ್ಮನ ಪರಿಚಯವನ್ನು ಹೇಳುವಂತೆ ಕೇಳಿದಾಗಲೇ ಹನುಮಂತನು ಮೊಟ್ಟಮೊದಲು "ರಾಮಃ ಕಮಲ ಪತ್ರಾಕ್ಷಃ" ಎನ್ನುತ್ತಾನೆ. ಆ ನೇತ್ರ ಸೌಂದರ್ಯವು ಮಾಡುವುದೇನು ? ಎಂದರೆ [ಸರ್ವ ಸತ್ವ ಮನೋಹರಃ] ಪ್ರಾಣಿಗಳೆಂದು ಹೆಸರು ಪಡೆದವರೆಲ್ಲರ ಹೃದಯವನ್ನು ಸೂರೆಮಾಡುವಂಥದ್ದು ಆ ಸೌಂದರ್ಯವೆನ್ನುತ್ತಾರೆ. ಹನುಮಂತನು ಪರಮಾತ್ಮನ ಕಣ್ಣಿನ ಸೌಂದರ್ಯವನ್ನು ಒಂದು ದೊಡ್ಡ ನಗರದಲ್ಲಿ ಕಾಣಲಿಲ್ಲ, 'ಜನವಾದ ಒಂದು ವನದ ಮೂಲೆಯಲ್ಲಿ ಕಂಡು "ಸರ್ವ ಸತ್ವ ಮನೋಹರಃ" ಎಂದು ಯಾವುದನ್ನು ನೋಡಿ ಹೇಳಿದರೆಂದು ಆಲೋಚಿಸಬೇಕು. ನಂಬಿಳ್ಳೈಯವರು ಅನುಗ್ರಹಿಸುವುದು : "ತಿರ್ಯಕ್ ಜಾತಿಯವನಾಗಿ ವನವನದಲ್ಲಿ ರೆಂಬೆಯಿಂದ ರೆಂಬೆಗೆ ಸಂಚರಿಸುವ ನನ್ನ ಹೃದಯವನ್ನು ಅಪಹರಿಸಿತ್ತು" ಎಂದು ಇದರಿಂದ ಭಗವಂತನ ಕಣ್ಣಿನ ಸೌಂದರ್ಯವು ಸರ್ವ ಸತ್ವಮನೋಹರವೆನ್ನುವ ಸ್ಥಳ ಕ್ಕೈಮಂದಿತ ನ್ಯಾಯ ಸಿದ್ಧವು ಇದನ್ನು ಪರಿಗಣಿಸಿಯೇ ಕಲಿಯರು, ಹನುಮಂತನು

ಶ್ರೀ ರಾಮನನ್ನು ಕಾಣುವಾಗಲೇ "ಮುಂಚಿನ ತಿರುಂಡಕೋಲ ಪೋನಿರು !" ಎಂದು ಹೇಳಿರುವುದಾಗಿ ಹಾಡಿದರು. (ಶುಭೇಕ್ಷಣಃ) ಇದಕ್ಕೆ ಭಾಷ್ಯವನ್ನು ವಿವರಿಸದೇ ಇದ್ದ ಭಟ್ಟರು "ಸ್ವಕರ್ತೃಕಂ ಸ್ವಕರ್ಮಕಂಚ ದರ್ಶನಂ ಅತಿಶುಭಂ ಅಸ್ಯ" ಎನ್ನುವುದೊಂದು ಅರ್ಥವನ್ನು ಹೇಳುತ್ತಾರೆ. ಶ್ರೀ ರಾಮನನ್ನು ಬೇರೆಯವರು ನೋಡುವುದು ಮಧುರ, ಶ್ರೀ ರಾಮನು ಮತ್ತೊಬ್ಬರನ್ನು ನೋಡುವುದು ಅತಿಮಧುರ ಎನ್ನುವುದಾಯಿತು, ಈಕ್ಷಣ ಶಬ್ದವಾದದ್ದು ಕಣ್ಣು ಎಂಬ ಅರ್ಥವನ್ನು ಮತ್ತು ನೋಡುವುದು ಎಂಬ ಅರ್ಥವನ್ನು ತೆಗೆದುಕೊಂಡು ಮೇಲೆ ವಿವರಣವನ್ನು ಮಾಡಿದರು. ಈಗ ಕಾಣುವುದು ಎಂಬುವ ಅರ್ಥವನ್ನು ತೆಗೆದುಕೊಂಡು ವಿವರಿಸುತ್ತೇನೆ. (ಯಶ್ಚ ರಾಮಂ ನ ಪಶ್ಯೇತ್ತು ಯಂಚ ರಾಮೋನ ಪಶ್ಯತಿ । ನಿಂದಿತಸ್ಸ ವಸೇಲ್ಲೋಕೇ ಸ್ವಾತ್ಮಾಪ್ಯೇನಂ ವಿಗರ್ಹತೇ) ಶ್ರೀ ರಾಮಾಯಣ ಅಯೋಧ್ಯಾಕಾಂಡ 17-14) ಶ್ರೀ ರಾಮನನ್ನು ಕಾಣದವನು ಶ್ರೀ ರಾಮನಿಂದ ಕಾಣಲ್ಪಡದವನು ಪ್ರಪಂಚದಲ್ಲಿ ನಿಂದಿಸಲ್ಪಟ್ಟವನಂತೆ. ಲೋಕದಲ್ಲಿ ನಿಂದಿಸುವವರು ಇರಲಿ, ತನ್ನನ್ನು ತಾನೇ ನಿಂದಿಸಿಕೊಳ್ಳಬೇಕಾಗುತ್ತದೆ, ಎನ್ನುವ ಹಾಗೆ. ಇದರಿಂದ ಶ್ರೀ ರಾಮನನ್ನು ಕಾಣುವ ಹಾಗೆ, ಶ್ರೀ ರಾಮನಿಂದ ನೋಡಲ್ಪಡುವುದು ಪುರುಷಾರ್ಥವೆಂದು ನಿರ್ಧರಿಸಲ್ಪಡುವುದರಿಂದ "ಶುಭೇಕ್ಷಣ" ಎನ್ನುವುದಕ್ಕೆ ಎರಡು ವಿಧವಾದ ಅರ್ಥವನ್ನು ಭಟ್ಟರು ಉದ್ಧರಿಸಿರುವುದು ಅತ್ಯಂತ ಸಮಂಜಸವಾಗಿದೆ. ಅಶೋಕವನದಲ್ಲಿ ಪರಿತಪಿಸುತ್ತಿರುವ ದೇವಿಯು "ತಂ ಪದ್ಮದಳ ಪತ್ರಾಕ್ಷಂ ಸಿಂಹವಿಕ್ರಾಂತ ಗಾಮಿನಂ, ಧನ್ಯಾಃ ಪಶ್ಯಂತಿ ಮೇ ನಾಥಂ ಕೃತಜ್ಞಮ್ ಪ್ರಿಯವಾದಿನಂ" ಎಂದು ಹೇಳಿರುವ ಈ ಶ್ಲೋಕವು ಆಲೋಚಿಸಲು ಯೋಗ್ಯವಾದದ್ದು. ಇದರಲ್ಲಿ ಪದ್ಮದಳ ಪತ್ರಾಕ್ಷನ ಬದಲಾಗಿ ಇಲ್ಲಿ ಪದ್ಮದಳವೆಂದೋ, ಪದ್ಮಪತ್ರವೆಂದೋ ಒಂದು ಹೇಳಿದರೆ ಸಾಕು! "ಪತ್ರಂ ಪಲಾಶಂ ಛದನಂ ದಳಂ ಪರ್ಣಂ ಛದಃಪುಮಾನ್" ಎಂದು ಅಮರ ಕೋಶದಲ್ಲಿರುವ ಹಾಗೆ, ದಳ ಪತ್ರವು ಪರ್ಯಾಯ ಆದ್ದರಿಂದ ದಳ ಪತ್ರಾಕ್ಷ ಎಂದು ಎರಡನ್ನು ಸೇರಿಸಿ ಹೇಳುವುದು ಪುನರುಕ್ತಿಯಾಗಲಿಲ್ಲವೇ ? ಎಂದು ಕೆಲವರು ಸಂದೇಹ ಪಡುವುದುಂಟು. ಸಂದೇಹವು ಯೋಗ್ಯವಾದದ್ದೇ. ಇಲ್ಲಿ ಹಿರಿಯರು ಹೇಳುವ ಸಮಾಧಾನ ಕೂಡ ರಸಯುತವಾಗಿದೆ. ಸಂಸ್ಕೃತ ಭಾಷೆಯಲ್ಲಿ ಅಕ್ಷವೆನ್ನುವ ಶಬ್ದಕ್ಕೆ "ಅಕ್ಷಮಿಂದ್ರಿಯೇ ಕಾಯಯೋಃ" ಎನ್ನುವ ನಿಘಂಟಿನಂತೆ, ಕಣ್ಣೆಂದೂ ಶರೀರವೆಂದೂ, ಎರಡರ್ಥಗಳಿವೆ. ಎರಡನ್ನು ಸೇರಿಸಿ ಹೇಳುವ ತಮಿಳುಸಂಪ್ರದಾಯದಿಂದ ಪದ್ಮದಳ ಪತ್ರಾಕ್ಷವೆನ್ನುವ ಈ ಸ್ಥಳದಲ್ಲಿ ಅಕ್ಷಪದಕ್ಕೆ ಈ ಎರಡರ್ಥಗಳನ್ನೂ ತೆಗೆದುಕೊಂಡು "ಪದ್ಮದಳದ ಹಾಗೆ ವಿಶಾಲವಾದ ಕಣ್ಣಿನ ಸೌಂದರ್ಯವುಳ್ಳವನು, ಪದ್ಮ ಪತ್ರದ ಹಾಗೆ (ತಾವರೆ ಎಲೆಯ ಹಾಗೆ) ಆರ್ದ್ರಕಾಂತಿಯುಳ್ಳ ಮುಖಮಂಡಲವುಳ್ಳವನೆಂದು ತೆಗೆದುಕೊಳ್ಳಬೇಕು. ನಮ್ಮಾಳ್ವಾರ್ ತಿರುವಾಯ್ಮೊಳಿಯಲ್ಲಿ "ಶೆಕ್ಕಮಲತ್ತಲರ್ ಪೋಲುಂ ಕಣ್, ಕೈ, ಕಾಲ್, ಶೆಂಗನಿವಾಯ್ ಅಕ್ಕಮಲತ್ತಿಲೈ ಪೋಲುಂ ತಿರುಮೇನಿ" ಎಂದು ಅನುಗ್ರಹಿಸಿರುವುದು ಮೇಲೆ ವಿವರಿಸಿರುವ ಅರ್ಥವನ್ನು ಕುರಿತೇ ಆಗಿದೆ.

೯. **ರಾಮಃ**–"ರಮತೇ ಇತಿ ರಾಮಃ". ರಮು–ಕ್ರೀಡಾಯಾಂ ಎಂಬ ಧಾತುವಾದ್ದರಿಂದ ಆಟವಾಡುವವನು ಎಂದು ಅರ್ಥವಾಗುತ್ತದೆ. "ತ್ವಂ ಸ್ವಂಚಿದ್ಗುರು ತಂತುಭಿಃ ಕರ್ಮಸೂತ್ರೋ ಪ್ರಾದಿತ್ಯಃ ಹರೇ! ವಿಹರಸಿ ಕ್ರೀಡಾಕಂದುಕೈರಿವ ಜಂತುಭಿಃ" ಎಂದು ನಾರದಮುನಿಯು ಹೇಳುವ ಹಾಗೆಯೇ, ಚಿಕ್ಕವರು ಚೆಂಡನ್ನು ತೆಗೆದುಕೊಂಡು, ಆಟವಾಡುವ ಭಗವಂತನು ಪ್ರಾಣಿಗಳನ್ನು ಇಟ್ಟುಕೊಂಡು ಆಟವಾಡುತ್ತಾನೆ. ಚೆಂಡಾದದ್ದು, ಬಿಳುಪು, ಕಪ್ಪು, ಕೆಂಪುದಾರವಾಗಿರುವ ಮೂರು ಬಣ್ಣದ ದಾರದಿಂದ ಕಟ್ಟಲ್ಪಟ್ಟಿರುವ ಹಾಗೆಯೇ ಪ್ರಾಣಿಗಳೂ ಸತ್ವ, ರಜಸ್, ತಮೋಗುಣಗಳಾಗಿರುವ ಮೂರು ಬಣ್ಣವುಳ್ಳ ಗುಣಗಳನ್ನು ಪಡೆದಿರುತ್ತವೆ. ಚೆಂಡಾದದ್ದು ವಿಹಾರ ಕಾಲದಲ್ಲಿ ಮೇಲೆ ಹೋಗುವುದು ಕೆಳಗೆ ಬೀಳುವುದಾಗಿರುವ ಹಾಗೆ, ಪ್ರಾಣಿಗಳೂ "ತೇ ತಮ್ ಭುಕ್ತ್ವಾ ಸ್ವರ್ಗಲೋಕಂ ವಿಶಾಲಂ ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ" ಎನ್ನುವ ಹಾಗೆಯೇ ಮೇಲೆ ಹೋಗುವುದು ಕೆಳಗೆ ಬೀಳುವುದಾಗಿರುತ್ತದೆ. ಈ ರೀತಿ ಆಟವಾಡುವ ಪರಮ ಪುರುಷನು ಶ್ರೀ ರಾಮನಾಗಿ ಅವತರಿಸಿ "ರಾಮಸ್ತು ಸೀತಯಾ (ಸಾರ್ಧಂ) ವಿಜಹಾರ ಬಹೂನ್ ಋತೂನ್" ಎಂದು ಹೇಳುವ ಹಾಗೆ ದೇವಿಯೊಬ್ಬಳೊಂದಿಗೆ ಆಟವಾಡಿದನು. ರಾಮಸ್ತು ಸೀತಯಾ ಸಾರ್ಧಂ ಎನ್ನದೆ ರಾಮಸ್ತು ಎನ್ನುವುದು ಸಾಭಿಪ್ರಾಯ. "ತು" ಎನ್ನುವ ಅವ್ಯಯ ವ್ಯಾವೃತ್ತಿಯನ್ನು ಹೇಳುತ್ತದೆ. ಇದುವರೆಗೂ ಭಗವಂತನು ಪಿತೃ ಶುಶ್ರೂಷೆಯಲ್ಲಿಯೂ ಪ್ರಶಂಸೆ ಪಡೆದಿದ್ದನು. ಈಗ ದೇವಿಯೊಂದಿಗೆ ಸೇರಿದ್ದರಿಂದ ಬೇರೆಯಾದನು. ಶೃಂಗಾರ ಕೇಳಿಗಳಲ್ಲಿ ಪರಮ ರಸಿಕನೆಂದು ಪ್ರಶಂಸಿಸುವುದನ್ನು ಹೇಳುತ್ತಾರೆ.

ಅಸ್ತ್ರಿಯೋ ರಾಮಃ–ರಮಂತೇ ಎನ್ನುವುದಕ್ಕೆ ಮನಸ್ಸು ತಂಪಾಗಿರುವರೆಂಬ ಅರ್ಥವಾಗುವುದರಿಂದ ಆ ಅರ್ಥವನ್ನು ತೆಗೆದುಕೊಂಡು ಅನುಭವಿಸುವುದು ಯುಕ್ತ. ಪ್ರೀತಿಯುಳ್ಳವರೊಂದಿಗೆ ಸೇರಿ ಇದ್ದು ಪ್ರೇಮ ಉಳ್ಳವರ ಕೆಲಸವನ್ನು ಮಾಡಿಯೂ ಮನಸ್ಸು ಶಾಂತವಾಗಿರುವವನು ಪರಮಾತ್ಮ (ಗುಹೇ ಸಹಿತೋ ರಾಮಃ) ರಾಘವನು ಗುಹನೊಂದಿಗೆ ಸೇರಿದ ನಂತರ ರಾಮನಾದನೆಂದೂ ಗುಹನೊಂದಿಗೆ ಸೇರಿ ಮನಶ್ಶಾಂತಿಯನ್ನು ಪಡೆದನೆಂದು ಆಚಾರ್ಯರುಗಳು ನಿರೂಪಿಸುತ್ತಾರೆ. ಮತ್ತೊಂದು ಸ್ಥಳವನ್ನು ನೋಡೋಣ. (ಕೃತ ಕೃತ್ಯಸ್ತದಾ ರಾಮಃ) ಅಭಿಷಿಚ್ಯ ಚ ಲಂಕಾಯಾಂ ರಾಕ್ಷಸೇಂದ್ರಂ ವಿಭೀಷಣಂ, ಕೃತಕೃತ್ಯಸ್ತದಾ ರಾಮಃ) ವಿಭೀಷಣಾಳ್ವಾರ್‌ರಿಗೆ ರಾಜ್ಯಾಭಿಷೇಕ ಮಾಡಿ ತನ್ನ ಕೆಲಸ ಪೂರ್ತಿಯಾಯಿತೆಂದು ತಿಳಿಸಿ (ತದಾ ರಾಮಃ) ಆಗಲೇ ಆನಂದವನ್ನು ಹೊಂದಿದ ರಾಮನೆಂದು ಪರಮಾತ್ಮನು ಮಾಡಿರುವ ಪ್ರತಿಯೊಂದು ಕಾರ್ಯವೂ ಅವರು ತಮ್ಮ ಮನಸ್ಸನ್ನು ಶಾಂತಪಡಿಸುವುದೇ ಆಗಿರುತ್ತದೆ. ಅನುಗ್ರಹ ವಿಶೇಷದಿಂದ ಮನಸ್ಸಂತೋಷ ಹೊಂದುವ ಹಾಗೆ ಆಗಿತ್ತು. ಗುಹ, ಸುಗ್ರೀವ, ಮಾರುತಿ, ವಿಭೀಷಣಾದಿಗಳ ಹತ್ತಿರ ತೋರಿಸಿದ ಅನುಗ್ರಹ ವಿಶೇಷದಿಂದಾಗಿ ಮನಸ್ಸು ಶಾಂತವಾದ

ಹಾಗೆ ತಾಟಕಾ, ತಾಟಕೇಯ, ವಿರಾಧ, ಖರದೂಷಣ, ರಾವಣಾದಿಗಳ ಹತ್ತಿರ ತೋರಿಸಿದ ನಿಗ್ರಹದಿಂದಲೂ, ಆಶ್ರಿತ ವಿರೋಧಿಗಳನ್ನು ತೊಲಗಿಸಿದನೆಂದು ಮನಸ್ಸು ನೆಮ್ಮದಿಯಾಗಿರಲು ಅವಕಾಶವಿಲ್ಲ. "ರಮಂತೆ ಇತಿ ರಾಮಃ" ಎನ್ನುವ ವ್ಯುತ್ಪತ್ತಿಗೆ ಶ್ರೀ ರಾಮಾಯಣದಲ್ಲಿ ಅನೇಕ ಪ್ರಮಾಣಗಳೂ ಸಂಗ್ರಹಿತವಾಗುತ್ತವೆ.

ರಾಮಃ—"ರಮಯತೀತಿ ರಾಮಃ" ವ್ಯುತ್ಪತ್ತಿಯೂ ಹೊಂದುತ್ತದೆ. ತನ್ನನ್ನು ನೋಡುವವರನ್ನು, ತನ್ನ ಚರಿತೆಯನ್ನು ಕೇಳುವವರನ್ನು ಆನಂದಗೊಳಿಸುತ್ತಾನೆ ಪರಮಾತ್ಮ. ಪ್ರಪಂಚದಲ್ಲಿ ಅಧಿಕಾರಿಗಳು ಬೇರೆ ಬೇರೆ ತರಹದವರಾಗಿರುವುದರಿಂದ ಒಂದೇ ಗುಣದಿಂದ ಎಲ್ಲರನ್ನೂ ಏಕರೂಪವಾಗಿ ಸಂತೋಷಗೊಳಿಸಲಾಗುವುದಿಲ್ಲ. "ಸತ್ಯೇನ ಲೋಕಾನ್ ಜಯತಿ ದೀನಾನ್ ದಾನೇನ ರಾಘವಃ, ಗುರೂನ್ ಶುಶ್ರೂಷಯಾ ವೀರಃ ಧನುಷಾ ಯುಧಿ ಶಾತ್ರವಾನ್" ಎನ್ನುವ ಹಾಗೆ ಒಬ್ಬೊಬ್ಬರ ಸಮೀಪದಲ್ಲಿ ಒಂದೊಂದು ಗುಣವನ್ನು ತೋರಿಸಿ ಸಂತೋಷಗೊಳಿಸುವುದು ರಾಮಾಯಣದ ಪ್ರಸಿದ್ಧಿ. ಸೌಶೀಲ್ಯ, ಸೌಲಭ್ಯ, ಸೌಂದರ್ಯ, ಸಹನೆ, ದಯೆ, ವಾತ್ಸಲ್ಯ, ಶೌರ್ಯ ಎನ್ನುವ ಇವೆಲ್ಲಾ ಒಟ್ಟು ಅನೇಕ ಗುಣಗಳು ಸಾಗರದೋಪಾದಿಯಲ್ಲಿ ಉಳ್ಳ ಪರಮಾತ್ಮನು ವೈಕುಂಠದಲ್ಲಿ ಪ್ರಯೋಜನ ಪಡೆಯದೆ ಇರುವ ಶ್ರೇಷ್ಠಗುಣಗಳನ್ನು ಅನುಕೂಲ್ಯವನ್ನಾಗಿ ಮಾಡುವುದಕ್ಕಾಗಿಯೇ ಈ ಮರ್ತ್ಯಲೋಕದಲ್ಲಿ ಬಂದು ಅವತರಿಸಿದ್ದರಿಂದ ಆ ಶ್ರೇಷ್ಠ ಗುಣಗಳಿಂದ ಅವರನ್ನು ಆಕರ್ಷಿಸಿ ಆನಂದಪಡಿಸಿರುವುದನ್ನು ವಿವರಿಸಬೇಕೇ ? ಗುಹನನ್ನು ಸೌಶೀಲ್ಯದಿಂದ ಸಂತುಷ್ಟಗೊಳಿಸಿದನು. ಸೌಶೀಲ್ಯವೆಂದರೆ ಮಹಾನುಭಾವರು ಪದಗಳ ಮೇಲ್ಮೆ ನೋಡದೆ ಸಾಧಾರಣ ಜನರೊಂದಿಗೆ ಸೇರಿ ವ್ಯವಹರಿಸುವುದು ಶೀಲ ಗುಣದ ಲಕ್ಷಣ. ಈ ಗುಣದಿಂದ ಕಾರ್ಯವನ್ನು ಮಾಡಿರುವುದು ಶ್ರೀ ರಾಮಾಯಣದಲ್ಲಿ ಹೆಚ್ಚು. ಸೌಂದರ್ಯ ಸೌಕುಮಾರ್ಯಗಳಿಂದ ದಂಡಕಾರಣ್ಯವಾಸಿಗಳಾದ ಮುನಿಗಳನ್ನು ಆಕರ್ಷಿಸಿದ್ದು ಹೆಚ್ಚೇನೂ ಅಲ್ಲ. ಕಿವಿ ಮೂಗನ್ನು ಕತ್ತರಿಸಿಕೊಂಡು ಪ್ರಲಾಪಿಸಿ ರೋದಿಸುತ್ತಲೇ ಖರದೂಷಣಾದಿಗಳ ಹತ್ತಿರ ಹೋದ ಶೂರ್ಪಣಖಿ "ತರುಣೌ ರೂಪಸಂಪನ್ನೌ ಸುಕುಮಾರೌ ಮಹಾಬಲೌ ಪುಂಡರೀಕ ವಿಶಾಲಾಕ್ಷೌ ಚೀರ ಕೃಷ್ಣಾಜಿನಾಂಬರೌ, ಗಂಧರ್ವರಾಜ ಪ್ರತಿಮೌ ಪಾರ್ಥಿವ ವ್ಯಂಜನಾನ್ವಿತೌ" ಎಂದು ಹೇಳಿ ಹೇಳಿ ಪ್ರಲಾಪಿಸುವುದೇ ಹಿರಿಮೆಯುಳ್ಳದ್ದಾಗಿದೆ. ಈ ರೀತಿ ಒಂದೊಂದು ಗುಣಗಳನ್ನು ತೋರಿಸಿ ಒಬ್ಬೊಬ್ಬರನ್ನು ಆನಂದಗೊಳಿಸಿದ್ದನ್ನು ವಿಸ್ತಾರವಾಗಿ ಹೇಳಿದರೆ ಭಾರತವಾಗುತ್ತೆ.

7. **ವಿರಾಮಃ**—"ರಮಯತೀತಿ ರಾಮಃ" ಎನ್ನುವ ಹಾಗೆ "ವಿರಮಯತೀತಿ ವಿರಾಮಃ" ಎಂದಾಗುತ್ತದೆ. ವಿರಾಮವೆಂದರೆ ವಿಶ್ರಾಂತಿ. ಇತರರ ಶೌರ್ಯ, ವೀರ್ಯ, ಪರಾಕ್ರಮವನ್ನು ಶಮನಗೊಳಿಸುತ್ತಾನೆ. ಮತ್ತೊಬ್ಬರ

ವಾದವನ್ನು ನಿರ್ಮೂಲ ಮಾಡುತ್ತಾನೆಂದು ಎರಡು ಅರ್ಥವನ್ನು ತೆಗೆದುಕೊಳ್ಳಬಹುದು. ಮೊದಲಿನ ಅರ್ಥಕ್ಕೆ ವಿಶೇಷವಾಗಿ ವಿವರಣೆಯನ್ನು ತೋರಿಸಬೇಕಾದ ಅವಶ್ಯಕತೆ ಇದೆಯೇ ? ಇದಕ್ಕೆ " ಬ್ರಹ್ಮಾ ಸ್ವಯಂಭೂ ಶ್ಚತುರಾನನೋ ವಾ ರುದ್ರಃ ತ್ರಿನೇತ್ರಃ ತ್ರಿಪುರಾಂತಕೋ ವಾ । ಇಂದ್ರೋ ಮಹೇಂದ್ರ ಸ್ಸುರನಾಯಕೋ ವಾ ತ್ರಾತುಂ ನ ಶಕ್ತಾ ಯುಧಿ ರಾಮವಧ್ಯಂ " ಎನ್ನುವ ಹನುಮಂತನ ವಾಕ್ಯವೊಂದೇ ಸಾಕು. ಇತರರ ವಾದವನ್ನು ನಾಶಪಡಿಸುವಂತಹವರು ಎರಡನೆಯ ಅರ್ಥಕ್ಕೆ ಸೇರಿದ ಹಾಗೆ ಕೆಲವು ಸ್ಥಳಗಳನ್ನು ಉಲ್ಲೇಖಿಸುತ್ತೇವೆ. (ಅರಣ್ಯಕಾಂಡ ಆರನೆಯ ಸರ್ಗದಲ್ಲಿ) ದಂಡಕಾರಣ್ಯವಾಸಿಗಳಾದ ಮುನಿಗಳು ರಾಕ್ಷಸರುಗಳಿಂದ ತಮಗೆ ಒದಗಿದ ಕಷ್ಟಗಳನ್ನು ಶ್ರೀ ರಾಮಚಂದ್ರನಲ್ಲಿ ವಿಜ್ಞಾಪಿಸಿ ಶರಣು ಹೊಂದಿದಾಗ ರಾಮನು ಆ ಮುನಿಗಳಿಗೆ ಅಭಯಪ್ರದಾನ ಮಾಡಿದ ವೃತ್ತಾಂತವನ್ನು ವರ್ಣಿಸಲಾಗಿರುತ್ತೆ. ಪುನಃ ಒಂಭತ್ತನೆಯ ಸರ್ಗದಲ್ಲಿ ಸೀತಾದೇವಿಯು ರಾಘವನನ್ನು ನೋಡಿ ತರ್ಕ ಮಾತನಾಡಿದಳು. (ಅದು ಏನೆಂದರೆ) " ನೀವು ಮುನಿ ವೇಷವನ್ನು ಧರಿಸಿ ಕಾಡಿಗೆ ಬಂದಿರುತ್ತೀರಿ. ಪುಣ್ಯ ಕಾರ್ಯಗಳನ್ನು ಮಾಡಿ ಸುಖವಾಗಿ ಅಯೋಧ್ಯೆಗೆ ಹಿಂತಿರುಗಿ ಹೋಗಿ ಸೇರಬೇಕಾಗಿರುವ ಸಮಯವಿದು. ಹಾಗಿರುವಾಗ ಋಷಿಗಳ ಮುಂದೆಯೇ ಪರಹಿಂಸೆ ಮಾಡುವುದಾಗಿ ಪ್ರತಿಜ್ಞೆ ಮಾಡಿದ್ದು ನನಗೆ ಸ್ವಲ್ಪಮಾತ್ರವೂ ಹಿಡಿಸಲಿಲ್ಲ. ಕ್ಷತ್ರಿಯರುಗಳಿಗೆ ಇದು ಧರ್ಮವಾದರೂ ಈಗ ತಾವು ಕ್ಷತ್ರಿಯ ಧರ್ಮವನ್ನು ಪಾಲಿಸುವ ಸ್ಥಿತಿಯಲ್ಲಿ ಇಲ್ಲದೆ ಕಾಡಿಗೆ ಬಂದಿರುವುದರಿಂದ, ಆಯುಧವನ್ನು ತೆಗೆದುಕೊಂಡು ಮಾಡುವಂತಹ ಕಾರ್ಯವನ್ನು ನೀವು ಮನಸ್ಸಿನಲ್ಲಿಯೂ ನೆನೆಸಲು ಉಚಿತವಲ್ಲ ; ನಿಮಗೆ ತಿಳಿಯದ್ದು ಒಂದೂ ಇಲ್ಲ. ನಿಮಗೆ ನಾನು ಧರ್ಮೋಪದೇಶ ಮಾಡುವುದಕ್ಕಾಗಿ ಬಂದೆನೆಂದು ತಿಳಿಯಬೇಡಿ ; ತಮ್ಮನೊಂದಿಗೆ ಆಲೋಚಿಸಿ ಯುಕ್ತವಾದದ್ದನ್ನು ಮಾಡಬಹುದು "...... ಎಂದು ಹೇಳಿದಳು. ಇದನ್ನು ಕೇಳಿದ ರಾಮನು (ಹತ್ತನೆಯ ಸರ್ಗದಲ್ಲಿ) ಆ ಸೀತಾದೇವಿಯ ವಾದಕ್ಕೆ ವಿರಾಮವನ್ನು ಮಾಡಿರುವುದನ್ನು ನೋಡಬೇಕು. ಅದರಲ್ಲಿ ಸಾರವಾದ ವಿಷಯ ಇಷ್ಟೇ. "ಅಪ್ಯಹಂ ಜೀವಿತಂ ಜಹ್ಯಾಂ ತ್ವಾಂ ವಾ ಸೀತೇ ! ಸಲಕ್ಷ್ಮಣಾಂ॥ ನಹಿ ಪ್ರತಿಜ್ಞಾಂ ಸಂಶ್ರುತ್ಯ ಬ್ರಾಹ್ಮಣೇಭ್ಯೋ ವಿಶೇಷತಃ" ಇತ್ಯಾದಿಗಳನ್ನು ಹೇಳಿ ಅವಳ ವಾದವನ್ನು ನಿಲ್ಲಿಸಿದನು.

8. ವಿರತಿಃ–ತಮ್ಮ ಸಮೀಚೀನ ವಾದಗಳಿಂದ ಬೇರೆಯವರ ವಾದವನ್ನು ವಿರಾಮಗೊಳಿಸುವುದರಿಂದ " ವಿರಾಮಃ " ಎಂದು ಮೇಲೆ ಹೇಳಿದ ಶುಭನಾಮದಿಂದ ಅನುಭವವಾಯಿತು. ಇತರರ ಉಚಿತವಾದ ವಾದಗಳಿಂದ ತಾವು ವಿರಾಮ ಹೊಂದುವುದು ಭಗವಂತನ ಹತ್ತಿರ ಕಾಣಬಹುದು. ತಾವು ಹೇಳಿದ್ದೇ ಸರಿ ಎನ್ನುವ ಹಠವಿಲ್ಲದೆ " ಯುಕ್ತಿಯುಕ್ತಂ ವಚೋಗ್ರಾಹ್ಯಂ " ಎಂದುಕೊಂಡು ತಮ್ಮ ವಾದಕ್ಕೆ ವಿಶ್ರಾಂತಿಯನ್ನುಂಟು ಮಾಡುತ್ತಾನೆ ಪರಮಾತ್ಮ. ಕಾರಣ ವಿಶೇಷದಿಂದ ತಾವು ನಿಗ್ರಹ

ಮಾಡಲು ಹೊರಟರೂ, ತಕ್ಷಣ ಒಳ್ಳೆಯದನ್ನು ಕಂಡು ನಿಗ್ರಹದಲ್ಲಿ ತೊಡಗಿದ್ದರೂ ವಿರತನಾಗಿ ಅನುಗ್ರಹೋನ್ಮುಖನಾಗುತ್ತಾನೆ, ಎಂಬುದನ್ನು ನೋಡಬಹುದು. ಈ ಎರಡನ್ನು ಸೇರಿಸಿಯೇ ವಿವರಿಸುತ್ತೇವೆ. ಅಯೋಧ್ಯಾಕಾಂಡ ಇಪ್ಪತ್ತಾರನೆಯ ಸರ್ಗದಲ್ಲಿ ಶ್ರೀ ರಾಮಚಂದ್ರನು ತಾಯಿ–ತಂದೆಯ ಮಾತಿನಂತೆ ಕಾಡಿಗೆ ಹೊರಡ ಬೇಕಾದುದನ್ನು ಸೀತಾದೇವಿಗೆ ಹೇಳಿ ಅವಳನ್ನು ನಗರದಲ್ಲಿಯೇ ಇರಲು ಏರ್ಪಡಿಸಬೇಕೆಂದು, (ಸರ್ಗ 27) ಅದಕ್ಕೆ ಸೀತಾದೇವಿಯು ತನ್ನನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗಬೇಕೆಂದು ನಿರ್ಬಂಧಿಸಲು (ಸರ್ಗ 28) ಅವಳಿಗೆ ರಾಮನು ಕಾಡಿನ ಕಷ್ಟಗಳನ್ನು ಹೇಳಿ "ನೀನು ಕಾಡಿಗೆ ಬರಲು ಸಾಧ್ಯವೇ ಇಲ್ಲ" ಎಂದು ದೃಢವಾಗಿ ತರ್ಕಿಸಿದನು. ಆದಾದ ನಂತರ ದೇವಿಯು (29.30) ಸರ್ಗಗಳಲ್ಲಿ ಪ್ರಣಯ ರೋಷವತ್ಯಧಿಕವಾಗಲು "ರಾಮ ನಿನ್ನ ಹತ್ತಿರ ಸೌಂದರ್ಯ ಮಾತ್ರ ಇದೆ; ಅದನ್ನು ಕಂಡು ಎಲ್ಲರೂ ಮುಗ್ಧರಾಗಿ ಬಿಡುತ್ತಾರೆ. ನಿನಗೆ ಪುರುಷತ್ವವು ಸ್ವಲ್ಪ ಮಾತ್ರವೂ ಇಲ್ಲ. ನನ್ನೊಬ್ಬಳನ್ನು ರಕ್ಷಿಸಲಾರದ ನನ್ನನ್ನು ನಿಲ್ಲಿಸಿ ನೀನು ಕಾಡಿಗೆ ಹೋದೆಯೆಂದು ನನ್ನ ತಂದೆಯವರು ಕೇಳಿದ್ದೇ ಆದರೆ ಹಾ! ಪುರುಷ ವೇಷ ಹಾಕಿಕೊಂಡು ಬಂದ ಒಬ್ಬ ಹೆಣ್ಣಿಗನಿಗೆ ನನ್ನ ಮಗಳನ್ನು ಕೊಟ್ಟೆ! ಎಂದು ಅತ್ಯಂತ ಮನನೊಂದು ಕೊಳ್ಳುತ್ತಾರೆ! ನನ್ನನ್ನು ಕಾಡಿನಲ್ಲಿ ರಕ್ಷಿಸಲಾರದ ಕಾಪುರುಷನು ನೀನು? ಎಂದು ಅನೇಕವಾಗಿ ತರ್ಕಿಸಲು. ಶ್ರೀ ರಾಮನು ತನ್ನ ಹಠವಾದವನ್ನು ಬಿಟ್ಟು ಅವಳನ್ನು ತನ್ನೊಡನೆ ಕರೆದುಕೊಂಡು ಹೋಗಲು ಒಪ್ಪಿಕೊಂಡನು.

ಕಾರಣ ವಿಶೇಷದಿಂದ ನಿಗ್ರಹಿಸಲು ಹೊರಟು ನಿಗ್ರಹದಲ್ಲಿ ತೊಡಗಿದ್ದರೂ ತಟಸ್ಥನಾಗುವುದನ್ನು ಎರಡು ಸ್ಥಳಗಳಲ್ಲಿ ತೋರಿಸುತ್ತೇವೆ. ಕಿಷ್ಕಿಂಧಾಕಾಂಡದಲ್ಲಿ (ಸರ್ಗ 30) ಸುಗ್ರೀವ ಮಹಾರಾಜರು ವರ್ಷಾಕಾಲದಲ್ಲಿ ಪರಮಾತ್ಮನು ವಿಶ್ರಾಂತಿಯನ್ನು ಕೊಟ್ಟದ್ದೇ ನೆಪವಾಗಿ ವಿಷಯ ಭೋಗಗಳಲ್ಲಿ ಮುಳುಗಿ ಇರಲು, ಕಾಲಕಳೆದರೂ ಸೈನ್ಯಗಳನ್ನು ಸೇರಿಸಿಕೊಂಡು ಬರದೇ ಇರುವುದನ್ನು ಕಂಡು ಭಗವಂತನು ಕ್ರೋಧಗೊಂಡು ನಿಗ್ರಹಿಸಲು ನಿಶ್ಚಯಿಸಿದಂತೆಯೇ, ಲಕ್ಷ್ಮಣನ ಮುಖಾಂತರ ತಿಳಿಸ ಬೇಕೆಂದೆಣಿಸಿ "ನ ಚ ಸಂಕುಚಿತಃ ಪಂಥಾಯೇನ ವಾಲೀ ಹತೋಗತಃ" "ಮಾ ವಾಲಿ ಪಥಮನ್ವಗಾಃ", "ಹನಿಷ್ಯಾಮಿ ಸ ಬಾಂಧವಂ" ಮುಂತಾಗಿ ಹೇಳಿ ಭಯಪಡಿಸಿದರು. ಸುಗ್ರೀವನ ಕುಟುಂಬ ಸಮೇತನಾಗಿ ನಾಶವಾಗಿ ಬಿಟ್ಟನೆಂದೇ ನೆನೆಸಬೇಕಾಯಿತು. ಈ ಪ್ರಬಲವಾದ ನಿಗ್ರಹ ಸಂಕಲ್ಪವು ಏನಾಯಿತು? "ರಾಮ ಸುಗ್ರೀವಯೋರೈಕ್ಯಂ ದೇವ್ಯೇವಂ ಸಮಜಾಯತ" ಎಂದು ದೇವಿಯ ಸಮೀಪದಲ್ಲಿ ಹೇಳುವಂತಲ್ಲವೆ ಆಯಿತು?

"ವಾನರಾಣಾಂ ನರಾಣಾಂಚ ಕಥಮಾಸೀತ್ ಸಮಾಗಮಃ?" ಎಂದು ದೇವಿಯು ಹನುಮಂತನನ್ನು ಕೇಳಿದಳು. ಕಾಡುಮೇಡುಗಳಲ್ಲಿ ತಿರುಗುವ ಕಪಿಗಳಿಗೂ ಪುರುಷೋತ್ತಮರುಗಳಿಗೂ ಹೊಂದಿಕೆ ಉಂಟಾಗಿದ್ದು ಹೇಗೆ? ಎಂದು ಕೇಳಿದಳು. ಅದಕ್ಕೆ ಮಾರುತಿಯು ಹೇಳಿದ್ದು, " ಕೇವಲ ಸಮಾಗಮವಲ್ಲ; ರಾಮನೂ ಸುಗ್ರೀವನೂ ಏಕ

ತತ್ವವನ್ನು ಎಂತಲ್ಲವೆ ಹೊಂದಿಕೊಂಡಿರುತ್ತಾರೆ ?'' ಎಂಬುವುದು ಆದ್ದರಿಂದ ನಿಗ್ರಹದಲ್ಲಿ ಸಹ ವಿರಾಮವನ್ನು ಹೊಂದಿದ್ದರಿಂದ "ವಿರತ" ನೆನ್ನುವುದು ಒಪ್ಪುತ್ತದೆ. ಮತ್ತೊಂದು ಸ್ಥಳ ಯುದ್ಧಕಾಂಡದಲ್ಲಿ ಸಮುದ್ರ ಶರಣಾಗತಿ ಪ್ರಕರಣವಾಗುತ್ತದೆ.

"ಬಾಹುಂ ಭುಜಗ ಭೋಗಾಭಮುಪಧಾಯಾರಿ ಸೂದನಃ ಅಂಜಲಿಂ ಪ್ರಾಙ್ಮುಖಃ ಕೃತ್ವಾ ಪ್ರತಿಶಿಶ್ಯೇ ಮಹೋದಧೇಃ'' ಎನ್ನುವಂತೆ ಸಮುದ್ರ ರಾಜನನ್ನು ಮಾರ್ಗವನ್ನು ಕೋರಿ ಧರಾಶಾಯಿಯಾಗಿ ಇದ್ದರು ಪರಮಾತ್ಮ. ಅವನೋ ಮುಖ ತೋರಿಸಲಿಲ್ಲ. "ಚಾಪಮಾನಯ ಸೌಮಿತ್ರೇ ಶರಾಂಶ್ಚ ಆಶೀವಿಷೋಪಮಾನ್, ಸಾಗರಂ ಶೋಷಯಿಷ್ಯಾಮಿ, ಪದ್ಭ್ಯಾಂ ಯಾಂತು ಪ್ಲವಂಗಮಾಃ'' ಎಂದು ಅನೇಕವಾಗಿ ಹೇಳಿ ಪ್ರಪಂಚದಲ್ಲಿ ಜಲತತ್ವವೇ ಇಲ್ಲದ ಹಾಗೆ ಮಾಡಿಬಿಡುತ್ತೇನೆಂದು ಕೋಪಾವೇಶದ ತುಟ್ಟತುದಿಯಲ್ಲಿ ನಿಂತನು ಭಗವಂತ. ಅನಂತರ ಏನಾಯಿತು ? ಆ ಸಮುದ್ರ ರಾಜನು ಸ್ವಲ್ಪ ವಿನೀತನಾಗಿ ಅಭಿಮುಖ ತೋರಿಸಿದನು. "ಸಮುದ್ರ ರಾಜನೇ ! ಈ ಬಾಣವು ನಿನಗಾಗಿ ನಾಣೇರಿಸಿದಲ್ಲಿ ನಿನ್ನ ಶತ್ರುಗಳ ಮೇಲೆ ಪ್ರಯೋಗಿಸಲು ಮಾಡಿದ್ದಷ್ಟೆ ; ನಿನ್ನ ಶತ್ರುಗಳನ್ನು ತೋರಿಸಿಕೊಡು'' ಎಂದು ಹೇಳಿ ಅವನು ತೋರಿಸಿಕೊಟ್ಟ ದ್ರುಮಕುಲ್ಯ ಎನ್ನುವ ಸ್ಥಳದಲ್ಲಿ ಬಾಣವನ್ನು ಬಿಟ್ಟು ಅನುಗ್ರಹಶೀಲರಾಗಿ ನಿಗ್ರಹದಲ್ಲಿ ತೊಡಗಿದ್ದರೂ ವಿರತರಾದರು (ಯುದ್ಧಕಾಂಡ ಸರ್ಗ 22)...ಅನಂತರ ಘೋರಯುದ್ಧವು ರಾವಣನೊಂದಿಗೆ ನಡೆಯುವಾಗ ಅವನು "ಚಚಾಲ ಚಾಪಂಚ ಮುಮೋಚವೀರಃ" ಎನ್ನುವ ಹಾಗೆ ಬಳಲಿ ನಿಂತ "ಗಚ್ಛ ಅನುಜಾನಾಮಿ" ಎಂದು ಆಜ್ಞಾಪಿಸಿ ಹೋಗಲು ಬಿಟ್ಟು ಆಗ ಯುದ್ಧದಲ್ಲಿ ನಿಂತು ವಿರತರಾದರು. ಪರಮಾತ್ಮ—ಎನ್ನುವುದನ್ನು ಇಲ್ಲಿ "ವಿರತಃ" ಎನ್ನುವ ಶುಭನಾಮಕ್ಕೆ ಅರ್ಥವಾಗಿ ತೆಗೆದುಕೊಳ್ಳಬಹುದು. ಇನ್ನು ಮುಂದಿನ ದಿವ್ಯ ಮಂಗಳವಾದ ಹೆಸರನ್ನು ನೋಡೋಣ.

9. **ಮಾರ್ಗಃ**—"ಮಾರ್ಗ್ಯತೇ ಇತಿ ಮಾರ್ಗಃ'' ಮಾರ್ಗವಾದುದು. ಹುಡುಕುವುದು. ಅರಸುವವನು ಎನ್ನುವ **ಹಾಗೆ** ಅರಸಲ್ಪಡುವವನು ಎನ್ನುವ ಅರ್ಥವೂ ಬರುತ್ತದೆ. ಹುಡುಕುವವರನ್ನು ತೋರಲು ವಿವರಿಸುತ್ತೇನೆ. ವೇದಾಂತಗಳಲ್ಲಿ "ಸೋಽನ್ವೇಷ್ಟವ್ಯಃ" ಎಂದು ಹೇಳಲ್ಪಟ್ಟಿವೆ. ಭಗವಂತನು ಹುಡುಕ ಬೇಕಾದವನು ಎನ್ನುವ ಹಾಗೆ ಈ ಶ್ರುತಿಯ ಆಧಾರದಿಂದಲೇ ತಿರುಮಂಗೈ ಆಳ್ವಾರ್ "ನಾನ್ ಮರ್ಯ್ಯಹಳ್ ತೇಡಿ ನೋಡುಂ ಶೆಲ್ವನ್'' ನಾನ್ ಮರ್ಯ್ಯಹಳ್ ತೇಡಿಯುಮ್ ಕಾಣ ಮಾಟ್ಟಾನ್ ಶೆಲ್ವನ್...ಎಂದು ವಿವರಿಸುತ್ತಾರೆ. ಉತ್ತರ ಶ್ರೀ ರಾಮಾಯಣದಲ್ಲಿ ಶಂಬೂಕ ಕಥೆ ಎಂದೊಂದು ಘಟ್ಟದಲ್ಲಿ ತಪಸ್ಸು ಮಾಡದ ಜಾತಿಯಲ್ಲಿ ಹುಟ್ಟಿದವನೊಬ್ಬ, ದಂಡಕಾರಣ್ಯದಲ್ಲಿ ಕಠೋರವಾದ ತಪಸ್ಸುಮಾಡಲು, ಅದರಿಂದ ಅಯೋಧ್ಯೆಯಲ್ಲಿ ಒಬ್ಬ ಬ್ರಾಹ್ಮಣನ ಶಿಶುವು ಮೃತಿ ಹೊಂದಲು, ಆ ಶೂದ್ರ ತಪಸ್ವಿಯನ್ನು ಕೊಲ್ಲದೆ ಈ ಬ್ರಾಹ್ಮಣ ಶಿಶು ಜೀವಿಸಲಾರದೆಂದು ಪರಮಾತ್ಮನು ಅವನನ್ನು ವಧಿಸಲು

ನಿಶ್ಚಯಿಸಿ ಕೈಯಲ್ಲಿ ಕತ್ತಿಯನ್ನು ಹಿಡಿದು ದಂಡಕಾರಣ್ಯಕ್ಕೆ ಹೋದನು. ಕಾಡಿಗೆ ಹೊರಟು ನಿಂತ ಭಗವಂತನು ಶಂಬೂಕನೆನ್ನುವ ಶೂದ್ರನು ತಪಸ್ಸುಮಾಡುತ್ತಾನಂತಲ್ಲ; ಎಲ್ಲಿ ಎಲ್ಲಿ? ಕೇಳಿಕೊಂಡೇ ಅವನನ್ನು ಹುಡುಕಿಕೊಂಡೇ ಹೋಗುತ್ತಾನೆ. ಹೋಗಿ ಅವನನ್ನು ಕೊಲ್ಲಲು ಹೋದಾಗ ಅವನು ಹೇಳುತ್ತಾನೆ. "ಅನ್ವೇಷ್ಟವ್ಯೋ...ಭುವನೇ ಲೋಕನಾಥಃ ಶರಣ್ಯಃ ಮಾಂ ಅನ್ವಿಷ್ಯ (ಉತ್ತರ ರಾಮಚರಿತೆ ಭವಭೂತಿ)" ಎನ್ನುತ್ತಾನೆ. "ಜಗತ್ತಿನಿಂದ ಹುಡುಕಲ್ಪಡುವವನಾಗಿರುವನೆಂದು ವೇದಗಳಲ್ಲಿ ಹೇಳಿರುವ ಮಹಾಪ್ರಭುವೇ! ನೀನು ನನ್ನನ್ನು ಹುಡಿಕಿಕೊಂಡು ಬಂದೆಯಲ್ಲ! ನಾನು ಎಷ್ಟು ಭಾಗ್ಯಶಾಲಿ," ಎನ್ನುತ್ತಾನೆ. ಇಲ್ಲಿ ಕರ್ತರಿ ಅರ್ಥ ಕರ್ಮಣಿ ಅರ್ಥ ಎರಡು ತಾತ್ಪರ್ಯಗಳನ್ನೂ ಕಾಣಬಹುದು. ಮಾರೀಚ ಮಾಯಾಮೃಗವನ್ನು ವಧೆಮಾಡಿ ಹಿಂತಿರುಗಿದ ನಂತರ ಪರ್ಣಶಾಲೆಯಲ್ಲಿ ದೇವಿಯನ್ನು ಕಾಣದೆ ಅವಳನ್ನು ಹುಡುಕಿಕೊಂಡು ತಿರುಗಿ ರಾಕ್ಷಸನಾದ ಕಬಂಧನ ಮಾತಿನಂತೆ ಶಬರಿಯನ್ನು ಸುಗ್ರೀವನನ್ನು ಹುಡುಕಿಕೊಂಡು ಹೋಗಿದ್ದನ್ನೂ ಹೇಳಬಹುದು. ಮಾರ್ಗ ಎನ್ನುವುದಕ್ಕೆ ದಾರಿಯಾಗಿರುವವನು, ಮಾರ್ಗದರ್ಶಕನೆಂಬ ಅರ್ಥವನ್ನೂ ತೆಗೆದುಕೊಳ್ಳಬಹುದು. ಮಾರ್ಗ ಎಂದರೇ ಉಪಾಯ (ನೆರಿ) ಎಂಬುದೂ ಪರ್ಯಾಯ. ನಮ್ಮಾಳ್ವಾರ್ರು ಪೆರಿಯತಿರುವಂದಾದಿಯಲ್ಲಿ "ನೆರಿಕಾಟ್ಟಿನೀಕ್ಕುದಿಯೋನ್" ಎನ್ನುವ ಪಾಶುರದಲ್ಲಿ (ಶ್ಲೋಕದಲ್ಲಿ) ಉಪಾಯವೆಂಬ ಅರ್ಥದಲ್ಲಿ "ನೆರಿ" ಎಂಬ ನುಡಿಯನ್ನು ಪ್ರಯೋಗಿಸುವುದರಿಂದ ಮಾರ್ಗ ಎನ್ನುವ ಉತ್ತರದ ಮಾತೂ ಉಪಾಯವಾಚಕವಾಗುವುದರಲ್ಲಿ ಏನೂ ಆಶ್ಚರ್ಯವಿಲ್ಲ. ಮುಕುಂದ ಮಾಲೆಯಲ್ಲಿ "ಕರಚರಣ ಸರೋಜೆ ಕಾಂತಿಮನ್ನೇತ್ರ ಮೀನೇ ಶ್ರಮಮುಷಿ ಭುಜವೀಚಿ ವ್ಯಾಕುಲೇಗಾಧಮಾರ್ಗೇ ಹರಿಸರಸಿ ವಿಗಾಹ್ಯ"... ಎನ್ನುವ ಶ್ಲೋಕದಲ್ಲಿ "ಅಗಾಧಮಾರ್ಗೇ" ಎನ್ನುವ ಸ್ಥಳದಲ್ಲಿ ಮಾರ್ಗ ಶಬ್ದವು ಉಪಾಯಾರ್ಥವಾಗಿಯೇ ಪ್ರಯೋಗಿಸಲ್ಪಟ್ಟಿದೆ. "ಉಪಾಯೋಪೇಯತ್ವೇ ತದಿಹ ತವ ತತ್ತ್ವಂ ನತು ಗುಣೌ" ಎಂದು ಶ್ರೀರಂಗರಾಜಸ್ತವದಲ್ಲಿ ಭಟ್ಟರು ಹೇಳಿರುವ ಹಾಗೆ ಭಗವಂತನಿಗೆ ಉಪಾಯತ್ವ ಸ್ವರೂಪವಾದ್ದರಿಂದ, ಉಪೇಯ ಭೂತನಾದ ತಾನೇ ಉಪಾಯವೂ ಆಗಿರುವ ರೀತಿಯನ್ನು ಹೇಳಲಾಗಿದೆ. ರಾವಣವಧೆಯಾದ ನಂತರ ಬ್ರಹ್ಮದೇವನು ಬಂದು ಮಾಡುವ ಸ್ತುತಿಯಲ್ಲಿ "ಶರಣ್ಯಂ ಶರಣಂ ಚ ತ್ವಾಂ ಆಹುರ್ ದಿವ್ಯಾ ಮಹರ್ಷಯಃ" ಎಂಬುವುದರಿಂದ ವಿವರಿಸಲ್ಪಟ್ಟ ಅರ್ಥವೇ ಅಲ್ಲವೇ ಇದು. ಇನ್ನು ಮಾರ್ಗದರ್ಶಕ ಎನ್ನುವ ಅರ್ಥಕ್ಕೆ ಸಮನ್ವಯ ಜಟಾಯುವಿನ ಹತ್ತಿರ ನೋಡಬಹುದು. "ಮಯಾತ್ವಂ ಸಮನುಜ್ಞಾತಃ ಗಚ್ಛಲೋಕಾನ್ ಅನುತ್ತಮಾನ್" ಎಂದು ಹೇಳಿ ಜಟಾಯುವಿಗೆ ವೈಕುಂಠಕ್ಕೆ ಹೋಗಲು ಮಾರ್ಗದರ್ಶನ ಮಾಡಿದನಲ್ಲವೇ ಭಗವಂತ! "ಯಾ ಗತಿರ್ಯಜ್ಞಶೀಲಾನಾಂ" ಮುಂತಾಗಿ ಹೇಳಿರುವ ರಾಮವಾಕ್ಯದಲ್ಲಿ "ಗತಿಃ" ಎನ್ನುವುದಕ್ಕೆ ಮಾರ್ಗವೆನ್ನುವುದೇ ತಾತ್ಪರ್ಯ.

ಭಗವದ್ಗೀತೆಯಲ್ಲಿ (8-26) "ಶುಕ್ಲಕೃಷ್ಣೇಗತೀಹ್ಯೇತೇ" ಎನ್ನುವ ಸ್ಥಳದಲ್ಲಿ ಗತಿ ಶಬ್ದಾರ್ಥ ಮಾರ್ಗವೇ ಇನ್ನು ಮತ್ತೊಂದು ಶ್ರೇಷ್ಠ ಹೆಸರನ್ನು ಅನುಸಂಧಾನ ಮಾಡುವೆವು.

10. **ನೇಯಃ**–ನಾಯಕನೆನ್ನುವ ಅರ್ಥದಲ್ಲಿ ನೇತಾ ಎಂದು ಹೇಳುವ ಮಾತಿಗೆ ವಿರೋಧವಾದ ನುಡಿ "ನೇಯಃ" ಎನ್ನುವುದು. ಆಜ್ಞೆಮಾಡುವವನನ್ನು (ನೇತಾ) ನಾಯಕನೆನ್ನುತ್ತೇವೆ. "ಯಸ್ಯ ವಿಶ್ವ ಉಪಾಸತೇ ಪ್ರಶಿಷಂ ಯಸ್ಯದೇವಾಃ" ಎಂದು ವೇದವು ಹೇಳಿರುವ ಪ್ರಕಾರವೂ ಆಳ್ವಾರ್ ಹೇಳಿರುವ ಹಾಗೂ "ಮನುಷ್ಯರಿಗೆ ದೇವರ ಹಾಗೆ ದೇವತೆಗಳಿಗೆ ದೇವನಾಗಿರುವ ತಾನು, ಸಕಲ ದೇವತೆಗಳಿಗೂ ಆಜ್ಞೆಮಾಡಿ ಸೇವೆ ಮಾಡಿಸಿಕೊಳ್ಳಲು ತಕ್ಕವನಾಗಿದ್ದರೂ, ಇತರರು ತನಗೆ ಆಜ್ಞೆಮಾಡುವ ಹಾಗೆ ಆಯಿತು ಶ್ರೀ ರಾಮಾವತಾರದಲ್ಲಿ. ವಿಶ್ವಾಮಿತ್ರ ಮುನಿವರು ತಾನು ಒಂದು ಯಾಗ ಮಾಡುವುದಾಗಿ ಪ್ರಾರಂಭಿಸಿ ಅದು ನಿರ್ವಿಘ್ನವಾಗಿ ನಡೆಸಲೆಂದು ದಶರಥ ಚಕ್ರವರ್ತಿಯ ಹತ್ತಿರ ಬಂದು ರಾಮನನ್ನು ಕಳುಹಿಸು ಎಂದು ಕೇಳಿದನು. ಅದಕ್ಕೆ ರಾಜನು ಒಪ್ಪಲಿಲ್ಲ. ರಾಕ್ಷಸರೊಂದಿಗೆ ಯುದ್ಧಮಾಡಲು ತಕ್ಕ ಮನಸ್ಸಿಲ್ಲದೆ ಇರುವುದರಿಂದ ಅತ್ಯಂತ ಚಿಕ್ಕವರಾದ ನನ್ನ ಕುಮಾರರನ್ನು ನಾನು ನಿಮ್ಮೊಂದಿಗೂ ಕೂಡ ಕಳುಹಿಸುವುದಿಲ್ಲ ಎನ್ನುತ್ತಾನೆ. ಅದಕ್ಕೆ ಮುನಿವರನು ರಾಜನನ್ನು ಕುರಿತು, "ಇವನ ಹಿರಿಮೆಯನ್ನು ನೀನು ತಿಳಿದಿಲ್ಲ. ಅತ್ಯಧಿಕ ಹಿರಿಯನಾದ ಇವನನ್ನು ಅತ್ಯಂತ ಚಿಕ್ಕವನೆಂದು ಮಾತ್ರ ನೀನು ತಿಳಿದಿರುವೆ. "ವೇದಾಹ ಮೇತಂಪುರುಷಂ ಮಹಾಂತಂ" ಎಂದು ವೇದವು ಹೇಳಿರುವ ಹಿರಿಮೆಯುಳ್ಳ ಮಹಾಪುರುಷನಲ್ಲವೇ ಇವನು. ಇವನನ್ನು ನಿಜಸ್ಥಿತಿಯಲ್ಲಿ ನಾನು ತಿಳಿದಿರುವೆನು, ನಾನು ಮಾತ್ರವಲ್ಲ, ನಿನ್ನ ಎದುರಿನಲ್ಲಿ ಕುಳಿತಿರುವ ತಪಸ್ವಿಗಳಾದ ಮಹಾಮುನಿಗಳು ಚೆನ್ನಾಗಿ ತಿಳಿದಿರುತ್ತಾರೆ ಎಂದು ಅನೇಕ ವಿಧವಾಗಿ ಹೇಳಿ, ಶ್ರೀ ರಾಮ ಲಕ್ಷ್ಮಣರುಗಳನ್ನು ಕರೆದುಕೊಂಡು ಹೋದನು. ತಂದೆಯೊಂದಿಗೆ ಋಷಿಯು ಈ ರೀತಿ ಮಾತನಾಡಿದ್ದನ್ನೆಲ್ಲಾ ಪ್ರಶಾಂತವಾಗಿ ಕೇಳಿಕೊಂಡಿದ್ದ ಶ್ರೀ ರಾಮಚಂದ್ರನು "ಶೇಷಭೂತನಾಗಿ ಪರತಂತ್ರನಾಗಿ ಹುಟ್ಟಬೇಕೆಂದು ಆಸೆಪಟ್ಟು ಬಂದ ನಮ್ಮನ್ನು ಪರಮಾತ್ಮನೆಂದು ಪ್ರಕಟಪಡಿಸಿ ಬಿಟ್ಟರಲ್ಲಾ! ಇದು ನಮ್ಮ ಸಂಕಲ್ಪಕ್ಕೆ ಯೋಗ್ಯವಾದುದಲ್ಲ। ಅನಂತರವೂ ಈ ವಿಶ್ವಾಮಿತ್ರರು ಇದುವರೆಗೂ ಎಷ್ಟೋ ಅದ್ಭುತವಾದ ಶ್ರೇಷ್ಠಯಾಗಗಳನ್ನೂ, ತಪಸ್ಸನ್ನೂ ಮಾಡಿರುತ್ತಾರೆ, ಆಗ ಯಾರನ್ನು ಜೊತೆಗೆ ಬೇಡಿದವರಲ್ಲ ಇವರು. ಈಗ ಇವರು ಅತ್ಯಂತ ಚಿಕ್ಕದಾಗಿ ಮಾಡಲು ಅಪೇಕ್ಷಿಸಿರುವ ಆರು ದಿನದ ಯಾಗಕ್ಕೆ ಜೊತೆ ಬೇಕೆಂದು ಬಂದಿರುವುದು ಸಾಧಾರಣವಲ್ಲ. ನಮ್ಮ ತಂದೆಯವರು ಚತುರಂಗ ಬಲದೊಂದಿಗೆ ತಾವು ಬಂದು ಲೀಲಾಜಾಲವಾಗಿ ಯಾಗ ಸಂರಕ್ಷಣ ಮಾಡುವುದಾಗಿ ಹೇಳಿದರೂ ಅದನ್ನು ಒಪ್ಪದೆ ನಮ್ಮನ್ನೇ ಬೇಡಿದ ಈ ಮುನಿವರಿಗೆ ಏನೋ ಒಂದು ವಿಶೇಷವಾದ ಅಭಿಪ್ರಾಯವಿರಬಹುದು. ನಮ್ಮನ್ನು ಹೊಂದಿ ಕಲಹವನ್ನು ಮಾಡಲು

ಅಪೇಕ್ಷಿಸಿರೋ (ಅದು ಯಾವುದು ? ನಾವು ಆಸೆಪಟ್ಟ ಶೇಷತ್ವವನ್ನು ಪ್ರಪಂಚಕ್ಕೆ ತಿಳಿಯುವಂತೆ ಮಾಡಲು ಅಪೇಕ್ಷಿಸಿಯೋ) ನಮ್ಮನ್ನು ಪ್ರಾರ್ಥಿಸಿ ತಂದಿರುವರೆಂಬ (ಬಂದಿರುವರೆಂಬ) ರಹಸ್ಯವನ್ನು ತಿಳಿದುಕೊಂಡು ಶ್ರೀ ರಾಮನು ಆ ಮುನಿವರಿಗೆ ಕೈಮುಗಿದು ಪ್ರಾರ್ಥಿಸುತ್ತಾನೆ. ಮುನಿಸಾರ್ವಭೌಮರೇ ! ನಾನು ಮತ್ತು ನನ್ನ ತಮ್ಮನಾದ ಲಕ್ಷ್ಮಣನೂ ನಿಮ್ಮ ಆಜ್ಞೆಯ ಪ್ರಕಾರ ನಡೆಯಲು ಬಂದವರು. ಯಾವಾಗಲೂ ನಿಮ್ಮ ಹತ್ತಿರವೇ ಇದ್ದು ನೀವು ಆಜ್ಞಾಪಿಸುವ ಕೆಲಸಗಳನ್ನು ಮಾಡಲು ನಾವಿಬ್ಬರೂ ಕಾದಿರುತ್ತೇವೆ. ನೀವು ಸಂಕೋಚವಿಲ್ಲದೆ ನಮಗೆ ಯಾವ ವಿಧವಾದ ಆಜ್ಞೆಯನ್ನು ಬೇಕಾದರೂ ಮಾಡಬಹುದು, ನಿಮಗೆ ಯಾವ ಸೇವೆಯನ್ನು ಮಾಡಬೇಕೆಂದು ನಿರೀಕ್ಷಿಸಿರುತ್ತೇವೆ ಎಂಬುದು. ಆದ್ದರಿಂದ, ಆಜ್ಞಾಪಕನಾದ ತಾನು ಆಜ್ಞಾಪಿತನಾಗುವುದಕ್ಕೆ ಆಸೆಪಟ್ಟಿದ್ದೇ "ನೇಯಃ" ಎನ್ನುವುದು ತಿಳಿಸುತ್ತದೆ. ಇನ್ನು ಮುಂದಿನ ದಿವ್ಯನಾಮದ ಕಡೆಗೆ ಗಮನಿಸೋಣ.

11. ನಯಃ—"ಅಸ್ಮಾನ್ ಸರ್ವಾನ್ ಸ್ವಯಂ ನಯತೀತಿ ನಯಃ." ಬೇರೆಯವರ ಆಜ್ಞೆಯನ್ನು ತಾನು ಎದುರು ನೋಡದ ಹಾಗೆಯೇ ನಡೆದುಕೊಳ್ಳುವದಾಗಿ ಮೇಲೆ ಹೇಳಿರುವ ಶುಭನಾಮವು ತೋರಿಸಿತು ("ಪತಿಂ ವಿಶ್ವಸ್ಯಾತ್ಮೇಶ್ವರಂ"). ಸ್ವೇಚ್ಛೆಯಿಂದಾದದ್ದು ನಿರುಪಾಧಿಕವಾಗಿ ಉಳ್ಳ ಹಿರಿಮೆಯನ್ನು ಹೇಳುವ ಸ್ಥಳದಲ್ಲಿ ಸರ್ವನಿರ್ವಾಹಕತ್ವವೇ ಅಲ್ಲವೇ ಅಸಾಧಾರಣವಾಗಿ ಹೇಳುವುದು ? ಶ್ರೀ ರಾಮಚಂದ್ರನು ತನ್ನನ್ನು ಕುರಿತು ತನ್ನ ಮಾತಿನಿಂದಲೇ ಹೇಳಿಕೊಳ್ಳುವಾಗ "ಆತ್ಮಾನಂ ಮಾನುಷಂ ಮನ್ಯೇ ರಾಮಂ ದಶರಥಾತ್ಮಜಂ" ಮುಂತಾಗಿ ಎಷ್ಟೇ ಹೇಳಿಕೊಂಡರೂ ಇತರರು ಹೇಳುವಾಗ ಅವನ ಹಿರಿಮೆಯನ್ನು ವಿಸ್ತಾರವಾಗಿ ಹೇಳಿರುವವರಲ್ಲವೆ ? "ಶರಣ್ಯಂ ಶರಣಂ ಚ ತ್ವಾಂ ಆಹುರ್ ದಿವ್ಯಾ ಮಹರ್ಷಯಃ.........ಜಗತ್ ಸರ್ವಂ ಶರೀರಂ ತೇ"..........ಮುಂತಾಗಿರುವಲ್ಲವೆ ಭಗವಂತನನ್ನು ಹೇಳಿರುವುದು. ಆದ್ದರಿಂದ "ನೇಯಃ" ಎನ್ನುವ ಮೇಲೆ ಹೇಳಿರುವ ಶ್ರೇಷ್ಠವಾದ ಹೆಸರಿಗೆ ನೇರ ವಿರೋಧವಾದ ನೇತಾ ಎನ್ನುವ ಶುಭನಾಮದ ಅರ್ಥವೇ "ನಯಃ" ಎನ್ನುವುದನ್ನು ತೆಗೆದುಕೊಳ್ಳಬಹುದು. ಹಾಗಿರುವುದರಿಂದ "ನಯತೀತಿ ನಯಃ"—ತೆಗೆದುಕೊಂಡು ಹೋಗುವವನು ಎನ್ನುವ ಹಾಗೆ ಶ್ರೀ ರಾಮನು ತನ್ನ ಸ್ಥಳಕ್ಕೆ ಹೊರಡುವಾಗ ತಾನು ಒಬ್ಬನೇ ಹೋಗಲಿಲ್ಲವಲ್ಲ "ಅನ್ರು ಚರಾಚರಂಗಳೈ ವೈಕುಂದತ್ತೇತ್ತಿ" ಎಂದು ಶ್ರೀ ಕುಲಶೇಖರ ಆಳ್ವಾರ್ರು, ಹೇಳಿರುವ ಹಾಗೆ ಚರಾಚರಗಳನ್ನು ಎಲ್ಲವೆ ಜೊತೆಯಲ್ಲಿ ಕರೆದುಕೊಂಡು ಹೋದರು ! ಇದನ್ನು ಸ್ವಲ್ಪ ವಿವರಿಸುತ್ತೇವೆ. ಲಕ್ಷ್ಮಣನನ್ನು ಬಿಟ್ಟು ವಿಯೋಗ ದುಃಖವನ್ನು ಸಹಿಸಲಾರದೆ, ಕ್ಲೇಶಗೊಂಡ ಶ್ರೀ ರಾಮನು ರಾಜ್ಯವನ್ನು ಬಿಟ್ಟು ಹೊರಡುವಾಗ ಅಯೋಧ್ಯಾನಗರದ ಜೀವಿಗಳೆಲ್ಲಾ ಪರಮಾತ್ಮನನ್ನು ಶರಣು ಹೊಂದಿ "ಸ್ವಾಮಿಯುವರು ಎಲ್ಲಿ ಹೋದರೂ ನಮ್ಮೆಲ್ಲರನ್ನೂ ಜೊತೆಯಲ್ಲಿಯೇ ಕರೆದುಕೊಂಡು ಹೋಗ

ಬೇಕು–ಎಂದು ಪ್ರಾರ್ಥಿಸಲು ಶ್ರೀರಾಮನು ಅವರ ಅತ್ಯದ್ಭುತವಾದ ಪ್ರೇಮವನ್ನು ಕಂಡು " ಹಾಗೆಯೇ ಆಗಲಿ " ಎಂದು ಅನುಗ್ರಹಿಸಿ ಎಲ್ಲರೂ ತಮ್ಮನ್ನು ಹಿಂಬಾಲಿಸು ವಂತೆ ನಿಯಮಿಸಿ ಪ್ರಯಾಣ ಹೊರಟರು. ಆ ನಗರದಲ್ಲಿದ್ದ ಮನುಷ್ಯರೇ ಅಲ್ಲ, ಪ್ರಾಣಿ, ಪಕ್ಷಿ ಮೊದಲಾದ ಜೀವ ಜಂತುಗಳೆಲ್ಲಾ ಸಂಭ್ರಮದಿಂದ ಭಗವಂತನನ್ನು ಹಿಂಬಾಲಿಸಲು. ಈ ರೀತಿ ಪ್ರಜೆಗಳಾದಿ ಸರ್ವರೊಂದಿಗೆ ಪರಮಾತ್ಮನು ಸರಯೂ ನದಿಯಲ್ಲಿ ಮುಳುಗಿ ಶರೀರವನ್ನು ತೊರೆದ ಎಲ್ಲಾ ಜೀವಿಗಳಿಗೂ ಬ್ರಹ್ಮಲೋಕಕ್ಕೆ ಮೇಲಾದ ಸಾಂತಾನಿಕ ವೆನ್ನುವ ಲೋಕವನ್ನು ಅನುಗ್ರಹಿಸಿದನೆಂಬುದು ಚರಿತ್ರೆ. ಹೀಗೆ (ನಯನಂ) ಉದ್ಧಾರ ಮಾಡಿರುವುದನ್ನು ವಿವರಿಸುವ "ನಯಃ" ಎನ್ನುವುದು ದಿವ್ಯ ನಾಮವು. ವರಾಹ ಚರಮ ಶ್ಲೋಕದಲ್ಲಿ "ಅಹಂ ಸ್ಮರಾಮಿ ಮದ್ಭಕ್ತಂ ನಯಾಮಿ ಪರಮಾಂ ಗತಿಂ". ಎಂದು ಹೇಳಿದ್ದಲ್ಲವೇ ?

12. **ಅನಯಃ**–ಇದಕ್ಕೆ ಭಾಷ್ಯದಲ್ಲಿ ಭಟ್ಟರು ಹೇಳಿರುವ ರಸವತ್ತಾದ ತಾತ್ಪರ್ಯವನ್ನು ಮೊದಲು ವಿವರಿಸುತ್ತೇನೆ. " ಅಯಃ ಶುಭಾವಹೋ ವಿಧಿಃ ಸಃ ಅಸ್ಮಾತ್ ಅನ್ಯಃ ಜಗತಾಂ ನಾಸ್ತಿ ಇತಿ ಅನಯಃ " ಎನ್ನುವುದು ಭಗವದ್ಗುಣ ದರ್ಪಣ ಶ್ರೀಸೂಕ್ತಿ. ಅಮರ ಕೋಶದಲ್ಲಿ "ಅಯಶ್ಶುಭಾವಹೋ ವಿಧಿಃ" ಎಂದಿದೆ. ಮೇಲ್ಮೆಯನ್ನುಂಟು ಮಾಡುವ ಕಾರ್ಯಕ್ಕೆ ಅಯವೆಂದು ಹೆಸರು. ಶ್ರೀ ರಾಮ ನಿಗಿಂತಲೂ ಮೇಲ್ಮೆಯನ್ನುಂಟುಮಾಡುವವರು ಮತ್ತಾರೂ ಇಲ್ಲವೆಂಬುದು ತಾತ್ಪರ್ಯ ವಾಗಿ ನಿರೂಪಿತವಾಗಿದೆ. ಸ್ತೋತ್ರರತ್ನದಲ್ಲಿ " ಅನುತ್ತಮಂ ಪಾತ್ರಮಿದಂ ದಯಾಯಾಃ" ಎನ್ನುವ ಸ್ಥಳದಲ್ಲಿ "ಅನುತ್ತಮಂ" ಎನ್ನುವ ಹಾಗೆ ಇಲ್ಲಿ "ಅನಯಃ" ಎನ್ನುವುದಕ್ಕೆ ಪಂಚಮೀ ಬಹುವ್ರೀಹಿ ಸಮಾಸ ಸರಿ ಹೊಂದುವುದೇ ಆಗಿದೆ. ಕೇಡ ನ್ನುಂಟುಮಾಡುವವರಿಗೂ ಒಳ್ಳೆಯದನ್ನೇ ಮಾಡುವಂತಹ ಹಿರಿಮೆಯುಳ್ಳವರಲ್ಲವೇ ಪರಮಾತ್ಮ !

" ನ ಸ್ಮರತ್ಯಪಕಾರಾಣಾಂ ಶತಮಪ್ಯಾತ್ಮವತ್ತಯಾ, ಕಥಂಚಿದುಪಕಾರೇಣ ಕೃತೇ ನೈಕೇನ ತುಷ್ಯತಿ " ಎಂದಲ್ಲವೆ ಅಯೋಧ್ಯಾವಾಸಿಗಳು ರಾಮ ಗುಣಕೀರ್ತನ ಮಾಡಿರು ವುದು ! ಮೇಲೆ ಹೇಳಿರುವ ಶ್ಲೋಕದಲ್ಲಿ–" ಕಥಂ ಚಿದುಪಕಾರೇಣ " ಎನ್ನುವುದರ ಅರ್ಥವನ್ನು ಗಹನವಾಗಿ ಯೋಚಿಸಿ ತಿಳಿಯಬೇಕು. ಇತರರು ಮಾಡುವುದು ನಿಜ ಸ್ಥಿತಿಯಲ್ಲಿ ಉಪಕಾರವಲ್ಲ. ಅವರು ಮಾಡಿದ್ದು ಅಪಕಾರವಾಗಿಯೇ ಇದ್ದರೂ ಕಥಂ ಚಿತ್ ಉಪಕಾರವಾಗಿ ಮಾಡಿ ಕೊಳ್ಳಲ್ಪಡುವುದೆಂಬುದಾಗಿದೆ. ಇದನ್ನು ಶ್ರೀವಚನ ಭೂಷಣದಲ್ಲಿ (4–1) " ನನ್ಮೈಯೆನ್ರು ಪೇಡಿಕ್ಕಾಮಲೂರುಂ ಶೀಲಮ್ಮೈಯುಂ ಕಾಣಾದೇ ......ತನಕ್ಕೇರ ಇಡು ಪೆತ್ತವಳವಿಲ್ " ಎನ್ನುಕ್ಕೈ ತೊಡಂಗಿಯ್ಯು ಎನ್ ಪೆರ್ರೈ ತೊಡಂಗಿಯ್ "ಎನ್ನಡಿಯಾರ್ಕ್ಕೆನೋಕ್ಕುವಾಯ್ ಅವರಾಹಳವಿತ್ತಾಯ್ಯೆ ತೀರ್ತ್ತಾಯ್,

ಆಪದರುಹುಳುಂಕೊಳ್ಳುದುಂಗ ನೇಳಲ್ಕೊಡುತ್ತಾಯ್ '' ....ಇತ್ಯಾದಿ ದಿವ್ಯ ಸೂಕ್ತಿಗಳಿಂದ ತಿಳಿಯಬೇಕು.

ಇದು ರಾಮಾವತಾರದಲ್ಲಿ ಉಂಟೋ ಎಂದರೆ, ಅದಕ್ಕೆ ಒಂದು ಸ್ಥಳವನ್ನು ತೋರಿಸುತ್ತೇವೆ. ಆಳವಂದಾರ್ ಸ್ತೋತ್ರದಲ್ಲಿ ವಾಯಸ ರಕ್ಷಣವನ್ನು ಹೇಳುವ ಸ್ಥಳದಲ್ಲಿ " ಕಾದ್ಯತೋ ವಾಯಸಸ್ಯ ದಯಾಲುಃ '' ಎಂದು ಹೇಳಿದ (ಪ್ರಣತ ಇತಿ ದಯಾಲುಃ) ಎನ್ನುವ ಗೂಢಾರ್ಥವನ್ನು ತಿಳಿದು ಸ್ತೋತ್ರ ಭಾಷ್ಯದಲ್ಲಿ ಪ್ರಕಟಿಸಿರುವುದು— " ದಯಾರ್ದ್ರ ಬುದ್ಧ್ಯಾ ಪ್ರಣತತ್ವೇನ ಪರಿಗೃಹ್ಯ ಇತ್ಯರ್ಥಃ '' ಎಂದು, ಅದೇನೆಂದರೆ, ಪ್ರಣತಿಯನ್ನು ಉದ್ದೇಶಿಸಿ ಕಾಕಾಸುರನು ಬಂದುದಲ್ಲ, ಎಲ್ಲೆಲ್ಲಿಯೂ ಸುತ್ತಿ ಕಾರ್ಯವಾಗದೆ ಆಶ್ರಯ ಹೀನನಾಗಿ ಬಂದು ಬಿದ್ದಿದ್ದೇ ಆಗಿದೆ. ನಿರ್ಗತಿಯನ್ನೇ ಪ್ರಣತಿಯಾಗಿ ಭಗವಂತನು ರಕ್ಷಿಸಿದನು ಎನ್ನುವುದು ತಿಳಿದುಕೊಳ್ಳಬಹುದು. ವಿಭೀಷಣನ ಅಭಯ ಪ್ರದಾನ ಪ್ರಕರಣದಲ್ಲಿ "ಯದ್ಯಪೀಯಂ ಕಥಂಚನ '' ಎಂದುಕೊಂಡು ನೆಲೆ ಇಲ್ಲದವರು ಎನ್ನುವ ಅರ್ಥವನ್ನು ತೆಗೆದುಕೊಳ್ಳಬಹುದು. ನಯವೆಂದರೆ ನೀತಿ. ಶ್ರೀ ರಾಮನನ್ನು ನೀತಿ ಇಲ್ಲದವನೆಂದು ಹೇಳಬಹುದೇ ? ಗೋಪಿಗಳು ಕೃಷ್ಣನನ್ನು ಕುರಿತು " ನೇರಿಲೇ ನಿನ್ನ ಅಯುಕ್ಕ್ಯಾನ್ನೋ ನೀತಿಯುಳ್ಳಾದನಳ್ಳಿಯೊಡಾಯ್ '' ಎನ್ನುತ್ತಾರೆ. ಹಾಗೆ ರಾಘವನನ್ನು ಕುರಿತು ಯಾರೂ ಹೇಳಿಲ್ಲ: ವಾಲಿಯಂಥವರು ಹೇಳುವುದು ಪರಮಾರ್ಥವಾಗಿ ತೆಗೆದುಕೊಳ್ಳಲು ಉಚಿತವೇ ? ಎಂಬ ಸಂದೇಹವುಂಟಾಗುತ್ತದೆ. ಅದಕ್ಕೆ ಅನ್ಯಾಯವಾದ ಕಾರ್ಯವ್ನು ಮಾಡುವನೆಂದು ಅರ್ಥವಲ್ಲ. ನೀತಿ ಎಂದರೆ "ನಿಯತಿ '' ಶ್ರೀ ರಾಮನ ಕಾರ್ಯವು ಒಂದು ನಿಯತಿ (ವ್ಯವಸ್ಥೆಯಲ್ಲಿ) ಒಳಪಡುವುದಲ್ಲ, ಎಂದು ತಾತ್ಪರ್ಯವನ್ನು ತೆಗೆದುಕೊಳ್ಳಬೇಕು. (ಇದರ ವಿವರಣೆಯನ್ನು ಕೇಳಿ). ಪರಮ ಪೂಜ್ಯರಾದ ಭರದ್ವಾಜ ಮಹರ್ಷಿಯ ಆಶ್ರಮದಲ್ಲಿ ಭೋಜನವನ್ನು ಮಾಡಿದರೆಂದು ಕೇಳಿದ ಹಾಗೆ ಶಬರಿಯ ಕೈಯಲ್ಲೂ ಭುಜಿಸಿದರೆನ್ನುವುದನ್ನು ಕೇಳಿದ್ದೇವೆ. ವಿಶ್ವಾಮಿತ್ರ ಮುನಿಯನ್ನು (ನಾಥ) ಯಜಮಾನನಾಗಿ ಪಡೆದದನ್ನುವ ಹಾಗೆ " ಸುಗ್ರೀವಂ ನಾಥ ಮಿಚ್ಛತಿ '' "ಸುಗ್ರೀವಂ ಶರಣಂಗತಃ" ಎನ್ನುವುದನ್ನು ಕೇಳಿರುತ್ತೇವೆ. ಈ ರೀತಿಯಾಗಿ ಒಂದು ನಿಯತಿ (ವ್ಯವಸ್ಥೆ ಇಲ್ಲದ) ಹೋಯಿತು ರಾಮಕಾರ್ಯಗಳಲ್ಲಿ. "ಸಂಕಲ್ಪ ಸೂರ್ಯೋದಯದಲ್ಲಿ" "ಭಗವತಿ ಭಾರದ್ವಾಜೇ ಭಕ್ತಿಸ್ತದಾ ಶಬರೀ ಕರೇ '' ಎಂದು ವಿವರಿಸಿರುವುದನ್ನು ತೆಗೆದುಕೊಂಡು ರಸಿಕ ಹೃದಯಂಗಮವಾಗಿ ನಿರ್ವಹಿಸಬಹುದು.

13. ವೀರಃ—ಭಗವಂತನ ಶ್ರೇಷ್ಠ ಗುಣಗಳಲ್ಲಿ ವೀರ್ಯ, ಶೌರ್ಯ, ಪರಾಕ್ರಮ ಎಂದು ಸೇರಿಸಿ ಅನುಸಂಧಾನ ಮಾಡುವುದುಂಟು. ಆ ಮೂರು ಶಬ್ದಗಳಿಗೂ ಅರ್ಥದಲ್ಲಿ ಸಂಬಂಧವಿಲ್ಲದ ಹಾಗೆ ತೋರಿದರೂ ಸಂಬಂಧವುಂಟು. ಶತ್ರುಗಳ ಸೈನ್ಯ ಎಷ್ಟು ಪ್ರಬಲವಾಗಿದ್ದರೂ ಅದನ್ನು ಕಂಡು ಹೆದರದಿರುವುದು ವೀರ್ಯ. ಆ ಸೈನ್ಯ

ದೊಳಗೆ ಒಬ್ಬನೇ ಹೋಗಿ ವೈರಿಗಳನ್ನು ಅನಾಯಾಸವಾಗಿ ಕೊಂದು ಮುಗಿಸಬಲ್ಲ ಶಕ್ತಿ ಶೌರ್ಯ. ಆ ರೀತಿ ಮಾಡುವಲ್ಲಿ ತನಗೆ ಕಿಂಚಿತ್ತೂ ಭಂಗ ಬಾರದಂತೆ ಸಕಲ ವಿಧವಾದ ಅಪಮಾನಗಳೂ ಶತ್ರುವಿಗೇ ಉಂಟಾಗುವುದು ಪರಾಕ್ರಮ ಎಂದು ಈ ರೀತಿಯಾಗಿ ಮೂರು ವಿಧವಾದ ಆಕ್ಷೇಪಣೆಗಳಿಗೆ ಸಮಾಧಾನ.

ಘೋರ ಯುದ್ಧಮಾಡುವ ವೀರರುಗಳಿಗೆ ಇರಬೇಕಾದ ಈ ಮೂರನ್ನೂ ಹೇಳುವ ನುಡಿಗಳಾಗಿ, ವೀರ್ಯ, ಶೌರ್ಯ, ಪರಾಕ್ರಮ ಶಬ್ದಗಳನ್ನಾಗಿ ತೆಗೆದುಕೊಳ್ಳಬಹುದು. ಇಲ್ಲಿ "ವೀರಃ" ಎಂದು ವೀರ್ಯವೊಂದು ಮಾತ್ರವೇ ಹೇಳಲ್ಪಟ್ಟಿದ್ದರೂ ಮತ್ತೆರಡನ್ನೂ ಉಪಲಕ್ಷಣವಾಗಿ ತೆಗೆದುಕೊಳ್ಳತಕ್ಕದ್ದು. ಅಥವಾ ಆ ನುಡಿಯಲ್ಲಿಯೇ (ಅದಾವುದೆಂದರೆ ವೀರಃ ಎನ್ನುವ ನುಡಿಯಲ್ಲಿಯೇ) ಆ ಮೂರು ಅರ್ಥಗಳನ್ನು ಸೇರಿಸಿ ಅನುಸಂಧಾನ ಮಾಡಬಹುದು. ಶ್ರೀ ರಾಮಾಯಣದಲ್ಲಿಯೂ ಮತ್ತು ಈ ರಾಮಭದ್ರನನ್ನು ಕುರಿತು ಹೇಳುವ ಅನೇಕ ಗ್ರಂಥಗಳಲ್ಲಿಯೂ, ಶ್ರೀ ರಾಮನನ್ನು ವೀರನೆಂದೂ, ಶೂರನೆಂದೂ, ಪರಾಕ್ರಮಶಾಲಿ ಎಂದೂ ಪ್ರಶಂಸಿಸಿ ಹೇಳುವುದನ್ನು ವಿಶೇಷವಾಗಿ ಕಾಣಬಹುದು. ಶ್ರೀ ರಾಮಚಂದ್ರನಿಗೆ ಮಹಾವೀರನೆಂಬ ಒಂದು ದಿವ್ಯನಾಮವುಂಟು. "ಜಯ ಜಯ ಮಹಾವೀರ" ಎಂದೇ ರಘುವೀರ ಗದ್ಯದ ಪ್ರಾರಂಭ. ವೀರ ರಾಘವನೆಂಬ ಒಂದು ದೇಶದಲ್ಲಿ ಹೆಸರಿನಿಂದ ಪ್ರಕಾಶಿಸುವುದು ಪ್ರಸಿದ್ಧ. ಭವಭೂತಿ ಮಹಾಕವಿ ಮಹಾವೀರ ಚರಿತವೆಂದೇ ಹೆಸರಿಟ್ಟು ಗ್ರಂಥರಚನೆ ಮಾಡಿದ್ದಾರೆ. ಆಳ್ವಾರುಗಳು ಶ್ರೀ ರಾಮನ ಕಾರ್ಯಗಳನ್ನು ಹೇಳಿ ಹೇಳಿ ವೀರನೆಂದೇ ಊಧು ಹಾಕುತ್ತಾರೆ.

ರಾವಣನೇ ಅದ್ಭುತವಾದ ವೀರ್ಯವು ರಾಮನದು ಎನ್ನುತ್ತಾನೆ (ವಾಲ್ಮೀಕಿ ರಾಮಾಯಣ ಯುದ್ಧಕಾಂಡ 106-6) "ಶತ್ರೋಃ ಪ್ರಖ್ಯಾತ ವೀರ್ಯಸ್ಯ ರಂಜನೀಯಸ್ಯ ವಿಕ್ರಮೈಃ" ಎನ್ನುವುದು ರಾವಣನ ಮಾತು. ಶ್ರೀ ರಾಮನನ್ನು ಪ್ರಸಿದ್ಧನಾದ ವೀರನೆಂದು ರಾವಣನು ತನ್ನ ಬಾಯಿಂದ ರಣರಂಗದಲ್ಲಿ ಹೇಳುವುದೇಕೆಂದರೆ ; ಆ ವೀರ್ಯವನ್ನು ಚೆನ್ನಾಗಿ ಅನುಭವಿಸಿದ್ದರಿಂದಲ್ಲವೇ. "ವಿಕ್ರಮೈಃ ರಂಜನೀಯಸ್ಯ" ಎಂದು ನಂತರ ಹೇಳುತ್ತಾನೆ. ಈ ರೀತಿ ಹೇಳುವ ಹಾಗೆ ಶ್ರೀ ರಾಮನು ಮಾಡಿರುವ ವೀರಕಾರ್ಯಗಳು ಅನೇಕವಾಗಿದ್ದರೂ ಒಂದನ್ನು ಮಾತ್ರ ಇಲ್ಲಿ ತೆಗೆದು ತೋರಿಸುತ್ತೇವೆ. ಯುದ್ಧಕಾಂಡದಲ್ಲಿ ತೊಂಭತ್ತನಾಲ್ಕನೆಯ ಸರ್ಗವನ್ನು ನೋಡಿ. ಅಲ್ಲಿ ಮೂಲ ಬಲವು ನುಗ್ಗಿ ಬಂದು ಶ್ರೀ ರಾಮನ ಅತಿಮಾನುಷ ಯುದ್ಧಚಾತುರ್ಯವನ್ನು ಹೇಳಲು ವಾಲ್ಮೀಕಿ ಮುನಿವರರೂ ತಡವರಿಸುತ್ತಾರೆ, "ಛಿನ್ನಂ ಭಿನ್ನಂ ಶರೈರ್ ದಗ್ಧಂ ಪ್ರಭಗ್ನಂ ಶಸ್ತ್ರ ಪೀಡಿತಂ ॥ ಬಲಂ ರಾಮೇಣ ದದೃಶು ನ ರಾಮಂ ಶೀಘ್ರಕಾರಿಣಂ" ಎಂದು ರಾಮನಿಂದ ಅನೇಕವಾಗಿ ಕಷ್ಟಕ್ಕೊಳಗಾದ ರಾಕ್ಷಸ ಸೇನೆಗಳನ್ನು ನೋಡಿದರೇ ಹೊರತು ಬಂಬರದ ಹಾಗೆ ಸುತ್ತಿರುವ ರಾಮನನ್ನು ಒಬ್ಬರೂ ಕಂಡವರಿಲ್ಲ, ಎನ್ನುತ್ತಾರೆ. ಅನಂತರ "ಶತಂ ರಾಮ ಸಹಸ್ರಾಣಿ ರಣೇ ಪಶ್ಯಂತಿ ರಾಕ್ಷಸಾಃ" ಎಂದು ಸಹಸ್ರಾರು ರಾಮಮೂರ್ತಿಗಳನ್ನು ಕಂಡೆವೆನ್ನುತ್ತಾರೆ. ತಕ್ಷಣ "ಪುನಃ ಪಶ್ಯಂತಿ ಕಾಕುತ್ಸ್ಥಂ ಏಕ

ಮೇವ ಮಹಾಹವೇ" ಎಂದು ಆ ಯುದ್ಧ ಭೂಮಿಯಲ್ಲಿ ರಾಮನೊಬ್ಬನನ್ನೇ ನೋಡಿದೆವೆನ್ನುತ್ತಾರೆ. ರಾಮನನ್ನು ಕಾಣಲೇ ಇಲ್ಲ ಎನ್ನುವುದು, ಸಹಸ್ರಾರು ರಾಮರನ್ನು ಕಂಡೆವೆನ್ನುವುದು. ಒಬ್ಬ ರಾಮನನ್ನೇ ಕಂಡೆವೆನ್ನುವುದು. ಹೀಗೆ ಈ ರೀತಿ ಒಂದರೊಂದಿಗೆ ಒಂದು ಹೋಲಿಕೆಯಿಲ್ಲದೆ ಮಾತನಾಡುವಂತಲ್ಲವೆ ಭಗವಂತನು ಅತ್ಯಂತ ವಿಚಿತ್ರವಾಗಿ ಯುದ್ಧ ಕಾರ್ಯವನ್ನು ನಡೆಸಿದ್ದು!

ತಿರುವಾಯ್ ಮೊಳಿಯಲ್ಲಿ (8–6–3) "ಒರುವರಿರುವರೋರ್ ಮೂವರೆನ ನಿನ್ರು ಉರುವು ಕರಂದುದವನ್ ಉಳ್ಳುಂತೋರುಂ ತಿತ್ತಿಪ್ಪಾನ್" ಎನ್ನುವ ಪಾಶುರಕ್ಕೆ ಪೂರ್ವಾಚಾರ್ಯರುಗಳು ಅರ್ಥವನ್ನು ವಿವರಿಸಿರುವುದು ಇತರ ಪಂಡಿತರುಗಳ ಬುದ್ಧಿಗೆ ಸ್ವಲ್ಪ ಮಾತ್ರವೂ ಗೋಚರಿಸಲಾರದು.

ಒಬ್ಬರಿಬ್ಬರೊಂದಿಗೆ ಮೂವರೆಂದು ನಿಂತಮೇಲೆ ಆಕಾರ ವಿಲೀನವಾದದ್ದು ಯಾವಾಗ ಎಂಬುದು ತಿಳಿದುಕೊಳ್ಳಲಾಗದಂತೆ ಆಳ್ವಾರ್ ಪಾಶುರ ತಿಳಿಸುತ್ತದೆ. ಇದಕ್ಕೆ ಒಂದು ಗೀತ—"ತಿರುಕ್ಕಡಿತ್ತ ಕ್ಕನ್ರುತಿಗೈತ್ತ ಪರಕೆರ್ರ್ ಉರುಕ್ಕೈಡವಾಳಿ ಪ್ಪೊರಿಂದ ಪ್ಪೊರುಪನೇ" ಎಂದು ಮುಗಿದಿರುತ್ತೆ. ಕೆಳಗಿನ ಮೊದಲ ನುಡಿಗಳಿಗೆ ಮೇಲಿನ ಹಾಡಿನ ಪಿನ್ನುಡಿಗಳೊಂದಿಗೆ ಅನ್ವಯವೆಂದು ಕಂಡು ತಾತ್ಪರ್ಯವನ್ನು ವಿವರಿಸುತ್ತಾರೆ. ಇಲ್ಲಿ ಪೆರಿಯವಾಚ್ಚಾನ್ ಪಿಳ್ಳೈ ವ್ಯಾಖ್ಯಾನ ಶ್ರೀ ಸೂಕ್ತಿಗಳನ್ನು ನೋಡಿ—"ಒರುವರಿರುವರೋರ್ ಮೂವರೆನ ನಿನ್ರು ಉರುವುಕರಂದು—ಉರುಕ್ಕೈಡವಾಳಿ ಪ್ಪೊರಿಂದ ಪ್ಪೊರುಪನ್" ಎಂದು ಮೇಲಿನದರೊಂದಿಗೆ ಅನ್ವಿತವಾಗುತ್ತದೆ. ಮೂಲ ಬಲ ನಾಶವಾಗುವ ಹಾಗೆ ಮಾಡುವಾಗ ಮೂರು ಒಂದಾಗಿ ಕಾಣಿಸಿಕೊಂಡು ಪರಾಕ್ರಮದ ವೇಗವು ಅಧಿಕರಿಸಲು, ಇಬ್ಬರೂ ಮೂವರಾಗಿ ಕಂಡು, ವೇಗವು ಮಿತಿಮೀರಿದ್ದರಿಂದ ಇಂದ್ರಿಯ ಸಂಯೋಗಕ್ಕೆ ಸ್ಥಳವಿಲ್ಲದ ಹಾಗಾಗಿದ್ದುದರಿಂದ ರೂಪಗ್ರಹಣವು ಕುಂದಿ "ಉರುಕ್ಕೈಡವಾಪ್ಪೊರಿಂದ" ಬಿಟ್ಟನೆಂದು ಅನ್ವಯ ವ್ಯಾಪಿಸುತ್ತಿದ್ದುದರಿಂದ ರೂಪವು ಕಣ್ಣಿಗೆ ನಿಲುಗಡೆಯಿಲ್ಲದೆ ಇತ್ತು. ಇದರಿಂದ ಶ್ರೀ ರಾಮ ಶೌರ್ಯವು ಮಹಾಮ ಗೋಚರವೆಂದಾಯಿತು.

14. **ಶಕ್ತ್ಯಾ ಮಹಾಂಶ್ರೇಷ್ಠಃ**-ಎಂದರೆ ಅಪರಿಮಿತವಾದ ಶಕ್ತಿ ಉಳ್ಳವನೆಂದು. ಶ್ರೀ ರಾಮನು ಮಹಾಶಕ್ತಿಯುಳ್ಳವನಾಗಿರುವಾಗ ರಾವಣನನ್ನು ಒಂದು ಕ್ಷಣದಲ್ಲಿ ಕೊಂದಿರಬಹುದು! ಹಾಗೆ ಕೊಲ್ಲದೆ ಬಹಳ ಪ್ರಯಾಸ ಪಟ್ಟಿರುವುದು ತಿಳಿಯುತ್ತದೆಯಲ್ಲ! ಅದು ಏಕೆ? ಎಂದು ಕೆಲವರು ಕೇಳಬಹುದು. ಕೇಳಿ "ಪೊಲ್ಲಾವರಕ್ಕನೈ ಕಿಳ್ಳಿಕ್ಕಳೈಂದಾನೈ" ಎಂದು ಆಂಡಾಳ್ ಳ್ಳ, "ಚತುರ ಮಾಮದಿಳ್ ಶೂಳ್ ಇಲಂಕೈ ಕಿರೈವನ್ ತಲೈಪತ್ತು ಉದಿರವೊಟ್ಟಿ ಓರ್ ವೆಂಗಣೈಯುಯ್ತ್ತವನ್" ಎಂದು ತಿರುಪ್ಪಾಣಾಳ್ವಾರ್ ಹೇಳಿರುವ ಹಾಗೆಯೇ ರಾವಣ ಸಂಹಾರವನ್ನು ಭಗವಂತನು ಲೀಲಾಜಾಲವಾಗಿಯೇ ಮಾಡಿದನು. ಅದರಲ್ಲಿ ಸಂದೇಹವೇನೂ ಇಲ್ಲ.

ಹೇಗಾದರೂ ರಾವಣನು ಒಡಂಬಟ್ಟು ದಾರಿಗೆ ಬರುವುದುಂಟೋ ಎನ್ನುವ ಚಪಲ ಭಗವಂತನಿಗೆ ಇದ್ದುದರಿಂದಲೇ ಅವನನ್ನು ಸಂಹಾರ ಮಾಡುವುದಕ್ಕೆ ತಾಮಸ ಮಾಡಿದರೆಂಬ ತತ್ತ್ವವನ್ನು ತಿಳಿಯಲು ಯೋಗ್ಯ. ರಾವಣನಿಗಿಂತಲೂ ಅತ್ಯಧಿಕ ಬಲಶಾಲಿಯೆಂದು ಪ್ರಸಿದ್ಧನಾಗಿದ್ದ ವಾಲಿಯನ್ನು ಅನಾಯಾಸವಾಗಿ ವಧಿಸಿದವನು ಪರಮಾತ್ಮನಾದ ರಾಮ. (ಸುಂದರ ಕಾಂಡ ಸರ್ಗ 51 ಶ್ಲೋಕ 11). ಹನುಮಂತನು ರಾವಣನಿಗೆ ಹಿತೋಪದೇಶ ಮಾಡುವಲ್ಲಿ "ತ್ವಯಾ ವಿಜ್ಞಾತ ಪೂರ್ವಶ್ಚ ವಾಲೀ ವಾನರ ಪುಂಗವಃ ರಾಮೇಣ ನಿಹತ ಸಂಖ್ಯೇ ಶರೇಣೈಕೇನ ವಾನರಃ" ಎಂದು "ಅಯ್ಯಾ! ರಾವಣಾ! ವಾಲೀ ಎನ್ನುವ ವಾನರೇಶ್ವರನನ್ನು ನೀನು ಚೆನ್ನಾಗಿ ತಿಳಿದಿರುವೆಯಲ್ಲಾ! ಅವರು ಶ್ರೀ ರಾಮನ ಒಂದೇ ಬಾಣದಿಂದ ಮರಣ ಹೊಂದಿದರು" ಎನ್ನುತ್ತಾನೆ. ಹಾಗೂ ರಾವಣನನ್ನು ಹಲವಾರು ಬಗೆಯಲ್ಲಿ ಭಂಗಗೊಳಿಸಿದವನು ಕಾರ್ತವೀರ್ಯಾರ್ಜುನನು. ಅವನನ್ನು ಪರಶುರಾಮನು ತನ್ನ ಕೊಡಲಿ ಸೈನ್ಯದಿಂದ ಸಾವಿರ ಕೈಗಳನ್ನು ಕಡಿದು ಕೊಂದವನು. ಆ ಪರಶುರಾಮನು ಶ್ರೀ ರಾಮನಲ್ಲಿ ಸೊಟ್ಟುಹೋದುದು ತಿಳಿದಿದ್ದೇ—ಈ ರೀತಿಯಾಗಿ ಶಕ್ತಿಯುಳ್ಳವನಾದ ರಾಘವನು ರಾವಣನನ್ನು ಕೊಲ್ಲಲು ಶ್ರಮಪಡಬೇಕೇ? ಶ್ರಮಪಟ್ಟಿರುವುದಾಗಿ ಕಥೆಯಲ್ಲಿದ್ದರೂ ಸತ್ಯ ಸಂಕಲ್ಪನೂ ಮಹಾವೀರನೂ ಆದ ರಾಮನು ಏತಕ್ಕಾಗಿ ಶ್ರಮಪಟ್ಟನೆಂದು ಆಲೋಚಿಸಬೇಕಲ್ಲವೇ! ಶೂರ್ಪಣಖಿಯು ಮೂಗನ್ನು ಕುಯಿಸಿಕೊಂಡು ಜನಸ್ಥಾನದಲ್ಲಿರುವ ತನ್ನ ಅಣ್ಣನಾದ ಖರನ ಹತ್ತಿರ ಹೋಗಿ ವಿಷಯವನ್ನು ತಿಳಿಸಿ ಹೊರಳಾಡಿ ಅತ್ತು ಅವನಿಗೆ ಕೋಪವನ್ನುಂಟು ಮಾಡಲು, ಅವನು ಹದಿನಾಲ್ಕು ಸಾವಿರ ಸೇನಾಧಿಪತಿಗಳನ್ನು ಸೈನ್ಯಗಳನ್ನು ಶ್ರೀ ರಾಮನೊಂದಿಗೆ ಯುದ್ಧಮಾಡಲು ಕಳುಹಿಸಲು ರಾಘವನು ಅವರುಗಳೆಲ್ಲರನ್ನು ತಾನೊಬ್ಬನೇ ಕೊಂದು ಗೆದ್ದುದ್ದರಿಂದ ಅನಂತರ ಖರನು ತಾನೇ ಎದುರಿಗೆ ಬಂದು ಎದುರಿಸಲು ರಾಮನು "ಆಸಹಾಯಶೂರ!" ಎಂದು ರಘುವೀರ ಗದ್ಯದಲ್ಲಿ ವಿವರಿಸಿರುವ ಹಾಗೆ ಲಕ್ಷ್ಮಣನನ್ನೂ ಜೊತೆಗೆ ಕರೆದುಕೊಳ್ಳದೆ ಏಕಾಕಿಯಾಗಿ ಅವನ ತಲೆಯನ್ನು ಕತ್ತರಿಸಿದ್ದು ಪ್ರಸಿದ್ಧ. "ಚತುರ್ದಶ ಸಹಸ್ರಾಣಿ ರಕ್ಷಸಾಂ ಭೀಮಕರ್ಮಣಾಂ ॥ ಹತ್ವಾ ರಾಮೋ ಧರ್ಮಾತ್ಮಾ ಕಥಂ ಯುದ್ಧಂ ಭವಿಷ್ಯತಿ ॥" ಎಂದು ಮಹಾತ್ಮರಾದ ಋಷಿಗಳೂ ಆಶ್ಚರ್ಯಪಡುವಂತೆ ಲೀಲಾಜಾಲವಾಗಿಲ್ಲವೇ ರಾಮನು ಮಾಡಿದ್ದು. ಆ ರೀತಿ ಅತ್ಯಧಿಕ ಪರಾಕ್ರಮಶಾಲಿಗೆ ರಾವಣನು ಒಂದು ವಸ್ತುವೇ? ಒಂದೇ ಕ್ಷಣದಲ್ಲಿ ಅವನನ್ನು ನಾಶಪಡಿಸಲಾಗದೆ ಇಲ್ಲ. ಯಾವರೀತಿಯಿಂದಾಗಲಿ ಅವನು ಅಭಿಮುಖನಾಗಿ ಬರುತ್ತಾನೋ ಎಂದು ನೋಡುತ್ತಿದ್ದನಷ್ಟೆ. ಇನ್ನು ಮುಂದಿನ ಮಂಗಳಕರವಾದ ನಾಮ ಮಹಿಮೆಯನ್ನು ನೋಡೋಣ.

15. **ಧರ್ಮಃ!**—ಶ್ರೀ ರಾಮಚಂದ್ರನನ್ನು ಧರ್ಮವಾಗಿ ಹೇಳಿದೆ. ಅನೇಕ ಸ್ಥಳಗಳಲ್ಲಿ ರಾವಣನು ಲಂಕೆಯಿಂದ ಪಂಚವಟಿಗೆ ಓಡಿ ಬಂದು ಸೀತಾಪಹಾರಕ್ಕೆ ಮಾರೀಚ

ನನ್ನು ಸಹಾಯ ಬೇಡಿದಾಗ ಅವನು ರಾವಣನಿಗೆ ಅನೇಕ ರೀತಿಯಲ್ಲಿ ಹಿತೋಪದೇಶ ಮಾಡುತ್ತಾನೆ. ಅದರ ಮಧ್ಯೆ (ಅರಣ್ಯ 37-13) "ರಾಮೋ ವಿಗ್ರಹವಾನ್ ಧರ್ಮಃ" ಎನ್ನುತ್ತಾನೆ, ಕೈಕಾಲುಗಳೊಡನೆ ನಡೆದಾಡುವ "ಧರ್ಮವೇ ರಾಮನು" ಎಂದು ಅಸುರ ಪ್ರಕೃತಿಯಾದ ಮಾರೀಚನು ಹೇಳುತ್ತಾನೆ. ರಾವಣ ವಧೆಯಾದ ನಂತರ ಲಂಕೆಗೆ ಬಂದು ಸ್ತುತಿಸುವ ದೇವ ವರ್ಗದಲ್ಲಿ ಬ್ರಹ್ಮನು "ಭಗವಾನ್ ನಾರಾಯಣೋದೇವಃ" ಎಂದ ಮೇಲೆ "ಲೋಕಾನಾಂ ತ್ವಂ ಪರೋಧರ್ಮಃ" ಎನ್ನುತ್ತಾನೆ. ಗೀತೆಯಲ್ಲಿ "ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ" ಎಂದು ಧರ್ಮ ಸಂಸ್ಥಾಪನೆಗಾಗಿ ತಾನು ಅವತರಿಸುವುದಾಗಿ ಹೇಳಿದ ಪರಮ ಪುರುಷನು "ಸರ್ವಧರ್ಮಾನ್ ಪರಿತ್ಯಜ್ಯ" ಎಂದು ಸಕಲ ಧರ್ಮಗಳನ್ನೂ ಬಿಡು ಎಂದು ಹೇಳಿದ್ದು—ಬೇಡ ಬಿಟ್ಟು ಬಿಡು ಎನ್ನುವುದರೊಂದಿಗೆ ನಿಲ್ಲದೆ "ಮಾಮೇಕಂ ಶರಣಂ ವ್ರಜ" ಎಂದು ತನ್ನನ್ನು ಹೊಂದುವಂತೆ ಹೇಳುವುದರಿಂದ, ಸಾಕ್ಷಾತ್ ಧರ್ಮ ಎನ್ನುವ ತತ್ವವನ್ನು ಪ್ರಕಾಶ ಪಡಿಸಿದ್ದಾಗಿದೆಯಲ್ಲವೇ ? ನಾವು ಶ್ರಮಪಟ್ಟು ಸಾಧಿಸ ಬೇಕಾದ ಧರ್ಮ ಸಾಧ್ಯ ಧರ್ಮವೆನ್ನಲ್ಪಡುತ್ತದೆ. ಹಾಗಲ್ಲದೆ ಯಾವಾಗಲೂ ಸಿದ್ಧ ವಾಗಿರುವ ಧರ್ಮ ಪರಮಾತ್ಮ. ಸಾಧ್ಯ ಧರ್ಮವು ಅಪಾಯ ಬಹಳವೆಂದೂ, ಸಿದ್ಧಾಂತ ಧರ್ಮ ನಿರಪಾಯವೆಂದು ತಿಳಿಯತಕ್ಕದ್ದು. ದಶರಥ ಚಕ್ರವರ್ತಿ ಶ್ರೀ ರಾಮಚಂದ್ರ ನನ್ನು ಪುತ್ರನನ್ನಾಗಿ ಪಡೆದ ಭಾಗ್ಯಶಾಲಿಯಾಗಿದ್ದೂ ಒಂದು ದೌರ್ಭಾಗ್ಯವುಳ್ಳವನಾಗಿ ದ್ದನು. ಅಸುರ ಪ್ರಕೃತಿಯಾದ ಮಾರೀಚನಿಗೆ ತಿಳಿದ ತತ್ವ ಅವನಿಗೆ ತಿಳಿಯದೆ ಹೋಯಿತು. "ರಾಮೋ ವಿಗ್ರಹವಾನ್ ಧರ್ಮಃ" ಎಂದು ಅವನೇ ಹೇಳಿದ ಹಾಗೆ ಪ್ರತ್ಯಕ್ಷವಾದ ಸಿದ್ಧಧರ್ಮವಾದ ರಾಮನೊಂದಿಗೆ ಕೂಡಿ ಬಾಳುವುದನ್ನು ಬಿಟ್ಟು, ಆ ಭಾಸ ಧರ್ಮವಾದ ಸತ್ಯವಚನವನ್ನು ಕುರಿತು ನಿಂತು ಮೃತನಾದನಲ್ಲವೆ ! ಆ ಚಕ್ರವರ್ತಿಯ ಮುಮುಕ್ಷುಪಡಿ (ತಿರುಮಂತ್ರ) ಸರ್ವಧರ್ಮಾನ್ ಪರಿತ್ಯಜ್ಯ ಎನ್ನುವ ಸ್ಥಳದಲ್ಲಿ (ಚಕ್ರವರ್ತಿಯು ಹಾಗೆ ಕಳೆದುಕೊಳ್ಳುವುದಕ್ಕೆ ಉದಾಹರಣೆ) ಮಣವಾಳ ಮಾಮುನಿಗಳ ಶ್ರೀ ಸೂಕ್ತಿ ರತ್ನವನ್ನು ಅನುಭವಿಸುವುದು. ಕೃಷ್ಣಾವತಾರದಲ್ಲಿ ದಧಿ ಭಾಂಡನ ಕಥೆಯನ್ನು ತಿಳಿಯದವರಿಲ್ಲ ; ತಾಯಿಯ ಕೈಯ ಚಿಕ್ಕ ಕೋಲಿಗೆ ಭಯಪಟ್ಟು ಓಡಿಬಂದ ಕೃಷ್ಣನನ್ನು ಮರೆಸಿಟ್ಟು "ನಿನ್ನ ಮಗನು ಇಲ್ಲಿ ಇಲ್ಲ" ಎಂದು ಸುಳ್ಳು ಹೇಳಿ ಸಪರಿಕರನಾಗಿ ಮೋಕ್ಷವನ್ನು ಪಡೆದು ಹೋದನು. ದಶರಥನು ಸತ್ಯವಾದಿ ಯೆಂದು ಹೆಸರು ಪಡೆದು ನರಕ ಪರ್ಯಾಯವಾದ ಸ್ವರ್ಗವನ್ನೇ ಪಡೆದು ನಿಂತನು. ರಾಮನೇ ಸಾಕ್ಷಾತ್ ಧರ್ಮವೆಂದು ತಿಳಿಯಲಾರದ್ದರಿಂದಲ್ಲವೇ ಹೀಗೆ.

ಭಗವಂತನು ದೇವಿಯೊಂದಿಗೆ ಕೂಡಿ ಇರುವಾಗ ಮಾಡಿದ ಉಪನ್ಯಾಸಗಳಲ್ಲಿ ಶ್ರೇಷ್ಠವಾದ ಒಂದು ಉಪನ್ಯಾಸವನ್ನು ಹನುಮಂತನ ಹತ್ತಿರ ಹೇಳುತ್ತಾನೆ. "ಆನೃಶಂಸ್ಯಂ ಪರೋಧರ್ಮಃ ತ್ವತ್ತ ಏವಮಯಾ ಶ್ರುತಃ" ಎಂದು. "ಆನೃಶಂಸ್ಯ" ಯಾವುದು ? ಕನಿಕರ. ಅದೇ ಪರಮ ಧರ್ಮವೆಂದು ಉಪನ್ಯಸಿಸುವುದು ಅಭ್ಯಾಸವಂತೆ.

"ಕರುಣೆಯೇ ರೂಪವನ್ನು ಧರಿಸಿ ಬಂದವನು ಕಾಕುಸ್ಥ" ಎಂದು ಪ್ರಸಿದ್ಧಿ ದಶಾವತಾರ ಸ್ತೋತ್ರದಲ್ಲಿ "ಇಚ್ಛಾಮೀನ ವಿಹಾರ ಕಚ್ಛಪೇತ್ಯಾದಿ" ಶ್ಲೋಕದಲ್ಲಿ ಒಂದೊಂದವತಾರದಲ್ಲಿ ಒಂದೊಂದು ವಿಶೇಷಣವನ್ನು ಕುರಿತು ಹೇಳಿಕೊಂಡು ಬರುವಲ್ಲಿ ರಾಮನನ್ನು "ಕರುಣಾಕಾಕುಸ್ಥ" ಎಂದು ಹೇಳಿರುವುದು ಗುರುತಿಸತಕ್ಕದ್ದು. ವಾಲಿ ವಧೆಯಾದ ನಂತರ "ಸಂಜಾತ ಬಾಷ್ಪಃ ಪರವೀರ ಹಂತಾ ರಾಮೋ ಮುಹೂರ್ತಂ ವಿಮನಾ ಬಭೂವ" ಎನ್ನುವಂತೆ ನಿಂತ ಭಗವಂತನನ್ನು "ಕರುಣಾಕಾಕುಸ್ಥ" ಎಂದೇ ಹೇಳಬೇಕು. ಇನ್ನು ಮುಂದಿನ ದಿವ್ಯನಾಮವನ್ನು ಗಮನಿಸೋಣ.

16. **ಧರ್ಮವಿದುತ್ತಮಃ**--ಧರ್ಮಜ್ಞರುಗಳಲ್ಲಿ ಹಿರಿಯವನು ಶ್ರೀ ರಾಮಚಂದ್ರ ಎನ್ನುವಂತೆ. ಧರ್ಮವನ್ನು ಚೆನ್ನಾಗಿ ತಿಳಿದವನೆಂದು ಗೋದಾದೇವಿಯು ಶ್ರೀ ಕೃಷ್ಣಪರಮಾತ್ಮನಿಗೆ "ಧರ್ಮವರಿಯಾ ಕುರುಂಬಿ" ಯೆಂದು ಬಿರುದುಕೊಟ್ಟಳು. ಹಾಗೆಂದರೆ, ಧರ್ಮವನ್ನು ತಿಳಿಯದವನು ಎಂದು. ಅದಕ್ಕೆ ವಿರೋಧವಾಗಿ ರಾಮಚಂದ್ರನು ಧರ್ಮಜ್ಞರುಗಳಲ್ಲಿ ಮುಖಂಡನಾಗಿರುವವನು. ಸೀತಾದೇವಿಯು ರಾವಣನಿಗೆ ಹಿತವನ್ನು ಉಪದೇಶಿಸುವ ಕಾಲದಲ್ಲಿ "ವಿದಿತಸ್ಸ ಹಿ ಧರ್ಮಜ್ಞಃ" ಎಂದು ಪರಮಾತ್ಮನನ್ನು ಧರ್ಮಜ್ಞನೆಂದು ಹೇಳಿರುವುದು ಪ್ರಸಿದ್ಧ. ಅವಳ ಮನಸ್ಸಿನಲ್ಲಿ ನೆನಸಿದ ಧರ್ಮ ಇಂತಹುದೆಂಬುದನ್ನು ಅವಳು ತಾನೇ ಮುಂದೆ ಹೇಳುತ್ತಾಳೆ. "ಶರಣಾಗತ ವತ್ಸಲಃ" ಎನ್ನುವುದರಿಂದ ಶರಣಾಗತರ ಹತ್ತಿರ ಪ್ರೀತಿಯಿಟ್ಟಿರುವುದೇ ಪರಮಾತ್ಮನ ಪರ್ಯವಸಿತ ಧರ್ಮವೆಂದು ಅದನ್ನು ಅವರು ಚೆನ್ನಾಗಿ ತಿಳಿದಿರುವರೆಂದೂ ಹೇಳಿದಂತಾಯಿತು. ಚೆನ್ನಾಗಿ ತಿಳಿದವರೆಂದರೆ ತಿಳಿದಿರುವುದೆಂದರ್ಥವಲ್ಲ. ತಿಳಿಯುವುದಕ್ಕೆ ಫಲವಾದ ಅನುಷ್ಠಾನವಾದ್ದರಿಂದ ಆ ಧರ್ಮವನ್ನು ಚೆನ್ನಾಗಿ ಆಚರಿಸುವವರು ಎನ್ನುವುದೇ ತಾತ್ಪರ್ಯವಾಗುತ್ತದೆ. ಶ್ರೀ ರಾಮಾಯಣದಲ್ಲಿ ಶರಣಾಗತಿ ಮಾಡಿದವರು ಯಾರು ಯಾರು ? ಅವರುಗಳ ಹತ್ತಿರ ಪರಮಾತ್ಮನು ತೋರಿಸಿದ ವಾತ್ಸಲ್ಯ ಎಂತಹುದೆಂದು ವಿಮರ್ಶಿಸಬೇಕು.

ಇದಕ್ಕೆ ಮೊದಲು ಶರಣಾಗತಿಯೆಂಬುದೇನು ? ಎನ್ನುವ ವಿಮರ್ಶೆ ಅತ್ಯಂತ ಮುಖ್ಯವಾದದ್ದು. ಸಾರವಾಗಿ ತಿಳಿಸುತ್ತೇನೆ ಇಲ್ಲಿ. ಶರಣಾಗತಿ ಎಂದರೂ ಪ್ರಪತ್ತಿ ಎಂದರೂ ಒಂದೇ. ನೂರು ಆಕಾಂಕ್ಷೆಗಳನ್ನು ಉಂಟುಮಾಡಿ ಆಳವಾಗಿ ನೋಡುವಲ್ಲಿ. ಭಗವತ್ಪ್ರವೃತ್ತಿ ವಿರೋಧಿ ಸ್ವಪ್ರವೃತ್ತಿ ನಿವೃತ್ತಿ ಮಾತ್ರ ಪ್ರಪತ್ತಿಯಾಗಿ ಆಚರಿಸಲ್ಪಡುತ್ತದೆ. ಗಜೇಂದ್ರಾಳ್ವಾರ್ರು ಪ್ರಪನ್ನರು. ದ್ರೌಪದಿ ಪ್ರಪನ್ನೆ ಎನ್ನುತ್ತೇವೆ. ಇವರ ಹತ್ತಿರ ಮೇಲೆ ಹೇಳಿದ ಲಕ್ಷಣವೇ ಸಮನ್ವಿತವಾಗುತ್ತದೆ. "ಗಜ ಆಕರ್ಷತೇ ತೀರೇ ಗ್ರಾಹ ಆಕರ್ಷತೇ ಜಲೇ" ಎನ್ನುವಂತೆ ಗಜೇಂದ್ರಾಳ್ವಾರ್ರು ತನ್ನನ್ನು ತಾನು ರಕ್ಷಿಸಿಕೊಳ್ಳುವುದಾಗಿ ಸ್ವಪ್ರವೃತ್ತಿ ಪರನಾಗಿರುವವರೆಗೂ ಅವನ ಮೇಲೆ ಕರುಣೆ ಪ್ರಸರಿಸಲಿಲ್ಲ. ಆ ಪ್ರವೃತ್ತಿ ಅಡಗಿದ ನಂತರವೇ ತನ್ನ ನಿಲುವನ್ನೂ ಲಕ್ಷಿಸದೆ, ಶಿವೆ, ವಸ್ತ್ರಗಳ

ಪರಿವೆಯೂ ಇಲ್ಲದೆ ಓಡಿಬರುವ ಆತುರ ಪರಮಾತ್ಮನಿಗುಂಟಾಯಿತು. ದ್ರೌಪದಿಯ ಚರಿತ್ರೆಯಲ್ಲೂ ಈ ಹಿರಿಮೆಯನ್ನು ನೋಡೋಣ. " ಇರುಕ್ಕೈಯುಂ ವಿಟ್ಟೇನೋ ದ್ರೌಪದಿಯೈ ಪ್ಪೋಲೆ " ಎನ್ನುವಂತಹ ಸ್ಥಿತಿ ಅವಳಿಗೆ ಉಂಟಾದ ನಂತರವೇ ಅವಳು ರಕ್ಷಣೆಯನ್ನು ಹೊಂದಿದಳು. ತನ್ನ ಮಾನವನ್ನು ತಾನೇ ಕಾಪಾಡಿಕೊಳ್ಳುವುದಾಗಿ ಪ್ರಯತ್ನಿಸಿ ತನ್ನ ಸೀರೆಯನ್ನು ತಾನು ಬಿಗಿಯಾಗಿ ಹಿಡಿದುಕೊಂಡ ಸ್ಥಿತಿಯುಂಟಲ್ಲ. ಅದೇನೇ ಭಗವತ್ಪ್ರವೃತ್ತಿ ವಿರೋಧಿಯಾದ ಸ್ವಪ್ರವೃತ್ತಿಯಾಯಿತು. ಅದು ದೂರವಾದ ನಂತರವಲ್ಲವೇ ಸೀರೆಯು ವಿಸ್ತೃತವಾಗುವಂತೆ ಭಗವತ್ಕೃಪೆ ಕಾಣಿಸಿಕೊಂಡಿತು.

ಈ ರಹಸ್ಯವನ್ನು ರಾಮಾಯಣದಲ್ಲಿ ತೋರಿಸುತ್ತೇನೆ, ನೋಡಿ. ಕಾಕಾಸುರನು ಶರಣಾಗತಿ ಮಾಡಿದ್ದಾಗಿ ಹೇಳಲ್ಪಡುತ್ತದೆ. ಆ ಶರಣಾಗತಿಯ ಹಿರಿಮೆಯನ್ನು ವಿಮರ್ಶಿಸಿ ನೋಡಿದರೆ ಮೇಲೆ ವಿವರಿಸಲ್ಪಟ್ಟ ರೀತಿಯೇ ಕಂಡು ಬರುತ್ತದೆ " ಸ ತಂ ನಿಪತಿತಂ ಭೂಮೌ " ಎನ್ನುವಂತೆ ಎಲ್ಲಿಯೂ ಸಹಾಯ ದೊರೆಯದೆ ಧರಾಶಾಯಿಯಾಗಿ ಬಿದ್ದನಲ್ಲಾ. ಅದೇ ಅಲ್ಲವೇ ಅವನ ಶರಣಾಗತಿಯಾಗಿ ಆಚಾರ್ಯರುಗಳಿಂದ ನಿಷ್ಕರ್ಷಿಸಲ್ಪಟ್ಟಿತು. ಅವನಿಗೂ ರಕ್ಷಣೆ ದೊರಕಿತು.

ಕಾಕಾಸುರನಿಗಾದ ಈ ಸ್ಥಿತಿ ರಾವಣನಿಗೂ ಉಂಟು. ಪ್ರಬಲವಾದ ಯುದ್ಧವು ನಡೆಯುವ ಕಾಲದಲ್ಲಿ " ಯೋ ವಜ್ರ ಬಾಧಾಶ........ನಿ ಚ್ವಾಲ ಚಾಪಂಚ ಮುಮೋಚವೀರಃ " ಎನ್ನುವಂತಹ ಸ್ಥಿತಿ ರಾವಣನಿಗೆ ಉಂಟಾಯಿತು. ಆಗ ಪರಮಾತ್ಮನು " ಗಚ್ಛಾನುಜಾನಾಮಿ " " ಹೊರಟು ಹೋಗು. ಅಪ್ಪಣೆಯನ್ನು ಕೊಡುತ್ತೇನೆ " ಎಂದು ಹೇಳಿ ಬಿಟ್ಟಿರುವುದುಂಟೋ—ಅದು ತತ್ಕಾಲ ರಕ್ಷಣೆಯಲ್ಲಿ ಸೇರಿದ್ದೇ ಆಗುತ್ತದೆ. ಆತ್ಯಂತಿಕ ರಕ್ಷಣೆಯನ್ನೇ ಮಾಡಬೇಕೆಂಬ ಇಚ್ಛೆ ಭಗವಂತನಿಗೆ ಇದ್ದದ್ದುಂಟು. ಅವನು ವಿಧಿ ವಶದಿಂದ ಪುನಃ ಯುದ್ಧದಲ್ಲಿ ತೊಡಗಿ ಭಗವತ್ ಪ್ರವೃತ್ತಿ ವಿರೋಧಿ, ಸ್ವಪ್ರವೃತ್ತಿ ನಿಷ್ಠನಾಗಿ ನಾಶವಾಗಿ ಹೋದನು. ಅವನಿಗೂ ರಕ್ಷಣೆಯನ್ನೇ ಉಂಟು ಮಾಡಿ ಅನುಗ್ರಹಿಸಿದನು. ಪರಮಾತ್ಮನೆಂಬುದು ಶ್ರೀ ರಾಮಾಯಣದಲ್ಲಿ ಅಂತರಂಗ ಪರಮಾರ್ಥ. ಅವನಿಗೆ ಚರಮ ಸಂಸ್ಕಾರ ಮಾಡುವುದಿಲ್ಲವೆಂದು ಹಠವಾಗಿ ಇದ್ದ ವಿಭೀಷಣಾಳ್ವಾರನ್ನು ನಿರ್ಬಂಧ ಪಡಿಸಿ ಅದನ್ನು ಮಾಡುವ ಹಾಗೆ ಆಜ್ಞೆ ಮಾಡಿದ ಭಗವಂತನು " ಅವನ ದೇಹಕ್ಕೆ ಒಳ್ಳೆಯದನ್ನು ಮಾಡಲು ನಿಶ್ಚಯಿಸಿದ ನಮ್ಮ ಸಂಕಲ್ಪವು ನೆರವೇರದೆ ಉಳಿದರೂ ಅವನ ಆತ್ಮನಿಗಾದರೂ ಮೇಲ್ಮೆಯನ್ನುಂಟು ಮಾಡಿದೆವಲ್ಲ ಎಂದು ಆನಂದ ಪಟ್ಟಿರುವುದನ್ನು ನೆನಸುವುದು," " ಮರಣಾಂತಾನಿ ವೈರಾಣಿ ನಿವೃತ್ತಂ ನಃ ಪ್ರಯೋಜನಂ" "ಕ್ರಿಯತಾಮಸ್ಯ ಸಂಸ್ಕಾರಃ ಯಥಾಪ್ಯೇಷ ವಥಾ ಮಮ " ಎನ್ನುವ ಪರಮಾತ್ಮನ ಶ್ಲೋಕಕ್ಕೆ ನಂಬಿಳ್ಳೆಯವರ ರಸಭರಿತವಾದ ವ್ಯಾಖ್ಯಾನವನ್ನು ಕಾಣಬಹುದು.

ಮಂಗಳಂ

ಶ್ರೀ ರಾಮಾಯಣ ಪ್ರದೀಪ

ಶ್ರೀದೇವಿ

ಬೆಗಾದವಾಡಿ, ಮಂಡ್ಯ.

ಪ್ರಕಾಶಕರು

ಶ್ರೀದೇವಿ ಪ್ರಕಾಶನ

3018, ನೂರಡಿ ರಸ್ತೆ, ನೆಹರುನಗರ, ಮಂಡ್ಯ. (ಕರ್ನಾಟಕ)

1989

Sri Ramayana Pradeepa—(Critical Analysis by Sri Ramayana) by Smt. Sreedevi (M. N. Singaramma) and Published by Sreedevi Prakashana. 3018, 100feet Road, Nehru Nagar, Mandya (Karnataka), Second Edition 1989, Price Rs. 16—00.

© ಎಲ್ಲಾ ಹಕ್ಕು ಲೇಖಕಿಯರವು

1000 ಪ್ರತಿಗಳು

ಕೃತಿಗಳಿಗೆ
ವಿದ್ಯಾವಿಚಕ್ಷಣಾ ಎಂ. ಎನ್. ಶಿಂಗಾರಮ್ಮ,
(ಕಾವ್ಯನಾಮ ಶ್ರೀದೇವಿ)
3018, ನೂರಡಿ ರಸ್ತೆ, ನೆಹರುನಗರ
ಮಂಡ್ಯ-571 401
ದೂರವಾಣಿ 20897

ಬೆಲೆ : ರೂ. 16-00

ಮುದ್ರಕರು
ಶ್ರೀ ಗಣೇಶ್ ಪ್ರಿಂಟರ್ಸ್,
ಅಶೋಕನಗರ, 2ನೇ ಕ್ರಾಸ್, ಬಿ. ವಿ. ಕೆ. ರಸ್ತೆ,
ಮಂಡ್ಯ-571 401

॥ ಶ್ರೀ ॥

॥ ಶ್ರೀಮತೇ ರಾಮಾನುಜಾಯ ನಮಃ ॥

ಶ್ರೀ ಯದುಗಿರಿ ಯತಿರಾಜ ಮಠ

ಮೂಲಸಂಸ್ಥಾನ, ತಿರುನಾರಾಯಣಪುರ, ಮೇಲುಕೋಟೆ, ಪಾಂಡವಪುರ

ಕರ್ನಾಟಕ ರಾಜ್ಯ

ಶ್ರೀ ಶ್ರೀ ಯದುಗಿರಿಯತಿರಾಜ ನಾರಾಯಣರಾಮಾನುಜ ಜೀಯರ್

ಸ್ವಾಮಿಗಳವರಿಂದ ಅನುಗ್ರಹಿಸಲ್ಪಟ್ಟ

ಆಶೀರ್ವಚನ

ಶ್ರೀ ವೈಷ್ಣವರದು ಉಭಯವೇದಾಂತ. ಒಂದು ಸಂಸ್ಕೃತವಾದರೆ ಮತ್ತೊಂದು ದ್ರಾವಿಡ. ಇವೆರಡೂ ತತ್ತ್ವದರ್ಶನದ ಅವಿಭಾಜ್ಯವಾದ ಅಂಗ. ಇವೆರಡರಲ್ಲೂ ನಿರೂಪಿಸುವ ಸಾಧನೆಗಳಲ್ಲಿ ಶರಣಾಗತಿ ಅತಿ ಮುಖ್ಯವಾದುದು. ಈ ಅಂಶವನ್ನು ವಿವಿಧ ಅನುಭವಗಳ ಮೂಲಕ ವಿವರಿಸುವ ಗ್ರಂಥಗಳಲ್ಲಿ ಮುಖ್ಯವಾದವು ಎರಡು. ವಾಲ್ಮೀಕಿ ಮಹರ್ಷಿಯ ಶ್ರೀ ರಾಮಾಯಣ ಒಂದು ಶಠಕೋಪಮುನಿಗಳ ತಿರುವಾಯ್ ಮೊಳಿ ಮತ್ತೊಂದು. ಇವೆರಡೂ ಶ್ರೀವೈಷ್ಣವ ಸಿದ್ಧಾಂತದ ಎರಡು ಕಣ್ಣುಗಳು.

ವೇದ-ವೇದಾಂತಗಳಲ್ಲಿ ಅವಶ್ಯ ತಿಳಿಯಬೇಕಾದ ಅಂಶಗಳನ್ನು ಮಹರ್ಷಿಗಳು ಐದಾಗಿ ವಿಂಗಡಿಸಿದ್ದಾರೆ. (೧) ಜೀವಾತ್ಮನ ಸ್ವರೂಪ (೨) ಪರಮಾತ್ಮನ ಸ್ವರೂಪ (೩) ಪರಮಾತ್ಮನನ್ನು ಪಡೆಯುವ ಉಪಾಯ (೪) ಪರಮಾತ್ಮನನ್ನು ಪಡೆಯುವುದೆಂಬ ಪುರುಷಾರ್ಥ (೫) ಈ ಸ್ವರೂಪ-ಉಪಾಯ-ಪುರುಷಾರ್ಥಗಳ ವಿರೋಧಿವರ್ಗ. ಶರಣಾಗತನಾಗುವವನು ಈ ಐದನ್ನೂ ತಿಳಿದಿರಬೇಕು. ಇವೆಲ್ಲವನ್ನೂ ಶ್ರೀವೈಷ್ಣವಾಚಾರ್ಯರು ಮಂತ್ರರೂಪದಲ್ಲಿ ಉಪದೇಶಿಸಿಯೇ ಸಕಲ ಜಾತಿಯ ಜನರಿಗೂ ವೈಷ್ಣವ ದೀಕ್ಷೆಯನ್ನು ಕೊಡುತ್ತಾರೆ. ಈ ಮಂತ್ರಗಳು ವೇದೋಪನಿಷತ್ ಮತ್ತು ಭಗವದ್ಗೀತೆಗಳಲ್ಲಿ ಅಡಗಿವೆ. ವೇದಸಾರವಾದ ಇವುಗಳ ವೈಜ್ಞಾನಿಕ ನಿರೂಪಣೆ ಬ್ರಹ್ಮಸೂತ್ರಗಳಲ್ಲಿದೆ. ಆದುದರಿಂದ ಇವೆಲ್ಲದರ ಅಧ್ಯಯನ ಶರಣಾಗತನಿಗೆ ಅವನ ಯೋಗ್ಯತಾನುಸಾರ ಅವಶ್ಯಕ.

ಇಷ್ಟೆಲ್ಲ ಇವುಗಳ ಅಧ್ಯಯನ ಚಿಂತನಗಳನ್ನು ಮಾಡಿದರೂ ಅವು ಕೇವಲ ಶುಷ್ಕ ಎನಿಸುವುದಲ್ಲದೆ ಅನುಭವಕ್ಕೆ ಬಾರದ ವಿಚಾರಗಳೆಂಬಂತೆ ಶರಣಾಗತನಾಗುವವನಿಗೂ ಆದವನಿಗೂ ಸಹ ನಿರುಪಯುಕ್ತವಾಗಿ ಹೋದಾವು. ಹಾಗಾಗದಿರಲು ನಮಗೆಲ್ಲ

ವಾಲ್ಮೀಕಿಯ ಐತಿಹಾಸಿಕ ಅನುಭವಗಳ ಒಂದು ಪರಂಪರೆಯನ್ನೂ, ಶಠಕೋಪಮುನಿಯ ಮಾನಸಿಕ ಅನುಭವಗಳ ಒಂದು ಪರಂಪರೆಯನ್ನೂ, ನಮ್ಮ ಪೂರ್ವಾಚಾರ್ಯರು ಶ್ರೇಷ್ಠವಾದ ಕೊಡುಗೆಯಾಗಿ ನೀಡಿ ಹೋಗಿದ್ದಾರೆ. ಆದಿಯಿಂದ ಅಂತ್ಯದವರೆಗೆ ಶರಣಾಗತಿ ಪ್ರಸಂಗಗಳ ಒಂದು ದೊಡ್ಡ ಸರಪಳಿಯಂತಹ ಈ ಶ್ರೀ ರಾಮಾಯಣ ಮತ್ತು ತಿರುವಾಯ್‌ಮೊಳಿಗಳೆರಡೂ " ದೀರ್ಘಶರಣಾಗತಿ " ಎನಿಸಿವೆ. ಇವುಗಳಿಂದ ನಮಗೆ ಸರಳ ಸುಲಭವಾಗಿ ಸಕಲ ವೇದಾಂತಾರ್ಥಗಳೂ ಅನುಭವಕ್ಕೆ ಬರುತ್ತವೆ.

ಇಂತಹ ದಿವ್ಯಗ್ರಂಥಗಳಲ್ಲಿ ಎಲ್ಲ ದೇಶ-ವಿದೇಶಗಳಲ್ಲೂ ಹರಡಿ ಸಾರ್ವತ್ರಿಕವಾದ ಸಂಸ್ಕೃತ ಭಾಷಾಮಯವಾದ ಶ್ರೀ ರಾಮಾಯಣಕ್ಕೆ ತಿರುವಾಯ್‌ಮೊಳಿಗಿಂತ ಒಂದು ರೀತಿಯ ಹಿರಿಮೆ ಇದ್ದೇ ಇದೆ. ಹೀಗೆ ವಿಶ್ವಮಾನ್ಯವಾದ ತನ್ನ ಭಾಷಾರಮ್ಯತೆಯಿಂದಲೂ ಐತಿಹಾಸಿಕತೆಯಿಂದಲೂ ಶ್ರೀರಾಮಾಯಣವು ನಮ್ಮ ಹೃದಯದಲ್ಲಿ ನೆಲೆಸುವ ಸಕಲ ವೇದಾಂತಾರ್ಥಗಳನ್ನು ಸರಿಯಾಗಿ ನೋಡಿ ತಿಳಿಯಲು ಒಂದು ಉತ್ತಮವಾದ ಕೈಗನ್ನಡಿಯಂತಿದೆ.

ಪ್ರಕೃತ ಈ ಕನ್ನಡ ಗ್ರಂಥಕ್ಕೆ ಮೂಲವಾದ ಶ್ರೀ ರಾಮಾಯಣದ ತಮಿಳ್ ಉಪನ್ಯಾಸಗಳು ಆ ಕನ್ನಡಿಯ ಮೇಲಿನ ದೂಳನ್ನು ಒರೆಸಿ ಅದರ ನಿಜವಾದ ಪ್ರಕಾಶನಕ್ಕೆ ಬಹಳ ಮುಖ್ಯ ಸಾಧನಗಳಾಗಿವೆ. ಹಾಗೆ ಶುದ್ಧವಾದ ಕನ್ನಡಿಯನ್ನು ಜನರ ಮುಖಕ್ಕೆ ಹಿಡಿಯುವಂತಹ ಕೆಲಸ ಅಂದರೆ ; ಈ ಕನ್ನಡ ಅನುವಾದ ಕಾರ್ಯ. ಈ ಅನುವಾದದಲ್ಲಿ ಮೂಲ ತಮಿಳಿನ ಶೈಲಿಯನ್ನೇ ಅನುಸರಿಸಿದ್ದರೂ ಕೆಲವೆಡೆ ಕನ್ನಡ ಭಾಷೆಯ ಮತ್ತು ಸರಳ ಸಣ್ಣ ವಾಕ್ಯಗಳ ಶೈಲಿಯನ್ನು ಅಳವಡಿಸಿಕೊಳ್ಳದಿರುವುದರಿಂದ ಸಾಮಾನ್ಯ ಓದುಗರಿಗೆ ಸ್ವಲ್ಪ ಹಿಂಸೆಯಾಗಬಹುದು. ಆದರೂ ಮೂಲ ತಮಿಳು ಉಪನ್ಯಾಸದ ಕ್ರಮವು ಶಾಸ್ತ್ರೀಯವೂ ಅತ್ಯಂತ ಪರಿಶುದ್ಧವೂ ಆದುದರಿಂದ ಅದೇ ಕ್ರಮದಲ್ಲಿರುವ ಈ ಅನುವಾದವೂ ಓದುಗರಿಗೆ ಶ್ರೀ ರಾಮಾಯಣ ಮತ್ತು ವೇದಾಂತಗಳ ರಹಸ್ಯವನ್ನು ಸ್ಪಷ್ಟವಾಗಿಯೇ ತಿಳಿಸುತ್ತದೆ.

ಮೂಲ ಉಪನ್ಯಾಸಕರಾದ ದಿವಂಗತ ಶ್ರೀ॥ಉ॥ವೇ॥ ಕಾರಪ್ಪನ್‌ಕಾಡು ವೆಂಕಟಾಚಾರ್ಯರು ನ್ಯಾಯವೇದಾಂತಗಳಲ್ಲಿ ಪರಿಣತ ವಿದ್ವಾಂಸರು ಮಾತ್ರವಲ್ಲ ; ಅತ್ಯಂತ ಸರಳರೂ, ಸಹೃದಯರೂ, ವಾಗ್ಮಿಗಳೂ, ಪರಿಶುದ್ಧ ಚಾರಿತ್ರರೂ, ಪ್ರಸಿದ್ಧ ಉಪನ್ಯಾಸಕರೂ ಆಗಿದ್ದರು. ತಮಿಳುನಾಡಿನವರಾದ ಅವರ ಉಪನ್ಯಾಸಗಳನ್ನು ನಮ್ಮ ಹಿಂದಿನ ಮಹಾರಾಜರೂ ಕನ್ನಡನಾಡಿನಲ್ಲಿ ಏರ್ಪಡಿಸಿ ಗೌರವಿಸಿದ್ದರು. ಆ ಬಗ್ಗೆ " ಚಿಕ್ಕ ದೇವರಾಜ ಬಿನ್ನಪ " ಎಂಬ ಕನ್ನಡ ವೇದಾಂತ ಗ್ರಂಥವನ್ನು ಕುರಿತಾದ ಆಚಾರ್ಯರ ಉಪನ್ಯಾಸಮಾಲೆ " ವಿಶಿಷ್ಟಾದ್ವೈತಸಾರ "ವಾಗಿ ಪ್ರಕಟವಾಗಿದೆ. ಆಚಾರ್ಯರು ಉಭಯ ವೇದಾಂತಗಳಲ್ಲೂ ಶ್ರೀ ವೈಷ್ಣವರ ಉಭಯ ಸಂಪ್ರದಾಯಗಳಲ್ಲೂ ಸಮರ್ಥರೂ ಪ್ರಾಮಾಣಿಕರೂ ಆದ ಏಕೈಕ ವ್ಯಕ್ತಿಯಾಗಿದ್ದರು. ಇಂದು ಅಪ್ರಾಮಾಣಿಕವಾದ ಭಿನ್ನತೆಯಿಂದ ಪರಸ್ಪರ ದೂರಸರಿಯುತ್ತಿರುವ ತೆಂಗಲೆ-ವಡಗಲೆ-ಉಭಯ

ಸಂಪ್ರದಾಯಗಳಿಗೂ ಪ್ರಾಮಾಣಿಕ ರೀತಿಯ ಸ್ವಾಭಾವಿಕವಾದ ಸೌಹಾರ್ದ ಮತ್ತು ಪರಸ್ಪರ ವಿನಿಮಯಗಳಿಂದ ಫಲತಃ ಏಕತೆಯನ್ನೇ ತೋರಿಸುವುದು ಆಚಾರ್ಯರ ವೈಶಿಷ್ಟ್ಯವಾಗಿತ್ತು.

ಅಂತಹವರಲ್ಲಿ ಅವರ ಶಿಷ್ಯೆಯಾಗಿ ವೇದಾಂತಮಯ ಜೀವನವನ್ನೇ ನಡೆಸುತ್ತಿರುವ ಯಾದವಾದ್ರಿಯ ಶ್ರೀದೇವಿಯ ಈ '' ರಾಮಾಯಣ ಪ್ರದೀಪ '' ಓದುಗರಿಗೆ ಶ್ರೀವೈಷ್ಣವ ಶ್ರೀಯನ್ನು ತೋರಿಸಿಕೊಡಲು ಬಹಳ ಉತ್ತಮ ಸಾಧನ. ಇಂತಹ ಅನುವಾದ ಕಾರ್ಯದಿಂದ ಸಂತುಷ್ಟರಾಗುವ ಸಕಲ ಭಾಗವತೋತ್ತಮರ ಅನುಗ್ರಹವೂ ಶ್ರೀದೇವಿಯಿಂದ ಇಂತಹ ಇನ್ನೂ ಒಳ್ಳೆಯ ಕಾರ್ಯಗಳನ್ನು ಮಾಡಿಸಲಿ. '' ಚಿರಮಭಿವರ್ಧತಾಂ ಶ್ರೀವೈಷ್ಣವಶ್ರೀಃ '' ಎಂದು ಆಚಾರ್ಯರಾದ ಯತಿರಾಜರಾಜ ಶ್ರೀ ರಾಮಾನುಜರೂ, ಜಗಜ್ಜನನಿಯಾದ ಯದುಗಿರಿನಾಚ್ಚಿಯಾರ್ ಮತ್ತು ಜಗದೀಶ್ವರನಾದ ಸಂಪತ್ಕುಮಾರ ಭಗವಂತನೂ ಶ್ರೀ ಲಕ್ಷ್ಮೀನೃಸಿಂಹಸ್ವಾಮಿಯೂ ಅನುಗ್ರಹಿಸಲಿ.

ಶ್ರೀ ಯದುಗಿರಿ ಯತಿರಾಜ ನಾರಾಯಣ ಜೀಯರ್

ಎರಡು ಮಾತು

ರಾಮಾಯಣವು, ಜಗತ್ತಿನ ಆದಿಕಾವ್ಯಗಳಲ್ಲಿ ಪ್ರಮುಖವೂ ಶ್ರೇಷ್ಠವೂ ಆದುದೆಂದು ಪರಿಗಣಿಸಲಾಗಿದೆ. ಭಾರತೀಯರಿಗಂತೂ ರಾಮಾಯಣ ಧಾರ್ಮಿಕಗ್ರಂಥ, ಜೀವನ ಧರ್ಮದ ಕೈಪಿಡಿ. ಸಮಾಜಶಾಸ್ತ್ರಕ್ಕೆ ಆಕರ. ರಾಮಾಯಣ ಭಾರತೀಯರಿಗೆ ವಿಶ್ವಕೋಶ. ನಮಗೆ ಧರ್ಮ ಅರ್ಥ ಕಾಮ ಮೋಕ್ಷಗಳಿಗೆ ಸಾಧನವಾದ ಗ್ರಂಥ. ಪ್ರತಿ ಸಂಸಾರಿಗೂ ಇದು ಜೀವನದ ದಾರಿದೀಪ. ಇದು ಭಾರತೀಯತ್ವ ಸತ್ವ ಮಾನವೀಯತೆಯ ಅತ್ಯುಚ್ಚ ಆದರ್ಶಗಳ ಗಣಿ. ಹಿರಿಯರಾದ ಡಾ॥ ಡಿ. ವಿ. ಗುಂಡಪ್ಪನವರು '' ಮನುಷ್ಯನ ಇಹಪರಗಳೆರಡರ ಸಾಧನೆಗೂ, ಜೀವನಸಮಸ್ಯೆಗಳನ್ನೆಲ್ಲ ಸುಗಮವಾಗಿ ವಿಮರ್ಶಿಸುವುದಕ್ಕೂ ರಾಮಾಯಣವೊಂದೇ ಸಾಕು '' ಎಂದು ಹೇಳಿದ್ದಾರೆ.

ರಾಮಾಯಣವು ಧಾರ್ಮಿಕ ಗ್ರಂಥಮಾತ್ರವೇ ಅಲ್ಲ. ಅದು ಧಾರ್ಮಿಕ ಗ್ರಂಥಕ್ಕಿಂತ ಹೆಚ್ಚಾಗಿ ಕಾವ್ಯ, ನವರಸ ಭರಿತವಾದ ಕಾವ್ಯ. ಅದು ಕಾಲಮಾನದಿಂದ ಮಾತ್ರವೇ ಅಲ್ಲ. ಕಾವ್ಯಗುಣದಿಂದಲೂ ಆದಿಕಾವ್ಯ. ಜಗತ್ತಿನ ಮಹಾಕವಿಗಳಿಗೆಲ್ಲ–ಭಾರತೀಯರಿಗಂತೂ ಸರಿಯೇ ಸರಿ--ವಾಲ್ಮೀಕಿಯೇ ಕವಿ ಗುರು. ಕವಿ ಶ್ರೇಷ್ಠ ಕಾಳಿದಾಸ ಭವಭೂತಿ ಬಾಣ ಭಾಸ–ಸಂಸ್ಕೃತ ಕವಿಪುಂಗವರೆಲ್ಲ ವಾಲ್ಮೀಕಿಗೆ ಋಣಿ. ರಾಮಾಯಣದಲ್ಲಿ ನವರಸಗಳ ಕೋಡಿಯೇ ಹರಿದಿದೆ. ರಾಮಾಯಣ ಜನಿಸಿದುದೇ ವ್ಯಾಧನ ಬಾಣದಿಂದ ಸತ್ತ ಪ್ರೇಮಿಗಾಗಿ, ಶೋಕಿಸಿದ ಪಕ್ಷಿಯ ಕರುಣಾ ಜನಕ ಸ್ಥಿತಿಯಿಂದ. ವಾಲ್ಮೀಕಿಯ ಮನಸ್ಸು ಜಗತ್ ಶ್ರೇಷ್ಠಕಾವ್ಯವನ್ನು ರಚಿಸಲು ಅರ್ಹವಾದ ಹದದಲ್ಲಿ ಇದ್ದಿತು. ಆದುದರಿಂದಲೇ ಆತನು ಗಿರಿ ನದಿ ಸೂರ್ಯಚಂದ್ರರು ಇರುವವರೆಗೆ ಶಾಶ್ವತವಾಗಿ ನಿಲ್ಲುವ ಕಾವ್ಯವನ್ನು ರಚಿಸಿದನು.

ಭಾರತೀಯರಿಗೆ ರಾಮಾಯಣ ಧರ್ಮಗ್ರಂಥ. ಉತ್ತಮಕಾವ್ಯ, ನೀತಿಗ್ರಂಥ. ಧರ್ಮ ನೀತಿ ಯಾವುದೂ ಬೇಡವೆನ್ನುವವರಿಗೆ ಸಹ ಅತ್ಯುತ್ತಮ ನವರಸಭರಿತವಾದ ಕಾವ್ಯ. ಆಕರ್ಷಣೀಯವಾದ ಕಥೆ ಲಲಿತವಾದ ಸರಳವಾದ ಶೈಲಿ. ಅದ್ಭುತವಾದ ವರ್ಣನಾ ಭಾಗಗಳು ಕಾವ್ಯಾಲಂಕಾರಗಳು, ಆದರ್ಶ ರಾಜ, ಆದರ್ಶ ಪತಿ, ಆದರ್ಶ ಪುತ್ರರು, ಆದರ್ಶ ಮಂತ್ರಿ, ಆದರ್ಶ ಸತಿ, ಆದರ್ಶ ಸೇವಕ, ಆದರ್ಶ ಸೇವಕ ಮಿತ್ರಗುಹ–ಇಲ್ಲಿ ಆರ್ಯ ದ್ರಾವಿಡರ ಸಂಮ್ಮಿಳನವೂ ಇದೆ–ಆದರ್ಶ ಪಾತ್ರಗಳು ಎಲ್ಲವುಗಳ ಮಿಲನವೂ ಇದೆ.

ಭಾರತೀಯರಿಗೆ ರಾಮಾಯಣ, ಜೀವನದ ಉಸಿರು, ತೊಟ್ಟಿಲಿನಲ್ಲಿರುವಾಗಲೇ ಮಗುವಿಗೆ ರಾಮನ ಕಥೆಯು ಲಾಲಿ ಕಿವಿಗೆ ಬೀಳುತ್ತದೆ. ಅಲ್ಲಿಂದ ಮುಂದೆ ಜೀವಮಾನವೆಲ್ಲ ಅವನು ಬಯಸಲಿ ಬಿಡಲಿ ರಾಮಕಥೆ, ಕೀರ್ತನೆ, ಹರಿಕಥೆ, ನಾಟಕ, ಚಲನಚಿತ್ರ ಹೇಗೂ ಎಲ್ಲವೂ ಕಿವಿಗೆ ಕಣ್ಣಿಗೆ ಬೀಳುತ್ತವೆ. ಸಂಸ್ಕೃತಭಾಷೆ ತಿಳಿಯದಿದ್ದರೂ ಭಾರತದ

ಎಲ್ಲ ಭಾಷೆಗಳಲ್ಲಿಯೂ ರಾಮಾಯಣ ಭಾರತಗಳು ಅನುವಾದವಾಗಿರುವುದಲ್ಲದೆ ಸ್ವತಂತ್ರವಾಗಿಯೂ ಪ್ರಾಂತ ಭಾಷೆಗಳಲ್ಲಿ ರಾಮಾಯಣವನ್ನು ಬರೆದಿದ್ದಾರೆ. ಅಂತಹ ಸಂದರ್ಭಗಳಲ್ಲೆಲ್ಲ ಲೇಖಕರು ಕವಿಗಳು ತಮ್ಮ ಪ್ರಾಂತಗಳಲ್ಲಿ ಜನಪದರಲ್ಲಿ ಪ್ರಚಾರದಲ್ಲಿರುವ ಅನೇಕ ಹೊಸ ಕಥೆಗಳನ್ನು ಸೇರಿಸಿ ರಾಮಕಥೆಯನ್ನು ಹೆಚ್ಚು ಆಕರ್ಷಣೀಯವಾಗಿಯೂ ಮಾಡಿರುತ್ತಾರೆ. ಹೀಗೆ ರಾಮಾಯಣ ನಮ್ಮ ಜೀವನದಲ್ಲಿ ಹಾಸು ಹೊಕ್ಕು ಆಗಿ ಸೇರಿಕೊಂಡಿದೆ. ಆಧುನಿಕ ನಾಗರೀಕತೆಯ ಪ್ರಖರ ಹೊಳಪಿನಿಂದ ರಾಮಾಯಣದ ಸಂದೇಶದ ತಿರುಳು ಕೆಲವು ಆಧುನಿಕರ ಅಲಕ್ಷ್ಯಕ್ಕೆ ಈಡಾಗಿದ್ದರೂ—ಜಗತ್ತಿನ ಯಾವ ಭಾಷೆಯ ಮಹಾಕಾವ್ಯಕ್ಕೂ ಸರಿಸಮವಾಗಿ ನಿಲ್ಲಬಲ್ಲ ಅದರ ಕಾವ್ಯಸೌಂದರ್ಯ ವರ್ಣನೆ ಪಾತ್ರಗಳ ಸ್ವಭಾವ ನಿರೂಪಣೆ ಕಥೆ ಎಲ್ಲರನ್ನೂ ಆಕರ್ಷಿಸುತ್ತದೆ.

ಭಾರತ ಸಂಸ್ಕೃತಿ ಉಳಿದಿರುವುದೇ ರಾಮಾಯಣ ಭಾರತ ಸಂಸ್ಕೃತಿಗಳಿಂದ. ಭಾರತದ ಒಗ್ಗಟ್ಟು ಉಳಿದಿರುವುದೂ ಈ ಕಾವ್ಯಗಳಿಂದ. ಈ ಎರಡೂ ಕಾವ್ಯಗಳೂ ಗಂಗೆ ಯಮುನೆಯಂತೆ—ಈ ದೇಶದ ಮೇಲೆ ಸಾವಿರಾರು ವರುಷಗಳಿಂದ ಪರದೇಶೀಯರ ಆಘಾತ ಅಪ್ಪಳಿಸಿದರೂ—ಈ ದೇಶದ ಸಂಸ್ಕೃತಿಯನ್ನೂ ಆತ್ಮವನ್ನೂ ಉಳಿಸಿದವು. ಈ ಕಾವ್ಯಗಳ ಆಧ್ಯಾತ್ಮ ಪ್ರಭಾವದಿಂದಲೇ ಗಾಂಧೀಜಿ, ಧರ್ಮ ಪ್ರಧಾನವಾದ ಸತ್ಯಾಗ್ರಹವೆಂಬ ಸಾತ್ವಿಕ ಅಸ್ತ್ರವನ್ನು ಕಂಡುಹಿಡಿದು ರಾಜಕೀಯದಲ್ಲಿ ಧರ್ಮವನ್ನು ಬೋಧಿಸಿ ಕೆಲವು ದಶಕಗಳ ಕಾಲ ಹೋರಾಡಿ ಸ್ವಾತಂತ್ರ್ಯವನ್ನು ಗಳಿಸಿದರು. ಗಾಂಧೀಜಿ, ರಾಮನಾಮ ರಾಮಭಕ್ತಿ ರಾಮನ ಆದರ್ಶದಿಂದಲೇ ಸ್ವರಾಜ್ಯವನ್ನು ಸಂಪಾದಿಸಿದರು. ಗಾಂಧೀಜಿ ಎಲ್ಲಿದ್ದರೂ ರಾಮಭಜನೆ ಪ್ರಾರ್ಥನೆಯನ್ನು ಒಂದು ದಿನವೂ ಬಿಡಲಿಲ್ಲ. ಈ ದೇಶವು ರಾಮರಾಜ್ಯವಾಗಬೇಕೆಂದು ಗಾಂಧೀಜಿ ಹೇಳುತ್ತಿದ್ದರು.

ರಾಮನು ಆದರ್ಶರಾಜನಾಗಿದ್ದ ಎಂಬುದರಲ್ಲಿ ಸಂದೇಹವೇ ಇರಲಿಲ್ಲ. ತನ್ನ ಬುದ್ಧಿಗೆ ತೋರಿದಂತೆ ಅವನು ಧರ್ಮ ಪಥದಿಂದ ಒಂದು ಎಳೆಯಷ್ಟೂ ವಿಚಲಿತನಾಗಲಿಲ್ಲ. ರಾಮನಿಗೆ ಧರ್ಮವಿಗ್ರಹ ಎಂದೇ ಹೆಸರಾಯಿತು. ಅಂದಿನ ಕಾಲದ ನಿಯಮದಂತೆ—ಈ ಕಾಲಕ್ಕೆ ಹೋಲಿಸಿದರೆ—ಅವನು ಮಾಡಿದ ಕೆಲವು ಕಾರ್ಯಗಳು—ಇಂದು ನಮಗೆ ನ್ಯಾಯವಲ್ಲವಾಗಿ ತೋರಬಹುದು-ಆದರೆ ಅಂದು ಅವು ಎಲ್ಲರೂ ಒಪ್ಪಿದ ಮೌಲ್ಯಗಳೂ ಆದರ್ಶಗಳೂ ಆಗಿದ್ದವು. ಯಾವನೋ ಒಬ್ಬ ಅಗಸ ಹೇಳಿದನೆಂದು ರಾಮನು ತುಂಬುಗರ್ಭಿಣಿ ಸೀತಾದೇವಿಯನ್ನು ಕಾಡಿಗೆ ಅಟ್ಟಿಬಿಟ್ಟನು (ಪ್ರಜೆಗಳ ತೃಪ್ತಿಗಾಗಿ) "ಸೀತೆಯಂತಹ ಸಾಧ್ವಿಮಣಿಯನ್ನು ಜಗತ್ತಿನ ಮತ್ತಾವ ಸಾಹಿತ್ಯವೂ ಸೃಷ್ಟಿಸಿಲ್ಲ" ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ.

ರಾಮಾಯಣದಲ್ಲಿ, ಮಾನವ ಜೀವಿತದ ಸೌಖ್ಯಕ್ಕಾಗಿ ಅನೇಕ ಮೌಲ್ಯಗಳು ನಿರೂಪಿತವಾಗಿವೆ. ಅವೆಲ್ಲವೂ ಸಾರ್ವಕಾಲಿಕ ಮೌಲ್ಯಗಳು. ಸೀತೆಯ ಪತಿಭಕ್ತಿ ಆಂಜನೇಯನ ಸ್ವಾಮಿನಿಷ್ಠೆ ಭರತನ ಭ್ರಾತೃಪ್ರೇಮ ಎಂದೆಂದಿಗೂ ಮಾನವ ಕಲ್ಯಾಣಕ್ಕೆ ಆವಶ್ಯಕ ಗುಣಗಳು. ರಾಮನು ಸಿಂಹಾಸನದ ಹಕ್ಕನ್ನು ಬಿಡುತ್ತಾನೆ. ಭರತನೂ

ಸಿಂಹಾಸನ ಬೇಡವೆನ್ನುತ್ತಾನೆ. ಈ ಬಗೆಯ ಒಂದು ಸನ್ನಿವೇಶ–ಕಥೆಯಾಗಿ ಸಹ ಜಗತ್ತಿನ ಇತರ ಸಾಹಿತ್ಯಗಳಲ್ಲಿ ದೊರೆಯುವುದಿಲ್ಲ. ಇಂಥ ಸಂಭವ ಭಾರತದಲ್ಲಿ ಮಾತ್ರ ನಡೆಯಬಲ್ಲದು ಎಂದು ಅರವಿಂದರು ಹೇಳಿದ್ದಾರೆ. ಭಾರತದಲ್ಲಿ ಶ್ರೀ ರಾಮನ ಹೆಸರಿನಲ್ಲಿ ಎಲ್ಲೆಲ್ಲಿಯೂ ಭಕ್ತಿಪಂಥ ಉದಿಸಿವೆ. ರಾಮಮಂದಿರ, ರಾಮಭಜನೆ, ರಾಮಾಯಣ ಪಾರಾಯಣ ಕಬೀರ ತುಳಸಿದಾಸ ತ್ಯಾಗರಾಜ ಇವರೆಲ್ಲರ ಪಂಥ ರಾಮನನ್ನು–ಒಬ್ಬ ರಾಜ ಅಥವಾ ಚಕ್ರವರ್ತಿಯ ಮಟ್ಟದಿಂದ ಮೇಲಕ್ಕೆ ಏರಿಸಿ ಭಕ್ತಿ ಪಂಥದ ಕೇಂದ್ರವನ್ನಾಗಿ ಮಾಡಿದೆ.

ವಿಶಿಷ್ಟಾದ್ವೈತ ಸಿದ್ಧಾಂತ, ತನ್ನ ದರ್ಶನದಲ್ಲಿ ರಾಮಾಯಣ ಮತ್ತು ಅದರ ಸಂದೇಶಕ್ಕೆ ಪ್ರಮುಖ ಸ್ಥಾನವನ್ನು ಕೊಟ್ಟಿದೆ. ವಿಶಿಷ್ಟಾದ್ವೈತದಲ್ಲಿ ಭಕ್ತಿಯು ಕೇಂದ್ರ ಬಿಂದು. ಪರಮಾತ್ಮನಲ್ಲಿ ಪೂರ್ಣಭಕ್ತಿ ಪೂರ್ಣ ಶರಣಾಗತಿಯೇ ಭಕ್ತನ ಉದ್ಧಾರಕ್ಕೆ ಮಾರ್ಗ. "ಮೋಕ್ಷಸಾಧನ ಸಾಮಗ್ರ್ಯಾಂ ಭಕ್ತಿರೇವ ಗರೀಯಸಿ" ಎಂದು ಶ್ರೀ ಶಂಕರರು ಹೇಳಿದ್ದರೂ ವಿಶಿಷ್ಟಾದ್ವೈತದಲ್ಲಿ ಭಕ್ತಿ ಶರಣಾಗತಿಗಳೇ ಭಕ್ತನ ಮುಖ್ಯ ಅಸ್ತ್ರ. ಇಲ್ಲಿ ಭಕ್ತಿಯೇ ಜ್ಞಾನವೂ ಕರ್ಮವೂ ಆಗಿ ಪೂರಕವಾಗುತ್ತವೆ. ತೈಲಧಾರಾವಚ್ಛಿನ್ನವಾದ ನವವಿಧ ಭಕ್ತಿಯಿಂದಲೇ ದೃಢ ಸಾಕ್ಷಾತ್ಕಾರ ಪರಮಾತ್ಮ ಸಾಯುಜ್ಯ ಸಾಧ್ಯ. ಪ್ರಹ್ಲಾದ ಧ್ರುವ ಗಜೇಂದ್ರ ಗೋಪಿಯರು ಶಬರಿ ಗೋದಾದೇವಿ ಎಲ್ಲರೂ ಭಕ್ತಿಯಿಂದಲೇ ಮುಕ್ತಿಯನ್ನು ಪಡೆದರು. ಕಾಕಾಸುರನು ರಾಮನ ವಿಷಯದಲ್ಲಿ ಘೋರವಾದ ಅಪರಾಧವನ್ನು ಮಾಡಿದರೂ, ತಿರುಗಿ ಬಂದು ಶ್ರೀ ರಾಮನನ್ನು ಶರಣು ಹೊಂದಲು ರಾಮನು ಅವನನ್ನು ಕ್ಷಮಿಸಿದನು. ರಾಮಾಯಣವೆಲ್ಲ ಪೂರ್ಣ ಶರಣಾಗತಿಯ ಮಾಲೆಯೇ ಆಗಿದೆ. ರಾಮಾನುಜಾಚಾರ್ಯರೇ ಶರಣಾಗತಿ ಗದ್ಯವನ್ನು ರಚಿಸಿದ್ದಾರೆ.

ರಾಮಾಯಣದಲ್ಲಿ ಶರಣಾಗತಿಗೆ ಅತಿ ಪ್ರಮುಖ ಸ್ಥಾನವನ್ನು ಕೊಟ್ಟಿದ್ದಾರೆ. ವಿಭೀಷಣನ ಶರಣಾಗತಿಯಲ್ಲಿ ಈ ಅಂಶದ ಪೂರ್ಣ ವಿವರಣೆ ಪೂರ್ಣ ತತ್ವ ವಿವೇಚಿತವಾಗಿದೆ. ವಿಭೀಷಣನು, ರಾಕ್ಷಸ, ಸೀತೆಯನ್ನು ಕದ್ದುಕೊಂಡು ಹೋದ ರಾವಣನ ತಮ್ಮ. ಸೀತೆಯನ್ನು ಹುಡುಕಲು ಆಂಜನೇಯನು ಲಂಕೆಗೆ ಹೋದಾಗ ರಾಕ್ಷಸರು ಅವನಿಗೆ ತುಂಬ ಕಿರುಕುಳ ಕೊಟ್ಟರು. ರಾಮನ ಅಗಾಧ ಸೈನ್ಯವು, ಲಂಕೆಯನ್ನು ಮುತ್ತಲು ಬಂದಿದೆ. ರಾಮನ ಮತ್ತು, ರಾವಣನ ಗೂಢಚಾರರು ವೇಷ ಮರೆಸಿಕೊಂಡು ಪರಸ್ಪರರ ಸೈನ್ಯ ಬಲವೆಷ್ಟು ಎಂಬುದನ್ನು ಪರೀಕ್ಷಿಸಿದ್ದಾರೆ. ಇಂತಹ ಸಂದರ್ಭದಲ್ಲಿ ರಾವಣನ ತಮ್ಮ ವಿಭೀಷಣ ರಾವಣನ ಪಕ್ಷವನ್ನು ತೊರೆದು ರಾಮನಲ್ಲಿ ಶರಣಾಗತನಾಗಿ ಬಂದು ಅಂತರಿಕ್ಷದಲ್ಲಿ ನಿಂತು " ನಾನು ರಾವಣನ ತಮ್ಮ ವಿಭೀಷಣ ನಿನ್ನನ್ನು ಮರೆಹೊಕ್ಕು ಬಂದಿದ್ದೇನೆ. ನನನ್ನು ಅಂಗೀಕರಿಸಿ ಕಾಪಾಡು ಎಂದು ಎಲ್ಲರಿಗೂ ಕೇಳುವಂತೆ ಸ್ಪಷ್ಟವಾದ ಧ್ವನಿಯಲ್ಲಿ ಕೂಗುತ್ತಿದ್ದಾನೆ. ವಿಭೀಷಣನ ಪ್ರಾರ್ಥನೆ ಎಲ್ಲರಿಗೂ ರಾಮ ಲಕ್ಷ್ಮಣರಿಗೂ ರಾಮಸೇನೆಗೂ ಕೇಳಿಸಿತು.

ರಾಮನ ಸೇನೆಯಲ್ಲಿಯೇ ಗಜಿಬಿಜಿಯುಂಟಾಯಿತು. "ಇದು ರಾಕ್ಷಸರ ಮತ್ತೊಂದು ಮಾಯೆ. ಮೋಸ. ಇವರು ಶತ್ರುವಿನ ಪಕ್ಷದವರು. ನಮ್ಮ ಛಿದ್ರವನ್ನು ಕಂಡುಹಿಡಿಯುವುದಕ್ಕೆ, ನಮ್ಮ ಸೈನ್ಯದ ರಹಸ್ಯವನ್ನು ತಿಳಿಯಲು ಇವರು ಬಂದಿದ್ದಾರೆ. ಇವನನ್ನು ಹೊರಗೆ ಅಟ್ಟಿ" ಎಂದು ಸೈನಿಕರೆಲ್ಲ ಬೊಬ್ಬೆ ಹಾಕಿದರು. ಕೈಗೆ ಸಿಕ್ಕಿದ್ದರೆ ಅವರು ವಿಭೀಷಣನನ್ನೂ ಗುದ್ದುವುದಕ್ಕೂ ಹಿಂತೆಗೆಯುತ್ತಿರಲಿಲ್ಲ. ಆದರೆ ಹನುಮಂತನು ಮಧ್ಯೆ ಪ್ರವೇಶಿಸಿದನು. ಅವನು ಶ್ರೀರಾಮನಿಗೆ ಹೀಗೆ ಹೇಳಿದನು. "ವಿಭೀಷಣನು ಸ್ವಂತ ಇಚ್ಛೆಯಿಂದ ಪ್ರಾಮಾಣಿಕವಾಗಿ ಬಂದಿದ್ದಾನೆ. ನಿನ್ನಲ್ಲಿ ಶರಣು ಬಂದಿದ್ದಾನೆ. ಇದರಲ್ಲಿ ಮೋಸವಿಲ್ಲ. ಇವನು ಈ ಕಾರ್ಯವನ್ನು ರಹಸ್ಯವಾಗಿ ಮಾಡಿಲ್ಲ. ರಾವಣನಿಗೆ ಅವನು ಮಾಡಿರುವ ಪರಸತಿ ಅಪಹರಣ ಸರಿಯಾದುದಲ್ಲವೆಂದು ಅದು ಪಾಪಕಾರ್ಯವೆಂದೂ, ಇದರಿಂದ ವಂಶನಾಶವಾಗುವುದೆಂಬುದನ್ನೂ ಇವನು ಹೇಳಿ ಸೀತೆಯನ್ನು ಹಿಂದಕ್ಕೆ ಒಪ್ಪಿಸುವಂತೆ ಹೇಳಿದನು. ಇವನ ವಿವೇಕ, ರಾವಣನಿಗೆ ಪ್ರಿಯವಾಗಲಿಲ್ಲ. ರಾವಣನು ವಿಭೀಷಣನನ್ನೂ ಅವನ ಮಂತ್ರಿಗಳನ್ನೂ ದಂಡಿಸಿದನು. ರಾವಣನನ್ನು ಸನ್ಮಾರ್ಗಕ್ಕೆ ತರಲು ವಿಭೀಷಣನು ತನ್ನ ಕೈಲಾದ ಪ್ರಯತ್ನಗಳನ್ನೆಲ್ಲ ಮಾಡಿದ್ದಾನೆ. ರಾವಣನು ತನ್ನ ದುರ್ಮಾರ್ಗವನ್ನು ಬಿಡಲು ಒಪ್ಪಲಿಲ್ಲ. "ರಾವಣನು ಒಂದು ದುಷ್ಟ ಶಕ್ತಿ. ಏನು ಮಾಡಿದರೂ ಸನ್ಮಾರ್ಗಕ್ಕೆ ತಿರುಗುವವನಲ್ಲ. ಇವನ ಸಹವಾಸದಲ್ಲಿದ್ದರೆ ನಾನೂ ನಾಶವಾಗುವುದು ಖಂಡಿತ. ಆದುದರಿಂದ ನಾನು ರಾವಣನ ಕೆಟ್ಟ ಮತ್ತು ಪಾಪ ಕಾರ್ಯದಲ್ಲಿ ಸೇರಿದರೆ ಅವನೊಂದಿಗೆ ನಾನೂ ನಾಶವಾಗುವುದು ಖಂಡಿತ. ರಾಮನ ಮಾರ್ಗವು ಸರಿಯೆಂದು ನನಗೆ ಮನದಟ್ಟಾಗಿದೆ. ನನ್ನ ಪ್ರಾಣವನ್ನು ಉಳಿಸಿಕೊಳ್ಳುವುದಕ್ಕಾಗಿ ನಾನು ರಾಮನಲ್ಲಿ ಶರಣು ಬಂದಿದ್ದೇನೆ" ಎಂದು ವಿಭೀಷಣನು ಹೇಳುತ್ತಿದ್ದಾನೆ. ನಾನು ಲಂಕೆಯಲ್ಲಿದ್ದಾಗ ರಾಕ್ಷಸರು ನನ್ನ ಮೇಲೆ ಕೈ ಮಾಡಿದಾಗ ವಿಭೀಷಣನು ನನಗೆ ಸಹಾಯ ಮಾಡಿದನು. ಇವನು ರಾಕ್ಷಸನಾದರೂ ಇವನ ಸ್ವಭಾವದಲ್ಲಿ ರಾಕ್ಷಸತ್ವವಿಲ್ಲ. ಇವನು ಶುದ್ಧ ಸಾತ್ವಿಕ. ಇವನಿಗೆ ರಾಮನು ರಕ್ಷಣೆಯನ್ನು ಕೊಡಬೇಕು."

ಆಂಜನೇಯನು ಇಷ್ಟೆಲ್ಲ ಹೇಳಿದರೂ "ರಾಕ್ಷಸರನ್ನು ನಂಬಕೂಡದು. ನಮ್ಮ ರಾಮ ಅವರಿಗೆ ಆಶ್ರಯವನ್ನು ಕೊಡಕೂಡದು" ಎಂದು ಕಪಿಸೇನೆ ಘೋಗರೆಯಿತು. ಶ್ರೀ ರಾಮನು ಒಂದೇ ತೀರ್ಮಾನವನ್ನು ಹೇಳಿದನು. "ಶರಣು ಬಂದವರನ್ನು ಕಾವೆ" ಎಂಬುದು ನನ್ನ ಪ್ರತಿಜ್ಞೆ. ಇದು ಭಕ್ತರಿಗೆ ನಾನು ಕೊಟ್ಟ ವಚನ. ಅವನು ಎಂತಹ ಸ್ವಭಾವದವನಾಗಿರಲಿ ಎಂಥದೇ ತಪ್ಪನ್ನು ಮಾಡಿರಲಿ "ಸಕೃದೇವ ಪ್ರಪನ್ನಾಯ' ನಿಜವಾದ ಪಶ್ಚಾತ್ತಾಪದಿಂದ ನನ್ನಲ್ಲಿ ಶರಣಾಗತಿ ಮಾಡಿದರೆ ನನ್ನನ್ನು ಅವನು ತನ್ನ ಸ್ವಂತಕ್ಕೆ ಹೊಂದುತ್ತಾನೆ. ಅನಂತರ ಅವನ ಗುಣದೋಷಗಳನ್ನು ನಾನು ನೋಡುವುದಿಲ್ಲ. ಅವನು ಎಂತಹ ಪಾಪಿಯೇ ಆಗಿರಲಿ—ಸ್ವತಃ ರಾವಣನೇ ಆಗಲಿ ನನ್ನಲ್ಲಿ ಬಂದು ಶರಣಾಗತನಾದರೆ ನಾನು ಅವನನ್ನು ಕಾಯ್ದು ಮುಕ್ತಿಯನ್ನು ಕೊಡುವೆನು."

ರಾಮನು ವಿಭೀಷಣನಿಗೆ ರಕ್ಷಣೆಯನ್ನು ಕೊಟ್ಟದ್ದು ನ್ಯಾಯವಾಯಿತು ಎಂಬುದು ಅನಂತರ, ವಿಭೀಷಣನ ನಡತೆ ಕಾರ್ಯ, ರಾಮ ಕೈಂಕರ್ಯ ಮುಂತಾದವುಗಳಿಂದ ವ್ಯಕ್ತವಾಯಿತು.

ಭಗವದ್ರಾಮಾನುಜರಿಂದ ಸ್ಥಾಪಿತವಾದ ವಿಶಿಷ್ಟಾದ್ವೈತ ತತ್ವಕ್ಕೆ ಶ್ರೀಮದ್ರಾಮಾಯಣವೇ ಮುಖ್ಯಗ್ರಂಥ. ಆ ತತ್ವ ಪ್ರತಿಪಾದನೆಗಾಗಿ ಅನೇಕ ಗ್ರಂಥಗಳು ರಚಿತವಾಗಿವೆ. ''ಸಕೃದೇವ ಪ್ರಪನ್ನಾಯ'' ಎಂಬುದರಲ್ಲಿ ''ಒಂದು ಸಲ ಶರಣಾಗತ'' ನಾದರೆ ಎಂಬುದಷ್ಟೇ ಅಲ್ಲ, ''ಒಮ್ಮೆ ಪೂರ್ಣವಾಗಿ ಶರಣಾದರೆ'' ಎಂದು ಅರ್ಥ. ಶತ್ರುವಿನ ತಮ್ಮನೇ ಆಗಿ ರಾಕ್ಷಸನೇ ಆದರೂ, ಶರಣಾಗತನಾದರೆ ರಾಮನು ಅವನನ್ನು ಎಂದೆಂದಿಗೂ ರಕ್ಷಿಸುತ್ತಾನೆ ಎಂದು ಅರ್ಥ. ''ವಿಭೀಷಣನು ರಾಜ್ಯದ ಆಸೆಯಿಂದ ರಾಮನ ಪಕ್ಷವನ್ನು ಸೇರಿದನು. ಅವನು ಭ್ರಾತೃದ್ರೋಹಿ. ಕಷ್ಟಕಾಲದಲ್ಲಿ ತನ್ನ ವಂಶಕ್ಕೆ ಅವಮಾನ ಮಾಡಿ ಶತ್ರು ಪಕ್ಷವನ್ನು ಸೇರಿದನು ಎಂಬ ವಾದವೆಲ್ಲ ಶರಣು ಬಂದವರನ್ನು ಕಾಪಾಡುತ್ತೇನೆ'' ಎಂಬ ಭಗವಂತನ ವಾಗ್ದಾನದ ಸಂದರ್ಭದಲ್ಲಿ ಅಪ್ರಕೃತ.

ರಾಮಾನುಜ ಪಂಥದ ವಿಶಿಷ್ಟಾದ್ವೈತ ತುಂಬ ಸರಳವಾದ ನೇರವಾದ ಭಕ್ತಿಮಾರ್ಗ. ಇಲ್ಲಿ ಜಾತಿ ಪಂಥ ಯಾವುದರ ಮೇಲು ಕೀಳು ಇಲ್ಲ. ಪರಮಾತ್ಮನಲ್ಲಿ ಶರಣಾಗತಿಗೆ ಎಲ್ಲರೂ ಅರ್ಹರು. ಭಗವಂತನು ಶ್ರೀ ರಾಮನ ರೂಪದಲ್ಲಿ ಎಲ್ಲರಿಗೂ ಮೋಕ್ಷವನ್ನು ಕರುಣಿಸುತ್ತಾನೆ. ಶ್ರೀ ರಾಮನು ಪುರುಷ ಶ್ರೇಷ್ಠ. ''ಆ ಗುಣಗಳ ಮಹಿಮಾಪುರುಷ ಜಗತ್ತಿನಲ್ಲಿ ದೊರಕುವುದು ತೀರ ಅಪರೂಪ.'' ಎಂದು ನಾರದರು ಹೇಳುತ್ತಾರೆ.

ರಾಮನು ಒಬ್ಬ ಮನುಷ್ಯ ಎಂದು ಭಾವಿಸಿದರೂ ಅವನು ಸಾಹಸ ಸತ್ಯಸಂಧತೆ ಜನಪ್ರಿಯತೆ ಪರಾಕ್ರಮಗಳಿಂದ ಆದರ್ಶ ದೇವತ್ವಕ್ಕೆ ಏರಿದ ಮಹಾಪುರುಷನೆಂದು ಭಾವಿಸಬಹುದು. ಯಾವ ಕಾಲದಲ್ಲಿಯೂ ಯಾವ ಕಾರಣಕ್ಕಾಗಿಯೂ ರಾಮ, ತನ್ನ ಧರ್ಮವನ್ನು ಬಿಡಲಿಲ್ಲ. ರಾಮ ಒಬ್ಬ ಪುರುಷ ಶ್ರೇಷ್ಠ. ''ನಿನಗೆ ಯುವರಾಜ ಪಟ್ಟಾಭಿಷೇಕ'' ವೆಂದರು. ಆಗಲಿ ಎಂದ. ಪಟ್ಟಾಭಿಷೇಕವಿಲ್ಲ, ಹದಿನಾಲ್ಕು ವರುಷ ಅರಣ್ಯವಾಸ ಎಂದರು, ಅವಕ್ಕೂ ರಾಮ ವಿಚಲಿತನಾಗಲಿಲ್ಲ. ರಾಮ ಮಹಾ ಪರಾಕ್ರಮಿ. ಏಕಾಂಗಿಯಾಗಿಯೇ ದಂಡಕಾರಣ್ಯಕ್ಕೆ ಹೊರಟನು. ಆ ಕಾಲದಲ್ಲಿ ಕ್ರೂರ ಮೃಗಗಳಿಂದ ಕಾಡೂ ಅಪಾಯಕರವಾಗಿದ್ದಿತು. ಸೀತೆ ಮತ್ತು ಲಕ್ಷ್ಮಣ ಹೊರಟುದು ಅನಂತರ. ರಾಮ ಸರ್ವ ಜನಮಿತ್ರ. ನಿಜವಾದ ಜನನಾಯಕ ಪ್ರಜಾಪ್ರಭುತ್ವವಾದಿ. ಗುಹನೆಂಬ ಬೇಡ, ಜಟಾಯುವೆಂಬ ಪಕ್ಷಿ, ಸುಗ್ರೀವ ಹನುಮಂತರೆಂಬ ಕಪಿಗಳು, ಶಬರಿ ಎಂಬ ಕೆಳವರ್ಗದ ಹೆಣ್ಣು, ಜಾಂಬವಂತನೆಂಬ ಕರಡಿ, ವಿಭೀಷಣನೆಂಬ ರಾಕ್ಷಸ, ವನ್ಯಮೃಗಗಳ ಸೈನ್ಯ ಇವುಗಳನ್ನೆಲ್ಲ ಸೇರಿಸಿಕೊಂಡು ರಾವಣ ಕುಂಭಕರ್ಣ ಇಂದ್ರಜಿತ್‌ಗಳ ಮಹಾಯುದ್ಧ ರಾಕ್ಷಸ ಸೈನ್ಯವನ್ನೆಲ್ಲ ಧ್ವಂಸ ಮಾಡಿಬಿಟ್ಟನು. ಒಬ್ಬ ಚೋರನು

ತನ್ನ ಹೆಂಡತಿಯನ್ನು ಕದ್ದುಕೊಂಡು ಹೋದುದಕ್ಕೆ ಅವನ ತಲೆಗಳನ್ನು ಕತ್ತರಿಸಿ ಹಾಕಿದನು, ಹೆಂಡತಿಯ ಕಳ್ಳನನ್ನು ಗೌರವಿಸಬೇಕೆಂದು ನಮ್ಮಲ್ಲಿ ಕೆಲವರು ವಾದಿಸುತ್ತಾರೆ! ರಾಮಾಯಣವು ಅತ್ಯಂತ ಶ್ರೇಷ್ಠವಾದ ಕಾವ್ಯ, ಜಗತ್ಪ್ರಸಿದ್ಧ ಆದಿಕಾವ್ಯ. ರಷ್ಯದಲ್ಲಿ ಕಳೆದ ಮೂವತ್ತು ವರ್ಷಗಳಿಂದಲೂ ಇದರ ಬ್ಯಾಲೆ–ನರ್ತನ ಗೀತರೂಪಕ ನಡೆಯುತ್ತದೆ. ಥೈಲ್ಯಾಂಡಿನಲ್ಲಿ ರಾಮಾಯಣ. ಅನಾದಿ ಕಾಲದಿಂದ–ನಮ್ಮ ನಾಡಿನಲ್ಲಿ ಇರುವಂತೆಯೇ ಜನಪ್ರಿಯವೂ ಜೀವನ ಮಾರ್ಗದರ್ಶಕವೂ ಆದ ಗ್ರಂಥವಾಗಿದೆ.

ಈ ಗ್ರಂಥದ ಲೇಖಕಿಯರಾದ ಶ್ರೀಮತಿ ಶ್ರೀದೇವಿ (ವಿದ್ಯಾ ವಿಚಕ್ಷಣಾ ಎಂ. ಎಸ್. ಶಿಂಗಾರಮ್ಮ) ಅವರು ರಾಮಾನುಜೀಯ ಸಿದ್ಧಾಂತವನ್ನು ಚೆನ್ನಾಗಿ ಅರಿತು ಅನುಷ್ಠಾನದಲ್ಲಿ ಇಟ್ಟುಕೊಂಡ ನಿಷ್ಠರು. ಭಕ್ತಿಯ ಮೂಲಕ ಭಗವಂತನಲ್ಲಿ ಪೂರ್ಣ ಶರಣಾಗತಿಯೇ ರಾಮಾನುಜ ಸಿದ್ಧಾಂತ. ಇದು ರಾಮಾನುಜರು ಜಗತ್ತಿಗೆ ಅನುಗ್ರಹಿಸಿದ ಅಪಾರ ಕೊಡುಗೆ. "ಮೋಕ್ಷಕ್ಕೆ ಸರ್ವರಿಗೂ ಹಕ್ಕು ಇದೆ. ಅದು ಸೂರ್ಯ ಚಂದ್ರರು ಬಿಸಿಲು ಗಾಳಿಯಂತೆ. ಮೇಲು ಜಾತಿ ಬಡವ ಬಲ್ಲಿದ ವಿದ್ಯಾವಂತ ಅವಿದ್ಯಾವಂತ ಎಂಬ ವ್ಯತ್ಯಾಸವಿಲ್ಲ." ಎಂಬ ತತ್ವವನ್ನು ಇವರು ತಮ್ಮ ಗ್ರಂಥಗಳ ಮೂಲಕ ಪ್ರಚಾರ ಮಾಡಿದ್ದಾರೆ. ಪ್ರಕೃತಗ್ರಂಥ ರಾಮಾಯಣ ಪ್ರದೀಪ ಉತ್ತಮವಾದ ಗ್ರಂಥ. ಸರಳವಾದ ಭಾಷೆಯಲ್ಲಿ ಎಲ್ಲರಿಗೂ ಅರ್ಥವಾಗುವಂತೆ–ಬಹುಭಾಷಾ ವಿಶಾರದರಾದ ಶ್ರೀದೇವಿಯವರು ಈ ಗ್ರಂಥವನ್ನು ತಮಿಳಿನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಶ್ರೀ ವೈಷ್ಣವ ಸಂಪ್ರದಾಯ ಧರ್ಮದೃಷ್ಟಿಯಿಂದ ಇದು ಒಂದು ಉತ್ತಮ ಗ್ರಂಥ. ದೀರ್ಘಕಾಲ ಅಧ್ಯಯನ ಅಧ್ಯಾಪನಗಳನ್ನು ಮಾಡಿದವರಿಂದ ಮಾತ್ರ ಇದು ಸಾಧ್ಯ. ಒಬ್ಬ ಮಹಿಳಾ ಮಣಿ ಇಂಥ ವೇದಾಂತ ಗ್ರಂಥವನ್ನು ಬರೆದಿರುವುದು ಒಂದು ಅಪೂರ್ವಾನುಭವದಿಂದ. ಇವರು ಇಂಥ ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಗಹನವಾದ ತತ್ವಗಳನ್ನು ನೇರವಾಗಿ ಸರಳವಾದ ಶೈಲಿಯಲ್ಲಿ ಬರೆದಿರುವುದರಿಂದ ಈ ಗ್ರಂಥವು ಸಾಮಾನ್ಯ ಜನರಿಗೆ ವಿಶಿಷ್ಟಾದ್ವೈತ ತತ್ವವನ್ನೂ ರಾಮಾಯಣದ ಸಂದೇಶವನ್ನೂ ತಿಳಿಸಲು ಸಹಾಯಕವಾಗುವುದು.

ಶ್ರೀದೇವಿಯವರ ಈ ಗ್ರಂಥಕ್ಕೆ ಕನ್ನಡ ವಾಚಕರು ಎಲ್ಲಾ ಪ್ರೋತ್ಸಾಹಗಳನ್ನು ನೀಡಲೆಂದು ಹಾರೈಸುತ್ತೇನೆ.

ರಾಜಾಜಿ ನಗರ, ಬೆಂಗಳೂರು — ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್

10–1–86

ನಿವೇದನ

"ಗುರುರೇವ ಪರಮ್ ಬ್ರಹ್ಮ ಗುರುರೇವ ಪರಮ್ ಧನಮ್ ।
ಗುರುರೇವ ಪರಃ ಕಾಮೋ ಗುರುರೇವ ಪರಾಯಣಮ್ ॥

ಗುರುರೇವ ಪರಾವಿದ್ಯಾ ಗುರುರೇವ ಪರಾಗತಿಃ ।
ಯಸ್ಮಾತ್ ತದುಪದೇಷ್ಟಾಸೌ ತಸ್ಮಾತ್ ಗುರುತರೋ ಗುರುಃ
ಉಪಾಯಶ್ಚಾಪ್ಯುಪೇಯಶ್ಚ ಗುರುರೇವೇತಿ ಭಾವಯ ।"

ಗುರುವೇ ಪರಬ್ರಹ್ಮನು ; ಗುರುವೇ ಎಲ್ಲಕ್ಕಿಂತ ಮೇಲಾದ ಐಶ್ವರ್ಯ, ನಮ್ಮ ಆಕಾಂಕ್ಷೆಯ ಎಲ್ಲಾ ವಸ್ತುಗಳಿಗಿಂತ ಶ್ರೇಷ್ಠವಾದದ್ದು. ಗುರುವೇ ನಮ್ಮ ಆಶ್ರಯ ದಾತರು. ಗುರುವೇ ಬ್ರಹ್ಮವಿದ್ಯೆಯ ಸ್ವರೂಪವು. ಅವರೇ ಸರ್ವಶ್ರೇಷ್ಠವಾದ ಗತಿ. ಅವರೇ ಸಂಸಾರ ಸಾಗರವನ್ನು ದಾಟುವುದಕ್ಕೆ ಮಾರ್ಗದಾತರು. ಆದ್ದರಿಂದ ಅವರಿಗಿಂತ ಹಿರಿಯರು ಯಾರು ಇಲ್ಲ. ಉಪಾಯವು ಉಪೇಯವೂ ಅವರೇ ಆಗಿರುತ್ತಾರೆ.

ನಾನು 1968ನೆಯ ಇಸ್ವಿಯಲ್ಲಿ ಒಂದು ಸಂಶೋಧನಾ ಕೃತಿಯನ್ನು ರಚಿಸಲು ಪ್ರಯಾಗ ಸಾಹಿತ್ಯ ಸಮ್ಮೇಳನದಲ್ಲಿ ರಿಜಿಸ್ಟರ್ ಮಾಡಿಸಿದ್ದೆನು. ವಿಷಯ—

"ದಕ್ಷಿಣಭಾರತದಲ್ಲಿ ವೈಷ್ಣವಭಕ್ತಿ" ಪುಸ್ತಕದ ಶೀರ್ಷಿಕೆ "ಭಕ್ತಿ ಸಿದ್ಧಾಂಜನ" ಎಂದು. ಆ ಗ್ರಂಥದಲ್ಲಿ ಕನ್ನಡ ತಮಿಳು ತೆಲುಗು ಮತ್ತು ಸಂಸ್ಕೃತ ಭಾಷೆಗಳಿಂದ ಸಂಶೋಧನೆ ಮಾಡಿ ಆ ಗ್ರಂಥವನ್ನು ಹಿಂದೀ ಭಾಷೆಯಲ್ಲಿ ಬರೆಯಬೇಕಾಗಿದ್ದಿತು.

ತಮಿಳು ಮತ್ತು ಸಂಸ್ಕೃತದಲ್ಲಿರುವ ವೈಷ್ಣವ ಭಕ್ತಿಯ ವಿಚಾರವನ್ನು ಅಧ್ಯಯನ ಮಾಡಲು ತಮಿಳುನಾಡಿಗೆ ಹೋದೆನು. ಮದ್ರಾಸಿನಲ್ಲಿ ನ್ಯಾಯ ವೇದಾಂತ ವಿದ್ವಾಂಸರಾದ ಶ್ರೀ ಉ. ವೇ. ವರದಾಚಾರ್ಯ ಸ್ವಾಮಿಗಳ ಹತ್ತಿರ ಹೋದಾಗ, ಅವರು ತಮ್ಮ ಆಚಾರ್ಯರಾದ ನ್ಯಾಯವೇದಾಂತ ವಿದ್ವಾಂಸರಾದ ಶ್ರೀ ಉ. ವೇ. ಕಾರಪ್ಪಂಕಾಡು ವೆಂಕಟಾಚಾರ್ಯ ಸ್ವಾಮಿಯವರ ಅನುಮತಿಗಾಗಿ ಅವರ ಹತ್ತಿರ ಕಳುಹಿಸಿದರು.

ನಾನು ಅವರ ಹತ್ತಿರ ಹೋದಾಗ ವಿಷಯವನ್ನೆಲ್ಲಾ ಕೇಳಿ ನಾನೇ ನಿನಗೆ ಕೆಲವಾರು ಅಧ್ಯಾಯವನ್ನು ಹೇಳುತ್ತೇನೆ ಎಂದರು.

"ಪರಬ್ರಹ್ಮಭಕ್ತಿ" ಎಂಬ ಅಧ್ಯಾಯದ ಗಹನವಾದ ವಿಷಯಗಳನ್ನು ಸರಳವಾಗಿಯೂ ಸ್ಪಷ್ಟವಾಗಿಯೂ ವಿವರಿಸುತ್ತಿದ್ದರು. ಅವರು ತಮಿಳಿನಲ್ಲಿ ಹೇಳುತ್ತಿದ್ದ ವಿಷಯವನ್ನು ನಾನು ಹಿಂದೀ ಭಾಷೆಯಲ್ಲಿ ರಚಿಸುತ್ತಿದ್ದೆನು.

ಮಹಾ ಮೇಧಾವಿಯೂ, ವಿದ್ವಾಂಸರೂ, ಜ್ಞಾನಿಗಳೂ ಆದ ಶ್ರೀ ಸ್ವಾಮಿಯವರು ಸೌಜನ್ಯ ಸೌಶೀಲ್ಯಾದಿ ಷಾಡ್ಗುಣ್ಯ ಪರಿಪೂರ್ಣರು. ನನಗೆ 4 ವರ್ಷಗಳು ಪಾಠ ಹೇಳಿದರು. ತಾವು ಎಲ್ಲಿ ಉಪನ್ಯಾಸ ಮಾಡಿದರು ಕರೆದುಕೊಂಡು ಹೋಗಿ ವಿಷಯವನ್ನು ತಿಳಿದುಕೊಳ್ಳಲು ನೆರವಾಗುತ್ತಿದ್ದರು. ಕರುಣೆ, ವಾತ್ಸಲ್ಯ, ಸ್ನೇಹದಲ್ಲಿ ಗೌರವ

ಮುಂತಾದ ಸದ್ಗುಣಗಳು ಅವರ ಸ್ವಭಾವವಾಗಿದ್ದಿತು. ಹೀಗೆ ಕಾಲಕ್ಷೇಪ ಹೇಳುತ್ತಿದ್ದಾಗ ತಾವು ಮಾಡಿದ ಉಪನ್ಯಾಸಗಳ ಸಂಗ್ರಹವಾದ "ರಾಮಾಯಣಸಾರ" ಎಂಬ ಕೃತಿಯನ್ನು ಕೊಟ್ಟು ಚೆನ್ನಾಗಿ ಓದಿಕೊಂಡು ಬಾ ಎಂದರು. ಮಾರುದಿನ ಆ ಪುಸ್ತಕವನ್ನು ಕನ್ನಡ ಭಾಷೆಯಲ್ಲಿ ಬರೆದು ಮುದ್ರಿಸಬೇಕೆಂದು ಸೂಚಿಸಿದರು. ನಾನು ಅವರ ಆದೇಶದಂತೆಯೇ ಆ "ರಾಮಾಯಣಸಾರ" ವನ್ನು ಕನ್ನಡಕ್ಕೆ ತರ್ಜುಮೆ ಮಾಡಿದೆನು.

ಆಗ ಅವರಿಗೆ ಬಹಳ ಸಂತೋಷವಾಗಿ ತಮ್ಮ ಪ್ರತಿರೂಪದ ಬ್ಲಾಕನ್ನು ಕೊಟ್ಟು ಆ ಪುಸ್ತಕಕ್ಕೆ ಇದನ್ನೇ ಉಪಯೋಗಿಸು ಎಂದರು. ಅನಂತರ ತಮ್ಮ ಮಗ ರಾಜಗೋಪಾಲ್‌ರವರನ್ನು ಕರೆದು ಇಂಗ್ಲೀಷಿನಲ್ಲಿ ಬರಸಿ ತಾವು ಹಸ್ತಾಕ್ಷರ ಹಾಕಿದರು. ಅವರ ಅಭಿಪ್ರಾಯ ತಮ್ಮ ಸಮಕ್ಷಮವೇ ಆ ಕೃತಿ ಮುದ್ರಣ ಮಾಡಬೇಕೆಂದು ತಿಳಿಸಿದರು. ಆದರೆ ನನ್ನಲ್ಲಿ ಹಣವಿಲ್ಲವಾದ್ದರಿಂದ ಈಗ ಪ್ರಕಟಗೊಂಡಿತು. ಅವರ ಆಶೀರ್ವಾದದಿಂದ ಅನೇಕ ಕೃತಿಗಳು ಬೆಳಕು ಕಂಡಿದ್ದರೂ ಈ ಕೃತಿ ಈಗ ಮುದ್ರಿತವಾಯಿತು.

ಶ್ರೀದೇವಿ

ರಾಮಾಯಣದ ವಿವೇಚನೆ

ವಾಲ್ಮೀಕಿ ಮಹರ್ಷಿಗಳ ಶ್ರೀಮದ್ರಾಮಾಯಣವನ್ನು ಆದಿಕಾವ್ಯವೆಂದು ರಸಲೋಲರಾದ ಮಹಾಕವಿಗಳೂ ಸಹೃದಯರೂ ಮನಮೆಚ್ಚಿ ಆಸ್ವಾದಿಸಿ ಆನಂದಿಸಬಹುದು. ಸಾಮಾಜಿಕ ಮೌಲ್ಯ ಹಾಗೂ ರಾಜನೀತಿಗಳ ಮನಮೋಹಕ ಪ್ರತಿಪಾದನೆಯೆಂದೂ, ಭಾರತೀಯ ಲೌಕಿಕರೂ ಗೌರವಿಸಬಹುದು. ಬಾಲಕರು ಸ್ವಾರಸ್ಯವಾದ ಅದರ ಕಥೆಗೇ ಮಾರು ಹೋಗಿ ನಲಿದಾಡಬಹುದು. ಧರ್ಮಸೂಕ್ಷ್ಮಗಳ ಲಲಿತ ವಿವರಣೆಯೆಂದು ಇತರರು ಸ್ವಾಗತಿಸಬಹುದು. ಸಕಲ ಮಾನವ ಕುಲಕ್ಕೂ ಸದಾ ಪ್ರಸಕ್ತವಾದ ಪರಮಪುರುಷಾರ್ಥ ಅಥವಾ ಕೇವಲ ಆನಂದಮಯವಾದ ಮೋಕ್ಷದ ವಿವೇಚನೆಯೇ ಅದರ ಅಂತರಾರ್ಥ ಮತ್ತು ಪರಮತಾತ್ಪರ್ಯವೆಂದು ವೇದಾಂತಿಗಳು ಸಿದ್ಧಾಂತಿಸಬಹುದು. ಭಾರತೀಯ ಪರಂಪರೆಯಲ್ಲಿ ಇವೆಲ್ಲಕ್ಕೂ ಸ್ಥಾನವಿದೆ. ಪರಂಪರೆಯನ್ನು ಸುಳ್ಳಿನ ಕಂತೆಯೆಂದು ಕಡೆಗಣಿಸಿ, ಪ್ರಕ್ಷಿಪ್ತಭಾಗ–ಮೂಲರಚನೆ, ಕಾಲದೇಶ ಮುಂತಾದ ಶುಷ್ಕ ಚರ್ಚೆಗಳನ್ನು ಅತಿಲಂಬಿಸಿ, ರಾಮಾಯಣ ಒಬ್ಬ ಕವಿಯ ರಚನೆಯೇ ಅಲ್ಲ; ಅಲ್ಲಿ ರಾಮನು ಭಗವಂತನ ಅವತಾರವೇ ಎಂದು ವಾದಿಸಿ ಮುಂದಿನ ಅನಾಮಧೇಯ ಪ್ರಕ್ಷೇಪಕಾರರ ಕುಕೃತ್ಯ ಎಂದು ನಿರ್ಣಯಿಸಿ ಮತಧರ್ಮ ಹೇಗೆ ಒಂದು ಕಾವ್ಯವನ್ನು ಕೆಡಿಸಬಹುದೆಂಬುದಕ್ಕೆ ರಾಮಾಯಣವೇ ನಿದರ್ಶನವೆಂದು ಪಾಶ್ಚಾತ್ಯ ಸಂಶೋಧನೆಯ ಜಾಡನ್ನು ಹಿಡಿದವರು ವಾದಿಸಲೂಬಹುದು.

ಹೀಗೆ ರಾಮಾಯಣವನ್ನು ಕುರಿತು ಭಿನ್ನದೃಷ್ಟಿಗಳಿಂದ ಭಿನ್ನವಿಚಾರಗಳನ್ನು ಪ್ರಕಟಿಸಿರುವ ಗ್ರಂಥಗಳು ಕನ್ನಡದಲ್ಲಿಯೇ ನೂರಾರಿವೆ. ಆದರೆ ಶ್ರೀಮದ್ರಾಮಾನುಜೀಯ ಶ್ರೀವೈಷ್ಣವ ಪರಂಪರೆಯಲ್ಲಿ ಮಾತ್ರ ಶ್ರೀಮದ್ರಾಮಾಯಣಕ್ಕೆ ವೇದಸಮವಾದ ಅತ್ಯುನ್ನತ ಅಗ್ರಸ್ಥಾನವಿರುವುದನ್ನು ಸಾಂಗೋಪಾಂಗವಾಗಿ ಎಳೆಎಳೆಯಾಗಿ ಬಿಡಿಸಿ ವಿವರಿಸಿರುವ ಗ್ರಂಥಗಳು ಬಹಳ ವಿರಳ. ಕಥೆಗಾಗಿ ಭಾಷಾಂತರಗಳು, ಕಾವ್ಯ ವಿಮರ್ಶೆಗಾಗಿ ಪ್ರಬಂಧಗಳು, ರಸಸ್ಥಾನಗಳ ಪ್ರದರ್ಶನಕ್ಕಾಗಿ ಹರಿಕಥಾದಿಗಳು, ನಾಟಕಾದಿಗಳು–ಇಲ್ಲವೆ ರಾಮಾಯಣದಿಂದ ಪ್ರಭಾವ ಪಡೆದು ನೂತನ ಸ್ಫೂರ್ತಿಯಿಂದ ಬಂದ ಪ್ರತಿಭಾಪೂರ್ಣ ನವಕಾವ್ಯಗಳು, ಇವೆಲ್ಲ ಹೇರಳವಾಗಿವೆಯೇ ವಿನಾ ತಮಿಳು ಪಾಶುರಗಳಲ್ಲಿ ಮಹಾಮಹಿಮರಾದ ಆಳ್ವಾರುಗಳೂ, ಅವರನ್ನನುಸರಿಸಿ ಸಂಸ್ಕೃತಾದಿ ಇತರ ಭಾಷೆಗಳಲ್ಲಿ ರಾಮಾನುಜೀಯರೂ ಬರೆದಿರುವ ರಾಮಾಯಣದ ಸಾರ ಅಥವಾ ತಿರುಳನ್ನು ತಿಳಿಸಿಕೊಡುವ ಗ್ರಂಥಗಳು ಇಲ್ಲ. ಈ ಕೊರತೆಯನ್ನು ಪ್ರಕೃತ ವಿದುಷಿಯರು ತಮ್ಮ ಈ ವಿವೇಚನಾ ಗ್ರಂಥದ ಪ್ರಕಟನೆಯಿಂದ ಬಹುಮಟ್ಟಿಗೆ ನಿವಾರಿಸಿ ಕನ್ನಡ ಜನತೆಗೆ ಉಪಕಾರ ಮಾಡಿದ್ದಾರೆ.

ಕಥೆಯ ವ್ಯಾಜದಿಂದ ಧರ್ಮಸ್ವರೂಪವನ್ನೂ, ಭಗವಂತನ ಕೃಪೆಯ ಲಾಭದಿಂದ ಅವನನ್ನು ಸೇರಲು ಜೀವನಿಗೆ ಅಥವಾ ಭಕ್ತನಿಗೆ ಅತ್ಯಗತ್ಯವಾಗಿರುವ 'ಶರಣಾಗತಿ' ಅಥವಾ 'ಪ್ರಪತ್ತಿ'ಯ ಬಹುಮುಖ ಸ್ವರೂಪವನ್ನೂ ಇಲ್ಲಿ ಸಾಧಾರಣವಾಗಿಯೂ ಸೋದಾಹರಣವಾಗಿಯೂ ಉತ್ತಮವಾಗಿ ವಿವೇಚಿಸಲಾಗಿದೆ. 'ಪರಮಾತ್ಮ'ನೇ ಗಂತವ್ಯಲಕ್ಷ್ಯ, ಅವನನ್ನು ಮುಟ್ಟಬೇಕಾಗಿರುವವನೇ 'ಜೀವ', ಅದರಿಂದ ಸಿದ್ಧವಾಗುವ ಪರಮ ಪದವೇ ಫಲ: ಮೋಕ್ಷ, ಫಲಸಿದ್ಧಿಗೆ ಅಡ್ಡವಾಗಿ ಬರುವ ಅಡ್ಡಿಗಳೇ 'ವಿರೋಧಿ'ಗಳು. ಅವನ್ನು ದಾಟಿಸಿ ಫಲಕ್ಕೆ ಸಾಧಕವಾಗತಕ್ಕವೇ 'ಉಪಾಯ'ಗಳು ಉಭಯವೇದಾಂತದ ಈ ಪಂಚಪ್ರಕ್ರಿಯೆಯನ್ನು ಅಮೂಲಾಗ್ರವಾಗಿ ಶ್ರೀ ರಾಮಾ-ಯಣದ ಅಂತರಾರ್ಥ ವಿವೇಚನೆಯ ದ್ವಾರಾ ಲೇಖಕರು ವ್ಯಾಖ್ಯಾನಿಸಿದ್ದಾರೆ. ಅಲ್ಲಲ್ಲಿ ತಮ್ಮ ವಿವರಣೆಗಳಿಗೆ ಆಧಾರವಾಗಿರುವ ದ್ರಾವಿಡ ಪ್ರಬಂಧಗಳ, ವೇದಉಪನಿಷತ್ತುಗಳ, ಧರ್ಮಶಾಸ್ತ್ರಗಳ ಪ್ರಮಾಣವಚನಗಳನ್ನೂ ಉಲ್ಲೇಖಿಸಿದ್ದಾರೆ; ಆಳವಾಗಿ ವಿಶ್ಲೇಷಿಸಿದ್ದಾರೆ.

ಗ್ರಂಥದ ಶೈಲಿ ಪಾರಿಭಾಷಿಕವಾಗಿ, ಒಮ್ಮೊಮ್ಮೆ ಕನ್ನಡದ ಜಾಯಮಾನಕ್ಕೆ ಒಗ್ಗದ ವಾಕ್ಯರಚನೆಯಿಂದಾಗಿ ಗಡು-ಚೆನಿಸಿದರೂ, ಒಮ್ಮೊಮ್ಮೆ ಆಡುಮಾತಿನ ಸರಸ ಶಾಸ್ತ್ರಗ್ರಂಥದ ಗಾಂಭೀರ್ಯಕ್ಕೆ ಅನುಚಿತವೆನಿಸಿದರೂ, ಒಟ್ಟಿನ ಮೇಲೆ ಶ್ರದ್ಧೆಯಿಂದ ಓದುವವರಿಗೆ ಬಹುದಿಕ್ಕಿನಿಂದ ಶ್ರೀವೈಷ್ಣವ ಪರಂಪರೆಯ ಒಳನೋಟವನ್ನು ಒದಗಿಸುವ ಈ ಕನ್ನಡಾನುವಾದ ಕೃತಿ ಬಹಳ ಉಪಾದೇಯವೆನಿಸುವುದರಲ್ಲಿ ಸಂಶಯವಿಲ್ಲ. ಪ್ರಸಿದ್ಧ ಸಾಹಿತಿಗಳಾದ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಹಾಗೂ ಶ್ರೀ ಯದು-ಗಿರಿ ಯತಿರಾಜ ನಾರಾಯಣಜೀಯರ್ ಅವರ ಶುಭಾಶಂಸನೆಗಳನ್ನು ಪಡೆದು ಬಂದಿರುವ ಈ ಕೃತಿ ಆಸ್ತಿಕವೃಂದದಲ್ಲಿ ಮನ್ನಣೆ ಪಡೆಯಲೆಂದು ಹಾರೈಸುತ್ತೇನೆ.

ಡಾ॥ ಕೆ. ಕೃಷ್ಣಮೂರ್ತಿ

ಮಾನಸ ಗಂಗೋತ್ರಿ ವಾರ್ತಾ ಪತ್ರಿಕೆ

ಶ್ರೀ ರಾಮಾಯಣ ಪ್ರದೀಪ—ಅನು : ಶ್ರೀದೇವಿ

ಮದ್ರಾಸಿನ ಕಾರಪ್ಪನ್‌ಕಾಡು ವೆಂಕಟಾಚಾರ್ಯಸ್ವಾಮಿ ಅವರು ತಮಿಳು ಭಾಷೆಯಲ್ಲಿ 'ರಾಮಾಯಣ ಸಾರ' ಎಂಬ ಗ್ರಂಥವನ್ನು ಬರೆದಿದ್ದು, ಅದರ ಕನ್ನಡಾನುವಾದವನ್ನು 'ಶ್ರೀ ರಾಮಾಯಣ ಪ್ರದೀಪ' ಎಂಬ ಹೆಸರಿನಲ್ಲಿ ಶ್ರೀದೇವಿಯವರು ಕನ್ನಡಿಗರ ಮುಂದೆ ಇಟ್ಟಿದ್ದಾರೆ. 13 ಅಧ್ಯಾಯಗಳಿರುವ ಈ ಗ್ರಂಥದಲ್ಲಿ 'ರಾಮಾಯಣವೂ ಶರಣಾಗತಿಯೂ' ಎಂಬ ಹನ್ನೆರಡನೆಯ ಅಧ್ಯಾಯವು ಅತ್ಯಂತ ವಿಸ್ತಾರವಾಗಿದೆ. ವಿಶಿಷ್ಟಾದ್ವೈತ ಸಿದ್ಧಾಂತವು ಭಕ್ತಿಯ ಮೂಲಕ ಭಗವಂತನಲ್ಲಿ ಪೂರ್ಣ ಶರಣಾಗತಿಯನ್ನು ವಿಶೇಷವಾಗಿ ಪ್ರತಿಪಾದಿಸುತ್ತದೆ. ಆ ಹಿನ್ನೆಲೆಯಲ್ಲಿ ರಾಮಾಯಣವು ಹೇಗೆ ಹೆಜ್ಜೆಹೆಜ್ಜೆಗೂ ಸರ್ವಸಮರ್ಪಣಾಭಾವದ ಪೂರ್ಣ ಶರಣಾಗತಿಯ ತತ್ತ್ವವನ್ನು ಒಳಗೊಂಡಿದೆ ಎಂಬುದನ್ನು ಇಲ್ಲಿ ಲೇಖಕರು ಮನಮುಟ್ಟುವಂತೆ ವಿವೇಚಿಸಿದ್ದಾರೆ.

ರಾಮಾಯಣದ ಮಹಿಮೆ, ಅದರ ಅಂತರಾರ್ಥ, ಅದರಲ್ಲಿ ಅಡಕವಾಗಿರುವ ವೇದಾಂತ, ರಾಮನ ಪಾತ್ರದ ವೈಶಿಷ್ಟ್ಯ—ಈ ಮೊದಲಾದ ಸಂಗತಿಗಳು ಈ ಕೃತಿಯಲ್ಲಿ ಬಹು ಮನೋಜ್ಞವಾಗಿ ನಿರೂಪಿತವಾಗಿವೆ. ಇಂತಹ ಸದ್ಗ್ರಂಥವೊಂದನ್ನು ಶ್ರೀದೇವಿಯವರು ಕನ್ನಡಕ್ಕೆ ಕೊಡುವುದರ ಮೂಲಕ ದೊಡ್ಡ ಉಪಕಾರ ಮಾಡಿದ್ದಾರೆ. ಅನುವಾದವು ಸ್ಪಷ್ಟವೂ ಸರಳವೂ ಆಗಿದ್ದು ಸಹೃದಯರಿಗೆ ಹಿತವನ್ನುಂಟು ಮಾಡುತ್ತದೆ.

ಚೆನ್ನುಡಿ

ಶ್ರೀ ನ್ಯಾಯವೇದಾಂತ ವಿದ್ವಾನ್ ಕಾರಪ್ಪನ್‌ಕಾಡು ವೆಂಕಟಾಚಾರ್ಯಸ್ವಾಮಿಯವರು ವಿದ್ವಾಂಸರು, ಬಹುಮೇಧಾವಿ ವಿಷಯವನ್ನು ಪ್ರತಿಪಾದಿಸುವಾಗ ಒಂದು ಅಕ್ಷರ ಹೆಚ್ಚಾಗಬಾರದು ಮತ್ತು ಒಂದು ಅಕ್ಷರ ಕಡಿಮೆಯಾಗಬಾರದೆಂಬ ನಿಯಮ ಅವರದ್ದು. ಉಪನ್ಯಾಸ ಮಾಡುವಾಗಲೂ ಸುಂದರವಾದ ಸರಳ ಭಾಷೆಯಲ್ಲಿ ಕೇಳುವವರಿಗೆ ಮನದಟ್ಟಾಗುವಂತೆ ವಿಷಯವನ್ನು ವರ್ಣಿಸುತ್ತಿದ್ದರು.

ಅವರು ರಚಿಸಿದ್ದ ತಮಿಳು "ರಾಮಾಯಣ ಸಾರ" ಎಂಬ ಕೃತಿಯನ್ನು ನಾನು ಕನ್ನಡಕ್ಕೆ ತರ್ಜುಮೆ ಮಾಡಿದೆನು. ಕೆಲವೇ ದಿನಗಳಲ್ಲಿ ಕನ್ನಡಿಗರಿಗೆ 'ಶ್ರೀ ರಾಮಾಯಣ ಪ್ರದೀಪ' ಪರಮಪ್ರಿಯವಾಗಿ ಎಲ್ಲರೂ ಆಸಕ್ತಿಯಿಂದ ಖರೀದಿಸಿದರು.

ಧಾರವಾಡದ ಡಾ|| ಶ್ರೀ ಕೆ. ಕೃಷ್ಣಮೂರ್ತಿಯವರು ಸಂಸ್ಕೃತದಲ್ಲಿ ಪ್ರಕಾಂಡ ಪಂಡಿತರು. ಅವರು 1986 ರಲ್ಲೇ ಈ ಕೃತಿಯನ್ನು "ರಾಮಾಯಣದ ವಿವೇಚನೆ" ಎಂದು ವಿಮರ್ಶೆ ಮಾಡಿದ್ದಾರೆ.

ಅವರ ವಿಮರ್ಶಾ ಲೇಖನ T.T.D. ಮಾಸ ಪತ್ರಿಕೆ ಸಪ್ತಗಿರಿಯಲ್ಲಿ ಮುದ್ರಿತವಾಗಿತ್ತು. ಅದನ್ನೇ ದ್ವಿತೀಯ ಮುದ್ರಣದ ಮುನ್ನುಡಿಯಾಗಿ ಮುದ್ರಿಸಿರುತ್ತೇನೆ.

ಮಾನಸ ಗಂಗೋತ್ರಿ, ಮೈಸೂರಿನ ವಾರ್ತಾ ಪತ್ರಿಕೆಯಲ್ಲಿಯೂ "ಶ್ರೀ ರಾಮಾಯಣ ಪ್ರದೀಪ" ದ ವಿಚಾರ ಮುದ್ರಿತವಾಗಿತ್ತು, ಅದನ್ನೂ ಈ ದ್ವಿತೀಯ ಮುದ್ರಣದಲ್ಲಿ ಮುದ್ರಿಸಿರುತ್ತೇನೆ.

ಈ ಕೃತಿಯು ತಮಿಳಿನಲ್ಲೇ ಇದ್ದಿದ್ದರೆ ಕನ್ನಡಿಗರಿಗೆ ಇಷ್ಟು ಆಕರ್ಷಣೀಯವಾಗಿರುತ್ತಿರಲಿಲ್ಲ ಆದ್ದರಿಂದಲೇ ನಮ್ಮ ಆಚಾರ್ಯರು ಕನ್ನಡದಲ್ಲಿ ಅನುವಾದ ಮಾಡಿ ಪ್ರಕಟಿಸಬೇಕೆಂದರು.

ಪ್ರಥಮ ಮುದ್ರಣದ ಹಾಗೆಯೇ ಕನ್ನಡಿಗರು ದ್ವಿತೀಯ ಮುದ್ರಣದ ಪ್ರತಿಗಳಿಗೂ ಹೆಚ್ಚಿನ ಪ್ರೋತ್ಸಾಹ ನೀಡಬೇಕೆಂದು ಕೋರುತ್ತೇನೆ.

ಶ್ರೀದೇವಿ

ವಿಷಯ ಸೂಚಿ

ರಾಮಾಯಣದ ವಿವೇಚನೆ–ಡಾ|| ಕೆ. ಕೃಷ್ಣಮೂರ್ತಿ

ರಾಮಾಯಣದ ವಿಮರ್ಶೆ–ವಾರ್ತಾ ಸಂಚಿಕೆ ಮಾನಸಗಂಗೋತ್ರಿ

ಮುನ್ನುಡಿ–ಶ್ರೀದೇವಿ

ಆಶೀರ್ವಚನ–ಶ್ರೀಯದುಗಿರಿ ಯತಿರಾಜ ಜೀಯರ್

ಎರಡು ಮಾತು–ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್

ನಿವೇದನೆ–ಶ್ರೀದೇವಿ

ಅವತಾರಿಕೆ	—	೧
ಶ್ರೀರಾಮಾಯಣದ ಮಹಿಮೆ	—	೨
ಶ್ರೀರಾಮಾಯಣದ ಸಾರಾರ್ಥ	—	೩
ವೇದಾಂತವೂ ಪರಮಾತ್ಮನೂ	—	೫
ರಾಮಾಯಣವೂ ಪರಮಾತ್ಮನೂ	—	೬
ವೇದಾಂತವೂ ಮತ್ತು ಜೀವನೂ	—	೧೦
ರಾಮಾಯಣವೂ ಮತ್ತು ಜೀವಾತ್ಮನೂ.	—	೧೩
ವೇದಾಂತವೂ ಉಪೇಯವೂ	—	೧೯
ರಾಮಾಯಣವೂ ಉಪೇಯವೂ	—	೨೩
ವೇದಾಂತವೂ ವಿರೋಧಿಯೂ	—	೨೯
ರಾಮಾಯಣವೂ ವಿರೋಧಿಯೂ	—	೩೪
ವೇದಾಂತವೂ ಉಪಾಯವೂ	—	೪೦
ರಾಮಾಯಣವೂ ಶರಣಾಗತಿಯೂ	—	೫೧
ಭಕ್ತಾಮೃತ	—	೬೩

ಶ್ರೀ ರಾಮಾಯಣ ಪ್ರದೀಪ

ಅವತಾರಿಕೆ

ಪರಮ ಪುರುಷನಾದ ಶ್ರೀಮನ್ನಾರಾಯಣನು ತನಗೇ ಸೀಮಿತವಾದ ಪರಮಪದದಲ್ಲಿ ಶ್ರೀ, ಭೂ ಮತ್ತು ನೀಳಾದೇವಿಯರೊಡಗೂಡಿ, ನಿತ್ಯರಿಂದಲೂ, ಮುಕ್ತರಿಂದಲೂ ಸೇವೆಯನ್ನು ಸ್ವೀಕರಿಸುತ್ತಾನೆ. ಈ ರೀತಿ ಆನಂದಸಾಗರದಲ್ಲಿ ತನ್ಮಯನಾಗಿದ್ದರೂ ಸಹಾ ಆ ಪರಮ ಪುರುಷನು ಈ ಭೂಲೋಕದವರೂ ಸಹ ಆ ಪರಮಪದದಲ್ಲಿರುವ ನಿತ್ಯಸೂರಿಗಳ ಹಾಗೆ ತನ್ನನ್ನು ಅನುಭವಿಸಿ ಆನಂದ ಸಾಮ್ರಾಜ್ಯವನ್ನು ಪಡೆಯಬೇಕಾದವರು ಹಾಗಿಲ್ಲದೆ ಮಾಯಾಶಬ್ದವಸ್ತುವಾದ ಮೂಲ ಪ್ರಕೃತಿಯಲ್ಲಿ ಮಗ್ನರಾಗಿದ್ದು ತಿಳುವಳಿಕೆ ಇದ್ದೂ ಅಜ್ಞಾನವಾದ ಅಚೇತನ ವಸ್ತುಗಳೊಡನೆ ಸಂಬಂಧ ಹೊಂದಿರುವುದನ್ನು ಕಂಡು ಕರುಣೆ ಹೊಂದಿದನು. ಈ ರೀತಿ ದಯಾಮಯನಾದ ಭಗವಂತನು ಈ ಲೋಕದ ಪಾಮರರನ್ನು ಉದ್ಧಾರಮಾಡುವ ಸಲುವಾಗಿ ತನ್ನನ್ನು ಅರ್ಚಿಸಿ ಕೃತಾರ್ಥರಾಗುವಂತೆ ಕಣ್ಣು, ಕಿವಿ, ಕೈ-ಕಾಲುಗಳೇ ಮೊದಲಾದ ಅಂಗಗಳಿಂದ ಕೂಡಿದ ದೇಹವನ್ನು ಕೊಟ್ಟು ಅನುಗ್ರಹಿಸಿದನು. ವಿವೇಕವನ್ನುಂಟುಮಾಡುವ ಜ್ಞಾನ, ಕಲೆ, ಶಾಸ್ತ್ರಗಳನ್ನು ತನ್ನ ಸ್ವಭಾವಾನುಗುಣವಾಗಿ ಕೃಪೆಯಿಂದ ಅನುಗ್ರಹಿಸಿದನು.

ಈ ರೀತಿ ದೈವ ಪ್ರೇರಣೆಯನ್ನು ಹೊಂದಿದ್ದರೂ ಸಹಾ ಈ ಚೇತನನು ಶಾಸ್ತ್ರಗಳು ತೋರಿಸಿದ ಮಾರ್ಗದಲ್ಲಿ ಹೋಗದೆ ವಿಷಯಾದಿ ಸುಖದಿಂದ ಆಕರ್ಷಿತನಾಗಿ ಈ ಭವವೆಂಬ ಸಾಗರದಲ್ಲಿ ಮುಳುಗುತ್ತಿರುವವನಿಗೆ ಜೀವವನ್ನುಳಿಸಿಕೊಳ್ಳಲು ಕೊಟ್ಟ ದೋಣಿ ಮರದ ಸಹಾಯದಿಂದ ದಡಕ್ಕೆ ಸೇರಿ ಜೀವವನ್ನುಳಿಸಿಕೊಳ್ಳುವ ಬದಲು ಮತ್ತೂ ಸಾಗರದೊಳಗೇ ಹೋಗುವವರ ಹಾಗೆ ವಿಷಯಾದಿ ಐಹಿಕ ಸುಖಗಳಲ್ಲಿ ಅನೇಕ ಜನ್ಮಗಳನ್ನು ಪಡೆಯುತ್ತಾನೆ.

ಇದನ್ನು ಕಂಡು ಪರಮ ಪುರುಷನು, ತನ್ನ ಆಜ್ಞೆಯನ್ನು ನೆರವೇರಿಸದೇ ಇರುವ ಈ ಜಗತ್ತಿನಲ್ಲಿ ತಾನೇ ಸಂಚರಿಸಿ, ಪ್ರಜೆಗಳನ್ನು ತನ್ನ ಆಳ್ವಿಕೆಗೆ ಒಳಪಡಿಸಿ ಆಳುವ ಅರಸನ ಹಾಗೆ ಈ ಜಗತ್ತಿನಲ್ಲಿ ಅನೇಕ ಅವತಾರಗಳನ್ನು ಮಾಡಿ, ಮಾನವರನ್ನು ಅನುಗ್ರಹಿಸಿದನು. ಈ ಅವತಾರಗಳಲ್ಲಿ ಒಂದಾದ ಶ್ರೀರಾಮಾವತಾರವು ಸರ್ವಶ್ರೇಷ್ಠವಾದುದು.

ಶ್ರೀ ರಾಮಚಂದ್ರನು ತನ್ನ ಉಪದೇಶವಾಕ್ಯಗಳಿಂದಲೂ, ವ್ಯವಹಾರಗಳಿಂದಲೂ ಈ ಲೋಕದ ಜನರಿಗೆ ತಿಳಿಸಿದ ನೀತಿಗಳು ಅನೇಕ. ಅವು ಮುಂದಿನ ಜನಾಂಗದವರಿಗೆ ಸಹಾಯವಾಗಬೇಕೆಂಬ ಉದ್ದೇಶದಿಂದ ಚತುರ್ಮುಖ ಬ್ರಹ್ಮನು ನೂರುಕೋಟಿ ಪ್ರಮಾಣವುಳ್ಳ ಶ್ರೀರಾಮಚಂದ್ರನ ಚರಿತ್ರೆಯನ್ನು ರಚಿಸಿ ನಾರದಾದಿ ದೇವ ಋಷಿಗಳಿಗೆ ಉಪದೇಶ ಮಾಡಿದನು.

ಶ್ರೀ ರಾಮನಾಮವನ್ನೇ ಜಪಿಸುತ್ತಾ ಕಾಲವನ್ನು ಕಳೆಯುತ್ತಿದ್ದ ವಾಲ್ಮೀಕಿ ಮುನಿಯ ಹತ್ತಿರಕ್ಕೆ ನಾರದ ಋಷಿಯನ್ನು ಬ್ರಹ್ಮದೇವನು ಕಳುಹಿಸಿಕೊಟ್ಟನು. ಆಗ ಅವನು ವಾಲ್ಮೀಕಿ ಮುನಿಗೆ ಶ್ರೀ ರಾಮಚರಿತ್ರೆಯನ್ನು ರಚಿಸಲು ಆಜ್ಞೆ ಮಾಡಿದನು. ವಾಲ್ಮೀಕಿ ಮುನಿಯು ಶ್ರೀ ರಾಮಾಯಣವನ್ನು ರಚಿಸಿದನು.

ಶ್ರೀ ರಾಮಾಯಣದ ಮಹಿಮೆ

ಶ್ರೀ ಪಿಳ್ಳೈಲೋಕಾಚಾರ್ಯರು ಶ್ರೀ ರಾಮಾಯಣವನ್ನು ಇತಿಹಾಸ ಶ್ರೇಷ್ಠ ಎಂದು ಕೊಂಡಾಡಿರುತ್ತಾರೆ. ಆದರೆ, ನಾರಾಯಣರೆಂದೇ ಪ್ರಸಿದ್ಧಿ ಪಡೆದಿರುವವರು ವ್ಯಾಸರು. ಶ್ರೀ ರಾಮನಲ್ಲಿ ಅತ್ಯಧಿಕ ಭಕ್ತಿಯುಳ್ಳವರು ವಾಲ್ಮೀಕಿ ಮುನಿ. ವ್ಯಾಸರಿಂದ ರಚಿತವಾದುದು ಭಾರತ. ವಾಲ್ಮೀಕಿಯಿಂದ ರಚಿತವಾದುದು ಶ್ರೀ ರಾಮಚಂದ್ರನ ಚರಿತ್ರೆ. ಭಾರತವೆನ್ನುವ ಇತಿಹಾಸವನ್ನು ಪ್ರಶಂಸಿಸದೇ ಶ್ರೀ ರಾಮಚಂದ್ರನ ಚರಿತ್ರೆಯನ್ನು ಇತಿಹಾಸ ಶ್ರೇಷ್ಠ ಎಂದು ಹೇಳಲು ಕಾರಣವೇನೆಂದರೆ :—

"ನಾರಾಯಣ ಕಥಾಮಿಮಾಂ"—ಎಂದು ಪ್ರಾರಂಭಿಸಿ ವ್ಯಾಸರು ನಾರಾಯಣನ ಪರಿಪೂರ್ಣಾವತಾರವಾಗಿ ಕೊಂಡಾಡುವ ಶ್ರೀ ಕೃಷ್ಣ ಪರಮಾತ್ಮನ ಚರಿತ್ರೆಯನ್ನು, ಮಹಾಭಾರತದಲ್ಲಿ ಒಂದು ರೀತಿಯಾಗಿ ತಿಳಿಸಿರುವುದು ಸತ್ಯವೇ ಆದರೂ, ಯಥಾ "ಧರ್ಮಾ ದಯಶ್ಚಾರ್ಥಾಃ ಮುನಿವರ್ಯಾನು ಕೀರ್ತಿತಾಃ ನತಥಾ ವಾಸುದೇವಸ್ಯ ಮಹಿಮಾಹ್ಯನು ವರ್ಣಿತಃ" ॥ ಎಂದು ನಾರದರು ವ್ಯಾಸರನ್ನು ಕುರಿತು ಹೇಳಿರುವ ಹಾಗೆ ವ್ಯಾಸರು ತಮ್ಮಿಂದ ರಚಿತವಾದ ಭಾರತದಲ್ಲಿ ಪ್ರಾಪಂಚಿಕ ವಿಷಯ ಸುಖಗಳು, ಅವುಗಳ ಸಾಧನಗಳನ್ನು ಹೇಳಿರುವ ಹಾಗೆ ಶ್ರೀ ಕೃಷ್ಣಪರಮಾತ್ಮನ ಮಹಿಮೆಯನ್ನು ಹೇಳಿಲ್ಲ ಮತ್ತು "ಯುದ್ಧ ಕೋಲಾಹಲಃ ಕೃತಿಃ"—ಎಂದು ಪ್ರಸಿದ್ಧಿ ಪಡೆಯುವ ಹಾಗೆ, ಯುದ್ಧ ಚರಿತ್ರೆಯನ್ನೇ ಅತ್ಯಧಿಕವಾಗಿ ಪ್ರಕಟಪಡಿಸಿರುತ್ತಾರೆ. ಚತುರ್ಮುಖ ಬ್ರಹ್ಮನ ಮಾನಸಪುತ್ರರಾದ ನಾರದ ಮಹರ್ಷಿಯು ಶ್ರೀಕೃಷ್ಣ ಚರಿತ್ರೆಯನ್ನು ವ್ಯಾಸರಿಗೆ ಉಪದೇಶಿಸಿದ್ದಾಗಿ ತಿಳಿದು ಬಂದಿದೆ. ಮಹಾಭಾರತವನ್ನು ರಚಿಸಿಯೂ ಮನಃಕ್ಲೇಶಗೊಂಡಿದ್ದ ವ್ಯಾಸರಿಗೆ ಶ್ರೀಮದ್ಭಾಗವತದ ರಚನೆಯಿಂದ ಮನಃಕ್ಲೇಶವು ದೂರ ಸರಿದುದಾಗಿ ಅವರ ಮಾತಿನ ಆಧಾರದಿಂದಲೇ ತಿಳಿಯಬಹುದು.

"ಅಸತ್ಕೀರ್ತನ ಕಾಂತಾರ ಪರಿವರ್ತನ ಪಾಂಸುಲಾಮ್ ।
ವಾಚಂ ಶೌರಿಕಥಾಲಾಪ ಗಂಗಯೈವ ಪುನೀಮಹೇ" ॥

ನಾರದ ಮಹರ್ಷಿಯ ತಂದೆಯಾದ ಚತುರ್ಮುಖ ಬ್ರಹ್ಮನಿಂದಲೇ ಪೂಜೆಯನ್ನು ಮಾಡಿಸಿಕೊಳ್ಳುವ ಹಿರಿಮೆ ವಾಲ್ಮೀಕಿ ಮುನಿವರ್ಯರಿಗೆ ಇದ್ದಿತು. ಚತುರ್ಮುಖ ಬ್ರಹ್ಮನು ವಾಲ್ಮೀಕಿಯ ಆಶ್ರಮಕ್ಕೆ ಬಂದು ಆ ಮುನಿಯಿಂದ ಈ ಲೋಕವು ಉದ್ಧಾರವಾಗಲೆಂದು ಅಪೇಕ್ಷಿಸಿದರು ; ಆ ಮುನಿವರ್ಯನನ್ನು ಪೂಜಿಸಲು ಅಪೇಕ್ಷಿಸಿ, ತಮ್ಮ

ಮುಂದೆ ಇರುವ ಒಂದು ಆಸನವನ್ನು ತೋರಿಸಿ ಅದರಲ್ಲಿ ಕುಳಿತುಕೊಳ್ಳುವಂತೆ ಹೇಳಿದರು. ವಾಲ್ಮೀಕಿಯೂ ಸಹ ಅದೇ ರೀತಿ ಮಾಡಿದರು ಎಂದು ವಾಲ್ಮೀಕಿಯ ಹಿರಿಮೆಯನ್ನು ಹೇಳುವ ಚರಿತ್ರೆಯನ್ನು ಇಲ್ಲಿ ಕಾಣಬಹುದು.

" ವಾಲ್ಮೀಕಯೇ ಮಹರ್ಷಯೇ ಸಂದಿದೇಶಾಸನಂ ತತಃ ।
ಬ್ರಹ್ಮಣಾ ಸಮನುಜ್ಞಾತಃ ಸೋಽಪ್ಯುಪಾವಿಶದಾಸನೇ ॥ "

ಎನ್ನುವ ವಾಲ್ಮೀಕಿಯ ಮಾತುಗಳನ್ನು ಇಲ್ಲಿ ನೋಡಬಹುದು.

ಅನಂತರ, ವೇದದಿಂದಲೇ ತಿಳಿದು ಬರುವ ಪರಮ ಪುರುಷನು ದಶರಥನ ಕುಮಾರನಾಗಿ ಅವತರಿಸಿದಾಗ, ಹಾಗೆಯೇ, ಆ ವೇದವೂ ಆ ಪರಮಾತ್ಮನ ಕಲ್ಯಾಣ ಗುಣಗಳನ್ನು ಆಶ್ಚರ್ಯಕರವಾದ ಕಾರ್ಯಗಳನ್ನು ತಿಳಿಸಲು ಶ್ರೀ ವಾಲ್ಮೀಕಿ ಮುನಿಯ ಮೂಲಕ ರಾಮಾಯಣವಾಗಿ ಶ್ರೀ ರಾಮಚರಿತ್ರೆಯಾಗಿ ಅವತರಿಸಿತು ಎಂಬ ಅರ್ಥವುಳ್ಳ :—

" ವೇದ ವೇದ್ಯೇ ಪರೇ ಪುಂಸಿ ಜಾತೇ ದಶರಥಾತ್ಮಜೇ ।
ವೇದಃ ಪ್ರಾಚೇತಸಾದಾಸೀತ್ ಸಾಕ್ಷಾದ್ರಾಮಾಯಣಾತ್ಮನಾ ॥ "

ಎನ್ನುವ ಸ್ಕಾಂದ ವಚನವನ್ನು ನೋಡಿದರೆ, ಆದರ ಮಹಿಮೆಯು ಚೆನ್ನಾಗಿ ತಿಳಿಯುತ್ತದೆ.

ಹಾಗೂ, ಕೂರೇಶರ ಕುಮಾರರಾದ ಪರಾಶರ ಭಟ್ಟರು, ತಮ್ಮ ಸಹಸ್ರನಾಮ ಭಾಷ್ಯದಲ್ಲಿ " ಶ್ರೀಮದ್ರಾಮಾಯಣಮಹಾಭಾರತಂ ಶರಣಮ್ " ಎಂದು ವಿವರಿಸಿದ್ದಾರೆ. ಈ ವಾಕ್ಯದಲ್ಲಿ ಭಾರತದ ಹಿರಿಮೆಯನ್ನು ಹೇಳುವಾಗ ರಾಮಾಯಣದ ಹಿರಿಮೆಯನ್ನು ಉದಾಹರಣೆಯನ್ನಾಗಿ ತೋರಿಸಿರುವುದನ್ನು ಕಾಣಬಹುದಾದರೂ ಹಿರಿಮೆಯಲ್ಲಿ ರಾಮಾಯಣಕ್ಕೆ ಮೊದಲಿನ ಸ್ಥಾನವೆಂಬುದು ಸ್ಪಷ್ಟವಾಗಿರುತ್ತದೆ.

ಶ್ರೀ ರಾಮಾಯಣದ ಸಾರಾರ್ಥ

ಈ ರೀತಿ ಶ್ರೇಷ್ಠತೆಯನ್ನು ಹೊಂದಿರುವ ರಾಮಾಯಣದಲ್ಲಿ ಉತ್ತಮವಾದ ಸಾರಾರ್ಥ ಅನೇಕ ಉಂಟು. ಶ್ರೀ ರಾಮಾನುಜಾಚಾರ್ಯರು ತಿರುಪತಿಯಲ್ಲಿ ತಿರುಮಲೆ ನಂಬಿಯವರ ಹತ್ತಿರ ಶ್ರೀ ರಾಮಾಯಣವನ್ನು ಅಧ್ಯಯನ ಮಾಡಿದರೆಂಬುದೇ ಇದಕ್ಕೆ ಉದಾಹರಣೆ. (ನಾವು ಪಡೆಯಬೇಕಾಗಿರುವ) ಪರಮಾತ್ಮಾ, (ಪಡೆಯುವವನಾಗಿರುವ) ಜೀವಾತ್ಮಾ, (ಭಗವಂತನನ್ನು ಪಡೆಯುವುದರ) ಫಲ, (ಅವನನ್ನು) ಹೊಂದದಂತೆ ತಡೆಯುವ ವಿರೋಧಿ, (ಅವನನ್ನು ಪಡೆಯುವಂತಹ) ಉಪಾಯ ಎಂಬ ಸಾರವನ್ನು ಐದು. ಇವಕ್ಕೆ ಅರ್ಥ ಪಂಚಕವೆಂದು ಹೆಸರು—

" ಯಃ ಶ್ರಾವಣಾ ಮಾಸದ ಕಾರ್ತ್ಸ್ನ್ಯೇನಾರ್ಥಂ ।
ರಾಮಾಯಣಂ ಲಕ್ಷ್ಮಣಯೋಗಿ ವರ್ಯಾತ್ ।

ಶ್ರೀ ಶೈಲ ನಾಥಸ್ಯ ಪಿತಾ ಮಹಂತಂ ।
ಶ್ರೀ ಶೈಲ ಪೂರ್ಣಾರ್ಯಮಹಂ ಪ್ರಪದ್ಯೇ ॥"

"ಪ್ರಾಪ್ಯಸ್ಯ ಬ್ರಹ್ಮಣೋರೂಪಂ ಪ್ರಾಪ್ತುಶ್ಚ ಪ್ರತ್ಯಗಾತ್ಮನಃ ।
ಪ್ರಾಪ್ತ್ಯುಪಾಯಂ ಫಲಂ ಪ್ರಾಪ್ತೇಃ ತಥಾಪ್ರಾಪ್ತಿ ವಿರೋಧಿಚ ।
ವದಂತಿ ಸಕಲಾ ವೇದಾಃ ಸೇತಿಹಾಸ ಪುರಾಣಕಾಃ ॥"

ಎಂಬ ವಚನವನ್ನು ಇಲ್ಲಿ ಗಮನಿಸಬೇಕು.

"ವಾಲ್ಮೀಕಿ ಮುನಿಯು ಚತುರ್ಮುಖನ ಆಜ್ಞೆಯನ್ನು ಅನುಸರಿಸಿ, ಶ್ರೀ ರಾಮಾಯಣವನ್ನು ರಚಿಸಿದ ನಂತರ, ಈ ರಾಮಾಯಣ ಚರಿತ್ರೆಯನ್ನು ಪ್ರಚಾರ ಮಾಡಬಲ್ಲವರು ಯಾರೋ ? ನನಗೆ ತಿಳಿಯದಲ್ಲ ; ಭಗವಂತನೇ ! ನೀನೇ ಅವನನ್ನು ನನಗೆ ದಯಪಾಲಿಸಬೇಕು" ಎಂದು ಆ ಪರಮಾತ್ಮನನ್ನು ಚಿಂತಿಸಿಕೊಂಡಿದ್ದರು. ಆ ಸಮಯದಲ್ಲಿ ಮುನಿ ವೇಷವನ್ನು ಧರಿಸಿರುವ ಕುಶ-ಲವರು ಆ ಮುನಿಯ ಚರಣಾರ ವಿಂದಗಳಲ್ಲಿ ನಮಿಸಿ ವಿನಯದಿಂದ ನಿಂತರು. ಅತ್ಯಧಿಕ ಬುದ್ಧಿಯುಳ್ಳವರೂ, ಋಗ್ವೇದ ಮೊದಲಾದ ನಾಲ್ಕು ವೇದಗಳನ್ನು ಮತ್ತು ಇತರ ಗ್ರಂಥಗಳನ್ನು ಓದಿ ತಿಳುವಳಿಕೆ ಯುಳ್ಳವರಾದ ಆ ಕುಶ-ಲವರುಗಳನ್ನು ಕಂಡು ಅತ್ಯಧಿಕ ಪ್ರಸನ್ನರಾಗಿ ವೇದೋಪ ಬೃಹ್ಮಣವಾಗಿರುವ ಶ್ರೀ ರಾಮಚರಿತ್ರೆಯನ್ನು ಅವರಿಗೆ ಉಪದೇಶ ಮಾಡಿದರು.

"ವೇದೋಪಬೃಹ್ಮಣ" ಎನ್ನುವುದಕ್ಕೆ ಅರ್ಥವೇನೆಂಬುದನ್ನು ತಿಳಿಯಬಹುದು. ಹೇಗೆ ಇಪ್ಪತ್ತನಾಲ್ಕುಸಾವಿರ ಶ್ಲೋಕಗಳನ್ನೊಳಗೊಂಡ ರಾಮಾಯಣದಲ್ಲಿ ಕೆಲವು ಭಾಗ ಗಳನ್ನು ಮಾತ್ರ ತಿಳಿದುಕೊಂಡವರಿಗೆ ರಾಮಾಯಣದ ಅರ್ಥ ತಿಳಿಯುವುದಿಲ್ಲವೋ ಹಾಗೆಯೇ ಅನೇಕ ವಿಭಾಗಗಳುಳ್ಳ ವೇದದಲ್ಲಿಯೂ ಕೆಲವು ವಿಷಯಗಳನ್ನು ಮಾತ್ರ ಓದಿ ತಿಳಿದಿರುವವರಿಗೆ ಆ ವೇದದ ಅರ್ಥವನ್ನು ಅರಿಯಲು ಸಾಧ್ಯವಿಲ್ಲ ಅಲ್ಪಜ್ಞಾನಿ ಗಳಾದ ನಾವು ವೇದವನ್ನೆಲ್ಲಾ ಓದಿ ತಿಳಿದುಕೊಳ್ಳಲು ಸಾಧ್ಯವಿಲ್ಲ. ದೀರ್ಘಕಾಲ ಪರಮ ಪುರುಷನನ್ನು ನಮಸ್ಕರಿಸಿ ಸನ್ಮಾರ್ಗದಲ್ಲಿ ನಡೆದು ನಿಜವಾದ ಸಿದ್ಧಿ ಪಡೆದಿರುವ ಮಹಾತ್ಮರುಗಳಿಗೇ ಆ ವೇದವೂ, ಅದರ ನಿಜವಾದ ಅರ್ಥವೂ ಚೆನ್ನಾಗಿ ತಿಳುವಳಿಕೆಗೆ ಬರುತ್ತದೆ. ಅಂತಹವರೇ, ಆ ಸತ್ಯವಾದ ಅರ್ಥವನ್ನು ತಿಳಿದು, ಆ ತಾತ್ಪರ್ಯವನ್ನು ಸಾರವಾಗಿ ತಿಳಿಸುವ ಗ್ರಂಥವನ್ನು ರಚಿಸಲು ಸಮರ್ಥರಾಗುವರು. "ಅಂತಹವರಲ್ಲಿ ವಾಲ್ಮೀಕಿ ಮುನಿಯೂ ಒಬ್ಬರು ;" ಆ ರೀತಿ ವೇದಾರ್ಥವನ್ನು ಸಾರವಾಗಿ ತಿಳಿಸುವ ಗ್ರಂಥಗಳಲ್ಲಿ ರಾಮಾಯಣವೂ ಒಂದು. ಇದ್ದರಿಂದ, "ವೇದಾರ್ಥಗಳನ್ನು ಸಾರವಾಗಿ ತಿಳಿಸುವ ಗ್ರಂಥ "ಉಪಬೃಹ್ಮಣ" ಎನ್ನುವುದು.

ಇಲ್ಲಿ, "ವೇದೋಪಬೃಹ್ಮಣಾರ್ಥಾಯ—ವೇದೋಪಬೃಹ್ಮಣರೂಪ ಸ್ವಗ್ರಂಥ ಪಠನಾಯೇತ್ಯರ್ಥಃ ;

ಉಪಬೃಹ್ಮಣಂ ನಾಮ ನಾನಾ ಶಾಖಾನಾಂ ಸಾರೇಣ ನಿರ್ಣೀತ ವೇದಾರ್ಥ ಪ್ರತಿಪಾದಕೋ ಗ್ರಂಥಃ ॥''.

ಎನ್ನುವ ಗೋವಿಂದ ರಾಜೀಯ ವ್ಯಾಖ್ಯಾನ ವಾಕ್ಯಗಳೂ '' ಉಪಬೃಹ್ಮಯಂತಿ ಶ್ರುತಿ ಪ್ರತಿಪನ್ನಾರ್ಥಂ ವಿಶದೀಕರಣಾತ್ '' ಎಂಬುವ ಶ್ರೀ ರಾಮಾನುಜಾಚಾರ್ಯರ ವಾಕ್ಯಗಳೂ ಗಮನಿಸತಕ್ಕದ್ದು.

ಪದಾರ್ಥಗಳನ್ನು ಹೇಳುವುದು ಯಾವುದೋ ಅದು ಉಪಬೃಹ್ಮಣ ಎಂದು ಕೆಲವರು ಹೇಳುತ್ತಾರೆ. ಈ ರೀತಿ ಹೇಳಲು ಆಧಾರಗಳನ್ನು ನೋಡಿಲ್ಲ; ಮೇಲೆ ಹೇಳಿರುವ ಆಧಾರಗಳಲ್ಲಿ ಅಡಕವಾಗಿರುವ —'' ನಿರ್ಣೀತಾರ್ಥ ಪ್ರತಿಪಾದಕೋ ಗ್ರಂಥಃ ; ಶ್ರುತಿ ಪ್ರತಿಪನ್ನಾರ್ಥ ವಿಶದೀಕರಣಾತ್ '' ಎನ್ನುವ ವಾಕ್ಯಗಳನ್ನು ನೋಡತಕ್ಕದ್ದು. ಇನ್ನು ವೇದದಲ್ಲಿ ತಿಳಿಯಪಡಿಸಿರುವ ಪರಮಾತ್ಮ ಮುಂತಾದ ವಿಷಯ ವಸ್ತುಗಳನ್ನು ನೋಡೋಣ.

" ವೇದಾಂತವೂ ಪರಮಾತ್ಮನು "

ವೇದವು ಪರಮಾತ್ಮನನ್ನು ಯಾವ ರೀತಿಯಾಗಿ ಹೇಳುತ್ತದೆ ? ಅಂದರೆ, ವ್ಯಾಸರು, ಉಪನಿಷತ್ತುಗಳಲ್ಲಿ ಅಡಕವಾಗಿರುವ ಕಾರಣ ವಾಕ್ಯಗಳಿಂದ ಪರಮ ಪುರುಷನನ್ನು ಚೆನ್ನಾಗಿ ತಿಳಿಯಬಹುದು ಎನ್ನುತ್ತಾರೆ.

ಕಣ್ಣು ಮೊದಲಾದ ಬಾಹ್ಯೇಂದ್ರಿಯಗಳಿಗೆ ಕಾಣಿಸುವ ಈ ಪ್ರಪಂಚಕ್ಕೆ ಯಾವುದು ಕಾರಣವೋ, ಆ ವಸ್ತುವೇ '' ಪರಮಾತ್ಮಾ '' ಎನಿಸಿಕೊಳ್ಳುತ್ತದೆ.

'' ಯತೋವಾ ಇಮಾನಿ ಭೂತಾನಿ ಜಾಯಂತೆ.................ತತ್‌ಬ್ರಹ್ಮ '' ಎನ್ನುವ ವಾಕ್ಯವನ್ನು ನೋಡಿ.

ಆದರೆ ಉಪನಿಷತ್ತುಗಳಲ್ಲಿ ಕಾರಣವಾಕ್ಯಗಳು ಹಲವುಂಟು. ಅವುಗಳಲ್ಲಿ ಒಂದು ವಾಕ್ಯದ ಹಾಗೆ ಮತ್ತೊಂದು ವಾಕ್ಯವು ಕಾರಣ ವಸ್ತುವನ್ನು ಹೇಳದೆ ವಿರೋಧವಾಗಿ ಹೇಳಿರುವುದನ್ನು ನಾವು ಕಾಣಬಹುದು. ಉದಾಹರಣೆಯಾಗಿ '' ಹಿರಣ್ಯಗರ್ಭಸ್ಸಮವರ್ತತಾಗ್ರೇ,'' ''ನಸತ್ ನಚಾಸತ್ ಶಿವ ಏವ ಕೇವಲಃ'' '' ಏಕೋಹವೈ ನಾರಾಯಣ ಆಸೀತ್ '' ಎನ್ನುವ ವಾಕ್ಯಗಳನ್ನು ನೋಡಿದ್ದೇ ಆದರೆ ಒಂದು ವಸ್ತುವನ್ನೇ ಕಾರಣವಸ್ತುವನ್ನಾಗಿ ಹೇಳದೆ ಆಯಾ ವಾಕ್ಯಗಳಲ್ಲಿ ಬೇರೆಬೇರೆ ವಸ್ತುಗಳನ್ನು ಕಾರಣ ವಸ್ತು ಎಂದು ವಿರೋಧವಾಗಿ ಹೇಳಿರುವ ಹಾಗೆ ತೋರುತ್ತದೆ. ಹೀಗಿರುವಲ್ಲಿ ಕಾರಣವಸ್ತು ಒಂದೇ ; ಆ ವಸ್ತು ನಾರಾಯಣನೇ ಎಂಬುದನ್ನು ನಾವು ನಿರ್ಧರಿಸುವುದು ಹೇಗೆ ? ಎನ್ನುವ ಸಂದೇಹ ಇಲ್ಲಿ ಉಂಟಾಗಬಹುದು.

ವೇದವಾಕ್ಯಗಳನ್ನು ಬಳಸಿ ಪರಮಾತ್ಮನನ್ನು ತಿಳಿಯುವಾಗ ಈ ರೀತಿಯಾದ ಸಂದೇಹವುಂಟಾಗುವುದು ಸಹಜವೇ. ಸಂದೇಹ ಪಡುವವರಿಗೆ ಮನಸ್ಸಮಾಧಾನ ಪಡೆಯಲು ಅವಕಾಶವಿಲ್ಲ. ವೇದವು ಸ್ಪಷ್ಟವಾಗಿ ತಿಳಿಸುವ ರೀತಿಯಲ್ಲಿ ಅಳವಡಿಸಲ್ಪಟ್ಟಿಲ್ಲ.

ಅದನ್ನು, ಈಗ ಎಣಿಸತಕ್ಕದ್ದು. ಈ ಕೊರತೆಯನ್ನು ಪರಿಹರಿಸಿಕೊಳ್ಳಲು ವ್ಯಾಸರು ರಚಿಸಿರುವ ಶಾರೀರಕ ಮೀಮಾಂಸಾ ಶಾಸ್ತ್ರದಿಂದ ಸಹಾಯ ದೊರೆಯುತ್ತೆ. ವಾಲ್ಮೀಕಿ ಮುನಿಯು ರಚಿಸಿರುವ ರಾಮಾಯಣವು, ಬೇರೊಂದು ರೀತಿಯಿಂದ ಸಹಾಯವನ್ನು ಮಾಡುತ್ತದೆ. ಇವುಗಳಲ್ಲಿ ಮೀಮಾಂಸಾ ಶಾಸ್ತ್ರವು ಮಾಡುವ ಸಹಾಯವನ್ನು ಮೊದಲು ಸಂಕ್ಷಿಪ್ತವಾಗಿ ನೋಡೋಣ.

ಮೀಮಾಂಸಾಶಾಸ್ತ್ರ ಯಾವುದು—ವೇದವನ್ನು ವಿಮರ್ಶಿಸುವ ಗ್ರಂಥ. ಈ ವಿಮರ್ಶೆಯನ್ನು, ಮೇಲೆ ಹೇಳಿರುವ ಉಪನಿಷತ್ ವಾಕ್ಯಗಳಲ್ಲಿ ಕೆಳ ಕಂಡಂತೆ ತಿಳಿಯ ಬಹುದು.

" ಹಿರಣ್ಯಗರ್ಭಃ " ಎನ್ನುವ ಮೊದಲವಾಕ್ಯ, ಎಲ್ಲಾ ನಾಶವಾದ ಕಾಲದಲ್ಲೂ, ಬ್ರಹ್ಮನು ಇದ್ದನು ಎಂಬ ಅರ್ಥವನ್ನು, " ನಸತ್ ನಚಾಸತ್ " ಎಂಬ ಎರಡನೆಯ ವಾಕ್ಯವು, ಸತ್ತು ಅಸತ್ತು ಇಲ್ಲದ ಆಕಾಲದಲ್ಲಿ ಶಿವನು ಇದ್ದನು ಎಂಬ ಅರ್ಥವನ್ನು, " ಏಕೋಹವೈ ನಾರಾಯಣಃ " ಎನ್ನುವ ಮೂರನೆಯ ವಾಕ್ಯ, ಆ ಸಮಯದಲ್ಲಿ ನಾರಾಯಣನು ಇದ್ದನು ಎಂಬುವ ಅರ್ಥ ಉಳ್ಳದ್ದಾಗಿದೆ. ಆದರೆ, ಮೊದಲೆರಡು ವಾಕ್ಯಗಳಲ್ಲಿ ಬ್ರಹ್ಮನು ಇದ್ದನು, ಶಿವನು ಇದ್ದನು ಎಂದು ತಿಳಿಯುವ ಹಾಗೆ " ನಾರಾಯಣನು ಇಲ್ಲ " ಎಂಬುದು ತಿಳಿಯುವುದಿಲ್ಲ. ಇಲ್ಲಿ ಇದನ್ನು ಮುಖ್ಯವಾಗಿ ನೋಡತಕ್ಕದ್ದು. " ಏಕೋಹವೈ ನಾರಾಯಣ ಆಸೀತ್ ನ ಬ್ರಹ್ಮಾ ನೇಶಾನಃ " ಎನ್ನುವ ಮೂರನೆಯ ವಾಕ್ಯದಲ್ಲಿ "ನಾರಾಯಣನು ಆ ಕಾಲದಲ್ಲಿ ಇದ್ದನು" ಎಂಬುದು ಹೇಗೆ ಸ್ಪಷ್ಟವಾಗಿ ತಿಳಿಯುತ್ತದೆಯೋ, ಹಾಗೆಯೇ, " ಆ ಸಮಯದಲ್ಲಿ ಬ್ರಹ್ಮನು ಇಲ್ಲ, ಶಿವನು ಇಲ್ಲ " ಎಂಬುದು ಚೆನ್ನಾಗಿ ತಿಳಿಯುತ್ತದೆ.

ಇದರಿಂದ, ಮೇಲೆ ಹೇಳಿರುವ ಮೂರು ವಾಕ್ಯಗಳಿಗೂ ವಿರೋಧ ಸ್ವಲ್ಪವೂ ಇಲ್ಲದ ಅರ್ಥವನ್ನು ತಿಳಿಯುವುದು ಉಚಿತ. ಮೊದಲ ಎರಡು ವಾಕ್ಯಗಳಿಗೆ " ಎಲ್ಲಾ ನಾಶವಾದ ಕಾಲದಲ್ಲೂ ಬ್ರಹ್ಮನು ಮಾತ್ರ ಇದ್ದನು ; ಶಿವನು ಮಾತ್ರ ಇದ್ದನು, ಬೇರೆ ಯಾವ ವಸ್ತುವೂ ಇಲ್ಲ " ಎಂಬ ಅರ್ಥವನ್ನು ತೆಗೆದುಕೊಂಡರೆ, " ಏಕೋಹವೈ ನಾರಾಯಣ ಆಸೀತ್.... " ಎಂಬ ವಾಕ್ಯವು ಸೇರುತ್ತೋ? ಸೇರುವುದಿಲ್ಲ. " ಏಕೋಹವೈ " ವಾಕ್ಯ ಸ್ಪಷ್ಟವಾಗಿ ಹೇಳುವ ಹಾಗೆ " ಎಲ್ಲಾ ಅಳಿದ ಕಾಲದಲ್ಲೂ ನಾರಾಯಣನು ಮಾತ್ರ ಇದ್ದನು ಮತ್ತ್ಯಾವುದೂ ಇಲ್ಲ " ಎಂಬ ಅರ್ಥವನ್ನು ತೆಗೆದುಕೊಂಡರೇ, ಮೊದಲ ಎರಡು ವಾಕ್ಯಗಳೂ ಹೊಂದುತ್ತದೆ. " ಎಲ್ಲಾ ವಸ್ತುಗಳೂ ಅಳಿದ ಕಾಲದಲ್ಲೂ ಅಳಿವಿಲ್ಲದ ನಾರಾಯಣನು ಇದ್ದುದ್ದಾಗಿ ತಿಳಿಸುತ್ತದೆ", ಎಂದು ಹೇಳುವಾಗ, ವಿರೋಧ ಯಾವುದು ಇಲ್ಲ. ಈ ರೀತಿ ಅನುಸಂಧಾನ ಮಾಡಿ ವೇದಾರ್ಥಗಳನ್ನು ನಿರೂಪಿಸುವ ಗ್ರಂಥವೇ ಶಾರೀರಕ ಮೀಮಾಂಸಾ ಶಾಸ್ತ್ರವಾಗುತ್ತದೆ. ಈ ಶಾಸ್ತ್ರದ ಸಹಾಯದಿಂದ ವೇದದ ಅರ್ಥವನ್ನು ನಾವು ಚೆನ್ನಾಗಿ ಕಾಣಬಹುದು. ಆದರೂ ಮೇಧಾವಿಗಳಿಗೇ ಇದು ಸಾಧ್ಯ. ಇನ್ನು, ರಾಮಾಯಣವು ಮಾಡುವ ಸಹಾಯವನ್ನು ನೋಡಬಹುದು.

" ರಾಮಾಯಣವೂ ಪರಮಾತ್ಮನೂ "

ಶ್ರೀ ರಾಮಚಂದ್ರನು ಸೀತಾದೇವಿಯೊಂದಿಗೆ ವಿವಾಹವಮಾಡಿಕೊಂಡು. ಆ ದೇವಿಯೊಡನೆಯೂ ಮತ್ತು ತನ್ನ ಪರಿವಾರದೊಂದಿಗೂ ಅಯೋಧ್ಯೆಗೆ ಹಿಂತಿರುಗುವಾಗ, ಮಾರ್ಗದಲ್ಲಿ ಪರಶುರಾಮನು ಬಂದು ತಡೆದು, ತನ್ನ ಬಿಲ್ಲನ್ನು ತೆಗೆದು ನಾಣೇರಿಸುವಂತೆ, ಶ್ರೀ ರಾಮನನ್ನು ಪ್ರಾರ್ಥಿಸಿದನು ಎಂಬುದು ವಿಷಯ. ಪರಶುರಾಮನ ಕೈಯಲ್ಲಿ ಇದ್ದ ಬಿಲ್ಲಿನ ಹಿರಿಮೆ ಈ ರೀತಿಯಾಗಿದೆ :—

" ತದಿದಂ ವೈಷ್ಣವಂ ರಾಮಧನುಃ ಪರಮ ಭಾಸ್ವರಮ್ ।
ಸಮಾನಸಾರಂ ಕಾಕುತ್ಸ್ಥ ರಾದ್ರೇಣ ಧನುಷಾತ್ವಿದಮ್ ॥

ತದಾ ತು ದೇವತಾಸ್ಸರ್ವಾಃ ಪೃಚ್ಛಂತಿ ಸ್ಮ ಪಿತಾಮಹಮ್ ।
ಶಿತಿಕಂಠಸ್ಯ ವಿಷ್ಣೋಶ್ಚ ಬಲಾಬಲ ನಿರೀಕ್ಷಯಾ ॥

ಅಭಿಪ್ರಾಯಂತು ವಿಜ್ಞಾಯ ದೇವತಾನಾಂ ಪಿತಾಮಹಃ ।
ವಿರೋಧಂ ಜನಯಾಮಾಸ ತಯೋಃ ಸತ್ಯವತಾಂ ವರಃ ॥

ವಿರೋಧೇ ತು ಮಹದ್ಯುದ್ಧಮ ಅಭವದ್ರೋಮಹರ್ಷಣಮ್ ।
ಶಿತಿಕಂಠಸ್ಯ ವಿಷ್ಣೋಶ್ಚ ಪರಸ್ಪರ ಜಯೈಷಿಣೋಃ ॥

ತದಾತು ಜೃಂಭಿತಂ ಶೈವಂ ಧನುರ್ಭೀಮ ಪರಾಕ್ರಮಮ್ ।
ಹುಂಕಾರೇಣ ಮಹಾದೇವಃ ಸ್ತಂಭಿತೋಽಥ ತ್ರಿಲೋಚನಃ ॥

ದೇವೈಸ್ತದಾ ಸಮಾಗಮ್ಯ ಸರ್ಷಿಸಂಘೈಸ್ಸಚಾರಣೈಃ ।
ಯಾಚಿತೌ ಪ್ರಶಮಂ ತತ್ರ ಜಗ್ಮತುಸ್ತೌ ಸುರೋತ್ತಮೌ ॥

ಜೃಂಭಿತಂ ತದ್ಧನು ದೃಷ್ಟ್ವಾ ಶೈವಂ ವಿಷ್ಣುಪರಾಕ್ರಮೈಃ ।
ಅಧಿಕಂ ಮೇನಿರೇ ವಿಷ್ಣುಂ ದೇವಾಸ್ಸರ್ಷಿಗಣಾಸ್ತದಾ ॥"

ಈ ಶ್ಲೋಕದ ತಾತ್ಪರ್ಯ :—

" ಈ ಬಿಲ್ಲು ವಿಷ್ಣುವಿನದು. ಮೊದಲು ಭಗವಂತನ ವರಾಹವತಾರ ಚರಿತ್ರೆಯನ್ನು ಬ್ರಹ್ಮನಿಂದ ಕೇಳಿ, ಆ ಭಗವಂತನ ಹಿರಿಮೆಯನ್ನು ತಿಳಿದಿದ್ದ ಎಲ್ಲಾ ದೇವತೆಗಳೂ, ಶಿವನು ತ್ರಿಪುರಸಂಹಾರ ಮಾಡಿದನಂತರ ಶಿವನ ಮತ್ತು ವಿಷ್ಣುವಿನ ಬಲಾಬಲಗಳನ್ನು ನೋಡಲು ಅಪೇಕ್ಷಿಸಿ, " ಯಾರ ಬಲ ಅತ್ಯಧಿಕವಾದದ್ದು " ಎಂದು ಬ್ರಹ್ಮನನ್ನು ಕೇಳಲು, ಆ ಚತುರ್ಮುಖನು ಶಿವನಿಗೂ ಮತ್ತು ವಿಷ್ಣುವಿಗೂ ವಿರೋಧವನ್ನುಂಟು ಮಾಡಿದನು. ಅವರಿಬ್ಬರೂ ಘೋರಯುದ್ಧವನ್ನು ಮಾಡಲು, ಆಗ ವಿಷ್ಣುವಿನ ಹುಂಕಾರದಿಂದಲೇ ಶಿವನ ಬಿಲ್ಲು ಮತ್ತು ಶಿವನೂ ಭಂಗ ಹೊಂದಿದನು. ಇನ್ನು

ಯುದ್ಧವನ್ನು ಮುಂದುವರಿಸಬೇಡಿ, ಎಂದು ದೇವತೆಗಳು ಬೇಡಿಕೊಳ್ಳಲು, ಅವರಿಬ್ಬರೂ ತಟಸ್ಥರಾದಾಗ, ವಿಷ್ಣುವಿನ ಶೌರ್ಯದಿಂದ ಶಿವನೂ ಅವನ ಬಿಲ್ಲೂ ಭಂಗ ಹೊಂದಿದ್ದನ್ನು ಕಣ್ಣಾರೆ ಕಂಡ ಮುನಿಗಳೂ, ದೇವತೆಗಳೂ ವಿಷ್ಣುವನ್ನು ಸರ್ವಶ್ರೇಷ್ಠ ದೇವನೆಂದು ನಿಶ್ಚಯಿಸಿದರು.''

ಅನಂತರವೂ, ಹನುಮಂತನು ರಾವಣನ ಎದುರಿಗೆ ಶ್ರೀ ರಾಮನ ಮಹಿಮೆಯನ್ನು ಹೇಳುವ ಸ್ಥಳದಲ್ಲಿ

'' ಬ್ರಹ್ಮಾ ಸ್ವಯಂಭೂಃ ಚತುರಾನನೋ ವಾ ರುದ್ರಸ್ತ್ರಿನೇತ್ರಃ
ತ್ರಿಪುರಾಂತಕೋ ವಾ ।
ಇಂದ್ರೋ ಮಹೇಂದ್ರಃ ಸುರನಾಯಕೋ ವಾ ತ್ರಾತುಂ ನ ಶಕ್ತಾಃ
ಯುಧಿ ರಾಮವಧ್ಯಮ್ ॥ ''

ಇದರ ತಾತ್ಪರ್ಯ :—

'' ಸ್ವಯಂಭುವೂ ಚತುರ್ಮುಖನಾದ ಬ್ರಹ್ಮನೋ, ತ್ರಿಪುರಾಂತಕನೋ, ಮುಕ್ಕಣ್ಣನೂ ಆದ ಶಿವನೋ ಅಥವಾ ದೇವರಾಜನಾದ ಸುರೇಂದ್ರನೋ ಯಾರೇ ಆಗಿರಲಿ ಶ್ರೀ ರಾಮನ ಕ್ರೋಧಕ್ಕೆ ಪಾತ್ರನಾಗಿ ವಧಿಸಲ್ಪಡುವವನನ್ನು ರಕ್ಷಿಸಲಾರರು.''

ಮೇಲೆ ಹೇಳಿರುವಂತೆ ದೇವತೆಗಳನ್ನು ಹೆಮ್ಮೆಯಿಂದ ಹೇಳುವ ಮಾತಿನಲ್ಲಿ '' ನಾರಾಯಣನು ಶಕ್ತಿ ಇಲ್ಲದವನು '' ಎಂದು ಹೇಳಿಲ್ಲ. ಇದರಿಂದ '' ಶ್ರೀ ರಾಮಚಂದ್ರನೇ ನಾರಾಯಣನು '' ಎಂಬ ಸತ್ಯವು ಯಾರಿಗಾದರೂ ತಿಳಿಯುತ್ತದೆ. ಆದರೂ ಸಹ. ಶ್ರೀರಾಮನಿಂದ ವಧಿಸಲ್ಪಟ್ಟು ಬಿದ್ದಿರುವ ರಾವಣನನ್ನು ಕಂಡು, ಹೃದಯವು ತತ್ತರಿಸಿ, ಮನಗುಂದಿ, ಪ್ರಲಾಪಿಸುತ್ತಾ ಇರುವ ಮಂಡೋದರಿ ಒಂದು ರೀತಿಯಿಂದ ಸಮಾಧಾನವನ್ನು ತೆಗೆದುಕೊಂಡು, ಆ ರಾಮಚಂದ್ರನ ಹಿರಿಮೆಯನ್ನು ಕೆಳಕಂಡಂತೆ ಹೇಳುತ್ತಾಳೆ.

'' ಹೇ ರಾಮಚಂದ್ರನೇ ! ಇನ್ನು ತಿಳಿದನು ಈಶ್ವರನಿಗೂ, ಚತುರ್ಮುಖನಿಗೂ ದೈವ ನೀನೇ ಎಂಬುದನ್ನು ಇಂದು ತಿಳಿದೆನು.

ಇದನ್ನು ಕೇಳಿದ ಶ್ರೀ ರಾಮನು '' ನೀನು ನನ್ನನ್ನು ತಿಳಿದ ಬಗೆ ಹೇಗೆ ?'' ಎನ್ನಲು '' ಶ್ರೀ ವೈಕುಂಠದಲ್ಲಿ ಶಂಖ, ಚಕ್ರ, ಗದೆ, ಇವುಗಳನ್ನು ಹಸ್ತದಲ್ಲಿ ಧರಿಸಿ, ಶ್ರೀ ವತ್ಸವೆಂಬ ಮಚ್ಚೆಯನ್ನು ವಕ್ಷಸ್ಥಲದಲ್ಲಿ ಚಿಹ್ನೆಯಾಗಿ, ಲಕ್ಷ್ಮೀದೇವಿಯೊಂದಿಗೆ ನಿತ್ಯವಾಗಿ ನೆಲೆಸಿರುವ ಶ್ರೀ ವಿಷ್ಣುವೇ ನೀನು. '' ಎನ್ನುತ್ತಾಳೆ.

ಅದಕ್ಕೆ ಶ್ರೀ ರಾಮನು—''ಶ್ರೀ ವಿಷ್ಣುವಾದ ನಾನು ಆ ವೈಕುಂಠವನ್ನು ಬಿಟ್ಟು ಇಲ್ಲಿಗೆ ಬರಲು ಕಾರಣ ಏನು ? '' ಎಂದು ಪುನಃ ಪ್ರಶ್ನಿಸಲು, '' ಎಲ್ಲಾ ಲೋಕಗಳಲ್ಲಿಯೂ ಇರುವ ಜೀವರಾಶಿಗಳಿಗೂ ನಲ್ಮೆಯನ್ನು ಮಾಡಬೇಕೆಂದು ಅಭಿಪ್ರಾಯಪಟ್ಟು, ಮನುಷ್ಯರೂಪವನ್ನು ಧರಿಸಿ ಅವತಾರ ಮಾಡಿ, ಲೋಕಕ್ಕೇ ಕಂಟಕನಾದ

ರಾವಣನನ್ನು ಕೊಲ್ಲಲು ಬಂದೆ ; ಕೊಂದಿರುತ್ತೀಯೆ " ಎನ್ನುತ್ತಾಳೆ ಮಂಡೋದರಿ. ಈ ವಾಕ್ಯಗಳನ್ನು, ಮಂಡೋದರಿಯ ಮಾತಿನಲ್ಲಿಯೇ ನೋಡಬಹುದು :—

" ತಮಸಃ ಪರಮೋಧಾತಾ ಶಂಖ-ಚಕ್ರ ಗದಾಧರಃ ।
ಶ್ರೀವತ್ಸ ವಕ್ಷಾ ನಿತ್ಯಶ್ರೀಃ ಅಜಯ್ಯ ಶ್ಶಾಶ್ವತೋ ಧ್ರುವಃ ॥
ಮಾನುಷಂ ವಪುರಾ ಸ್ಥಾಯ ವಿಷ್ಣುಸ್ಸತ್ಯ ಪರಾಕ್ರಮಃ ।"

ಇನ್ನೂ ಮತ್ತೆ :—ಬ್ರಹ್ಮನು ತಿಳಿಸಿರುವುದು—

" ಸರ್ವ ಸ್ವಾಮಿಯಾದ ನಿನ್ನ ನಾಭಿ ಕಮಲದಲ್ಲಿ ಬ್ರಹ್ಮನಾಗಿರುವ ನನ್ನನ್ನು ಸೃಷ್ಟಿಸಿ ನನ್ನಲ್ಲಿ ಸೃಷ್ಟಿಯ ಕಾರ್ಯದ ಭಾರವನ್ನು ನಿಯಮಿಸಿರುವವನೂ ನೀನೇ " ಎಂಬ ಸಾರಾಂಶವುಳ್ಳ—

" ಪದ್ಮೇ ದಿವ್ಯೇರ್ಕ ಸಂಕಾಶೇ ನಾಭ್ಯಾಮುತ್ಪಾದ್ಯಮಾಮಪಿ ।
ಪ್ರಾಜಾಪತ್ಯಂ ತ್ವಯಾ ಕರ್ಮ ಮಯಿ ಸರ್ವಂನಿವೇಶಿತಮ್ ॥ "

ಎಂಬುವ ಮಾತುಗಳನ್ನು ನೋಡಿದ್ದಲ್ಲಿ, ನಾರಾಯಣನ ಹಿರಿಮೆಯನ್ನು ನಾವು ಚೆನ್ನಾಗಿ ತಿಳಿಯಬಹುದು.

ಇನ್ನು ಮುಂದೆ, " ಹಿರಣ್ಯಗರ್ಭಸ್ಸಮವರ್ತತಾಗ್ರೇ ", " ನಸತ್, ನಚಾಸತ್, ಶಿವ ಏವ ಕೇವಲಃ ", " ಏಕೋಹವೈ ನಾರಾಯಣ ಆಸೀತ್ ನಬ್ರಹ್ಮಾ ನೇಶಾನಃ " ಎನ್ನುವ ವಾಕ್ಯಗಳ, ಅರ್ಥ— " ಇತರೇ ಎಲ್ಲಾ ವಸ್ತುಗಳೂ ಇಲ್ಲದ ಸಮಯದಲ್ಲಿ ಶಿವನೋ, ಬ್ರಹ್ಮನೋ ಇದ್ದದ್ದಾಗಿಯೂ ಎಲ್ಲಾ ನಾಶವಾದ ಕಾಲದಲ್ಲಿ, ನಾರಾಯಣನು ಮಾತ್ರ ಇದ್ದದ್ದಾಗಿಯೂ ಸ್ಪಷ್ಟ ಪಟ್ಟಿರುತ್ತದೆ."

ಈಗ ರಾಮಾಯಣವು ಎಲ್ಲರಿಗೂ ಚೆನ್ನಾಗಿ ತಿಳಿಯುವ ಹಾಗೆ,

1. ವಿಷ್ಣು, ಶಿವನು ಇಬ್ಬರಿಗೂ ಯುದ್ಧ ನಡೆಯುವಾಗ, ವಿಷ್ಣುವಿನ ಹಿರಿಮೆಯನ್ನು ಮುನಿಗಳೂ, ದೇವತೆಗಳೂ ಕಣ್ಣಾರೆ ಕಂಡರು.

2. ಇಂದಿರನೋ, ಶಿವನೋ, ಬ್ರಹ್ಮನೋ ಒಂದಾಗಿ ಸೇರಿ ಈ ಮೂವರೂ ಸಹ ಶ್ರೀ ರಾಮನ ಕೋಪಕ್ಕೆ ಪಾತ್ರರಾದವರನ್ನು ರಕ್ಷಿಸಲಾರರು.

3. ಈ ಜಗತ್ತಿಗೆ ಒಳ್ಳೆಯದನ್ನೂ, ಈ ರಾವಣನಿಗೆ ಅಳಿವನ್ನೂ ಉಂಟು ಮಾಡುವುದಕ್ಕೇ ಬಂದ ರಕ್ಷಕ ದೈವವಾದ ಶ್ರೀಮನ್ನಾರಾಯಣನೇ ಶ್ರೀ ರಾಮಚಂದ್ರ.

4. ಸೃಷ್ಟಿಕರ್ತನಾದ ಬ್ರಹ್ಮಾ ಸೃಷ್ಟಿಕಾರ್ಯವನ್ನು ಪರಮ ಪುರುಷನಾಗಿರುವ ಶ್ರೀ ರಾಮಚಂದ್ರನ ಕೃಪೆಯಿಂದಲೇ ಪಡೆದಿರುತ್ತಾನೆ.

ಎನ್ನುವ ಸತ್ಯಸಂಗತಿಗನುಸಾರವಾಗಿಯೇ, ಪರಶುರಾಮ, ಹನುಮಂತ, ಮಂಡೋದರಿ. ತಾರೆ, ಕಾಲಪುರುಷ ಮುಂತಾದವರ ವಾಕ್ಯಗಳಿಂದ ಸ್ಪಷ್ಟವಾಗಿದೆ.

ಮೇಲೆ ಹೇಳಿರುವ ನಿಜವಾದ ಅರ್ಥವನ್ನು ಮನಸ್ಸಿನಲ್ಲಿಟ್ಟುಕೊಂಡು " ಹಿರಣ್ಯ ಗರ್ಭಃ ", " ನಸತ್ ನಚಾಸತ್ ", " ಏಕೋಹವೈ ನಾರಾಯಣ ಆಸೀತ್ ನ ಬ್ರಹ್ಮಾ

ನೇಶಾನಃ " ಎನ್ನುವ ವಾಕ್ಯಗಳನ್ನು ನೋಡಿದರೆ ಮಂದಮತಿಗಳಿಗೂ ಕಿಂಚಿತ್ತೂ ಅನುಮಾನವಿಲ್ಲದೆ ತಿಳಿಯುತ್ತದೆ.

ಈ ರೀತಿ ನಾರಾಯಣನ ಹಿರಿಮೆಯನ್ನು, ಇತರರ ಸಾಮಾನ್ಯತೆಯ ತಾರತಮ್ಯವನ್ನು ಅಲ್ಲಲ್ಲೇ ಹಲವಾರು ವಾಕ್ಯಗಳಿಂದ ಸ್ಪಷ್ಟವಾಗಿ ತಿಳಿಯಪಡಿಸಿರುತ್ತಾರೆ. ಇನ್ನು ಜೀವಾತ್ಮನ ಸತ್ಯತೆಯನ್ನು ತಿಳಿಯೋಣ.

" ವೇದಾಂತವು ಮತ್ತು ಜೀವನು "

" ಪತಿಂ ವಿಶ್ವಸ್ಯ " ಎನ್ನುವುದು ಒಂದು ವೇದಾಂತ ವಾಕ್ಯ. ಈ ವಾಕ್ಯವು, " ಪ್ರಪಂಚವನ್ನು ಪಡೆದಿರುವವನು ಭಗವಂತ " ಎಂಬ ಅರ್ಥವುಳ್ಳದ್ದು. ಇದರಿಂದ ಈ ಪ್ರಪಂಚವು ಭಗವಂತನಿಗೆ ಸ್ವಂತ ವಸ್ತು ಎನ್ನುವುದನ್ನು ತಿಳಿಸುತ್ತದೆ. ಈ ರೀತಿ ಅವನಿಗೆ ಸ್ವಂತ ವಸ್ತುವಾಗಿರುವ ಸ್ವಭಾವವನ್ನು " ಶೇಷತ್ವ " ಎಂದು ಹೇಳುವರು.

" ಸ್ವಂತ ವಸ್ತುವಾಗಿರುವ ಹಿರಿಮೆ " ಎನ್ನುವುದನ್ನು ಸ್ವಲ್ಪ ವಿವರಿಸಿ ಹೇಳಬಹುದು. ಗಟ್ಟಿ ಚಿನ್ನವು ಒಬ್ಬನಿಗೆ ಸ್ವಂತವಸ್ತುವಾಗಿರುವುದನ್ನು ಕಾಣುತ್ತೇವೆ. ಆ ವಸ್ತುವು, ಅವನು ಐಶ್ವರ್ಯವುಳ್ಳವನಾಗಿರುವುದಕ್ಕೆ ಕಾರಣವಾಗಿಯೂ, ಅವನು ಅಪೇಕ್ಷಿಸುವ ರೀತಿಯಲ್ಲಿ, ತಾನು ಅನುಭವಿಸಲು ಪರರಿಗೆ ಉಪಕರಿಸಲೂ ಅನುಕೂಲ ಆಗುವ ಹಾಗೂ ಇರುತ್ತದೆ.

ಇದರ ಹಾಗೆಯೇ, ಜೀವನೂ ಭಗವಂತನಿಗೆ ಸ್ವಂತ ವಸ್ತುವಾಗಿರುವುದನ್ನು " ಪತಿಂ ವಿಶ್ವಸ್ಯ " ಎನ್ನುವ ವಾಕ್ಯದಲ್ಲಿ ಕಾಣುತ್ತೇವೆ. ಆ ಜೀವನು, ಪರಮಾತ್ಮನ ಐಶ್ವರ್ಯಕ್ಕೆ ಕಾರಣನಾಗಿಯೂ, ಆ ಪರಮಾತ್ಮನ ಇಚ್ಛೆಗನುಸಾರವಾಗಿ ತನ್ನನ್ನು ಅನುಭವಿಸಲೂ ಪರರಿಗುಪಕರಿಸಲು ಅನುಕೂಲನಾಗಿರುತ್ತಾನೆ. ಇಲ್ಲಿ, ಗಟ್ಟಿ ಚಿನ್ನದ ಹಾಗೆ ಶೇಷತ್ವ ಎನ್ನುವ ವಾಕ್ಯವನ್ನು ನೋಡತಕ್ಕದ್ದು. ಪ್ರೇಮದಿಂದ ಕೂಡಿದ ಈ ಶೇಷತ್ವದ ನಿಲುಮೆಯನ್ನು " ದಾಸ್ಯ " ಎನ್ನುತ್ತಾರೆ. ಈ ದಾಸ್ಯವು ಜೀವನಿಗೇ ಉಂಟಾಗುವ ಒಂದು ಹಿರಿಮೆಯಾಗಿದೆ.

ಇನ್ನು " ಯಸ್ಯಾಸ್ಮಿ ನತಮಂತರೇಮಿ " ಎನ್ನುವ ಮತ್ತೊಂದು ವೇದವಾಕ್ಯವನ್ನು ಕಾಣೋಣ. ಈ ಮಾತಿನ ಸಾರಾಂಶ :— " ಯಾವನಿಗೆ ನಾನು ದಾಸನಾಗಿ ಇರುವೆನೋ ಅವನನ್ನು ಬಿಟ್ಟು ಬೇರೊಬ್ಬರ ಹತ್ತಿರ ಹೋಗುವುದಿಲ್ಲ." ಈ ವಾಕ್ಯದಲ್ಲಿ ಅಡಕವಾಗಿರುವ " ಯಸ್ಯಾಸ್ಮಿ " ಎಂಬ ಭಾಗ " ಪತಿಂ ವಿಶ್ವಸ್ಯ " ಎನ್ನುವ ವಾಕ್ಯದಲ್ಲಿ ಸ್ಪಷ್ಟಪಟ್ಟಿರುವುದನ್ನೇ ತಿಳಿಸುತ್ತದೆ.

" ನತಮಂತರೇಮಿ " ಎಂಬ ಭಾಗದ ಅರ್ಥವನ್ನು ಸ್ವಲ್ಪ ವಿವರಿಸಿ ಹೇಳೋಣ. ಒಂದು ವಸ್ತು ಒಂದು ಕ್ಷಣವಿದ್ದರೆ ಆ ವಸ್ತುವನ್ನು " ಸತ್ತೆ " ಎನ್ನುವರು. ಎರಡು ಕ್ಷಣ ಮೊದಲು ಆಯಾ ಕಾಲದಲ್ಲಿ ಇದ್ದರೆ " ಸ್ಥಿತಿ " ಎಂದು ಹೇಳುವರು. ಪ್ರಯತ್ನವನ್ನು " ಪ್ರವೃತ್ತಿ " ಎಂದು ವರ್ಣಿಸುತ್ತಾರೆ. ಪ್ರಯತ್ನವಿಲ್ಲದಿರುವುದನ್ನು

"ನಿವೃತ್ತಿ" ಎಂದು ಹೇಳುವರು. ಈ ರೀತಿ ಒಂದೊಂದು ಜೀವನ ಸತ್ತೆ, ಸ್ಥಿತಿ, ಪ್ರವೃತ್ತಿ, ಮುಂತಾದುವುಗಳೆಲ್ಲವೂ ಪರಮಪುರುಷನಿಗೆ ವಶಪಟ್ಟಿರುವುದನ್ನು ನೋಡಿದರೆ ಜೀವನು ಪರಮಾತ್ಮನಿಗೆ ಪರತಂತ್ರನು ಎಂದು ತಿಳಿಯುತ್ತದೆ.

ಹೇಗೆ, ಅಕ್ಕಸಾಲಿಗನ ಕೈಯಲ್ಲಿ ಕೆಲಸಕ್ಕಾಗಿ ಇರುವ ಸ್ವರ್ಣವು, ಅವನು ಅದನ್ನು ಅಳಿಸಲು, ಕರಗಿಸಲು, ತಟ್ಟಲು, ನೆಟ್ಟಗೆ ಮಾಡಲೂ, ಕಾಯಿಸಲೂ, ನಾಶಮಾಡಲೂ ಮತ್ತು ಅವನ ಇಚ್ಛೆಗನುಸಾರವಾಗಿ, ಅದು ನೆಟ್ಟಗಾಗುತ್ತಲೂ ಬಗ್ಗುವುದೂ, ಉದ್ದವಾಗುವುದೂ, ರೂಪಗೊಳ್ಳುವುದೂ, ನಾಶವಾಗಲೂ ತನ್ನ ಸತ್ತೆ ಮುಂತಾದುವುಗಳನ್ನು ಬಿಟ್ಟು ಅವನ ವಶವಾಗಿರುವುದೋ, ಹಾಗೆಯೇ, "ಜೀವನು" ತನ್ನ ಸತ್ತೆ ಮುಂತಾದುವುಗಳನ್ನು ಬಿಟ್ಟು, ಭಗವಂತನು ಇಚ್ಛಿಸುವ ರೀತಿಯಲ್ಲಿ, ರೂಪುಗೊಳ್ಳಲು, ಅಳಿಯಲು ವಶಪಟ್ಟಿರುತ್ತಾನೆ ಎಂಬುವುದನ್ನು ತಿಳಿಯಬೇಕು. ಇಲ್ಲಿ ಒಬ್ಬನ ಕೆಲಸಕ್ಕೆ ವಶವಾಗಿ ಇರುವಿಕೆಯನ್ನೇ "ಪಾರತಂತ್ರ್ಯ" ಎನ್ನುವ ವಾಕ್ಯದಲ್ಲಿ ಕಾಣಬಹುದು.

ಈ "ಪಾರತಂತ್ರ್ಯ" ಶಬ್ದಾರ್ಥವನ್ನು ಚೆನ್ನಾಗಿ ನೋಡಿದರೆ "ಪರಮಾತ್ಮನೊಬ್ಬನೇ ಸ್ವತಂತ್ರನು" ಮತ್ತು ಎಲ್ಲಾ ವಸ್ತುಗಳೂ ಅಸ್ವತಂತ್ರ ಎನ್ನುವುದು ಚೆನ್ನಾಗಿ ತಿಳಿಯುತ್ತದೆ.

ಪರಮ ಪುರುಷನನ್ನು ಕುರಿತಾದ ಶೇಷತ್ವ, ಪಾರತಂತ್ರ್ಯಗಳೆರಡೂ ಸೇರಿಯೇ ಇರುವುದರಿಂದ, ಅವುಗಳನ್ನು ಬೇರೆಬೇರೆಯಾಗಿ ತಿಳಿದುಕೊಳ್ಳುವಂತೆ, ಗಟ್ಟಿಚಿನ್ನ ಕೆಲಸಕ್ಕೆ ಉಪಯೋಗಿಸಲ್ಪಡುವ ಚಿನ್ನ ಎಂಬುವ ಈ ಉದಾಹರಣೆಗಳನ್ನು ತೋರಿಸಲಾಯಿತು.

ಇವುಗಳಿಂದ, ಭಗವಂತನ ಶ್ರೇಷ್ಠತೆಯನ್ನು ಹೆಚ್ಚಿಸುವುದಕ್ಕೆ ಗುರುತಾಗಿ ಅವನ ಇಚ್ಛೆಗನುಸಾರವಾಗಿ ಉಪಯೋಗವಾಗುವಿಕೆಯನ್ನೇ "ಶೇಷತ್ವ" ಎನ್ನುವರು. ಹಾಗೆ ಉಪಯೋಗ ಪಡುವುದು ಪಾರತಂತ್ರ್ಯ ಎನ್ನುವುದನ್ನೂ ಇದಕ್ಕೆ ಪರಮಾತ್ಮನೊಂದಿರುವ ತಾರತಮ್ಯವನ್ನು ನಾವು ಚೆನ್ನಾಗಿ ತಿಳಿಯಬಹುದು.

ಇದುವರೆವಿಗೂ ಹೇಳಿರುವ "ಪತಿಂ ವಿಶ್ವಸ್ಯ", "ಯಸ್ಯಾಸ್ಮಿ ನತಮಂತರೇಮಿ" ಎನ್ನುವ ವಾಕ್ಯಗಳಲ್ಲಿ ಭಗವಂತನು ಸ್ವತಂತ್ರನು ಎನ್ನುವ ಅರ್ಥವನ್ನೂ, "ಜೀವನು ಭಗವಂತನಿಗೆ ಶೇಷನಾಗಿರುವುದರಿಂದ, ಪರತಂತ್ರನಾಗಿ ಇರುವನು" ಎನ್ನುವ ಅರ್ಥವೂ, "ಅವನಿಗೂ (ಪರನಿಗೂ) ಇವನಿಗೂ (ಜೀವನಿಗೂ) ವ್ಯತ್ಯಾಸ ಉಂಟು" ಎಂಬ ಅರ್ಥವನ್ನು ಚೆನ್ನಾಗಿ ತಿಳಿಸುತ್ತದೆ. ಇನ್ನು, "ತತ್ ತ್ವಮ್ ಅಸಿ" ಎನ್ನುವ ಮತ್ತೊಂದು ವೇದಾಂತ ವಾಕ್ಯವನ್ನು ನೋಡೋಣ. ಈ ವಾಕ್ಯ "ಆತ್ಮಾ ಒಂದು ವಸ್ತು ಮಾತ್ರ ಉಂಟು", "ಜೀವನಿಗೂ ಪರನಿಗೂ ವ್ಯತ್ಯಾಸವಿಲ್ಲ" ಎಂಬ ಅರ್ಥವನ್ನು ಹೊಂದಿರುವುದಾಗಿ ತಿಳಿಯುತ್ತದೆ.

ಈ ಅರ್ಥವನ್ನು "ಪತಿಂ ವಿಶ್ವಸ್ಯ", "ಯಸ್ಯಾಸ್ಮಿ ನತಮಂತರೇಮಿ" ಎಂಬ ವಾಕ್ಯಗಳಲ್ಲಿ, ಮೇಲೆ ಹೇಳಿರುವ ಅರ್ಥವನ್ನು ಸೇರಿಸಿ ನೋಡಿದರೆ, ಜೀವನು ಪರಮಾ

ಒಂದೇ ವಸ್ತು ಅಲ್ಲ ಬೇರೆ ಬೇರೆ ವಸ್ತುವೇ. ಒಂದೇ ಅಂದರೆ, "ಪತಿಂ ವಿಶ್ವಸ್ಯ" ಎನ್ನುವ ಶ್ರುತಿ ಸೇರುವುದಿಲ್ಲ. ಬೇರೆ ಎಂದರೆ "ತತ್‌ತ್ವಮಸಿ" ಎನ್ನುವ ಶ್ರುತಿ ಸೇರುವುದಿಲ್ಲ. ಈ ರೀತಿಯಾದ ಗೊಂದಲವುಂಟಾಗುವುದು ಸಹಜವೇ.

ಈ ಸಂದೇಹಕ್ಕೆ ಪರಿಹಾರವನ್ನು ಮೀಮಾಂಸಾ ಶಾಸ್ತ್ರರೀತಿಯಿಂದ ಕೆಳಕಂಡಂತೆ ತಿಳಿಯತಕ್ಕದ್ದು.

"ತತ್ ತ್ವಮ್ ಅಸಿ" ಎನ್ನುವ ಶ್ರುತಿಯಲ್ಲಿರುವ "ತತ್" ಎನ್ನುವ ಪದವು, ತಿಳುವಳಿಕೆ, ಜ್ಞಾನ, ಸೌಖ್ಯ ಮೊದಲಾದ ಶ್ರೇಷ್ಠ ಗುಣಗಳೊಂದಿಗೆ ಕೂಡಿರುವ ಕಾರಣ ವಸ್ತುವನ್ನು ಸೂಚಿಸುವುದಾಗಿಯೂ, "ತ್ವಮ್" ಎಂಬ ಪದವು "ಶ್ವೇತಕೇತು" ಎನ್ನುವ ಜೀವನನ್ನು ಶರೀರವಾಗಿವುಳ್ಳ ಪರಮನನ್ನು ಸೂಚಿಸುತ್ತದೆ. "ಇವರಿಬ್ಬರೂ ಒಬ್ಬರೆ" ಎನ್ನುವುದು ಈ ವಾಕ್ಯದ ಅರ್ಥ. "ತತ್" ಎನ್ನುವ ಈ ಪದವು ಭಗವಂತನನ್ನು ಸೂಚಿಸುತ್ತದೆ. ಎನ್ನುವುದು ಸತ್ಯವೇ ಆದರೂ ಈ "ತ್ವಮ್" ಎನ್ನುವ ಪದವು, ಮೊದಲಿನ ವಸ್ತುವಾದ ಜೀವನನ್ನು ಕುರಿತು ಹೇಳುತ್ತದೆಯೋ ಹೊರತು, ಪರಮನವರೆಗೆ ಹೋಗುವುದಿಲ್ಲ. ಹಾಗಾದ ಪಕ್ಷದಲ್ಲಿ, "ಇದು ಅವನನ್ನು ಶರೀರವಾಗಿ ಪಡೆದಿರುವ ಪರಮನನ್ನು ಹೇಳುತ್ತದೆ ಎಂದು ನೀವುಗಳು ಹೇಳುವುದು ಹೇಗೆ?" ಎನ್ನುವ ಪ್ರಶ್ನೆ ಉಂಟಾಗಬಹುದು.

ಈ ಪ್ರಶ್ನೆಯ ಪರಿಹಾರ-"ಜಾತಿಯನ್ನು ತಿಳಿಸುವ ಶಬ್ದ ಜಾತಿಯನ್ನು ತಿಳಿಸುವುದು ಮಾತ್ರವಲ್ಲದೆ, ಜಾತಿಗೆ ಆಶ್ರಯವಾದ ವ್ಯಕ್ತಿಯನ್ನು ಹೇಗೆ ತಿಳಿಸುವುದೋ ಶರೀರವನ್ನು ಹೇಳುವ ಪದವೂ, ಶರೀರವನ್ನು ಮಾತ್ರ ತಿಳಿಸುವಷ್ಟರಲ್ಲಿಯೇ ನಿಲ್ಲದೆ ಆ ಶರೀರಕ್ಕೆ ಆಧಾರವಾಗಿವುಳ್ಳ ಆತ್ಮನವರಿಗೆ ಹೋಗುತ್ತದೆ. ಇದು ಒಂದು ರೀತಿ. ಈ ರೀತಿಯನ್ನು "ಅಪರ್ಯವಸಾನ ವೃತ್ತಿ" ಎಂದು ಹೇಳುತ್ತಾರೆ. "ಜೀವನು ಭಗವಂತನಿಗೆ ಶರೀರ" ಎಂಬುದು "ಯಸ್ಯಾತ್ಮಾ ಶರೀರಮ್" ಎನ್ನುವ ಶ್ರುತಿಯಿಂದ ತಿಳಿಯಬಹುದು.

ಜೀವನು ಕೈ, ಕಾಲು ಮುಂತಾದ ಆಕಾರಗಳೊಂದಿಗೆ ಕೂಡಿರುವ ಪಿಂಡವನ್ನು ಪಡೆದು ಆಶ್ರಯಿಸಿ, ಆ ಪಿಂಡವು ಮಾಡುವ ಸೇವೆಯನ್ನು ಪಡೆದು ಸಂತುಷ್ಟನಾಗಿ ಪುರುಷಾರ್ಥ ಹೊಂದುವುದನ್ನು, "ಆತ್ಮಾ" ಎಂದೂ, ಆ ಪಿಂಡವನ್ನು "ಶರೀರ" ವೆಂದೂ ತಿಳಿಯುತ್ತೇವೆ.

ಇದರ ಹಾಗೆಯೇ, ಪರಮಾತ್ಮನೂ ಅರಿವಿರುವ ಚಿತ್ತೂ, ಅರಿವಿಲ್ಲದ ಅಚಿತ್ತೂ ಆಗಿರುವ ಈ ಪ್ರಪಂಚವೂ ಮಾಡುವ ಸೇವೆಯನ್ನು ಪಡೆದು ಸಂತೋಷಗೊಳ್ಳುವುದರಿಂದ ಆ ಪರಮಾತ್ಮನು ಆತ್ಮಾ; ಈ ಪ್ರಪಂಚವು ಶರೀರ, ಎನ್ನಲು ಅಡ್ಡಿ ಇಲ್ಲ.

"ಐತದಾತ್ಮ್ಯಮಿದಂ ಸರ್ವಂ ತತ್ಸತ್ಯಂ ಸ ಆತ್ಮಾ" ಎನ್ನುವ ವಾಕ್ಯ "ತತ್ ತ್ವಮ್ ಅಸಿ" ಎನ್ನುವ ವಾಕ್ಯದೊಂದಿಗೆ ಸೇರಿದ ವಾಕ್ಯವೇ. ಈ ವಾಕ್ಯವು "ಈ

ಪ್ರಪಂಚ ಪರಮಾತ್ಮನನ್ನು ಆತ್ಮವಾಗಿ ಪಡೆದಿದೆ. ಅದು ಸತ್ಯ. ಪರಮಾತ್ಮನೇ ಆತ್ಮಾ" ಎಂಬ ತಾತ್ಪರ್ಯವುಳ್ಳದ್ದಾಗಿದೆ.

ಈ ರೀತಿ, ಮೊದಲಿನಲ್ಲಿ, ಈ ಪ್ರಪಂಚಕ್ಕೂ ಪರಮಾತ್ಮನಿಗೂ ಇರುವ ಶರೀರದ ಸ್ವಭಾವ, ಆತ್ಮನ ಸ್ವಭಾವಗಳನ್ನು ಹೇಳಿ ನಂತರ, ಶ್ವೇತಕೇತು ಎನ್ನುವ ಜೀವನನ್ನೂ ಪರಮಾತ್ಮನನ್ನು ಕ್ರಮದಿಂದ "ತ್ವಮ್ ತತ್" ಎನ್ನುವ ಪದಗಳಿಂದ ಗುರುತಿಸಿ, ಇವರಿಬ್ಬರಿಗೂ ಇರುವ ಏಕ ವಿಧದ ಸಂಬಂಧದಿಂದುಂಟಾದ ಹೊಂದಾಣಿಕೆಯನ್ನು ಆ "ತತ್, ತ್ವಮ್, ಅಸಿ" ಎನ್ನುವ ಶ್ರುತಿ ತಿಳಿಯ ಪಡಿಸುವುದಾಗಿ ನಾವು ತೆಗೆದು ಕೊಂಡರೆ ಸರಿ ಹೋಗುತ್ತದೆ.

ಈಗ "ತತ್ ತ್ವಮ್ ಅಸಿ" ಎಂಬ ಶ್ರುತಿಯಲ್ಲೂ, "ಪತಿಂ ವಿಶ್ವಸ್ಯ", "ಯಸ್ಯಾಸ್ಮಿ ನತ ಮಂತರೇಮಿ" ಎಂಬ ಶ್ರುತಿಯಲ್ಲೂ ಇರುವ ಹಾಗೆ ಜೀವನನ್ನು ಪರಮನಿಗೆ ಶೇಷವಸ್ತುವನ್ನಾಗಿಯೂ, ಪರತಂತ್ರವಸ್ತುವಾಗಿಯೂ ಕಂಡೆವಲ್ಲವೇ? ಹೇಗೆಂದರೆ–ಜೀವನು, ಭಗವಂತನಿಗೆ ಶರೀರ ಎಂದು ಹೇಳುವಾಗಲೇ, ಆ ಜೀವನು, ಭಗವಂತನಿಗೆ ಶೇಷವಸ್ತು, ಪರತಂತ್ರ ವಸ್ತುವೂ ಆಗಿದೆ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ.

ಈ ರೀತಿ, ಮೀಮಾಂಸಾ ಶಾಸ್ತ್ರವು ಮೊದಲು ಹೇಳಿದ ಗೊಂದಲಕ್ಕೆ ಪರಿಹಾರವನ್ನು ತಿಳಿಸುತ್ತದೆ. ಆದರೆ, ರಾಮಾಯಣವು ಸರಳವಾಗಿ ತಿಳಿಯುವ ಹಾಗೆ ಜೀವನ ನಿಜಸ್ಥಿತಿಯನ್ನು ತಿಳಿಸುತ್ತದೆ.

"ರಾಮಾಯಣವೂ ಜೀವಾತ್ಮನೂ"

ಶ್ರೀ ರಾಮಚಂದ್ರನು, ಸೀತಾದೇವಿ ಮತ್ತು ಲಕ್ಷ್ಮಣನೊಂದಿಗೆ ವನಕ್ಕೆ ಹೋಗಿ, ಚಕ್ರವರ್ತಿಯೂ ಮರಣ ಹೊಂದಿ, ರಾಜ್ಯವು ಅರಾಜಕವಾದ ಕಾಲದಲ್ಲಿ, ಭರತನನ್ನು ರಾಜ್ಯಾಭಿಷೇಕ ಮಾಡಿಕೋ ಎಂದು ವಸಿಷ್ಠರು ಕೇಳಿಕೊಳ್ಳಲು, ಆ ಭರತನು ವಸಿಷ್ಠರನ್ನು ಕುರಿತು ಹೇಳಿರುವ ಮಾತು ಕೇಳತಕ್ಕಂತಿದೆ:–

"ಕಥಂ ದಶರಥಾಜ್ಜಾತೋ ಭವೇದ್ರಾಜ್ಯಾಪಹಾರಕಃ ।
ರಾಜ್ಯಂ ಚಾಹಂ ಚ ರಾಮಸ್ಯ ಧರ್ಮಂ ವಕ್ತುಮಿಹಾರ್ಹಸಿ ॥"

"ಶ್ರೀ ರಾಮಚಂದ್ರನು ವನಕ್ಕೆ ತೆರಳಿದ ನಂತರ, ಆ ಪರಮ ಪುರುಷನ ವಿಯೋಗವನ್ನು ತಡೆಯಲಾರದೆ ನನ್ನ ತಂದೆಯವರಾದ ಚಕ್ರವರ್ತಿ ಮರಣ ಹೊಂದಿದರು. ಆ ಚಕ್ರವರ್ತಿಯ ಹೊಟ್ಟೆಯಲ್ಲಿ ಹುಟ್ಟಿದ ನಾನು, ಆ ಶ್ರೀ ರಾಮನು ತೊರೆದ ರಾಜ್ಯವನ್ನು ಹೇಗೆ ತಾನೇ ತೆಗೆದುಕೊಳ್ಳಲಿ. ಹಾಗೇನಾದರೂ ಪಡೆದದ್ದೇ ಆದರೆ, ಚಕ್ರವರ್ತಿಯ ಹೊಟ್ಟೆಯಲ್ಲಿ ಹುಟ್ಟಿದ ಮಗ ಎಂದು ನನ್ನನ್ನು ಪ್ರಪಂಚ ಹೇಳುತ್ತದೆಯೇ ?

ಅನಂತರವೂ ನನ್ನ ನಿಜಸ್ಥಿತಿಯನ್ನು ತಿಳಿದಿದ್ದೇ ಆದರೆ ಈ ರಾಜ್ಯವನ್ನು ತೆಗೆದು ಕೊಳ್ಳಲು ಸಾಧ್ಯವಿಲ್ಲ. ಏಕೆಕ್ಕೆಂದರೆ ನಾನು ಎನ್ನುವ ಈ ಆತ್ಮನೂ, ಈ ರಾಜ್ಯವೂ ಆ ರಾಮನಿಗೇ ಸೇರಿದ ವಸ್ತುವಾಗಿದೆ.

ಆ ಪರಮಾತ್ಮನಿಗೇ ಸೇರಿದ ಎರಡು ಸ್ವಂತ ವಸ್ತುವಿನಲ್ಲಿ, ಒಂದು ಮತ್ತೊಂದನ್ನು ಆಳಿ ಪರಿಪಾಲನೆ ಮಾಡುವುದು ನ್ಯಾಯವೇ ?

ಈ ಪ್ರಪಂಚದಲ್ಲಿ ತನಗೆ ಜನ್ಮಕೊಟ್ಟು ಸಾಕಿದ ತಂದೆಯನ್ನು ಸೆರೆಯಲ್ಲಿಟ್ಟು ರಾಜ್ಯವನ್ನು ರೀತಿಗೆ ವಿರೋಧವಾಗಿ ಪರಿಪಾಲಿಸುವುದೆಂಬುದೊಂದು ಉಂಟು. ಆ ಸ್ಥಾನವನ್ನು ನಾನು ಹೊಂದಲು ಸಾಧ್ಯವೇ ? ಈ ರೀತಿಯನ್ನನುಸರಿಸಿ ನನ್ನ ಹತ್ತಿರ ರಾಜ್ಯವನ್ನು ಕೊಡುವುದು ಸರಿಯೇ ? ನನ್ನ ಸ್ವಭಾವವನ್ನು ತಿಳಿದು ರಕ್ಷಿಸುವ ಮಾರ್ಗವನ್ನು ಹೇಳಿ ಶ್ರೀ ರಾಮನಿಗೇ ಸೇರಿದ ಎರಡು ವಸ್ತುಗಳಲ್ಲಿ, ಒಂದು ಮತ್ತೊಂದನ್ನು ಆಳಿ ಪರಿಪಾಲಿಸಬಹುದು ಎಂದರೆ ಈ ರಾಜ್ಯವೇ ನನ್ನನ್ನು ರಕ್ಷಿಸಲಿ ಎಂದು, ಒಬ್ಬನಿಗೇ ಸೇರಿದ ಒಂದು ಪೆಟ್ಟಿಗೆ, ರತ್ನ ಎಂಬ ಎರಡು ವಸ್ತುಗಳಲ್ಲಿ ಒಂದು ರಕ್ಷಿಸುವುದಾಗಿಯೂ ಮತ್ತೊಂದು ರಕ್ಷಿಸಲ್ಪಡುವುದಾಗಿಯೂ ಕಾಣಿಸುತ್ತದೆ. ಇದರ ಹಾಗೆಯೇ ಭರತನಾದ ನೀನು, ರಕ್ಷಿಸುವವನಾಗಿಯೂ ರಾಜ್ಯವು ರಕ್ಷಿಸಲ್ಪಡುವುದಾಗಿಯೂ ಆದರೇ ? ಎಂದರೆ,

ಮೇಲೆ ಹೇಳಿರುವ ಎರಡು ವಸ್ತುಗಳಲ್ಲಿ ಒಂದಾದ ರತ್ನವು ಆ ಪುರುಷನಿಂದ ಯಾವತ್ತಾದರೂ ಧರಿಸತಕ್ಕದ್ದೇ ಆಗಿದೆ. ಆ ರತ್ನವನ್ನು, ಅವನು ಒಂದು ಸಮಯ ಪೆಟ್ಟಿಗೆಯಲ್ಲಿಟ್ಟು, ಆ ಪೆಟ್ಟಿಗೆ ರಕ್ಷಿಸುವುದಾಗಿ ತಿಳಿದಿದ್ದೇ ಆದರೆ. ಇಲ್ಲವಲ್ಲವೇ? ಶ್ರೀ ರಾಮನಿಗೇ ಸೇರಿದ ಈ ರಾಜ್ಯವು ಆ ಪ್ರಭುವಿನಿಂದಲೇ ಯಾವತ್ತಿಗೂ ಧರಿಸತಕ್ಕದ್ದಲ್ಲವೇ ? ಆ ರಾಜ್ಯವಾಗಿರುವ ರತ್ನವನ್ನು ಧರಿಸಿ, ರಕ್ಷಿಸುವ ಶಕ್ತಿಯು ನನಗಿದೆಯೇ ? ನಾನು ಪೆಟ್ಟಿಗೆಯಾಗಿರಲು ತಕ್ಕವನೇ ?

ಈ ರಾಜ್ಯಕ್ಕೆ ತಿಳುವಳಿಕೆಯೂ, ಶಕ್ತಿಯೂ ಇಲ್ಲ. ಆದ್ದರಿಂದ ನನ್ನನ್ನು ರಕ್ಷಿಸಲು ಅವಕಾಶವಿಲ್ಲ. ತಿಳುವಳಿಕೆಯೂ, ಶಕ್ತಿಯೂ ಇರುವ ನನಗೋ ಆ ರಾಜ್ಯವನ್ನು ರಕ್ಷಿಸುವ ಯೋಗ್ಯತೆ ಇದೆ ಎಂದರೆ ನನ್ನ ಜ್ಞಾನವೂ, ಶಕ್ತಿಯೂ ಪರಮಾತ್ಮನಿಗೆ ಸೇವೆ ಮಾಡಲು ಸರಿಯಾಗಿದೆಯೇ ಹೊರತು, ಆ ಪರಮ ಪುರುಷನ ವಸ್ತುವನ್ನು ಅವನಿಗೆ ಇಲ್ಲದ ಹಾಗೆ ಮಾಡಲು ಅರ್ಹತೆ ಇಲ್ಲ.

ಇದರಿಂದ, ಭರತನ ನಿಜಸ್ಥಿತಿಯು ಜೀವನಿಗೆ ತಕ್ಕ ಒಂದು ಶ್ರೇಷ್ಠ ಸ್ಥಿತಿ ಎನ್ನುವುದು ಚೆನ್ನಾಗಿ ಪ್ರಕಾಶಿಸುವುದು.

ಇನ್ನು ಸೀತಾದೇವಿಯ ಚರಿತ್ರೆಯಲ್ಲಿ ಪಾರತಂತ್ರ್ಯ ಸ್ಥಿತಿಯನ್ನು ನೋಡುತ್ತೇವೆ. ಸೀತಾದೇವಿಗೆ ಮೂರುಸಾರಿ ವಿಯೋಗವುಂಟು. ದೇವತಾ ಸ್ತ್ರೀಯರ ಸೆರೆಯನ್ನು ಬಿಡಿಸಲು ತಾನು ಸೆರೆ ಇದ್ದದ್ದು ಮೊದಲ ವಿಯೋಗ, ಎರಡನೆಯ ಅಗಲಿಕೆಯು ಯಾವುದೆಂದರೆ ಲೋಕಾಪವಾದವನ್ನು ಹೋಗಲಾಡಿಸಿಕೊಳ್ಳುವುದಕ್ಕಾಗಿ ಶ್ರೀ ರಾಮನು ಆ

ದೇವಿಯನ್ನು ಕಾಡಿಗೆ ಕಳುಹಿಸಿ ಅಗಲಿದ್ದು, ಪುನಃ ಆ ದೇವಿಯು ಶ್ರೀ ರಾಮನ ಎದುರಿಗೆ ಬಂದಾಗ, ಅಗಲಿ ಪಾತಾಳ ಗೃಹಕ್ಕೆ ಹೊರಟು ಹೋಗಿದ್ದು ಮೂರನೆಯ ವಿಯೋಗ. ಈ ವಿಯೋಗಗಳಲ್ಲಿ ಎರಡನೆಯ ವಿಯೋಗದಲ್ಲಿ ಪಾರತಂತ್ರ್ಯ ಸ್ಥಿತಿ ಚೆನ್ನಾಗಿ ತಿಳಿಯುತ್ತದೆ.

ಶ್ರೀ ರಾಮನೂ ಸೀತಾದೇವಿಯೂ ಅಯೋಧ್ಯಾ ನಗರಿಯಲ್ಲಿ ಇರುವ ಸಮಯದಲ್ಲಿ ಸೀತೆಯು ಗರ್ಭಿಣಿಯಾಗಿರುವುದನ್ನು ಕಂಡನು. ಅವನು ಆ ದೇವಿಯನ್ನು ಕುರಿತು, "ಅರವತ್ತುಸಾವಿರ ವರ್ಷ ಮಕ್ಕಳಿಲ್ಲದೆ ಇದ್ದ ಚಕ್ರವರ್ತಿಯು ಹಾಗೆ ದುಃಖವನ್ನು ಅನುಭವಿಸದೆ ಸುಲಭವಾಗಿಯೇ ಪುತ್ರನೆಂಬ ಪುರುಷಾರ್ಥವು ದೊರೆತು ಬಿಟ್ಟಿತು! ಅವಶ್ಯವಾಗಿ ಅನುಭವಿಸಿದ್ದಲ್ಲದೆ ಪಡೆಯಲಾಗದ ಆಶೆ ಹೊಂದಿರುವ ನೀನು ಏನನ್ನು ಅಪೇಕ್ಷಿಸುತ್ತೀಯೆ ? ಎಲ್ಲವನ್ನೂ ಹೇಳು. ಒಳಗೂ, ಹೊರಗೂ, ಇರುವ ಆಕಾಂಕ್ಷೆಗಳನ್ನು ತಿಳಿಸು"

"ಅಪತ್ಯಲಾಭೋ ವೈದೇಹಿ ಮಮಾಯಂ ಸಮುಪಸ್ಥಿತಃ ।
ಕಿಮಿಚ್ಛಸಿ ಸಕಾಮಾ ತ್ವಂ ಬ್ರೂಹಿ ಸರ್ವಂ ವರಾನನೇ ॥"

ಎಂದು ಹೇಳಿದನು.

ಇದನ್ನು ಕೇಳಿದ ಸೀತೆಯು ಶ್ರೀ ರಾಮನನ್ನು ಕುರಿತು ಕೇಳಿಕೊಂಡ ಮಾತು ಯಾವುದೆಂದರೆ :—

"ತಪೋವನಾನಿ ಪುಣ್ಯಾನಿ ದ್ರಷ್ಟುಮಿಚ್ಛಾಮಿ ರಾಘವ ।
ಗಂಗಾತೀರ ನಿವಿಷ್ಟಾನಿ ಋಷೀಣಾಂ ಪುಣ್ಯಕರ್ಮಣಾಮ್ ।
ಫಲ ಮೂಲಾಶಿನಾಂ ವೀರಪಾದ ಮೂಲೇಷು ವರ್ತಿತುಂ ।
ಏಷಮೇ ಪರಮಃ ಕಾಮಃ ॥"

ಇದರ ತಾತ್ಪರ್ಯ :—" ಶ್ರೀ ರಾಘವನೇ! ಗೆಡ್ಡೆ, ಗೆಣಸು, ಹಣ್ಣು ಹಂಪಲುಗಳನ್ನು ತಿನ್ನುವವರೂ, ಸತ್ವಗುಣವುಳ್ಳವರೂ ಆದ ಮಹಾತ್ಮರ ಪಾದಾರವಿಂದಗಳಲ್ಲಿ ಒಂದು ದಿನವಾದರೂ ತಂಗಿ, ಗಂಗಾತೀರದಲ್ಲಿರುವ ತಪೋವನಗಳನ್ನು ನೋಡಲು ಆಸೆ ಪಡುತ್ತೇನೆ. ಇದೇ ನನಗೆ ಒಳಗೂ ಹೊರಗೂ ಇರುವ ಆಸೆಯಾಗಿದೆ" ಎಂದಳು. ಈ ಮಾತನ್ನು ಕೇಳಿದ ಶ್ರೀ ರಾಮನು ಲೋಕಾಪವಾದವನ್ನು ಹೋಗಲಾಡಿಸಬೇಕೆಂಬ ಮನಸ್ಸಿರುವವನಾದ್ದರಿಂದ ಆ ದೇವಿಯ ಆಸೆಯನ್ನೇ ನೆರವೇರಿಸುವ ಹಾಗೆ, ಅದೇ ರೀತಿ ಕಳುಹಿಸಿದನು. ಇದೇ ಎರಡನೆಯ ವಿಯೋಗ. ಈ ವಿಯೋಗಕ್ಕೆ ಫಲ—ಶ್ರೀ ರಾಮನು ತನ್ನನ್ನು ಅರಮನೆಯಲ್ಲಿಡಲಿ ಅಥವಾ ಅರಣ್ಯದಲ್ಲಿ ಬಿಟ್ಟರಲಿ ಆ ಭಗವಂತನ ಮನೋಭಿಪ್ರಾಯದಂತೆಯೇ ಅನುಸರಿಸಿ ನಡೆಯಬೇಕಾದದ್ದು ಪಾರತಂತ್ರ್ಯ ಸ್ಥಿತಿಯನ್ನು ಪ್ರಕಾಶಪಡಿಸುವುದಾಗಿದೆ.

" ಸಂಬಂಧ ವ್ಯತ್ಯಾಸವಿಲ್ಲದೆ ಆ ಭಗವಂತನ ಮನೋಭಿಪ್ರಾಯವನ್ನೇ ಅನುಸರಿಸಿ ನಡೆಯಬೇಕಾದ ಸ್ಥಿತಿ."

ಸೀತಾದೇವಿಯು ಅಶೋಕವನದಲ್ಲಿ ಸೆರೆ ಇರುವಾಗ, ರಾವಣನಿಂದಲೂ, ರಾಕ್ಷಸಿಯರಿಂದಲೂ ಅನುಭವಿಸಿದ ಕಷ್ಟಗಳು ಮಿತಿ ಮೀರಿತ್ತು. ಆ ದೇವಿಯ ಎದುರಿಗೇ ರಾವಣನು, ಸೀತೆಗೆ ವಿರುದ್ಧವಾಗಿ ಹೇಳಿರುವ ಮಾತುಗಳು ಅನೇಕವುಂಟು. ಅವುಗಳಲ್ಲಿ ಒಂದು ಕೆಳಕಂಡಂತೆ ಇದೆ–

" ಅರಗಿಣಿಯಂತಹವಳೇ ! ನಾನು ನಿನ್ನನ್ನು ತರುವುದಕ್ಕೆ ಮೊದಲೇ ನಿನ್ನ ಪತಿಯಾದ ರಾಮನು ಮರಣ ಹೊಂದಿದನು. ಅವನು ಸಾಯುವಾಗ ಹಾ ಸೀತಾ ! ಹಾ ಲಕ್ಷ್ಮಣಾ ! ಎಂದು ಹೇಳಿದ್ದನ್ನು ಕಿವಿಯಾರೆ ಕೇಳಿರುವೆ ; ಹಾಗಿರುವಲ್ಲಿ, ರಾಮನನ್ನು ಸೇರಬೇಕೆಂದು ಇಚ್ಛೆಪಡುತ್ತೀಯಲ್ಲ ! ಇದು ಎಂತಹ ಅಜ್ಞಾನ ? ಒಳ್ಳೆಯ ಅದೃಷ್ಟ ನನ್ನನ್ನು ನಿನ್ನ ಹತ್ತಿರ ಸೇರಿಸಿರುವಾಗ ಅದನ್ನು ಅವಮಾನಪಡಿಸಿ ನನ್ನನ್ನು ತಿರಸ್ಕರಿಸುವುದು ಸರಿಯೋ ? " ಇತ್ಯಾದಿ.

ಪ್ರಜೆಗಳಲ್ಲಿ ಒಬ್ಬನಾದ ರಾವಣನು ತಾಯಿಯಾದ ದೇವಿಯ ಮುಂದೆಯೇ ಹೇಳುವ ಮಾತೇ ? ಇದು ! ಹೀಗೆಯೇ ರಾಕ್ಷಸಿಯರೂ ತಮತಮಗೆ ತೋರಿದ ರೀತಿಯಲ್ಲಿ ಕಠೋರವಾಗಿ ಹೇಳಿದ ಕ್ರಮ ಪ್ರಪಂಚಕ್ಕೆ ತಿಳಿದಿದೆ. ಬಿಲ್ಲಿನ ಕೂರಲಗನ್ನು ತಪ್ಪಿಸಿಕೊಳ್ಳಬಹುದು ; ಕಟುವಾಕ್ಯಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ?

" ತೀಯಿನಾರ್ ಶುಟ್ಟಪುಣ್ಣುಳ್ಳಾರುಮಾರಾತೇ ನಾವಿನಾರ್ ಶುಟ್ಟವಡು " ಎನ್ನುವ ಮಾತನ್ನು ಇಲ್ಲಿ ನೋಡತಕ್ಕದ್ದು.

ಈ ರೀತಿ ಇದ್ದರೂ ಮುಗಿದು ಹೋಗಲಿಲ್ಲ. ಆ ದೇವಿಯು ಅಶೋಕವನದಲ್ಲಿ ಜೀವವನ್ನು ಧರಿಸಿರಲು ಕಾರಣವೇನೆಂದರೆ,

" ನಮಗೆ ಯಜಮಾನನಾದ ರಾಮನು ನನ್ನಲ್ಲಿ ಮಿತಿಮೀರಿದ ಪ್ರೀತಿಯುಳ್ಳವನೂ, ಜಗದೇಕ ವೀರನು ಆಗಿರುವುದರಿಂದ ರಾವಣನನ್ನು ಕೊಲ್ಲುವುದು ಸತ್ಯ. ಕೊಂದು ನನ್ನನ್ನು ಹುಡುಕುವಲ್ಲಿ, 'ಸೀತೆಯು ಮರಣಹೊಂದಿ ಕೆಲವು ತಿಂಗಳುಗಳಾಯಿತಲ್ಲ" ಎಂದರೆ, ತಣ್ಣೀರಿನ ಚಪ್ಪರದಲ್ಲಿ ಬಂದು, ಒಡೆದು ಉರುಳಿ ಬಿದ್ದಿರುವ ತಣ್ಣೀರಿನ ಮಡಕೆಯನ್ನು ನೋಡಿ ತಪಿಸುವ ಬಾಯಾರಿದವನ ಹಾಗೆ ಆ ಪ್ರಭುವಿನ ಸ್ಥಿತಿಯಾಗುತ್ತದೆ. ಆ ಪರಮಾತ್ಮನಿಗಾಗಿಯೇ ನಾವು ಜೀವಿಸಿರುವುದು ನಮ್ಮ ಸ್ಥಿತಿಗೆ ತಕ್ಕ ಕಾರ್ಯವಲ್ಲವೇ ? " ಎಂದು ಇದ್ದದ್ದೇ ಕಾರಣವಾಗಿದೆ.

ಇಲ್ಲಿ ಶ್ರೀ ರಾಮನ ಮನಸ್ಸಿನ ಅಭಿಪ್ರಾಯವನ್ನು ಅನುಸರಿಸಿ ಇರುವ ಸ್ಥಿತಿಯನ್ನು ನಾವು ಚೆನ್ನಾಗಿ ತಿಳಿಯಬಹುದು.

ಈ ಅರ್ಥವನ್ನು ನಾವು ಎರಡನೆಯ ವಿಯೋಗ ಮತ್ತು ಆ ವಿಯೋಗದಲ್ಲಿ ನಡೆದ ಕಾರ್ಯಗಳನ್ನು ನೋಡಿದ್ದೇ ಆದರೆ, ಒಂದು ಸಂದೇಹವುಂಟಾಗಬಹುದು.

ಎರಡನೆಯ ವಿಯೋಗವು ಯಾವುದು ? ಲೋಕಾಪವಾದವನ್ನು ಹೋಗಲಾಡಿಸಿ

ಕೊಳ್ಳುವುದಕ್ಕಾಗಿ ಶ್ರೀ ರಾಮನು ಸೀತಾದೇವಿಯನ್ನು ಕಾಡಿಗೆ ಕಳುಹಿಸಿ ಬಿಟ್ಟಿದ್ದು ಇದನ್ನು ನೋಡಿದರೆ ಸೀತಾದೇವಿಯಲ್ಲಿ ಶ್ರೀ ರಾಮನಿಗೆ ಎಳ್ಳಷ್ಟೂ ಪ್ರೇಮವಿಲ್ಲ ಎನ್ನುವುದು ತಿಳಿಯುತ್ತದೆ. ಆ ದೇವಿಯೂ ತನ್ನ ಜೀವವನ್ನು ಇಟ್ಟುಕೊಂಡಿರುವುದು ಶ್ರೀ ರಾಮನಿಗಾಗಿಯೇ ಎಂಬುದು "ನಹಿಮೇ ಜೀವಿತೇನಾರ್ಥಃ" ಎಂದು ಅವಳು ಹೇಳಿರುವುದರಿಂದಲೇ ತಿಳಿಯುತ್ತದೆ.

ಅಶೋಕವನದಲ್ಲಿ ಇರುವ ಸಮಯದಲ್ಲಿ, ರಾವಣನಿಂದಲೂ, ರಾಕ್ಷಸಿಯರಿಂದಲೂ ಹೇಳಲಾರದ ದುಃಖವನ್ನು ಅನುಭವಿಸಿದ್ದರೂ ಶ್ರೀ ರಾಮನಿಗಾಗಿಯೇ ಪ್ರಾಣಧಾರಣೆ ಮಾಡಿದ್ದು ?

ಈ ಸಂದೇಹಕ್ಕೆ ಪರಿಹಾರ ಯಾವುದು? ಅತ್ಯಂತ ವ್ಯಾಕುಲಿತನಾಗಿದ್ದ ಲಕ್ಷ್ಮಣನು ಗಂಗಾತೀರವನ್ನು ಸೇರಿದ ನಂತರ ದೇವಿಯ ಸನ್ನಿಧಾನದಲ್ಲಿ, ಶ್ರೀ ರಾಮನು ಕಾಡಿಗೆ ಕಳುಹಿಸಿದ್ದಕ್ಕೆ ಫಲವಾಗಿ ಲೋಕಾಪವಾದ ಪರಿಹಾರವನ್ನು ತಿಳುಹಿಸಿದನು. ಅದನ್ನು ಕೇಳಿದ ದೇವಿಯು, ಅತ್ಯಧಿಕ ವ್ಯಾಕುಲ ಚಿತ್ತಳಾಗಿ ಬಿಕ್ಕಳಿಸಿ ಹೇಳುವಾಗ ತಿಳಿಸಿದ ಮಾತುಗಳಲ್ಲಿ ಒಂದು.

"ನಖಲ್ವದ್ಯೈವ ಸೌಮಿತ್ರೇ ಜೀವಿತಂ ಜಾಹ್ನವೀ ಜಲೇ ।
ತ್ಯಜೇಯಂ ರಾಘವಂ ವಂಶೇ ಭರ್ತುರ್ಮಾಪರಿಹಾಸ್ಯತಿ ॥"

ಇದರ ತಾತ್ಪರ್ಯ :-

"ಲಕ್ಷ್ಮಣನೇ ! ಶ್ರೀ ರಾಮಚಂದ್ರನನ್ನು ತೋರಿಸುವ ರಘು ಸಂತಾನವು ಆ ರಾಮ ಚಂದ್ರನ ವಂಶದಲ್ಲಿ ಇಲ್ಲದೆ ಅಳಿದು ಹೋಗ ಬಾರದೆಂಬುದಕ್ಕಾಗಿ. ಇಲ್ಲವಾದಲ್ಲಿ ಗಂಗಾ ಜಲದಲ್ಲಿ ಈಗಲೇ ಪ್ರಾಣವನ್ನು ಬಿಡಲು ತಕ್ಕವಳಾಗಿದ್ದೇನೆ."

ಈ ಅರ್ಥವನ್ನು ನೋಡುವಲ್ಲಿ, ಶ್ರೀ ರಾಮನಿಗೋಸ್ಕರ ಜೀವವನ್ನು ಧರಿಸ ಬೇಕಾಗಿಲ್ಲ. ಆ ಪ್ರಭುವು ಇಟ್ಟಿರುವ ಸಂತತಿಗೋಸ್ಕರ ಆ ದೇವಿಯು ಈ ವಿಯೋಗದಲ್ಲಿ ಜೀವವನ್ನು ಧರಿಸಿದ್ದಾಗಿ ತಿಳಿಯುತ್ತದೆ. ಇದನ್ನು ನೋಡುವವರಿಗೆ ಮೇಲೆ ಹೇಳಿರುವ ಸಂದೇಹಕ್ಕೆ ಪರಿಹಾರ ಚೆನ್ನಾಗಿ ತಿಳಿಯುತ್ತದೆ.

ಇಲ್ಲಿ ದುಃಖದ ಹೊರೆಯಿಂದ ಮರಣವೊದಗಿದರೂ ವ್ಯಾಕೃತಿಯನ್ನು ಹೊಂದದೆ ಭಗವಂತನ ನೆನಪನ್ನೇ ಅನುಸರಿಸಿ ತನ್ನ ಪ್ರಾಣವನ್ನು ನೋಡಿ ಕೊಂಡಿರುವಂತಹ ಪಾರ ತಂತ್ರ್ಯವೇ ಪ್ರಕಾಶಿಸುತ್ತದೆ.

ಎನ್ನುವ ಮಣವಾಳ ಮಾಮುನಿಗಳ ಅಭಿಪ್ರಾಯವನ್ನು ತಿಳಿಯತಕ್ಕದ್ದು. ಈ ಮಾತಿನಲ್ಲಿ ಹೇಳಿರುವ "ಪೆರುಮಾಳ್ ಸನ್ನವೆ ಪಿನ್‌ಶೆನ್ರು" ಎನ್ನುವುದಕ್ಕೆ ಕುಶ ಲವರುಗಳ ಅವತಾರವನ್ನು ಶ್ರೀ ರಾಮನು ಇಷ್ಟ ಪಟ್ಟಿದ್ದನು. ಆದ್ದರಿಂದ, ಈಗ ನಾನು ಪ್ರಾಣಧಾರಣೆ ಮಾಡಿರಬೇಕಾದದ್ದು ಆ ಭಗವಂತನಿಗೆ ಇಷ್ಟ ಎನ್ನುವ ಅಭಿ ಪ್ರಾಯವನ್ನು, "ಅಪತ್ಯಲಾಭೋ ವೈದೇಹಿ" ಎನ್ನುವ ಆ ಪ್ರಭುವಿನ ಮಾತನ್ನು

ಅದಕ್ಕೆ ಮೂಲವಾದ ಅವನ ಮನಸ್ಸಿನ ಇಚ್ಛೆಯನ್ನು ಅನುಸರಿಸಿ ಪುರುಷಾರ್ಥವನ್ನು ನಡೆದಿದ್ದು ಎಂಬುದೇ ಅರ್ಥ.

ಇನ್ನು, ಇಲ್ಲಿ ಆ ದೇವಿಯು ಕುಶ-ಲವರುಗಳು ಜನ್ಮವೆತ್ತಿದ ಅನಂತರವೂ, ಜೀವಿಸಿರುವುದಕ್ಕೆ ಕಾರಣ ಯಾವುದು ? ಎನ್ನುವ ಪ್ರಶ್ನೆ ಕೆಲವರಿಗೆ ಉಂಟಾಗಬಹುದು. ಶ್ರೀ ರಾಮನಿಗಾಗಿಯೋ ಅವನ ಸಾನಿಧ್ಯಕ್ಕಾಗಿಯೋ ಆ ದೇವಿಯು ಜೀವಿಸಿರಬೇಕಾಗಿರಲಿಲ್ಲ.

ಈ ಪ್ರಶ್ನೆಗೆ ಉತ್ತರ ಕೇಳಬಂತೆ—"ಯಜಮಾನನು ಯಜಮಾನಿಗೆ ಕೊಡುವ ಹಿರಿಮೆಯನ್ನು, ಆ ಶ್ರೇಷ್ಠತೆಯನ್ನು ಪಡೆಯಲು ಕಾರಣವಾಗಿ ಆ ಯಜಮಾನನಿಂದ ಉಪಚರಿಸಲು ತಕ್ಕವನಾಗಿಯೂ ಪ್ರಶಂಸಿಸಲ್ಪಡುವವನಾಗಿಯೂ ಇರುವುದರಿಂದ ಪ್ರಾಣವನ್ನೋ, ಪ್ರಾಣಕ್ಕಿಂತಲೂ ಹಿರಿದಾದುದನ್ನೋ, ಬಿಟ್ಟಾದರೂ ಯಜಮಾನನ ಇಚ್ಛೆಯನ್ನು ನೆರವೇರಿಸುವಳಂತೆ ಯಜಮಾನಿ."

ಈ ರೀತಿಯಲ್ಲಿ "ಪತಿರ್ಹಿ ದೈವತಂ ನಾರ್ಯಾಃ ಪತಿರ್ಬಂಧುಃ ಪತಿರ್ಗತಿಃ । ಪ್ರಾಣೈರಪಿ ಪ್ರಿಯಂ ತಸ್ಮಾತ್, ಭರ್ತುಃ ಕಾರ್ಯಂ ವಿಶೇಷತಃ ॥"

ಇಲ್ಲಿ "ಪರರಿಗಾಗಿ ಪ್ರಾಣವನ್ನು ಧರಿಸಿರಬೇಕು. ಪರತಂತ್ರರಿಗೆ ಮೃತ್ಯುವು ಇಷ್ಟವಿದ್ದರೂ ಮಾಡಲು ಕೂಡದು." ಎನ್ನುವುದನ್ನು ತಿಳಿಯಬೇಕು.

ಸೀತಾದೇವಿಯು ಕುಶ-ಲವರು ಹುಟ್ಟಿದ ನಂತರ ಶ್ರೀ ರಾಮನ ಸಾನಿಧ್ಯಕ್ಕಾಗಿ ಜೀವ ಧರಿಸಿರಬೇಕಾಗಿಲ್ಲ ಎಂದರೂ ಆ ದೇವಿಯು ತನ್ನ ಯೋಗ್ಯತೆಗೆ ತಕ್ಕ, ಮೇಲೆ ಹೇಳಿರುವ ರೀತಿಯಲ್ಲಿ ಬದುಕಿಯೂ ಸಾವಿನಲ್ಲೇ ಇದ್ದಳೆಂಬುದನ್ನು ನಾವು ತಿಳಿಯಬೇಕು. ಈ ರೀತಿ ಇದ್ದುದಕ್ಕೆ ಕಾರಣ ಶ್ರೀ ರಾಮನ ಮನೋಭಿಪ್ರಾಯವೇ ಆಗಿದ್ದಿತು. ಇಲ್ಲಿ ಮನೋಭಿಪ್ರಾಯವೆನ್ನುವುದು ಯಾವುದು ? ಎಂದರೆ ಸೀತಾದೇವಿಯು ಪತಿವ್ರತೆ ಮಾತ್ರವೇ ಅಲ್ಲದೆ, ಮತ್ತು ಅನೇಕ ಸದ್ಗುಣಗಳುಳ್ಳವಳೆಂದೂ ಹನುಮಂತನು ಸೀತೆಯನ್ನು ಬಹಳವಾಗಿ ಪ್ರಶಂಸಿಸಿರುತ್ತಾನೆ.

ಈ ದುಷ್ಟ ಪ್ರಸಂಗವು ತನ್ನ ಯೋಗ್ಯತೆಗೆ ತಕ್ಕುದಾದ ದೋಷವನ್ನು ಹೇಳಿಬಿಟ್ಟಿತು. ಆದರೂ, ದಿನಗಳು ಕಳೆಯುತ್ತಾ, ಕಳೆಯುತ್ತಾ ಈ ದೋಷಭರಿತವಾದ ಜಗತ್ತಿಗೇ, ಆ ದೇವಿಯು ಕಿಂಚಿತ್ತೂ ದೋಷವುಳ್ಳವಳಲ್ಲ ಎಂಬ ಪ್ರಭಾವವು ಚೆನ್ನಾಗಿ ತಿಳಿಯುತ್ತದೆ. ಆ ಸಮಯದಲ್ಲಿ ಮಕ್ಕಳೊಂದಿಗೆ ಆ ದೇವಿಯನ್ನು ಕರೆದುಕೊಳ್ಳುವುದೇ ನಮಗೆ ಒಳ್ಳೆಯದು." ಆದ್ದರಿಂದ ಆ ದೇವಿಯು ಈಗ ಪ್ರಾಣತ್ಯಾಗ ಮಾಡಬಾರದು" ಎನ್ನುವುದೇ ಅಭಿಪ್ರಾಯ. ಇದಕ್ಕೆ ತಕ್ಕ ಪ್ರಮಾಣ ಯಾವುದು ?

ಎಂದರೆ, ಮೂರನೆಯ ವಿಶ್ಲೇಷ ಉಂಟಾಗುವಾಗ ಆ ವಿಯೋಗವನ್ನು ಕುರಿತು ಹೇಳುವ ಸ್ಥಳದಲ್ಲಿ ವಾಲ್ಮೀಕಿ ಮುನಿಯು, ಶ್ರೀ ರಾಮನ ಸಾನಿಧ್ಯಕ್ಕೆ ಬಂದು ಸಂಕೋಚದಿಂದ ನಿಲ್ಲುವ ಸೀತಾದೇವಿಯನ್ನು ಕುರಿತು, "ಇವಳು ಕಿಂಚಿತ್ತೂ ದೋಷವಿಲ್ಲದ ಒಳ್ಳೆಯ ಸ್ವಭಾವವುಳ್ಳವಳು, ಸ್ವಲ್ಪ ಮಾತ್ರವೂ ಪಾಪವಿಲ್ಲದವಳು ; ಶ್ರೀ ರಾಮನನ್ನ

ಲ್ಲದೆ ಮತ್ತೊಬ್ಬರನ್ನು ಮನಸ್ಸಿನಲ್ಲೂ ಚಿಂತಿಸಿಲ್ಲ, ಆ ಪ್ರಭುವನ್ನೇ ದೈವವನ್ನಾಗಿ ನೆನೆದಿರುವವಳು.'' ''ಇಯಂ ಶುದ್ಧ ಸಮಾಚಾರಾ ಅಪಾಪಾ ಪತಿ ದೇವಾ '' ಎಂದು ಹೇಳಿರುವುದನ್ನು, ಶ್ರೀ ರಾಮಚಂದ್ರನೂ.—

'' ಸ್ವಲ್ಪ ದೌರಾತ್ಮ್ಯವೂ ದೋಷವಿಲ್ಲದವಳು ಈ ದೇವಿ ಎಂಬುದನ್ನು ತಿಳಿದಿರುವೆನು. ''ಅಪಾಪೇತ್ಯಭಿಜಾನತಾ'' ಋಷಿವರ್ಯರಾದ ತಾವು ಹೇಳಿರುವುದೇ ಸಾಕು. (ಏತದೇವಂ ಮಹಾ ಭಾಗ ಯಥಾ ವದಸಿ ಧರ್ಮ ವಿತ್.) ಆದರೂ ಸಹ ಈ ಗುಂಪಿನಲ್ಲಿ ಪ್ರಪಂಚವು ನಂಬುವ ಹಾಗೆ ತನ್ನ ಪಾತಿವ್ರತ್ಯವನ್ನು ಪ್ರಕಟಪಡಿಸಬೇಕು '' ಎಂದು ಹೇಳಿರುವುದನ್ನು ನೋಡುವಲ್ಲಿ, ಮೇಲೆ ಹೇಳಿರುವ ಅಭಿಪ್ರಾಯ ಸ್ಪಷ್ಟವಾಗುತ್ತದೆ. ಪರತಂತ್ರ ಜನ್ಮದಲ್ಲಿ ಹುಟ್ಟಿದವರಿಗೆ ನೆನೆಸಿದಾಗ ಮರಣವುಂಟಾಗುತ್ತದೆಯೋ ? ಹಾಗೆ ನೆನೆಸಿದಾಗ ಮರಣ ಹೊಂದಿದರೆ, ಪಾರತಂತ್ರ್ಯವಾಗಿರುವ ಸ್ಥಿತಿ ದೊರಕುವುದೋ ? ಎಂಬ ಅಭಿಪ್ರಾಯವುಳ್ಳ '' ಮಾಯಾಮ್ ವಕ್ಕಿಯಾರಿಯೋಸ್‌ಪಲ್ ಪಿಸ್ಸೈಯೇನ್ ಪೇಟ್ ಪಿರಂದೇ'' ಎನ್ನುವ ಆಳ್ವಾರ್ ಸಿರಿ ನುಡಿಯನ್ನು ಇಲ್ಲಿ ಕಾಣಬಹುದು. ಇದುವರೆವಿಗೂ ಹೇಳಿರುವ ಭರತ, ಸೀತಾದೇವಿ ಇವರಿಬ್ಬರ ಚರಿತ್ರೆಯನ್ನು ನಾವು ಪರೀಕ್ಷಿಸಿಟ್ಟು ಚೆನ್ನಾಗಿ ನೋಡುವಲ್ಲಿ ; ಶ್ರೀ ರಾಮನಿಗೆ ರಾಜ್ಯವೂ, ಭರತನೂ, ಸೀತಾದೇವಿಯೂ ಈ ಜೀವನೂ ತನ್ನ ವಸ್ತುವನ್ನಾಗಿ ತಿಳಿದಿರುವುದು ಆ ಭಗವಂತನಿಗೇ ಸೇರಿದ ಸ್ವಂತ ವಸ್ತುವೇ ಆಗಿದೆ, ಎನ್ನುವುದು ಚೆನ್ನಾಗಿ ತಿಳಿಯುತ್ತದೆ. ಈ ರೀತಿ ಜೀವನ ನಿಜವಾದ ಸ್ಥಿತಿಯನ್ನು ರಾಮಾಯಣದಲ್ಲಿ ಕಂಡೆವು. ಇನ್ನು '' ಉಪೇಯ '' ಎಂಬುದರ ಫಲವನ್ನು ಕುರಿತು ವಿಚಾರ ಮಾಡೋಣ.

'' ವೇದಾಂತವೂ ಉಪೇಯವೂ ''

ಈ ಪ್ರಪಂಚಕ್ಕೆ ಪುನಃ ಬಾರದಂತಹ ಮೋಕ್ಷ ಸಾಮ್ರಾಜ್ಯವನ್ನು ನೀಡುವ ಮಾರ್ಗದಲ್ಲಿ ಹೋಗಿ, ಶ್ರೀ ವೈಕುಂಠದಲ್ಲಿ ಪರಮಾತ್ಮನನ್ನು ಸೇರಿ ಅವನನ್ನು, ಅವನ ಶ್ರೇಷ್ಠ ಗುಣಗಳನ್ನು, ದಿವ್ಯಮಂಗಳ ವಿಗ್ರಹವನ್ನು ಪ್ರೀತಿಯಿಂದ ಅನುಭವಿಸಿ, ಆ ಅನುಭವದಿಂದುಂಟಾದ, ಆನಂದ ಹೆಚ್ಚಲು ಅವನ ಮನಸಂತೋಷವುಂಟಾಗುವ ಹಾಗೆ ಕೈಂಕರ್ಯವನ್ನು ಮಾಡಿ ಬಾಳುವುದು, ಈ ರೀತಿಯ ಜೀವನವೇ '' ಉಪೇಯ '' ಎಂಬ ಮೋಕ್ಷ ಸಾಮ್ರಾಜ್ಯ ಎಂದು ಜ್ಞಾನಿಗಳು ಹೇಳುವರು.

ಇಲ್ಲಿ, ಭಗವಂತನನ್ನು ಭಜನೆ ಮಾಡುವವರು, ಮೋಕ್ಷ ಸಾಮ್ರಾಜ್ಯಕ್ಕೆ ಹೋಗುವವರನ್ನು ಕಂಡು, ಉಪಚರಿಸಿ ಮಾರ್ಗದರ್ಶಕ ದೈವವನ್ನು ಅರ್ಚಿಸಿ ಸಿದ್ಧಿಯನ್ನು ಪಡೆಯುತ್ತಾರೆ ಎನ್ನುವ ಸಾರಾಂಶವುಳ್ಳ '' ತೇಽರ್ಚಿಷಮಭಿಸಂಭವಂತಿ '' ಎನ್ನುವ ವಾಕ್ಯವೂ '' ಭಗವಂತನನ್ನು ಭಜಿಸುವವರು ಆ ಭಗವಂತನನ್ನೇ ಪಡೆಯುವರು '' ಎಂಬ ತಾತ್ಪರ್ಯವುಳ್ಳ '' ಬ್ರಹ್ಮ ವಿದಾಪ್ನೋತಿ ಪರಮ್ '' ಎನ್ನುವ ವೇದಾಂತ ವಾಕ್ಯವೂ '' ಅತ್ಯಧಿಕ ವೈಭವಯುಕ್ತನಾದ ಭಗವಂತನನ್ನು ಪಡೆದು, ಅನುಭವಿಸಿ, ಆನಂದವನ್ನು

ಪಡೆಯೋಣ " ಪರಮಪದದಲ್ಲಿ ಮುಕ್ತನು ಪರಮಾತ್ಮನೊಂದಿಗೆ ಆತನ ಶ್ರೇಷ್ಠ ಕಲ್ಯಾಣ ಗುಣಗಳನ್ನು ಅನುಭವಿಸುತ್ತಾನೆ. ಯಾವತ್ತಿಗೂ ಆ ಪರಮಪುರುಷನ ದಿವ್ಯಮಂಗಳ ವಿಗ್ರಹವನ್ನು ನೇತ್ರಾನಂದಕರವಾಗಿ ದರ್ಶನ ಮಾಡುವಂತಹವರು ನಿತ್ಯರು " ಎಂಬ ತಾತ್ಪರ್ಯವನ್ನು ತೋರಿಸುವ—

" ರಸಂ ಹ್ಯೇವಾಯಂ ಲಬ್ಧ್ವಾನಂದೀ ಭವತಿ "

" ಪರಮೇ ವ್ಯೋಮನ್ ಸೋಽಶ್ನುತೆ ಸರ್ವಾನ್ ಕಾಮಾನ್ ಸಹ ಬ್ರಹ್ಮಣಾ ವಿಪಶ್ಚಿತಾ । ". " ಸದಾಪಶ್ಯಂತಿ ಸೂರಯಃ " ಎನ್ನುವ ವೇದಾಂತ ವಾಕ್ಯಗಳನ್ನು ಇಲ್ಲಿ ಕಾಣತಕ್ಕದ್ದು. ಆದರೆ ಪರಮ ಪುರುಷನ ಮನಸಂತೋಷ ಪಡುವಂತೆ ಕೈಂಕರ್ಯ ಮಾಡಿ ಜೀವಿಸುವುದೇ ಈ ಚೇತನನಿಗೆ ಹಿರಿದಾದ ಧರ್ಮ ಎನ್ನುವುದಕ್ಕೆ ಸೂಕ್ತ ಪ್ರಮಾಣ ಯಾವುದೆಂದರೆ :----

ಈ ಪ್ರಶ್ನೆಗೆ ಉತ್ತರ ಕೇಳಬಂದಂತೆ —" ಜೀವನು ಕೈ, ಕಾಲು ಮೊದಲಾದ ಅವಯವಗಳೊಂದಿಗೆ ಕೂಡಿರುವ ಶರೀರವನ್ನು ಆಧಾರವಾಗಿ ಹೊಂದಿ, ಆ ಅವಯವವು ಮಾಡುವ ಸೇವೆಯನ್ನು ಪಡೆದು ಸಂತೋಷ ಪಡುವ ಹಾಗೆ, ಆ ಜೀವನು ಆತ್ಮಾ ಆ ಅವಯವ ಶರೀರ " ಎನ್ನುವುದು ಹೇಗೋ ಹಾಗೆಯೇ " ಪರಮಾತ್ಮನು ಜೀವನನ್ನು ಹೊತ್ತು, ಹೊಂದಿ, ಆ ಜೀವನು ಮಾಡುವ ಕೈಂಕರ್ಯವನ್ನು ಪಡೆದು ಸಂತುಷ್ಟನಾಗುವ ಹಾಗೆ ಆ ಪರಮಾತ್ಮಾ ಆತ್ಮಾ ; ಆ ಜೀವನು ಶರೀರ " ಎನ್ನುವುದನ್ನು ನಾವು ತಿಳಿಯಬಹುದು. ಜೀವನಿಗೂ, ಆತ್ಮನಿಗೂ ಅವನೇ ಆತ್ಮಾ.

ಇಲ್ಲಿ " ಯಸ್ಯಾತ್ಮಾ ಶರೀರಮ್ " ಎನ್ನುವ ವೇದಾಂತ ವಾಕ್ಯವನ್ನು ಪ್ರಮಾಣ ವಾಕ್ಯವನ್ನಾಗಿ ಕಾಣತಕ್ಕದ್ದು. ಇದರಿಂದ ತಿಳಿಯಬೇಕಾದ ಸಾರಾಂಶವೇನು ? ಎಂದರೆ, ಈ ಶ್ರುತಿ " ಜೀವನು ಪರಮ ಪುರುಷನಿಗೆ ಶರೀರ " ಎಂದು ಹೇಳಿದಾಗಲೇ, " ಈ ಚೇತನನಿಗೆ ಶ್ರೇಷ್ಠವಾದ ಹಿರಿಮೆ ಭಗವಂತನಿಗೆ ಕೈಂಕರ್ಯವನ್ನು ಮಾಡುವುದೇ " ಎನ್ನುವುದನ್ನು ಹೇಳಿದೆ. ಆದರೆ, ಈ ದಾಸ್ಯ ವೃತ್ತಿ ಪ್ರಾಪಂಚಿಕ ರೀತಿಯಲ್ಲಿ ಕಷ್ಟವನ್ನುಂಟು ಮಾಡುವುದಾಗಿದ್ದರೂ, " ಮತ್ತೊಬ್ಬರಿಗೆ ಸೇವೆ ಮಾಡುವುದು ಕಷ್ಟಕರವಾಗಿರುವುದು ", ಎಂದು ಶಾಸ್ತ್ರಗಳಲ್ಲಿ ಹೇಳಿರುವುದರಿಂದಲೂ, ಮನು ಮುಂತಾದ ಹಿರಿಯರು ; " ಕೈಂಕರ್ಯದಲ್ಲಿ ದಾಸ್ಯವೃತ್ತಿ ಕೀಳ್ದರ್ಜೆಯದು ; ದುಃಖದಿಂದ ಕೂಡಿರುವುದು " ಎಂದು ಸ್ಪಷ್ಟವಾಗಿ ಪ್ರಕಟ ಪಡಿಸಿರುತ್ತಾರೆ.

ಸತ್ಯತೆಯು ಈ ರೀತಿ ಇರಲು, " ದುಃಖವೆಂಬುದು ಲವಲೇಶವು ಇಲ್ಲದೆ ಮಹದಾನಂದವನ್ನೇ ಅನುಭವಿಸಿಕೊಂಡಿರುವ ಮೋಕ್ಷದಶೆಯಲ್ಲಿಯೂ, ಜೀವನಿಗೆ ಈ ಶರಣಾಗತಿ ಕೈಂಕರ್ಯವುಂಟು " ಎಂದು ಹೇಳುತ್ತದೆ ಪುರುಷಾರ್ಥ. ಇದು ಸಮರ್ಪಕವಾಗುವುದು ಹೇಗೆ ? ಎಂಬ ಪ್ರಶ್ನೆ ಇಲ್ಲಿ ಉಂಟಾಗುತ್ತದೆ.

ಈ ಪ್ರಶ್ನೆಗೆ ಉತ್ತರ ಕೇಳಬಂದಂತೆ :–

ಶರಣಾಗತಿ ಕೈಂಕರ್ಯ ಎಲ್ಲಾ ಕಡೆಯಲ್ಲಿಯೂ ದಾಸ್ಯವೃತ್ತಿ ಕಷ್ಟವನ್ನೇ ಕೊಡುವಂತಹುದಾಗಿದೆ ಎಂಬುದಿಲ್ಲ.

"ಕಾಳಿದಾಸನು ತಾನು ಪ್ರೀತಿಸಿದ ಬೆಲೆವೆಣ್ಣಿಗೆ ತಣ್ಣೀರನ್ನು ತಂದು ಕೊಡುವುದು ಮುಂತಾದ ಕೆಲಸಗಳನ್ನು ಸಂತೋಷ, ಸಂಭ್ರಮಗಳೊಂದಿಗೆ ಮಾಡಿಕೊಂಡು ಬಂದನು". ಎಂಬುದು ಚರಿತ್ರಾರ್ಹವಾದ ಸಂಗತಿ. ಅದರ ಹಾಗೆಯೇ ಪರಮಾತ್ಮನಿಗೆ ಮಾಡುವ ಸೇವೆಯೂ ಪ್ರಿಯವಾಗಿಯೇ ಇರುತ್ತದೆ.

ಕಾಳಿದಾಸನು ತಾನು ಪ್ರೀತಿಸಿದ ವೇಶ್ಯೆಯ ಸೌಂದರ್ಯ ಮುಂತಾದ ಗುಣಗಳಲ್ಲಿ ಮಗ್ನನಾಗಿ, ಸಂತೋಷದಿಂದ, ಅಲ್ಲಿ ಸೇವೆ ಮಾಡಿದನೆಂದರೆ ಆ ಸೇವೆಯು ರುಚಿಕರವಾಗಿದ್ದಿತೆನ್ನಬಹುದು.

ಇಲ್ಲಿ ಭಗವಂತನಿಗೆ ಸೌಂದರ್ಯ ಮೊದಲಾದ ಗುಣಗಳುಂಟೋ ? ನಿರ್ಗುಣನೆಂದು ವೇದಾಂತಗಳಲ್ಲಿ ಹೇಳಲ್ಪಟ್ಟಿದೆಯಲ್ಲ, ಹೀಗೆ ಗುಣರಹಿತನಾದ ಆ ಭಗವಂತನಲ್ಲಿ ಈ ಜೀವನ ಹೃದಯವು ಇಷ್ಟವುಳ್ಳದ್ದಾಗಿರುವುದೇ ? ಇಷ್ಟಪಡುವುದಿಲ್ಲ. ಮನಸ್ಸಿಗೆ ಆಕರ್ಷಣವಿಲ್ಲದ ಸ್ಥಳದಲ್ಲಿ ಪ್ರೇಮವುಂಟಾಗುವುದು ಹೇಗೆ ? ಎಂದು ಕೆಲವರು ಅಭಿಪ್ರಾಯ ಪಡಬಹುದು.

ಭಗವಂತನು ನಿರ್ಗುಣನೆಂದು ಹೇಳುವ ವೇದಾಂತ ವಾಕ್ಯಕ್ಕೆ, "ಗುಣವೊಂದೂ ಇಲ್ಲದವನೆಂದು ಅಭಿಪ್ರಾಯವಲ್ಲ ;" ಮತ್ತೆ ಇನ್ನೇನು ಅಭಿಪ್ರಾಯವೋ ಎಂದರೆ, "ಕೆಟ್ಟಗುಣಗಳು ಕೊಂಚವೂ ಇಲ್ಲದವನು" ಎಂಬುದೇ ತಾತ್ಪರ್ಯ.

"ಶ್ರೇಷ್ಠ ಗುಣಗಳು ಇಲ್ಲದವನೆಂದು ತಿಳಿದಿದ್ದೇ ಆದರೆ ಜ್ಞಾನ, ಶಕ್ತಿ ಮುಂತಾದ ಅಸಾಮಾನ್ಯವಾದ ಗುಣಗಳುಳ್ಳವನೆಂದು ಪ್ರಸಿದ್ಧಿ ಪಡೆದಿರುವವನಂತೆ ಪರಮಾತ್ಮ" ಎಂಬ ತಾತ್ಪರ್ಯವುಳ್ಳ—

"ಯಸ್ಸರ್ವಜ್ಞಃ" "ಪರಾಸ್ಯಶಕ್ತಿಃ" ಎನ್ನುವ ಅನೇಕ ವೇದಾಂತ ವಾಕ್ಯಗಳೊಡನೆ ವಿರೋಧವುಂಟಾಗುತ್ತದೆ. ಈ ರೀತಿಯಿಂದ ಶ್ರೇಷ್ಠ ಗುಣ ಹೊಂದಿ ಇರುವವನು ಎನ್ನುವ ವೇದಾಂತ ವಾಕ್ಯ ಸರಿ ಹೊಂದುವ ರೀತಿಯಲ್ಲಿಯೂ, ಈ ಜೀವನು ಭಗವಂತನ ಶ್ರೇಷ್ಠ ಗುಣಗಳಲ್ಲಿ ಆಕರ್ಷಿತನಾಗಿ, ಪ್ರೀತಿಸಿ, ಕೈಂಕರ್ಯ, ದಾಸ್ಯವೃತ್ತಿಯನ್ನು ಪಡೆಯುವುದರಿಂದಲೂ, ಇಲ್ಲಿಯೂ ಸೇವಾ ಕೈಂಕರ್ಯ ಹಿತಕರವಾಗಿಯೇ ಇದೆ ಎನ್ನುವುದರಲ್ಲಿ ಅಡ್ಡಿ ಏನೂ ಇಲ್ಲ.

ಈವರೆವಿಗೂ ಹೇಳಿದ್ದರಲ್ಲಿ ವೇದಾಂತ ವಾಕ್ಯಗಳನ್ನು ಅನುಸರಿಸಿಯೇ ಪರಮಪುರುಷನ ಮನಸ್ಸಂತೋಷ ಪಡಿಸುವ ಹಾಗೆ ಕೈಂಕರ್ಯ ಮಾಡುವುದೇ ಮೋಕ್ಷ ಪುರುಷಾರ್ಥ ಎಂಬುವನ್ನು ತಿಳಿದೆವು.

ಇನ್ನು, "ಬ್ರಹ್ಮವೇದ ಬ್ರಹ್ಮೈವ ಭವತಿ" ಎಂಬ ಬೇರೊಂದು ವೇದಾಂತ ವಾಕ್ಯವನ್ನು, ಆ ವಾಕ್ಯದಲ್ಲಿ ಎದ್ದು ಕಾಣುವ ತಾತ್ಪರ್ಯಾರ್ಥವನ್ನು ನೋಡೋಣ.

ಒಬ್ಬನು ಭ್ರಮೆಯಿಂದ ಕಪ್ಪೆಚಿಪ್ಪನ್ನು ಅದರ ನಿಜಸ್ಥಿತಿ ತಿಳಿಯದೆ ಬೆಳ್ಳಿ

ಎಂದು ತಿಳಿಯುತ್ತಾನೆ. ಆ ತಿಳುವಳಿಕೆ ಭ್ರಮೆ ಎನ್ನಲ್ಪಡುತ್ತದೆ. ಆ ಭ್ರಮೆ ಇರುವಾಗ ಬೆಳ್ಳಿ ಎಂದೇ ನಿಶ್ಚಯಿಸಿ, ಅದನ್ನು ತೆಗೆದುಕೊಳ್ಳಲು ಹೋಗುತ್ತಾನೆ. ಹಾಗೆ, ಅಲ್ಲಿ ಹೋಗಿ ತೆಗೆದುಕೊಂಡು ನೋಡುವಲ್ಲಿ "ಇದು ಬೆಳ್ಳಿಯಲ್ಲ, ಚಿಪ್ಪು" ಎನ್ನುವ ಅದರ ನಿಜಸ್ಥಿತಿಯು ಅರಿವಾಗುತ್ತದೆ. ಆಗ, ಆ ಕಪ್ಪೆಚಿಪ್ಪನ್ನು ಹೊರತು, ಬೆಳ್ಳಿಯೊ ಅಥವಾ ಅದರ ಪ್ರತಿರೂಪವೋ ಇಲ್ಲ; ಕಪ್ಪೆಚಿಪ್ಪು ಮಾತ್ರ ಕಾಣುತ್ತದೆ. ಇದರ ಹಾಗೆಯೇ—

ಬ್ರಹ್ಮವಾಗಿರುವುದು ಭ್ರಮೆಯಿಂದ ಪ್ರಪಂಚವಾಗಿ ತೋರುವುದು. "ತತ್ತ್ವಮ್ ಅಸಿ" ಎಂಬ ವಾಕ್ಯಗಳಿಂದ, "ಆತ್ಮ ಒಂದು ಮಾತ್ರ ಉಂಟು ಎಂಬ ಸತ್ಯತೆಯನ್ನು ನೋಡುವಾಗ, ಈ ಪ್ರಪಂಚವೂ ಅದರ ದೃಶ್ಯಗಳೂ ಒಂದೂ ಇರುವುದಿಲ್ಲ. ಆ ಪರಬ್ರಹ್ಮ ಮಾತ್ರ ಇರುತ್ತದೆ. ಆ ರೀತಿಯಾಗಿ ಆ ಬ್ರಹ್ಮನು ಒಬ್ಬನೇ ಇರುವುದೇ ಮೋಕ್ಷ, ಪುರುಷಾರ್ಥ. ಇದೇ ಮೇಲೆ ಹೇಳಿರುವ ವಾಕ್ಯದಿಂದ ತೋರುವ ತಾತ್ಪರ್ಯ

ಈ ಅಭಿಪ್ರಾಯವನ್ನು ಮೊದಲು ಹೇಳಿದ "ದಾಸ್ಯವೃತ್ತಿ ಕೈಂಕರ್ಯವೇ ಮೋಕ್ಷ ಪುರುಷಾರ್ಥ" ಎಂಬ ಸಾರಾಂಶವನ್ನು ಒಂದಾಗಿ ಸೇರಿಸಿ ನೋಡುವವರಿಗೆ ಸಂದೇಹವುಂಟಾಗುವುದು ಸಹಜವೇ ಆಗಿದೆ.

ಈ ಸಂದೇಹವನ್ನು ಮೀಮಾಂಸಾ ಶಾಸ್ತ್ರವನ್ನನುಸರಿಸಿ ಹೋಗಿಸಿಕೊಳ್ಳುವುದೇ ಆದರೆ, "ಬ್ರಹ್ಮವೇದ ಬ್ರಹ್ಮೈವ ಭವತಿ" ಎನ್ನುವ ವಾಕ್ಯವು, "ಆತ್ಮನ ಸತ್ಯತೆಯನ್ನು ಇರುವ ಹಾಗೆ ತಿಳಿದು ಕೊಳ್ಳುವವನು ಪರಬ್ರಹ್ಮನಾಗಿಯೇ ಆಗುವನು" ಎಂಬ ಅರ್ಥವನ್ನು ತಿಳಿಸುವುದಿಲ್ಲ; ಮತ್ತೆ ಯಾವ ತಾತ್ಪರ್ಯವನ್ನು ಹೇಳುತ್ತದೆ! ಎಂದರೆ, ಮೇಲೆ ಹೇಳಿರುವ ಹಾಗೆ "ನಿಜಸ್ಥಿತಿಯನ್ನು ತಿಳಿದಂತಹವನು, ಮೋಕ್ಷ ದಶೆಯಲ್ಲಿ ಭಗವಂತನೊಂದಿಗೆ ಅತ್ಯಧಿಕ ಸಾರೂಪ್ಯವನ್ನು ಪಡೆದಿರುವನಂತೆ" ಎನ್ನುವ ತಾತ್ಪರ್ಯವನ್ನೇ ಹೇಳುತ್ತದೆ.

ಈ ವಾಕ್ಯಗಳಲ್ಲಿ ಅಡಕವಾಗಿರುವ "ಬ್ರಹ್ಮೈವ ಭವತಿ" ಎನ್ನುವ ಭಾಗದಲ್ಲಿ "ಬ್ರಹ್ಮವಾಗಿ ಆಗುವವನು" ಎನ್ನುವ ಅರ್ಥ ಕಂಡು ಬರುತ್ತದೆ. ಒಂದು ರೀತಿಯಿಂದ ನಿಜವೇ. ಈ ಅರ್ಥವನ್ನೇ ತೆಗೆದು ಕೊಂಡರೆ ಜೀವನಿಗೂ ಪರಮನಿಗೂ ಇರುವ ತಾರತಮ್ಯವನ್ನು ಅನೇಕ ವಿಧವಾಗಿ ಹೇಳುವ ಕೆಲವು ವೇದಾಂತ ವಾಕ್ಯಗಳೊಂದಿಗೆ ವಿರೋಧ ವುಂಟಾಗುತ್ತದೆ.

ಮುಂದೆ ಚೇತನನು ಅರ್ಚಿರಾದಿಮಾರ್ಗದಲ್ಲಿ ಹೋಗುವುದು, ಶ್ರೀ ವೈಕುಂಠದಲ್ಲಿ ಪರಮ ಪುರುಷನನ್ನು ಸೇರುವುದು. ಅವನನ್ನು ಅವನ ಶ್ರೇಷ್ಠ ಕಲ್ಯಾಣ ಗುಣಗಳನ್ನು ಅನುಭವಿಸುವುದು. ಆನಂದವನ್ನು ಪಡೆಯುವುದು, ಕೈಂಕರ್ಯವನ್ನು ಮಾಡುವುದು, ಆ ಪರಮ ಪುರುಷನನ್ನು ಸಂತುಷ್ಟಪಡಿಸುವುದು ಎನ್ನುವ ಸದ್ಗುಣಗಳನ್ನು ತಿಳಿಯಪಡಿಸುವ ಅನೇಕ ವಾಕ್ಯಗಳನ್ನು ನೋಡಿದೆವು.

ಅತ್ಯಂತ ಸಾಮ್ಯವುಳ್ಳ ಎರಡು ವಸ್ತುಗಳನ್ನು ಆ ಸಾಮ್ಯತೆಗನುಸಾರವಾಗಿ ಒಂದಾಗಿ ಹೇಳುವುದು, ಕೆಲಸಮಾಡುವುದು, ನಡವಳಿಕೆಗಳಲ್ಲಿ ಒಂದಾಗಿರುವುದೇ

ಆಗಿರುತ್ತದೆ. ಕಮಲ ಪುಷ್ಪದಂತಿರುವ ನೇತ್ರಗಳನ್ನು ಆ ಪುಷ್ಪವನ್ನಾಗಿಯೇ ಹೇಳುವವರಲ್ಲವೆ ?

"ತಾವಿ ವೈಯಂ ಕೊಂಡ ತಡಂ ಶಾಮರ್ಕ್ಕು" ಎಂದು ಈ ರೀತಿಯನ್ನನುಸರಿಸಿ "ಬ್ರಹ್ಮೈವ ಭವತಿ" ಎನ್ನುವ ಶ್ರುತಿಯಲ್ಲಿ ಮೇಲೆ ಹೇಳಿರುವಂತೆ ಸರಿಯಾದ ಸಾಮ್ಯವಿರುವ ವಸ್ತುವನ್ನು ಕಾಣುವುದೇ ಉಚಿತ.

ಆದರೆ, ಯಜಮಾನ, ಸೇವಕ ಇಬ್ಬರಲ್ಲಿ. ಯಜಮಾನನಿಗೆ ಉತ್ಕರ್ಷ, ಕೀರ್ತಿಯೂ, ಸೇವಕನಿಗೆ ನಿಕೃಷ್ಟತೆಯೂ ಕಾಣಿಸುತ್ತದೆ. ಇದೇ ರೀತಿ, ಯಜಮಾನನಾದ ಭಗವಂತನಿಗೆ ಹಿರಿಮೆಯೂ, ಸೇವಕನಾದ ಜೀವನಿಗೆ ಕಿಂಕರತ್ವವಿದೆ ಎಂದೇ ತಿಳಿದುಕೊಳ್ಳಬೇಕು. ಹಾಗೆಯೇ ಶಾಸ್ತ್ರ ಪ್ರಮಾಣಗಳು ಹೇಳುತ್ತವೆ.

ನಿಜಸ್ಥಿತಿ ಹೀಗಿರುವಲ್ಲಿ, ಪರಮಾತ್ಮನಿಗೂ, ಜೀವಾತ್ಮನಿಗೂ ಅತ್ಯಧಿಕ ಹೊಂದಿಕೆ ಇದೆ ಎಂದು ಹೇಳುವುದು ಹೇಗೆ ಎಂದು ಕೆಲವರು ಕೇಳಬಹುದು. ಒಬ್ಬ ಅರಸನಿಗೆ ಅವನ ಮಗನನ್ನು ಸೇವಕನೆಂದೂ, ಅರಸನೊಂದಿಗೆ ಬಹಳ ಹೊಂದಿಕೊಂಡಿರುವವನು ಅವನ ಮಗ ಎಂದು ಕಾಣುತ್ತೇವೆ. ಇದರ ಹಾಗೆಯೇ ಇಲ್ಲಿ ಬ್ರಹ್ಮನಿಗೆ ಜೀವನು ಸೇವಕನೆಂದು, ಆ ಬ್ರಹ್ಮನೊಂದಿಗೆ ಅತ್ಯಧಿಕ ಹೊಂದಿಕೊಂಡಿರುವವನು ಎಂಬ ಅರ್ಥವುಳ್ಳ "ಅಹಂ ಬ್ರಹ್ಮಾಸ್ಮಿ" ಎಂಬ ವಾಕ್ಯವನ್ನು ಕಾಣಬಹುದು.

ಅರಸನ ಮಗನು ಅರಸನಲ್ಲವೇ ?

ಈ ರೀತಿ ಉಪೇಯವನ್ನು ಸೂಚಿಸುವ ವೇದಾಂತ ವಾಕ್ಯಗಳ ಅರ್ಥವನ್ನು ಮೀಮಾಂಸಾ ಶಾಸ್ತ್ರವನ್ನು ಅನುಸರಿಸಿ, ಸ್ವಲ್ಪವೂ ಸಂದೇಹವಿಲ್ಲದೆ ತಿಳಿದೆವು. ಇನ್ನು, ರಾಮಾಯಣದಲ್ಲಿ ಈ ಉಪೇಯವನ್ನು ಕಾಣುತ್ತೇವೆ.

"ರಾಮಾಯಣವೂ ಉಪೇಯವೂ"

ಮೊದಲಲ್ಲಿ ಪರಮಾತ್ಮನ ಅನುಗ್ರಹಕ್ಕೆ ಪಾತ್ರನಾದವನನ್ನು ಪರಮಾತ್ಮನೆಂದೇ ಶ್ರುತಿ ಸಾರುತ್ತದೆ. ಇದನ್ನು ರಾಮಾಯಣ ಯಾವ ರೀತಿ ತಿಳಿಸುತ್ತದೆ ಎಂಬುದನ್ನು ನೋಡೋಣ.

ಹನುಮಂತನು ಅಶೋಕವನದಲ್ಲಿ ಸೀತಾದೇವಿಗೆ ನಮಸ್ಕರಿಸಿ ನಿಲ್ಲುವಾಗ, ಆ ದೇವಿಯು, ಹನುಮಂತನನ್ನು ಕುರಿತು, ಇವನು ರಾಮ ದೂತನೋ ಅಲ್ಲವೋ? ಎಂದು ಸಂದೇಹಗೊಂಡು, ನಿಜಸ್ಥಿತಿಯನ್ನು ತಿಳಿಯಲು ಅಪೇಕ್ಷಿಸಿ, "ಇಕ್ಷ್ವಾಕು ವಂಶದಲ್ಲಿ ಜನಿಸಿದ ಪುರುಷೋತ್ತಮರುಗಳಾದ ರಾಮ--ಲಕ್ಷ್ಮಣರಿಗೂ, ವಾನರರುಗಳಾದ ಸುಗ್ರೀವ ಮುಂತಾದವರಿಗೂ ಮೈತ್ರಿ ಏರ್ಪಡಲು ಕಾರಣ ಯಾವುದೋ? ಹೇಗೆ ಉಂಟಾಯಿತು ?" ಎಂದು ಪ್ರಶ್ನಿಸಿರುವುದನ್ನು ನಾವು ತಿಳಿದೇ ಇದ್ದೇವೆ.

ಆ ಪ್ರಶ್ನೆಗೆ ಉತ್ತರವನ್ನು ಹೇಳುವಾಗ ಹನುಮಂತನು ಹೇಳಿರುವ ಮಾತುಗಳು,

" ರಾಮ ಸುಗ್ರೀವಯೋರೈಕ್ಯಂ ದೇವ್ಯೇವಂ ಸಮಜಾಯತ " ಎನ್ನುವುದು. ಈ ಮಾತುಗಳ ಅರ್ಥ ಕೆಳಕಂಡಂತೆ ಇದೆ–

" ಪುರುಷೋತ್ತಮನಾದ ರಾಮನು ಅತ್ಯಂತ ಹಿರಿಯನೂ ಆಗಣಿತ ಸದ್ಗುಣಗಳಿಂದ ಕೂಡಿರುವವನು. ಕಪಿಯಾಗಿರುವ ಸುಗ್ರೀವನೋ ಅತ್ಯಂತ ಕೆಳಮಟ್ಟದವನು. ಆ ಭಗವಂತನು ಈ ಕಪಿಯೊಂದಿಗೆ ಸ್ನೇಹಮಾಡಿಕೊಳ್ಳುವುದಕ್ಕೆ ತಕ್ಕ ಕಾರಣ ಇವನಲ್ಲಿರುವುದು ಯಾವುದು ನನಗೆ ತಿಳಿದು ಬರುವುದಿಲ್ಲ. ಅದಲ್ಲ ! ಶ್ರೀ ರಾಮಚಂದ್ರ ಸುಗ್ರೀವರು ಇಬ್ಬರೂ ಒಬ್ಬರೆನ್ನುವ ಹಾಗೆ, ಅವರಿಬ್ಬರಿಗೂ ಇರುವ ಮಿತ್ರತ್ವವನ್ನು ಮಾತ್ರ ತಿಳಿದಿರುವೆನು. ಶ್ರೀ ರಾಮಚಂದ್ರನ ಧರ್ಮಪತ್ನಿಯಾಗಿರುವ ತಾಯಿಯವರಿಗೆ ಲಕ್ಷ್ಮಣನು ದೂತನಾಗಿ ಬರುವುದು ಉಚಿತವಾಗಿದೆ ಎಂದು ಹೇಳಬಹುದು. ನಾನೋ ಸುಗ್ರೀವನ ಸೇವಕರಲ್ಲಿ ಬಹಳ ಚಿಕ್ಕವನು. ಈ ರೀತಿ ಅತ್ಯಂತ ಅಕಿಂಚನನಾದ ಈ ಸೇವಕನು, ದೂತನಾಗಿ ಬರುವ ಹಾಗೆ ಅವರಿಬ್ಬರಿಗೂ ಮೈತ್ರಿ ಏರ್ಪಟ್ಟಿದೆ ಎಂದರೆ ; ಆ ಸ್ನೇಹ ಯಾವ ರೀತಿಯದಾಗಿದೆ ಎಂಬುದಕ್ಕೆ ನಾನು ಉತ್ತರವನ್ನು ಹೇಳಬೇಕೇ ?

ಕಪಿಯು ಹೇಳಿದ, ರಾಮಚಂದ್ರನೂ ಸುಗ್ರೀವನೂ, ನಿಜವಾಗಿಯೂ ಬೇರೆ ಬೇರೆ ವಸ್ತುವಾಗಿಯೇ ಇರುವವರು. ಆದರೂ, ಸಹ ಸುಖದುಃಖಗಳನ್ನು ಸಮಾನವಾಗಿ ಪಡೆದಿರುವರಂತೆ. ಅದು ಯಾವುದೆಂದರೆ–ಶ್ರೀ ರಾಮನ ಸುಖದುಃಖಗಳನ್ನು ಸುಗ್ರೀವನೂ, ಸುಗ್ರೀವನ ಸುಖ-ದುಃಖಗಳನ್ನು ಶ್ರೀ ರಾಮನೂ ಪಡೆದಿದ್ದಾರೆ. ಈ ರೀತಿ ಇವರಿಬ್ಬರಿಗೂ ಐಕ್ಯತೆಯಿರುವುದನ್ನು ಕುರಿತು, ಇಬ್ಬರೂ ಒಬ್ಬರಾಗಿಯೇ ತೋರಿ ಬರುತ್ತಾರೆ.

ಇದರ ಹಾಗೆಯೇ ಮೋಕ್ಷ ಪುರುಷಾರ್ಥವನ್ನು ಪಡೆದಿದ್ದರೂ ಆದರೆ ಪರಮಾತ್ಮನಿಗೂ ಜೀವನಿಗೂ ನಿಜಸ್ಥಿತಿಯಲ್ಲಿ ವ್ಯತ್ಯಾಸವುಂಟು. ಹಾಗಿದ್ದರೂ, ಅತ್ಯಧಿಕ ಸಾಮ್ಯವನ್ನು ಕುರಿತು, ಜೀವನು ಬ್ರಹ್ಮವಾಗಿ ಆಗುತ್ತಾನೆ. ಪುರುಷಾರ್ಥವನ್ನು ಪಡೆಯುತ್ತಾನೆಂಬುದು ಇಲ್ಲಿ ಸ್ಪಷ್ಟವಾಗಿ ತಿಳಿಯುತ್ತದೆ.

ರಾಮಾಯಣವು ಈ ರೀತಿಯಾಗಿ " ಬ್ರಹ್ಮೈವ ಭವತಿ " ಎನ್ನುವ ಅರ್ಥವನ್ನು, ಸಂದೇಹವು ಸ್ವಲ್ಪವೂ ಇಲ್ಲದ ಹಾಗೆ, ಸರಳವಾಗಿ ತಿಳಿಯುವ ಹಾಗೆ ಹೇಳಿರುವುದನ್ನು ಕಂಡೆವು.

ಇನ್ನು ಲಕ್ಷ್ಮಣನ ಚರಿತ್ರೆಯಲ್ಲಿ " ಭಗವಂತನಿಗೆ ಸೇವೆ ಮಾಡಿ ಸಂತುಷ್ಟಪಡಿಸುವುದೇ, ಈ ಜೀವನಿಗೆ ಶ್ರೇಷ್ಠವಾದ ಕರ್ತವ್ಯ ಎನ್ನುವುದನ್ನು ನೋಡೋಣ.

ರಾಮಾಯಣವು ಹೇಳಿರುವ ಹಾಗೆ, " ಲಕ್ಷ್ಮಣನಿಗೆ ಸೇವಿದ ಉತ್ತಮವಾದ ಶ್ರೇಷ್ಠತೆಯನ್ನು, ಕ್ಷುದ್ಬಾಧೆಯಿಂದ ಪೀಡಿತರಾದವರು ಆಗಿರುವ ಅಡಿಗೆಯನ್ನು ತಿನ್ನಬೇಕು, ಆಗುವ ಅನ್ನವನ್ನು ತಿನ್ನಬೇಕೆನ್ನುವಂತೆ, ಕಾಡಿಗೆ ಹೋಗಿರುವಾಗ ಲಕ್ಷ್ಮಣನು ವಿಯೋಗವನ್ನು ಸಹಿಸಲಾಗದೆ ಕೈಂಕರ್ಯವನ್ನು ಮಾಡಬೇಕು, ಎಲ್ಲಾ ಸೇವೆಯನ್ನು ಮಾಡಬೇಕು ಎನ್ನುತ್ತಾನೆ ; ರಾಜಧಾನಿಗೆ ಬಂದ ನಂತರವೂ, ಕಾಡಿನಲ್ಲಿ

ತಾನೇ ಸೇವೆ ಮಾಡಿ ಅಭ್ಯಾಸವಾದ್ದರಿಂದ ಒಂದು ಕೈಯಲ್ಲಿ ಚಾಮರವನ್ನು, ಮತ್ತೊಂದು ಕೈಯಲ್ಲಿ ಕೊಡೆಯನ್ನು ಹಿಡಿದು ಕೈಂಕರ್ಯವನ್ನು ಮಾಡಿದನು ". ಎನ್ನುವ ಸೂತ್ರದಲ್ಲಿ ಪಿಳ್ಳೈಲೋಕಾಚಾರ್ಯರು ಅತ್ಯದ್ಭುತವಾಗಿ ವಿವರಿಸುತ್ತಾರೆ. ಈ ಸೂತ್ರದ ತಾತ್ಪರ್ಯ—

ಅತ್ಯಧಿಕ ಹಸಿವುಳ್ಳವರು ತಮ್ಮ ಕ್ಷುದ್ಬಾಧೆಯನ್ನು ತಡೆಯಲಾರದೆ ಸಿದ್ಧವಾದ ಅನ್ನವನ್ನು, ಸಿದ್ಧವಾಗಿರುವ ಅನ್ನವನ್ನು ತಾವೇ ತಿನ್ನಬೇಕೆನ್ನುತ್ತಾರೆ, ಇವರ ಹಾಗೆಯೇ ಲಕ್ಷ್ಮಣನೂ, ಶ್ರೀರಾಮನಿಗೆ ತಾನೇ ಎಲ್ಲಾ ಕೈಂಕರ್ಯವನ್ನೂ ಮಾಡಬೇಕೆಂದು ಇಚ್ಛಿಸುತ್ತಾನೆ. ಈ ಲಕ್ಷ್ಮಣನು ಹುಟ್ಟುವಾಗಲೇ ಪರಿಮಳದಿಂದ ಕೂಡಿರುವ ತುಳಸಿಯು ಹಾಗೆ ಜನ್ಮತಃ ರಾಮ ಭಕ್ತಿಯೊಂದಿಗೆ ಅವತರಿಸಿರುವನಂತೆ.

ಆದ್ದರಿಂದ, ಶ್ರೀ ರಾಮಚಂದ್ರನು ಅರಣ್ಯಕ್ಕೆ ಹೊರಡುವಾಗ, ಅವನೊಂದಿಗೆ ಲಕ್ಷ್ಮಣನು ಹೋಗಬೇಕೆಂದು ಪ್ರಯತ್ನಿಸಿದನು. ಆ ಪ್ರಯತ್ನವನ್ನು ಕಂಡು ರಾಘವನು, "ಲಕ್ಷ್ಮಣಾ! ನೀನು ಈ ಅಯೋಧ್ಯಾನಗರಿಯಲ್ಲಿಯೇ ಇರು" ಎಂದು ಹೇಳುತ್ತಾನೆ. ಆಗ ಲಕ್ಷ್ಮಣನು ಆ ರಾಮಚಂದ್ರನ ವಿಯೋಗದಿಂದ ತನ್ನ ಪ್ರಾಣ ಉಳಿಯಲಾರದೆಂಬ ತನ್ನ ಸ್ಥಿತಿಯನ್ನು ಕುರಿತು, "ನಾಣೇರಿಸಿದ ಬಿಲ್ಲನ್ನು ಹೊತ್ತು, ನಿನಗಿಂತ ಮೊದಲೇ ಹೋಗಿ ಅಲ್ಲಲ್ಲಿ ದಾರಿ ತೋರಿಸಿಯೂ, ಗೆಡ್ಡೆ, ಗೆಣಸುಗಳನ್ನು, ಕಂದ ಮೂಲ ಫಲಗಳನು ಹುಡುಕಿತಂದು ಸೇವೆಯನ್ನು, ನಿನಗೆ ಮಾಡುವೆನು, ನನ್ನನ್ನು ಕರೆದುಕೊಂಡು ಹೋಗು ಎಂದು ಬೇಡಿಕೊಂಡನು.

"ಸ್ವಾಮಿಯವರಿಗೆ ಸೇವೆ ಮಾಡದೆ ನಾನು ಜೀವಿಸಿರಲಾರೆನು. ಆದರೆ ಸ್ವಾಮಿಯವರು ಸೇವೆಯನ್ನು ಪಡೆಯುದೆಯೋ, ಪ್ರಾಣವನ್ನು ಧರಿಸುವರಾಗಿದ್ದೀರಿ. ಆದರೂ, ನನ್ನಿಂದ ಕೈಂಕರ್ಯ ಮಾಡಿಸಿಕೊಂಡರೆ ಸ್ವಾಮಿಯವರಿಗೂ ಹಿರಿಮೆಯುಂಟು ಸೀತಾದೇವಿಯೂ, ತಾವು ಇಬ್ಬರೂ ಬೆಟ್ಟದ ತಪ್ಪಲಿನಲ್ಲಿ ವಿಹಾರ ಮಾಡುವಾಗಲೂ, ಅಹರ್ನಿಶಿ ಎಲ್ಲಾ ಸೇವೆಯನ್ನು ಮಾಡಬೇಕು. ನನ್ನ ಪ್ರಾರ್ಥನೆಯನ್ನು ಒಪ್ಪಿ, ತಮ್ಮ ಇಚ್ಛೆಗನುಸಾರವಾಗಿ ನನ್ನಿಂದ ಕೈಂಕರ್ಯವನ್ನು ಸ್ವೀಕರಿಸಬೇಕು" ಎಂದು ಆಣೆ ಪಟ್ಟನಂತೆ.

ಇನ್ನು ಮತ್ತೆ, ತಾನೇ ಅಡಿಗೆ ಮಾಡಿ ತಾನೇ ಭೋಜನ ಮಾಡುವ ಒಬ್ಬನು, ದಿನೇ ದಿನೇ, ತನ್ನ ಹೊಟ್ಟೆಯನ್ನು ಹಿರಿದಾಗಿ ಮಾಡಿಕೊಳ್ಳುತ್ತಾನೆ; ಬೇರೆಯವರೊಂದಿಗೆ ಊಟ ಮಾಡಲು ಇಷ್ಟಪಡುವುದಿಲ್ಲ. ಇವನ ಹಾಗೆಯೇ, ಲಕ್ಷ್ಮಣನೂ, ತಾನೇ ಕಾಡಿನಲ್ಲಿ ಸೀತಾ–ರಾಮರೆಂಬ ದಂಪತಿಗಳಿಗೆ, ಎಲ್ಲಾ ಕೈಂಕರ್ಯಗಳನ್ನೂ ಮಾಡಿ—ಮಾಡಿ ಕೈಂಕರ್ಯದ ರುಚಿಯನ್ನು ನೋಡಿರುವನು; ಭರತನೇ ಮೊದಲಾದವರೊಂದಿಗೆ ಸೇರಿ ತಾನೂ ಒಂದು ಕೈಂಕರ್ಯ ಮಾಡಲು ಒಪ್ಪುವವನಾಗಿಲ್ಲ. ಈ ರೀತಿ ಒಪ್ಪದಿದ್ದನ್ನು ಎಲ್ಲಿ ಕಂಡೆವು? ಎಂದರೆ, ಶ್ರೀ ರಾಮಚಂದ್ರನು ವನವಾಸವನ್ನು ಮುಗಿಸಿ, ಪುನಃ ಅಯೋಧ್ಯೆಗೆ ಹಿಂತಿರುಗಿ, ರಾಜ್ಯಾಭಿಷೇಕ ಮಾಡಿಕೊಳ್ಳುವಾಗ ಒಂದು ಕೈಲಿ

ಛತ್ರಿಯನ್ನು ಎತ್ತಿ ಹಿಡಿದು, ಮತ್ತೊಂದು ಕೈಲಿ ಬೆಳ್ಳಿಯ ಚಾಮರವನ್ನು ಬೀಸುತ್ತಾ, ಎರಡು ಕೈಂಕರ್ಯಗಳನ್ನೂ ಒಂದೇ ಸಮಯದಲ್ಲಿ ಮಾಡಿದನು.

ಇಲ್ಲಿ, "ನಚ ಸೀತಾ ತ್ವಯಾ ಹೀನಾನ ಚಾಹಮಪಿ ರಾಘವ...ಜಲಾನ್ಮತ್ಸ್ಯಾ ವಿವೋದ್ಧೃತೌ ।

ಧನುರಾದಾಯ ಸಗುಣಂ...ಅಗ್ರತಸ್ತೇ ಗಮಿಷ್ಯಾಮಿ ಪಂಥಾನ ಮನು ದರ್ಶಯನ್ ।
ಆಹರಿಷ್ಯಾಮಿ ತೇ ನಿತ್ಯಂ ಮೂಲಾನಿಚ ಫಲಾನಿಚ ॥"

"ಭವಾಂಸ್ತು ಸಹ ವೈದೇಹ್ಯಾ ಗಿರಿ ಸಾನುಷು ರಂಸ್ಯತೇ । ಅಹಂಸರ್ವಂ ಕರಿಷ್ಯಾಮಿ ಜಾಗ್ರತಃ ಸ್ವಪತಶ್ಚತೇ ॥"

"ಕ್ರಿಯತಾಮಿತಿ ಮಾಂವದ । ಛತ್ರಂ ಚ ಚಾಮರಂ ದಿವ್ಯಂ ಧೃತವಾನ್ ಲಕ್ಷ್ಮಣಸ್ತದಾ ॥"

ಎಂಬುದನ್ನು ಕಾಣತಕ್ಕದ್ದು. ಇನ್ನು,

ಇಲ್ಲಿ ಮತ್ತೊಂದು ಮುಖ್ಯವಾದ ವಿಷಯವನ್ನು ವಿಮರ್ಶಿಸಿ ತಿಳಿಯಬೇಕಾದ್ದು ಅವಶ್ಯಕ. ಮುಂದೆ ಹೇಳಿರುವ ಭಾಗಗಳಲ್ಲಿ, "ಶ್ರೀ ರಾಮಚಂದ್ರನು, ಬ್ರಹ್ಮಶಬ್ದ ವಾಚ್ಯನಾದ ನಾರಾಯಣನೇ" ಎನ್ನುವುದು ನಮಗೆ ತಿಳಿದು ಬರುತ್ತದೆ. ಆದರೂ ಸಹ, "ಆ ಪರಮಾತ್ಮನು, ಶ್ರೇಷ್ಠ ಸದ್ಗುಣಗಳಿಲ್ಲದವನೇ? ಅಲ್ಲ, ದೋಷಗುಣಗಳು ಕಿಂಚಿತ್ತೂ ಇಲ್ಲದೆ; ಶ್ರೀ ಕಲ್ಯಾಣಗುಣ ತುಂಬಿ ಇರುವವನೇ?" ರಾಮಾಯಣವು ಪರಮಾತ್ಮನನ್ನು ಹೇಳುವುದು ಯಾವ ರೀತಿ ಎಂಬ ಪ್ರಶ್ನೆ ಇಲ್ಲಿ ಉಂಟಾಗುವುದು ಯೋಗ್ಯವಾದದ್ದೇ. ಇದಕ್ಕೆ ಉತ್ತರ ಕೆಳಕಂಡಂತೆ—

ಒಂದು ಗ್ರಂಥದ ಸತ್ಯವಾದ ಅರ್ಥವನ್ನು ತಿಳಿಯುವಾಗ, ಆ ರೀತಿ ತಿಳಿಯುವುದಕ್ಕೆ ಅನೇಕ ಕಾರಣವುಂಟು. ಆ ಮಾರ್ಗವನ್ನು ಅನುಸರಿಸಿ ನೋಡುವಲ್ಲಿ ಸತ್ಯತೆಯು ಚೆನ್ನಾಗಿ ತಿಳಿಯುತ್ತದೆ. ರಾಮಾಯಣವು ಮೊದಲಿನಲ್ಲೂ, ಮಧ್ಯದಲ್ಲಿಯೂ, ಕೊನೆಯಲ್ಲಿಯೂ ಭಗವಂತನನ್ನು ಯಾವ ರೀತಿ ಹೇಳುತ್ತದೆಯೋ, ಅದನ್ನು ಅದೇ ರೀತಿ ಪ್ರಕಟ ಪಡಿಸಿದ್ದೇ ಅದರ ಮೇಲೆ ಹೇಳಿರುವ ಮಾರ್ಗವಾಗುತ್ತದೆ.

ರಾಮಾಯಣವು ಮೊಟ್ಟ ಮೊದಲಿನಲ್ಲಿ ಶ್ರೀ ರಾಮನನ್ನು ಹೇಳುವುದು ಯಾವ ರೀತಿ ಎಂದರೆ, "ಸದ್ಗುಣಗಳು ಇಲ್ಲದವ" ಎಂದು ಹೇಳಲಿಲ್ಲ; ಕೆಟ್ಟ ಗುಣಗಳು ಸ್ವಲ್ಪವೂ ಇಲ್ಲದೆ, ಶ್ರೇಷ್ಠಗುಣಗಳನ್ನೇ ಪಡೆದಿರುವವನು ಎಂದೇ ಹೇಳುತ್ತದೆ.

ನಾರದ ಮುನಿವರ್ಯರನ್ನು ಕುರಿತು, ವಾಲ್ಮೀಕಿ ಋಷಿಯು ಅತ್ಯಂತ ವಿನಯದಿಂದ, "ಈ ಕಾಲದಲ್ಲಿ ಪ್ರಪಂಚದಲ್ಲಿ ಶೀಲ-ಸದ್ಗುಣ ಮೊದಲಾದ ಎಲ್ಲಾ ಒಳ್ಳೆಯ ಗುಣಗಳನ್ನು ಹೊಂದಿರುವವನು ಯಾರು?" ಎಂದು ಕೇಳಲು, ಆ ನಾರದ ಮುನಿಯು, "ಇಕ್ಷ್ವಾಕುವಂಶದಲ್ಲಿ ಅವತಾರ ಮಾಡಿರುವ ಶ್ರೀ ರಾಮಚಂದ್ರ. ಸಮಸ್ತ ಕಲ್ಯಾಣ ಗುಣಗಳೊಂದಿಗೆ ಕೂಡಿ ಇರುವವನು. ಹೇಗೆ ಸಮುದ್ರವು ತನ್ನೊಳಗಡೆ ಶ್ರೇಷ್ಠರತ್ನ ಮುಂತಾದ ವಸ್ತುಗಳನ್ನು ಮತ್ತೊಬ್ಬರು ಕಾಣದೆ ಇರುವ ಹಾಗೆ ಮರೆಸಿ ಇಟ್ಟು

ಕೊಂಡಿರುವುದೋ, ಹಾಗೆಯೇ, ಶ್ರೀ ರಾಮಚಂದ್ರನು ತನ್ನಲ್ಲಿರುವ ಶ್ರೇಷ್ಠವಾದ ಗುಣಗಳನ್ನು ಮತ್ತೊಬ್ಬರು ತಿಳಿಯದ ಹಾಗೆ ಮರೆಸಿ ಇಟ್ಟಿರುವನು. ಶೌರ್ಯಸಾಹಸದಲ್ಲಿ ವಿಷ್ಣುವಿನಂತಹವನು. ಹದಿನಾರು ಕಲೆಗಳಿಂದ ಕೂಡಿರುವ ಪೂರ್ಣಚಂದ್ರನಂತೆ ನೋಡಲು ಪ್ರಿಯವುಳ್ಳವನು; ಕಾಲಾಗ್ನಿಯಂತೆ ಕ್ರೋಧವುಳ್ಳವನು; ತಾಳ್ಮೆಯಲ್ಲಿ ಭೂಮಾತೆಯಂತೆ; ಸತ್ಯದಲ್ಲಿ ಧರ್ಮದೇವತೆಯೇ ಪ್ರತ್ಯಕ್ಷನಾಗಿರುವವನಂತೆ" ಎಂದು ಉತ್ತರವನ್ನು ಹೇಳಿದನು.

ಇಲ್ಲಿ, "ಕೋನ್ವಸ್ಮಿನ್ ಸಾಂಪ್ರತಂ ಲೋಕೇಗುಣವಾನ್ ಕಶ್ಚ ವೀರ್ಯವಾನ್" ಎನ್ನುವ ವಾಲ್ಮೀಕಿ ಮುನಿಯ ಮಾತನ್ನು,

"ಇಕ್ಷ್ವಾಕು ವಂಶ ಪ್ರಭವೋ ರಾಮೋನಾಮ ಜನೈಃ ಶ್ರುತಃ ।
ಸಮುದ್ರ ಇವ ಗಾಂಭೀರ್ಯೇ ವಿಷ್ಣುನಾ ಸದೃಶೋವೀರ್ಯೇ
ಸೋಮವತ್ಪ್ರಿಯ ದರ್ಶನಃ ।
ಕಾಲಾಗ್ನಿ ಸದೃಶಃ ಕ್ರೋಧೇ ಕ್ಷಮಯಾ ಪೃಥ್ವೀ ಸಮಃ ।
ಸತ್ಯೇ ಧರ್ಮ ಇವಾಪರಃ ॥"—ಎನ್ನುವ ನಾರದ ಮಹರ್ಷಿಯ ಮಾತುಗಳನ್ನು

ಕಾಣತಕ್ಕದ್ದು. ಈ ರೀತಿ ವೇದಾರ್ಥವನ್ನು ಸ್ಪಷ್ಟವಾಗಿ ತಿಳಿಸಲು (ಉಪಬೃಹ್ಮಣವಾಗಿರುವ) ರಾಮಾಯಣದ ಮೊದಮೊದಲಿನಲ್ಲಿಯೇ ಶ್ರೀರಾಮನ ಕಲ್ಯಾಣಗುಣಗಳನ್ನು ಆಚಾರ್ಯನು ಶಿಷ್ಯನಿಗೆ ಹೇಳಿರುವ ರೀತಿಯಲ್ಲಿ ಅತಿ ಸರಳವಾಗಿ ತಿಳಿಸಿರುವುದನ್ನು ಕಂಡೆವು. ಇನ್ನು ಮುಂದೆಯೂ ಮಧ್ಯಭಾಗದಲ್ಲಿ ಇದೇ ರೀತಿಯಲ್ಲಿ ಕಾಣುತ್ತೇವೆ.

ಅಯೋಧ್ಯಾಕಾಂಡದ ಮೊದಲಿನಲ್ಲಿ ಹೇಳಿರುವ ವಿಚಾರವು ಈ ಕೆಳಕಂಡಂತೆ ಇದೆ. ದಶರಥ ಮಹಾರಾಜನು ತುಂಬಿದ ಸಭೆಯಲ್ಲಿ ಸಭಾಸದರನ್ನು ಕುರಿತು ಈ ರೀತಿಯಾಗಿ ಬಿನ್ನವಿಸಿಕೊಂಡನು. ನಾನು ಆಳುತ್ತಿರುವ ಈ ರಾಜ್ಯವು ಅತಿವಿಸ್ತಾರವಾದುದು. ಇದನ್ನು ನನಗಿಂತ ಪೂರ್ವಜರು ಅತಿ ದಕ್ಷತೆಯಿಂದ ಆಳಿ ಮನಃಪೂರ್ವಕವಾಗಿ ರಕ್ಷಿಸಿಕೊಂಡು ಬಂದರು. ಅವರ ವಂಶದಲ್ಲಿ ಹುಟ್ಟಿದ ನಾನು, ಮನುಧರ್ಮವನ್ನು ಅನುಸರಿಸಿ ನನ್ನ ಜ್ಞಾನ ಶಕ್ತಿಗಳಿಗನುಸಾರವಾಗಿ ಇದುವರೆವಿಗೂ ರಕ್ಷಿಸಿಕೊಂಡು ಬಂದೆನು. ನನ್ನ ಈ ಶರೀರವು ವೃದ್ಧಾಪ್ಯವನ್ನು ಧರಿಸಿತು. ಆದ್ದರಿಂದ ಅರಸುತನದ ಗದ್ದುಗೆಯನ್ನು ಶ್ರೀ ರಾಮಚಂದ್ರನಿಗೆ ಒಪ್ಪಿಸಿ ಉಳಿದ ಆಯುವನ್ನು ನಿರ್ಯೋಚನೆಯಿಂದ ಕಳೆಯಲು ಇಚ್ಛಪಡುತ್ತೇನೆ. ಶ್ರೀ ರಾಮಚಂದ್ರ ಮೂರ್ತಿಗೆ ರಾಜ್ಯಾಭಿಷೇಕವನ್ನು ಮಾಡಿ, ರಾಜ್ಯವನ್ನು ಸಂಪೂರ್ಣವಾಗಿ ಅವನಿಗೆ ಒಪ್ಪಿಸುವ ಈ ಕಾರ್ಯವನ್ನು ನೀವೆಲ್ಲರೂ ಅನುಮೋದಿಸಿ, ನಿಮ್ಮ ನಿಮ್ಮ ಅಭಿಪ್ರಾಯವನ್ನು ತಿಳಿಸಬೇಕೆಂದು ಪ್ರಾರ್ಥಿಸುತ್ತೇನೆ ಎಂದನು.

ಈ ವಿಚಾರವನ್ನು ಕೇಳಿದ ಸಭಾಸದರೆಲ್ಲರೂ ಅಪರಿಮಿತ ಆನಂದವನ್ನು ಹೊಂದಿದರು ಮತ್ತು ಜೋರಾಗಿ ಘೋಷಣೆಗಳನ್ನು ಮಾಡಿದರು. ಆ ಮಹಾಘೋಷದಿಂದ ಹೊರಟ ಪ್ರತಿಧ್ವನಿಯಿಂದ ಅಲ್ಲಿನ ವಿಮಾನವು ಅಲ್ಲಾಡಿತು. ಈ ರೀತಿಯಾಗಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದ ಪುರಜನರು ಈಗಲೇ ಶ್ರೀ ರಾಮಚಂದ್ರನು

ರಾಜ್ಯಾಭಿಷಿಕ್ತನಾಗಿ ಕಿರೀಟವನ್ನು ಧರಿಸಿ, ಪಟ್ಟದಾನೆಯ ಮೇಲೆ ಕುಳಿತು ಛತ್ರ ಚಾಮರಗಳ ನೆರಳಿನಲ್ಲಿ ಮೆರವಣಿಗೆ ಬರುವ ಸೌಂದರ್ಯವನ್ನು ಕಾಣಬೇಕೆನ್ನುತ್ತಾರೆ.

ಹೀಗೆ ತಮ್ಮ ಹರ್ಷವನ್ನು ವ್ಯಕ್ತಪಡಿಸಿದ ಜನರನ್ನು ಕುರಿತು ದಶರಥ ಮಹಾಚಕ್ರವರ್ತಿಯು ಎಲೈ ! ನೀವೆಲ್ಲರೂ ಏಕಸ್ವರದಲ್ಲಿ ಘೋಷಣೆ ಮಾಡುವುದನ್ನು ನೋಡಿದರೆ ಇದುವರೆವಿಗೂ ನಿಮಗೆ ತೊಂದರೆ ಕೊಡುವಂತಹ ದಶರಥನು ರಾಜ್ಯವಾಳಿದನು. ಇಂತಹ ರಾಜನನ್ನು ಬಿಟ್ಟು, ಸಾತ್ತ್ವಿಕ ಪ್ರಕೃತಿಯುಳ್ಳ ಶ್ರೀ ರಾಮಚಂದ್ರನು ಈ ರಾಜ್ಯವನ್ನು ವಹಿಸಿಕೊಂಡು ರಕ್ಷಿಸುತ್ತಾನೆ. ನಮಗೆ ಇನ್ನು ಒಳ್ಳೆಯಕಾಲ ಎನ್ನುವ ಅಭಿಪ್ರಾಯವು ತಿಳಿದುಬರುತ್ತದೆ. ಈ ರೀತಿಯಾಗಿ ನನ್ನನ್ನು ತಿರಸ್ಕರಿಸಲು ನನ್ನಲ್ಲಿ ಏನಾದರೂ ದೋಷವನ್ನು ಕಂಡಿರಾ ಎನ್ನುತ್ತಾನೆ.

ದಶರಥ ಚಕ್ರವರ್ತಿಯ ಈ ಮಾತುಗಳನ್ನು ಕೇಳಿದ ಪುರಜನರು ಒಂದೇ ಅಭಿಪ್ರಾಯದಿಂದ ಮಹಾರಾಜಾಧಿರಾಜನೇ ಆಳಿದ ಮಹಾಸ್ವಾಮಿಯವರಿಗೂ ಒಂದು ದೋಷವುಂಟು. ಅದೇನೆಂದರೆ, ಅಸದಳವಾದ ಗುಣಸಾಗರನೇ ಆದ ಶ್ರೀ ರಾಮಚಂದ್ರನನ್ನೇ ತಾವು ಪುತ್ರನನ್ನಾಗಿ ಪಡೆದಿರುವುದೇ ತಮಗಿರುವ ದೋಷ. ಅದ್ದರಿಂದ ಸ್ವಾಮಿಯವರನ್ನು ಇಷ್ಟ ಪಡುವುದಿಲ್ಲಾ.

ಈ ರೀತಿ ರಾಮಾಯಣದ ಮಧ್ಯಭಾಗದಲ್ಲಿ ಶ್ರೀ ರಾಮನ ಅನಂತ ಕಲ್ಯಾಣಗುಣಗಳನ್ನು ಸಂಕ್ಷಿಪ್ತವಾಗಿ ತಿಳಿದುಕೊಂಡೆವು. ಇನ್ನು ಮುಂದೆ ಅಂತ್ಯಭಾಗದಲ್ಲಿ ಏನಿದೆ ಎಂದು ಕಾಣುತ್ತೇವೆ.

ಶ್ರೀ ರಾಮಚಂದ್ರನು ಹದಿನಾಲ್ಕು ವರ್ಷ ವನವಾಸವನ್ನು ಮಾಡಿ, ಅಲ್ಲಿಂದ ಪುನಃ ಅಯೋಧ್ಯೆಗೆ ಹಿಂತಿರುಗಿ, ರಾಜ್ಯಾಭಿಷೇಕವನ್ನು ಮಾಡಿಕೊಂಡು ಹನ್ನೊಂದು ಸಾವಿರ ವರ್ಷಗಳ ಪರ್ಯಂತದವರೆವಿಗೂ ಆಳಿ ರಾಜ್ಯವನ್ನು ರಕ್ಷಿಸಿದನು. ಎಂಬುದು ಈ ಮಾತು ಚರಿತ್ರಾರ್ಹವಾದುದು ಮತ್ತು ಸತ್ಯವಾದುದು. ಶ್ರೀ ರಾಮಚಂದ್ರನ ಆಳ್ವಿಕೆಯನ್ನು ಸಮೃದ್ಧಿಯಾಗಿ ಕಂಡು ಆನಂದಿತರಾದ ಶ್ರೀ ವಾಲ್ಮೀಕಿಯು ಈ ರೀತಿ ಹೇಳಿರುತ್ತಾರೆ.

ಸರ್ವಂ ಮುದಿತಮೇವಾಸೀತ್ ।
ಸರ್ವೋಧರ್ಮಪರೋಽಭವತ್ ॥

ಶ್ರೀ ರಾಮಚಂದ್ರನ ಆಳ್ವಿಕೆಯಲ್ಲಿ ಪ್ರಜೆಗಳೆಲ್ಲರೂ ಮನಸ್ಸಂತೋಷದಿಂದಲೂ, ಅವರವರಿಗೆ ಉಚಿತವಾದ ಧರ್ಮದಲ್ಲಿ ನಿರತರಾಗಿದ್ದವರೂ ಆಗಿದ್ದರೆಂಬುದಾಗಿ ಶ್ರೀ ವಾಲ್ಮೀಕಿ ಮುನಿಯು ಹೇಳಿರುತ್ತಾರೆ. ಈ ರೀತಿ ಸರ್ವ ಸಮೃದ್ಧಿಯಾಗಿರಲು ಕಾರಣವೇನೆಂದರೆ, ಶ್ರೀ ರಾಮಚಂದ್ರನ ಅಪರಿಮಿತವಾದ ಸದ್ಗುಣಗಳೇ ಕಾರಣವಾಗಿದೆ. " ರಾಮೋರಾಜ್ಯಮುಪಾಸಿತ್ವಾ " ಎಂಬ ವಚನದಂತೆ, ಶ್ರೀ ರಾಮನು ತನ್ನ ತೇಜಸ್ಸಿನಿಂದ ಪ್ರಜೆಗಳನ್ನು ಅದಗಿಸಿ, ಭಯಪಡಿಸಿ ಎಂದೂ ಆಳಿದವನಲ್ಲಾ. ಬದಲಾಗಿ ತನ್ನ ಸದ್ಗುಣಗಳಿಗೆ ಸದೃಶವಾದ ಮತ್ತು ಪ್ರಿಯವಾದ ವಾಕ್ಯಗಳಿಂದ ಜನರ ಮನಸ್ಸನ್ನು ಅರಿತು ವಶಪಡಿಸಿಕೊಂಡು ಆಳಿದನೆನ್ನುತ್ತಾರೆ.

ಈ ರೀತಿಯಾಗಿ ರಾಮಾಯಣದಲ್ಲಿ ಶ್ರೀ ರಾಮಚಂದ್ರನು ಅಪಾರವಾದ ಸದ್ಗುಣಗಳಿಂದ ಕೂಡಿದವನು ಎಂದು ತಿಳಿದೆವು. ಲಕ್ಷ್ಮಣನು ಶ್ರೀ ರಾಮಚಂದ್ರನ ಸದ್ಗುಣಗಳಿಗೆ ಅತ್ಯಧಿಕವಾಗಿ ವಶಪಟ್ಟು ಪ್ರೇಮದಿಂದ ಎಲ್ಲಾ ಕೈಂಕರ್ಯವನ್ನು ಶ್ರೀ ರಾಮನಿಗೆ ಮಾಡಿದನು ಎಂಬುದನ್ನು ನಾವು "ಗುಣೈರ್ದಾಸ್ಯ ಮುಪಾಗತಃ" ಎಂಬ ಆ ಲಕ್ಷ್ಮಣನ ವಾಕ್ಯದಿಂದಲೇ ಚೆನ್ನಾಗಿ ತಿಳಿಯಬಹುದು.

ಈ ರೀತಿ ರಾಮಾಯಣದಲ್ಲಿ ಉಪಾಯವನ್ನು ನೋಡಿದೆವು. ಇನ್ನು ಐದು ವಸ್ತುಗಳಲ್ಲಿ ಒಂದಾಗಿರುವ ವಿರೋಧಿಯನ್ನು ಕಾಣುತ್ತೇವೆ.

"ವೇದಾಂತವೂ ವಿರೋಧಿಯೂ"

ಇದುವರೆವಿಗೂ ಭಗವಂತನನ್ನು ಜೀವನು ಪಡೆಯದೇ ಇರಲು ಯಾವುದು ಅಡ್ಡಿಯಾಗಿರುತ್ತದೆಯೋ ಅದನ್ನು ವಿರೋಧಿ ಎಂಬುದಾಗಿ ಹೇಳಿದೆವು. ವೇದಾಂತವು ಅಜ್ಞಾನ, ಕರ್ಮ, ಪ್ರಕೃತಿ ಸಂಬಂಧ ಮೊದಲಾದುವುಗಳನ್ನು ವಿರೋಧಿಯಾಗಿ ಹೇಳಿದೆ. ಇದನ್ನೇ ಸ್ವಲ್ಪ ವಿವರವಾಗಿ ತಿಳಿಯಬಹುದು.

ಅಜ್ಞಾನ ಎಂದರೆ, ಕೈ ಕಾಲು ಮುಂತಾದ ಅವಯವಗಳಿಂದ ಕೂಡಿದ ಪಿಂಡವೇ ಆತ್ಮಾ ಎಂದು ತಿಳಿಯುವ ಅಭಿಪ್ರಾಯ. ತಾನು ಭಗವಂತನಿಗೆ ಸ್ವಂತದವನಲ್ಲ. ತನಗಾಗಿಯೇ ಇರುವವನು ಎಂದು ತಿಳಿಯುವ ವಿಚಾರವು, ದೇಹಾತ್ಮಾಭಿಮಾನ ಎನ್ನುವುದು ಮತ್ತೊಂದು ಸ್ವಾತಂತ್ರ್ಯಾಭಿಮಾನ ಎಂದು ಹೇಳಲ್ಪಡುತ್ತದೆ.

ದೇಹಾತ್ಮಾಭಿಮಾನವನ್ನು ಉದಾಹರಣೆಗಳೊಂದಿಗೆ ವಿವರವಾಗಿ ತಿಳಿಯೋಣ. ಕಬ್ಬಿಣದ ತುಂಡು ಮತ್ತು ಬೆಂಕಿ ಈ ಎರಡೂ ಬೇರೆ ಬೇರೆ ವಸ್ತುಗಳಾಗಿದ್ದರೂ, ಬೆಂಕಿಯಲ್ಲಿಟ್ಟು ಚೆನ್ನಾಗಿ ಕಾಯಿಸಿದ ಆ ಕಬ್ಬಿಣದ ತುಂಡು ಬೆಂಕಿಯ ಸಂಬಂಧದಿಂದ ಬೆಂಕಿಯ ಹಾಗೆಯೇ ಹೇಗೆ ತೋರುತ್ತದೆಯೋ ಹಾಗೆಯೇ ಆತ್ಮಾ ಮತ್ತು ಶರೀರ ಬೇರೆ ಬೇರೆ ವಸ್ತುಗಳಾಗಿದ್ದರೂ ಆ ಆತ್ಮನೂ ಶರೀರ ಸಂಬಂಧದ ಆಧಿಕ್ಯದಿಂದ ಶರೀರವಾಗಿಯೇ ತೋರುತ್ತದೆ ಎಂಬುದನ್ನು ತಿಳಿಯಬೇಕು.

ಈ ರೀತಿ ಶರೀರವೇ ಆತ್ಮ ಎಂದು ತಿಳಿದಿದ್ದೇ ಆದರೆ, ನಿಜಸ್ಥಿತಿಯನ್ನು ಸ್ವಲ್ಪವೂ ತಿಳಿಯಲಾಗುವುದಿಲ್ಲ. ಆದ್ದರಿಂದ ಜೀವನನ್ನು ನಿದ್ರಿಸುವವನಾಗಿಯೇ ಇರುವವನೆಂಬ "ಅನಾದಿಮಾಯಯಾ ಸುಪ್ತಃ" ಎಂಬ ಶ್ರುತಿಯು ವ್ಯಕ್ತವಾಗುತ್ತದೆ. ಈ ಮೇಲ್ಕಂಡ ಶ್ರುತಿಯಲ್ಲಿ ಮಾಯಾ ಶಬ್ದವು ಸತ್ತ್ವ, ರಜಸ್ ಮತ್ತು ತಮಸ್ ಎಂಬ ಮೂರು ಗುಣಗಳಿಂದ ಕೂಡಿದ ಪ್ರಕೃತಿ ಎನ್ನುವ ಅಚಿತ್ತನ್ನು ಹೇಳುವ ಮಾರ್ಗದಲ್ಲಿ ಶರೀರ ಎಂಬ ವಸ್ತುವನ್ನು ಸೂಚಿಸುತ್ತದೆ. ಊಟ, ನಿದ್ರೆಗಳನ್ನು ಬಯಸಿ ಅವುಗಳನ್ನು ಪಡೆಯಲು ಬಳಲಿ ಅಲೆಯುವಾಗಲೂ, ಜೀವನಿಗೆ ಈ ಅಜ್ಞಾನವು ಉಂಟು. ಆದರಿಂದ ಸ್ವಲ್ಪ ಮಾತ್ರವೂ ಕ್ಷೇಮವಿಲ್ಲ. ಯಾವಾಗ ಅಜ್ಞಾನವು ತನ್ನ ಸುಷುಪ್ತ್ಯವಸ್ಥೆಯನ್ನು ನೀಗಿ ಸತ್ಯತೆಯನ್ನು ತಿಳಿಯುತ್ತದೆಯೋ ಆಗ ಮಾತ್ರ ಸುಖವುಂಟು.

"ಅನಾದಿಮಾಯಯಾ ಸುಪ್ತಃ" ಎನ್ನುವ ವಾಕ್ಯದೊಂದಿಗೆ ಸಂಬಂಧವಿರುವ "ಯದಾಜೀವಃ ಪ್ರಬುಧ್ಯತೇ" ಎನ್ನುವ ಶ್ರುತಿಯನ್ನು ಕಾಣುವವರಿಗೆ ದೇಹಾತ್ಮಾಭಿಮಾನವು ಅಡ್ಡಿ ಎನ್ನುವುದು ಚೆನ್ನಾಗಿ ತಿಳಿಯುತ್ತದೆ. ಈ ರೀತಿ ದೇಹಾತ್ಮಾಭಿಮಾನವನ್ನು ಸಂಕ್ಷಿಪ್ತವಾಗಿ ತಿಳಿದೆವು. ಇನ್ನು ಮುಂದೆ ಸ್ವಾತಂತ್ರ್ಯಾಭಿಮಾನವನ್ನು ತಿಳಿಯಬಹುದು.

"ಆತ್ಮನು ತಿಳಿವಳಿಕೆ ಉಳ್ಳವನು" ಎನ್ನುವಾಗಲೇ ಸ್ವತಂತ್ರನು ಎಂದು ತಿಳಿಯುತ್ತದೆ. ಹೇಗೆ ಎಂದರೆ, ಈ ಜೀವನು ಮೊದಲಿನಲ್ಲಿ ಒಂದು ವಸ್ತುವನ್ನು ಯಥಾಸ್ಥಿತಿಯಾಗಿ ತಿಳಿಯುತ್ತಾನೆ. ಅನಂತರ ಆ ವಸ್ತುವಿನ ಶ್ರೇಷ್ಠತೆಯನ್ನು ಕುರಿತು ಅದನ್ನು ಇಚ್ಛಿಸುತ್ತಾನೆ; ಅದಕ್ಕೆ ತಕ್ಕ ಕಾರಣವನ್ನು ಹುಡುಕುತ್ತಾನೆ, ಕೊನೆಯಲ್ಲಿ ಅದನ್ನು ಪಡೆದು ಸುಖದ ಅನುಭವವನ್ನು ಹೊಂದುತ್ತಾನೆ.

"ಜಾನಾತಿ, ಇಚ್ಛತಿ ಯತತೇ ಕರೋತಿ, ಅನುಭವತಿ" ಎನ್ನುತ್ತಾರೆ. ಇವುಗಳನ್ನು ನೋಡುವಲ್ಲಿ ಜ್ಞಾನಿಯಾದ ಜೀವನು, ತನಗಾಗಿ ಒಂದನ್ನು ಅಪೇಕ್ಷಿಸಿ, ಪ್ರಯತ್ನದಿಂದ ಅದನ್ನು ಪಡೆದು ಸುಖಿಸುವನೆಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಇವನನ್ನು "ಸ್ವತಂತ್ರನೆಂದು ಹೇಳುತ್ತಾರೆ."

ಅಷ್ಟಾಕ್ಷರದಲ್ಲಿ ಮೊದಲ ಪದ ಪ್ರಣವ. ಆ ಪ್ರಣವ ಅ, ಉ, ಮ ಎಂಬ ಅಕ್ಷರದ್ದು. ಆ ಮೂರರಲ್ಲಿ "ಮ" ಎಂಬ ಅಕ್ಷರ ಜ್ಞಾನಿಯಾದ ಚೇತನನ್ನು ಸೂಚಿಸುತ್ತದೆ.

ತಿಳಿವಳಿಕೆ ಉಳ್ಳವನು "ಮ" ಎಂಬ ಅಕ್ಷರದಿಂದಲೂ ನಾನು ಇದನ್ನು ತಿಳಿದಿರುತ್ತೇನೆ ಎನ್ನುವ ಅನುಭವದಿಂದಲೂ "ಜೀವನು ಸ್ವತಂತ್ರನು" ಎಂಬುದನ್ನು ನಾವು ತಿಳಿಯಬಹುದು. ಈ ರೀತಿ ತನ್ನನ್ನು ಸ್ವತಂತ್ರನೆಂದು, ತನ್ನ ಇಷ್ಟಕ್ಕೆ ಅನುಸಾರವಾದ ವಿಚಾರದಲ್ಲಿ ಪ್ರಯತ್ನಪಟ್ಟು, ಪಡೆದು, ಅನುಭವಿಸುವುದಾಗಿ ತಿಳಿಯುವ ಸಮಯದಲ್ಲಿ, ನಿಜವಾದ ಜ್ಞಾನವನ್ನು ಪಡೆದಿರುವುದಿಲ್ಲ. ತನ್ನ ಸ್ಥಿತಿಗನುಸಾರವಾದ ಫಲವನ್ನು ಪಡೆಯಲಾರನು.

ಆದುದರಿಂದಲೇ, ಅಷ್ಟಾಕ್ಷರದ ಮಧ್ಯದಲ್ಲಿ ಅಡಕವಾಗಿರುವ "ನಮಃ" ಎನ್ನುವ ವಾಕ್ಯವು "ಮ" ಎಂಬ ಅಕ್ಷರದಿಂದ ತಿಳಿದಿರುವ ಜೀವನಸ್ವಾತಂತ್ರ್ಯ ಸ್ಥಿತಿಯನ್ನು ಇಲ್ಲದ ಹಾಗೇ ಮಾಡಿ ಪಾರತಂತ್ರ್ಯ ನಿಲುವೇ, ಇವನಿಗೆ ಯೋಗ್ಯವಾದ ಅರಿವನ್ನು ಉಂಟುಮಾಡುವುದೆಂದು ತಿಳಿಯಪಡಿಸುತ್ತದೆ. "ನಮಃ" ಎನ್ನುವುದರಲ್ಲಿ "ಮನ" ಎನ್ನುವ ಅಕ್ಷರಗಳು ವಿಭಾಗ ಮಾಡಿ ಸೇರಿಸಿ "ನನಗೆ ನಾನು ಇಲ್ಲ" ಭಗವಂತನಿಗೇ ಸೇರಿದವನು ಎಂಬ ವಿಚಾರವನ್ನುಳ್ಳದ್ದಾಗಿದೆ. ಇದನ್ನೇ ಮುಂದೆ ತಿಳಿಯಪಡಿಸಿದೆ.

"ಪಾರತಂತ್ರ್ಯ ಸ್ಥಿತಿಯು ತನಗೆ ನಿಜವಾಗಿಯೂ ತಿಳಿದದ್ದೇ ಆದರೆ, ಒಳ್ಳೆಯದಾಗುತ್ತದೆ. ಆ ಪಾರತಂತ್ರ್ಯ ಸ್ಥಿತಿಗೆ ವ್ಯತಿರಿಕ್ತವಾಗಿ ಸ್ವಾತಂತ್ರ್ಯಸ್ಥಿತಿಯನ್ನು ತಿಳಿದದ್ದೇ

ಆದರೆ ಒಳ್ಳೆಯದಾಗುವುದಿಲ್ಲ ಎನ್ನುವುದು ಅಷ್ಟಾಕ್ಷರ ಮಂತ್ರದಲ್ಲಿ ತಿಳಿದು ಬಂದ ಸಾರಾರ್ಥವಾದುದರಿಂದ ಸ್ವಾತಂತ್ರ್ಯಾಭಿಮಾನ'' ಅಡ್ಡಿ ಎನ್ನುವುದು ಸುಸ್ಪಷ್ಟವಾಗಿದೆ.

ಇನ್ನು ಮುಂದೆ ಕರ್ಮವು ಅಡ್ಡಿ ಎಂಬುದನ್ನು ತಿಳಿಯೋಣ: ಪುಣ್ಯ, ಪಾಪ, ಕರ್ಮ ಎಂಬುದು ವ್ಯಕ್ತವಾಗುತ್ತದೆ. ಈ ಕರ್ಮ ಭಗವಂತನನ್ನು ಸೇರಗೊಡಿಸದೇ ಅಡ್ಡಿಯನ್ನುಂಟು ಮಾಡುತ್ತದೆ. ಆದ್ದರಿಂದ, ''ವಿರೋಧಿ'' ಎನ್ನಲ್ಪಡುತ್ತದೆ.

ಆದರೆ, ಅನೃತವನ್ನು ಹೇಳುವುದು ಮುಂತಾದುದು ಪಾಪವೆಂದು ಹೇಳಿದರೆ, ಅದನ್ನು ನಮ್ಮ ಮನಸ್ಸು ಒಪ್ಪುವ ಹಾಗೆ, ಪುಣ್ಯವೂ ಅಡ್ಡಿ ಎಂದರೆ ಅದನ್ನು ನಮ್ಮ ಮನಸ್ಸು ಒಪ್ಪುತ್ತದೆಯೋ ಖಂಡಿತಾ ಇಲ್ಲ. ಸತ್ಯತೆ ಈ ರೀತಿ ಇರುವಲ್ಲಿ ಪುಣ್ಯವನ್ನು ಅಡ್ಡಿ ಎನ್ನುವುದು ಹೇಗೆ ಎಂದು ಕೆಲವರಿಗೆ ಇಲ್ಲಿ ಸಂದೇಹವುಂಟಾಗಬಹುದು. ಇದಕ್ಕೆ ಪರಿಹಾರ ಈ ಕೆಳಕಂಡಂತೆ ಇದೆ. ಬುಭುಕ್ಷು, ಮುಮುಕ್ಷು ಎಂದು ಮನುಷ್ಯರನ್ನು ಎರಡು ರೀತಿ ನೋಡಬೇಕು. ಸುಖವನ್ನು ಅಪೇಕ್ಷಿಸುವವನು ಬುಭುಕ್ಷುವೆಂದೂ, ಪರಮಾತ್ಮನನ್ನು ಪಡೆಯಬೇಕೆಂದು ಇಚ್ಛಿಸುವವನನ್ನು ಮುಮುಕ್ಷು ಎಂದೂ ಕರೆಯುತ್ತಾರೆ. ಬುಭುಕ್ಷುವಿನ ನಿಲುವಿಗೆ ಬರತಕ್ಕ ಪಾಪ, ಪುಣ್ಯಗಳ ಒಂದೊಂದು ಒಳ್ಳೆಯದಕ್ಕೂ ಪುಣ್ಯವೇ ಕಾರಣ ಎಂದು ಹೇಳಲ್ಪಟ್ಟಿದೆ. ಉದಾಹರಣೆಗೆ ಈ ಪ್ರಪಂಚದಲ್ಲಿ ಹಸು, ಭೂಮಿ, ಪುತ್ರ ಮುಂತಾದ ಒಳ್ಳೆಯದಕ್ಕೆ ಕಾರಣವಾಗಿರುವ ಪುಣ್ಯಗಳನ್ನು ನಾವು ಕಾಣಬಹುದು. ಈ ಪುಣ್ಯವು ಪರಮ ಪುರುಷನನ್ನು ಅಪೇಕ್ಷಿಸುವವರಿಗೆ (ಮುಮುಕ್ಷುವಿಗೆ) ಪಾಪ–ಪುಣ್ಯಗಳ ಫಲವನ್ನು ಕೊಟ್ಟು ತಡೆಯಾಗಿರುವುದರಿಂದ, ಪಾಪಗಳೇ ಆಗಿರುತ್ತದೆ.

''ಅಶ್ವ ಇವ ರೋಮಾಣಿ ವಿಧೂಯ ಪಾಪಂ'' ಎಂಬ ಶ್ರುತಿ ವಾಕ್ಯದಲ್ಲಿ ಕುದುರೆಯು ತನ್ನ ಕೂದಲನ್ನು ಒದರುವ ಹಾಗೆ ಪಾಪ–ಪುಣ್ಯಗಳನ್ನು ಒದರಿಬಿಡು. ಪರಮಾತ್ಮನ ಲೋಕವನ್ನು ಈ ಜೀವನು ಪಡೆಯಬೇಕೆನ್ನುವುದಾದರೆ, ಕರ್ಮ ಅಡ್ಡಿ ಎಂದು ತಿಳಿದು ಬರುತ್ತದೆ.

''ಪುಣ್ಯ–ಪಾಪ ವಿಧೂಯ ನಿರಂಜನಃ ಪರಮಂ ಸಾಮ್ಯ ಮುಪೈತಿ'' ಎಂಬ ವಾಕ್ಯವನ್ನು ಇಲ್ಲಿ ವ್ಯಕ್ತಪಡಿಸಿದೆ.

ಈ ಅಭಿಪ್ರಾಯದಿಂದ, ಅನೃತವನ್ನು ಹೇಳುವುದರಲ್ಲಿ ನಿಸ್ಸೀಮರಾದವರನ್ನು ಹೇಳಿದ್ದರಿಂದ ಕರ್ಮವು ಅಡ್ಡಿ ಎನ್ನುವುದನ್ನು ತಿಳಿಯುತ್ತೇವೆ. ''ಪ್ರಕೃತಿ ಸಂಬಂಧ'' ಎಂಬಲ್ಲಿ ಪ್ರಕೃತಿ ಎಂಬ ನುಡಿ ದೇವ ಶರೀರ, ಮಾನವ ಶರೀರ ತಿರ್ಯಗ್‌ಸ್ಥಾವರ ಶರೀರ ಎಂದು ನಾಲ್ಕು ವಿಧಗಳಲ್ಲಿರುವ ಅಚಿತ್ತನ್ನು ಸೂಚಿಸುತ್ತದೆ. ಸಂಬಂಧ ಎನ್ನುವ ಮಾತು ಅಂಥಾಯ ಶರೀರಕ್ಕೂ ಮತ್ತು ಆತ್ಮನಿಗೂ ಇರುವ ವ್ಯವಹಾರವನ್ನು ಸೂಚಿಸುತ್ತದೆ. ಈ ಸಂಬಂಧವು ಭಗವಂತನನ್ನು ಸೇರಿ ಸಂಪೂರ್ಣವಾಗಿ ಅನುಭವಿಸಿ, ಕೈಂಕರ್ಯವನ್ನು ಮಾಡಿ ಅವನನ್ನು ಸಂತುಷ್ಟ ಪಡಿಸಲು ಅಡ್ಡಿಯಾಗಿರುತ್ತದೆ.

ಈ ವಿಷಯವು ''ತಸ್ಯ ತಾವದೇವ ಚಿರಂ ಯಾವನ್ನ ವಿಮೋಕ್ಷ್ಯೇ ಅಥ ಸಂಪತ್ಸ್ಯೇ''

ಎನ್ನುವ ಶ್ರುತಿಯಿಂದ ಚೆನ್ನಾಗಿ ವಿದಿತವಾಗುತ್ತದೆ. ಈ ಶ್ರುತಿಯ ತಾತ್ಪರ್ಯ – "ಸತ್" ಎನ್ನುವ ಪರಮಾತ್ಮನನ್ನು ಭಜಿಸುವವನಿಗೆ ಈ ಶರೀರ ಸಂಬಂಧ ಇರುವವರೆಗೆ ವಿಳಂಬವಾಗುತ್ತದೆ. ಶರೀರ ಸಂಬಂಧವು ಮುಂದುವರಿಯದಂತೆ ಬಿಟ್ಟ ನಂತರ ಪರಮಾತ್ಮನನ್ನು ಪಡೆಯುತ್ತಾನೆ ಎಂಬುದು ಮತ್ತು ಇದರಿಂದ "ಶರೀರವು ಅಡ್ಡಿ" ಎನ್ನುವುದು ಸುಸ್ಪಷ್ಟವಾಗಿ ಪ್ರಕೃತಿ ಸಂಬಂಧವು ತಡೆ ಎಂಬುದು ತಿಳಿಯುತ್ತದೆ.

ಮೇಲೆ ತಿಳಿಸಿರುವ ಅಜ್ಞಾನ ಮುಂತಾದವುಗಳ ಹಾಗೆ ಅಜ್ಞಾನ ವಾಸನೆ, ಕರ್ಮ ವಾಸನೆ, ರುಚಿ ಮುಂತಾದವು ಪರಮಾತ್ಮನನ್ನು ಹೊಂದಲಾಗದಂತೆ ತಡೆಯನ್ನುಂಟು ಮಾಡುತ್ತದೆ. ಸರ್ಪ ಮುಂತಾದವುಗಳನ್ನು ಕಾಣುವಾಗ ಉಂಟಾಗುವ ಗಾಬರಿ ಮುಂತಾದವುಗಳಿಗೆ ಕಾರಣ ನಮ್ಮಲ್ಲಡಗಿರುವ ಅಜ್ಞಾನ ವಾಸನೆಯೇ ಆಗಿರುತ್ತದೆ.

ಕರ್ಮವಾಸನೆ ಯಾವುದೆಂದರೆ, ಪಾಪಕಾರ್ಯಗಳನ್ನೋ ಪುಣ್ಯಕಾರ್ಯಗಳೆಂಬುದನ್ನೋ ತಿಳಿಯದೇ, "ತೃಣ ಛೇದಕಂಬೊಯನಾದಿಗಳ್ ಪೋಲ್ವ" ಎಂಬಂತೆ ಕಾರಣವು "ರುಚಿ" ಯೇ ಆಗಿರುತ್ತದೆ.

ಈ ರೀತಿ ಅಜ್ಞಾನ, ಕರ್ಮ, ಪ್ರಕೃತಿ ಸಂಬಂಧವಾದ ಅಜ್ಞಾನವಾಸನೆ, ಕರ್ಮ ವಾಸನೆ, ರುಚಿ ಇವುಗಳು ಪರಮಾತ್ಮನನ್ನು ಪಡೆಯಲು ಅಡ್ಡಿಯನ್ನುಂಟುಮಾಡುವುವು ಎಂಬುದಾಗಿ ತಿಳಿಯುತ್ತದೆ. ಮತ್ತೆ ಕೆಲವು ವೇದಾಂತಗಳ ಪ್ರಕಾರ "ಅಡ್ಡಿ" ಎಂಬ ಪದ ವಾಕ್ಯಾರ್ಥವನ್ನು ವಿವರಿಸಿದೆ.

> "ತದ್ಯಥಾ ಹಿರಣ್ಯ ನಿಧಿಂ ನಿಹಿತ ಮಕ್ಷೇತ್ರಜ್ಞಾ ಉಪರ್ಯುಪರಿ
> ಸಂಚರಂತೋ ನವಿಂದೇಯುಃ ಏವಮೇವೇಮಾಃ ಸರ್ವಾಃ ಪ್ರಜಾಃ
> ಅಹರಹರ್ಗಚ್ಛಂತ್ಯ ಏತಂ ಬ್ರಹ್ಮಲೋಕಂ ನವಿಂದಂತಿ ಅನೃತೇನ
> ಹಿ ಪ್ರತ್ಯೂಢಾಃ" ! ಎಂಬುದೇ ವೇದಾಂತ ವಾಕ್ಯ. ಈ ವಾಕ್ಯದ ಅರ್ಥ ---

ಭೂಮಿಯ ಕೆಳಗೆ ಅಡಗಿಸಿಟ್ಟಿರುವ ವಸ್ತುವನ್ನು ಆ ಸ್ಥಳದ ವೈಶಿಷ್ಟ್ಯವನ್ನು ತಿಳಿಯದವರು ದಿನವಿಡೀ ಅದೇ ಭೂಮಿಯ ಮೇಲೆ ಸಂಚರಿಸುವರಾಗಿದ್ದಾಗ್ಯೂ ಹೇಗೆ ಆ ವಸ್ತುವನ್ನು ಪಡೆಯಲು ಅಸಮರ್ಥರಾಗಿರುವರೋ, ಹಾಗೆಯೇ ಅತ್ಯಧಿಕ ಶ್ರೇಷ್ಠ ಫಲವುಳ್ಳವನೂ, ಆತ್ಮನೂ ಆಗಿರುವ ಪರಮಾತ್ಮನನ್ನು ತಿಳಿಯದವನು, ಎಲ್ಲಾ ಸಮಯದಲ್ಲಿಯೂ ಅವನೊಂದಿಗೆ ಒಂದು ರೀತಿಯ ಸಂಬಂಧವನ್ನು ಹೊಂದಿದ್ದಾಗ್ಯೂ ಸಹ ಅವನನ್ನು ಪಡೆಯಲಾರನು. ಇವರು ಅನೃತವಾದ ಕಿಂಚಿತ್ ಅಜ್ಞಾನದಿಂದ ಆತ್ಮಾವಿನ ಸ್ಥಾನದಲ್ಲಿ ಇದ್ದರೂ ಸಹ ಆಕರ್ಷಿಸಲ್ಪಟ್ಟು ಮರೆತವರಾಗಿ ಇರುವರು ಎಂಬಂತೆ.

ಮುಂದೆ ತಿಳಿಸುವ ವಸ್ತುವನ್ನು ತಿಳಿಯೋಣ. ಕಪ್ಪೆ ಚಿಪ್ಪು ಬೆಳ್ಳಿಯಾಗಿ ತೋರಲು ಅಜ್ಞಾನ (ದೋಷ)ವೇ ಕಾರಣವೆಂಬುದು ಹೇಗೆ ಲೋಕಾನುಭವದಲ್ಲಿ

ತಿಳಿಯುತ್ತದೆಯೋ ಹಾಗೆಯೇ ಬ್ರಹ್ಮನು ಪ್ರಪಂಚವಾಗಿ ಕಾಣಲು ಕಾರಣ ಅಜ್ಞಾನವೆಂಬ ದೋಷವೇ ಆಗಿರುತ್ತದೆ. ಈ ವಿಚಾರವು ವೇದ ಪ್ರಾಮಾಣ್ಯಗಳಿಂದ ದೃಢಪಡುತ್ತದೆ. ಆ ದೋಷವು ಅವಿದ್ಯೆ, ಅಜ್ಞಾನ ಎಂಬುವ ಶಬ್ದಗಳಿಂದ ಸೂಚಿಸಲ್ಪಟ್ಟಿರುತ್ತದೆ. ಆ ಅಜ್ಞಾನವೂ ಮತ್ತು ಅದರಿಂದುಂಟಾಗುವ ಪ್ರಾಪಂಚಿಕ ದೃಶ್ಯಗಳೂ ಅನೃತವೆಂದು ತಿಳಿಯುತ್ತದೆ.

"ತತ್, ತ್ವಮ್, ಅಸಿ" ಎಂಬ ವೇದ ವಾಕ್ಯದಿಂದ "ಆತ್ಮಾ" ಒಬ್ಬನೇ ಸತ್ಯವಾದುದು ಎಂಬ ನಿಜಸ್ಥಿತಿಯು ಅರಿವುಂಟಾದಾಗ ಮೇಲೆ ಹೇಳಿರುವ ಅಜ್ಞಾನಗಳೂ ಅದರಿಂದುಂಟಾಗುವ ಕಾರ್ಯಗಳೂ ನಾಶವಾಗುವುದರಿಂದ ಅವು ಅನೃತ ವಸ್ತುಗಳು ಎಂದು ಸ್ಪಷ್ಟವಾಗಿ ತಿಳಿಯುತ್ತದೆ. ಇದನ್ನೇ ಮೇಲೆ ಹೇಳಿರುವ ಶ್ರುತಿ ವಾಕ್ಯವು ಪುಷ್ಟೀಕರಿಸುವ ಅನೃತ ಶಬ್ದವು ಎಂದು ತಿಳಿಯಬೇಕು. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ನೋಡುವವರಿಗೆ ಮೇಲೆ ತಿಳಿಸಿದ "ತದ್ಯಥಾ ಹಿರಣ್ಯ ನಿಧಿಂ.............. ... ಅನೃತೇನ ಹಿ ಪ್ರತ್ಯೂಢಾಃ" ಎಂಬ ಶ್ರುತಿ ವಾಕ್ಯಕ್ಕೆ ಮೇಲೆ ತಿಳಿಸಿರುವ ಅರ್ಥವನ್ನು ತಾಳಿ ನೋಡಿದರೆ ಸರಿಹೋಗುವುದಿಲ್ಲ ಎಂದು ತಿಳಿದುಬರುತ್ತದೆ. ಮತ್ತು ಇದರ ತಾತ್ಪರ್ಯವನ್ನು ಹೀಗೆ ವಿವರಿಸಿದೆ. ಒಬ್ಬನು ತಾನು ಮಾಡುವ ಕರ್ಮಫಲದಲ್ಲಿ ಕಿಂಚಿತ್ತು ಆಸೆಯಿಲ್ಲದೇ ಭಗವಂತನ ಸಂತೋಷೋಲ್ಲಾಸಗಳಿಗಾಗಿಯೇ "ಸರ್ವಂ ಶ್ರೀ ಕೃಷ್ಣಾರ್ಪಣಮಸ್ತು" ಎಂಬಂತೆ ಮಾಡುವುದೇ ಆಗಿದ್ದರೆ, ಆ ಕರ್ಮವನ್ನು "ಸುಕೃತ" ಎಂದೂ ಹೀಗಲ್ಲದೇ ಸುಖದುಃಖಗಳಲ್ಲಿ ಒಂದೊಂದು ಫಲವನ್ನಪೇಕ್ಷಿಸಿ ಮಾಡುವ ಕರ್ಮವು ಆ ಭಗವಂತನನ್ನು ಪಡೆಯಲು ಅಡ್ಡಿಯಾಗಿರುವುದರಿಂದ ಮೇಲೆ ಹೇಳಿರುವ ಹಾಗೆ ಈ ಸ್ಥಳದಲ್ಲಿ ಸಂದೇಹ ಪಡಲು ಅವಕಾಶವಿಲ್ಲ.

"ಅಶ್ವ ಇವ ರೋಮಾಣಿ, ವಿಧೂಯ, ಪಾಪಮ್" ಎಂಬ ಶ್ರುತಿ ವಾಕ್ಯದಂತೆ ಆತ್ಮನು ಸಮಸ್ತ ಪಾಪಗಳನ್ನು ಒದರಿ ಪರಮಾತ್ಮನನ್ನು ಪಡೆಯುತ್ತಾನೆ ಎಂಬಂತೆ, "ಏತಂ ಬ್ರಹ್ಮ ಲೋಕಂ ನ ವಿಂದಂತಿ ಅನೃತೇನ ಹಿ ಪ್ರತ್ಯೂಢಾಃ"—ಈ ಶ್ರುತಿ ವಾಕ್ಯವು "ಪಾಪವುಳ್ಳವರು ಪರಮಾತ್ಮನನ್ನು ಪಡೆಯಲಾರರು" ಎಂಬ ತಾತ್ಪರ್ಯವುಳ್ಳದ್ದಾಗಿದೆ. ಆದ್ದರಿಂದ ಇಲ್ಲಿ ವಿರೋಧಕ್ಕೆ ಕಿಂಚಿತ್ತಾದರೂ ಅವಕಾಶವಿಲ್ಲವಾಗಿದೆ. ಆದುದರಿಂದ ಅನೃತ ಶಬ್ದವು ಸುಳ್ಳು ವಸ್ತುವನ್ನು ಪ್ರತಿಪಾದಿಸುತ್ತದೆ ಎಂದು ಹೇಳುವಾಗ ಯಾವ ಅಡ್ಡಿಯೂ ಇಲ್ಲವೆಂಬುದು ಸರ್ವ ಸಾಮಾನ್ಯರಿಗೂ ವಿದಿತವಾಗುತ್ತದೆ.

ಹೀಗೆ ಮೀಮಾಂಸಾ ಶಾಸ್ತ್ರ ರೀತಿಯನ್ನು ಅನುಸರಿಸಿ ವಸ್ತು ತತ್ತ್ವವನ್ನು ನೋಡುವವರಿಗೆ ಸಂದೇಹಕ್ಕೆ ಆಸ್ಪದವೇ ಇಲ್ಲ ಎಂಬುದನ್ನು ತಿಳಿದೆವು. ಇನ್ನು ಮುಂದೆ "ರಾಮಾಯಣದಲ್ಲಿ ವಿರೋಧಿಯು" ಎಂಬುದನ್ನು ತಿಳಿಯೋಣ.

" ರಾಮಾಯಣವೂ ವಿರೋಧಿಯೂ "

ರಾಮಾಯಣವು ವಿರೋಧಿಯನ್ನು ಸತ್ಯವಸ್ತುವನ್ನಾಗಿಯೇ ತಿಳಿಯಪಡಿಸುತ್ತದೆ ಎಂಬುದನ್ನು ನಿರೂಪಿಸುತ್ತೇವೆ. ಇದು ಸತ್ಯ; ಇದು ಅಸತ್ಯ ಎಂಬುದನ್ನು ನಾವು ಪ್ರಕಟಪಡಿಸುವುದು ಹೇಗೆಂದರೆ, ಸಾಮಾನ್ಯರಿಗೂ ಸುಲಭವಾಗಿ ತಿಳಿಯುವಂತೆ ಒಂದು ಉದಾಹರಣೆಯನ್ನು ತೋರಿಸುತ್ತೇವೆ.

ಒಬ್ಬನು ಮೊದಲು ಒಂದು ಕಪ್ಪೆ ಚಿಪ್ಪನ್ನು ಬೆಳ್ಳಿ ಎಂದು ತಿಳಿದು ಅದನ್ನು ತೆಗೆದುಕೊಳ್ಳಲು ಹೋಗಿ, ಅನಂತರ ಇದು ಚಿಪ್ಪು ಬೆಳ್ಳಿಯಲ್ಲ ಎಂಬ ನಿಜವನ್ನು ತಿಳಿದು ಅದನ್ನು ತೆಗೆದುಕೊಳ್ಳದೇ ಬಿಟ್ಟು ಬಿಡುತ್ತಾನೆ. ಆದ್ದರಿಂದ ಪ್ರಕೃತ ಸಂದರ್ಭದಲ್ಲಿ " ಬೆಳ್ಳಿಯು ಅನೃತವಸ್ತು " ಎಂಬುದು ಸ್ಪಷ್ಟವಾಗಿದೆ.

ಬೇರೊಬ್ಬನು ಬೆಳ್ಳಿಯನ್ನೇ ಬೆಳ್ಳಿಯೆಂದು ತಿಳಿದು ಅದನ್ನು ತೆಗೆದುಕೊಳ್ಳಲು ಹೋಗಿ ಅದರಿಂದುಂಟಾಗುವ ಒಳ್ಳೆಯ ಫಲವನ್ನು ಪಡೆಯುತ್ತಾನೆ. ಇಲ್ಲಿ ಬೆಳ್ಳಿಯು ಒಳ್ಳೆಯ ವಸ್ತು ಮತ್ತು ಸತ್ಯ ವಸ್ತು ಎಂದು ನಿರೂಪಿತವಾಗಿದೆ.

ಈ ರೀತಿಯನ್ನನುಸರಿಸಿ ರಾಮಾಯಣವು ಸತ್ಯ, ಅಸತ್ಯವನ್ನು ತಿಳಿಯಪಡಿಸುತ್ತದೆ. ಯಾವ ಸಂದರ್ಭದಲ್ಲಿ ಎಂದರೆ, ಹನುಮಂತನು ಶ್ರೀ ರಾಮಚಂದ್ರನ ಕಲ್ಯಾಣಗುಣಗಳು ಸ್ವಲ್ಪವೂ ವ್ಯವಹಾರದಲ್ಲಿಲ್ಲದ ಲಂಕೆಯ ಅಶೋಕವನದಲ್ಲಿ ಹೋಗಿ ಸೇರಿ ಶೀತಲವಾಗಿಯೂ, ಇಂಪಾಗಿಯೂ ಇರುವಂತಹ ರಾಮನಾಮವನ್ನು ಹೇಳುವಲ್ಲಿ ಅದನ್ನು ಕಿವಿಯಲ್ಲಿ ಕೇಳಿದ ಸೀತಾದೇವಿಯು ಮೊದ ಮೊದಲು, ಶ್ರೀ ರಾಮನಾಮವು ಕಿವಿಯಲ್ಲಿ ಕೇಳಿದುದು ಬರಿಯ ಭ್ರಮೆಯೋ, ವಾತಗತಿಯೋ ಅಥವಾ ಉನ್ಮಾದದಿಂದುಂಟಾದ ವಿಕಾರವೋ ಎಂಬುದಾಗಿ ಸಂದೇಹ ಪಡುತ್ತಾಳೆ. ಅನಂತರ ಹನುಮಂತನು ಸೀತಾದೇವಿಯ ಎದುರಿಗೆ ಹೋಗಿ ಕೈ ಮುಗಿದು ನಿಲ್ಲುತ್ತಾನೆ. ಅನಂತರ ಸೀತಾಮಾತೆಯು ಇದು ಸತ್ಯ ಎಂದು ಮನಸ್ಸಿಗೆ ತಿಳಿದು ಸಂತೋಷಗೊಳ್ಳುತ್ತಾಳೆ. ಇದನ್ನೇ ಈ ಕೆಳಕಂಡ ಶ್ಲೋಕವು ತಿಳಿಸುತ್ತದೆ.

" ಕಿಂನುಸ್ಯಾಚ್ಚಿತ್ತ ಮೋಹೋಽಯಂ ಭವೇದ್ವಾತಗತಿಸ್ತ್ವಿಯಮ್ ।
ಉನ್ಮಾದ ಜೋ ವಿಕಾರೋ ವಾ ಸ್ಯಾದಿಯಂ ಮೃಗತೃಷ್ಣಿಕಾ ॥
ಅಥವಾನಾಯಮುನ್ಮಾದೋ ಮೋಹೋಪ್ಯುನ್ಮಾದ ಲಕ್ಷಣಃ ।
ಸಂಬುಧ್ಯೇ ಚಾಹಮಾತ್ಮಾನ ಮಿಮಂ ಚಾಪಿ ವನೌಕಸಮ್ ॥ "

ತನ್ನ ಯಜಮಾನನನ್ನು ಅಗಲಿದ ಯಜಮಾನಿಯು ಆತನ ವಿಚಾರವನ್ನು ಕೇಳುವುದರಲ್ಲಿ ಇಷ್ಟವುಂಟಾಗುವುದು ಯೋಗ್ಯವಾಗಿದೆ. ಆ ಚಿಂತೆಯ ಒಂದು ಸ್ಥಿತಿಯನ್ನು ಚಿತ್ತಮೋಹ ಎನ್ನುವರು. ಊಟ, ನಿದ್ರೆಗಳಿಲ್ಲದೇ ಇರುವಾಗ, ವಾತ, ಪಿತ್ತ, ಶ್ಲೇಷ್ಮ ಆದಿ ಧಾತುಗಳಿಗೆ ಚಾಂಚಲ್ಯವುಂಟಾಗುತ್ತದೆ. ಆ ಚಂಚಲತೆಯಿಂದುಂಟಾಗುವ ಪವಮಾನದ ಒಂದು ಸ್ಥಿತಿಗೆ " ವಾತಗತಿ " ಎಂದು ಹೆಸರು. ಆ ಸ್ಥಿತಿಯಲ್ಲಿರುವ

ಭ್ರಮೆಯನ್ನು ಇಲ್ಲಿ "ಪಾತಗತಿ" ಎಂದು ಹೇಳುವರು. ಯೌವನವನ್ನು ಅಗಲಿದ ಯುವಕನಿಗೆ ಉಂಟಾಗುವ ಒಂದು ಸ್ಥಿತಿಯನ್ನು ಉನ್ಮಾದವೆಂದು ಪ್ರಕಟಿಸುತ್ತಾರೆ. ಆ ಉನ್ಮಾದದಿಂದುಂಟಾಗುವ ಭ್ರಮೆಯನ್ನು ಉನ್ಮಾದ ಜನ್ಯ ವಿಕಾರ ಎಂದು ಹೇಳುವರು. ಮೃಗತೃಷ್ಣೆಯಂತೆ ಒಂದನ್ನು ಮತ್ತೊಂದನ್ನಾಗಿ ತಿಳಿಯುವುದು ಮತ್ತು ಬಿಸಿಲ್ಗುದುರೆಯನ್ನು ತಣ್ಣೀರೆಂದು ಭ್ರಮಿಸುವುದು.

ಇಲ್ಲಿ ಸೀತಾದೇವಿಯು, ಮೊದಲು ಹನುಮಂತನ ಮಾತುಗಳನ್ನು ಸುಳ್ಳೆಂದು ಭ್ರಮಿಸಿ ಅನಂತರ ತಕ್ಕ ಉದಾಹರಣೆಗಳಿಂದ ಇದು ಅನೃತವಲ್ಲ, ಸತ್ಯವಾದುದ್ ಎಂಬುದಾಗಿ ತಿಳಿಯಪಡಿಸಿರುವುದು ಸರ್ಗ ವೇದ್ಯವಾಗಿದೆ. ಅಂತೆಯೇ ಬ್ರಹ್ಮವು ಪ್ರಪಂಚವಾಗಿ ಕಾಣುವುದಕ್ಕೆ ಕಾರಣ ಅಜ್ಞಾನವೂ, ಪ್ರಾಪಂಚಿಕ ಸುಖ ಮತ್ತು ದೃಶ್ಯಗಳೂ ಪ್ರಪಂಚ ಇವುಗಳು ಅನೃತ ವಸ್ತುಗಳು ಎಂದು ತಿಳಿಯಪಡಿಸುವುದಕ್ಕೆ ತಕ್ಕ ಉದಾಹರಣೆಗಳು ದೊರಕಿವೆ. ಆದರೆ, ನಾವು ಭ್ರಮೆಗೊಳಗಾಗುವ ಸಂಭವವೇ ಇಲ್ಲ. ಹಾಗೆ ಪ್ರಪಂಚದಲ್ಲಿಯೂ, ಶಾಸ್ತ್ರಗಳಲ್ಲಿಯೂ ಉದಾಹರಣೆ ಕಾಣಸಿಗದೇ ಇರುವುದೇ ಆಗಿದೆ ಎಂಬುದನ್ನು ಇಲ್ಲಿ ಮುಖ್ಯವಾಗಿ ಕಾಣತಕ್ಕದ್ದು. ಇನ್ನು ದೇಹಾತ್ಮಾಭಿಮಾನವೂ, ಸ್ವಾತಂತ್ರ್ಯಾಭಿಮಾನವೂ ಪರಮಾತ್ಮನನ್ನು ಪಡೆದು ಅನುಭವಿಸಲು ನಿಜವಾದ ಅಡ್ಡಿಯಂತೆ ಎನ್ನುವುದನ್ನು ರಾಮಾಯಣದಲ್ಲಿ ಕಾಣುತ್ತೇವೆ.

ಮುಂದೆ ಬರುವ ವಿಷಯವನ್ನು ಗಮನಿಸಬೇಕಾದದ್ದು ಸೂಕ್ತ. ಒಬ್ಬನು ಭಗವಂತನನ್ನು ಕುರಿತಾದ ವಿಷಯವನ್ನು ತಿಳಿದಿರುವವನಾಗಿದ್ದರೆ ಅವನು "ಸತ್ತು" ಎಂದೂ ದೇಶಕಾಲ ಸಂಬಂಧವಾದ ಆ ತಿಳಿವಳಿಕೆಯನ್ನು ಪಡೆಯದೇ ಇರುವವನು "ಅಸತ್ತು" ಎಂದು ವೇದಾಂತವು ತಿಳಿಸುತ್ತದೆ.

"ಸಂತಮೇನಮ್" "ಅಸನ್ನೇವಸಭವತಿ" ಒಬ್ಬನು ಪರಮಾತ್ಮನನ್ನು ಕುರಿತಾದ ಜ್ಞಾನವನ್ನು ಪಡೆದಿದ್ದರೂ ಆ ಜ್ಞಾನಕ್ಕೆ ತಕ್ಕ ಪ್ರೇಮವನ್ನು ಆದರವನ್ನು ಭಗವಂತನಲ್ಲಿ ಮಾಡದಿದ್ದರೆ, ಅವನನ್ನು "ಸತ್ತು" ಎಂದೋ "ಅಸತ್ತು" ಎಂದೋ ಮೇಲೆ ಹೇಳಿರುವ ಶ್ರುತಿ ತಿಳಿಸಿಲ್ಲ. ಆದರೂ ಕೂಡ ಅವನೂ ಅಸತ್ತು ಎಂದೇ ಹೇಳಬೇಕು. ಅವನು ಜ್ಞಾನವನ್ನು ಪಡೆದೂ ಪ್ರೇಮವನ್ನು ಮಾಡದೇ ಇರುವುದರಿಂದ ಅವನಿಗೆ ಅಜ್ಞಾನವೂ ದೋಷವೂ ಅಧಿಕವಂತೆ.

ಇದರ ಹಾಗೆ, ಒಬ್ಬನು ಜೀವನಾದ ತನ್ನನ್ನು ದೇಹವಾಗಿಯೋ ಸ್ವತಂತ್ರನನ್ನಾಗಿಯೋ ತಿಳಿಯಲಿಲ್ಲ; ಅಂತಹವನು ತನ್ನ ನಿಜಸ್ಥಿತಿಯನ್ನು ಒಂದು ರೀತಿಯಲ್ಲಿ ತಿಳಿದವನೇ ಆಗಿರುತ್ತಾನೆ. ಆದರೂ ಸಹ ಅವನು ದೇಹಾತ್ಮಾಭಿಮಾನ, ಮತ್ತು ಸ್ವಾತಂತ್ರ್ಯಾಭಿಮಾನ ದೋಷವುಳ್ಳವನು. ಯಾವ ರೀತಿಯಾದ ಗುಣವನ್ನು ಪಡೆಯುತ್ತಾನೆಯೋ ಆ ರೀತಿಯಾದ ಚರಿತ್ರೆ ಉಳ್ಳವನಾಗಿದ್ದರೆ, ಪರಮಾತ್ಮನನ್ನು ಅನುಭವಿಸಿ ಬಾಳಲಾರದೇ ನಾಶವಾಗುತ್ತಾನೆಂಬುದು ಒಂದು ಶ್ರೇಷ್ಠ ಸತ್ಯವಾಗಿದೆ.

ಈ ಸತ್ಯಸಂಗತಿಯನ್ನು ರಾಮಾಯಣವು, ಚಕ್ರವರ್ತಿಯಾದ ದಶರಥನ ಚರಿತ್ರೆ

ಯಲ್ಲಿ ನಡೆತೆಯಲ್ಲಿ ಸ್ಪಷ್ಟವಾಗಿ ತಿಳಿಸುತ್ತದೆ. ಎಲ್ಲಿ ಯಾವ ರೀತಿ ಎಂದರೆ, ದಶರಥನು ವಸಿಷ್ಠರನ್ನು ಕುಲಗುರುವಾಗಿ ಪಡೆದಿದ್ದನು. ಅಶ್ವಮೇಧಯಾಗ ಮತ್ತು ಪುತ್ರ ಕಾಮೇಷ್ಟಿ ಮುಂತಾದ ಯಾಗಗಳನ್ನು ಮಾಡಿರುವನು. ಆದ್ದರಿಂದ ಆತ್ಮನ ನಿಜ ಸ್ಥಿತಿಯನ್ನು ತಿಳಿಯದಿದ್ದವನಲ್ಲ. ಹೀಗಿರುವಲ್ಲಿಯೂ ಶ್ರೀ ರಾಮನಿಗೆ ರಾಜ್ಯಾಭಿಷೇಕವನ್ನು ಮಾಡಲು ನಿಶ್ಚಯಿಸಿ ತನ್ನ ಪ್ರಿಯ ಮಹಿಷಿಯಾದ ಕೈಕೇಯಿಯ ಹತ್ತಿರ ಹೋಗಿ ತಿಳಿಸಲು, ಆಗ ಕೈಕೇಯಿಯು ಭರತನಿಗೆ ರಾಜ್ಯಾಭಿಷೇಕ ಮಾಡಿ, ಶ್ರೀ ರಾಮಚಂದ್ರನು ಹದಿನಾಲ್ಕು ವರ್ಷಕಾಲ ವನವಾಸಕ್ಕೆ ಕಳುಹಿಸಬೇಕು ಎಂದು ಬೇಡಿಕೊಳ್ಳಲು ದಶರಥ ಮಹಾರಾಜನು ತನ್ನ ಹೆಂಡತಿಯ ಆ ಬೇಡಿಕೆಗೆ ಒಳಪಟ್ಟನು. ಇದರಂತೆ ಶ್ರೀ ರಾಮಚಂದ್ರನು ಸೀತಾ ಸಮೇತನಾಗಿ ಅನುಜನಾದ ಲಕ್ಷ್ಮಣನೊಂದಿಗೆ ವನಕ್ಕೆ ತೆರಳಿದನು.

ಈ ವಿಚಾರವನ್ನು ಹೇಳುವ ಸ್ಥಳದಲ್ಲಿ ರಾಮಾಯಣವು ದಶರಥ ಚಕ್ರವರ್ತಿಯನ್ನು ಅನೇಕ ಸ್ಥಳಗಳಲ್ಲಿ ಕೈಕೇಯಿಯಲ್ಲಿ ಮೋಹಿತನಾದವನು ಎಂದೇ ನಿಂದಿಸಿ ಹೇಳಿದೆ. "ಕಾಮಾಕಾಮಲಪತ್ನ್ಯಾಃ ಮುಮಾಜಿವೇಸಿತಾಮಿದಮ್" ಎನ್ನುವುದನ್ನು ಇದರ ಹಾಗಿರುವ ವಚನಗಳನ್ನು ಇಲ್ಲಿ ಕಾಣಬಹುದು. ಒಬ್ಬನಿಗೆ ಆತ್ಮನ ನಿಜ ಸ್ಥಿತಿಯು ಇರುವ ಹಾಗೆಯೇ ಇದ್ದಿದ್ದರೆ ಆದರೆ, ಹೆಣ್ಣಿನ ವ್ಯಾಮೋಹವು ಸ್ವಲ್ಪವೂ ಇರುವುದಿಲ್ಲಾ. "ಕಾಮಿ" ಎಂದು ಹೇಳುವಾಗ ಹೆಣ್ಣಿನ ಮೋಹವು ಉಂಟು ಎಂದು ಚೆನ್ನಾಗಿ ತಿಳಿಯುತ್ತದೆಯಲ್ಲವೇ ? ದೇಹಾತ್ಮಾಭಿಮಾನ, ಸ್ವಾತಂತ್ರ್ಯಾಭಿಮಾನ ಪಡೆದಿರುವಂತಹವನ ಚರಿತ್ರೆಯೇ ಅಲ್ಲವೇ ? ಇದು. ಆ ಕಾಲದಲ್ಲಿಯೇ ಪರಮ ಪುರುಷನಾದ ಶ್ರೀ ರಾಮನನ್ನು ಅನುಭವಿಸಿ ಬಾಳಲಾರದೇ ಮರಣ ಹೊಂದಿದನು.

ಆದರೆ ದಶರಥನು ಶ್ರೀ ರಾಮನನ್ನಗಲಿ ಮರಣವನ್ನು ಹೊಂದಲು ಮತ್ತೊಂದು ಕಾರಣವೂ ಇದೆ. ಕೈಕೇಯಿಗೆ ಎರಡು ವರಗಳ ವಚನವನ್ನಿತ್ತುದರಿಂದಲೂ ಇದಕ್ಕೆ ಕಟ್ಟುಬಿದ್ದು ಶ್ರೀ ರಾಮಚಂದ್ರನೆಂಬ ಧರ್ಮವನ್ನು ತೊರೆದು ಬಿಟ್ಟಿದ್ದರಿಂದ ಆ ಪರಮಾತ್ಮನನ್ನು ಅಗಲಬೇಕಾಯಿತು. ಸತ್ಯ ಎಂಬುದು ಧರ್ಮವೇ ಆದರೂ, ಶ್ರೀ ರಾಮ ಪ್ರಭುವೆಂಬ ಸರ್ವ ಶ್ರೇಷ್ಠ ಧರ್ಮವನ್ನು ನೋಡುವಲ್ಲಿ ಆ ಸತ್ಯ ಎಂಬ ಧರ್ಮವನ್ನು ಒಂದು ವಸ್ತುವನ್ನಾಗಿ ಪರಿಗಣಿಸದೆ ಕಸಕ್ಕಿಂತ ಕಡೆಯಾಗಿ ಕಂಡ ದಶರಥ ಮಹಾರಾಜನು ಸತ್ಯವನ್ನು ಕಡೆಗಣಿಸಿದ್ದರಿಂದ ಆ ಪರಮಾತ್ಮನನ್ನು ತೊರೆದು ಅವನನ್ನು ಅನುಭವಿಸಲಾಗಲಿಲ್ಲಾ. ಇದಕ್ಕೆ ಕಾರಣ ಶ್ರೀ ರಾಮಚಂದ್ರನು ಸರ್ವ ಶ್ರೇಷ್ಠನೆಂಬುದನ್ನು "ಉಪಾಯ" ವನ್ನು ಕುರಿತು ಹೇಳುವ ಭಾಗದಲ್ಲಿ ಕಾಣಬಹುದು. ಇದನ್ನು ಪಿಳ್ಳೈಲೋಕಾಚಾರ್ಯರು "ಚಕ್ರವರ್ತಿಯು ಹಾಗೆ ಕಳೆದುಕೊಳ್ಳುವುದಕ್ಕೆ ನಿದರ್ಶನ" ಎಂದು ಹೇಳಿರುತ್ತಾರೆ.

ನಿಜ ಸ್ಥಿತಿಯು ಈ ರೀತಿ ಇರುವಾಗ ಕೈಕೇಯಿಯಲ್ಲಿರುವ ಆಸೆಯೂ ಶ್ರೀ ರಾಮನನ್ನಗಲಲು ಒಂದು ಕಾರಣವೆಂದರೆ ದೋಷವಿಲ್ಲ. ಇತರ ವಿಚಾರಗಳಲ್ಲಿ ತೊಡಗಿರು

ವವನಿಗೆ ಭಗವಂತನು ದೊರೆಯಲಾರನು. ಎಲ್ಲವನ್ನೂ ಬಿಟ್ಟರೆ ಪರಮಾತ್ಮನನ್ನು ಪಡೆಯಬಹುದು ಎಂದು ಶಾಸ್ತ್ರದಲ್ಲಿ ಹೇಳಿರುವ ಒಂದು ಶ್ರೇಷ್ಠ ಸತ್ಯ. ಈ ರೀತಿಯಾದ ದೇಹಾತ್ಮಾಭಿಮಾನ, ಸ್ವಾತಂತ್ರ್ಯಾಭಿಮಾನ ಇವುಗಳ ತಡೆಯನ್ನು ಕಂಡೆವು.

ಇನ್ನು ರಾಮಾಯಣದಲ್ಲಿ "ಕರ್ಮವು ಭಗವಂತನನ್ನು" ಕಳೆದು ಕೊಳ್ಳುವಂತೆ ಮಾಡುತ್ತದೆ ಎಂಬುದನ್ನು ನೋಡೋಣ. ಶ್ರೀ ರಾಮಚಂದ್ರನು ಸರ್ವ ಶ್ರೇಷ್ಠನಾದ ಭಗವಂತನು, ಸೀತಾಮಾತೆಯು ಸಾಕ್ಷಾತ್ ಲಕ್ಷ್ಮೀದೇವಿ ಎಂಬುದು ಸತ್ಯ. ಶ್ರೀ ರಾಮನಿಗೆ ಪಾಪ, ಪುಣ್ಯಗಳ ಸಂಬಂಧವಿಲ್ಲ ಎಂಬುದು ಸತ್ಯವೇ ಆದರೂ ಸೀತಾಮಾತೆಯು ಜೀವನು ಹೀಗಿರಲು ಭಗವಂತನನ್ನು ಅಗಲಲು ಹೇಗೆ ಸಂಭವಿಸಿತು? ಎಂಬುದನ್ನು ತನ್ನ ಚರಿತ್ರೆಯಲ್ಲಿ ತೋರಿಸಿರುತ್ತಾರೆ. ಇದನ್ನು ಮೊದಲು ತಿಳಿಯಬೇಕಾದದ್ದು ಅತ್ಯಾವಶ್ಯಕ. ಶ್ರೀ ರಾಮಚಂದ್ರನು ವನಕ್ಕೆ ತೆರಳುವಾಗ, ಸೀತಾದೇವಿಯು ಸೌಖ್ಯವನ್ನು ವನವಾಸದ ಕಷ್ಟವನ್ನು ಕುರಿತು ವನವಾಸವನ್ನು ಮುಗಿಸಿಕೊಂಡು ತಾನು ಬರುವವರೆಗೆ ಅಯೋಧ್ಯೆಯಲ್ಲಿಯೇ ಇರಬೇಕೆಂದು ಹೇಳಿಕೊಂಡರೂ ಆ ದೇವಿಯು ಭಗವಂತನ ವಿಯೋಗವನ್ನು ಸಹಿಸಲಾರದೇ ತನ್ನನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗಬೇಕೆಂದು ಬಯಸುತ್ತಾಳೆ. ಅನೇಕ ಸಾರಿ ಪ್ರಾರ್ಥಿಸಿಯೂ ಒಪ್ಪದೇ ಇದ್ದ ಶ್ರೀ ರಾಮನನ್ನು ಕುರಿತು ಸೀತೆಯು ನನ್ನ ತಂದೆಯಾದ ಜನಕನು ನನ್ನನ್ನು ಪೌರುಷವಿರುವವನಿಗೆ ಕೊಡದೇ ಹೆಣ್ಣಿಗೇ ಕೊಟ್ಟುಬಿಟ್ಟರು. ಶ್ರೀ ರಾಮನು ಆಂತರಿಕವಾಗಿ ಹೆಣ್ಣೆಯನ್ನು ಹೊರನೋಟಕ್ಕೆ ಪುರುಷರಾಗಿರುವರಲ್ಲವೇ? ನೀವು ಆಂತರಿಕವಾಗಿಯೂ ಪುರುಷರಾಗಿದ್ದರೆ, ಹೀಗೆ ನನ್ನನ್ನು ಬಿಟ್ಟು ಹೋಗುತ್ತೇನೆಂದು ಹೇಗೆ ತಾನೇ ಹೇಳುತ್ತಿದ್ದೀರಿ? ಎಂದು ಪ್ರಶ್ನೆ ಹಾಕುತ್ತಾಳೆ. "ಸ್ತ್ರಿಯಂ ಪುರುಷ ವಿಗ್ರಹಂ" ಎನ್ನುತ್ತಾಳೆ ಎನ್ನುವುದು ಚರಿತ್ರಾರ್ಹವಾದ ಸಂಗತಿ.

ತನ್ನ ಚರಿತ್ರೆಯಿಂದ ಪ್ರಪಂಚಕ್ಕೆ ಒಳ್ಳೆಯದನ್ನುಂಟುಮಾಡಲು ಬಂದ ಸೀತಾದೇವಿಯು ಪುರುಷೋತ್ತಮನಾದ ಶ್ರೀ ರಾಮನನ್ನು ಕುರಿತು ನನ್ನ ತಂದೆಯವರು ಹೆಣ್ಣಿಗೆ ಹೆಣ್ಣನ್ನು ಕೊಟ್ಟರು ಎಂದು ಹೇಳುವುದು ನ್ಯಾಯವಾಗಿದೆಯೇ? ಈ ರೀತಿ ಹೇಳಿರುವುದು ಭಗವದಪಚಾರವಲ್ಲವೇ ಇದನ್ನು ಮೊದಲು ಇಲ್ಲಿ ಸೂಚಿಸತಕ್ಕದ್ದು.

ಅನಂತರವೂ ರಾಮಾಯಣದಲ್ಲಿಯೇ ಬೇರೊಂದು ವಿಷಯವನ್ನು ಕಾಣತಕ್ಕದ್ದಾಗಿದೆ. ಶ್ರೀ ರಾಮನು ಸೀತೆಯಲ್ಲಿರುವ ಅತ್ಯಧಿಕ ಪ್ರೇಮಾತಿಶಯದಿಂದ ಮಾರೀಚನೆಂಬ ಮಾಯಾಮೃಗದ ಹಿಂದೆ ಹೋಗಿ ಆ ಮೃಗವನ್ನು ಬಾಣದಿಂದ ಹೊಡೆದು ಕೊಂದನು. ಆ ಸಮಯದಲ್ಲಿ ಮಾರೀಚನು ಮೃಗರೂಪವನ್ನು ಬಿಟ್ಟು ತನ್ನ ನಿಜರೂಪವಾದ ಶರೀರದೊಂದಿಗೇ ಪ್ರಾಣವನ್ನು ಬಿಟ್ಟನು. ಹಾಗೆ ಪ್ರಾಣಬಿಡುವ ಸಂದರ್ಭದಲ್ಲಿ ಶ್ರೀ ರಾಮನ ಕಂಠವನ್ನು ಅನುಸರಿಸಿ ತನ್ನ ಧ್ವನಿಯಲ್ಲಿ ಹಾ! ಸೀತೆ! ಹಾ! ಲಕ್ಷ್ಮಣ! ಎಂದು ಕೂಗಿ ತನ್ನ ಪ್ರಾಣವನ್ನು ಬಿಟ್ಟನು. ಆ ಧ್ವನಿಯನ್ನು ಕೇಳಿದ ಸೀತೆಯು ಭಯಗೊಂಡವಳಾಗಿ ಹತ್ತಿರದಲ್ಲಿದ್ದ ಲಕ್ಷ್ಮಣನನ್ನು ಅಣ್ಣನ ರಕ್ಷಣೆಗೆ ಹೋಗಬೇಕೆನ್ನಲು

ಶ್ರೀ ರಾಮನ ಸರ್ವಶ್ರೇಷ್ಠತೆಯನ್ನು ತಿಳಿದಿದ್ದ ಲಕ್ಷ್ಮಣನು ಸುಮ್ಮನೆ ಇದ್ದನು. ಸೀತಾದೇವಿಯು ಲಕ್ಷ್ಮಣನ ಔದಾಸೀನ್ಯವನ್ನು ನೋಡಿ ಅನಾರ್ಯ, ಅಕರುಣಾರಂಭ, ನೃಶಂಸ, ಕುಲಪಾಂಸನ ಇತ್ಯಾದಿ ಕಠೋರ ನುಡಿಗಳಿಂದ ಚುಚ್ಚಿ ನಿಂದಿಸಿದಳು.

ಲಕ್ಷ್ಮಣನು ಸ್ವಾಭಾವಿಕವಾಗಿಯೇ ಶ್ರೀ ರಾಮನಲ್ಲಿ ಅತ್ಯಧಿಕವಾದ ಪ್ರೇಮ, ಶ್ರದ್ಧೆಯುಳ್ಳವನು. ಈ ರೀತಿ ಅತ್ಯಧಿಕ ಭ್ರಾತೃ ಸ್ನೇಹವನ್ನುಳ್ಳ ಲಕ್ಷ್ಮಣನನ್ನು ಕುರಿತು ಹೇಳಬಾರದ ಶಬ್ದಗಳಿಂದ ಲಕ್ಷ್ಮಣಾ ನೀನು ನಿಶ್ಚಯವಾಗಿ ನನ್ನ ಮೇಲೆ ಕಣ್ಣಿಟ್ಟಿರುವೆ. ಆದಕಾರಣ ಕಪಟವೇಷದಿಂದ ಅರಣ್ಯಕ್ಕೆ ಬಂದಿರುವೆ ಎಂದು ಮುಂತಾಗಿ ಮೇಲ್ಕಂಡಂತೆ ನಿಂದಿಸಿದಳು. ಇದು ಸೀತಾದೇವಿಗೆ ಸರಿಯೇ ? ಇದು ಭಾಗವತಾಪಚಾರ ವಲ್ಲವೇ ? ಇದನ್ನು ಎರಡನೆಯದಾಗಿ ಇಲ್ಲಿ ಕಾಣತಕ್ಕದ್ದು.

ಈ ರೀತಿ ಪರಮಾತ್ಮನಲ್ಲಿಯೂ, ಭಾಗವತೋತ್ತಮನಾದ ಲಕ್ಷ್ಮಣನಲ್ಲಿಯೂ ಸೀತಾದೇವಿಯು ನಡೆದುಕೊಂಡ ಕಾರಣಕ್ಕಾಗಿ ಪರಮಾತ್ಮನನ್ನಗಲೀ ಅಶೋಕವನದಲ್ಲಿ ರಾಕ್ಷಸಿಯರ ನಡುವೆ ಇದ್ದು ಕಷ್ಟಪಡಬೇಕಾಯಿತು ಎಂಬುದನ್ನು ನಾವು ಇಲ್ಲಿ ತಿಳಿಯಬೇಕು. ಇದನ್ನು ಸೀತಾದೇವಿಯು ಹೇಳಿರುವ " ಮಮೈವ ದುಷ್ಕೃತಂ ಕಿಂಚಿತ್ ಮಹದಸ್ತಿ ನ ಸಂಶಯಃ " ಎನ್ನುವ ಮಾತಿನಿಂದ ಚೆನ್ನಾಗಿ ತಿಳಿಯಬಹುದು. ಈ ಮಾತಿನಲ್ಲಿ ಶ್ರೀ ರಾಮನಿಗೆ ಮಾಡಿದ ಅಪರಾಧವನ್ನು " ಕಿಂಚಿತ್ " ಎನ್ನುವ ಶಬ್ದವೂ, ಲಕ್ಷ್ಮಣನಲ್ಲಿ ಮಾಡಿದ ಅಪರಾಧವನ್ನು " ಮಹತ್ " ಎನ್ನುವ ಶಬ್ದವೂ ಹೇಳುತ್ತವೆ ಎಂದು ನಾವು ಚೆನ್ನಾಗಿ ತಿಳಿಯಬಹುದು. ಈ ರೀತಿ ಕರ್ಮವು ಪರಮಾತ್ಮನನ್ನು ಅಗಲುವಂತೆ ಮಾಡುತ್ತದೆ ಎಂಬುದನ್ನು ಒಂದು ರೀತಿಯಿಂದ ಸೀತಾದೇವಿಯ ಚರಿತ್ರೆಯಲ್ಲಿ ಕಂಡೆವು. ಇನ್ನು ಪ್ರಕೃತಿ ಸಂಬಂಧವು ತಡೆ ಎಂಬುದನ್ನು ರಾಮಾಯಣದಲ್ಲಿಯೇ ಕೆಲವು ಸ್ಥಳಗಳಲ್ಲಿ ತೋರಿಸುತ್ತದೆ.

(1) ಶ್ರೀ ರಾಮನು ಸೀತಾ, ಲಕ್ಷ್ಮಣರೊಡಗೂಡಿ ಶರಭಂಗರ ಆಶ್ರಮಕ್ಕೆ ಬರುವ ಸಮಯದಲ್ಲಿ ಇಂದ್ರನು ಶರಭಂಗರ ಹತ್ತಿರ ಬಂದು ವಾರ್ತಾಲಾಪದಲ್ಲಿ ತೊಡಗಿದ್ದನು. ಆಗ ಶ್ರೀ ರಾಮನನ್ನು ನೋಡಿ, ಈ ರಾಮನು ಮತ್ತಾರಿಂದಲೂ ಆಗದ ಅಸಾಧ್ಯವಾದ ಕಾರ್ಯವಾದ ರಾವಣವಧೆಯನ್ನು ಮಾಡಲು ಇಚ್ಛಿಸಿ ಅವತಾರ ಹೊಂದಿರುವನು. ಅದನ್ನು ನೆರವೇರಿಸಿದ ನಂತರ ಇವನನ್ನು ನೋಡುವುದು ಉತ್ತಮ ಎಂದು ಹೇಳಿ ಶರಭಂಗರ ಅಪ್ಪಣೆಯನ್ನು ಪಡೆದು, ರಥವನ್ನು ಹತ್ತಿ ತನ್ನ ಲೋಕಕ್ಕೆ ತೆರಳಿದನು. ಇಂದ್ರನು ಹೋದನಂತರ ಶ್ರೀ ರಾಮಚಂದ್ರನು ಶರಭಂಗರಲ್ಲಿ ಹೋಗಿ ಅವರ ಚರಣಾರವಿಂದಗಳಲ್ಲಿ ನಮಸ್ಕರಿಸಿದನು. ಅನಂತರ ಅವರಲ್ಲಿ ಇಂದ್ರನು ಬಂದು ಹೋದ ವಿಚಾರವನ್ನು ಕುರಿತು ಪ್ರಶ್ನಿಸಿದನು. ಆ ಪ್ರಶ್ನೆಗೆ ಉತ್ತರವಾಗಿ ಶರಭಂಗರು ಈ ಕೆಳಗೆ ವಿವರಿಸಿರುವ ಉತ್ತರ ನೀಡಿದರು.

" ಮಾಮೇಷ ವರದೋ ರಾಮ ಬ್ರಹ್ಮಲೋಕಂ ನಿನೀಷತಿ ।
ಜಿತಮುಗ್ರೇಣ ತಪಸಾ ದುಷ್ಪ್ರಾಪಮಕೃತಾತ್ಮಭಿಃ ॥

ಅಹಂ ಜ್ಞಾತ್ವಾ ನರವ್ಯಾಘ್ರ ವರ್ತಮಾನಮದೂರತಃ ।
ಬ್ರಹ್ಮಲೋಕಂ ನಗಚ್ಛಾಮಿತ್ವಾಮದೃಷ್ಟ್ವಾ ಪ್ರಿಯಾತಿಥಿಮ್ ॥
ತ್ವಯಾಹಂ ಪುರುಷ ವ್ಯಾಘ್ರಧಾರ್ಮಿಕೇಣ ಮಹಾತ್ಮನಾ ।
ಸಮಾಗಮ್ಯ ಗಮಿಷ್ಯಾಮಿ ತ್ರಿದಿವಂ ದೇವ ಸೇವಿತಮ್ ॥ ''

ಈ ಶ್ಲೋಕದ ತಾತ್ಪರ್ಯವೇನೆಂದರೆ, ಶ್ರೀ ರಾಮಚಂದ್ರನೇ ಎಲ್ಲರಿಗೂ ಒಳ್ಳೆಯದನ್ನು ಉಂಟುಮಾಡುವ ಈ ಇಂದ್ರನು ಬ್ರಹ್ಮನ ಆಜ್ಞೆಯಿಂದ ಆ ಬ್ರಹ್ಮ ಲೋಕಕ್ಕೆ ನನ್ನನ್ನು ಕರೆದುಕೊಂಡು ಹೋಗಲು ಇಚ್ಛಿಸುತ್ತಾನೆ. ನಾನು ಇಷ್ಟು ಸಮೀಪದವಾಗಿ ಪ್ರತ್ಯಕ್ಷನಾಗಿರುವ ಪರಮಪುರುಷನಾದ ನಿನ್ನನ್ನು ಜ್ಞಾನ ಚಕ್ಷುಸ್ಸಿನಿಂದ ನೋಡಿರುವುದರಿಂದ, ಅತ್ಯಂತ ಪ್ರಿಯನಾದ ನಿನ್ನನ್ನು ಬಾಹ್ಯನೇತ್ರಗಳಿಂದಲೂ ಕಂಡು ಆನಂದಿಸಲು ಇಚ್ಛಿಸಿ (ಪುನಃ ಆಪಾಗಮನ ದೋಷದಿಂದ ಕೂಡಿರುವ) ಬ್ರಹ್ಮ ಲೋಕಕ್ಕೆ ಹೋಗಲು ಇಷ್ಟವಿಲ್ಲದೇ ಇರುತ್ತೇನೆ. ಅತಿ ಶ್ರೇಷ್ಠ ಧರ್ಮವೆಂದು ಹೇಳಲ್ಪಡುವ ಪರಮಾತ್ಮನಾಗಿರುವ ನಿನ್ನ ಸೌಲಭ್ಯಕ್ಕೆ ಅಧೀನನಾಗಿ ನಂತರ, ಅನಂತ, ಗರುಡ ಮುಂತಾದ ನಿತ್ಯರುಗಳಿಂದ ಸೇವಿಸಲ್ಪಡುತ್ತಿರುವ ನಿನ್ನನ್ನು ವೈಕುಂಠದಲ್ಲಿ ಸೇರಲು ಇಚ್ಛಿಸುತ್ತೇನೆ ಎನ್ನುವುದಾಗಿದೆ.

ಶರಭಂಗರು ಈ ರೀತಿ ಹೇಳಿ, ಶ್ರೀ ರಾಮನನ್ನು ಕುರಿತು, ಶ್ರೀ ರಾಮಚಂದ್ರ, ನೀನು ನನ್ನನ್ನು ಸ್ವಲ್ಪ ಹೊತ್ತು ಕಟಾಕ್ಷಿಸಬೇಕು ಎಂದು ಅಪೇಕ್ಷಿಸಿ ಆ ಭಗವಂತನ ಎದುರಿಗೇ ಪ್ರಜ್ವಲಿಸುತ್ತಿರುವ ಹೋಮಾಗ್ನಿಯಲ್ಲಿ ಬ್ರಹ್ಮ ಬೋಧ ಮಂತ್ರಗಳನ್ನು ಜಪಿಸಿಕೊಂಡು ಅದರಲ್ಲಿ ಪ್ರವೇಶಿಸಿ, ಸರ್ಪವು ತನ್ನ ಪೊರೆಯನ್ನು ಕಳಚುವಂತೆ ಈ ಮನುಷ್ಯ ಶರೀರವನ್ನು ಬಿಟ್ಟು ಅರ್ಚಿರಾದಿ ಮಾರ್ಗದಲ್ಲಿ ಹೋಗಿ ಪರಮಪದದಲ್ಲಿ ಪರಮಾತ್ಮನನ್ನು ಸೇರಿ ಆನಂದಿತರಾದರು ಎಂಬುದು ಶರಭಂಗರ ಚರಿತ್ರಾರ್ಹವಾದ ಸತ್ಯ.

(2) ಶ್ರೀ ರಾಮಚಂದ್ರನ ಪ್ರಿಯ ಪತ್ನಿಯಾದ ಸೀತೆಯನ್ನು ಮತ್ತು ಅಪನೊಬ್ಬನಿಗೇ ಸ್ವಂತವಾದ ವಸ್ತುವನ್ನು ನ್ಯಾಯ ವಿರುದ್ಧವಾಗಿ ಅಪೇಕ್ಷಿಸಿ ತನಗೇ ಮಾಡಿಕೊಳ್ಳಬೇಕೆಂದು ರಾವಣನು ಎತ್ತಿಕೊಂಡು ಹೋಗುವ ಸಮಯದಲ್ಲಿ ಅದನ್ನು ತಿಳಿದ ಜಟಾಯುವು ತನ್ನ ಪ್ರಾಣವಿರುವವರೆವಿಗೂ ಆ ರಾವಣನೊಂದಿಗೆ ಹೋರಾಡಿದನು. ಅಂತ್ಯದಲ್ಲಿ ಆ ಪಾಪಿಯಿಂದಲೇ ಸೀತಾದೇವಿಗಾಗಿ ಪ್ರಾಣವನ್ನು ಬಿಡಬೇಕಾಯಿತು. ಪರಮ ಪುರುಷನಾದ ಶ್ರೀ ರಾಮನು ಸೀತಾದೇವಿಯನ್ನು ಹುಡುಕಿಕೊಂಡು ಬರುವಾಗ "ಆಯುಷ್ಮನ್" ಎಂದು ಪರಮಾತ್ಮನಾದ ಶ್ರೀ ರಾಮನಿಗೆ ಮಂಗಳವನ್ನು ಹಾಡಿದನು. ಆ ನೀಚನಾದ ರಾವಣನು ನಿನ್ನ ಪ್ರಾಣವಾದ ಸೀತೆಯನ್ನೂ ಮತ್ತು ನನ್ನ ಪ್ರಾಣವನ್ನೂ ತೆಗೆದುಕೊಂಡು ಹೋಗಿಬಿಟ್ಟನು ಎಂಬ ಸತ್ಯವನ್ನರುಹಿ ಪ್ರಾಣ ಬಿಟ್ಟನು. ಜಟಾಯುವಿಗೆ ಶ್ರೀ ರಾಮನು ಬ್ರಹ್ಮಮೇಧ ಸಂಸ್ಕಾರವನ್ನು ಮಾಡಿ "ಗಚ್ಛಲೋಕಾನನುತ್ತಮಾನ್" ಎಂಬಂತೆ ವಿಷ್ಣುಲೋಕವನ್ನು ಕೊಟ್ಟು ಅನುಗ್ರಹಿಸಿದನೆಂಬುದೇ ಜಟಾಯು ವೃತ್ತಾಂತದ ಸಾರಾಂಶವಾಗಿದೆ.

(3) ಶಬರಿ ಎಂಬ ಬೇಡ ವೃದ್ಧೆಯು ತನ್ನ ಆಶ್ರಮಕ್ಕೆ ಪದಾರ್ಪಣೆ ಮಾಡಿದ ಶ್ರೀ ರಾಮ, ಲಕ್ಷ್ಮಣರಿಗೆ ಅತ್ಯಧಿಕ ಪ್ರೇಮದೊಂದಿಗೆ ಹಣ್ಣುಗಳನ್ನು ಪಕ್ವವಾಗಿದೆಯೋ ಇಲ್ಲವೋ, ರುಚಿಯಾಗಿದೆಯೋ ಇಲ್ಲವೋ ಎಂಬುದಾಗಿ ಎಂಜಲು ಮಾಡಿ, ತನಗೆ ಈ ಹಣ್ಣುಗಳು ರಾಮನು ತಿನ್ನಲು ಯೋಗ್ಯವಾದುದು ಎಂಬುದಾಗಿ ಖಾತ್ರಿಪಡಿಸಿಕೊಂಡು ಅತಿ ಪ್ರೇಮದಿಂದ ಶ್ರೀ ರಾಮ, ಲಕ್ಷ್ಮಣರಿಗೆ ಕೊಟ್ಟು ಉಪಚರಿಸಿದಳು. ಶ್ರೀ ರಾಮನು ಅವಳ ಉಪಚಾರದಿಂದ ಕೃತಕೃತ್ಯನಾಗಿ ಅವಳಿಗೆ ವಿಷ್ಣುಲೋಕವನ್ನನುಗ್ರಹಿಸಿದನು. ಇಲ್ಲಿ ಶಬರಿಯು "ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂವ್ರಜ" ಎಂಬ ಗೀತೆಯ ನುಡಿಯಂತೆ, ಶಬರಿಯು ನಿಷ್ಕಳಂಕ ಪ್ರೇಮದಿಂದ ಪರಮಾತ್ಮನನ್ನು ಪೂಜಿಸಿ, ಅವನ ಸಾಯುಜ್ಯವನ್ನು ಹೊಂದಿದಳು ಎಂಬುದೇ ಶಬರಿಯ ಚರಿತ್ರೆ. ಇಲ್ಲಿ

"ಚಕ್ಷುಷಾ ತವ ಸೌಮ್ಯೇನ ಪೂತಾಸ್ಮಿ ರಘುನಂದನ।
ಪಾದಮೂಲಂ ಗಮಿಷ್ಯ ಮಿಚ್ಛಾಮಿ॥" ಎಂಬುವ

ಮಾತುಗಳನ್ನು ನೋಡತಕ್ಕದ್ದು. ಮೇಲೆ ವಿವರಿಸಿರುವ ಮೂರು ಸಂದರ್ಭಗಳಲ್ಲಿಯೂ ಶರಭಂಗರು, ಜಟಾಯು ಮತ್ತು ಶಬರಿ ಇವರೆಲ್ಲರೂ ಶ್ರೀ ರಾಮನ ಸೌಶೀಲ್ಯಗುಣಗಳಿಗೆ ವಶರಾಗಿ ತಮ್ಮ ತಮ್ಮ ಭೌತಿಕ ನಶ್ವರವಾದ ದೇಹವನ್ನು ತ್ಯಾಗಮಾಡಿ ಆ ಪರಮಾತ್ಮನ ಚರಣಾರವಿಂದವನ್ನು ಪಡೆದರೆಂದು ತಿಳಿಯುವುದರಿಂದ ಸಂಸಾರವನ್ನು ಅಳಿಸುವುದಕ್ಕೆ ದೇಹವು ತಡೆ ಎನ್ನುವುದು ಚೆನ್ನಾಗಿ ತಿಳಿಯುತ್ತದೆ.

ದೇಹಾತ್ಮಾಭಿಮಾನ ಮೊದಲಾದುವು ಅನೃತ ವಸ್ತುಗಳಾಗಿಯೇ ಇರುವುದು ಅದರ ಕಾರ್ಯ ಅಭಿವೃದ್ಧಿ ಹೊಂದಲು ಅವಕಾಶವಿಲ್ಲ. ಈ ರೀತಿಯಾಗಿ ರಾಮಾಯಣದಲ್ಲಿ ವಿರೋಧಿಯ ನಿಜಸ್ಥಿತಿಯನ್ನು ಕಂಡೆವು. ಇನ್ನು ಮುಂದೆ "ಉಪಾಯವನ್ನು" ಕುರಿತು ವಿಮರ್ಶಿಸೋಣ.

"ವೇದಾಂತವೂ ಉಪಾಯವೂ"

ವೇದಾಂತವು, ಜೀವನು ಪರಮಾತ್ಮನನ್ನು ಪಡೆಯಲು ಯಾವುದು ಸಾಧನವೆಂದು ತಿಳಿಸುತ್ತದೋ ಅದನ್ನು ಉಪಾಯ ಎಂದು ಹೇಳುವುದು. ಆ ವೇದಾಂತವು ಹೇಳಿರುವ ಉಪಾಯ ಯಾವುದು ? ಎಂದರೆ ಈ ರೀತಿ ಮುಂದೆ ವಿವರಿಸಿದೆ. ಈ ಪ್ರಪಂಚವನ್ನು ಆಯಾ ಕಾಲದಲ್ಲಿ ಸೃಷ್ಟಿ, ಸ್ಥಿತಿ, ಲಯಾದಿಗಳಲ್ಲಿ ರಕ್ಷಿಸುವವನು ಯಾವನೋ ಅವನನ್ನು ಪರಮಾತ್ಮನೆಂದು ಕರೆಯುತ್ತಾರೆ. ಆ ಪರಮಾತ್ಮನನ್ನು ಅವನ ಶ್ರೇಷ್ಠವಾದ ಸದ್ಗುಣಗಳನ್ನು, ದಿವ್ಯಮಂಗಳ ವಿಗ್ರಹವನ್ನು ಮನಸ್ಸಿನಲ್ಲಿ ಸ್ಮರಿಸಿ ಪ್ರೀತಿಯಿಂದ ಚಿಂತಿಸಿ ಧ್ಯಾನಿಸುವುದೇ ಭಕ್ತಿ. ಈ ಭಕ್ತಿಯೂ ಚೇತನನು ಭಗವಂತನನ್ನು ಪಡೆದು ಬಾಳುವುದಕ್ಕೆ ಶ್ರೇಷ್ಠವಾದ ಸಾಧನ. ಇಲ್ಲಿ "ಕಾರಣಂತುಧ್ಯೇಯಃ" ಎಂಬ ಶ್ರುತಿ ವಾಕ್ಯವನ್ನು ಉದಾಹರಣೆಯಾಗಿ ಕಾಣತಕ್ಕದ್ದು.

ಈ ಭಕ್ತಿಯನ್ನು ಒಬ್ಬನು ಶಾಸ್ತ್ರವು ಹೇಳಿರುವ ಹಾಗೆ ಮಾಡಿ ಮುಗಿಸಿ ಉತ್ತಮವಾದ ಜ್ಞಾನವನ್ನು, ಭಕ್ತಿಯನ್ನು ಪಡೆಯುತ್ತಾನೋ ಅವನು ಭಗವಂತನನ್ನು ಅಗಲಲು ಕಾರಣವಿಲ್ಲ. ಭಗವಂತನ ಚರಣಾರವಿಂದಗಳಲ್ಲಿ ಶರಣಾಗತಿಯನ್ನೇ ಮಾಡಿ ಅವನನ್ನೂ ಪಡೆದು ಬಾಳಬಹುದು.

ಆದರು ಭಗವಂತನ ಚರಣಾರವಿಂದಗಳನ್ನೇ ತನಗೆ ಆಶ್ರಯವೆಂದು ತಿಳಿದು ಸಂತೋಷಗೊಳ್ಳುತ್ತಾರೆ. ಇವರೇ ಅತ್ಯಂತ ಹಿರಿಮೆಯುಳ್ಳವರಾಗುತ್ತಾರೆ. ಶರಣಾಗತಿ ಯಾವುದು ? ನನಗೆ ಸ್ವಲ್ಪವೂ ಸದ್ಗುಣಗಳಿಲ್ಲ. ಎಲ್ಲಾ ದೋಷಗಳು ಉಂಟು. ಬೇರೆ ರಕ್ಷಕರು ಯಾರೂ ಇಲ್ಲ ಎನ್ನುವ ತನ್ನ ಸ್ಥಿತಿಯನ್ನು ಸಂಕೋಚವಿಲ್ಲದೇ ಪುರುಷಕಾರ ಭೂತೆಯಾದ ಲಕ್ಷ್ಮೀದೇವಿಯನ್ನು ಮುಂದಿಟ್ಟುಕೊಂಡು ಪರಮಾತ್ಮನ ಪಾದಾರವಿಂದಗಳನ್ನೇ ಸಾಧನವಾಗಿ ಪಡೆಯಬಹುದು. ಈ ಶರಣಾಗತಿಗೆ "ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ" ಎನ್ನುವ ಶ್ರುತಿ ವಾಕ್ಯವು ತಕ್ಕ ಪ್ರಮಾಣವಾಗುತ್ತದೆ.

ಈ ರೀತಿ ಭಕ್ತಿಯನ್ನೂ, ಶರಣಾಗತಿಯನ್ನೂ ಚೇತನನು ಪಡೆಯಲು ಸಾಧನವಾದ ವಾಕ್ಯಗಳನ್ನು ನೋಡಿದೆವು.

ಕೆಲವರು "ಬ್ರಹ್ಮವಾಗಿ ಮಾತ್ರ ಇರುವುದು ಮೋಕ್ಷ ಎಂದೂ, ಅದನ್ನು ಪಡೆಯಲು 'ಆತ್ಮಾ' ಒಂದು ಮಾತ್ರ ಸತ್ಯವಸ್ತು ಎನ್ನುವ ಶ್ರುತಿ ವಾಕ್ಯಗಳಿಂದುಂಟಾಗುವ ಜ್ಞಾನವು ಸಾಧನ" ಎಂದು ತಿಳಿಯುತ್ತಾರೆ.

"ಬ್ರಹ್ಮವೇದ ಬ್ರಹ್ಮೈವ ಭವತಿ" ಎನ್ನುವ ವಾಕ್ಯವನ್ನು ಆಧಾರವಾಗಿ ತೋರಿಸುವರು.

ಇದನ್ನು ಕೇಳುವವರಿಗೆ ಮನಸ್ಸು ಚಂಚಲವಾಗುವುದು ಸಹಜವೇ. ಈ ಸಂದೇಹಕ್ಕೆ ಮೀಮಾಂಸಾ ಶಾಸ್ತ್ರರೀತಿಯನ್ನು ಅನುಸರಿಸಿ ಒಂದು ಪರಿಹಾರವನ್ನು ಸಂಕ್ಷಿಪ್ತವಾಗಿ ಹೇಳುತ್ತೇವೆ.

ಒಬ್ಬನ ಪ್ರಯತ್ನ ಶಕ್ತಿಯಿಂದ ಯಾವುದು ಉಂಟಾಗುತ್ತದೆಯೊ, ಅದನ್ನು "ಪುರುಷತಂತ್ರ" ಎಂದೂ, ಒಬ್ಬನ ಪ್ರಯತ್ನ ಸ್ವಲ್ಪ ಮಾತ್ರವೂ ಇಲ್ಲದೆ ಇದ್ದೂ ಯಾವುದು ಪ್ರಮಾಣದಿಂದಲೇ ಉಂಟಾಗುತ್ತದೆಯೋ ಅದನ್ನು ಪ್ರಮಾಣತಂತ್ರ ಎಂದೂ ಶಾಸ್ತ್ರ ಹೇಳುತ್ತದೆ.

ಮೇಲೆ ಹೇಳಿರುವ ಪರಮಾತ್ಮನನ್ನು ಕುರಿತು ಧ್ಯಾನಿಸುವ ಚಿಂತನೆಯನ್ನು ಭಗವಂತನ ಚರಣಾರವಿಂದಗಳನ್ನು ಉಪಾಯವಾಗಿ ಪಡೆಯುವ ಪುರುಷಾರ್ಥವನ್ನು ಒಬ್ಬನು ಪ್ರಯತ್ನದಿಂದ ಮಾಡುವಾಗ ಉಂಟಾಗುವುದು ಪುರುಷತಂತ್ರ ಮತ್ತೆ ಕೆಲವರು ಹೇಳುವ ಹಾಗೆ,

"ತತ್, ತ್ವಮ್, ಅಸಿ" ಎನ್ನುವ ಶ್ರುತಿಯಿಂದ "ಆತ್ಮಾ ಒಂದು ಮಾತ್ರ ಸತ್ಯವಸ್ತು" ಎನ್ನುವ ಜ್ಞಾನವು ಉಂಟಾದಾಗ, ಪ್ರಯತ್ನಶಕ್ತಿ (ಭಕ್ತಿಪ್ರಪತ್ತಿಗಳ ಹಾಗೆ)

ಬೇಡದೆ ಇರಲು ಆ ಜ್ಞಾನವು ಪ್ರಮಾಣವಂತ್ತು. ಇದನ್ನು ನಾವು ಮನಸ್ಸಿನಲ್ಲಿ ತೆಗೆದು ಕೊಂಡು ಕೆಳಕಂಡಂತೆ ಆಲೋಚನೆ ಮಾಡಬೇಕಾದದ್ದು ಅವಶ್ಯಕವಾಗುತ್ತದೆ.

"ಶ್ರುತಿ ವಾಕ್ಯದಿಂದ ಉಂಟಾಗುವ" ಆತ್ಮಾ ಒಂದು ಮಾತ್ರ ಸತ್ಯವಸ್ತು " ಎನ್ನುವ ಜ್ಞಾನವು ಮೋಕ್ಷಸಾಧನವಾಗಿದ್ದರೆ, ಪುರುಷತಂತ್ರವಾದ ಭಕ್ತಿಯನ್ನೋ, ಶರಣಾಗತಿಯನ್ನೋ ಆ ಶ್ರುತಿವಾಕ್ಯ ಬೋಧನೆಯನ್ನು ಕುರಿತು ಚರ್ಚೆಮಾಡಲು ಅವಕಾಶವುಂಟೆ ? ಇಲ್ಲ.

ನಂತರವೂ "ಬ್ರಹ್ಮವೇದ ಬ್ರಹ್ಮೈವ ಭವತಿ" ಎನ್ನುವ ಶ್ರುತಿಯಲ್ಲಿ ಆದೇಶವಾಗಿರುವ "ಬ್ರಹ್ಮೈವ ಭವತಿ" ಎನ್ನುವ ಅರ್ಥವನ್ನೂ "ತತ್, ತ್ವಮ್, ಅಸಿ," ಎನ್ನುವುದರ ನಿಜವಾದ ಅರ್ಥದ ರೀತಿಯಲ್ಲಿಯೇ "ವೇದಾಂತವೂ, ಬುದ್ಧಿಯೂ", "ವೇದಾಂತವು ಜೀವನು" ಭಾಗಗಳಲ್ಲಿ ಹೇಳಿರುತ್ತೇನೆ ನೋಡತಕ್ಕದ್ದು.

ಈ ರೀತಿ ಅತ್ಯಂತ ಸಂಕ್ಷಿಪ್ತವಾಗಿ ಮೀಮಾಂಸಾ ಶಾಸ್ತ್ರ ರೀತಿಯನ್ನು ಅನುಸರಿಸಿ ಮೇಲೆ ಹೇಳಿರುವ ಪರಿಹಾರವನ್ನು ನೋಡಿದೆವು. ಇನ್ನು ವೇದಾಂತದಲ್ಲಿ ನಿರ್ಣಯಿಸಿರುವ ವಸ್ತುವನ್ನು ತೋರಿಸುತ್ತೇವೆ.

ಇಲ್ಲಿ ಕೆಳಕಂಡಂತೆ ವೇದಾಂತದಲ್ಲಿ ನಿರ್ಣಯಿಸಿರುವ ವಸ್ತುಗಳನ್ನು ಕಾಣತಕ್ಕದ್ದು. ಪರಮಾತ್ಮನನ್ನು ಕುರಿತು ಧ್ಯಾನಿಸುವ ಚಿಂತನವು (ಚಿಂತಿಸುವ ಧ್ಯಾನವು ಅವನನ್ನು ಪಡೆಯಲು ಕಾರಣ ಎಂಬುದು ಒಂದು ರೀತಿಯಲ್ಲಿ ನಿಜವೇ ಆದರೂ ಆ ಪರಮಾತ್ಮನ ಚರಣಾರವಿಂದಗಳನ್ನೇ ಆಶ್ರಯವಾಗಿ ತೆಗೆದುಕೊಂಡು, ಅದನ್ನೇ ಪಡೆಯುವುದು ಅತ್ಯಧಿಕವಾಗಿ ಶ್ರೇಷ್ಠವಾದ ರೀತಿಯಾಗಿದೆ. ಇದಕ್ಕೆ ಅನೇಕ ಉದಾಹರಣೆಗಳುಂಟು.

ಜ್ಞಾನಿಗಳಲ್ಲಿ ಸರ್ವಶ್ರೇಷ್ಠರಾದವರು ಭೀಷ್ಮರು. ಅವರು ಶರತಲ್ಪದಲ್ಲಿರುವಾಗ ಧರ್ಮರಾಜನಿಗೆ ಅನೇಕ ಧರ್ಮಗಳನ್ನು ಉಪದೇಶ ಮಾಡಿದರು. ಆ ರೀತಿ ಉಪದೇಶ ಪಡೆದ ಧರ್ಮರಾಯನು ಅಂತಹ ಧರ್ಮಗಳನ್ನು ಉಪದೇಶ ಮಾಡುವಾಗ ಪ್ರತಿ ಒಂದೂ ಶ್ರೇಷ್ಠ ಧರ್ಮಗಳೆಂದು ತಿಳಿಯುವುದರಿಂದ ಇವುಗಳೆಲ್ಲಕ್ಕಿಂತಲೂ ಶ್ರೇಷ್ಠವಾದ ಧರ್ಮವನ್ನು ತಿಳಿಯ ಬೇಕೆಂದು ಅಪೇಕ್ಷಿಸಿ ತಮ್ಮ ತಾತ್ಪರ್ಯಕ್ಕೆ ತಕ್ಕ ಹಾಗೆ ಆ ಭೀಷ್ಮರನ್ನು ಕುರಿತು "ತಾವು ಎಲ್ಲಕ್ಕಿಂತ ಶ್ರೇಷ್ಠಧರ್ಮವೆಂದು ಇಷ್ಟಪಡುವುದು ಯಾವುದು ? ಎಂದು ಪ್ರಶ್ನಿಸಿದನು. ಅದಕ್ಕೆ ಭೀಷ್ಮರು "ನಾರಾಯಣನ ದಿವ್ಯಮಂಗಳ ನಾಮ ಸಂಕೀರ್ತನ" ಮಾಡುವುದೇ ಸರ್ವ ಶ್ರೇಷ್ಠವಾದ ಧರ್ಮವೆಂದು ಹೇಳಿರುತ್ತಾರೆ.

ಇದನ್ನು ಶ್ರೀ ವಿಷ್ಣು ಸಹಸ್ರನಾಮಾಧ್ಯಾಯದಲ್ಲಿ ಕಾಣಬಹುದು.

ಇದನ್ನು ನಾವು ಮನಸ್ಸಿನಲ್ಲಿಟ್ಟುಕೊಂಡು ಅತ್ಯಧಿಕ ಶ್ರೇಷ್ಠ ಪ್ರಮಾಣವೆಂದು ಪ್ರಶಂಸಿಸಲ್ಪಟ್ಟ ವೇದದಲ್ಲಿ ಹೇಳಿರುವ ಧರ್ಮಗಳಲ್ಲಿ ಆ ವೇದವು ಅಧಿಕವಾಗಿ ಇಷ್ಟ ಪಡುವ ಧರ್ಮ ಯಾವುದು ? ಎಂಬುದನ್ನು ಅನುಸಂಧಾನ ಮಾಡಿ ನೋಡಬೇಕಾದದ್ದು ಅವಶ್ಯಕ. ಆ ರೀತಿ ಗಹನವಾಗಿ ಆಲೋಚಿಸಿ ನೋಡಿದ್ದೇ ಆದರೆ ಶರಣಾಗತಿ ಎನ್ನುವ ಧರ್ಮವನ್ನೇ ವೇದವು ಅತ್ಯಂತ ಇಷ್ಟಪಡುತ್ತದೆ ಎನ್ನುವುದು ತಿಳಿಯುತ್ತದೆ.

ಆದರೆ ಶ್ರೀ ಭೀಷ್ಮರು ತಾವು ಇಷ್ಟ ಪಡುವ ಧರ್ಮವನ್ನು ತಿಳಿಸುವಾಗ "ಏಷಮೇ ಸರ್ವಧರ್ಮಾಣಾಂ ಧರ್ಮೋಽಧಿಕತಮೋಮತಃ" ಎಂದು ಯಾವ ರೀತಿ ಸ್ಪಷ್ಟವಾಗಿ ತಿಳಿಸಿರುವರೋ, ಅಲ್ಲಿ ವೇದವೂ ಶರಣಾಗತಿಯನ್ನು ತಾನು ಇಷ್ಟ ಪಡುವ ಧರ್ಮವಾಗಿ ತಿಳಿಯಪಡಿಸಿರುವುದೇ ? ಎಂದು ಕೆಲವರು ಸಂದೇಹ ಪಡಬಹುದು.

ಈ ಸಂದೇಹಕ್ಕೆ ಕಿಂಚಿತ್ತೂ ಅವಕಾಶವಿಲ್ಲ ಹೇಗೆ ? ಎಂದರೆ ಭೀಷ್ಮರು ಇಷ್ಟಪಟ್ಟ ಧರ್ಮ "ಪರಮಾತ್ಮನ ನಾಮ ಸಂಕೀರ್ತನೆ" ಎನ್ನುವುದಕ್ಕೆ ಅವರ "ಏಷಮೇ" ಎನ್ನುವ ನುಡಿಯನ್ನು ಆಧಾರವಾಗಿ ಅಲ್ಲಿ ನೋಡಿದೆವು. ಇಲ್ಲಿ ವೇದಪುರುಷನ ಆಚಾರವನ್ನೇ ಕೆಳಕಂಡಂತೆ ಕಾಣಬಹುದು.

ಈ ಪ್ರಪಂಚಕ್ಕೆ ಕಾರಣನಾದ ಭಗವಂತನನ್ನು ಪ್ರೀತಿಯಿಂದ ಧ್ಯಾನಿಸತಕ್ಕವನು ಎಂದು ಭಕ್ತಿಯನ್ನು ಶ್ರುತಿ ಹೇಳಿಬಿಟ್ಟಿತು. ಅದಕ್ಕೆ ಕಾರಣನಾದ ಭಗವಂತನನ್ನು ಮೋಕ್ಷಾಪೇಕ್ಷಿಯಾದ ನಾನು ಆಶ್ರಯಿಸುತ್ತೇನೆ ಎಂದು ಶರಣಾಗತಿಯಲ್ಲಿ ತನ್ನ ಅನುಷ್ಠಾನ ಇರುವುದಾಗಿ ತಿಳಿಯಪಡಿಸುತ್ತಾನೆ. ಇಲ್ಲಿ ಮೇಲೆ ಹೇಳಿರುವ "ಕಾರಣಂತು ಧ್ಯೇಯಃ ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ" ಎನ್ನುವ ಶ್ರುತಿವಾಕ್ಯಗಳನ್ನು ನೋಡತಕ್ಕದ್ದು. ಶ್ರೀ ಭೀಷ್ಮರ ವಾಣಿಗಿಂತಲೂ ವೇದಪುರುಷನ ಆಚರಣೆ ಪ್ರಬಲವಲ್ಲವೆ ?

ಈ ರೀತಿ ವೇದದಲ್ಲಿ ಉದಾಹರಣೆಯನ್ನು ನೋಡಿದೆವು. ಇನ್ನು ಪರಮ ಪುರುಷನ ಸಿರಿನುಡಿಗಳಲ್ಲಿಯೂ ತಕ್ಕ ಪ್ರಮಾಣವನ್ನು ನೋಡುತ್ತೇವೆ.

ಪರಮಾತ್ಮನು ಅರ್ಜುನನನ್ನು ಕುರಿತು ಅನುಗ್ರಹಿಸಿದ ದಿವ್ಯಶಾಸ್ತ್ರ "ಭಗವದ್ಗೀತೆ" ಎಂಬುದನ್ನು ಪ್ರಪಂಚ ಅರಿತಿದ್ದೇ ಆಗಿದೆ. ಆ ಗೀತೆಯಲ್ಲಿರುವ 18 ಅಧ್ಯಾಯಗಳಲ್ಲಿಯೂ, ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗ ಎನ್ನುವ ಧರ್ಮಗಳನ್ನು ಸ್ಪಷ್ಟವಾಗಿ ಆ ಪರಮಾತ್ಮನು ಉಪದೇಶ ಮಾಡಿರುವುದನ್ನು, ಅದನ್ನು ಅನುಭವಿಸಿರುವವರು ತಿಳಿದೇ ಇರುವರು. (ನಾನು ಮಾಡುವವನು) ಈ ಕರ್ಮವು ನನ್ನದು, ನನಗೆ ಈ ಫಲವು ಬೇಕು, ಎನ್ನುವ ಭಾವನೆಗಳನ್ನು ಪೂರ್ಣವಾಗಿ ತೊರೆದು ಭಗವಂತನು ಮನಸ್ಸಂತೋಷಪಡುವ ಹಾಗೆ ತನ್ನ ಜಾತಿಗೂ, ಆಶ್ರಮಕ್ಕೂ ತಕ್ಕ ಕರ್ಮಗಳನ್ನು ಮಾಡುವುದೇ ಕರ್ಮಯೋಗ. ಈ ರೀತಿ ಉಚಿತವಾದ ಕಾಲದಲ್ಲಿ ಕರ್ಮಯೋಗವನ್ನು ಮಾಡಿ ಅದರಿಂದ ಚಿತ್ತಶುದ್ಧಿಯನ್ನು ಪಡೆದು ಆ ಮನಸ್ಸನ್ನು ಇಟ್ಟುಕೊಂಡು ಜೀವನಾಗಿರುವ ತನ್ನನ್ನು ಚಿಂತಿಸುವ ಧ್ಯಾನವೇ ಜ್ಞಾನಯೋಗ ?

ಸತ್ಯತೆಯು ಈ ರೀತಿ ಇದ್ದರೂ ಆ ಪರಮ ಪುರುಷನು ಆ ಗೀತೆಯ ಕೊನೆಯಲ್ಲಿ ಹೇಳಿರುವ "ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ" ಎನ್ನುವ ಮಾತನ್ನು ನೋಡಿದರೇ ಶರಣಾಗತಿಯೇ ಅವನು ಇಷ್ಟಪಟ್ಟ ಧರ್ಮ ಎನ್ನುವುದು ತಿಳಿಯುತ್ತದೆ. ಇದನ್ನು ಸ್ವಲ್ಪ ವಿವರಿಸಿ ಹೇಳುತ್ತೇನೆ.

ಪಿಳ್ಳೈಲೋಕಾಚಾರ್ಯರು "ಧರ್ಮ ಸಂಸ್ಥಾಪನೆಯನ್ನು ಮಾಡಲು ಹುಟ್ಟಿದವನು

ತಾನೇ "ಸಮಸ್ತ ಧರ್ಮಗಳನ್ನೂ ಬಿಡು. ನನ್ನನ್ನು ಹೊಂದು ಎನ್ನುವುದರಿಂದ ಸಾಕ್ಷಾತ್ ಧರ್ಮ ತಾನೇ ಎನ್ನುವುದು" ಎಂದು ಹೇಳಿರುತ್ತಾರೆ.

ಇದರ ತಾತ್ಪರ್ಯ :—ಧರ್ಮವನ್ನು ಸ್ಥಾಪಿಸುವುದಕ್ಕಾಗಿಯೇ ಅವತಾರವನ್ನು ಮಾಡಿದ ಕೃಷ್ಣ ಭಗವಂತನು "ತನ್ನಿಂದ ಉಪದೇಶ ಮಾಡಲ್ಪಟ್ಟಿರುವುದನ್ನು ಒಂದು ರೀತಿಯಿಂದ ಮೋಕ್ಷ ಪುರುಷಾರ್ಥಗಳನ್ನು ತರುವಂತಹ ಕರ್ಮ, ಜ್ಞಾನ, ಭಕ್ತಿ ಎಲ್ಲವನ್ನೂ ಬಿಟ್ಟು ನನ್ನೊಬ್ಬನನ್ನೇ ಸೇರು, ಎನ್ನುವುದರಿಂದ, ಅವನೇ ಪ್ರತ್ಯಕ್ಷವಾಗಿ ಫಲವನ್ನು ಕೊಡುವಂತಹ ಧರ್ಮ" ಎನ್ನುವುದು ಮೇಲೆ ಹೇಳಿರುವ ಕರ್ಮ, ಜ್ಞಾನ, ಭಕ್ತಿಗಳಲ್ಲಿ ಯಾವುದೇ ಆಗಲಿ ನೇರವಾಗಿ ಫಲವನ್ನು ಕೊಡುವಂತಹ ಧರ್ಮಗಳಲ್ಲ ಎಂದೂ ಚೆನ್ನಾಗಿ ತಿಳಿಯುತ್ತದೆ.

ಹಾಗೂ "ಭಕ್ತಿ ಚಪಲನು" ಜೀವನು ಮಾಡುವ ಭಕ್ತಿಯಲ್ಲಿ ಅತ್ಯಂತ ಇಷ್ಟವುಳ್ಳವನು, ಎಂದು ಪ್ರಸಿದ್ಧಿಯನ್ನು ಪಡೆದ ಪರಮ ಪುರುಷನು ಆ ಭಕ್ತಿಯನ್ನು ಅನೇಕ ಕಡೆಗಳಲ್ಲಿ ನಾನಾ ರೀತಿ ವಿಸ್ತಾರವಾಗಿ ಹೇಳಿ ಕೊನೆಯಲ್ಲಿ "ಅದನ್ನು ಬಿಡು ನನ್ನನ್ನು ಹೊಂದು" ಎಂದು ಹೇಳುವುದರಿಂದ ಆ ಭಕ್ತಿಯಲ್ಲಿ ತಾನಾಗಿರುವ ಧರ್ಮವನ್ನೇ ತಾನು ಇಷ್ಟಪಟ್ಟಿದ್ದ ಎಂಬುದೂ ಇಲ್ಲಿ ಸುಸ್ಪಷ್ಟ!

ಈ ರೀತಿ ಭಗವಂತನು ಅಪೇಕ್ಷಿಸಿದ ಧರ್ಮ ಶರಣಾಗತಿ ಎಂಬುದನ್ನು ನೋಡಿದೆವು. ವೇದವನ್ನು ಶ್ರೇಷ್ಠ ಪ್ರಮಾಣವೆಂದು ತೆಗೆದುಕೊಂಡು, ಆ ವೇದದ ಅರ್ಥವನ್ನು ಇರುವ ಹಾಗೆಯೇ ತಿಳಿದು, ಆ ಜ್ಞಾನವನ್ನು ಅನುಸರಿಸಿ ನಡೆಯುವವರು ಯಾರೋ ಅವರೇ ವೈದಿಕರೆಂದು ಪ್ರಶಂಸಿಸಲು ಅರ್ಹರು ಆ ವೈದಿಕರು. "ಮಯರ್ವರ ಮದಿನಲಂ" ಅರುಳ ಪಡೆದ ನಮ್ಮಾಳ್ವಾರ್ರು, ಶ್ರೇಷ್ಠತೆಯನ್ನು ಪಡೆದವರಾಗಿರುತ್ತಾರೆ. ಅವರು ಅತ್ಯಧಿಕ ಶ್ರೇಷ್ಠ ಭಕ್ತಿಯನ್ನು ಪಡೆದಿದ್ದೂ ತಮಗೆ ಭಗವಂತನಲ್ಲಿರುವ ಆ ಭಕ್ತಿ ಅವನನ್ನು ಪಡೆಯುವುದಕ್ಕೆ ಕಾರಣವಾಗಿ ತಿಳಿಯದೆ ಅವನ ಚರಣಾರವಿಂದಗಳನ್ನೇ ಕಾರಣವಾಗಿ ತಿಳಿದಿದ್ದವರು ಎಂಬುದೂ ಅತ್ಯಂತ ಪ್ರಸಿದ್ಧ. ಇದರ ಹಾಗೆಯೇ "ಅವನ ಚರಣಾರವಿಂದಗಳನ್ನೇ ಉಪಾಯವಾಗಿ ಪಡೆದು ಸಂತುಷ್ಟರಾದ ತಮ್ಮ ಆಚಾರ್ಯರುಗಳೂ ಶರಣಾಗತಿ ಧರ್ಮವನ್ನೇ ಇಚ್ಛಿಸಿದ್ದರು" ಎನ್ನುವುದೂ ಸಹ ಸಂಸ್ಪಷ್ಟ.

ಈ ರೀತಿ ವೇದವು, ವೇದ್ಯ ವೇದದ ಮುಖ್ಯ ಪ್ರರುಷನಾದ ಪರಮ ಪುರುಷ ವೈದಿಕರು ಮುಂತಾಗಿ ಈ ಮೂವರೂ ಅತ್ಯಧಿಕವಾಗಿ ಅಪೇಕ್ಷಿಸುವ ಧರ್ಮ "ಶರಣಾಗತಿ" ಎನ್ನುವುದನ್ನು ನೋಡಿದೆವು. ಈ ಶರಣಾಗತಿಯನ್ನೇ ರಾಮಾಯಣವು ವಿವರಿಸಿ ಹೇಳುತ್ತದೆ ಎನ್ನುವುದನ್ನು ಇನ್ನು ನೋಡಬಹುದು.

ಆದರೆ ಪರಮಾತ್ಮ, ಜೀವಾತ್ಮ, ಉಪೇಯ, ವಿರೋಧಿ ಎನ್ನುವ (ಐದು ವಸ್ತುಗಳಲ್ಲಿ ಸೇರಿರುವ) ನಾಲ್ಕು ವಸ್ತುಗಳನ್ನು ಸ್ಪಷ್ಟವಾಗಿ ತಿಳಿಸುವುದನ್ನು ಈ ಪ್ರಬಂಧದಲ್ಲಿಯೇ ನೋಡಿರುತ್ತೇವೆ. ಆದರೂ ಶರಣಾಗತಿ ಧರ್ಮವನ್ನು ಪ್ರಕಟಪಡಿಸುವುದರಲ್ಲಿ

ರಾಮಾಯಣವು ಇತಿಹಾಸಶ್ರೇಷ್ಠವಾಗಿಯೂ, ರಾಮಾಯಣವು ಶರಣಾಗತಿ ಶಾಸ್ತ್ರವೆಂದು ಪ್ರಸಿದ್ಧಿ ಪಡೆದಿರುವುದರಿಂದಲೂ, ಶರಣಾಗತಿ ಧರ್ಮವನ್ನೇ ರಾಮಾಯಣವು ವಿವರಿಸಿ ಹೇಳುತ್ತದೆ ಎನ್ನುವುದರಲ್ಲಿ ಅಡ್ಡಿ ಏನೂ ಇರಲಾರದು. ಈ ಭಾಗದಲ್ಲಿ ಶರಣಾಗತಿ ಧರ್ಮದ ಸತ್ಯತೆಯನ್ನು ನಾವು ತಿಳಿಯಬಹುದು.

"ಭಗವಂತನ ಎದುರಿಗೆ ತನ್ನ ಸ್ಥಿತಿಯನ್ನು ಸಂಕೋಚವಿಲ್ಲದೆ ತಿಳಿಸಿ ಸಾಕ್ಷಾತ್ ಲಕ್ಷ್ಮೀದೇವಿಯನ್ನು ಪುರುಷಕಾರವಾಗಿ ಮುಂದಿಟ್ಟು ಭಗವಂತನನ್ನು ಸಾಧನವಾಗಿ ಪಡೆಯುವುದು ಶರಣಾಗತಿ" ಎಂದು ಮೊದಲು ಹೇಳಿದೆವು. ಇಲ್ಲಿ ಚೇತನನಿಂದ ಮಾಡುವ ಶರಣಾಗತಿ ಪುರುಷಾರ್ಥಕ್ಕೆ ಸಾಧನವೇ ? ಅಥವಾ ಈ ಚೇತನನು ಮಾಡುವ ಶರಣಾಗತಿಗೆ ಪಾತ್ರನಾದ ಭಗವಂತನೇ ಪುರುಷಾರ್ಥಕ್ಕೆ ಸಾಧನನೇ ? ಎಂಬ ಸಂದೇಹ ತೋರುವುದು ಯೋಗ್ಯವೇ ಆಗಿದೆ.

ಪಿಳ್ಳೈಲೋಕಾಚಾರ್ಯರು "ಪಡೆಯಬೇಕಾದ ಭಗವಂತನನ್ನು ಪಡೆಯಲು ಪುರುಷಾರ್ಥವೇ ಸಾಧನ ಪಡೆಯುವುದು ಸಾಧನವಲ್ಲ" ಎಂದು ಹೇಳುತ್ತಾರೆ. ಚೇತನನಲ್ಲಿ ಹೊಂದುವಿಕೆ ಅಧಿಕಾರಿ ವಿಶೇಷಣವಾಗಿ ಮನಸ್ಸಿನಲ್ಲಿ ಎಣಿಸಿರುತ್ತಾರೆ.

ದೇಶಿಕರು ಚೇತನನಲ್ಲಿ ಇರುವ ಹೊಂದುವಿಕೆ (ಸ್ವಗತ ಸ್ವೀಕಾರ) ಭಕ್ತಿಸಾಧನದಲ್ಲಿ ಭಗವಂತನನ್ನು ಪಡೆದು ತರುತ್ತದೆ ಎಂದೂ ಆ ಸಾಧನದಲ್ಲಿರುವ ಭಗವಂತನೇ ಪುರುಷಾರ್ಥಕ್ಕೆ ಸಾಧನವೆಂದೂ ಮನಸ್ಸಿನಲ್ಲಿ ಎಣಿಸಿರುತ್ತಾರೆ.

ಇಲ್ಲಿ ಮೊದಲು ಈ ಇಬ್ಬರು ಆಚಾರ್ಯರುಗಳ ಅಭಿಪ್ರಾಯಗಳನ್ನು ತಕ್ಕ ಉದಾಹರಣೆಗಳೊಂದಿಗೆ ಸರಿಯಾಗಿ ವಿವರಿಸಿ ಅರ್ಥತಾರತಮ್ಯಗಳನ್ನು ತೋರಿಸಿ ನಂತರ ರಾಮಾಯಣದಲ್ಲಿ ಶರಣಾಗತಿ ಹೇಳಿರುವ ರೀತಿ ಇಂತಹದ್ದು ಎನ್ನುವುದನ್ನು ತಿಳಿಸುತ್ತೇವೆ.

ಪಿಳ್ಳೈಲೋಕಾಚಾರ್ಯರ ಅಭಿಪ್ರಾಯ ಕೆಳಕಂಡಂತೆ ಇದೆ : "ಧರ್ಮ" ಎಂಬ ಪದ ಯಾವುದು ಅಪೇಕ್ಷಿಸುವ ಫಲಕ್ಕೆ ಕಾರಣವೋ, ಅದನ್ನು ಸೂಚಿಸುವುದಾಗಿದೆ. ಪರಮ ಪುರುಷನು ಅವರವರು ಅಪೇಕ್ಷಿಸುವ ಫಲಕ್ಕೆ ಕಾರಣನಾಗಿರುವುದರಿಂದ "ಶಾಸ್ತ್ರಧರ್ಮ" ಎಂಬ ಮಾತುಗಳಿಂದ ಅವನನ್ನು ಸೂಚಿಸುತ್ತದೆ. "ರಾಮೋ ವಿಗ್ರಹವಾನ್ ಧರ್ಮಃ" "ಕೃಷ್ಣಂ ಧರ್ಮಂ ಸನಾತನಂ" ಎನ್ನುವ ವಾಕ್ಯಗಳನ್ನು ನಾವು ಇಲ್ಲಿ ಕಾಣಬೇಕಾದದ್ದು ಉಚಿತ. ಅನಂತರವೂ ಈ ಪರಮ ಪುರುಷನೆಂಬ ಹಿರಿಯ ಧರ್ಮವು ಶ್ರೇಷ್ಠವುಳ್ಳದ್ದಾಗಿದೆ.

ಯಾವ ರೀತಿ ಎಂದರೆ :-

ಎಲ್ಲಾ ಧರ್ಮಗಳಿಗೂ ಭಗವಂತನೆಂಬ ಧರ್ಮಕ್ಕೂ ಅತ್ಯಧಿಕ ವ್ಯತ್ಯಾಸವುಂಟು, ಹೇಗೆ ಎಂದರೆ : ಇತರ ಧರ್ಮಗಳು ಏನೇ ಆಗಿರಲಿ ಅದು ಬೇರೊಂದರ ಸಹಾಯವಿಲ್ಲದೆ ಇರಲಾರದು. ಪರಮಾತ್ಮನೋ ಆ ರೀತಿ ಬೇರೊಂದರ ಸಹಾಯವನ್ನು

ಅಪೇಕ್ಷಿಸುವುದಿಲ್ಲ, ಎನ್ನುವುದು ಮಾತ್ರವಲ್ಲ; ಆ ರೀತಿ ಸಹಾಯವನ್ನು ಇಚ್ಛಿಸುವವನೂ ಅಲ್ಲ.

ಭಗವಂತನನ್ನು ಕುರಿತು ಚಿಂತಿಸುವ ಧ್ಯಾನಭಕ್ತಿ ಎಂಬುದನ್ನು ನಾವು ತಿಳಿದೇ ಇದ್ದೇವೆ. ಈ ಭಕ್ತಿ ತಾನು ಉತ್ಪನ್ನವಾಗುವಾಗ ಚೇತನನ ಪ್ರಯತ್ನವನ್ನು ಅಪೇಕ್ಷಿಸುತ್ತದೆ. ಈ ಚೇತನನು ಶಾಸ್ತ್ರ ಹೇಳುವ ಹಾಗೆ ಮೊದಲಿನಲ್ಲಿ ಇಂತಹುದು ಭಕ್ತಿ ಎನ್ನುವುದನ್ನು ತಿಳಿದು, ಆ ರೀತಿ ತಿಳಿದ ಹಾಗೆ ಪ್ರಯತ್ನಿಸಿ ಮಾಡುವಾಗ ತಾನಾಗಿಯೇ ಉತ್ಪನ್ನವಾಗುತ್ತದೆ ; ಪ್ರಯತ್ನಪಟ್ಟು ಮಾಡದೆ ಇದ್ದದ್ದೇ ಆದರೆ ಉಂಟಾಗುವುದಿಲ್ಲ.

ಅನಂತರವೂ ಈ ಭಕ್ತಿ ಫಲವನ್ನು ಕೊಡುವಾಗ ಹಾಗೆ ಮಾಡುವಂತಹ ಜ್ಞಾನ ಶಕ್ತಿಗಳನ್ನು ಪಡೆದಿದ್ದರೂ, ಅತ್ಯಧಿಕ ಜ್ಞಾನ ಶಕ್ತಿಗಳುಳ್ಳ ಭಗವಂತನನ್ನು ಸಹಾಯವಾಗಿ ಅಪೇಕ್ಷಿಸುತ್ತದೆ. ಇದರಿಂದ "ಭಕ್ತಿ" ತಾನು ಉತ್ಪನ್ನವಾಗುವಾಗ ಚೇತನನ ಪ್ರಯತ್ನವನ್ನು ಅಪೇಕ್ಷಿಸುತ್ತದೆ. ಫಲವನ್ನು ಕೊಡುವಾಗ ಭಗವಂತನನ್ನು ಅಪೇಕ್ಷಿಸುತ್ತದೆ ಎನ್ನುವುದು ಚೆನ್ನಾಗಿ ತಿಳಿಯುತ್ತದೆ.

ಹಾಗಿದ್ದರೂ, ಚಿತ್ತವು ಶುದ್ಧವಾಗಿ ಇಲ್ಲದೆ ಇರುವಾಗ ಆ ಮನಸ್ಸು ಭಗವಂತನನ್ನು ಚಿಂತಿಸಲು ಅನುಕೂಲವಾಗಿರುವುದಿಲ್ಲ. ಆದ್ದರಿಂದ ಯಾವುದನ್ನು ಮಾಡಿದರೆ ಚಿತ್ತಶುದ್ಧಿ ಉಂಟಾಗುತ್ತದೆಯೋ ಅದನ್ನು ಮಾಡಿದರೆ ಚಿತ್ತಶುದ್ಧಿ ಉಂಟಾಗುತ್ತದೆ. ಈ ಚಿತ್ತಶುದ್ಧಿಯನ್ನು ಕರ್ಮಯೋಗ ಮಾಡಿ ಪಡೆಯಬಹುದು. ಇದನ್ನು ನೋಡಿದ್ದರಲ್ಲಿ ಭಕ್ತಿಯನ್ನು ಮಾಡುವುದಕ್ಕೆ ಚಿತ್ತಶುದ್ಧಿಯು ಅರ್ಹವಾಗಿರುವುದಿಲ್ಲ. ಆದ್ದರಿಂದ "ಭಕ್ತಿ" ಚಿತ್ತಶುದ್ಧಿಯ ಮಾರ್ಗದಿಂದ ಕರ್ಮಯೋಗವನ್ನು ಸಹಾಯವಾಗಿ ಕೋರುತ್ತದೆ ಎಂಬುದು ಚೆನ್ನಾಗಿ ಪ್ರಕಟವಾಗುತ್ತದೆ. ಚಿತ್ತಶುದ್ಧಿ ಎಂದರೆ :—ಮನಃಶಾಂತಿ, ಸಂಯಮ.

ಇನ್ನೂ ಈ ರೀತಿಯಾಗಿ ಭಕ್ತಿಗೆ ಸಹಾಯವಾದ ಅನೇಕ ವಿಷಯಗಳನ್ನು ಶಾಸ್ತ್ರಗಳಲ್ಲಿ ಕಾಣಬಹುದು.

ಪರಮಾತ್ಮನೆಂಬ ಧರ್ಮಕ್ಕೋ ಒಂದು ಸಹಾಯವನ್ನೂ ಹೇಳುವುದಕ್ಕೆ ಇಲ್ಲ. ನಿತ್ಯನಾಗಿ ಉತ್ಪತ್ತಿ, ವಿನಾಶ ಎಂಬುದೇ ಇಲ್ಲದವನು. ಜ್ಞಾನಾನಂದಮಯನೂ, ಶಕ್ತಿಸಂಪನ್ನನೂ, ಆಗಿರುವುದರಿಂದ ಫಲವನ್ನು ಕೊಡುವಾಗ ಬೇರೆಯವರ ಸಹಾಯವನ್ನು ಅಪೇಕ್ಷಿಸುವುದಿಲ್ಲ. ಸ್ವಾಭಾವಿಕವಾಗಿಯೇ ಅತ್ಯಧಿಕ ಹಿರಿಮೆಯುಳ್ಳವನಾದುದರಿಂದ ಆ ಶ್ರೇಷ್ಠತೆಯನ್ನು ಪಡೆಯಲು ಮತ್ತೊಂದನ್ನು ಅಪೇಕ್ಷಿಸುವುದಕ್ಕೆ ಅವಕಾಶವಿಲ್ಲ.

ಸಾಧಾರಣವಾಗಿ ಹಿರಿಮೆಯುಳ್ಳವನೆಂಬುದೇ ಅಲ್ಲ; ತನ್ನ ವ್ಯವಹಾರದಿಂದ ಇತರರಿಗೂ ಹಿರಿಮೆಯನ್ನುಂಟು ಮಾಡುವನು.

ಮತ್ತೂ, ಮತ್ತ್ಯಾವುದರ ಸಹಾಯವನ್ನೂ ಭಗವಂತನು ಅಪೇಕ್ಷಿಸನು ಎನ್ನುವುದಕ್ಕೆ ಕೆಳಕಂಡ ಚರಿತ್ರೆಯನ್ನು ಎತ್ತಿ ತೋರಿಸಬಹುದು. ಇಂದ್ರಜಿತ್ತಿನ ಬ್ರಹ್ಮಾಸ್ತ್ರದಿಂದ ಕಟ್ಟಲ್ಪಟ್ಟ ಹನುಮಂತನನ್ನು ರಾಕ್ಷಸರು ಮೇಲೆ ಸೆಣಬಿನ ಹಗ್ಗದಿಂದ ಕಟ್ಟಲು ಆ ಬ್ರಹ್ಮಾಸ್ತ್ರ ಸಡಿಲವಾಯಿತು. ಹಾಗೆ ಸಡಿಲವಾದರೂ ರಾವಣನ ನಿಜ ಸ್ಥಿತಿಯನ್ನು

ತಿಳಿಯಲು ಅಪೇಕ್ಷಿಸಿ ಬಂಧಿಸಲ್ಪಟ್ಟವನ ಹಾಗೆ ಆ ಹನುಮಂತನಿರಲು, ಅವನನ್ನು ಆ ರಾಕ್ಷಸರು ರಾವಣನ ಹತ್ತಿರ ಎಳೆದುಕೊಂಡು ಹೋದರು. ಈ ಚರಿತ್ರೆಯಲ್ಲಿ ಬೇರೊಂದರಿಂದ ಬಂಧಿಸಿದ್ದನ್ನು ಬ್ರಹ್ಮಾಸ್ತ್ರ ಸಹಿಸಲಿಲ್ಲ. ಎನ್ನುವುದು ಸ್ಪಷ್ಟ. ಇದರ ಹಾಗೆಯೇ ಭಗವಂತನೂ ಮತ್ತೊಂದರ ಸಹಾಯವನ್ನು ಸಹಿಸಲಾರನು ಎಂಬ ಸತ್ಯ ವನ್ನು ಇಲ್ಲಿ ಕಾಣಬೇಕು. ಈ ರೀತಿಯಾಗಿ ಭಗವಂತನಿಗೂ ಇತರೇ ಧರ್ಮಗಳಿಗೂ ಇರುವ ತಾರತಮ್ಯವನ್ನೂ ಭಗವಂತನಿಗಿರುವ ಶ್ರೇಷ್ಠತೆಯನ್ನು ತಿಳಿದೆವು.

ಮೇಲೆ ಹೇಳಿರುವಂತೆ, ಭಗವಂತನು ಬೇರೆ ಯಾವುದರ ಸಹಾಯವನ್ನೂ ಕಿಂಚಿತ್ತೂ ಅಪೇಕ್ಷಿಸಲಾರನು ಎನ್ನುವುದಕ್ಕೆ ತಕ್ಕ ಉದಾಹರಣೆ ಯಾವುದು ಎಂದರೆ ಶರಣಾಗತಿಯನ್ನು ಹೇಳುವ ಉದಾಹರಣೆಗಳು ಅನೇಕವುಂಟು. ಅವು ಯಾವುವು ? "ಮಾಮೇವ ಯೇ ಪ್ರಪದ್ಯಂತೆ." "ತಮೇವ ಚಾದ್ಯಂ ಪುರುಷಂ ಪ್ರಪದ್ಯೇತ್." "ತ್ವಮೇವೋಪಾಯ ಭೂತೋ ಮೇ ಭವ" "ಅರಿಕ್ಕ ನಿನ್ ಪಾದಮೇ ಶರಣಾಗ ತಂದೊಳಿಂದಾಯ್" ಎನ್ನುವಂತೆ.

ಈ ಉದಾಹರಣೆಗನುಸಾರವಾಗಿಯೇ ಯಾರು ಕೆಲವರು ನನ್ನನ್ನು ಅವಲಂಬಿಸು ತ್ತಾರೋ ಆ ಆದಿಪುರುಷನನ್ನೇ ಪಡೆಯುವವರಾಗಿದ್ದಾರೆ. ನೀನೇ ನನಗೆ ಉಪಾಯ ವಾಗಿ ಬೇಕು "ನನಗೆ ಉಪಾಯವನ್ನು ತರುವ ಸ್ಥಳದಲ್ಲಿ ನಿನ್ನ ಪಾದ ಪದ್ಮಗಳನ್ನೇ ಉಪಾಯವಾಗಿ ಕೊಟ್ಟಿರುತ್ತೀಯೆ" ಎನ್ನುವ ತಾತ್ಪರ್ಯವನ್ನು ಕಾಣತಕ್ಕದ್ದು.

ಮೇಲೆ ಹೇಳಿರುವ ಉದಾಹರಣೆಗಳಲ್ಲಿ ಉಪಾಯ ವಸ್ತುವನ್ನು ಸೂಚಿಸುವ ನುಡಿಯನ್ನು ಸೇರಿಸಿಯೇ 'ಏವ' ಎನ್ನುವ ಮಾತುಗಳನ್ನು ಕಾಣುತ್ತೇವೆ. ಈ ಮಾತು ಗಳು ಇಲ್ಲಿ ಬೇರೆಯ ಸ್ಥಿತಿ ವಸ್ತುವನ್ನು ಪಡೆದಿರುವುದಂತೆ, ಅದು ಯಾವುದು ? ಭಗವಂತನೇ ಅವನನ್ನು ಪಡೆಯಲು ಮುಖ್ಯ ಕಾರಣ. ಬೇರೆ ಒಂದೂ ಮುಖ್ಯ ಕಾರಣವಾಗಿಯೋ, ಸಹಾಯಕ ಕಾರಣವಾಗಿಯೋ ಅಲ್ಲ ಎನ್ನುವುದು ತಿಳಿಯುತ್ತದೆ,

ಈ ಸಾರಾಂಶವನ್ನು ನೋಡುವಲ್ಲಿ ಚೇತನನಲ್ಲಿರುವ ಉದ್ಯಮ ಕಾರಣವಲ್ಲ; ಪಡೆಯಬೇಕಾದ ಭಗವಂತನೇ ಕಾರಣ ಎಂಬುದು ಸ್ಪಷ್ಟವಾಗಿ ಕಾಣುತ್ತದೆ. ಇನ್ನೂ ಈ ಚೇತನನು ಭಗವಂತನನ್ನು ಪಡೆಯಲು ಮಾಡುವ ಪುರುಷಾರ್ಥಕ್ಕೆ ಕಾರಣವಲ್ಲ. ಎನ್ನುವುದನ್ನು "ತಮಹ ದೇವಮಾತ್ಮ ಬುದ್ಧಿ ಪ್ರಕಾಶಮ್" ಎನ್ನುವ ಶ್ರುತಿಯಲ್ಲಿಯೂ ನಾವು ಚೆನ್ನಾಗಿ ಕಾಣಬಹುದು. ಈ ಶ್ರುತಿಯ ಅರ್ಥ ಭಗವಂತನು ಉಪಾಯ ಎನ್ನುವ ಜ್ಞಾನವನ್ನು ಆ ಭಗವಂತನ ಕೃಪೆಯಿಂದಲೇ ಪಡೆಯಬೇಕು ಎನ್ನುವುದು.

ಈ ಶ್ರುತಿ ಮೊದಲು ಹೇಳಿದ "ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ" ಎನ್ನುವ ವಾಕ್ಯದೊಂದಿಗೆ ಸೇರುವುದರಿಂದ "ಭಗವಂತನೇ ಉಪಾಯ" ಎನ್ನುವ ತಿಳುವಳಿಕೆಯನ್ನು ಯಾವ ಭಗವಂತನು ತನ್ನ ಕೃಪೆಯಿಂದ ವಿಕಾಸಗೊಳಿಸುತ್ತಾನೋ ಆ ಭಗವಂತನನ್ನೇ ಮೋಕ್ಷ ಪುರುಷಾರ್ಥವೆನ್ನುವ ನಾನು (ವೇದಸ್ವರೂಪನು) ಉಪಾಯ ವಾಗಿ ಪಡೆಯುತ್ತೇನೆ, ಎನ್ನುವ ತಾತ್ಪರ್ಯವನ್ನು ಇಲ್ಲಿ ಕಾಣತಕ್ಕದ್ದಾಗಿದೆ.

ಈ ಅಭಿಪ್ರಾಯವನ್ನು ಗಹನವಾಗಿ ಆಲೋಚಿಸಿ ನೋಡಿದ್ದೇ ಆದರೆ ಮೊದಲಿನಲ್ಲಿ ಭಗವಂತನ ಅನುಗ್ರಹಕ್ಕೆ ಪಾತ್ರರಾದ ನಂತರ ಅವನ ಕೃಪೆಯಿಂದ "ಭಗವಂತನೇ ಉಪಾಯ" ಎಂಬುವ ಜ್ಞಾನವನ್ನು ಪಡೆದು ಅದರ ನಂತರ ಭಗವಂತನನ್ನು ಉಪಾಯವಾಗಿ ಪಡೆಯುತ್ತಾರೆ ಎನ್ನುವ ಕ್ರಮ ಚೆನ್ನಾಗಿ ತಿಳಿದು ಬರುತ್ತದೆ.

ಭಗವಂತನನ್ನು ಉಪಾಯವಾಗಿ ಪಡೆಯುವುದಕ್ಕೆ ಆ ರೀತಿಯ ಸ್ವೀಕಾರ ಅವಶ್ಯಕ. ಉಪಾಯವಾಗಿ ಪಡೆಯಬೇಕು ಎನ್ನುವ ಆಸೆಯೇ ಕಾರಣ. ಆ ಆಸೆ ಉಂಟಾಗಲು "ಭಗವಂತನು ಉಪಾಯ" ಎಂಬುವ ಜ್ಞಾನವೇ ಕಾರಣ. ಆ ಜ್ಞಾನವನ್ನು ಪಡೆಯುವುದಕ್ಕೆ ಆ ಭಗವಂತನ ಕೃಪೆಯೇ ಸಾಧನ ಎಂಬುದನ್ನು ಬೇರೊಂದು ಮಾರ್ಗದಿಂದ ಪಡೆದು ಸರಿಹೊಂದಿರುವುದನ್ನು ಇಲ್ಲಿ ತಿಳಿಯತಕ್ಕದಾಗಿದೆ.

ಈ ಅಭಿಪ್ರಾಯವನ್ನು ನಮ್ಮಾಳ್ವಾರ್‌ರವರೂ–" ಎನ್ ಉಣರ್ವಿನುಳ್ಳೇ ಇರುತ್ತಿನೇನ್, ಅದುವುಮ್ ಅವನ ದಿನ್ನರುಳೆ" ಎಂದು ತಮ್ಮ ಶಿರಿ ಸೂಕ್ತಿಗಳಿಂದ ಪ್ರಕಟಪಡಿಸಿರುತ್ತಾರೆ. ಈ ಚೇತನನು ಭಗವಂತನನ್ನು ಪಡೆದ ನಂತರ ಇವನ ಕಷ್ಟಗಳೆಲ್ಲಾ ಪರಿಹಾರವಾಗಿ ಸುಖವನ್ನು ಅನುಭವಿಸುವ ಹಾಗೆಯೇ ಈ ಎರಡಕ್ಕೂ ಮೊದಲು ಈ ಚೇತನನಲ್ಲಿರುವ ಆದರವು ಆ ಭಗವಂತನಿಂದಲೇ ಉಂಟಾಗುತ್ತದೆ. ಎನ್ನುವ ನಿರ್ದಿಷ್ಟವಾದ ಸತ್ಯ ವಸ್ತುವೂ ಇಲ್ಲಿ ಚೆನ್ನಾಗಿ ತಿಳಿಯುತ್ತದೆ.

ಇಲ್ಲಿ ಕೆಳಗೆ ಹೇಳುವುದನ್ನು ನೋಡಬಹುದು.

ತಂದೆಯಾದವನು ತನ್ನ ಮಗನಿಗೆ "ಗಾಯತ್ರಿ" ಎಂಬ ಮಂತ್ರವನ್ನು ಶಾಸ್ತ್ರ ರೀತಿಯಿಂದ ಉಪದೇಶಿಸುತ್ತಾನೆ. ಅದನ್ನು ತಿಳಿದುಕೊಂಡ ಆ ಪುತ್ರನೂ ತನ್ನ ತಂದೆಯು ತನ್ನ ಕೈಯಲ್ಲಿ ಕೊಟ್ಟ ಹಣವನ್ನು ಆ ತಂದೆಗೇ ತನ್ನ ಕೃತಜ್ಞತೆಗೆ ತಕ್ಕ ಹಾಗೆ ಕೊಡುತ್ತಾನೆ

ಇದರ ಹಾಗೆ ಭಗವಂತನು ಕೊಟ್ಟ ತಿಳುವಳಿಕೆಯನ್ನೂ, ಆಸೆಯನ್ನೂ ಪಡೆದ ಈ ಚೇತನನು ಆ ಭಗವಂತನು ಅನುಗ್ರಹಿಸಿದ ಕೃಪೆಯಿಂದಲೇ ಆ ಭಗವಂತನನ್ನು ಉಪಾಯವಾಗಿ ಪಡೆಯುತ್ತಾನೆ. ಆದ್ದರಿಂದ ಆ ಸಂಬಂಧ ಉಪಾಯ ತನ್ನದು ಎನ್ನುವುದಕ್ಕೆ ಅವಕಾಶವಿಲ್ಲ.

ಈವರೆವಿಗೂ ಹೇಳಿರುವುದರಲ್ಲಿ ಭಗವಂತನನ್ನು ಪಡೆಯುವ ಸ್ಥಿತಿ ಸಾಧನವಲ್ಲ. ಭಗವಂತನೇ ಮುಖ್ಯಧರ್ಮ ಎನ್ನುವುದನ್ನು ತಿಳಿದೆವು. ಆದರೆ ಈ ಅನುಗ್ರಹವು ಚೇತನನಿಗೆ ಪುರುಷಾರ್ಥವನ್ನು ಪಡೆಯುವಾಗ ಸಹಾಯ ಮಾಡುವುದು ಹೇಗೆ? ಎಂದರೆ ಅಧಿಕಾರಿ ವಿಶೇಷಣವಾಗಿ ಸಹಾಯವನ್ನು ನೀಡುತ್ತವೆ. ಇವನ್ನು ಸ್ವಲ್ಪ ವಿವರಿಸಿ ಹೇಳುತ್ತೇನೆ.

ಶಾಸ್ತ್ರಗಳಲ್ಲಿ ಉಪಾಯ, ಅಂಗ, ಫಲ ಎಂದು ಹೇಳಿರುವುದನ್ನು ನಾವು ಕಾಣಬಹುದು. ಭಗವಂತನನ್ನು ಪಡೆದು ಅವನನ್ನೂ ಅವನ ಶ್ರೇಷ್ಠ ಗುಣಗಳನ್ನೂ ದಿವ್ಯ ಮಂಗಳ ವಿಗ್ರಹವನ್ನೂ ಪ್ರೀತಿಯೊಂದಿಗೆ ಅನುಭವಿಸಿ ಆ ಅನುಭವದಿಂದುಂಟಾದ ಆನಂದ ಹೊರಹೊಮ್ಮಿ ಪ್ರೇರೇಪಿಸಲು ಅದರಿಂದ ಮಾಡುವ ದಾಸ್ಯ ಕೈಂಕರ್ಯವೇ ಅತ್ಯಂತ

ಶ್ರೇಷ್ಠಫಲ. ಈ ಫಲವನ್ನು ಪಡೆಯುವುದಕ್ಕೆ ಭಗವಂತನೇ ಉಪಾಯ. ಈ ಉಪಾಯವನ್ನು (ಭಗವಂತನನ್ನು) ಒಬ್ಬನು ಪಡೆಯುವಾಗ ಇತರ ಎಲ್ಲಾ ಧರ್ಮಗಳನ್ನೂ ಬಿಟ್ಟರೇ ಪಡೆಯಬಹುದಾಗಿದೆ. ಇದಕ್ಕೆ "ಸರ್ವಧರ್ಮಾನ್ ಪರಿತ್ಯಜ್ಯ" ಎನ್ನುವ ಶ್ರೀ ಕೃಷ್ಣಪರಮಾತ್ಮನ ಸಿರಿನುಡಿಗಳೇ ತಕ್ಕ ಉದಾಹರಣೆಯಾಗಿದೆ.

ಭೋಜನ ಮಾಡುವವನೊಬ್ಬನು ಮೊದಲು ಸ್ನಾನಮಾಡಿಯೇ ನಂತರ ಊಟ ಮಾಡಬೇಕು ಎಂದು "ಸ್ನಾತ್ವಾಭುಂಜೀತ" ಎಂದು ಹೇಗೆ ಶಾಸ್ತ್ರ ಹೇಳುತ್ತದೆಯೋ, ಹಾಗೆಯೇ ಶ್ರೀ ಕೃಷ್ಣಪರಮಾತ್ಮನೂ ಪರಮ ಪುರುಷನಾಗಿರುವ ನನ್ನನ್ನು ಪಡೆಯಲು ಇತರ ಎಲ್ಲಾ ಧರ್ಮಗಳನ್ನೂ ಪೂರ್ಣವಾಗಿ ಬಿಟ್ಟುಬಿಡು, ನನ್ನನ್ನು ಹೊಂದು ಎಂದು ಹೇಳಿರುವನಲ್ಲವೇ! ಈ ರೀತಿ ಇತರ ಎಲ್ಲಾ ಧರ್ಮಗಳನ್ನೂ ಬಿಡು ಎನ್ನುವುದು ಅಂಗವಂತೆ.

ಈ ಚೇತನನಲ್ಲಿರುವ ಸಂಬಂಧವೋ ಉಪಾಯವೋ ಅಲ್ಲ. ಅಂಗವೂ ಅಲ್ಲ. ಆದರೂ ಈ ಚೇತನನು ಸಂಬಂಧವನ್ನು ಪಡೆದಿದ್ದರೇ ಅದರ ಮೇಲೆ ಹೇಳಿರುವ ಫಲವನ್ನು ಪಡೆಯಬಹುದು. ಸಂಬಂಧ ಪಡೆಯದಿದ್ದರೆ ಫಲವನ್ನು ಪಡೆಯಲಾರನು.

ಈ ರೀತಿ ಚೇತನನೊಂದಿಗಿರುವ ಸಂಬಂಧ, ಉಪಾಯ, ಅಂಗ ಇವುಗಳಿಂದ ಬೇರೆಯಾದವನ್ನೂ, ಫಲಪ್ರಾಪ್ತಿಯಾಗುವಾಗ ಪ್ರಾರ್ಥಿಸುವುದಾಗಿಯೂ ಇರುವುದರಿಂದ ಇದು ಅಧಿಕಾರಿ ವಿಶೇಷಣ.

"ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।

ಅಹಂತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ ॥" ಎನ್ನುವ ಮಾತನ್ನು ಕಾಣತಕ್ಕದ್ದು.

ಈ ಶ್ಲೋಕದಲ್ಲಿ "ಸರ್ವಧರ್ಮಾನ್ ಪರಿತ್ಯಜ್ಯ" ಎನ್ನುವ ಸ್ಥಳದಲ್ಲಿ ಮೊದಲು ಹೇಳಿದ ಹಾಗೆ ಇತರ ಎಲ್ಲಾ ಧರ್ಮಗಳನ್ನೂ ತೊರೆದು ಬಿಡು, ಎಂಬುವ ಅಂಗವನ್ನು "ಮಾಮ್" ಎನ್ನುವ ಭಾಗದಲ್ಲಿ ಭಗವಂತನಾಗಿರುವ ಉಪಾಯವನ್ನು "ಏಕಂ" ಎನ್ನುವ ಸ್ಥಳದಲ್ಲಿ ಇವನಲ್ಲಿರುವ ಸಂಬಂಧ ಉಪಾಯವಲ್ಲ, ಭಗವಂತನು ಬೇರೊಂದರ ಸಹಾಯವನ್ನು ಅಪೇಕ್ಷಿಸುವುದಿಲ್ಲ ಎನ್ನುವುದನ್ನೂ "ವ್ರಜ" ಎನ್ನುವ ಸ್ಥಳದಲ್ಲಿ ಇವನು ಪಡೆದಿರುವ ಸಂಬಂಧವನ್ನು "ತ್ವಾ" ಎನ್ನುವಲ್ಲಿ ಸಂಬಂಧವನ್ನುಂಟು ಮಾಡಿದ ಚೇತನನಾಗಿರುವ ಅಧಿಕಾರಿಯನ್ನು ಹೇಳುವ ಸಮಾಂತರ ಸಂಬಂಧವುಳ್ಳ ಅಧಿಕಾರಿ ವಿಶೇಷಣವನ್ನು "ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ" ಎನ್ನುವ ಸ್ಥಳದಲ್ಲಿ ಭಗವಂತನನ್ನು ಹೊಂದಲು ಆಗದೆ ತಡೆಯಾಗಿರುವ ಪಾಪವನ್ನು ದೂರಗೊಳಿಸಿ ನಿರ್ಮೂಲ ಮಾಡಿ, ಕೃಷ್ಣ ಪರಮಾತ್ಮನು ಪ್ರಕಟಪಡಿಸಿರುವುದು ಸ್ಪಷ್ಟ.

ಅನಂತರವೂ "ತನಕ್ಕಡಿಮೈ ಪಟ್ಟವಾ, ತಾನರಿಯಾ ನೇಲುಂ, ಮನತ್ತಾಲ್ಯುಂ ಶೈಪ್ಪದಾಂ, ಪಾಲ್ಯೆ................ ಪನತ್ತಿಡರ್ಕ್ಕ ಪರಿಯಾಂ ಪಣ್ಣಮಿಂದಾಲ್ಲುಮಿಂದೆ ಪಲ್ಲಾಲ್ ಮಾರಿಯಾರ ಪೇಲ್ ಪಿರಪಾರ್ ವಂತ್ತು ವಾಟ್ಟಿ ಎನ್ನುವ ಪೂರದಾ,

4

ಳ್ವಾರ ಶ್ಲೋಕವೂ ಇಲ್ಲಿ ಅನುಭವಿಸತಕ್ಕದ್ದು. ಈ ಹಾಡಿನ ಮೊದಲ ನುಡಿಯಲ್ಲಿ ಬರೆಯುವ ತಾತ್ಪರ್ಯ–

“ಈ ಚೇತನನು ಭಗವಂತನಿಗೆ ಸೇರಿದವನು ತಾನು “ಉಪಪತ್ತಿಯುಳ್ಳ” (ಯುಕ್ತ) ಅರ್ಹನವನು ಎನ್ನುವ ಸತ್ಯತೆಯನ್ನು ತಿಳಿದುಕೊಳ್ಳುವ ಶಕ್ತಿ ಪಡೆಯದೆ ಇದ್ದರೂ, ಬೇರೆಯವರು ಅನುಸರಿಸುವ ರೀತಿಯನ್ನು ನೋಡಿದ್ದರೂ ಸಹ ಭಗವಂತನನ್ನು ತನ್ನ ಮನಸ್ಸಿನಲ್ಲಿ ಸ್ಮರಿಸಿ ಇರುವವರು ಎನ್ನುವುದಾಗಿದೆ.

ಇನ್ನು ಚರಣದ ಸಾರಾಂಶ ವಸ್ತುವನ್ನು ನೋಡುತ್ತೇವೆ (ಈ ಚೇತನನಿಗೆ ಮೊದಲು ಹೇಳಿದ ತರಹ) ಇಷ್ಟನ್ನು ಮಾತ್ರ ಉಂಟಾದರೂ, ಭಗವಂತನು ಇವನ ವಿರೋಧಿಯನ್ನು ಹೋಗಲಾಡಿಸಿ, ಇವನಿಗೆ ತನ್ನನ್ನು ತಾನೇ ತಂದುಕೊಡುವನು. ಹೇಗೆ ? ಎಂದರೆ :–

ಕಾಡು ಮೇಡಾಗಿರುವ ಭೂಮಿಯನ್ನು ಕೆರೆಯಾಗಿ ತೋಡುತ್ತೇವೆ. ಈ ಕಾರ್ಯವು ಮಳೆ ಬರುವುದಕ್ಕೆ ಕಾರಣವಲ್ಲ. ನಾವು ಕೆರೆಯನ್ನು ತೋಡುತ್ತೇವೆಂದು ಮಳೆ ಬರುತ್ತದೆಯೇ ? ಇಲ್ಲ. ಇದರಿಂದ ಕೆರೆಯನ್ನು ಅಗೆಯುವುದು ಮಳೆ ಬರಲು ಕಾರಣವಲ್ಲ ಎನ್ನುವುದು ಪ್ರಪಂಚದಲ್ಲಿ ತಿಳಿದಿರುವ ವಿಷಯವೇ ಆಗಿದೆ. ಆದರೆ ಕೆರೆ ತೋಡುವುದು ಮಳೆ ಬರುವುದಕ್ಕೆ ಕಾರಣವಲ್ಲದಿದ್ದರೆ ಹಾಗೆ ಅಗೆಯುವುದು ಫಲವುಳ್ಳದ್ದಲ್ಲವಲ್ಲವೇ ಎಂದು ಎಣಿಸಬಾರದು. ಪರಮಾತ್ಮನ ಇಚ್ಛೆಗನುಸಾರವಾಗಿ ಮಳೆ ಬರುವಾಗ ಆ ಮಳೆ ನೀರನ್ನು ಆ ಕಾಡಿನ ದಿಣ್ಣೆಯು (ಗುಡ್ಡವು) ತಡೆಯುತ್ತದೆಯೋ, ಆ ದಿಣ್ಣೆಯನ್ನು ಸರಿಪಡಿಸಿ ಸರಿಯಾಗಿ ಮಾಡಿ ಇಟ್ಟಿದ್ದೇ ಆದರೆ ಮಳೆಯು ಬಂದಾಗ ಆ ಮಳೆಯ ನೀರನ್ನು ಆ ಕೆರೆಯು ತಡೆದು ತನ್ನಲ್ಲಿ ಇಟ್ಟುಕೊಳ್ಳುತ್ತದೆ ? ಎನ್ನುವುದೇ ತಾತ್ಪರ್ಯ.

ಇದರಿಂದ ಕೆರೆಯನ್ನು ಅಗೆಯುವುದು ಮಳೆಯ ನೀರನ್ನು ನಾಶ ಮಾಡದೆ ಇರಲು ಅಲ್ಲದೆ ಮಳೆ ಬರಲು ಅಲ್ಲ ಎಂಬುದನ್ನು ಚೆನ್ನಾಗಿ ತಿಳಿದೆವು.

ಇಲ್ಲಿ ಭಗವಂತನನ್ನು ಉಪಾಯವಾಗಿ ಪಡೆಯದೆ ಇರುವವರನ್ನು ಕಾಡುಗುಡ್ಡದ ಹಾಗೂ, ಭಗವಂತನನ್ನು ಉಪಾಯವಾಗಿ ಪಡೆಯುವ ಸಂಬಂಧವನ್ನೂ ಕೆರೆಯ ಹಾಗೆ ಎಂದೂ ಹೇಳಲು ಸಾಧ್ಯ. ಚೇತನನಲ್ಲಿರುವ ಭಗವಂತನ ಕರುಣಾಭರಿತವಾದ ಅನುಗ್ರಹವನ್ನು ಪಡೆಯುವುದಕ್ಕೆ ಒಂದು ರೀತಿಯಿಂದ ಸಹಾಯವಾಗುತ್ತದೆಯೋ ಹೊರತು, ಆ ಪರಮಾತ್ಮನ ಕೃಪೆಯುಂಟಾಗಲು ಸಾಧನವಾಗಲಾರದು ಎನ್ನುವುದೇ ನಿರ್ಧಾರವಾದ ವಿಷಯ.

ಇದರಿಂದ “ಕೆರೆಯನ್ನು ತೋಡುವ ಹಾಗೆ” ಚೇತನನು ಭಗವಂತನನ್ನು ಹೊಂದುವುದಾಗಿ ಮಾಡುವ ಕಾರ್ಯ ಉಪಾಯ ಭೂತವಲ್ಲ; ಕೆರೆಯನ್ನು ತೋಡುವುದು ಮಾತ್ರ, ಯಾವ ರೀತಿ ಫಲದಾಯಕವಲ್ಲವೋ, ಅದೇ ರೀತಿ ಭಗವಂತನನ್ನು ಉಪಾಯವಾಗಿ ಹೊಂದುವುದೂ ಫಲದಾಯಕವಲ್ಲ ಎನ್ನುವುದನ್ನು ಇಲ್ಲಿ ಸಾರತತ್ವ

ವಾಗಿ ನೋಡಿದೆವು. ಈ ಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟುಕೊಂಡು ಪಿಳ್ಳೈಲೋಕಾಚಾರ್ಯರು ಪ್ರಪತ್ತಿಯನ್ನು ಅಧಿಕಾರಿ ವಿಶೇಷಣ ಎಂದು ನಿರ್ಧರಿಸಿರುತ್ತಾರೆ.

ಇದುವರೆವಿಗೂ ಪಿಳ್ಳೈಲೋಕಾಚಾರ್ಯರ ಅಭಿಪ್ರಾಯವನ್ನು ಸಂಕ್ಷಿಪ್ತವಾಗಿ ನೋಡಿದೆವು. ಇನ್ನು ದೇಶಿಕರ ಅಭಿಪ್ರಾಯವನ್ನೂ ನೋಡಬೇಕು.

ಭಗವಂತನನ್ನು ಧ್ಯಾನಿಸುವ ಚಿಂತೆ " ಭಕ್ತಿ " ಎಂಬುದನ್ನು ಮೊದಲೇ ಹೇಳಿರುವೆವು. ಈ ಭಕ್ತಿಯನ್ನು ತಕ್ಕ ಜ್ಞಾನ ಮತ್ತು ಸಂಬಂಧವುಳ್ಳವನು, ಇವನ್ನೇ ಮೋಕ್ಷ ಸಾಧನವನ್ನಾಗಿ ಮಾಡುತ್ತಾನೆ. ಜ್ಞಾನವೂ, ಸಂಬಂಧವೂ ಇಲ್ಲದವನೋ ಎಂದರೆ ಭಕ್ತಿಯನ್ನು ಮಾಡದೆ ಇದ್ದರೂ, ಮೋಕ್ಷ ಪುರುಷಾರ್ಥಗಳನ್ನು ಕಳೆದುಕೊಳ್ಳಬೇಕಾಗಿರುವುದಿಲ್ಲ. ಭಗವಂತನನ್ನು ಉಪಾಯ ಭೂತನನ್ನಾಗಿ ಪಡೆದರೆ ಆ ಭಗವಂತನು ಭಕ್ತಿ ಸಾಧನದಲ್ಲಿ ಬಂದು ಸೇರುತ್ತಾನೆ. ಆ ರೀತಿ ಬಂದು ಸೇರಿದ ಭಗವಂತನು (ಭಕ್ತಿಯ ಜಾಗದಲ್ಲಿ ಭಕ್ತಿ ಹೇಗೆ ಮೋಕ್ಷ ಪುರುಷಾರ್ಥಕ್ಕೆ ಸಾಧನವೋ ಹಾಗೆಯೇ) ಮೋಕ್ಷಕ್ಕೆ ಉಪಾಯನಾಗುತ್ತಾನೆ. ಈ ರೀತಿ ಪ್ರಪತ್ತಿ ಭಗವಂತನು ಬೇರೊಂದು ಉಪಾಯವಾಗಿರುವ ಭಕ್ತಿಸಾಧನದಲ್ಲಿ ಬಂದು ಸೇರಿದ್ದಕ್ಕೆ ಕಾರಣವಲ್ಲದೆ, ನೇರವಾಗಿ ಮೋಕ್ಷ ಪುರುಷಾರ್ಥಗಳನ್ನು ಪಡೆಯಲು ಕಾರಣವಲ್ಲ. ಪರಮಾತ್ಮನು ಆ ಪುರುಷಾರ್ಥಕ್ಕೆ ಕಾರಣ. ಈ ರೀತಿ ದೇಶಿಕರ ಅಭಿಪ್ರಾಯವನ್ನು ಸಂಕ್ಷಿಪ್ತವಾಗಿ ತಿಳಿದುಕೊಂಡೆವು.

ಮೇಲೆ ಹೇಳಿರುವ ಎರಡು ಪಕ್ಷಗಳಲ್ಲಿಯೂ ಪ್ರಪತ್ತಿಯನ್ನು ಅಧಿಕಾರಿ ವಿಶೇಷಣವಾಗಿ ಒಬ್ಬರೂ, ಭಗವಂತನು ಭಕ್ತಿಸಾಧನದಲ್ಲಿ ಬಂದು ಸೇರುವುದಕ್ಕೆ ಕಾರಣವಾಗಿ ಮತ್ತೊಬ್ಬರೂ ಅಭಿಪ್ರಾಯ ಪಟ್ಟಿರುವುದನ್ನು ಕಾಣುತ್ತೇವೆ. ಇದನ್ನು ನೋಡುವಲ್ಲಿ ಈ ಇಬ್ಬರು ಆಚಾರ್ಯರುಗಳ ವಿಚಾರದಲ್ಲಿ ತಾರತಮ್ಯ ಉಂಟು ಎಂಬುದು ಸುಸ್ಪಷ್ಟ.

ಆದರೂ ಸಹ ಪರಮಾತ್ಮನು ನೇರವಾಗಿ ಮೋಕ್ಷ ಪುರುಷಾರ್ಥವನ್ನು ನೀಡಲು " ಉಪಾಯಭೂತ " ಎನ್ನುವುದನ್ನು ಈ ಇಬ್ಬರು ಆಚಾರ್ಯರುಗಳೂ ಮನಸ್ಸಿನಲ್ಲಿ ಭಿನ್ನಾಭಿಪ್ರಾಯವಿಲ್ಲದೇ ಅಂಗೀಕರಿಸಿರುವರೆಂಬುದು ಚೆನ್ನಾಗಿ ಇಲ್ಲಿ ತಿಳಿಯುತ್ತದೆ (ಈ ಮನೋಭಿಪ್ರಾಯ ಒಂದೇ ಅಭಿಪ್ರಾಯವನ್ನು ಇಲ್ಲಿ ಅನುಭವಿಸತಕ್ಕದ್ದು).

ಇನ್ನು ರಾಮಾಯಣವು ಶರಣಾಗತಿ ಧರ್ಮವನ್ನು ನಿರೂಪಿಸುವುದನ್ನು ಸ್ವಲ್ಪ ವಿವರಿಸಿ ಹೇಳುತ್ತೇವೆ.

" ರಾಮಾಯಣವೂ—ಶರಣಾಗತಿಯೂ "

ದಶರಥ ಚಕ್ರವರ್ತಿ ಪುತ್ರ ಭಾಗ್ಯವನ್ನು ಅಪೇಕ್ಷಿಸಿ ಯಾಗಮಾಡುವ ಸಮಯ. ಆ ಸಮಯದಲ್ಲಿ ಚತುರ್ಮುಖನೂ ದೇವತೆಗಳೂ ಇತರ ಮಹರ್ಷಿಗಳೂ ಆ ಯಾಗದಲ್ಲಿ ತಮ್ಮ ತಮ್ಮ ಹವಿಸ್ಸನ್ನು ಪಡೆಯಲು ಅಪೇಕ್ಷಿಸಿ ಎಲ್ಲರೂ ಒಂದಾಗಿ ಬಂದಿದ್ದರು. ಹಾಗೆ ಬಂದಿರುವ ದೇವತೆಗಳೇ ಮುಂತಾದವರುಗಳು ಬ್ರಹ್ಮನನ್ನು ಕುರಿತು " ಓ ಭಗವಂತನೇ ! ತಮ್ಮ ಕೃಪೆಯನ್ನು ಪಡೆದು ಅತ್ಯಧಿಕ ಪರಾಕ್ರಮವುಳ್ಳ

ರಾವಣನು ನಮ್ಮೆಲ್ಲರನ್ನೂ ಕೊಂದರೆ ಹಿಂಸಿಸುತ್ತಿದ್ದಾನೆ. ನಾವುಗಳು ಅವನನ್ನು ಅಡಗಿಸಲು ಸಾಧ್ಯವಿಲ್ಲದೆ ಇದ್ದೇವೆ. ಆದ್ದರಿಂದ ನೀವುಗಳು ಅವನನ್ನು ಕೊಲ್ಲುವುದಕ್ಕೆ ತಕ್ಕ ಉಪಾಯವನ್ನು ವಿಚಾರಮಾಡಿ ತಿಳಿಸಬೇಕು '' ಎಂದು ಪ್ರಾರ್ಥಿಸಿಕೊಂಡರು.

ಈ ರೀತಿ ಬೇಡುವ ಸಮಯದಲ್ಲಿ ಚಕ್ರವರ್ತಿ ಯಾಗ ಮಾಡುವ ಸ್ಥಳದಲ್ಲಿ ಪ್ರಸಿದ್ಧಿ ಪಡೆದವನೂ, ಶಂಖ, ಚಕ್ರ, ಗದೆಯನ್ನು ಧರಿಸಿರುವವನೂ, ವಸ್ತ್ರಾಭರಣದಿಂದ ಅಲಂಕರಿಸಲ್ಪಟ್ಟವನೂ, ಎಲ್ಲಾ ವಸ್ತುಗಳಲ್ಲಿಯೂ ಹರಡಿರುವವನೂ, ಈ ಪ್ರಪಂಚಕ್ಕೆ ಸ್ವಾಮಿಯೂ ಆದ ನಾರಾಯಣನು ವೈಕುಂಠದಿಂದ ದಯಮಾಡಿಸಿದನು. ಹೀಗೆ ಪರಮ ಪುರುಷನು ದಯಮಾಡಿಸಿದ ವಿಚಾರವನ್ನು ಹೇಳುವ ಮಾತುಗಳು :—

" ಏತಸ್ಮಿನ್ನಂತರೇ ವಿಷ್ಣುಃ ಉಪಯಾತೋ ಮಹಾದ್ಯುತಿಃ ।
ಶಂಖ ಚಕ್ರ ಗದಾಪಾಣಿಃ ಪೀತವಾಸಾ ಜಗತ್ಪತಿಃ ॥ "

ಈ ಮಾತುಗಳಲ್ಲಿ ಶರಣಾಗತಿಧರ್ಮದ ನಿಜಾಂಶವನ್ನು ನಾವು ತಿಳಿಯಬಹುದು (1) " ಧರ್ಮ '' ಎಂಬ ನುಡಿ ಯಾವ ಫಲಕ್ಕೆ ಸಾಧನವೋ, ಅದನ್ನು ಸೂಚಿಸುವ ಭಗವಂತನು ಆಯಾ ಒಳ್ಳೆಯದಕ್ಕೆ ಕಾರಣನಾಗಿರುವುದರಿಂದ " ಧರ್ಮ '' ಶಬ್ದದಿಂದ ಸೂಚಿಸಲ್ಪಡುತ್ತಾನೆ. ಅವನು ನಿತ್ಯನಾಗಿರುವವನು ಆದ್ದರಿಂದ ಇತರ ಧರ್ಮಗಳಲ್ಲಿ ಯಾವುದಾದರೂ ಒಂದು ಹಾಗೆ ಪ್ರಯತ್ನ ಶಕ್ತಿಯಿಂದಲೇ ಏರ್ಪಡುವುದೂ ಹಾಗಲ್ಲದೆ ಭಗವಂತನು ಸೃಷ್ಟಿಸಲ್ಪಟ್ಟವನಲ್ಲ ಎಂದು ಮೊದಲೇ ಹೇಳಿದ್ದೇವೆ.

ಇದನ್ನು ಕೆಲವರು ನೋಡಿದರೆ ಜನರವರು ಅಪೇಕ್ಷಿಸಿದ ಫಲ ಆಯಾಕಾಲದಲ್ಲಿ ದೊರೆವ ಅಡ್ಡಿಯೂ ಇಲ್ಲದೆ ಭಗವಂತನಾಗಿರುವ ಧರ್ಮದಿಂದ ಪಡೆಯಲು ಅಡ್ಡಿ ಏನು ಎಂಬ ಅರ್ಥವು ಒಪ್ಪುತ್ತದೆ. ಆದರೂ ಹೀಗೆ ಬರೆಯಲು ಅವಕಾಶವಿಲ್ಲ. ಏಕೆಂದರೆ ಪರಮಾತ್ಮನಾಗಿರುವ ಧರ್ಮ ಸರ್ವರಿಗೂ, ಸರ್ವಕಾಲದಲ್ಲೂ ಉಂಟು ಎನ್ನುವುದು ಒಂದು ರೀತಿಯಿಂದ ಸತ್ಯವೇ ಆದರೂ ಆ ಭಗವಂತನಾಗಿರುವ ಧರ್ಮ ದುಃಖವನ್ನು ನಿವರ್ತಿಮಾಡಿ ಸುಖವನ್ನುಂಟುಮಾಡಿ ಇವನನ್ನು ನೋಡುವಲ್ಲಿ ಇವನ ಪ್ರಾರ್ಥನೆಯನ್ನು ಅಪೇಕ್ಷಿಸುತ್ತದೆ. " ರಕ್ಷ್ಯಾಪೇಕ್ಷಾ ಪ್ರತೀಕ್ಷತೇ '' ಎಂಬ ಪ್ರಮಾಣ ವಚನವನ್ನು ಇಲ್ಲಿ ಕಾಣತಕ್ಕದ್ದು.

ಇದರಿಂದ ''ರಕ್ಷಣೆ'' ಎಂಬ ಕಾರ್ಯವನ್ನು ಕೃಪೆಯಾಗಿ ಉಳ್ಳ ಪರಮಾತ್ಮನು ಈ ಚೇತನನ ಬೇಡಿಕೆಗಳನ್ನು ಅಪೇಕ್ಷಿಸಿಯೇ ಇವನನ್ನು ರಕ್ಷಿಸುತ್ತಾನೆ ಎನ್ನುವ ಶರಣಾಗತಿಯನ್ನು ಕುರಿತು ಒಂದು ಸತ್ಯವನ್ನು ನಾವು ತಿಳಿಯಬಹುದು.

ಈ ನಿಜಸ್ಥಿತಿಯು ಮೇಲೆ ಹೇಳಿರುವ " ಏತಸ್ಮಿನ್ ಅಂತರೇ '' ಎನ್ನುವ ಮಾತಿನಲ್ಲಿ ಚೆನ್ನಾಗಿ ತಿಳಿಯುತ್ತದೆ ಹೇಗೆ ಎಂದರೆ :—

''ಭಗವಂತನು'' ಇತರೇ ದೇವತೆಗಳ ಹಾಗೆ ತನ್ನ ಹವಿಸ್ಸನ್ನು ಪಡೆದು ಭುಜಿಸಲು ಯಾಗ ಭೂಮಿಗೆ ದಯಮಾಡಿಸಿದನು ಎನ್ನುವುದು ಇಲ್ಲಿ ಸತ್ಯವಲ್ಲ. ಹಾಗೆ ಹವಿಸ್ಸನ್ನು ಪಡೆದು ಭುಜಿಸಬೇಕೆಂಬ ಮನಸ್ಸಿದ್ದರೆ, ಅವರುಗಳ ಹಾಗೆ ಆ ಯಾಗ ಶಾಲೆಗೆ ಮೊದಲೇ

ಬರುತ್ತಿದ್ದನಲ್ಲವೆ ? ಶಂಖ, ಚಕ್ರ, ಗದಾಪಾಣಿಯಾಗಿ, ವಸ್ತ್ರಾಭರಣಗಳಿಂದಲಂಕೃತನಾಗಿ ಯುದ್ಧಕ್ಕೆ ಬರುವವನ ಹಾಗೆ ಬರಬೇಕೆ ?

ಹಾಗಾದರೆ ಸತ್ಯ ಸ್ಥಿತಿ ಏನು ಎಂದರೆ, "ಏತಸ್ಮಿನ್ನಂತರೇ" ಎನ್ನುವುದನ್ನು ಇಲ್ಲಿ ಚೆನ್ನಾಗಿ ನೋಡಿದರೆ ತಿಳಿದುಬರುತ್ತದೆ. ಈ ಮಾತುಗಳಲ್ಲಿ ಬ್ರಹ್ಮನನ್ನು ಕುರಿತು ದುಃಖಗಳು ಕಳೆದು ಸುಖವುಂಟಾಗುವ ಹಾಗೆ ತಾವು ವಿಚಾರಮಾಡಿ ಹೇಳಬೇಕು ಎಂದು ದೇವತೆಗಳು ಬೇಡಿದ ಸಮಯದಲ್ಲಿ ಭಗವಂತನು ದಯಮಾಡಿಸಿದನು ಎನ್ನುವುದನ್ನು ಹೇಳಿರುವುದರಿಂದ "ಪರಮಾತ್ಮನು" ಈ ಚೇತನನ ಪ್ರಾರ್ಥನೆಯನ್ನು ಅಪೇಕ್ಷಿಸಿ ರಕ್ಷಿಸುತ್ತಾನೆ ಎಂಬುದು ಸುಸ್ಪಷ್ಟ.

"ಬ್ರಹ್ಮಾಸ್ತ್ರವು ಹೇಗೆ ಸೆಣಬಿನ ಹಗ್ಗದ ಬಂಧನವನ್ನು ಸಹಿಸುವುದಿಲ್ಲವೋ, ಹಾಗೆಯೇ ಭಗವಂತನೂ, ಬೇರೊಂದರ ಸಂಬಂಧವನ್ನು ಸಹಿಸಲಾರನು, ಎಂದು ಮೊದಲು ಹೇಳಿದ್ದಿರಿ. ಈಗ ಈ ಚೇತನನ ಪ್ರಾರ್ಥನೆಯನ್ನು ನಿರೀಕ್ಷಿಸಿಯೇ ಇವನ ಕೆಲಸವನ್ನು ಮಾಡುತ್ತಾನೆ ಎಂದು ಹೇಳುವಿರಿ ಈ ಎರಡು ಅಭಿಪ್ರಾಯಗಳೂ ಹೇಗೆ ಹೊಂದಿಕೆಯಾಗುವುವು, ಎಂದು ಕೆಲವರು ಇಲ್ಲಿ ಪ್ರಶ್ನಿಸಬಹುದು.

ಒಬ್ಬನು ಬೇರೊಬ್ಬರ ಸಹಾಯ ಸ್ವಲ್ಪವೂ ಇಲ್ಲದೆ ಅಡಿಗೆಯನ್ನು ಮಾಡಬಲ್ಲನು. ಅವನನ್ನು ಬೇರೊಬ್ಬನು ತನ್ನ ಮನೆಯ "ತದಂಗು" (ವಿಶೇಷ) ಕಾರ್ಯಗಳ ನಿಮಿತ್ತವಾಗಿ ಅಡಿಗೆಯನ್ನು ಮಾಡಬೇಕೆಂದು ಬೇಡಿಕೊಳ್ಳುತ್ತಾನೆ. ಆ ರೀತಿ ಬೇಡಲ್ಪಟ್ಟು ಅವನೂ ಸಹ ಆ ಪ್ರಾರ್ಥನೆಗೊಳಪಟ್ಟು ಅಡಿಗೆಯನ್ನು ಮಾಡುತ್ತಾನೆ.

ಈ ಸ್ಥಳದಲ್ಲಿ "ಬೇರೊಬ್ಬರ ಸಹಾಯ ಸ್ವಲ್ಪವೂ ಬೇಡದವನು ಇವನು ಎಂದು ಹೇಳುವಿರಾ ? ಇವನು ಅಡಿಗೆ ನಿಮಿತ್ತವಾಗಿ ಬೇರೆಯವರ ಪ್ರಾರ್ಥನೆಯನ್ನು ಅಪೇಕ್ಷಿಸಿ ತಾನೇ ಬಂದು ಅಡಿಗೆ ಮಾಡಿದನು" ಎಂದು ವಿರೋಧವಾಗಿ ಕಾಣುವ ಹಾಗೆ ಹೇಳುವವರೂ ಉಂಟೇ ? ಇಲ್ಲಿ ಅರ್ಥವೇನು ? ಅಡಿಗೆ ಮಾಡುವವನು ಅಡಿಗೆ ಮಾಡುವಾಗ ಬೇರೆಯವರ ಸಹಾಯವನ್ನು ಸ್ವಲ್ಪವೂ ಅಪೇಕ್ಷಿಸದೆ ಇರುವುದು. ಅದು ಅವನ ಹಿರಿಮೆಯನ್ನು ಬೇರೆಯವರ ಸಹಾಯ ಸ್ವಲ್ಪವೂ ಇಲ್ಲದೆ ಅಡಿಗೆಯನ್ನು ಮಾಡಬಲ್ಲವನಾಗಿರುವುದಕ್ಕೆ ನ್ಯೂನತೆ, ಲೋಪ ಇರುವುದು ವ್ಯಕ್ತವಲ್ಲ. ನ್ಯೂನತೆ, ಲೋಪ ಅವನಿಗೆ ಇಲ್ಲ.

ಇದರ ಹಾಗೆಯೇ ಭಗವಂತನಾಗಿರುವ ಧರ್ಮ. ಈ ಚೇತನನು ಕಾರ್ಯ ಮಾಡುವಾಗ ಬೇರೆಯವರ ಸಹಾಯವನ್ನು ಬೇಡಿದರೆ ಆ ಧರ್ಮದ ಶ್ರೇಷ್ಠತೆಗೆ ಆ ಬೇಡಿಕೆಯು ನ್ಯೂನತೆಯನ್ನುಂಟು ಮಾಡುತ್ತದೆ. ಆ ರೀತಿ ಬೇಡದಿದ್ದರೆ ಮೊದಲು ಹೇಳಿದ ಆ ಹಿರಿಮೆಗೆ (ಬೇರೆಯವರ ಸಹಾಯದ ಅಗತ್ಯವಿಲ್ಲದವನಿಗೆ) ಯಾವ ಕೊರತೆಯನ್ನೂ ಹೇಳಲು ಅವಕಾಶವಿಲ್ಲ.

ಹೀಗೆ ಚೇತನನ ಪ್ರಾರ್ಥನೆಯನ್ನು ಅಪೇಕ್ಷಿಸಿ ಭಗವಂತನು ಇವನ ಕೆಲಸವನ್ನು ಮಾಡುತ್ತಾನೆ ಎಂಬ ಸತ್ಯವನ್ನು ತಿಳಿದೆವು. ಇನ್ನು ಈ ಮಾತುಗಳಲ್ಲಿ ಶರಣಾಗತಿಯ

ವಿಚಾರವಾಗಿ ಮತ್ತೊಂದು ಸತ್ಯವನ್ನು ನಾವು ಕಾಣೋಣ. ಆ ಮತ್ತೊಂದು ಸತ್ಯ ಯಾವುದು ಎಂದರೆ

ಭಗವಂತನು ಸರ್ವಶಕ್ತನು, ಚಿತ್ತು, ಅಚಿತ್ತು, ಸ್ವಂತವಸ್ತು ಎಂದು ಮೊದಲೇ ಹೇಳಿದ್ದೇವೆ. "ಸ್ವಂತವಸ್ತು ಉಳ್ಳವನು" ಸ್ವಂತವಸ್ತು ಉಳ್ಳವನು ಎಂಬ ಸತ್ಯವನ್ನು ಎರಡರಲ್ಲಿ ತನ್ನದಾಗಿರುವುದನ್ನು ನೋಡಿ ರಕ್ಷಿಸುವ ಜೋಕೆಗಾರಿಕೆ ಆವನಿಗೆ ಯಾವತ್ತಿಗೂ ಇದೆ. ಆ ಸ್ವಂತವಸ್ತು ತಿಳುವಳಿಕೆಯುಳ್ಳ ಜ್ಞಾನಿಯಾಗಿದ್ದರೆ, ಆ ಜೀವನ ಅಗಲಿಕೆಯನ್ನು ಕಂಡು ತಕ್ಷಣ ಬಂದು ರಕ್ಷಿಸುವವನು ಪರಮಾತ್ಮ. ಈ ಸತ್ಯವನ್ನು "ಜಗತ್ಪತಿ" ಎಂಬ ವಾಕ್ಯವನ್ನು ನೋಡಿದ್ದೇ ಆದರ ಚೆನ್ನಾಗಿ ತಿಳಿಯಬಹುದು. ಈ ನುಡಿ "ಪ್ರಪಂಚಕ್ಕೆ ಸ್ವಾಮಿ" ಎನ್ನುವ ವಸ್ತುವನ್ನು ತೋರಿಸಿ ನಿಲ್ಲುವುದರಿಂದ "ಈ ಪ್ರಪಂಚ ಸತ್ಯವಸ್ತು", "ಭಗವಂತನು ಒಡೆಯ" ಎಂಬುದು ಇಲ್ಲಿ ಸ್ಪಷ್ಟವಲ್ಲವೇ ? ರಾವಣನಿಂದ ಕಷ್ಟಕ್ಕೊಳಗಾದ ದೇವತೆಗಳೇ ಮೊದಲಾದವರಿಗುಂಟಾದ ಅಗಲಿಕೆಯನ್ನು ಕಂಡು ತಕ್ಷಣ ಭಗವಂತನು ದಯಮಾಡಿಸಿದನು, ಎಂಬುದನ್ನು ಇಲ್ಲಿ ಕಾಣಬಹುದಲ್ಲವೆ ?

ಮೇಲೆ ಹೇಳಿರುವ ಸತ್ಯವನ್ನು ನೋಡಿದ್ದೇ ಆದರೆ ಈ ಚೇತನನು ಭಗವಂತನೆಂಬ ಧರ್ಮದಿಂದ ತನ್ನ ಸ್ಥಿತಿಗನುಸಾರವಾಗಿ ಸುಖವನ್ನು ಪಡೆಯುವಾಗ ಚೇತನನಾಗಿರುವ ಈ ವಸ್ತುವು ಭಗವಂತನೊಬ್ಬನಿಂದಲೇ ರಕ್ಷಿಸಲು ತಕ್ಕದ್ದಾಗಿದೆ. ಭಗವಂತನು ಇಂತು ರಕ್ಷಿಸುವಾಗ ಅವನು ಮಾಡುವ ರಕ್ಷಣೆಯನ್ನು ಬೇಡವೆನ್ನದೆ ಇರುವುದು ಇವನಿಗೆ ಸ್ವಭಾವ ಸಿದ್ಧವಲ್ಲ ಎನ್ನುವ ಸಾರಾಂಶ ಸುಸ್ಪಷ್ಟ.

ಇನ್ನು ಈ ರಾಮಾಯಣದಲ್ಲಿಯೇ ಈ ಚೇತನನು ಭಗವಂತನನ್ನು ಶರಣು ಹೊಂದಬೇಕಾದರೆ ಸಾಕ್ಷಾತ್ ಲಕ್ಷ್ಮೀದೇವಿಯನ್ನು ಮುಂದಿಟ್ಟುಕೊಂಡು ಹೋಗುವುದು ಉತ್ತಮವಾಗಿರುತ್ತದೆ ಎನ್ನುವ ಸಾರತತ್ವವನ್ನು ಇನ್ನು ನಾವು ನೋಡುತ್ತೇವೆ. ಈ ವಿಚಾರವನ್ನು ರಾಮಾಯಣವು ಅನೇಕ ರೀತಿಯಲ್ಲಿ ತಿಳಿಸಿರುತ್ತದೆ.

ಭಗವಂತನೂ, ಲಕ್ಷ್ಮೀದೇವಿಯೂ, ಈ ಚೇತನನನ್ನು ರಕ್ಷಿಸುವವರು. ಭಗವಂತನು ಚೇತನನ ದೋಷ ಕಳೆದು ಸುಖವನ್ನು ಅನುಭವಿಸಲು ಕಾರಣ.

ಪುರುಷಕಾರ ಭೂತೆಯಾದ ಲಕ್ಷ್ಮೀದೇವಿಯೋ, ಈ ಚೇತನನು ಭಗವಂತನನ್ನು ಆಶ್ರಯಿಸುವಾಗಲೇ ಪುರುಷಕಾರವಾಗಿದ್ದು ಸಹಾಯವನ್ನು ಮಾಡುವಳು.

ಪುರುಷಕಾರವಾಗಿದ್ದು ಸಹಾಯ ಮಾಡುವುದು ಯಾವುದು :—ಈ ಚೇತನನು ಪರಮಾತ್ಮನನ್ನು ಆಶ್ರಯಿಸುವ ಸಮಯದಲ್ಲಿ ತಿಳಿದೋ, ತಿಳುವಳಿಕೆ ಇಲ್ಲದೆಯೋ ಅಸಂಖ್ಯಾತ ಪಾಪಗಳನ್ನು ಮಾಡಿರುವುದರಿಂದ "ಇವನು ತನ್ನ ಮುಂದೆಯೇ ನಿಲ್ಲುವಾಗ ಅತ್ಯಧಿಕ ಜ್ಞಾನಿಯಾದ ತನಗೆ ಇವನ ಪಾಪಗಳೆಲ್ಲಾ ಜ್ಞಾಪಕಕ್ಕೆ ಬರುವುದರಿಂದಲೂ ಅಂತಹ ಪಾಪಗಳಿಗೆ ತಕ್ಕ ಫಲವನ್ನು ಕೊಟ್ಟು ಸನ್ಮಾರ್ಗದಲ್ಲಿ ತಾನು ನಡೆಸುವವನಾಗಿರುವುದರಿಂದ ಕ್ರೋಧಿತನಾಗಿ ಈ ಚೇತನನನ್ನು ಕಣ್ಣೆತ್ತಿಯೂ ನೋಡುವುದಿಲ್ಲ. ಆ ರೀತಿ ಇರುವಲ್ಲಿ ಆ ಪರಮಾತ್ಮನಿಗೆ ಅವನಿಗೂ (ಪರಮಾತ್ಮನಿಗೂ) ಇವನಿಗೂ

(ಚೇತನನಿಗೂ) ಇರುವ ಸಂಬಂಧವನ್ನು ಇವನ ಸ್ಥಿತಿಯನ್ನು ತಿಳಿಸಿ, ಕರುಣೆಯನ್ನು ಇವನ ಪಾಪವನ್ನು ಸಹಿಸುವ ಶಕ್ತಿಯನ್ನುಂಟುಮಾಡಿ ಇವನನ್ನು ರಕ್ಷಿಸುವ ಹಾಗೆ ಮಾಡಿ ಆ ಪರಮಾತ್ಮನು ಇವನನ್ನು ಪುನಃ ಸ್ವೀಕರಿಸುವಂತೆ ಲಕ್ಷ್ಮೀದೇವಿಯು ಸಹಾಯ ಮಾಡುತ್ತಾಳೆ. ಈ ರೀತಿ ಸಹಾಯ ಮಾಡುವುದೇ ಪುರುಷಕಾರ.

ಶರಣಾಗತಿ ಧರ್ಮವಾದ ಈ ಸತ್ಯವನ್ನು ರಾಮಾಯಣದ ನಿರ್ಣಯವಾದ ವಸ್ತುವನ್ನಾಗಿ ಕೆಳಕಂಡಂತೆ ಪೆರಿಯವಾಚ್ಚಾನ್ ಪಿಳ್ಳೈ ಹೇಳಿರುತ್ತಾರೆ :–

ಅವಳು ಪುರುಷಕಾರವಾಗಿ ಅವನನ್ನು ಅನುಸರಿಸುವುದೇ ಫಲಪ್ರಾಪ್ತವಾಗಿದೆ, ಇದೇ ಕಾಕಾಸುರ ವಿಭೀಷಣಾದಿಗಳ ಹತ್ತಿರ ಕಾಣಬಹುದು. ಅವಳನ್ನು ಅನಾದರಿಸಿ ಇವನನ್ನು ಪಡೆಯ ಬೇಕೆಂದು ಶೂರ್ಪಣಖಿಯು ಅನರ್ಥವನ್ನು ಅನುಭವಿಸಿದಳು. ಭಗವಂತನಿಲ್ಲದೆ ಲಕ್ಷ್ಮೀದೇವಿಯನ್ನು ಪಡೆಯಬೇಕೆಂಬ ರಾವಣನು ಅನರ್ಥಕ್ಕೊಳಗಾದನು. ಇಬ್ಬರನ್ನೂ ಹೊಂದಿದರೆ ಶ್ರೀ ವಿಭೀಷಣನ ಹಾಗೆ ಬಾಳಬಹುದು.

ಇದರ ಅರ್ಥವನ್ನು ತಿಳಿಸುತ್ತೇವೆ :–

ಮೊದಲಿನಲ್ಲಿ ಕಾಕಾಸುರನ ವಿಚಾರವನ್ನು ನೋಡೋಣ. ಚಿತ್ರಕೂಟದಲ್ಲಿ ಶ್ರೀ ರಾಮಚಂದ್ರನು ಸೀತಾದೇವಿಯ ಮಡಿಲಿನಲ್ಲಿ ನಿದ್ರಿಸುವ ಸಮಯ. ಆ ಕಾಲದಲ್ಲಿ ಇಂದ್ರನ ಪುತ್ರನೂ ದುರ್ಬುದ್ಧಿಯಿಂದ, ಕಾಕರೂಪವನ್ನು ಧರಿಸಿರುವವನೂ ಆದ ಕಾಕಾಸುರನು ಸೀತಾದೇವಿಯ ಹತ್ತಿರ ಬಂದು ಎದೆಯಲ್ಲಿ ಹುಣ್ಣನ್ನು ಮಾಡಿದನು. ಆ ದೇವಿಯು ದುಃಖವನ್ನು ತಡೆಯಲಾರದೆ ತನ್ನ ಮಡಿಲಲ್ಲಿ ನಿದ್ರಿಸುವ ಭಗವಂತನನ್ನು ಎಬ್ಬಿಸಿದಳು. ಎದ್ದು ನೋಡಿದ ಭಗವಂತನು ಆ ಕಾಕಾಸುರನ ಪಾಪಕಾರ್ಯವನ್ನು ಕಣ್ಣಾರೆ ಕಂಡು, ಬ್ರಹ್ಮಾಸ್ತ್ರವನ್ನು ಆ ಕಾಗೆಯ ಮೇಲೆ ಪ್ರಯೋಗಿಸಿದನು. ಅದು ಕೂಡ ಆ ಅಸ್ತ್ರದಿಂದ ಅಟ್ಟಿಸಲ್ಪಟ್ಟದ್ದಾಗಿ, ಒಂದೊಂದು ಸ್ಥಳದಲ್ಲಿಯೂ ಅನೇಕ ಬಾರಿ ಹೋಗಿಯೂ, ರಕ್ಷಣೆಯು ದೊರೆಯದೆ, ದಿಕ್ಕೆಟ್ಟು ಕೊನೆಗೆ ಆ ಭಗವಂತನಿದ್ದ ಸ್ಥಳಕ್ಕೇ ಬಂದು ಕೆಳಗೆ ಬಿದ್ದಿತು. ಭೂಮಿಯಲ್ಲಿ ತಲೆಯೂ, ಮಡಿಲಲ್ಲಿ ಕಾಲುಗಳೂ ಆಗಿ ಬಿದ್ದಿತು. ಆ ಕಾಗೆಯ ಸ್ಥಿತಿಯನ್ನು ನೋಡಿ ಸೀತಾದೇವಿಯು ಆ ಕಾಗೆಯನ್ನು ರಕ್ಷಿಸುವಂತೆ, ಪರಮಾತ್ಮನನ್ನು ಬೇಡಿಕೊಂಡಳು. ಆ ಪರಮಾತ್ಮನೂ ಅಸ್ತ್ರವು ಫಲವಿಲ್ಲದ್ದಾಗಿ ಆಗದೆ ಇರುವುದಕ್ಕಾಗಿ ಅದರಿಂದ ಆ ಕಾಗೆಯ ಕಣ್ಣನ್ನು ನಾಶಮಾಡಿ ಅವನಿಗೆ ಜೀವದಾನ ಮಾಡಿ ಅವನ್ನು ರಕ್ಷಿಸಿದನು. ಎನ್ನುವುದೇ ಕಾಕಾಸುರನ ಚರಿತ್ರೆ.

ಈ ವಿಚಾರ :–ಸ ಪಿತ್ರಾ ಚ ಪರಿತ್ಯಕ್ತಃ ಸುರೈಶ್ಚ ಸಮಹರ್ಷಿಭಿಃ ।
ತ್ರೀನ್ ಲೋಕಾನ್ ಸಂ ಪರಿಕ್ರಮ್ಯ ತಮೇವ ಶರಣಂ ಗತಃ ॥

ಎನ್ನುವ ರಾಮಾಯಣದ ಸುಂದರ ಕಾಂಡದಲ್ಲಿ ಇರುವ ವಾರ್ತೆಗಳು.

ಸೀತಾದೇವಿಯ ಹತ್ತಿರ ರಾವಣನೂ, ಕಾಕಾಸುರನೂ ಸಹಿಸಲಾಗದ ದುಃಖವನ್ನುಂಟು ಮಾಡಿದರು. ಆದರೂ ರಾವಣನಿಗಿಂತಲೂ, ಕಾಕಾಸುರನಿಗೆ ಪಾಪ ಅಧಿಕ. ಹೇಗೆ ಎಂದರೆ, ರಾವಣನು ಆ ದೇವಿಯನ್ನು ಎತ್ತಿಕೊಂಡು ಅಶೋಕವನದಲ್ಲಿ ಸೆರೆಯ

ಲ್ಲಿಟ್ಟು ತಾನೂ ಮತ್ತು ಏಕಾಕ್ಷಿ ಮೊದಲಾದ ರಾಕ್ಷಸಿಯರೂ ಅನೇಕ ಸಾರಿ ಹೇಳಬಾರದ ಮಾತುಗಳನ್ನು ಹೇಳಿ ತೊಂದರೆ ಕೊಟ್ಟದ್ದು ನಿಜವೇ ಆದರೂ ಕಾಕಾಸುರನ ಹಾಗೆ ಆ ದೇವಿಗೆ ಹುಣ್ಣನ್ನು ಮಾಡಲಿಲ್ಲ. ಆದ್ದರಿಂದ ಕಾಕಾಸುರನ ಪಾಪ ಅಧಿಕ.

ಈ ಕಾಕಾಸುರನು ಬ್ರಹ್ಮಾಸ್ತ್ರದಿಂದ ಹೊಡೆಲ್ಪಟ್ಟು ಎಲ್ಲಿಯೂ ಆಶ್ರಯ ಸಿಕ್ಕದೆ ಏನೂ ದಿಕ್ಕುತೋರದೆ ಪರಮಾತ್ಮನ ಎದುರಿಗೆ ಬಿದ್ದಹಾಗೆ, ರಾವಣನೂ, ಶ್ರೀ ರಾಮನೊಂದಿಗೆ ಯುದ್ಧ ಮಾಡುವಾಗ ಆ ಭಗವಂತನ ಬಾಣಗಳಿಂದ ಪೆಟ್ಟನ್ನು ತಿಂದು ಕೈಯಲ್ಲಿರುವ ಬಾಣಗಳು ಬಿದ್ದು ರಕ್ತದಿಂದ ತೊಯ್ದು ತನಗೆ ತಕ್ಕ ಸ್ಥಳವನ್ನು ಬಿಟ್ಟು ಬಿದ್ದಿದ್ದನೆಂದು ವಾಲ್ಮೀಕಿ ಮುನಿಯು ಅವನ ವಿಷಯವಾಗಿ ತಿಳಿಸಿರುತ್ತಾರೆ. "ಈ ರೀತಿ ದಿಕ್ಕುಗೆಟ್ಟು ಬಿದ್ದಿದ್ದನು" ಎಂಬುದು ಕಾಕಾಸುರ ಮತ್ತು ರಾವಣ ಇಬ್ಬರಿಗೂ ಒಂದೇ ಆಗಿದ್ದರೂ ರಾವಣನಿಗಿಂತಲೂ ಕಾಕಾಸುರನು ಅಧಿಕ ಪಾಪಿಷ್ಠನಾಗಿರುವುದು.

ರಾವಣನು ಲಂಕಾಪಟ್ಟಣದೊಂದಿಗೆ ನಾಶವಾದರೂ, ಕಾಕಾಸುರನು (ಕಣ್ಣನ್ನು ಮಾತ್ರ ಕಳೆದುಕೊಂಡದ್ದು) ಪ್ರಾಣವನ್ನು ಕಳೆದುಕೊಳ್ಳದೆ ಇದ್ದದ್ದಕ್ಕೆ ಕಾರಣ ಯಾವುದು ಎಂದರೆ ಕಾಕನಿಗೆ ಸೀತಾದೇವಿಯು ಎದುರಿಗೆ ಆ ದೇವಿಯ ಕರುಣೆಗೆ ಪಾತ್ರನಾದನು. ಆದ್ದರಿಂದ ಜೀವದಾನವನ್ನು ಪಡೆದನು. ರಾವಣನಿಗೋ ಆ ದೇವಿಯು ಎದುರಿನಲ್ಲಿ ಅಪರಾಧಮಾಡುವ ಕರುಣೆಯನ್ನು ತೋರಲಾಗಲಿಲ್ಲ; ಆದರಿಂದ ಮಡಿದನು. ಈ ಸತ್ಯದ ಜೊತೆಗೆ ರಾವಣನ ವಿಚಾರವನ್ನು ಕಾಕಾಸುರನ ಚರಿತ್ರೆಯನ್ನು ಸೇರಿಸಿ ನೋಡಿದ್ದೇ ಆದರೆ ಚೆನ್ನಾಗಿ ತಿಳಿಯುತ್ತದೆ.

ಇಲ್ಲಿ ಇವಳ ಸಾನಿಧ್ಯದಲ್ಲಿ ಕಾಕಾಸುರನು ರಕ್ಷಣೆಯನ್ನು ಪಡೆದನು. ಅದಿಲ್ಲದೆ ಇರುವುದರಿಂದ ರಾವಣನು ಮಡಿದನು ಎನ್ನುವ ಶ್ರೀ ಲೋಕಾಚಾರ್ಯರ ಮಾತುಗಳೂ, "ಇವಳ ಸಾನಿಧ್ಯದಲ್ಲಿ ಅಪರಾಧವನ್ನು ಹೊರಗೊಳಿಸುವ ಪ್ರಯತ್ನಮಾಡಿ ಬ್ರಹ್ಮಾಸ್ತ್ರಕ್ಕೆ ಒಳಪಟ್ಟು ತಲೆಯನ್ನು ಕಳೆದುಕೊಳ್ಳಬೇಕಾಗಿದ್ದ ಕಾಕನು ತನ್ನನ್ನು ಉಳಿಸಿಕೊಂಡನು. ಹಾಗಿರುವ ಇವಳ ಸಾನಿಧ್ಯವು ಇಲ್ಲದೇ ಇರುವುದರಿಂದ "ಪ್ರೋಕ್ಷಿಪ್ತ", ದಿಕ್ಕುಗೆಟ್ಟು ನಿರ್ಜೀವನಾಗಿ ಬಿದ್ದಿರುವ ಸ್ಥಿತಿಯನ್ನು ಯೋಚಿಸಿದ್ದೇ ಆದರೆ ಕಾಕಾಸುರನ ಅಪರಾಧಕ್ಕಿಂತ ರಾವಣನ ಅಪರಾಧವು ಮಿಗಿಲಾದ್ದರಿಂದ ರಾಮಬಾಣಕ್ಕೆ ಸಿಕ್ಕಿ ಸತ್ತು ಹೋದನೆಂಬುದನ್ನು ಮಣವಾಳ ಮಾಮುನಿಗಳ ಮಾತಿನಿಂದಲೇ ತಿಳಿಯಬೇಕಾದದ್ದು.

ಈವರೆವಿಗೂ ಹೇಳಿದ ಕಾಕಾಸುರನ ಚರಿತ್ರೆಯಿಂದ "ಅತ್ಯಧಿಕ ಪಾಪಿಷ್ಠನೂ ದೇವಿಯನ್ನು ಮುಂದಿಟ್ಟುಕೊಂಡಿದ್ದರಿಂದ ಭಗವಂತನ ಕೃಪೆಗೆ ಪಾತ್ರನಾಗಿ ಸುಖವನ್ನು ಬಾಳನ್ನು ಪಡೆದನು ಎನ್ನುವ ಸತ್ಯಾರ್ಥವು ಚೆನ್ನಾಗಿ ತಿಳಿಯುತ್ತದೆ.

ಅನಂತರವೂ ರಾವಣನೂ, ಶೂರ್ಪಣಖಿಯೂ, ವಿಭೀಷಣನೂ ಒಂದೇ ಮನೆಯಲ್ಲಿ ಹುಟ್ಟಿದವರು. ರಾವಣನು ಭಗವಂತನನ್ನು ಸಂಪೂರ್ಣವಾಗಿ ತೊರೆದು ಸೀತಾದೇವಿಯನ್ನು ಮಾತ್ರ ನ್ಯಾಯಕ್ಕೆ ವಿರೋಧವಾಗಿ ಅಪೇಕ್ಷಿಸಿದನು. ಶೂರ್ಪಣಖಿ ಯಾವರೋ ದೇವಿಯನ್ನು ಬಿಟ್ಟು ಶ್ರೀ ರಾಮನನ್ನು ಮಾತ್ರ ನ್ಯಾಯ ವಿರುದ್ಧವಾಗಿ

ಇಷ್ಟಪಟ್ಟಳು " ದೇವಿಯನ್ನು ಬಿಟ್ಟು ಎನ್ನುವುದು ಮಾತ್ರವಲ್ಲ. ಅವಳನ್ನು ತನಗೆ ಅಡ್ಡಿ ಎಂದು ಹೇಳಿ ಅವಳನ್ನು ನಾಶಮಾಡಲು ಪ್ರಯತ್ನಿಸಿದಳು. ಇವರಿಬ್ಬರೂ ಸ್ವಲ್ಪ ಮಾತ್ರವೂ ಸುಖವನ್ನು ಪಡೆಯಲಿಲ್ಲ. ವಿಭೀಷಣನು ರಾವಣ, ಶೂರ್ಪಣಖಿಯ ರೊಂದಿಗೆ ಜನ್ಮ ಪಡೆದಿದ್ದರೂ, ಇವರಿಬ್ಬರ ಹಾಗೆ ರೀತಿಗೆ ವಿರುದ್ಧವಾಗಿ ಇಬ್ಬರನ್ನೂ ಬಿಟ್ಟು ಮತ್ತೊಬ್ಬರನ್ನು ಮಾತ್ರ ಅಪೇಕ್ಷಿಸದೆ, ಭಗವಂತನನ್ನೂ ಮತ್ತು ದೇವಿಯನ್ನು ಇಬ್ಬರನ್ನೂ ನ್ಯಾಯರೀತಿಯಿಂದ ಅಪೇಕ್ಷಿಸಿ, ಇನ್ನೂ ಬಾಳುತ್ತಿದ್ದಾನಲ್ಲವೆ ? ಈಗಲೂ ಶ್ರೀರಂಗದಲ್ಲಿ ವಿಭೀಷಣನನ್ನು ರಕ್ಷಿಸುತ್ತಿದ್ದಾನಲ್ಲವೇ ? ಈ ಸ್ಥಳದಲ್ಲಿ " ತೆನ್ದಿಶೈ ಇಲಂಗೈ ನೋಕ್ಕಿ " ತನ್ನ ಕೊರತೆಯನ್ನು ನೀಗುವುದಾಗಿದೆ. ತಾಯಿಯು ಪ್ರಜೆಗಳಿಗೆ ಸ್ತನ್ಯಪಾನ ಮಾಡಿಸಿ, ಅವರ ಸಂತೋಷವನ್ನು ಕಾಣಲು ಸಹಾಯವಾಗುವ ಹಾಗೆ ಎನ್ನುವ ಪೆರಿಯವಾಚ್ಚಾನ್ ರವರ ನುಡಿಯನ್ನು ಕಾಣತಕ್ಕದ್ದು.

ಮೇಲೆ ಹೇಳಿರುವ ಎರಡು ವಿಷಯಗಳಲ್ಲಿಯೂ ವಿಭೀಷಣನು ಇನ್ನೂ ಭಗವಂತನ ಕೃಪೆಗೆ ಪಾತ್ರನಾಗಿ ಬಾಳುತ್ತಿದ್ದಾನೆ ಎನ್ನುವುದು ತಿಳಿಯುತ್ತದೆ.

ಇದುವರೆವಿಗೂ ಹೇಳಿದ್ದರಿಂದ ಈ ಚೇತನನು ಭಗವಂತನನ್ನು ಪಡೆಯುವಾಗ ಲಕ್ಷ್ಮೀದೇವಿಯನ್ನು ಮುಂದಿಟ್ಟುಕೊಂಡು ಹೋದರೆ ಉತ್ತಮವಾಗುವುದು ಎಂಬುದನ್ನು ಒಂದು ರೀತಿಯಲ್ಲಿ ಕಂಡೆವು.

ಇನ್ನು ಈ ಚೇತನನು ಭಗವಂತನನ್ನು ಉಪಾಯ ಭೂತನನ್ನಾಗಿ ಪಡೆಯುವಾಗ ಇವನು " ಪತ್ತುಂ ಅಪ್ಪತ್ತುದಲ್ " ಮುಡಂಬ ಉಪಾಯ ಪ್ರಯತ್ನ ಆ ಭಗವಂತನ ಮನಸ್ಸನ್ನು ಅನುಸರಿಸಿ ಇರಬೇಕು ಎನ್ನುವುದು ಶರಣಾಗತಿಯನ್ನು ಕುರಿತಾದ ಒಂದು ಸತ್ಯವಾಗಿದೆ. ಈ ನಿಜಸ್ಥಿತಿಯನ್ನು ಭರತನ ಚರಿತ್ರೆಯಲ್ಲಿ ನಾವು ತಿಳಿಯಬಹುದು.

" ಗೂನಿಯ ಮಾತಿನಿಂದ ಕೆರಳಿದ ಕೈಕೇಯಿ ಭರತನಿಗೆ ರಾಜ್ಯಾಭಿಷೇಕವನ್ನೂ, ಶ್ರೀ ರಾಮಚಂದ್ರನಿಗೆ ವನವಾಸವನ್ನೂ ಕೇಳಿದಳು. ಶ್ರೀ ರಾಮನು ವನಕ್ಕೆ ಹೋಗಲು, ಅದರಿಂದ ಚಕ್ರವರ್ತಿ ಮಡಿಯಲು, ಕೇಕಯದೇಶದಿಂದ ಅಯೋಧ್ಯೆಗೆ ಹಿಂತಿರುಗಿದ ಭರತನು ಈ ಸಮಾಚಾರಗಳನ್ನು ತಿಳಿದು, ಚಕ್ರವರ್ತಿಗೆ ಮಾಡಬೇಕಾದ ಕ್ರಿಯಾಕರ್ಮಗಳನ್ನು ಸಂಪೂರ್ಣವಾಗಿ ನೆರವೇರಿಸಿ ಚಿತ್ರಕೂಟಕ್ಕೆ ಹೋಗಿ, ಶ್ರೀರಾಮಚಂದ್ರನ ಚರಣಾರವಿಂದಗಳನ್ನು ಉಪಾಯವಾಗಿ ಪಡೆದು ಈಗಲೇ ಅಯೋಧ್ಯಾ ನಗರಿಗೆ ದಯಮಾಡಿಸಿ ರಾಜ್ಯಾಭಿಷೇಕವನ್ನು ಮಾಡಿಕೊಳ್ಳಬೇಕು " ಎಂದು ಆರ್ತನಾಗಿ ಬೇಡುವ ಸ್ಥಳವೂ, ಆ ಪರಮಾತ್ಮನು ಆ ಮಾತುಗಳಿಗೊಪ್ಪದೆ ಇರಲು ಆ ಸಮಯದಲ್ಲಿ ಅವನ ಪಾದರಕ್ಷೆಯನ್ನು ಪುರುಷಾರ್ಥವಾಗಿ ಪಡೆದು ಪುನಃ ನಂದಿಗ್ರಾಮಕ್ಕೆ ಬಂದು ಆ ಪಾದರಕ್ಷೆಗಳಿಗೆ ಅಭಿಷೇಕವನ್ನು ಮಾಡಿ, ಅವುಗಳಿಗೆ ಪರತಂತ್ರನಾಗಿ ಹದಿನಾಲ್ಕುವರ್ಷ ಪರಮ ಪುರುಷನಾದ ಶ್ರೀ ರಾಮನ ಆಗಮನವನ್ನು ನಿರೀಕ್ಷಿಸುತ್ತಾ ಕಾಲವನ್ನು ಕಳೆಯುತ್ತಿದ್ದನು ಎನ್ನುವುದೇ ಆ ಭರತನ ಚರಿತ್ರೆ.

ಈ ವಿಷಯವನ್ನು ನೋಡುವಲ್ಲಿ "ಶ್ರೀ ರಾಮನು ಅಯೋಧ್ಯಾನಗರಿಗೆ ಹಿಂತಿರುಗಿ ರಾಜ್ಯಾಭಿಷೇಕವನ್ನು ಮಾಡಿಕೊಳ್ಳುವಲ್ಲಿ ಫಲ ಎಂಬುದು. "ಆ ಫಲಕ್ಕೆ ಅವನ ಪಾದ ಪದ್ಮಗಳೇ ಉಪಾಯ" ಎನ್ನುವುದು ಭರತನ ಅಭಿಪ್ರಾಯದಲ್ಲಿದೆ ಎನ್ನುವುದೂ ಚೆನ್ನಾಗಿ ತಿಳಿಯುತ್ತದೆ.

ಇಲ್ಲಿ ವಾಲ್ಮೀಕಿ ಮುನಿಯು ಈ ಚರಿತ್ರೆಯನ್ನು ಹೇಳುವಾಗ "ಅಭಿಷಿಂಚಸ್ವ ಚಾದ್ಯೈವ" ಎಂದೂ "ಏವಮುಕ್ತ್ವಾ ಮಹಾಬಾಹುಃ ಸಬಾಷ್ಪಃ ಕೈಕೇಯೀಸುತಃ । ರಾಮಸ್ಯ ಶಿರಸಾ ಪಾದೌ ಜಗ್ರಾಹ ವಿಧಿವತ್ಪುನಃ ॥" ಎಂದು ಹೇಳಿರುವುದನ್ನು ಎಣಿಸತಕ್ಕದ್ದು.

ಮೇಲೆ ಹೇಳಿರುವ ಮಾತುಗಳಲ್ಲಿ "ಅದ್ಯೈವ ಅಭಿಷಿಂಚಸ್ವ" ಎನ್ನುವ ಪದಗಳಲ್ಲಿ "ಭರತನು ಇಷ್ಟಪಡುವ ಸಮಯದಲ್ಲಿಯೇ ರಾಜ್ಯಾಭಿಷೇಕವನ್ನು ಮಾಡಿಕೊಳ್ಳುವುದು. ಆ ಭರತನು ಅಪೇಕ್ಷಿಸಿದ ಫಲ ಎನ್ನುವುದು 'ಸಬಾಷ್ಪಃ' ಎನ್ನುವುದರಲ್ಲಿ ಭರತನಿಗೆ ಆರ್ತಿಯುಳ್ಳವನು" ಎನ್ನುವುದೂ, "ರಾಮಸ್ಯ ಪಾದೌ ಶಿರಸಾ ಜಗ್ರಾಹ" ಎನ್ನುವ ವಾಕ್ಯದಲ್ಲಿ ಭರತನು ಶ್ರೀ ರಾಮಚಂದ್ರನ ಚರಣಾರವಿಂದಗಳನ್ನೇ ಉಪಾಯವಾಗಿ ಪಡೆದವನೆಂಬುದೂ "ವಿಧಿವತ್" ಎನ್ನುವುದರಲ್ಲಿ ಭರತನು ಆ ರೀತಿಗನುಸಾರವಾಗಿ ಪಡೆದವನು ಎಂಬುದು ಚೆನ್ನಾಗಿ ತಿಳಿಯುತ್ತದೆ.

ಈ ಅರ್ಥವನ್ನು ಮನಸಾರೆ ನೋಡುವವರಿಗೆ ಭರತನು ಆರ್ತನಾಗಿ ರೀತಿಯನ್ನನುಸರಿಸಿ ಚರಣವನ್ನು ಆಶ್ರಯಿಸಿದವನು ಎನ್ನುವುದು ಸ್ಪಷ್ಟ. ಆರ್ತಿಯಿಂದ ಶರಣಾಗತನಾದವನಿಗೆ ಆಗಲೇ ಫಲಪ್ರದ ಎಂಬ ಶಾಸ್ತ್ರವು ಹೇಳುತ್ತದೆ. ಆ ರೀತಿ ಭರತನು ಫಲವನ್ನು ಪಡೆದನೇ ? ಎಂದರೆ ಪಡೆಯಲಿಲ್ಲವೆಂದೇ ವಾಲ್ಮೀಕಿ ಮುನಿಯು ಹೇಳಿರುತ್ತಾರೆ.

"ಸ ಕಾಮಮನವಾಪ್ಯೈವ ರಾಮಪಾದಾವುಪಸ್ಪೃಶನ್ । ನಂದಿಗ್ರಾಮೇಽಕರೋದ್ರಾಜ್ಯಂ ರಾಮಾಗಮನ ಕಾಂಕ್ಷಯಾ" ಎನ್ನುವ ವಾಲ್ಮೀಕಿ ಮುನಿಯ ಮಾತುಗಳನ್ನು ಇಲ್ಲಿ ನೋಡತಕ್ಕದ್ದು.

ಈ ಮಾತುಗಳಲ್ಲಿ ಅಡಕವಾಗಿರುವ "ಸಕಾಮ ಮನವಾಪ್ಯೈವ" ಎನ್ನುವ ಪದಗಳಲ್ಲಿ ಭರತನು ಶ್ರೀ ರಾಮಚಂದ್ರನಲ್ಲಿ ತಾನು ಅಪೇಕ್ಷಿಸಿದ ಪುರುಷಾರ್ಥವನ್ನು ಪಡೆಯಲಿಲ್ಲ ಎಂಬುದು ಸುಸ್ಪಷ್ಟ.

ಇಲ್ಲಿ ಭರತನು ನಿಯಮಾನುಸಾರವಾಗಿ ಪ್ರಾರ್ಥಿಸಿದ್ದರೂ ಫಲವನ್ನು ಪಡೆಯದಿದ್ದುದಕ್ಕೆ ಕಾರಣ ಏನು ? ಎಂದರೆ ಇದಕ್ಕೆ ಪರಿಹಾರವಾಗಿ ಮೊದಲು ಕೆಲವರು ಹೇಳುವ ಹಾಗೆ ಕೆಲವು ತಾತ್ಪರ್ಯಗಳನ್ನು ಹೇಳುವೆನು.

(1) ಚಕ್ರವರ್ತಿಯು ಯಾಗ ಮಾಡುತ್ತಿದ್ದ ಸ್ಥಳಕ್ಕೆ ಭಗವಂತನು ದಯಮಾಡಿಸಿದಾಗ ದೇವಾದಿದೇವತೆಗಳು ಆ ಪರಮಾತ್ಮನು ಮನುಷ್ಯರೂಪದಲ್ಲಿ ಅವತಾರ ಮಾಡಿ ರಾವಣನನ್ನು ನಾಶಮಾಡಬೇಕೆಂದು ಪ್ರಾರ್ಥಿಸಿಕೊಂಡು ಅವನ ಶರಣಾಗತಿಯನ್ನು

ಮಾಡಿದ್ದು ಚರಿತ್ರಾರ್ಹವಾದ ಸಂಗತಿ. ಆ ಶರಣಾಗತಿ ಮೊದಲು ದೇವತೆಗಳಿಂದ ಮಾಡಲ್ಪಟ್ಟದ್ದು.

ಆ ದೇವತೆಗಳು ಪ್ರಾರ್ಥಿಸಿದ ಫಲವನ್ನು ಕೊಡಲು ಮನಸ್ಸಿನಲ್ಲಿ ಸಂಕಲ್ಪಿಸಿ, ವನವಾಸವೆಂಬ ವ್ಯಾಜ್ಯದಿಂದ ದಯಮಾಡಿಸಿರುವ ಸಮಯದಲ್ಲಿ ಭರತನು ಆರ್ತನಾಗಿ ಶರಣಾಗತನಾದ ವಿಚಾರವನ್ನು ನಾವು ತಿಳಿದಿರುತ್ತೇವೆ. ಇದರಿಂದ ಭರತನು ಮಾಡಿದ ಶರಣಾಗತಿ ಅನಂತರ ಮಾಡಿದ್ದು ಎನ್ನುವುದು ಸ್ಪಷ್ಟ. ಮೊದಲು ಮಾಡಿದ ದೇವತೆಗಳ ಶರಣಾಗತಿಗೆ ಮೊದಲು ಫಲವನ್ನು ನೀಡಿ, ಅನಂತರ ಮಾಡಿದ ಭರತನ ಶರಣಾಗತಿಗೆ ಫಲವನ್ನು ಕೊಡುವುದು ನ್ಯಾಯ ಎಂದು ಸಂಕಲ್ಪಿಸಿ ಭರತನ ಇಷ್ಟಕ್ಕಾಗಿ ಆಗಲೇ ಶ್ರೀ ರಾಮನು ಅಯೋಧ್ಯಾನಗರಿಗೆ ಹಿಂತಿರುಗಿ ರಾಜ್ಯಾಭಿಷೇಕವನ್ನು ಮಾಡಿಕೊಳ್ಳಲಿಲ್ಲ. ಇದು ಮೊದಲ ಪರಿಹಾರ.

(2) ಶ್ರೀ ರಾಮಚಂದ್ರನ ಮನಸ್ಸು ನೋಯುವ ಹಾಗೆ ಭರತನಿಗೆ ಕೆಲವು ಪಾಪಗಳು ಇರಬಹುದು. ನಿಷ್ಫಲವಾಗಿ ಪ್ರತ್ಯಕ್ಷವಾಗಿ ಕಾಣದಿರುವ ಹಾಗೆ ಕೆಲವು ಪಾಪಗಳಿರಬಹುದು ಎಂದು ಊಹಿಸಬಹುದಲ್ಲವೇ ? ಈ ರೀತಿ ಹೇಳುವುದು ಎರಡನೆಯ ಪರಿಹಾರ.

(3) ಈ ಶರಣಾಗತಿಗೆ ಕೆಲವು ಅಂಗಗಳು ಸಹಾಯ ಮಾಡುವಂತಹವೂ ಉಂಟು. ಹಿರಿಯರನ್ನು ಮುಂದಿಟ್ಟುಕೊಂಡು ಲಕ್ಷ್ಮೀದೇವಿಯನ್ನು ಪುರುಷಕಾರವಾಗಿ ಹೊಂದದೇ ಹೋದುದು. ಆ ಅಂಗಗಳೂ ಆದೇ ಭರತನು ಫಲವನ್ನು ಪಡೆಯದೆ ಇರುವುದಕ್ಕೆ ಕಾರಣ. ಆ ಅಂಗಗಳಲ್ಲಿ ಯಾವುದೋ ಒಂದೆರಡು ಕಡಮೆಯಿರಬಹುದು. ಇದು ಮೂರನೆಯ ಪರಿಹಾರ.

(4) ಶ್ರೀ ರಾಮನು ತಂದೆ, ತಾಯಿ ಇವರನ್ನು ಪೂಜಿಸಿದರೆ ಒಳ್ಳೆಯದಾಗುತ್ತದೆ ಎನ್ನುವ ನ್ಯಾಯವನ್ನು ತನ್ನ ನಡೆನಳಿಕೆಯಲ್ಲಿ ತೋರಿಸಿ ಸ್ಥಾಪಿಸಲು ಬಂದವನು ತನ್ನ ತಾಯಿ ಎಂಬುವ ಬಲತಾಯಿ ಎಂಬ ಭೇದವಿಲ್ಲದವನು. ಕೈಕೇಯಿ ಬಲತಾಯಿಯಾಗಿದ್ದರೂ ಆ ತಾಯಿಯ ಮಾತನ್ನು ಅನುಸರಿಸಿ ರಾಜ್ಯವನ್ನು ತೊರೆದ ಪರಮ ಪುರುಷನಲ್ಲವೇ ? ಆ ಭಗವಂತನು ಪೂಜಿಸಿದ ಕೈಕೇಯಿಯನ್ನು ಭರತನು ಅನೇಕ ರೀತಿಯಲ್ಲಿ ನಿಂದಿಸಿ ಮಾತನಾಡಿದ್ದು ಅವನ ಮನಸ್ಸನ್ನು ಬಹಳವಾಗಿ ವ್ಯಥೆಗೊಳಿಸಿತು. ಆದ್ದರಿಂದ ಭರತನ ಇಚ್ಛಾನುಸಾರವಾಗಿ ನಡೆಯಲಿಲ್ಲ " ಮಾತರಂ ರಕ್ಷ ಕೈಕೇಯೀಮ್ " ಎನ್ನುವ ಶ್ರೀ ರಾಮಚಂದ್ರನ ಮಾತುಗಳೂ " ಪೂಜಿತಾ ಮಾಮಿಕಾ ಮಾತಾ " ಎನ್ನುವ ಭರತನ ಮಾತುಗಳನ್ನು ಇಲ್ಲಿ ಕಾಣತಕ್ಕದ್ದು.

ಚಿತ್ರಕೂಟದಲ್ಲಿ ಪಾದರಕ್ಷೆಯನ್ನು ಅನುಗ್ರಹಿಸುವ ಸಮಯದಲ್ಲಿ ಶ್ರೀ ರಾಮಚಂದ್ರನು ಹೇಳಿದ್ದ ಮೊದಲ ಮಾತು. ಹದಿನಾಲ್ಕು ವರ್ಷ ವನವಾಸ ಮಾಡಿ ನಂತರ ನಂದಿಗ್ರಾಮದಲ್ಲಿ ದಯಮಾಡಿಸಿರುವ ಶ್ರೀ ರಾಮನೊಂದಿಗೆ ಭರತನು ಹೇಳಿರುವ ವಾಕ್ಯಗಳು :—

“ ಪ್ರೋಷಿತಾ ಮಾಮಿಕಾ ಮಾತಾ ” ಎನ್ನುವುದು ನಾಲ್ಕನೆಯ ಪರಿಹಾರ.

(1) ದೇವತೆಗಳ ಶರಣಾಗತಿಯನ್ನು ತಿಳಿಸುವ ಸ್ಥಳದಲ್ಲಿ “ ರಾವಣನ ನಾಶ ವನ್ನು ಕುರಿತು ಶರಣಾಗತಿ ಮಾಡಿರುವುದಾಗಿ ಹೇಳಲ್ಪಟ್ಟಿದ್ದಲ್ಲದೆ, ಕಾಲವನ್ನು ಕುರಿತು ಹೇಳಿದ್ದಿಲ್ಲ.”

ಅದನ್ನು ನಾವು ತಿಳಿಯಬೇಕಾದುದು ಆವಶ್ಯಕ. ಆ ಸ್ಥಳದಲ್ಲಿರುವ ದೇವತೆಗಳ ಮಾತುಗಳು :—“ ವಿಷ್ಣೋ ಸಮರೇ ಜಹಿರಾವಣಂ ” ಎನ್ನುವುದು. ಭರತನು ಶರಣು ಹೋದಾಗ “ಅದ್ಯೈವ” (ಈಗಲೇ) ಎಂದು ಸಮಯವನ್ನು ಕುರಿತು ಹೇಳಿರುವುದು ಸುಸ್ಪಷ್ಟ. ಇದರಿಂದ ಏನು ತಿಳಿದ ಹಾಗಾಯಿತು ಎಂದರೆ—

ದೇವತೆಗಳೂ ಭರತನೂ ತಮತಮಗೆ ಸ್ವಂತವಾದ “ ರಾವಣನ ನಾಶ ” “ ಅಯೋಧ್ಯೆಗೆ ಹಿಂತಿರುಗಿ ರಾಜ್ಯಾಭಿಷೇಕವನ್ನು ಮಾಡಿಕೊಳ್ಳುವುದು ” ಎನ್ನುವ ಫಲ ವನ್ನು ಒಂದೇ ಸಮಯದಲ್ಲಿ ಕೇಳಿದ್ದರೆ ಪ್ರಯೋಜನ ಕುರಿತಾದ ವಿರೋಧವುಂಟಾಗು ತ್ತಿತ್ತು. ಆ ವಿರೋಧವು ತೀರುವ ಹಾಗೆ ಭಗವಂತನೂ” ಮೊದಲು ಮಾಡಿದ ದೇವತೆ ಗಳ ಶರಣಾಗತಿಗೆ ಮೊದಲೂ, ಅನಂತರ ಮಾಡಿದ ಭರತನ ಶರಣಾಗತಿಗೆ ನಂತರವೂ ಫಲವನ್ನು ಕೊಡುವುದು ಸರಿ ಎಂದು ಮನಸ್ಸಿನಲ್ಲಿ ಸಂಕಲ್ಪಿಸಿ ಭರತನಿಗೆ ಅದೇ ಸಮಯ ದಲ್ಲಿ ಸಹಾಯಮಾಡಲು ಒಪ್ಪಲಿಲ್ಲ ಎನ್ನಬಹುದು. ದೇವತೆಗಳೂ ಭರತನೂ ತಮ ತಮಗೆ ಬೇಕಾದ ಫಲವನ್ನು ಒಂದೇ ಸಮಯದಲ್ಲಿ ಪಡೆಯಬೇಕೆಂದು ಅಪೇಕ್ಷಿಸಿ ಪರಮಾತ್ಮನನ್ನು ಬೇಡಿಕೊಂಡದ್ದಾಗಿ ಹೇಳಿಲ್ಲ.

ಭರತನಾದರೋ ಕಾಲವನ್ನು ಸೂಚಿಸದೆ ತನಗೆ ಬೇಕಾದ ಫಲವನ್ನು ಶರಣಾಗತ ನಾಗಿ ಬೇಡಿಕೊಂಡಿರುವವನಾದ್ದರಿಂದ ಪರಮಾತ್ಮನು ಆ ಭರತನಿಗೆ ಆ ಕಾಲದಲ್ಲಿಯೇ ಅನುಗ್ರಹಿಸದಿದ್ದರೆ ಈ ವಿಮರ್ಶೆಗೆ ಅವಕಾಶವಿರುತ್ತಿರಲಿಲ್ಲ. ಆ ಭರತನೋ “ ಈಗಲೇ ರಾಜ್ಯಾಭಿಷೇಕವನ್ನು ಮಾಡಿಕೊಳ್ಳಬೇಕು ” ಎಂದು ಸಮಯವನ್ನು ತಿಳಿಸಿಯೇ ಶರಣವನ್ನು ಆಶ್ರಯಿಸಿರುವವನಲ್ಲವೇ ! ಆದ್ದರಿಂದ ಮೊದಲ ಪರಿಹಾರ ತೆಗೆದುಕೊಳ್ಳ ಬೇಕಾಗಿಲ್ಲ.

(2) ಭರತನ ಜನ್ಮದ ವಿಷಯವಾದ ನಿಜಸ್ಥಿತಿಯನ್ನು ತಿಳಿದರೆ ಶ್ರೀ ರಾಮನು ಹೇಗೆ ಪಾಪರಹಿತನಾಗಿರುವನೋ, ಹಾಗೆಯೇ ಆ ಭರತನೂ ಪಾಪವಿಲ್ಲದೆ ಇದ್ದುದ್ದರೆ, “ಆ ಭರತನಿಗೆ ಶ್ರೀ ರಾಮನ ಮನಸ್ಸು ನೋಯುವ ಹಾಗೆ ಕೆಲವು ಪಾಪಗಳು ಉಂಟು” ಎಂದು ಹೇಳಲು ಅವಕಾಶವಿಲ್ಲ. ಇದರಿಂದ ಎರಡನೆಯ ಪರಿಹಾರವೂ ಸರಿಹೋಗುವುದಿಲ್ಲವೆಂಬುದು ಸುಸ್ಪಷ್ಟ.

(3) “ ರಾಮಸ್ಯ ಶಿರಸಾ ಪಾದೌ ಜಗ್ರಾಹ ವಿಧಿವತ್ ಪುನಃ ” ಎನ್ನುವುದರ ಲ್ಲಿ ಇರುವ “ ವಿಧಿವತ್ ” ಎನ್ನುವ ಮಾತನ್ನು ನೋಡಿದರೆ ಭಗವಂತನನ್ನು ಉಪಾಯ ಭೂತನನ್ನಾಗಿ ಪಡೆಯುವಲ್ಲಿ ನೀತಿಗನುಸಾರವಾಗಿ ನಡೆದವನು ಭರತನೆಂದು ಚೆನ್ನಾಗಿ ತಿಳಿಯುವುದಿಲ್ಲವೇ ? ಆದ್ದರಿಂದ ಮೂರನೆಯ ಪರಿಹಾರಕ್ಕೆ ಅವಕಾಶವಿಲ್ಲ.

(4) ನಾಲ್ಕನೆಯ ಪರಿಹಾರ ರಾಮಾಯಣದಲ್ಲಿ ಒಂದು ರೀತಿಯಾಗಿ ಹೇಳಿದೆ ಎನ್ನುವುದು ನಿಜವೇ ಆದರೂ, ಅದನ್ನು ಪರಿಹಾರವಾಗಿ ತೆಗೆದುಕೊಳ್ಳಲು ಅವಕಾಶ ವಿಲ್ಲ. ಇದನ್ನು ಸ್ವಲ್ಪ ವಿವರಿಸಿ ಹೇಳುತ್ತೇನೆ.

ಶ್ರೀ ರಾಮನು ಪರಮಾತ್ಮನು, ಭರತನು ಜೀವನು, ಎನ್ನುವ ಅಭಿಪ್ರಾಯ ವನ್ನು ಮನಸ್ಸಿನಲ್ಲಿಟ್ಟುಕೊಂಡು ಕೆಳಕಂಡ ಸತ್ಯವನ್ನು ಕಾಣಬೇಕು. ಭಗವಂತನು ಎಲ್ಲಾ ಚೇತನರಿಗೂ ಯಾವತ್ತಿಗೂ ಪ್ರಿಯನಾದ ತಾಯಿ ಮತ್ತು ತಂದೆಯಾಗಿರುವನು. ಈ ರೀತಿ ತಾಯಿಯಾಗಿಯೂ, ತಂದೆಯಾಗಿಯೂ ಇರುವುದು ಕರ್ಮದಿಂದಲ್ಲ. ಪರಮಾತ್ಮನಿಗೂ, ಚೇತನನಿಗೂ ಇರುವ ನವವಿಧ ಸಂಬಂಧವಿದೆಯಲ್ಲವೇ ? ಈ ರೀತಿ ಯಾದ ಸಂಬಂಧ ಲಕ್ಷ್ಮಣನಿಗೂ ರಾಮನಿಗೂ ಹೇಗೆ ಯಾವತ್ತಿಗೂ ಇದೆಯೋ ಆ ರೀತಿಯೇ ಭರತನಿಗೂ, ಕೈಕೇಯಿಗೂ ಉಂಟೋ ? ಇಲ್ಲವಲ್ಲವೇ ? ಲಕ್ಷ್ಮಣನು (ರಾಜ್ಯಾಭಿಷೇಕಕ್ಕೆ ಇಟ್ಟ ಮುಹೂರ್ತದಲ್ಲಿ ಜಡೆಯನ್ನು ಧರಿಸಿ ಕಾಡಿಗೆ ಹೋಗುವಂತೆ ಮಾಡಿದ ಕೈಕೇಯಿಯ ಹಾಗೆ ವಿರೋಧವಾದ ಕೆಲಸವನ್ನು ಮಾಡದೆ ಇದ್ದರೂ) ದಶ ರಥನನ್ನೂ, ಸುಮಿತ್ರಾದೇವಿಯನ್ನೂ ಪ್ರಿಯ ಮಾತಾಪಿತೃಗಳೆಂದು ಪರಿಗಣಿಸದೆ ಶ್ರೀ ರಾಮಚಂದ್ರನನ್ನೇ ತಾಯಿ, ತಂದೆ, ಮತ್ತು ಇತರ ಎಲ್ಲಾ ಸಂಬಂಧವೆಂದು ತಿಳಿದು ಆ ರಾಮನನ್ನೇ ಹಿಂಬಾಲಿಸಿ ಅವನ ಮನಸ್ಸಂತೋಷ ಪಡುವ ಹಾಗೆ ಸೇವೆ ಮಾಡಲು ಹೋದನಲ್ಲವೇ ?

ಈ ರೀತಿ ಲಕ್ಷ್ಮಣನು ಹೋಗಲು ಕಾರಣ ಆ ಲಕ್ಷ್ಮಣನಿಗೆ ಶ್ರೀ ರಾಮಚಂದ್ರ ನಲ್ಲಿರುವ ಅತಿಶಯವಾದ ಭಕ್ತಿಯೇ ಕಾರಣ.

ಈ ಲಕ್ಷ್ಮಣನ ಹಾಗೆ ಭರತನೂ ಅತ್ಯಧಿಕ ರಾಮ ಭಕ್ತಿ ಪಡೆದವನಲ್ಲವೇ ? ಮೇಲೆ ಹೇಳಿದ ಹಾಗೆ ವಿರೋಧ ಭಾವನೆಯುಳ್ಳ ಆ ಕೈಕೇಯಿಯಲ್ಲಿ ಆ ಭರತನಿಗೆ ಮನಸ್ಸು ಇಷ್ಟಪಡುತ್ತದೆಯೇ ಅವನು ತನ್ನ ತಾಯಿಯನ್ನು ತೊರೆದದ್ದು ಶಾಸ್ತ್ರರೀತಿ ಯಿಂದ ನೋಡಿದರೆ ದೋಷವಾಗುತ್ತದೆಯೇ ?

ಪರಮಾತ್ಮನಲ್ಲಿ ವಿರೋಧವನ್ನು ಮಾಡಿದ ತಾಯಿಯನ್ನು ಬಿಟ್ಟು ಬಿಡುವುದು ಶಾಸ್ತ್ರದ ಸತ್ಯವಾದ ಮಾರ್ಗವಲ್ಲವೇ ?

ಈ ಸತ್ಯತೆಯನ್ನು ಕಾಣುವಲ್ಲಿ " ನಾಲ್ಕನೆಯ ಪರಿಹಾರ ಪರಿಹಾರವಾಗು ವುದಿಲ್ಲ " ಎನ್ನುವುದು ಸ್ಪಷ್ಟ.

ಆದರೆ ಶ್ರೀ ರಾಮನು " ಮಾತರಂ ರಕ್ಷ ಕೈಕೇಯೀಂ ಮಾರೋಷಂ ಕುರು ತಾಂ ಪ್ರತಿ " ಎಂದು ಹೇಳಿರುತ್ತಾನೆ. ಭರತನೂ ಹದಿನಾಲ್ಕು ವರ್ಷ ವನವಾಸ ಮಾಡಿ ಪುನಃ ನಂದಿಗ್ರಾಮಕ್ಕೆ ದಯಮಾಡಿಸಿರುವ ಶ್ರೀ ರಾಮನನ್ನು ಕುರಿತು " ಪೂಜಿತಾ ಮಾಮಿಕಾ ಮಾತಾ " ಎಂದು ಭಗವದಭಿಪ್ರಾಯವನ್ನು ಅನುಸರಿಸಿ ಮಾಡಿದ ತನ್ನ ಕಾರ್ಯವನ್ನು ಹೇಳಿರುತ್ತಾನೆ ಎಂದು " ಭಗವದಭಿಪ್ರಾಯವನ್ನು ಅನುಸರಿಸಿ " ಎಂದು ಕೆಲವರು ಪುನಃ ವಿರೋಧಿಸಿ ಹಠವಾಗಿ ಹೇಳಬಹುದು.

ಈ ಪರಿಹಾರವನ್ನು ಮುಖ್ಯವಾಗಿ ನಮ್ಮ ಆಚಾರ್ಯರುಗಳು ಮನಸ್ಸಿಗೆ ತೆಗೆದು ಕೊಳ್ಳಲಿಲ್ಲ. ಚೇತನನ ನಿಜಸ್ಥಿತಿಯನ್ನು ತಿಳಿದಲ್ಲಿ ಕೈಕೇಯಿಯನ್ನು ಭರತನು ವಿರೋಧಿಸಿದ್ದು ಮೇಲೆ ಹೇಳಿದ ಹಾಗೆ ದೋಷವುಂಟಾಗುತ್ತದೆಯೋ ?

ನಂತರವೂ ರಾಮಾಯಣದಲ್ಲಿ ಈ ಭಾಗದಲ್ಲಿಯೇ ಒಂದೆರಡು ಸತ್ಯತೆಯನ್ನು ಕಿಷ್ಕಿಂಧಾಕಾಂಡದಲ್ಲಿ ಒಂದು ಸತ್ಯವನ್ನು ಇಲ್ಲಿ ಎತ್ತಿ ತೋರಿಸುತ್ತೇನೆ.

(1) ತಂದೆ ಆಚಾರ್ಯ ಈ ಇಬ್ಬರಲ್ಲಿ ತಂದೆಯು ಶರೀರವನ್ನುಂಟುಮಾಡಿ ಆ ಶರೀರವನ್ನು ಬೆಳೆಸುವವನು, ಆಚಾರ್ಯನೋ ಎಂದರೆ ಜ್ಞಾನವನ್ನುಂಟು ಮಾಡಿ ಆತ್ಮವನ್ನು ಬೆಳೆಸುವನು. ಇಬ್ಬರೂ ಸಹಾಯಕರೇ ಆದರೂ ಜ್ಞಾನವೃದ್ಧಿಯನ್ನುಂಟು ಮಾಡುವ ಆಚಾರ್ಯನ ಹಿರಿಮೆಯೇ ಶ್ರೇಷ್ಠವಾದದ್ದು.

“ ಸಹಿ ವಿದ್ಯಾತಃ ತಂ ಜನಯತಿ ತಚ್ಛ್ರೇಷ್ಠಂ ಜನ್ಮಗರೀಯಾನ್ ಬ್ರಹ್ಮದಃ ಪಿತಾ ॥ ಎನ್ನುವ ವಾಕ್ಯವನ್ನು ಕಾಣತಕ್ಕದ್ದು. ಆದ್ದರಿಂದ ಆಚಾರ್ಯನ ಆಜ್ಞೆಯನ್ನು ಅನುಸರಿಸಿ ನಡೆಯುವುದು ಅತಿ ಮುಖ್ಯವಾಗಿದೆ.

ಈ ಸತ್ಯತೆಯನ್ನು ತಿಳಿಯಪಡಿಸಿ ವಸಿಷ್ಠರು “ ಹೇ ರಾಘವಾ ! ನಿನಗೂ ನಿನ್ನ ತಂದೆಯವರಿಗೂ ನಾನು ಆಚಾರ್ಯನು. ಆದ್ದರಿಂದ ನನ್ನ ಮಾತಿನಂತೆ ನೀನು ವನವಾಸವನ್ನು ಬಿಟ್ಟುಬಿಟ್ಟು ಈ ರಾಜ್ಯವನ್ನು ಪಡೆದು ರಾಜ್ಯಾಭಿಷೇಕವನ್ನು ಮಾಡಿಕೊಳ್ಳುವುದು ಉಚಿತ ಎಂದು ಹೇಳಿರುತ್ತಾರೆ.

ಅನಂತರವೂ ಸ್ವತಂತ್ರನಾದ ಪರಮಾತ್ಮನಿಗೆ ಆಶ್ರಿತ ಪಾರತಂತ್ರ್ಯವೂ ಉಂಟು. ಅದು ಅವನಿಗೆ ಆತ್ಮಧಿಕ ಮಹಿಮೆಯುಳ್ಳ ಹಿರಿಮೆ. ಆಶ್ರಿತ ಪಾರತಂತ್ರ್ಯ ಯಾವುದು ? ಪರಮಾತ್ಮನಾಗಿರುವ ತಾನು ತನ್ನನ್ನು ಪ್ರೇಮದಿಂದ ಆದರಿಸಿದವರಿಗೆ ಅವರನ್ನು ಹೊಂದಿ ಅವರ ಸೇವೆಯನ್ನು ಮಾಡುತ್ತಾನೆ. ಶ್ರೀ ಕೃಷ್ಣಪರಮಾತ್ಮನು ಪಂಚ ಪಾಂಡವರಿಗೆ ದೂತನಾಗಿಯೂ, ಸಾರಥಿಯಾಗಿಯೂ ಇದ್ದು ಕೀಳು ಮಟ್ಟದ ಕೆಲಸವನ್ನು ಮಾಡಿದನಲ್ಲವೆ ?

ವಸಿಷ್ಠರು ಮೇಲೆ ಹೇಳಿರುವ ಸತ್ಯವನ್ನು ತಿಳಿಯಪಡಿಸಿ “ಹೇ ರಘು ಕುಲತಿಲಕ ! ನೀನು ಪರಮಾತ್ಮನಲ್ಲವೆ ! ಭರತನು ಭಕ್ತಿಯುಳ್ಳವರಲ್ಲಿ ಸರ್ವಶ್ರೇಷ್ಠನಲ್ಲವೇ ? ಆದ್ದರಿಂದ ಆ ಭರತನ ಹತ್ತಿರ ಪರತಂತ್ರನಾಗಿ ಅವನನ್ನು ಹೊಂದಿಕೊಂಡು ಮಾಡುವುದು ನಿನಗೆ ಹಿರಿಮೆಯನ್ನುಂಟು ಮಾಡುವ ಕಾರ್ಯವಲ್ಲವೆ ? ಈಗ ಪ್ರಾರ್ಥಿಸುವ ಹಾಗೆ ನೀನು ಕಿರೀಟಧಾರಣೆ ಮಾಡದೆ ಇದ್ದರೆ ನಿನ್ನದಾಗಿರುವ ಸರ್ವಶ್ರೇಷ್ಠವಾದ ಹಿರಿಮೆಯನ್ನು ಕಳೆದುಕೊಂಡು ಬಿಡುತ್ತೀಯೇ ಎಂದೂ ಹೇಳಿರುತ್ತಾರೆ.

ಈ ರೀತಿ ವಸಿಷ್ಠರು ಶ್ರೀ ರಾಮನನ್ನು ಕುರಿತು ಹೇಳಿರುವ ಸತ್ಯ ಸಂಗತಿಯನ್ನು ಕೆಳಕಂಡ ಆ ವಸಿಷ್ಠರ ಮಾತಿನಲ್ಲಿ ನಾವು ಕಾಣಬಹುದು :—

ಪ್ರಜ್ಞಾಂ ದದಾತಿ ಚಾಚಾರ್ಯಸ್ತಸ್ಮಾತ್ಸ ಗುರುರುಚ್ಯತೇ ।
ಸೋಽಹಂ ತೇ ಪಿತುರಾಚಾರ್ಯಸ್ತವ ಚೈವ ಪರಂತಪ ॥

ಮಮ ತ್ವಂ ವಚನಂ ಕುರ್ವನ್ನಾತಿವರ್ತೇಃ ಸತಾಂಗತಿಮ್ ।
ಭರತಸ್ಯ ವಚಃ ಕುರ್ವನ್ಯಾಚಮಾನಸ್ಯ ರಾಘವ ।
ಆತ್ಮಾನಂ ನಾತಿವರ್ತೇಸ್ತ್ವಂ ಸತ್ಯ ಧರ್ಮ ಪರಾಕ್ರಮ ॥

ಈ ರೀತಿ ವಸಿಷ್ಠರನ್ನು ಕುರಿತು ಹೇಳಿದ ಶ್ರೀ ರಾಮನ ಉತ್ತರ ಯಾವುದು? ಎಂದರೆ :—" ಲೋಕದಲ್ಲಿ ಗೋಡೆ ಇದ್ದರೆ ಚಿತ್ರವನ್ನು ಬರೆಯುತ್ತಾನೆ " ಎನ್ನುವ ಒಂದು ನೀತಿ ಇದೆ. ಈ ನ್ಯಾಯವನ್ನು ಮನಸ್ಸಿನಲ್ಲಿಟ್ಟುಕೊಂಡು, ಶ್ರೀ ರಾಮನು ಕೆಳಕಂಡಂತೆ ಉತ್ತರವನ್ನು ಹೇಳುತ್ತಾನೆ.

ಆಚಾರ್ಯನು ಜ್ಞಾನವನ್ನುಂಟು ಮಾಡುವುದಕ್ಕೂ ಅವಕಾಶವಿದೆ. ಶರೀರವನ್ನು ಪಡೆದಿರುವವನಿಗೆ ಜ್ಞಾನವುಂಟಾಗುವುದಕ್ಕೆ ಆಚಾರ್ಯನ ಸಹಾಯ ಪಡೆಯಲು ಅವಕಾಶ ವುಂಟು. ಇದರಿಂದ ಶರೀರ, ಚಿತ್ರವನ್ನು ಬರೆಯುವುದಕ್ಕೆ ಗೋಡೆಯು ಹಾಗೆ ಜ್ಞಾನ ವುಂಟಾಗುವುದಕ್ಕೆ ಅತ್ಯಂತ ಮುಖ್ಯ ಎಂದು ತಿಳಿಯುತ್ತದೆ.

ಹೀಗೆ ಅತ್ಯಧಿಕ ಮುಖ್ಯವಾಗಿರುವ ಶರೀರವನ್ನುಂಟುಮಾಡಿ, ಬೆಳೆಸುವುದಕ್ಕೆ ತಾಯಿ, ತಂದೆಯರು ವ್ರತವನ್ನು ಮಾಡಿ, ಹೆತ್ತು, ತಿಂಗಳು ಹೊತ್ತು, ಪಡೆದು ನಂತರವೂ ಇವನಿಗೆ ತಿಳಿವಳಿಕೆಯಿಲ್ಲದ ಶೈಶವಾವಸ್ಥೆಯಲ್ಲಿ ಇವನ ಪರವಾಗಿ ಕಷ್ಟಪಟ್ಟು ಅನೇಕ ರೀತಿಯಲ್ಲಿ ಸಹಾಯ ಮಾಡುವವರಾದ್ದರಿಂದ, ಆಚಾರ್ಯನಿಗಿಂತ ಅಧಿಕ ಗೌರವಕ್ಕೆ ಪಾತ್ರ ರಾಗಿರುತ್ತಾರೆ. ಆಚಾರ್ಯನಿಗಿಂತಲೂ ತಂದೆಗೆ ಶ್ರೇಷ್ಠತೆಯುಂಟು. ಆ ಆಚಾರ್ಯ ವಚನಕ್ಕೂ ತಂದೆಯ ವಚನಕ್ಕೂ ಹೋಲಿಕೆ ಉಂಟು. ವಿಚಾರಿಸಿ ಈ ರೀತಿ ಇರಲು ಪಿತೃವಾಕ್ಯ ಪರಿಪಾಲನೆ ಮಾಡುವುದೇ ಉಚಿತ ಎಂದು ಶ್ರೀ ರಾಮನ ಉತ್ತರವಾಗಿರು ತ್ತದೆ.

ಈ ಸ್ಥಳದಲ್ಲಿ " ಸಹಿರಾಜಾ ಜನಯಿತಾ ಪಿತಾ ದಶರಥೋ ಮಮ ।
ಆಜ್ಞಾತಂಯನ್ಮಯಾ ತಸ್ಯ ನ ತನ್ಮಿಥ್ಯಾ ಭವಿಷ್ಯತಿ ॥ "
ಎನ್ನುವ ಶ್ರೀ ರಾಮಚಂದ್ರನ ಮಾತನ್ನು ಅನುಸಂಧಿಸಬೇಕು.

ಇದನ್ನು ಸ್ವಲ್ಪ ವಿಮರ್ಶಿಸೋಣ " ರಾಮಾ ! ಆಶ್ರಿತ ಪಾರತಂತ್ರ್ಯವಾಗಿರುವ ನಿನ್ನ ಶ್ರೇಷ್ಠ ಹಿರಿಮೆಯನ್ನು ನೀನು ತೊರೆದು ಬಿಡಬೇಡ, ಭರತನ ಇಚ್ಛೆಯನ್ನು ನೆರವೇರಿಸು " ಎಂದು ವಸಿಷ್ಠರು ಹೇಳಿದ್ದಕ್ಕೆ ಶ್ರೀ ರಾಮಚಂದ್ರನು ಯಾವ ಉತ್ತರ ವನ್ನು ಹೇಳಿಲ್ಲ.

ಶ್ರೀ ರಾಮನು ಇಷ್ಟಪಟ್ಟ ಹಾಗೆ " ತಾಯಿ ತಂದೆಗಳಿಗೆ ಶ್ರೇಷ್ಠತೆಯುಂಟು " ಎನ್ನುವುದು ಒಂದು ರೀತಿಯಿಂದ ಸತ್ಯವೇ ಆಗಿದೆ. ಆದರೂ ಸಹ "ಆಚಾರ್ಯನಿಗಿಂತಲೂ ತಾಯಿ ತಂದೆಗೆ ಶ್ರೇಷ್ಠತೆಯುಂಟು " ಎಂದುಕೊಂಡರೆ ಅವರುಗಳಲ್ಲಿಯೂ ಆಚಾರ್ಯ ನಿಗೆ ಶ್ರೇಷ್ಠತೆಯನ್ನು ಹೇಳುವ ಅನೇಕ ಶಾಸ್ತ್ರಗಳೊಂದಿಗೆ ವಿರೋಧವುಂಟಾಗುತ್ತದೆ.

ನಂತರವೂ ತಾಯಿ ತಂದೆಯವರನ್ನು ಬಿಟ್ಟು ಬಿಡು, ಎಂದು ಹೇಳಿರುವ ಶಾಸ್ತ್ರದ ಹಾಗೆ, ಆಚಾರ್ಯರನ್ನು ಬಿಡು ಎಂದು ಹೇಳಿರುವ ಶಾಸ್ತ್ರವೂ ಉಂಟೋ? ಇಲ್ಲ, ಅಕ್ಷರ ಕಲಿಸಿದವನನ್ನು ಶಾಸ್ತ್ರ ಬಿಡು ಎಂದು ಹೇಳಿರುವುದು ಸತ್ಯ. "ಶ್ರೇಷ್ಠವಾದ ಅಷ್ಟಾಕ್ಷರ ಮಂತ್ರವನ್ನು ಉಪದೇಶ ಮಾಡಿದವನು ಪರಮಾತ್ಮನಿಗಿಂತ ಶ್ರೇಷ್ಠನಾದವನು ಎಂದು ಶಾಸ್ತ್ರ ನಿಜಸ್ಥಿತಿಯನ್ನು ಹೇಳುತ್ತದೆಯಲ್ಲವೇ? ಈ ಪ್ರಪಂಚದಲ್ಲಿ ತನ್ನ ಉಪದೇಶ ವಾಕ್ಯಗಳಿಂದಲೂ, ಕಾರ್ಯಗಳಿಂದಲೂ ಅಂಥಾ ಕ್ರಮವನ್ನು ಸ್ಥಾಪಿಸಲು ಅವತಾರ ಮಾಡಿದವನು. ಆದೇ ರೀತಿ ಸ್ಥಾಪಿಸಿದವನಾದ ಶ್ರೀ ರಾಮಚಂದ್ರನು "ಆಚಾರ್ಯನ ವಾಕ್ಯ ಆದರಿಸಲು ತಕ್ಕದಲ್ಲ, ತಂದೆಯ ವಚನವೇ ಆದರಿಸಲು ತಕ್ಕದ್ದು" ಎಂದು ಹೇಳಿದ್ದೇ ಆದರೆ ಆ ಪರಮಾತ್ಮನನ್ನು ಯಾರು ವಿರೋಧಿಸಬಲ್ಲರು? ಸ್ವತಂತ್ರನನ್ನು ವಿರೋಧಿಸಿ ಹೇಳಲು ಸಾಧ್ಯವೇ? ಅವನ ಮನಸ್ಸು, ಆಗಲೇ ಅಯೋಧ್ಯೆಗೆ ಹಿಂತಿರುಗಿ ರಾಜ್ಯಾಭಿಷೇಕ ಮಾಡಿಕೊಳ್ಳಲು ಇಷ್ಟಪಡಲಿಲ್ಲ ಎನ್ನುವುದೇ ಹೊರತು ಬೇರೆ ಅಭಿಪ್ರಾಯ ಅವನ ಮಾತಿಗೆ ಇಲ್ಲ.

ಈ ಅಭಿಪ್ರಾಯವು ಈ ಭಾಗದಲ್ಲಿಯೇ ಇರುವ ಬೇರೊಂದು ಭರತನ ಚರಿತ್ರೆಯಲ್ಲಿ ನೋಡುವಲ್ಲಿ ನಿಶ್ಚಯವಾಗುವುದರಿಂದ ಆ ವಿಚಾರವನ್ನು ಇಲ್ಲಿ ಎತ್ತಿ ತೋರಿಸುತ್ತೇವೆ,

ಭರತನು ತನ್ನ ಪ್ರಾರ್ಥನೆಗೆ ಶ್ರೀ ರಾಮನು ಸ್ವಲ್ಪವೂ ಒಪ್ಪದೆ ಇರುವುದರಿಂದ ಆ ಶ್ರೀ ರಾಮಚಂದ್ರನ ಆಶ್ರಮದ ಬಾಗಿಲಲ್ಲಿ (ಅವನು ಅಯೋಧ್ಯೆಗೆ ಹಿಂತಿರುಗಿ ರಾಜ್ಯಾಭಿಷೇಕ ಮಾಡಿಕೊಳ್ಳುವವರೆಗೆ) ಉಪವಾಸವಿದ್ದು ದರ್ಭೆಗಳನ್ನು ಹಾಸಿ ಅದರ ಮೇಲೆ ಬಿದ್ದಿರುತ್ತೇನೆ ಎಂದು ಎಣಿಸಿ ಸುಮಂತ್ರನನ್ನು ದರ್ಭೆಗಳನ್ನು ತೆಗೆದುಕೊಂಡು ಬಾ ಎಂದು ಆಜ್ಞಾಪಿಸಿದನು. ಇದನ್ನು ಕೇಳಿದ ಸುಮಂತ್ರನು ಭರತನ ಈ ವ್ಯವಹಾರ ಶ್ರೀ ರಾಮನ ಮನಸ್ಸಿಗೆ ಇಷ್ಟವಿಲ್ಲದೆಂದು, ಒಂದು ರೀತಿಯಿಂದ ತಿಳಿದುಕೊಂಡು ಆ ಭರತನು ಆಜ್ಞಾಪಿಸಿದ ಹಾಗೆ ಮಾಡದೆ ಇದ್ದನು. ಆ ಸಮಯದಲ್ಲಿ ಭರತನೇ ತಾನು ನೆನೆಸಿದ ಹಾಗೇ ದರ್ಭೆಗಳನ್ನು ಹರಡಿ ಅದರ ಮೇಲೆ ಮಲಗಲು ಪ್ರಯತ್ನಿಸಿದನು.

ಇದನ್ನು ಕಣ್ಣಾರೆ ಕಂಡ ಶ್ರೀ ರಾಮಚಂದ್ರನು ಭರತನನ್ನು ನೋಡಿ ಹೇಳಿದ ಮಾತುಗಳು: "ಅಪ್ಪಾ! ನಾನು ಒಡೆಯ ನೀನು ನನ್ನ ಸ್ವಂತ ವಸ್ತು. ಈ ರೀತಿ ಪಡೆದಿರುವ ನಿನ್ನನ್ನು ಸ್ವಂತದವನಾದ ನಾನು ನನ್ನ ಇಷ್ಟಕ್ಕೆ ಅನುಸಾರವಾದ ಉಪಯೋಗವನ್ನು ಮಾಡಿಕೊಳ್ಳಬೇಕೆಂದು ಇಷ್ಟಪಟ್ಟೆನು. ಈ ರೀತಿ ಅಪೇಕ್ಷಿಸಿ ಉಪಯೋಗ ಮಾಡಿಕೊಳ್ಳಲು, ನನಗೆ ಮಾಡಲಾಗದ ಕಾರ್ಯವಾಗಿ ನಿನ್ನ ಮನಸ್ಸಿನಲ್ಲಿ ತೋರಿದ್ದು ಮಾತ್ರವಲ್ಲದೆ, ಸ್ವಂತ ವಸ್ತುವಾದ ನೀನು ನಿನ್ನ ಪರಿಸ್ಥಿತಿಗೆ ತಕ್ಕದ್ದಲ್ಲದ ಸ್ವತಂತ್ರನಾದ ನನ್ನನ್ನು ಅಡಗಿಸಿ ಒಳ್ಳೆಯ ಮಾರ್ಗದಲ್ಲಿ ನಡೆಸುವುದಾಗಿ ನೀನು ಯೋಚಿಸಿರುವ ಈ ಕಾರ್ಯವನ್ನು (ಆಶ್ರಮದ ಬಾಗಿಲಲ್ಲಿ ದರ್ಭೆಯನ್ನು ಹಾಸಿ ಅನಶನ

ವಿರುವ ಕಾರ್ಯ ಮಾಡಿ, ಇದರಿಂದ ನಿಶ್ಚಿಂತನಾಗಿರುವ ನನ್ನ ಸ್ಥಿತಿಗನುಸಾರವಾಗಿ ಇಲ್ಲದೆ ಇರುವುದನ್ನು ನೀನು ಎಣಿಸಿರುವುದು ಮಾಡಬಾರದ ಕೆಲಸ (ನಿನ್ನನ್ನು ನನ್ನ ಇಷ್ಟಕ್ಕನುಸಾರವಾಗಿ ಉಪಯೋಗ ಮಾಡುವ ಕಾರ್ಯ) ವನ್ನು ತಡೆಯುವ ಹಾಗೆ ಇರುವುದೆಂದೂ, " ನನ್ನ ಕೆಲಸ ನನಗೆ ತಕ್ಕದ್ದಾಗಿದೆ " ಎಂಬುದನ್ನು ನಾನು ತಿಳಿಸಲು ಬೇಕೇ ? ನಿನ್ನ ಕಾರ್ಯ ನಿನಗೆ ತಕ್ಕುದ್ದಾಗಿದೆಯೋ ? ಸರಿಯಲ್ಲ ಎನ್ನುವುದನ್ನು ತಿಳಿಸುವೆನು.

ಬ್ರಾಹ್ಮಣನು ಒಬ್ಬ ತನ್ನ ತಂದೆ " ಈ ಕ್ಷಣ ಕೊಡಬೇಕು " ಎಂದು ಸಮಯವನ್ನು ಕುರಿತು ಸಾಲವಾಗಿ ಹಣವನ್ನು ಒಬ್ಬನಿಗೆ ಕೊಟ್ಟಿರುತ್ತಾನೆ. ಆ ರೀತಿ ಸಾಲ ಪಡೆದವನು ಸಾಲಗಾರನಾದ ಬ್ರಾಹ್ಮಣನಿಗೆ ಕೊಡಬೇಕಾದ ಹಣವನ್ನು ನಿಗದಿಯಾದ ಸಮಯದಲ್ಲಿ ಕೊಡದೆ ತಪ್ಪಿದ್ದೇ ಆದರೆ, ಆ ಸಾಲ ಕೊಟ್ಟವನು ಸಾಲಗಾರನ ಮನೆಯ ಬಾಗಿಲಲ್ಲಿ ನೀನು ಈಗ ಮಾಡಬೇಕೆಂದು ಇಷ್ಟಪಟ್ಟ ಹಾಗೆ ದರ್ಭೆಗಳನ್ನು ಹರಡಿ ಮಲಗಿದರೆ ಸರಿಯಾಗಿರುತ್ತೆ. ಇದು ಬ್ರಾಹ್ಮಣ ಧರ್ಮ, ಕ್ಷತ್ರಿಯನಾದ ನಿನಗೆ ತಕ್ಕದ್ದಲ್ಲ. ನೀನು ಮತ್ತೊಂದು ಜಾತಿಯವರ ನ್ಯಾಯವನ್ನು ಅನುಸರಿಸಿದ್ದರಿಂದ ನಿನಗೆ ಪಾಪವುಂಟಾಗುತ್ತದೆ. ಆ ಪಾಪವು ಹೋಗುವ ಹಾಗೆ " ಇನ್ನು ಈ ರೀತಿಯಾದ ಪಾಪಕಾರ್ಯವನ್ನು ನಾನು ಮಾಡುವುದಿಲ್ಲವೆಂದು ಶಪಥ ಮಾಡಿ, ಕಣ್ಣೀರನ್ನು ಮುಟ್ಟಿ ನನ್ನನ್ನು ಸ್ಪರ್ಶಿಸು " ಇದೇ ಆ ಪಾಪ ಕಾರ್ಯಕ್ಕೆ ತಕ್ಕ ಉಚಿತವಾದ ಪರಿಹಾರ ಕಾರ್ಯ. " ಶೇಷ್ಯೇ ಪುರಸ್ತಾಚ್ಛಾಲಾಯಾ ಯಾವನ್ಮ ಪ್ರತಿಯಾಸ್ಯತಿ " ಎನ್ನುವುದು ಭರತನ ಮಾತು.

" ಕಿಂ ಮಾಂ ಭರತ ಕುರ್ವಾಣಂ ತಾತ ಪ್ರತ್ಯುಪವೇಕ್ಷ್ಯಸಿ ।
ಬ್ರಾಹ್ಮಣೋಹ್ಯೇಕ ಪಾರ್ಶ್ವೇನ ನರಾನ್ ರೋದ್ಧುಮಿಹಾರ್ಹತಿ ॥
ನತು ಮೂರ್ಧಾಭಿಷಿಕ್ತಾನಾಂ ವಿಧಿಃ ಪ್ರತ್ಯುಪವೇಶನೇ ।
ಉತ್ತಿಷ್ಠತ್ವಂ ಮಹಾಬಾಹೋ ಮಾಂ ಚ ಸ್ಪೃಶತಥೋದಕಮ್ ॥ "

ಈ ರೀತಿ ಭರತನೂ ಪರಿಹಾರ ಕಾರ್ಯ ಮಾಡಿದ್ದಾಗಿ ಚರಿತ್ರೆ. ಇದರಲ್ಲಿ ಕೇಳಕಂಡಂತೆ ಸತ್ಯತೆಯನ್ನು ತಿಳಿಯತಕ್ಕದ್ದು. ಶ್ರೀ ರಾಮನು ಚಕ್ರವರ್ತಿಯ ಪುತ್ರನಾಗಿದ್ದುದರಿಂದ ಕ್ಷತ್ರಿಯನೇ ಆಗುತ್ತಾನೆ.

ಅನಂತರವೂ ಈ ಪರಮ ಪುರುಷನ ಚರಣಾರವಿಂದಗಳ ಪಾದರಕ್ಷೆಯು ಅಭಿಷಿಕ್ತವಾಗಿರುವುದರಿಂದ " ಈ ಪರಮ ಪುರುಷನು ಮೂರ್ಧಾಭಿಷಿಕ್ತನಾದ ಕ್ಷತ್ರಿಯನು ಎಂದು ಹೇಳಲು ಅಡ್ಡಿ ಏನೂ ಇಲ್ಲ. ಆದರೂ ಸಹ ಈ ರಾಮಚಂದ್ರನು ವಾನರ ಪಡೆಗಳೊಂದಿಗೆ ಸಮುದ್ರ ತೀರದಲ್ಲಿ ಸೇರಿ ಕುದಿಯುತ್ತಿರುವ ಆ ಸಮುದ್ರವನ್ನು ನೋಡಿದ ಸಮಯದಲ್ಲಿ ಆ ರೀತಿಯಾದ ಸಾಗರವನ್ನು ದಾಟಿ ಹೋಗುವ ಉಪಾಯ ಯಾವುದೋ ? ಎಂದು ಆಲೋಚಿಸಿ ನೋಡುವಲ್ಲಿ ಆ ಪರಮ ಪುರುಷನು ಈ ಸಮುದ್ರವನ್ನು ದಾಟಿ

ಆ ಕಡೆ ದೇಶವನ್ನು ಸೇರಲು, ಸಮುದ್ರರಾಜನನ್ನು ಕುರಿತು ಅವನ ಕೃಪೆಯನ್ನು ಪಡೆಯುವಂತೆ ಈ ಸಮುದ್ರ ತೀರದಲ್ಲಿ ದರ್ಭೆಗಳನ್ನು ಹಾಸಿ, ಅದರ ಮೇಲೆ ಶಯನಿಸುವುದು, ಬೇಡಿಕೊಳ್ಳುವುದು. ಈ ಸಮುದ್ರದಲ್ಲಿ ಸ್ವಲ್ಪ ತಣ್ಣೀರೂ ಇಲ್ಲದಂತೆ ಒಣಗುವ ಹಾಗೆ ಮಾಡುವುದು ಎನ್ನುವ ಉಪಾಯಗಳು ಉಂಟು. ಅವುಗಳಲ್ಲಿ ಸಮುದ್ರ ತೀರದಲ್ಲಿ ದರ್ಭೆಗಳನ್ನು ಹಾಸಿ ಮಲಗುವುದೇ ಶ್ರೇಷ್ಠ ಉಪಾಯ ಎಂದು ಹೇಳಲ್ಪಟ್ಟಿದೆ.

"ತಪಸಾ ಸೇತುಬಂಧೇನ ಸಾಗರೋಚ್ಛೋಷಣೇನ ವಾ ।
ಸರ್ವಥಾ ಸುಸಮರ್ಥೋಽಸ್ಮಿ ಸಾಗರಸ್ಯಾಸ್ಯ ಲಂಘನೇ ॥"

ಎನ್ನುವ ಆ ಶ್ರೀ ರಾಮನ ಮಾತುಗಳನ್ನು ಇಲ್ಲಿ ಕಾಣತಕ್ಕದ್ದು.

ಈ ಸ್ಥಳದಲ್ಲಿ "ತಪಸಾ" ಎಂಬುದ ಮಾತನ್ನು ನೋಡತಕ್ಕದ್ದು. ಮತ್ತು "ಧರ್ಮಾತ್ಮಾ" ಎಂದು ಕೊಂಡಾಡುವ ವಿಭೀಷಣನೂ ಶ್ರೀ ರಾಮಚಂದ್ರನು ಈ ರೀತಿಯಾಗಿ ಸಮುದ್ರರಾಜನನ್ನು ಎದುರು ನೋಡುತ್ತಾ ಇರುವುದು ಉಚಿತ ಎಂದು ಹೇಳುತ್ತಾನೆ.

ಶ್ರೀ ರಾಮಚಂದ್ರನು ಸಮುದ್ರರಾಜನನ್ನು ಕುರಿತು ದರ್ಭಶಯನದಲ್ಲಿ ಶರಣಾಗಿದ್ದನೆಂಬುದು ಚರಿತ್ರಾರ್ಹವಾದ ಸತ್ಯ. ಅಭಿಷೇಕವಿಲ್ಲದ ಭರತನನ್ನು ಕುರಿತು ಇದು ಬ್ರಾಹ್ಮಣರಿಗೆ. ಅಭಿಷೇಕ ಮಾಡಿಕೊಂಡಿರುವ ಕ್ಷತ್ರಿಯನು ಈ ರೀತಿ ಆಚರಿಸುವುದು "ದೋಷ" ಎಂದು ಹೇಳಿರುವ ಭಗವಂತನು ಮೇಲೆ ಹೇಳಿರುವ ಪ್ರಕಾರ ಅಭಿಷಿಕ್ತ ಕ್ಷತ್ರಿಯನಾದ ತಾನು ಈ ರೀತಿ ಮಾಡಿರುವುದು ನ್ಯಾಯವೇ ?

ಅಲ್ಲದೆ ಭರತನು ಶ್ರೀ ರಾಮನ ನಂತರ ಹುಟ್ಟಿದ ತಮ್ಮನಾದ್ದರಿಂದ ಅಭಿಷಿಕ್ತನಾಗಲು ಅರ್ಹನಾಗಿರಲಿಲ್ಲ. ಕೇಕಯನಗರದಿಂದ ಅಯೋಧ್ಯಾನಗರಿಗೆ ಬಂದು ತನ್ನ ತಾಯಿಯ ಗೃಹದಲ್ಲಿ ತನ್ನ ತಂದೆಯಾದ ದಶರಥ ಸ್ವರ್ಗಸ್ಥನಾದುದನ್ನು ಕೇಳಿ ಭೂಮಿಯಲ್ಲಿ ಬಿದ್ದು ಹೊರಳಾಡಿ ಅಳುವ ಸಮಯದಲ್ಲಿ ತನ್ನ ತಾಯಿಯಾದ ಕೈಕೇಯಿ "ರಾಜನ್" ಎಂದು ಕರೆಯಲು ಆ ರೀತಿ ಕರೆಯುವದನ್ನೇ ಸಹಿಸಲಾರದವನಾಗಿದ್ದನಲ್ಲವೆ ?

ನಂತರವೂ ಕುಲಗುರುವೂ ತನ್ನ ಗುರುವಾದ ಶ್ರೀ ರಾಮನಿಗೂ ಗುರುವಾದ ವಸಿಷ್ಠರು "ಈ ರಾಜ್ಯವನ್ನು ಸ್ವೀಕರಿಸಿ ಅಭಿಷಿಕ್ತನಾಗು" ಎಂದು ಹೇಳುವ ಸಮಯದಲ್ಲಿ ಅವರನ್ನೂ ಸಹ ಅತ್ಯಧಿಕ ಶ್ರೇಷ್ಠರೆಂದು ಎಣಿಸದೆ, ಅನೇಕ ರೀತಿಯಲ್ಲಿ ತಿರಸ್ಕಾರವಾದ ಮಾತನ್ನಾಡಿ, ನಾನೂ ರಾಜ್ಯವೂ ಶ್ರೀ ರಾಮಚಂದ್ರನ ಸ್ವಂತವಸ್ತುವಾಗಿ ನಿಜ ಸ್ಥಿತಿ ಇರಲು, ನಾನು ಈ ರಾಜ್ಯವನ್ನು ಸ್ವೀಕರಿಸುವುದು ಹೇಗೆ ? ಎಂದು ರಾಜ ದರ್ಬಾರಿನಲ್ಲಿ ಪ್ರಕಾಶಿಸಿದ ಮಹಾನುಭಾವನಲ್ಲವೇ ?

ಮತ್ತು ಮೇಲೆ ಹೇಳಿರುವುದು ಮಾತ್ರವೇ ಅಲ್ಲ. ಅದಲ್ಲದೇ ಪ್ರತ್ಯಕ್ಷವಾಗಿ ಬಂದವನಾದ ಆ ಭರತನು ತಾಯಂದಿರೂ, ಮಂತ್ರಿಗಳೂ, ವಸಿಷ್ಠರೂ, ಜಾಬಾಲೀ ಮುಂತಾದ ಹಿರಿಯರೂ, ಜನಗಳೂ, ಕುದುರೆಗಳೂ ಮೊದಲಾದ ಅಯೋಧ್ಯೆಯಲ್ಲಿರುವ

ಎಲ್ಲರನ್ನೂ ಒಂದಾಗಿ ಸೇರಿಸಿ ಕರೆದುಕೊಂಡು ಆ ದಿಕ್ಕಿಗೆ ಕೈ ಮುಗಿದು ಚಿತ್ರಕೂಟಕ್ಕೆ ಹೋಗಿ ಸೇರಿದನು. ಶ್ರೀ ರಾಮನ ಚರಣಾರವಿಂದಗಳಲ್ಲಿ ಬೇರುಕಿತ್ತ ಮರದ ಹಾಗೆ ಬಿದ್ದು ತನ್ನನ್ನೇ ಅವನ ಅಡಿದಾವರೆಗಳಲ್ಲಿ ಇಟ್ಟು ಬೇಡಿಕೊಂಡನಲ್ಲವೆ ?

ಈ ಭರತನ ನಿಷ್ಠೆ ಹೀಗಿರಲು ಇವನಿಗೂ ಪಾಪವುಂಟೋ ? ಇವನು ಕ್ಷತ್ರಿಯನಾಗಿದ್ದರೂ ಮಹಾಪಾಪಿಷ್ಠನೆಂದು ಹೇಳಲು ಅವಕಾಶವುಂಟೋ ? ಪಾಪಕ್ಕೇ ಅವಕಾಶವಿಲ್ಲದ ಸಮಯದಲ್ಲಿ ಪರಮ ಪುರುಷನು ಪರಿಹಾರವನ್ನು ಮಾಡಲು ಆಜ್ಞೆ ಮಾಡಿದ್ದು ಸರಿಯಾಗುತ್ತದೆಯೇ ?

ಆದರೆ ಭರತನು ಶ್ರೀ ರಾಮಚಂದ್ರನು ಆಜ್ಞೆ ಮಾಡಿದ ಪ್ರಕಾರ ಪರಿಹಾರವನ್ನು ಮಾಡಿರುವನು, ಎಂದು ಕೆಲವರು ಕೇಳಬಹುದು. "ಶ್ರೀ ರಾಮಚಂದ್ರನು ವನಕ್ಕೆ ತೆರಳಲು ನಾನೇ ಕಾರಣನು" ಎಂದು ಹೇಳಿದವನೂ, ಸ್ವಪ್ನದಲ್ಲಿ ಪಾಪವು ಸ್ವಲ್ಪ ಮಾತ್ರವೂ ಇಲ್ಲದೆ ಇರುವವನಾದ ಭರತನು ತನ್ನ ಸ್ಥಿತಿಗೆ ಅನುರೂಪವಾದ ಪರಿಹಾರವನ್ನು ಮಾಡಿದನೇ ಹೊರತು, ಪಾಪವಿದ್ದು ಪರಿಹಾರ ಮಾಡಿದನೆಂಬುದು ಹೇಗಾಗುತ್ತದೆಯೋ ? ಇದೇ ಮೇಲೆ ಹೇಳಿರುವ ಪ್ರಶ್ನೆಗೆ ಉತ್ತರವಾಗುತ್ತೆ.

ತನ್ನ ಸ್ಥಿತಿಗನುಸಾರವಾಗಿ ನಡೆದುಕೊಳ್ಳುವ ಭರತನು ಸ್ವಾಮಿಯಾದ ಶ್ರೀ ರಾಮಚಂದ್ರನ ಎದುರಿಗೆ, ಆ ರಾಮನ ಮನಸ್ಸಿಗೆ ಇಷ್ಟವಿಲ್ಲದ "ದರ್ಭೆಗಳನ್ನು ಹರಡಿ ಮಲಗುವುದು" ಎನ್ನುವ ಕಾರ್ಯವನ್ನು ಮಾಡುವುದಕ್ಕೆ ಪ್ರಯತ್ನಿಸುವುದು ನ್ಯಾಯವೇ ? ಎಂದು ಕೆಲವರಿಗೆ ಇಲ್ಲಿ ಸಂದೇಹವುಂಟಾಗಬಹುದು. ಈ ಶಂಕೆಗೆ ಪರಿಹಾರವನ್ನೂ ತಿಳಿಸುತ್ತೇನೆ.

ಆ ಭರತನು ಭಗವಂತನ ಇಚ್ಛೆಗೆ ಅನುಸಾರ ನಡೆಯುವ ಸ್ಥಿತಿಗೆ ಸರಿಯಿಲ್ಲದ ಕಾರ್ಯವನ್ನು (ದರ್ಭೆಗಳನ್ನು ಹರಡಿ ಅದರ ಮೇಲೆ ಮಲಗುವುದು) ಮಾಡಲು ಪ್ರಯತ್ನಿಸಿದ್ದು ಶ್ರೀ ರಾಮನಲ್ಲಿರುವ ಭಕ್ತ್ಯತಿಶಯದಿಂದಲ್ಲವೆ ? ಬೇರೆ ಕಾರಣದಿಂದುಂಟಾದುದಲ್ಲ.

ನಮ್ಮಾಳ್ವಾರ್ ತಿರುಮಂಗೈ ಆಳ್ವಾರಂತಹವರು ಭಗವಂತನನ್ನು ಪಡೆಯದಿದ್ದಾಗ ಆ ಪರಮಾತ್ಮನನ್ನು ನ್ಯಾಯ ವಿರುದ್ಧವಾಗಿಯಾದರೂ ಪಡೆಯಬೇಕು ಎಂದೆಣಿಸಿ ಹಠಹೋಗಿ, ಮಡಲೂರುವುದು, ದೂತ್ಯವನ್ನು ಕಳುಹಿಸುವುದು, ದೋಷವಾದ ಕಾರ್ಯಗಳನ್ನು ತಮ್ಮ ಸ್ಥಿತಿಗೆ ಸರಿಯಲ್ಲದಿದ್ದರೂ ಮಾಡಬೇಕೆಂದೆಣಿಸಿ ಮಾಡಿರುತ್ತಾರೆ. ಈ ರೀತಿ ಇವರುಗಳು ಅಪೇಕ್ಷಿಸಿ ಮಾಡಿರುವುದು ಹೇಗೆ ಭಕ್ತಿಯ ಹಿರಿಮೆಯಿಂದಲೋ, ಹಾಗೆಯೇ ಭರತನ ಕಾರ್ಯವೂ ಭಕ್ತ್ಯತಿಶಯದಿಂದಲೇ ಎನ್ನುವುದನ್ನು ನಾವು ತಿಳಿಯಬಹುದು.

ಇದುವರೆವಿಗೂ ಹೇಳಿರುವುದರಿಂದ ತಿಳಿದ ವಿಷಯ ಯಾವುದು ಎಂದರೆ "ಶ್ರೀ ರಾಮನ ಮನಸ್ಸಿಗೆ ಭರತನ ಕಾರ್ಯ ಇಷ್ಟವಿಲ್ಲ" ಎಂಬುದೇ ತಿಳಿದು ಬಂದ ಸಂಗತಿ.

ಆದರೆ ನಂತರವೂ ಕೆಲವರು "ಮಾತರಂ ರಕ್ಷ ಕೈಕೇಯೀಂ 'ಅಜ್ಞಾತವಾನ್ ಯನ್ ಮಹಾತಸ್ಯ' ಆತ್ಮಿತಸ್ಯ ತ್ವಮ್" ಎಂದು ಮೊದಲು ಹೇಳಿದ ವಾಕ್ಯಗಳಲ್ಲಿ ಶ್ರೀ ರಾಮಚಂದ್ರನು "ಭರತಾ" ಕೈಕೇಯಿಯನ್ನು ತಿರಸ್ಕರಿಸಕೂಡದು, ಎಂದೂ ಆಚಾರ್ಯನಿಗೆ ತಂದೆಯವರಿಗೆ ಅರಿವು ಉಂಟು ; ಆದ್ದರಿಂದ ಅವರ ವಚನವೇ ತನಗೆ ಆದರಿಸಲು ಯೋಗ್ಯವಾದುದು ಎಂದೂ ಭರತಾ ! ನೀನು ಪಾಪ ಮಾಡಿರುವನಾದ್ದರಿಂದ ಪರಿಹಾರವನ್ನು ಮಾಡು ಎಂದು ಪ್ರಕಟವಾಗಿ ಹೇಳಿರುವುದರಿಂದ, ಹಾಗೆ ಬಹಿರಂಗವಾಗಿ ಹೇಳಿರುವುದನ್ನು ಕಾರಣವಾಗಿ ತೆಗೆದುಕೊಳ್ಳದೆ ಅದನ್ನು ತುಚ್ಛವಾಗಿ ಕಂಡು ಮಾತನಾಡಿದ್ದು ಶ್ರೀ ರಾಮಚಂದ್ರನ ಮನಸ್ಸಿಗೆ ಹಿತವಲ್ಲದುದರಿಂದ ಭರತನು ಫಲವನ್ನು ಪಡೆಯದಿದ್ದಕ್ಕೆ ಕಾರಣವೆಂದು ಹೇಳದೆ ಇರುವುದು ಒಪ್ಪುತ್ತದೆಯೇ ? "ಹೊರಗೆ ಕಾಣಿಸುವ ವಸ್ತುವನ್ನು ಬಿಟ್ಟುಬಿಟ್ಟು ಅಂತರಾರ್ಥ ತೆಗೆದುಕೊಳ್ಳುವುದು ಒಳ್ಳೆಯ ಮಾರ್ಗವಾಗುತ್ತದೆ" ಎನ್ನುವುದನ್ನು ದೃಷ್ಟಾಂತದಿಂದ ತೋರಿಸಿ ಹೇಳಿದರೆ ಚೆನ್ನಾಗಿ ತಿಳಿಯುತ್ತದೆ.

"ಶ್ರೀ ರಾಮಚಂದ್ರನು ಸುಗ್ರೀವನೊಂದಿಗೆ ಸ್ನೇಹವನ್ನು ಮಾಡಿದನು. ಸುಗ್ರೀವನು ಅಪೇಕ್ಷಿಸಿದ ಹಾಗೆ ವಾಲಿಯನ್ನು ಕೊಂದು ಕಿಷ್ಕಿಂಧಾರಾಜ್ಯವನ್ನು ರುಮ್ಯೆ ಎಂಬ ಸುಗ್ರೀವನ ಪತ್ನಿಯನ್ನೂ ಆ ಸುಗ್ರೀವನು ಪಡೆದು ಮೊದಲಿನ ಹಾಗೆ ಬಾಳಲು ಸಹಾಯ ಪಡೆದನು.

ಆ ರೀತಿ ಸಹಾಯವನ್ನು ಪಡೆಯುವಾಗ ಸುಗ್ರೀವನು ನಂಬುವ ಹಾಗೆ ಎಲ್ಲಾ ಕೆಲಸವನ್ನು ಮಾಡಿಕೊಟ್ಟನು ಎಂದು ನಮ್ಮ ಆಚಾರ್ಯರುಗಳು ಪರಮ ಪುರುಷನ ಶ್ರೇಷ್ಠಗುಣಗಳನ್ನು ಪ್ರಶಂಸಿಸಿ ಹೇಳುವುದುಂಟು. ಹಾಗೆ ವಾಲಿಯನ್ನು ವಧೆ ಮಾಡುವಾಗ ಆ ವಾಲಿಗೂ ಸುಗ್ರೀವನಿಗೂ ನಡೆದ ಯುದ್ಧ ಎರಡು. ಮೊದಲು ನಡೆದ ಯುದ್ಧದಲ್ಲಿ ಶ್ರೀ ರಾಮನು ವಾಲಿಯನ್ನು ಹೊಡೆದು ಕೊಲ್ಲದೆ ಬಿಟ್ಟಿರುತ್ತಾನೆ. ಆ ಯುದ್ಧದಲ್ಲಿ ಸುಗ್ರೀವನು ತನ್ನಿಂದಾದಷ್ಟು ಯುದ್ಧ ವಿಷಯವನ್ನು ತಿಳಿದಿದ್ದೂ, ಶ್ರೀ ರಾಮನ ಆಣತಿಯಂತೆ ಬಾಣವನ್ನು ಬಿಟ್ಟು ವಾಲಿಯನ್ನು ಕೊಲ್ಲದೆ ಇರುವುದರಿಂದ ಹೊಡೆತವನ್ನು ತಡೆಯಲಾರದೆ ಬೆನ್ನು ತಿರುಗಿಸಿಕೊಂಡು ಓಡಿಬಿಟ್ಟನು ಎಂಬುದು ವೃತ್ತಾಂತ.

ಈ ರೀತಿ ಓಡಿ ಬಂದ ಸುಗ್ರೀವನು "ಹೇ ರಾಮಾ ! ನೀನು ಏಕೆ ಹೇಳಿದ ಹಾಗೆ ವಾಲಿಯನ್ನು ಹೊಡೆಯಲಿಲ್ಲ" ಎಂದು ಪ್ರಶ್ನಿಸಿದನು. ಈ ಪ್ರಶ್ನೆಗೆ ಶ್ರೀ ರಾಮನು ಉತ್ತರವನ್ನು ಹೇಳುವಾಗ ಹೇಳಿದ ಮಾತುಗಳು:

ಸುಗ್ರೀವ ಶ್ರೂಯತಾಂ ತಾತ ಕ್ರೋಧಶ್ಚ ವ್ಯಪನೀಯತಾಮ್ ।
ಕಾರಣಂ ಯೇನ ಬಾಣೋಽಯಂ ನ ಮಯಾ ಸ ವಿಸರ್ಜಿತಃ ॥
ಅಲಂಕಾರೇಣ ವೇಷೇಣ ಪ್ರಮಾಣೇನ ಗತೇನ ಚ ।
ತ್ವಂ ಚ ಸುಗ್ರೀವ ವಾಲೀ ಚ ಸದೃಶೌ ಸ್ಥಃ ಪರಸ್ಪರಮ್ ॥

ಸ್ವರೇಣ ವರ್ಚಸಾ ಚೈವ ಪ್ರೇಕ್ಷಿತೇನ ಚ ವಾನರ ।
ವಿಕ್ರಮೇಣ ಚ ವಾಕ್ಯೈಶ್ಚ ವ್ಯಕ್ತಿಂ ವಾಂ ನೋಪಲಕ್ಷಯೇ ॥
ತತೋಽಹಂ ರೂಪ ಸಾದೃಶ್ಯಾತ್ ಮೋಹಿತೋ ವಾನರೋತ್ತಮ ।
ನೋತ್ಸೃಜಾಮಿ ಮಹಾವೇಗಂ ಶರಂ ಶತ್ರು ನಿಬರ್ಹಣಮ್ ॥

ಎನ್ನುವುದಾಗಿದೆ. ಇದರ ಸಾಧಾರಣವಾದ ಅರ್ಥ —

ಸುಗ್ರೀವಾ ! ಒಂದೇ ರೀತಿಯಲ್ಲಿ ರೂಪವಿನ್ಯಾಸದಲ್ಲಿಯೂ, ಎತ್ತರದಲ್ಲಿಯೂ, ನಡೆಯುವುದರಲ್ಲಿಯೂ, ಧ್ವನಿಯಲ್ಲಿಯೂ, ತೇಜಸ್ಸಿನಲ್ಲಿಯೂ, ದೃಷ್ಟಿಯಲ್ಲಿಯೂ, ಪರಾಕ್ರಮದಲ್ಲಿಯೂ, ವಾಕ್ಯಗಳಲ್ಲಿಯೂ, ನೀನೂ, ವಾಲಿಯೂ, ಒಬ್ಬರನೊಬ್ಬರ ಸಮಾನರಾಗಿರುವುದರಿಂದ ನಿಮ್ಮಿಬ್ಬರಲ್ಲಿ "ಇತಹವನು ವಾಲಿ, ಇವನು ಸುಗ್ರೀವ" ಎನ್ನುವುದನ್ನು ನನ್ನಿಂದ ತಿಳಿದುಕೊಳ್ಳಲಾಗಲಿಲ್ಲ. ಈ ಸಂದೇಹದಲ್ಲಿ ನಾನು ಬಾಣವನ್ನು ಬಿಟ್ಟರೆ, ಅದು ಒಂದು ಸಮಯ ನಿನ್ನ ಮೇಲೆ ಬಿದ್ದು ವಿಪತ್ತು ಬರುತ್ತೊ, ಎಂದು ಹೆದರಿ ನಾನು ಹಾಗೆಯೇ ಇದ್ದು ಬಿಟ್ಟೆನು.

ಈ ಸಾಧಾರಣ ಅರ್ಥವನ್ನು ಇಲ್ಲಿ ತೆಗೆದುಕೊಂಡರೆ ಸರಿಹೊಂದುತ್ತದೆಯೋ ? ಎಂಬುದನ್ನೇ ನಾವು ಆಳವಾಗಿ ಗಮನಿಸಬೇಕಾದ ವಿಷಯ. ಅತ್ಯಧಿಕ ಬುದ್ಧಿವಂತನಾದ ಶ್ರೀ ರಾಮಚಂದ್ರನು ಸುಗ್ರೀವನಿಗೂ, ವಾಲಿಗೂ ಇರುವ ವ್ಯತ್ಯಾಸವನ್ನು ನಿಜವಾಗಿಯೂ ತಿಳಿದುಕೊಳ್ಳಲಾರದವನೇ, ತಿಳಿದಿರಲಿಲ್ಲವೇ ! ಸಾಮಾನ್ಯ ಬುದ್ಧಿ ಉಳ್ಳವನೂ ಕೂಡ "ಪೆಟ್ಟನ್ನು ತಿಂದವನು ಸುಗ್ರೀವ, ಹೊಡೆಯುವವನು ವಾಲಿ" ಎನ್ನುವುದನ್ನು ಸ್ವಲ್ಪದರಲ್ಲಿಯೇ ತಿಳಿದುಕೊಳ್ಳಬಹುದಾದ ವಿಷಯವನ್ನು "ನನ್ನಿಂದ ತಿಳಿದುಕೊಳ್ಳಲಾಗಲಿಲ್ಲ" ಎಂದು ಶ್ರೀ ರಾಮನು ಹೇಳುತ್ತಾನೆಯಲ್ಲ, ಇದು ಸರಿಹೊಂದುತ್ತದೆಯೇ, ಇದರಲ್ಲಿ ನಮ್ಮ ಆಚಾರ್ಯರುಗಳ ಮನೋಭಿಪ್ರಾಯವನ್ನು ಹೇಳುವೆವು. ನಿಜಸ್ಥಿತಿಯನ್ನು ತಿಳಿಯತಕ್ಕದ್ದು. ಪರಮ ಪುರುಷನು ಚೇತನನನ್ನು ಕುರಿತು ನೀನು ನನ್ನ ಹತ್ತಿರ ನಿನಗಿರುವ ಪ್ರೀತಿಯನ್ನು ನನ್ನ ಪ್ರೀತಿಗೊಳಪಟ್ಟವರಲ್ಲಿಯೂ ಇಡು, ಹಾಗೆ ನನ್ನ ಪ್ರೀತಿ ಪಾತ್ರರಲ್ಲಿ ಪ್ರೇಮವನ್ನು ಮಾಡದೆ ಇದ್ದರೆ, ಅವರ ಹತ್ತಿರ ಅಪರಾಧವನ್ನು ಮಾಡುವವನಾಗುತ್ತೀಯೆ : ಆದ್ದರಿಂದ ನಿನಗೆ ಮಹತ್ತ ನಾಶವುಂಟಾಗುತ್ತದೆ ಎಂದು ತಿಳಿಯಬೇಡ. ನಿನ್ನೊಂದಿಗೆ ಸಂಬಂಧಪಟ್ಟಿರುವ ಈ ಪ್ರಪಂಚವೂ ನಾಶವಾಗಿ ಬಿಡುತ್ತದೆ ಎಂದು ಹೇಳಿರುತ್ತಾರೆ.

"ಯಾ ಪ್ರೀತಿರ್ಮಯಿ ಸಂವೃತ್ತಾ ಮದ್ಭಕ್ತೇಷು ಸದಾಸ್ತು ತೇ ।
ಅವಮಾನ ಕ್ರಿಯಾ ತೇಷಾಂ ಸಂಹರತ್ಯಖಿಲಂ ಜಗತ್ ॥"

ಎನ್ನುವ ಪರಮ ಪುರುಷನ ಸಿರಿನುಡಿಗಳನ್ನು ಅನುಭವಿಸ ತಕ್ಕದ್ದಾಗಿದೆ.

ಇದರಿಂದ ನಾವು ಒಂದು ಸತ್ಯವನ್ನು ತಿಳಿಯಬಹುದು :—

ಒಬ್ಬ ಚೇತನನು ಭಗವಂತನನ್ನು ನ್ಯಾಯ ರೀತಿಯಿಂದ ಪಡೆದಿದ್ದರೂ ತಾನು ಇಚ್ಛಿಸಿದ ಫಲವನ್ನು ಪಡೆಯುವಾಗ, ಆತನ ಭಕ್ತರುಗಳಲ್ಲಿ ಅಪರಾಧವು ಸ್ವಲ್ಪವೂ ಇಲ್ಲದೆ ಇರುವುದು ಸತ್ಯವಾಗುತ್ತದೆ. ಈ ರೀತಿಯಾಗಿ ಅಪರಾಧವನ್ನು ಹೊಂದಿದ್ದರೆ ಫಲವನ್ನು ಪಡೆಯಲಾಗುವುದಿಲ್ಲ. ಶರಣಾಗತಿ ಧರ್ಮವನ್ನು ನಾವು ತಿಳಿದುಕೊಳ್ಳುವಾಗ "ಪರಮಾತ್ಮನ ಭಕ್ತರುಗಳಲ್ಲಿ ಕಿಂಚಿತ್ತೂ ಅಪರಾಧ ಮಾಡದಿದ್ದರೆ ಅದು ಒಂದು ರೀತಿ" ಎನ್ನುವುದನ್ನು ತಿಳಿದುಕೊಳ್ಳಬೇಕು.

ಈ ವಿಷಯವನ್ನು ಮನಸ್ಸಿನಲ್ಲಿಟ್ಟುಕೊಂಡು ಸುಗ್ರೀವನ ವೃತ್ತಾಂತವನ್ನು ವಿಮರ್ಶಿಸಬೇಕು. ಸುಗ್ರೀವನು ಶ್ರೀ ರಾಮಚಂದ್ರನಲ್ಲಿ ಅತ್ಯಧಿಕ ಪ್ರೇಮವುಳ್ಳವನು ಎಂಬುದು ನಿಜವೇ ಆದರೂ, ಲಕ್ಷ್ಮಣನಲ್ಲಿ ಹೇಗೆ ಪ್ರೇಮವನ್ನು ತೋರಿಸಬೇಕೋ ಹಾಗೆ ತೋರಿಸಲಿಲ್ಲ. ಶ್ರೀ ರಾಮಚಂದ್ರನೂ, ಸುಗ್ರೀವನೂ ಅಗ್ನಿಸಾಕ್ಷಿಯಾಗಿ ಮಿತ್ರತ್ವವನ್ನು ಮಾಡಿಕೊಳ್ಳುತ್ತಾರೆ. ಆ ರೀತಿ ಸ್ನೇಹವನ್ನು ಬೆಳೆಸಿದ ಮೇಲೆ ಸುಗ್ರೀವನು ಎಲೆಯೂ, ಹೂವೂ ತುಂಬಿರುವ ಒಂದು ಮರದ ಕೊಂಬೆಯನ್ನು ಒಡೆದು ಭೂಮಿಯ ಮೇಲೆ ಹಾಕಿ, ಅದರ ಮೇಲೆ ಶ್ರೀ ರಾಮನೊಡನೆ ಕುಳಿತುಕೊಂಡು ಆ ಭಗವಂತನ ಹತ್ತಿರ ತನ್ನ ದುಃಖವನ್ನು ಹೋಗಲಾಡಿಸುವ ಹಾಗೆ ಪ್ರಾರ್ಥಿಸಿಕೊಳ್ಳುತ್ತಾನೆ. ಹೀಗೆ ಸುಗ್ರೀವನೂ, ಶ್ರೀ ರಾಮನೂ ಎಲೆಯೂ ಹೂವೂ ತುಂಬಿರುವ ಒಂದೇ ಕೊಂಬೆಯ ಮೇಲೆ ಸ್ವಲ್ಪ ಸಮಯ ಕುಳಿತುಕೊಂಡು, ಒಬ್ಬರೊಡನೊಬ್ಬರು ಮಾತನಾಡಿಕೊಂಡಿದ್ದರೆಂದು ಚರಿತ್ರೆಯಲ್ಲಿ ಹೇಳಲ್ಪಟ್ಟಿದೆ. ಆದರೆ ಒಂದು ಸಮಯದಲ್ಲಾದರೂ ಲಕ್ಷ್ಮಣನನ್ನು ಸುಗ್ರೀವನು ಈ ರೀತಿ ಆಸನವನ್ನು ಕೊಟ್ಟು ಉಪಚರಿಸಿದ್ದಾಗಿ ರಾಮಾಯಣದಲ್ಲಿ ಹೇಳಲ್ಪಟ್ಟಿಲ್ಲ. ಇಲ್ಲಿ

> ತತಃ ಸ ಪರ್ಣಬಹುಲಾಂ ಭಿತ್ತ್ವಾ ಶಾಖಾಂ ಸುಪುಷ್ಪಿತಾಂ ।
> ಸಾಲಸ್ಯಾಸ್ತೀರ್ಯ ಸುಗ್ರೀವೋ ನಿಷಸಾದ ಸರಾಘವಃ ॥
> ಲಕ್ಷ್ಮಣಾಯಾಥ ಸಂಹೃಷ್ಟೋ ಹನುಮಾನ್ ಪ್ಲವಗರ್ಷಭಃ ।
> ಶಾಖಾಂ ಚಂದನ ವೃಕ್ಷಸ್ಯ ದದೌ ಪರಮ ಪುಷ್ಪಿತಾಮ್ ॥

ಎನ್ನುವುದನ್ನು ನೋಡತಕ್ಕದ್ದು.

ಸುಗ್ರೀವನ ಈ ಕಾರ್ಯವನ್ನು ನೋಡುವಾಗ ಲಕ್ಷ್ಮಣನ ಹತ್ತಿರ ಪ್ರೀತಿ ಇಲ್ಲದ ಅಪರಾಧವುಂಟು ಎನ್ನುವುದು ಚೆನ್ನಾಗಿ ತಿಳಿಯುತ್ತದೆ. ಈ ಕಾರ್ಯವನ್ನು ಶ್ರೀ ರಾಮಚಂದ್ರನು ಕಣ್ಣಾರೆ ಕಂಡದ್ದರಿಂದ ಮೊದಲು ಸುಗ್ರೀವನೂ ವಾಲಿಯೂ ಯುದ್ಧ ಮಾಡುವಾಗ ವಾಲಿಯನ್ನು ಹೊಡೆಯಲು ಆತನ ಮನಸ್ಸು ಒಪ್ಪದೆ ಇದ್ದಿತು.

ನಂತರ ಸುಗ್ರೀವನು ತನ್ನ ಕಾರ್ಯವನ್ನು ತಿಳಿದು ಲಕ್ಷ್ಮಣನಲ್ಲಿ ಹೇಗೆ ಪ್ರೀತಿಯನ್ನು ತೋರಿಸಬೇಕೋ ಹಾಗೆ ಮಾಡಿದನೆಂದು ಕಂಡು ಬರುವುದಿಲ್ಲ. ಹಾಗಾದರೂ

ತನ್ನನ್ನು ಪಡೆದವರನ್ನು ತನ್ನ ಬಾಸರಲ್ಲಿ ಅಭಿಮಾನಕ್ಕೆ ಪಾತ್ರರನ್ನಾಗಿ ಮಾಡುವುದು ಎಂಬುದು ಪರಮ ಪುರುಷನ ಒಂದು ಶ್ರೇಷ್ಠವಾದ ನೀತಿ. ಈ ನ್ಯಾಯವನ್ನು ಮನಸ್ಸಿನಲ್ಲಿಟ್ಟು ಸುಗ್ರೀವನ ಕತ್ತಿಗೆ ಲಕ್ಷ್ಮಣನ ಕೈಯಿಂದ ಗುರುತಿಗಾಗಿ ಗಜಪುಷ್ಪಮಾಲೆಯನ್ನು ಹಾಕುವ ಮೂಲಕ ಆ ಭಾಗವತೋತ್ತಮನ ಪ್ರೇಮಕ್ಕೆ ಒಳಪಡಿಸಿ ವಾಲಿಯನ್ನು ಎರಡನೆಯ ದಿನದ ಯುದ್ಧದಲ್ಲಿ ಕೊಂದು ಸುಗ್ರೀವನಿಗೆ ಅವನು ಕೇಳಿದ ಫಲವನ್ನು ಅನುಗ್ರಹಿಸಿರುತ್ತಾನೆ. ಶ್ರೀ ರಾಮಚಂದ್ರನು ಇಲ್ಲಿ

"ಕೃತಾಭಿಜ್ಞ್ಯಾನ ಚಿಹ್ನಸ್ತ್ವಂ ಅನಯಾ ಗಜಪುಷ್ಪಯಾ ।
ಲಕ್ಷ್ಮಣೇನ ಸಮುತ್ಪಾಟ್ಯ ಏಷ್ಯಾ ಕಂಠೇ ಕೃತಾ ತವ ॥"

ಈವರೆವಿಗೂ ಹೇಳಿದ ಸುಗ್ರೀವನ ವೃತ್ತಾಂತದಲ್ಲಿ ಆಳವಾಗಿ ಆಲೋಚನೆ ಮಾಡಿ ನೋಡುವಾಗ ಹೊರನೋಟದಲ್ಲಿ ಸತ್ವವು ಇಲ್ಲ. ಒಳನೋಟದಲ್ಲಿಯೇ ಉತ್ತಮನ ಉಕ್ತಿಗೆ ಅಭಿಪ್ರಾಯ ಉಂಟು, ಎಂದು ಹೀಗೆ ತೋರುತ್ತದೆಂದೇ ಹಾಗೆಯೇ ಭರತ ಶರಣಾಗತಿ ಪಂಕ್ತಿಯಲ್ಲಿ ಅಡಕವಾಗಿರುವ ಪುರುಷೋತ್ತಮನ "ವಾನರಾ ರಕ್ಷ ಕ್ಷತ್ರಿಯೋಣಾಪ್ ಅಪ್ರತಿಮಾಯನ ಮಹಾರಥಸ್ಯ ಉತ್ತಿಷ್ಠ ಕ್ಷಿಪ್ರಮ್" ಎನ್ನುವ ಹೇಳಿಕೆಗಳಿಗೂ ಸಾಧಾರಣವಾದ ಪದ್ಯಾರ್ಥದಲ್ಲಿ ಅಭಿಪ್ರಾಯವಿಲ್ಲ. ಅಂತರಾರ್ಥದಲ್ಲಿಯೇ ಇದ್ದ" ಎಂಬುದನ್ನು ನಾವು ತಿಳಿಯಬೇಕಾದುದು ಅವಶ್ಯಕ.

ಆದ್ದರಿಂದ ಭರತನು ಶ್ರೀ ರಾಮನನ್ನು ನ್ಯಾಯರೀತಿಯಿಂದ ಹೊಂದಿದ್ದರೂ ಆ ಪುರುಷಾರ್ಥವು ಶ್ರೀ ರಾಮನ ಮನಸ್ಸಿಗೆ ಇಷ್ಟವಿಲ್ಲದ್ದರಿಂದ ಫಲವಿಲ್ಲವೆಂದು ಕಂಡೆವು. ಈ ವಿಷಯವನ್ನು ದೇಶಿಕರ ಹಾಡಿನಲ್ಲಿಯೂ ಕಾಣೋಣ.

"ರಾಮೇ ರಾಜ್ಯಂ ಪಿತರಿ ಭವತಃ ಸಮ್ಮತಂ ಚ ಪ್ರಜಾನಾಂ ಮಾತುರ್ವಾಕ್ಯಾತ್
ತದಪಿ ಭರತೇ ಸತ್ಯವಾದೀ ದದೌ ಚ ॥ ಚಿತ್ತಾಪೀಠಃ ಸಮಜನಿತಯೋಃ ಪಾದುಕಾ
ಗ್ರ್ಯಾಭಿಷೇಕಃ ಮುನಿರ್ಜ್ಞ್ಯಾನ ಸ್ವಚ್ಛಂದತೋ ಮಹತೋ ದೈವತಂತ್ರ ಪ್ರಮಾಣಂ ॥"

ಈ ವಾಕ್ಯಗಳ ಅರ್ಥ :—

ದಶರಥ ಚಕ್ರವರ್ತಿ ಶ್ರೀ ರಾಮಚಂದ್ರನಿಗೆ ರಾಜ್ಯಾಭಿಷೇಕ ಮಾಡಿ, ರಾಜ್ಯಭಾರವನ್ನು ಆ ಪರಮ ಪುರುಷನ ಹತ್ತಿರ ಕೊಡಲು ನಿಶ್ಚಯಿಸಿದನು. ಆ ಚಕ್ರವರ್ತಿಯ ಇಷ್ಟವನ್ನು ಪ್ರಜೆಗಳೆಲ್ಲರೂ ಒಮ್ಮತದಿಂದ ಇಷ್ಟಪಟ್ಟರು. ಆ ಚಕ್ರವರ್ತಿಯ ಪಟ್ಟದ ರಾಣಿಯಾದ ಕೈಕೇಯಿಯು, ಭರತನಿಗೆ ರಾಜ್ಯಾಭಿಷೇಕ ಮಾಡಿ ರಾಜ್ಯಭಾರವನ್ನು ಅವನ ಹತ್ತಿರ ಇಡಬೇಕೆಂದು ವರ ಕೇಳಿದಳು. ಸತ್ಯವಾದಿಯಾದ ಚಕ್ರವರ್ತಿಯೂ ಅದೇ ರೀತಿ ಕೊಟ್ಟನು. ಆದರೆ ಚಕ್ರವರ್ತಿ ಅಪೇಕ್ಷಿಸಿದ ಹಾಗೆ ಶ್ರೀ ರಾಮನಿಗೂ, ಕೈಕೇಯಿ ಅಪೇಕ್ಷಿಸಿದ ಹಾಗೆ ಭರತನಿಗೂ ರಾಜ್ಯಾಭಿಷೇಕವಾಗಲಿಲ್ಲ. ಒಬ್ಬರೂ ಒಂದು ನಿಮಿಷವೂ ಯೋಚಿಸದ ಶ್ರೀರಾಮಚಂದ್ರನ ಪಾದುಕೆಗಳಿಗೆ ಅಭಿಷೇಕವು ಚೆನ್ನಾಗಿ ನಡೆಯಿತು. ಇದಕ್ಕೆ ಕಾರಣ ಭಗವಂತನ ಸಂಕಲ್ಪವೇ ಆಗಿದೆ.

ಈ ಮಾತುಗಳಲ್ಲಿ "ಶ್ರೀ ರಾಮನು ಅಯೋಧ್ಯಾನಗರಿಗೆ ಹಿಂತಿರುಗಿ ರಾಜ್ಯಾಭಿಷೇಕ ಮಾಡಿಕೊಳ್ಳಬೇಕು" ಭರತನ ಅಭಿಪ್ರಾಯವುಳ್ಳ ಶಬ್ದದಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿಲ್ಲ ಎಂಬುದು ಒಂದು ರೀತಿಯಿಂದ ನಿಜವೇ ಆದರೂ ಚಕ್ರವರ್ತಿಗೂ ಪ್ರಜೆಗಳಿಗೂ ಶ್ರೀ ರಾಮಾಭಿಷೇಕವು ಯಾವ ರೀತಿ ಇಷ್ಟವೋ ಅದೇ ರೀತಿ ಭರತನಿಗೂ ಇಷ್ಟ. ಆದರೆ ಭಗವಂತನಾದ ಶ್ರೀರಾಮನಿಗೆ ಇಷ್ಟವಿಲ್ಲವಾದ್ದರಿಂದ ಸಾಧ್ಯವಾಗಲಿಲ್ಲ.

ಈ ನಿರಿನುಡಿಗಳನ್ನೂ ಇದರ ತಾತ್ಪರ್ಯವನ್ನು ಅನುಭವಿಸುವವರಿಗೆ ಶ್ರೀ ರಾಮನ ಮನಸ್ಸಿಗೆ ಇಷ್ಟವಿಲ್ಲ. ಆದ್ದರಿಂದ ಭರತನು ಪ್ರಾರ್ಥಿಸಿದ್ದು ನಡೆಯಲಿಲ್ಲ ಎಂಬುದು ಚೆನ್ನಾಗಿ ಸ್ಪಷ್ಟಪಡುತ್ತದೆ.

ಈವರೆವಿಗೂ ಹೇಳಿದ್ದರಲ್ಲಿ "ಭಗವಂತನು ಸರ್ವ ಶ್ರೇಷ್ಠನಾದ ಧರ್ಮ ಎನ್ನುವುದು." ಆ ಭಗವಂತನು ಚೇತನನ ಬೇಡಿಕೆಯನ್ನು ತನ್ನನ್ನು ಹೊಂದುವಾಗ ಮಹಾಲಕ್ಷ್ಮಿಯನ್ನು ಪುರುಷಕಾರವಾಗಿ ಮುಂದಿಡುವುದನ್ನೂ ಅಪೇಕ್ಷಿಸುತ್ತಾನೆ ಎನ್ನುವುದೂ "ಈ ಚೇತನನು ಆ ಭಗವಂತನನ್ನು ಪಡೆಯುವಾಗ ಅವನ ಮನಸ್ಸಿಗೆ ಹಿತವಾಗಿ ಇರಬೇಕು" ಎನ್ನುವುದನ್ನು ರಾಮಾಯಣದಲ್ಲಿಯೇ ಒಂದು ರೀತಿ ತಿಳಿಯತಕ್ಕದ್ದಾಗಿದೆ. ಇನ್ನು ಈ ರೀತಿಯಾದ ಧರ್ಮವು ರಾಮಾಯಣದಲ್ಲಿ ಸ್ಥಾಪಿಸಲ್ಪಟ್ಟು ಇರುವ ಸ್ಥಳವನ್ನು ನೋಡೋಣ.

ಆದರೆ "ಧರ್ಮವು ಎರಡು ವಿಧವಾಗಿರುತ್ತದೆ. ಈ ಚೇತನನು ಪ್ರಯತ್ನಿಸಿ ಮಾಡುವಾಗ ಉಂಟಾಗುವುದು ಒಂದು, ಯಾವಾಗಲೂ ಇರುವುದು ಮತ್ತೊಂದು. ಭಗವಂತನೆಂದು ಇರುವ ಶ್ರೇಷ್ಠಧರ್ಮವೊಂದು, ಎಂದು ಮೊದಲೇ ಹೇಳಿದ್ದೆವು.

ಈ ಅಭಿಪ್ರಾಯವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ನೋಡುವವರಿಗೆ ಚೇತನನು ಪ್ರಯತ್ನಿಸಿ ಮಾಡುವಾಗ, ಉಂಟಾಗುವ ಧರ್ಮ ದಿನೇ ದಿನೇ ನಾಶಹೊಂದುವುದರಿಂದ ಆ ಧರ್ಮ ಸ್ಥಿರವಾಗಿರಬೇಕಾದರೆ ಒಂದು ವಸ್ತು ಬೇಕು. ಎಲ್ಲೆಲ್ಲಿಯೂ ನಿತ್ಯವಾಗಿರುವ ಭಗವಂತನೆಂಬ ಧರ್ಮವನ್ನು ಪರಮಾತ್ಮನು ಅವತಾರ ಮಾಡಿ ಸ್ಥಾಪಿಸುವುದಾದರೂ ಏಕೆ ? ಎನ್ನುವ ಸಂದೇಹವುಂಟಾಗಬಹುದು. ಈ ಸಂಶಯಕ್ಕೆ ರಾಮಾಯಣದ ವಿಭೀಷಣ ಶರಣಾಗತಿ ಭಾಗದಲ್ಲಿ ಅಡಕವಾಗಿರುವ ಮಾತುಗಳನ್ನು ವಿವರಿಸುತ್ತೇನೆ.

"ಶ್ರೀ ರಾಮಚಂದ್ರನು ಸಮುದ್ರತೀರದಲ್ಲಿ ವಾನರಸೇನೆಗಳೊಂದಿಗೂ, ಸುಗ್ರೀವ ಲಕ್ಷ್ಮಣರೊಂದಿಗೂ ಇರುವ ಸಮಯದಲ್ಲಿ ಆ ಲಂಕೆಯಲ್ಲಿ ರಾವಣನು ತನಗೆ ಹಿತವಚನವನ್ನು ಹೇಳಿದ ವಿಭೀಷಣನನ್ನು ಅನೇಕ ರೀತಿಯಲ್ಲಿ ನಿಂದಿಸಲು, ಆ ನಿಂದೆಯನ್ನು ಸಹಿಸಲಾರದೆ, ಆ ವಿಭೀಷಣನು ಗದೆಯನ್ನು ಕೈಯಲ್ಲಿ ಹಿಡಿದು, ನಾಲ್ಕು ರಾಕ್ಷಸರುಗಳೊಂದಿಗೆ ಆಕಾಶಮಾರ್ಗವಾಗಿ ಹೊರಟು "ಮಡಕ್ಷ್ಯಶ್ಚ ಅನ್ತರಿಕ್ಷಸ್ಥಮ್" ಎಂಬ ಉತ್ತರ ತೀರದ ಆಕಾಶದಲ್ಲಿಯೇ ನಿಂತಿರಲು, ಅದನ್ನು ಕಂಡ ಎಲ್ಲಾ ವಾನರರುಗಳೂ ರಾವಣನ ತಮ್ಮನಾಗಿದ್ದರೂ, ಲಂಕೆಯಿಂದ ಬಂದಿದ್ದರೂ, ಈ ರಾಕ್ಷಸನು ಭಗವಂತನಿಗೆ ಏನು ತೊಂದರೆ ಬರುತ್ತದೋ ಎಂದು ತಮ್ಮ ಪ್ರೇಮಕ್ಕೆ ತಕ್ಕ ಹಾಗೆ ಅಂಜಿ, ಆ

ರಾಕ್ಷಸರನ್ನು ನಾಶಮಾಡಲು ನಿಶ್ಚಯಿಸಿ, ತಮ್ಮ ಕೈಗಳಲ್ಲಿ ಮರಗಳನ್ನು, ಪರ್ವತ ಶಿಖರಗಳನ್ನು ಇಟ್ಟು ಸಿದ್ಧರಾಗಿರಲು ಆ ವಾನರರುಗಳ ಸ್ಥಿತಿಯನ್ನು ಕಣ್ಣಾರೆ ಕಂಡಿದ್ದರೂ, ಅವರುಗಳ ರಾಮಭಕ್ತಿಯನ್ನು ಪ್ರಶಂಸಿಸಿ, 'ವಾನರರುಗಳ ಮುಖಾಂತರ ಶ್ರೀರಾಮನನ್ನು ಹೊಂದುವುದೇ ನ್ಯಾಯ' ಎಂದು ನಿಶ್ಚಯಿಸಿ ಆ ಕಪಿಗಳನ್ನು ಗೌರವದಿಂದ ಕಂಡು ಅವರುಗಳನ್ನು ಮುಂದಿಟ್ಟುಕೊಂಡು ಶ್ರೀ ರಾಮನನ್ನು ಪಡೆದಿರುತ್ತಾನೆ. 'ವಿಭೀಷಣ' ಎನ್ನುವ ವೃತ್ತಾಂತವನ್ನು ಇಲ್ಲಿ ಮೊದಲು ತಿಳಿಯಬೇಕು.''

ಈ ರೀತಿ ಶ್ರೀ ರಾಮಚಂದ್ರನನ್ನು ವಿಭೀಷಣನು ಸೇರುವ ಕಾಲದಲ್ಲಿ ವಿಭೀಷಣನು ಹೇಳಿದ ವಾಕ್ಯಗಳು :—

1. ರಾವಣೋ ನಾಮ ದುರಾತ್ಮಾ ರಾಕ್ಷಸೋ ರಾಕ್ಷಸೇಶ್ವರಃ ।
ತಸ್ಯಾಹಮ್ ಅನುಜೋ ಭ್ರಾತಾ ವಿಭೀಷಣ ಇತಿ ಶ್ರುತಃ ॥

2. ತೇನ ಸೀತಾ ಜನಸ್ಥಾನಾದ್ಧೃತಾ ಹತ್ವಾ ಜಟಾಯುಷಮ್ ।
ರುದ್ಧಾ ಚ ವಿವಶಾ ದೀನಾ ರಾಕ್ಷಸೀಭಿಸ್ ಸುರಕ್ಷಿತಾ ॥

3. ತಮಹಂ ಹೇತುಭಿರ್ವಾಕ್ಯೈರ್ವಿವಿಧೈಶ್ಚ ನ್ಯದರ್ಶಯಮ್ ।
ಸಾಧು ನಿರ್ಯಾತ್ಯತಾಮ್ ಸೀತಾ ರಾಮಾಯೇತಿ ಪುನಃ ಪುನಃ ॥

4. ಸಚ ನ ಪ್ರತಿ ಜಗ್ರಾಹ ರಾವಣಃ ಕಾಲಚೋದಿತಃ ।
ಉಚ್ಯಮಾನಮ್ ಹಿತಂ ವಾಕ್ಯಮ್ ವಿಪರೀತ ಇವೌಷಧಂ ॥

5. ಸೋಽಹಮ್ ಪರುಷಿತಸ್ತೇನ ದಾಸವಚ್ಚಾವಮಾನಿತಃ ।
ತ್ಯಕ್ತ್ವಾ ಪುತ್ರಾಂಶ್ಚ ದಾರಾಂಶ್ಚ ರಾಘವಂ ಶರಣಂ ಗತಃ ॥

6. ಸರ್ವಲೋಕ ಶರಣ್ಯಾಯ ರಾಘವಾಯ ಮಹಾತ್ಮನೇ ।
ನಿವೇದಯತ ಮಾಂಕ್ಷಿಪ್ರಂ ವಿಭೀಷಣ ಮುಪಸ್ಥಿತಂ ॥

ಇದರ ತಾತ್ಪರ್ಯ

(1) ಭಗವಂತನನ್ನು ಸೇರುವವನು ತನ್ನ ದೋಷಗಳನ್ನು ನಿರ್ವಂಚನೆಯಾಗಿ ಹೇಳಿ ಅವನನ್ನು ಹೊಂದಬೇಕು ಎನ್ನುವ ನ್ಯಾಯವನ್ನು ಕೈಕೊಂಡ ವಿಭೀಷಣನು ಶ್ರೀ ರಾಮನಿಗೇ ಸ್ವಾಂತವನಾಗಿ ಇರುವುದಲ್ಲದೆ ಪ್ರಪಂಚವನ್ನೆಲ್ಲಾ ನಡುಗಿಸುವ ಹಾಗೆ ಮಾಡುವವನೂ ಈ ರೀತಿ ದೋಷವುಳ್ಳವನೆಂದು ಪ್ರಸಿದ್ಧಿ ಪಡೆದವನೂ, ದುರ್ಗುಣತೆಯುಳ್ಳವನೂ, ರಾಕ್ಷಸನೂ, ಎಲ್ಲರಿಗೂ ಉತ್ತರನೂ ಆದ ರಾವಣನಿಗೂ ಸ್ವಂತದವನಾಗಿದ್ದು ಈವರೆವಿಗೂ ಅವನಿಗೆ ಸೇವೆ ಮಾಡಿ ಅವನೊಂದಿಗೆ ಹತ್ತು ತಿಂಗಳು ಇದ್ದು ಜನಿಸಿದವನೂ ಎಲ್ಲರನ್ನೂ ನಡುಗಿಸುವವನೂ ಆದ್ದರಿಂದ ವಿಭೀಷಣ ಎಂದು ಪ್ರಸಿದ್ಧಿ ಪಡೆದವನು 'ನಾನು' ನಾನು. ಸೆಪ್ಪುವಿರಲು ಹೇಳಿದ ರಾವಣನಿಗೆ ಅವನಿಗೆ ಸೇರಿದ

ದೋಷಗಳು ಮಾತ್ರವಲ್ಲದು. ನನಗೆ ನನ್ನದಾಗಿರುವ ದೋಷಗಳೂ ಅವನ ಸಂಪರ್ಕ ದಿಂದುಂಟಾದ ಪಾಪಗಳೂ ಇವೆ. ಆದ್ದರಿಂದ ನನ್ನ ಪಾಪಗಳು ಅತ್ಯಧಿಕ ಎನ್ನುತ್ತಾನೆ.

(2) ಅನಂತರವೂ ಆ ವಿಭೀಷಣನು ಹೇಳಿದ್ದೇನೆಂದರೆ : ಆ ರಾವಣನು ಅಯೋಧ್ಯೆಯಲ್ಲಿರುವುದು ನಿಜ ಎನ್ನುವಂತೆ ಇಂದ್ರಿಯಕ್ಕೆ ಮತ್ತೂ ಹಿತಕರವಾದ ಜನ ಸ್ಥಾನದಿಂದ ಸಂಚಿತವನ್ನೂ, ಪ್ರಾಣವನ್ನೂ ಬೇರ್ಪಡಿಸುವಂತೆ ಸೀತಾದೇವಿಯನ್ನು ಶ್ರೀ ರಾಮಚಂದ್ರನನ್ನು ಬೇರ್ಪಡಿಸಿ ಆ ರಾಮಭದ್ರನಿಗೆ ಪ್ರಾಣಸಮಾನನಾದ ಜಟಾಯು ವನ್ನು ಕೊಂದು ತನ್ನ ಅಶೋಕವನದಲ್ಲಿ ಆ ಸೀತಾದೇವಿಯನ್ನು ತಂದಿಟ್ಟು ಎಲ್ಲಿಯೂ ಹೋಗಗೊಡದೆ ರಾಕ್ಷಸಿಯರನ್ನು ಕಾವಲಾಗಿ ಇಟ್ಟಿದ್ದನು. ಹಾಗೂ ಸೀತಾದೇವಿಯ ಹತ್ತಿರವೂ ಜಟಾಯುವಿನಲ್ಲಿಯೂ ಅಸಾಧ್ಯವಾದ ಅಪರಾಧವನ್ನು ಮಾಡಿದವನಾದ ರಾವಣನ ನಂತರ ಹುಟ್ಟಿದವನು ನಾನು ಎನ್ನುವುದು.

(3) ಹಾಗೂ ಆ ವಿಭೀಷಣನು ಹೇಳಿದ್ದು ಯಾವುದೆಂದರೆ :—ಹೇ ರಾವಣಾ ! ನೀನು ರಾಮಚಂದ್ರನಿಗೆ ಸೇರಿದ ಆ ಸೀತಾದೇವಿಯನ್ನು ಆ ಭಗವಂತನ ಹತ್ತಿರ ಪುನಃ ಕರೆದುಕೊಂಡು ಹೋಗಿ ಸೇರಿಸಿಬಿಡು ಎಂದೂ " ನಾನು ಹೇಳಿದ ಹಾಗೆ ಮಾಡದಿದ್ದರೆ ನೀನು ನಾಶವಾಗುತ್ತೀ ಎಂದು ಅವನಿಗೆ ಆಗಾಗ್ಗೆ ತಿಳಿಯಪಡಿಸಿದೆನು " ಎನ್ನುವಂತೆ.

(4) ಇನ್ನು ಕಟ್ಟಕಡೆಯದಾಗಿ ಬಿದ್ದು ಸಾಯಬೇಕಾದವನು ಔಷಧ ವನ್ನು ಹೇಗೆ ತೆಗೆದುಕೊಳ್ಳದೆ ಇರುತ್ತಾನೋ, ಹಾಗೆಯೇ ಯಮನಿಂದ ತೊಂದರೆಗೊಳ ಗಾದ ಆ ರಾವಣನು ನಾನು ಹೇಳಿದ ಹಿತವಚನಗಳನ್ನು ಕಿವಿಗೆ ಹಾಕಿಕೊಳ್ಳಲೇ ಇಲ್ಲ ಎಂದೂ ಹೇಳಿದನು ವಿಭೀಷಣ

(5) ಮತ್ತೂ ವಿಭೀಷಣನು ವಿವರಿಸಿದ್ದೇನೆಂದರೆ :—ನನ್ನ ಹಿತವಚನವನ್ನು ಹೇಳಿದ್ದೇ ಕಾರಣವಾಗಿ, ಅವನೂ, ಅವನನ್ನು ಸೇರಿದವರೂ ನನ್ನನ್ನು ಅವಮಾನ ಪಡಿಸಿ ದರು. ಆದ್ದರಿಂದ, ನನ್ನ ಪತ್ನಿಯರನ್ನೂ, ಪುತ್ರರುಗಳನ್ನೂ ಬಿಟ್ಟು ಬಿಟ್ಟು ಶ್ರೀ ರಾಮ ಚಂದ್ರನನ್ನೇ ಗತಿಯನ್ನಾಗಿ ಬಂದವನು ನಾನು ಎನ್ನುತ್ತಾನೆ.

(6) ಈ ರೀತಿ ಹೇಳಿ ನಂತರವೂ ಆ ವಿಭೀಷಣನು ಬೇಡಿಕೊಂಡಿದ್ದು ಯಾವುದು? " ವಾನರ ವೀರರೇ ! ಭಗವಂತನು ಯಾವ ಚೇತನನನ್ನು ರಕ್ಷಿಸಬೇಕೆಂದು ಮನಸ್ಸಿನಲ್ಲಿ ಎಣಿಸುತ್ತಾನೋ, ಆ ಚೇತನನೇ ಪ್ರಾಮಾಣಿಕನಾಗುತ್ತಾನೆ. ಆ ಪರಮಾತ್ಮನಾದ ಶ್ರೀ ರಾಮಚಂದ್ರನು ಈ ವಿಭೀಷಣನನ್ನು ರಕ್ಷಿಸುವ ಮನಸ್ಸುಳ್ಳವನಾಗಿದ್ದಾರೆ. ಇವನಿಗೆ ಯೋಗ್ಯತೆ ಉಂಟು, ಆ ವಾತ್ಸಲ್ಯವನ್ನು ನಾನು ಪಡೆಯಬೇಕು. "

ಆ ರೀತಿ ಹೇಳುತ್ತಾ ದಯವಿಟ್ಟು ಮಾಡಬೇಕಾದ್ದು ಏನು ? ಎಂದರೆ ಅತ್ಯಧಿಕ ಆರ್ತನಾಗಿ ಆ ಲಂಕೆಯಿಂದ ಬಂದಿರುವ ಈ ವಿಭೀಷಣನನ್ನು ಶ್ರೀ ರಾಮಚಂದ್ರನಿಗೆ ಪರಿಚಯ ಮಾಡಿಕೊಡಬೇಕು.

ನೀವುಗಳು ನನ್ನ ಆಗಮನವನ್ನು ತಿಳಿಸುವ ಸಮಯದಲ್ಲಿ " ಶ್ರೀ ರಾಮ ಚಂದ್ರನಿಗೆ ಈ ವಿಭೀಷಣನು ಶರಣಾದರೆ ಉತ್ತಮ " ಎನ್ನುವ ನನಗಿರುವ ಈ

ಅಭಿರುಚಿ ಪರಿವರ್ತನೆ ಆಗುವುದಕ್ಕೆ ಮೊದಲು ಅತಿ ಶೀಘ್ರವಾಗಿ ತಿಳಿಸಿದರೆ ಒಳ್ಳೆಯದು, ನನ್ನನ್ನು ಆ ಶ್ರೀ ರಾಮನು ಮನಸಂತೋಷದಿಂದ ಸ್ವೀಕರಿಸಿ ಸೇವೆಯನ್ನು ಸಲ್ಲಿಸುವ ಹಾಗೆ ಮಾಡುವುದು, ನಿಮಗೆ ತಕ್ಕ ಸೇವೆಯಾಗಿದೆ ಆ ಭಗವಂತನು ಸ್ವೀಕರಿಸಿ ಸೇವೆಯನ್ನು ಪಡೆದು ಸಂತುಷ್ಟನಾದರೆ ಅವನಿಗೆ ಅದು ಉಚಿತವಾಗಿರುತ್ತದೆ.

ನೀವುಗಳು ಈ ಚೇತನನನ್ನು ಪರಮಾತ್ಮನು ಸಂತೋಷದಿಂದ ಸ್ವೀಕರಿಸುವ ಹಾಗೆ ಮಾಡುವವರಾದ್ದರಿಂದ ಆ ರೀತಿ ಮಾಡದಿದ್ದರೆ, ನಿಮ್ಮ ಸ್ಥಿತಿ ನಿಮ್ಮನ್ನು ಬಿಟ್ಟು ಬೇರೆಯಾಗುವುದಲ್ಲವೆ ? ಆದ್ದರಿಂದ ನಿಮಗೆ ಖ್ಯಾತಿ ಉಂಟು

ಆ ಭಗವಂತನು ನೀವುಗಳು ನನ್ನ ಆಗಮನವನ್ನು ತಿಳಿಸಿದ ನಂತರವೂ ಕೂಗುವುದೂ, ಬಿಡುವುದನ್ನು ಮಾಡದೆ ಇದ್ದರೆ, ನನ್ನನ್ನು ಮನಸ್ಸಿಗೆ ತೆಗೆದುಕೊಂಡು ಸೇವೆಯನ್ನು ತೆಗೆದುಕೊಳ್ಳದೇ ಇದ್ದರೆ, ಆ ಪರಮಾತ್ಮನು ತನ್ನ ಸ್ಥಿತಿಯಿಂದಲೂ ತಪ್ಪಿದವನಾಗುವನಲ್ಲವೇ ?

ಭಗವಂತನಲ್ಲಿ ಅತ್ಯಧಿಕ ಪ್ರೀತಿಯನ್ನು ಪಡೆದಿರುವ ನಿಮ್ಮಗಳನ್ನು ಆ ಪರಮಾತ್ಮನನ್ನೂ ಸಂತೋಷ ಪಡಿಸುವುದು ದಾಸನಾದ ನನ್ನ ಸ್ಥಿತಿಗೆ ತಕ್ಕದಾದದ್ದು ಸರಿಹೊಂದುವುದಾಗಿರುತ್ತೆ. ಆ ರೀತಿ ಒಪ್ಪಿಕೊಳ್ಳದಿದ್ದರೆ ನಾನು ಇರುವುದು. ಅದು ನನ್ನ ಸ್ಥಿತಿಗೆ ನಾಶವನ್ನುಂಟುಮಾಡುತ್ತದೆಯಲ್ಲವೆ ? ಒಪ್ಪಿಕೊಳ್ಳದೆ ಇರುವಾಗಲೇ ಆಶೆಯನ್ನು ಉಂಟುಮಾಡುವುದೆನ್ನುವಾಗ, ನಿಮ್ಮನ್ನೂ ಆ ಭಗವಂತನನ್ನು ನಿಮಗೂ ಅವನಿಗೂ ಇರುವ ಅಂಥಾ ಸ್ಥಿತಿಯಲ್ಲಿ ನಿಂತೂ ಕಡೆಗಣಿಸುವ ದೃಷ್ಟಿಯಿಂದ ನಾಶ ಹೊಂದಿದ್ದೇ ಆದರೆ ನನ್ನ ಗತಿ ಏನಾಗಬಹುದು ?

ಆದ್ದರಿಂದ ನೀವುಗಳು ನನ್ನ ಆಗಮನವನ್ನು ತಕ್ಷಣ ತಿಳಿಸಿದರೆ ನಿಮಗೆ ಒಳ್ಳೆಯದಾಗುತ್ತೆ. ಆ ಪರಮಾತ್ಮನು ನನ್ನನ್ನು ಸ್ವೀಕರಿಸಿ ಸೇವೆಯನ್ನು ಮಾಡಿಸಿಕೊಳ್ಳುವಾಗ ಅವನಿಗೆ ಹಿಂದೆಯುಂಟು. ನಾನು ನಿಮ್ಮ ಗುಂಪಿನಲ್ಲಿ ಒಬ್ಬನಾಗಿ ಸೇವೆ ಮಾಡುವಾಗ ನನಗೂ ಒಳ್ಳೆಯದಾಗುತ್ತೆ. ಈ ರೀತಿಯಾಗಿ ಎಲ್ಲರೂ ಕ್ಷೇಮವನ್ನು ಪಡೆದು ಬಾಳುವ ಹಾಗೆ ನೀವು ತಿಳಿಸಿದರೆ ಉತ್ತಮ.

ಎಲ್ಲಾ ಲೋಕಗಳನ್ನು ರಕ್ಷಿಸುವವನು ಪರಮಾತ್ಮನಲ್ಲವೆ ? ಆ ಸರ್ವಲೋಕಗಳಲ್ಲಿ ನಾನೂ ಒಬ್ಬನಲ್ಲವೇ ? ಆ ಭಗವಂತನ ಅನುಗ್ರಹಕ್ಕೆ ಪಾತ್ರರಾಗದವರೂ ಉಂಟೋ ? ರಾವಣನ ತಮ್ಮನೂ, ಶತ್ರುವೂ ಆದ ನನ್ನನ್ನು ಪರಮಾತ್ಮನಿಗೆ ತಿಳಿಯಪಡಿಸುವುದು ಏಕೆ ? ಎನ್ನಬೇಡಿ, ಈ ಪ್ರಪಂಚದಲ್ಲಿರುವವರೆಲ್ಲರೂ ಒಂದಾಗಿ ಸೇರಿ, ಪ್ರತಿಭಟಿಸಿದರೂ ಆ ಬಲಯುತನಾದ ಪರಮಾತ್ಮನಿಗೆ ಕೇಡುಂಟಾಗಲು ಕಿಂಚಿತ್ತಾದರೂ ಅವಕಾಶವುಂಟೋ ? ಶರಣು ಹೊಂದಿದವರನ್ನು ರಕ್ಷಿಸುವ ವಂಶದಲ್ಲಿ ಅವತರಿಸಿದ ಮಹಾತ್ಮನಲ್ಲವೇ ? ಆ ಪರಮಾತ್ಮನ ಅವನ ಪರವಾಗಿ ಎಲ್ಲರಿಗೂ ಒಳ್ಳೆಯದಾಗುವ ಹಾಗೆ ತಿಳಿಯಪಡಿಸಿರಿ ಎನ್ನುವುದು.

ಆ ರೀತಿ ವಿಭೀಷಣನು ತಿಳಿಸುವ ಸಮಯದಲ್ಲಿ ಶ್ರೀ ರಾಮನಲ್ಲಿ ಆಶ್ರಿತರು

ಪ್ರೇಮವನ್ನಿಟ್ಟಿದ್ದ ಸುಗ್ರೀವನು ಮೇಲೆ ಹೇಳಿರುವ ವಿಭೀಷಣನ ಮಾತುಗಳನ್ನು ಕೇಳಿ ಅತ್ಯಧಿಕ ವೇಗದಿಂದ ಭಗವಂತನ ಹತ್ತಿರ ಹೋಗಿ ಒಂದು ಮಾತನ್ನು ಬಿನ್ನವಿಸಿ ಕೊಂಡನು.

"ಅಯೋಧ್ಯಾ ನಗರವನ್ನು ಬಿಟ್ಟು ಬಂದು ಅನೇಕ ದಿನಗಳಾಯಿತಲ್ಲ. ರಾಜ ನೀತಿಯನ್ನು ಮರೆತೆಯೋ, ಈ ಸ್ಥಳವು ಲಂಕೆಗೆ ಅತಿ ಸಮೀಪವಲ್ಲವೇ ? ರಾವಣನ ಅನೀತಿಗಳು ತಿಳಿಯಲಿಲ್ಲವೋ ? ಒಬ್ಬನು 'ಶರಣು' ಎನ್ನುವ ನುಡಿಯನ್ನು ಹೇಳಿ ದಾಗ ಈ ವಿಷಯಗಳನ್ನು ಮರೆತು ಬಿಡಬಹುದೇ ?"

ವಧ್ಯತಾಂ ಏಷ ತೀವ್ರೇಣ ದಂಡೇನ ಸಚಿವೈಸ್ಸಹ ।
ರಾವಣಸ್ಯ ನೃಶಂಸಸ್ಯ ಭ್ರಾತಾಹ್ಯೇಷ ವಿಭೀಷಣಃ ॥

ಇವನನ್ನು ಬಂಧಿಸಿ ಇಟ್ಟರೆ ಮಾರೀಚನ ಹಾಗೆ ಬರುವ ಸಮಯದಲ್ಲಿ ತೊಂದರೆ ಕೊಟ್ಟವಂತಹ ಬಾಣಗಳಿಂದ ಬಿಡುಗಡೆ ಮಾಡಲಾರೆವು. ಕೊಂದೇಬಿಡುವೆವು ಆ ರೀತಿ ಕೊಲ್ಲುವಾಗ ಮೊದಲು ಸ್ವಾಮಿಯವರನ್ನು ಒಳ್ಳೆಯತನದಿಂದ ಸೇರಿಸಿಕೊಳ್ಳಲು ಬಂದ ಈ ನಾಲ್ವರನ್ನೂ ತಲೆ ಕತ್ತರಿಸಿ ಇವನ ಕೈಯಲ್ಲಿ ಕೊಟ್ಟು ನಂತರ ಇವನನ್ನು ಕೊಲ್ಲು ತ್ತೇವೆ. ಇವನು ರಾವಣನ ಒಡಹುಟ್ಟಿದವನಲ್ಲವೆ ? ಆ ರಾವಣನು ಹೆತ್ತ ತಾಯಿ ಯನ್ನು ತಂದೆಯನ್ನು ನೋಡದೆ ಇರುವವನಲ್ಲವೆ ? ಪ್ರಾಣವನ್ನೂ ಶರೀರವನ್ನೂ ಬೇರ್ಪಡಿಸದ ಹಾಗೆ ಯಾವಾಗಲೂ ಅಗಲದ ಸೀತಾದೇವಿಯನ್ನೂ ಪರಮಾತ್ಮನಾದ ಸ್ವಾಮಿಯವರನ್ನೂ ಸಮುದ್ರ ಒಂದು ಕಡೆ ಪರ್ವತ ಒಂದು ಕಡೆ ಮಾಡಿದ ಕಾರ್ಯಕ್ಕೆ ಇವನೂ ಒಂದು ಅಂಗ ಎಂದು ಹೇಳುವ ಹಾಗೆ ತಿಳಿಯುತ್ತಿದ್ದುವವನಲ್ಲವೆ ? ಎನ್ನುವುದೆ ಆ ಸುಗ್ರೀವನು ಹೇಳಿರುವ ಮಾತುಗಳು.

ಈ ಮಾತುಗಳನ್ನು ಕೇಳಿಸಿಕೊಂಡ ಶ್ರೀ ರಾಮಚಂದ್ರನು ವಾನರರುಗಳನ್ನು ನೋಡಿ ಹೇಳಿದ ಮಾತುಗಳು ಯಾವುದೆಂದರೆ :—

" ಸುಹೃದಾ ಹ್ಯರ್ಥ ಕೃಚ್ಛ್ರೇಷು ಯುಕ್ತಂ ಬುದ್ಧಿಮತಾ ಸತಾ ।
ಸಮರ್ಥೇನಾಪಿ ಸಂದೇಷ್ಟುಂ ಶಾಶ್ವತೀಂ ಭೂತಿ ಮಿಚ್ಛತಾ ॥

ಈ ಮಾತುಗಳ ತಾತ್ಪರ್ಯ ಕೆಳಕಂಡಂತೆ ಇದೆ :—

"ವಾನರರುಗಳೇ ! ನಮ್ಮನ್ನು ಶರಣು ಹೊಂದಿರುವ ವಿಭೀಷಣನು ತನ್ನನ್ನು ನಾವು ಸ್ವೀಕರಿಸದಿದ್ದರೆ ಜೀವಿಸಲಾರ.

ಈ ವಿಭೀಷಣನನ್ನು ನಾವು ಸ್ವೀಕರಿಸಿದರೆ ನಿಮ್ಮ ಮಹಾರಾಜರು ಜೀವಿಸ ಲಾರರು. ಶರಣು ಹೊಂದಿದವನನ್ನು ಸ್ವೀಕರಿಸುವುದೂ ನಮ್ಮಲ್ಲಿ ಅತ್ಯಧಿಕ ಪ್ರೇಮ ವುಳ್ಳ ಮಹಾರಾಜರ ಮಾತನ್ನು ಕೇಳುವುದು ನಮಗೆ ಶ್ರೇಷ್ಠ. ನಲ್ಲಿ ಆಶ್ರಯಿಸಿ ಬಂದವನನ್ನು ದಯಾಗುಣವುಳ್ಳ ಕುಲದಲ್ಲಿ ಹುಟ್ಟಿದ ರಾಮನು ಶರಣು ಹೊಂದಿದವ

ರನ್ನು ಕೈಬಿಟ್ಟನೆನ್ನುತ್ತಾರೆ. ಮಹಾರಾಜರು ಹೇಳಿದ್ದನ್ನು ಮಾಡದಿದ್ದರೆ, ತನ್ನನ್ನು ಪಡೆದವರ ಹತ್ತಿರ ಪರತಂತ್ರನಾಗಿರುವವನು, ಸುಗ್ರೀವನೂ ಹೇಳಿದ್ದನ್ನು ಮಾಡಲಿಲ್ಲ ಎನ್ನುತ್ತಾರೆ.

ಈ ರೀತಿ ಎರಡು ವಿಚಾರಗಳನ್ನೂ ಮಾಡಲೇ ಬೇಕಾಗಿರುವುದರಿಂದ ಒಂದಕ್ಕೊಂದು ವಿರೋಧವಾಗಿರುವುದರಿಂದ ಮಾಡುವುದೇ ? ಇಲ್ಲವೇ ಮಾಡಲಾರದೆ ಬಿಟ್ಟು ಬಿಡುವುದೇ ಎಂದು ಪರಿತಪಿಸುವ ಸ್ಥಿತಿಯಲ್ಲಿರುವ ನನಗೆ ಇದು ಮಾಡಲು ಯೋಗ್ಯ, ಇದು ಮಾಡಬಾರದು ಎಂದು ತಿಳಿದಂತಹವರು, ನೆನಸಿದ್ದನ್ನು ನಡೆಯಿಸುವಂತಹ ಚಿತ್ತವೃತ್ತಿಗಳು ನಾಶವಾಗುವ ವಸ್ತುವಿನಲ್ಲಿ ದೃಷ್ಟಿ ಇಡದ, ಅತ್ಯಧಿಕ ಪ್ರೇಮವನ್ನು ಅಪೇಕ್ಷಿಸುವವರೂ, ನೊಂದವರನ್ನು ಕಂಡರೆ ತಡೆಯಲಾರದೆ ಅಯ್ಯೋ, ಎಂದೆನ್ನುವವರೂ ಉತ್ತಮ ಸ್ನೇಹಿತರುಗಳೂ ಆದ ನೀವುಗಳು ನನ್ನ ದುಃಖ ನೀಗುವಂತೆ ಆಲೋಚಿಸಿ ಹೇಳುವುದು ಸೂಕ್ತವಲ್ಲವೆ ಹೇಳಿರಿ. ಮೇಲೆ ಹೇಳಿರುವ ಮಾತಿನಲ್ಲಿ ಅಡಕವಾಗಿರುವ "ಶಾಶ್ವತೀಂ ಭೂತಿಂ ಇಚ್ಛತಾಂ" ಎನ್ನುವ ವಾಕ್ಯ ಇಲ್ಲಿ ಆಳವಾಗಿ ಅಭ್ಯಸಿಸತಕ್ಕದ್ದು.

ಈ ಭಾಗದಲ್ಲಿ ಪ್ರಕಟವಾಗುವ ಶ್ರೀ ರಾಮಚಂದ್ರನ ಮನೋಭಿಪ್ರಾಯ ಅತ್ಯಂತ ಸುಂದರವಾದದ್ದು. ಆ ತಾತ್ಪರ್ಯವೇನು :– ನಿಮ್ಮ ಮಹಾರಾಜರು ನಮ್ಮ ಶರೀರಕ್ಕೆ ರಾವಣನ ತಮ್ಮನಾದ ವಿಭೀಷಣನಿಂದ ಏನು ತೊಂದರೆ ಬರುತ್ತದೆಯೋ ? ಎಂದು ಭಯ ಪಡುತ್ತಾರೆ. ಈ ಶರೀರವು ಯಾವತ್ತಿಗೂ ನಾಶವಾಗದೆ ಇರುವ ಪ್ರಿಯವಸ್ತುವಲ್ಲ. ಶರಣಾಗತನಾದವನು ಯಾವನಾದರೂ ಆಗಿರಬಹುದು. ಅವನನ್ನು ಬಿಡದೆ ರಕ್ಷಿಸುವಾಗ ಉಂಟಾಗುವ ಪ್ರಶಂಸನೀಯ ಶರೀರವು ಯಾವತ್ತಿಗೂ ನಾಶವಾಗುವುದಿಲ್ಲ. ನೀವು ಹೇಳುವ ಮಾತುಗಳು ನಮಗೆ ಪ್ರಶಂಸನೀಯ ಶರೀರವನ್ನುಂಟು ಮಾಡುವುದಾಗಿರಬೇಕು ಎನ್ನುವುದಾಗಿದೆ.

ಮೇಲೆ ಹೇಳಿರುವ ಸಾರಾಂಶವನ್ನು ನೋಡಿದ್ದರಲ್ಲಿ ಯಾವತ್ತಿಗೂ ಇರುವ ನಿತ್ಯನಾದ ಭಗವಂತನೆಂಬ ಧರ್ಮಕ್ಕೂ ಒಂದು ವಿಧವಾದ ಬಾಧೆಯು ಬರಲು ಅವಕಾಶವುಂಟು ಎನ್ನುವುದು ಚೆನ್ನಾಗಿ ಪ್ರಕಟವಾಗುತ್ತದೆ. ಶ್ರೀ ರಾಮಚಂದ್ರನು ವಿಭೀಷಣನನ್ನು ಬಿಡದೆ ರಕ್ಷಿಸುವುದಾದರೆ ಆ ಭಗವಂತನನ್ನು ಬಿಟ್ಟು ಧರ್ಮದ ಮೇಲೆ (ಆಶ್ರಯಿಸಿದವರಿಗೆ ನಲ್ಮೆ ನೀಡುವಂತಹ) ಆಗಲಾರದು. ಸುಗ್ರೀವನು ಅತ್ಯಧಿಕ ಪ್ರೇಮಾತಿಶಯದಿಂದ ತತ್ತರಿಸಿ ವಿಭೀಷಣನನ್ನು ಕೊಂದೇ ತೀರಬೇಕು ಎಂದು ಹೇಳಿದ ಮಾತು ಧರ್ಮವಾಗಿರುವ ರಾಮನನ್ನು ಒಂದು ರೀತಿಯಿಂದ ನಾಶಮಾಡುವುದಾಗಿದೆಯಲ್ಲವೇ ?

ಇಲ್ಲಿ ಶ್ರೀ ರಾಮಚಂದ್ರನು ತಾನಾಗಿರುವ ಧರ್ಮವನ್ನು ನಾಶಮಾಡಲು ಅವಕಾಶಕೊಡದೆ, ನೆಲೆಯಾಗಿ ಸ್ಥಾಪಿಸುವ ಉಪಾಯವಾದ ಯಾವುದೋ ? ಎಂದರೆ ತನ್ನನ್ನು ಹೊಂದಿದವರು ಯಾವತ್ತಿಗೂ ನನ್ನ ಇಷ್ಟವನ್ನು ಅನುಸರಿಸದೆ ಇರಲಾರರು. ಹಾಗೂ ಅನುಸರಿಸದ ಒಬ್ಬ ಆಶ್ರಿತನಿದ್ದರೆ, ಆ ಆಶ್ರಿತನ (ತನ್ನನ್ನು ಹೊಂದಿದವನ) ಪುನಃ

ಕ್ಲೇಶವನ್ನು ಇತರ ಆಶ್ರಿತರುಗಳಿಂದ ಪರಿವರ್ತಿಸಿ ಅವನನ್ನು ತನ್ನ ವಶಪಡಿಸಿ. ತನ್ನನ್ನು ತನ್ನ ಸ್ಥಿತಿಯಿಂದ ಸಡಿಲಗೊಳಿಸಿದ. ತನ್ನನ್ನು ಕುರಿತು ಪ್ರಾರ್ಥಿಸುವುದೇ ಅವನು ತನ್ನನ್ನು ಸ್ಥಿರಗೊಳಿಸುವುದೇ ಆ ಬಹುಮಾನವಾಗಿದೆ. ಇದೇ ಶ್ರೀ ರಾಮಚಂದ್ರನು ಅವತಾರ ಮಾಡಿ ಸ್ಥಿರಪಡಿಸುವ ಮುಖ್ಯ ಧರ್ಮ ಸ್ಥಾಪನೆಯಾಗಿದೆ.

ಈ "ಸುಹೃತು" ಎನ್ನುವ ಮಾತುಗಳು ಹೇಳುವ ರೀತಿಯಲ್ಲಿ ಶ್ರೀ ರಾಮಚಂದ್ರನು ವಾನರರುಗಳನ್ನು ವಿನಯವಾಗಿ ಕೇಳಲು, ಆ ವಾನರರುಗಳೆಲ್ಲರೂ ತಮ್ಮ ಇಷ್ಟವನ್ನು ತಿಳಿಯಪಡಿಸುವವರಾಗಿ. ಅಂಗದನು, ಶರಭನು, ಜಾಂಬವಾನ್, ಮೈಂದ, ಹನುಮಾನ್ ಮುಂತಾದ ಈ ಐದು ಜನಗಳೂ ಒಂದಾಗಿ ಒಂದೇ ಕಾಲದವರಾಗಿದ್ದು. ಆ ಶ್ರೀ ರಾಮನ ಸಾನಿಧ್ಯದಲ್ಲಿ ಅವನ ಒಳ್ಳೆಯದನ್ನೇ ನೆನಸಿ, ಬೇರೆ ಕಡೆ ಗಮನವನ್ನು ಬಿಟ್ಟು, ಕ್ರಮವಾಗಿ ಇಷ್ಟವಾದದ್ದನ್ನು ಬೇರೆ ಬೇರೆಯಾಗಿ ಬಿನ್ನವಿಸಿಕೊಂಡದ್ದಾಗಿ ಇಲ್ಲಿ ವೃತ್ತಾಂತವನ್ನು ತಿಳಿಯತಕ್ಕದ್ದು.

"ಅಂಗದನು ಹೇಳುವ ಮಾತುಗಳು ಅದರ ತಾತ್ಪರ್ಯ"

"ಅರ್ಥಾನರ್ಥೌ ವಿನಿಶ್ಚಿತ್ಯ ವ್ಯವಸಾಯಂ ಭಜೇತ ಚ ।
ಗುಣತಃ ಸಂಗ್ರಹಂ ಕುರ್ಯಾತ್ ದೋಷತಸ್ತು ವಿಸರ್ಜಯೇತ ॥"

ಎನ್ನುವುದೇ ಆ ಮಾತಾಗಿದೆ.

"ಶ್ರೀ ರಾಮನು ತನ್ನನ್ನೇ ಆಶ್ರಯವಾಗಿ ಪಡೆದವನನ್ನು ಬಿಡಲಾರದವನು ಸುಗ್ರೀವನು ವಿಭೀಷಣನನ್ನು ಕೊಲ್ಲಬೇಕೆಂದಿರುವನು.

ಈ ಇಬ್ಬರ ಅಭಿಪ್ರಾಯದಲ್ಲಿ ಒಂದನ್ನು ಬಿಟ್ಟು ಮತ್ತೊಂದನ್ನು ತೆಗೆದು ಕೊಳ್ಳುವಾಗ ವಿಭೀಷಣನ ಪರಿಸ್ಥಿತಿಯನ್ನು ಚೆನ್ನಾಗಿ ಆಲೋಚಿಸಿ ನೋಡಬೇಕಾದದ್ದು ಅವಶ್ಯಕ. ಆ ರೀತಿ ಆಲೋಚಿಸಿ ನೋಡುವಲ್ಲಿ ದೋಷವುಳ್ಳ ವಿಭೀಷಣನು ತ್ಯಾಗ ಮಾಡಲು ತಕ್ಕವನು. ಅತ್ಯಧಿಕ ಗುಣವುಳ್ಳವನಾದರೆ ವಿಭೀಷಣನು ಸ್ವೀಕರಿಸಲು ತಕ್ಕವನು. ಆದ್ದರಿಂದ ವಿಭೀಷಣನನ್ನು ಕುರಿತು ಆಲೋಚಿಸ ಬೇಕಾದದ್ದು ಅತಿ ಮುಖ್ಯವಾದ ವಿಷಯ ಎಂಬುದೇ ಆ ಮಾತಿನ ತಾತ್ಪರ್ಯ.

ಈ ರೀತಿ ಅಂಗದನು ಹೇಳಿದ ನಂತರ ಶರಭನು ತನ್ನ ಇಷ್ಟವನ್ನು ಹೇ ಪುರುಷ ಶ್ರೇಷ್ಠನೇ ಈ ವಿಭೀಷಣನ ನಡತೆಯು ನಮಗೆ ಚೆನ್ನಾಗಿ ತಿಳಿಯದೆ ಇರುವುದರಿಂದ ಅದನ್ನು ತಿಳಿಯುವುದಕ್ಕೆ ಮೊದಲೇ ದೂತನನ್ನು ಕಳುಹಿಸಬೇಕು.

"ಕ್ಷಿಪ್ರಮಸ್ಮಿನ್ನರವ್ಯಾಘ್ರ ಚಾರಃ ಪ್ರತಿವಿಧೀಯತಾಂ" ಎಂದು ಹೇಳಿರುತ್ತಾನೆ.

ಈ ರೀತಿ ಶರಭನು ಹೇಳಿದನಂತರ ಜಾಂಬವಾನ್ ತಿಳಿಸಿದನೆಂದರೆ :—ಈ ವಿಭೀಷಣನು ರಾವಣನ ಹತ್ತಿರದಿಂದ ಬಂದವನು ಎನ್ನುವುದು ಮಾತ್ರವಲ್ಲದೆ ಬರಲು ತಕ್ಕ ಸ್ಥಳವಲ್ಲದ ಸ್ಥಳದಲ್ಲಿಯೂ ಬಂದವನು. ಆದ್ದರಿಂದ ಯೋಚಿಸತಕ್ಕವನು "ಅದೇಶಕಾಲೇ ಸಂಪ್ರಾಪ್ತಃ ಸರ್ವಥಾ ಶಂಕ್ಯತಾಮಯಂ" ಎನ್ನುವುದು.

ಈ ರೀತಿ ಜಾಂಬವಂತನು ತನ್ನ ಇಷ್ಟವನ್ನು ಹೇಳಿದ ನಂತರ ಮೈಂದನು " ಈ ವಿಭೀಷಣನನ್ನು ನಮ್ಮೊಂದಿಗೆ ಸೇರಿಸಿಕೊಂಡು ಇವನ ಒಳ್ಳೆಯತನ ಕೆಟ್ಟದ್ದನ್ನು ಚೆನ್ನಾಗಿ ತಿಳಿದು ಆವಶ್ಯಕಾನುಸಾರವಾಗಿ ನಡೆಯುವುದು ಸರಿ " ಭಾವಮಸ್ಯ ತು ವಿಜ್ಞಾಯ ತತ್ತ್ವತಸ್ತ್ವಂ ಕರಿಷ್ಯಸಿ " ಎಂದು ಹೇಳಿದನು.

ಈ ನಾಲ್ಕು ವಾನರರುಗಳೂ ಈ ರೀತಿ ಹೇಳಿದನಂತರ ಹನುಮಂತನು ಈ ನಾಲ್ಕು ಜನರ ಇಷ್ಟವನ್ನು ತಿಳಿದು ತನ್ನ ವಿಚಾರವನ್ನು ಶ್ರೀ ರಾಮನ ಸಾನ್ನಿಧ್ಯದಲ್ಲಿ ಬಿನ್ನವಿಸಿಕೊಂಡನು. ಇಲ್ಲಿ ಹನುಮಂತನ ಮಾತುಗಳನ್ನು ಆ ಮಾತುಗಳ ತಾತ್ಪರ್ಯವನ್ನೂ ಕೇಳಬಾರದಂತೆ ಸುಗ್ರೀವನನ್ನು ಕುರಿತು ಬರುವದಾಗಿದೆ:—ಒಬ್ಬರನ್ನು ಗೆಲ್ಲಬೇಕೆಂದಾಗಲೀ, ಒಬ್ಬರಲ್ಲಿ ಅಸೂಯೆಯಿಂದಾಗಲಿ, ನಾನು ಬುದ್ಧಿವಂತನೆಂದಾಗಲೀ, ಒಂದು ಫಲವನ್ನು ಅಪೇಕ್ಷಿಸಿ ಪಕ್ಷಪಾತದಿಂದಾಗಲೀ ಹೇಳುವುದಿಲ್ಲ. ಶ್ರೀ ರಾಮಚಂದ್ರನ ಸದ್ಗುಣಗಳನ್ನು ಕಂಡು, ನಿಜಸ್ಥಿತಿಯನ್ನು ಹೇಳುತ್ತೇನೆ ಎನ್ನುತ್ತಾನೆ ಹನುಮಂತ.

ಈ ರೀತಿ ಹೇಳಿ ಆ ಹನುಮಂತನು ಅಂಗದನ ಅಭಿಪ್ರಾಯಕ್ಕೆ ಹೇಳಿರುವ ದೋಷ ಯಾವುದು ?

ಈ ವಿಭೀಷಣನ ಹತ್ತಿರ ಗುಣವನ್ನು ಕಂಡು ಸ್ವೀಕರಿಸಬೇಕು. ದೋಷ ಕಂಡು ಬಂದರೆ ಬಿಟ್ಟು ಬಿಡಬೇಕು " ಎನ್ನುವ ಅಭಿಪ್ರಾಯವು ಶ್ರೇಷ್ಠವಾದುದಲ್ಲ. ಏಕೆಂದರೆ ಇವನನ್ನು ನಮ್ಮ ಕೆಲಸಕ್ಕೆ ಆಧಾರವಾಗಿ ಇಟ್ಟುಕೊಳ್ಳದಿದ್ದರೆ ಇವನ ಒಳ್ಳೆಯ ತನವನ್ನು ತಿಳಿಯಲಾಗುವುದಿಲ್ಲ. ಒಳ್ಳೆಯ ತನವನ್ನು ತಿಳಿದುಕೊಳ್ಳದೆ ಬಿಡಲಾಗುವುದಿಲ್ಲ. ಆದ್ದರಿಂದ ಇವನನ್ನು ಪರೀಕ್ಷಿಸಲಾಗುವುದಿಲ್ಲ.

" ಋತೇ ನಿಯೋಗಾತ್ ಸಾಮರ್ಥ್ಯಮವಬೋದ್ಧುಂ ನ ಶಕ್ಯತೇ ।
ಸಹಸಾ ವಿನಿಯೋಗೋ ಹಿ ದೋಷವಾನ್ ಪ್ರತಿಭಾತಿ ಮಾ ॥ " ಎನ್ನುವುದು

ಅನಂತರ ಶರಭನ ಅಭಿಪ್ರಾಯಕ್ಕೆ ಹೇಳಿರುವ ದೋಷವೇನು :—"ಈ ವಿಭೀಷಣನ ವಿಷಯಕ್ಕೆ ನಿಲ್ಲಲು ದೂತನನ್ನು ಕಳುಹಿಸಿ ಇವನು ಒಳ್ಳೆಯವನೋ ಕೆಟ್ಟವನೋ ತಿಳಿದು ಆ ವಿಷಯಕ್ಕೆ ಅನುಸಾರವಾಗಿ ನಡೆದುಕೊಳ್ಳೋಣ " ಎನ್ನುವ ವಿಚಾರವು ಉತ್ತಮವಾದುದಲ್ಲ.

" ಚಾರ ಪ್ರಣಿಹಿತಂ ಯುಕ್ತಂ ಯದುಕ್ತಂ ಸಚಿವೈಸ್ತವ ।
ಅರ್ಥಸ್ಯ ಸಂಭವಾತ್ ತತ್ರ ಕಾರಣಂ ನೋಪಪದ್ಯತೇ ॥ " ಎನ್ನುವುದು ನಂತರ ಜಾಂಬವಂತನ ವಿಚಾರಕ್ಕೆ ವಿವರಿಸುವ ಅಭಿಪ್ರಾಯವೇನು :—

" ಈ ವಿಭೀಷಣನು ಅತ್ಯಧಿಕ ತಮೋಗುಣವುಳ್ಳವನಂತೆ, ಇವರನ್ನು ತೊರೆದರೆ ಪಡೆಯುವವನಂತೆ, ಆದ್ದರಿಂದ ತ್ಯಾಗಮಾಡತಕ್ಕವನು, ವಿಭೀಷಣನನ್ನು ಬಿಡದೆ ಇದ್ದರೆ ಅವನ ಪಾಪಕಾರ್ಯದಿಂದ ಅವನ ಜೊತೆ ಅವನಿಗೆ ಬೆಂಬಲವಾದ ಇವನೂ ನಾಶವಾಗುತ್ತಾನೆ.

ಶ್ರೀ ರಾಮಚಂದ್ರನೇ, ರಜೋಗುಣ, ತಮೋಗುಣ ಕಿಂಚಿತ್ತೂ ಇಲ್ಲದ ಸತ್ತ್ವ

ಸತ್ವಗುಣವುಳ್ಳವನು, ದುಃಖನಿವರ್ತನಮಾಡಿ ಸುಖವನ್ನು ನೀಡಿದವನು, ಇತರರನ್ನು ಬಾಧಿಸುವವನು ಆದ್ದರಿಂದ ಮೋದಲ್ಪಡುವವನು ಈ ಶ್ರೀ ರಾಮಚಂದ್ರನನ್ನು ಆಶ್ರಯಿಸಿ ಇವನ ಕೃಪೆಯಿಂದ ಪರಮಾತ್ಮನ ಚರಣಾರವಿಂದಗಳ ಹತ್ತಿರ ಸೇರಿ ಸೇವೆ ಮಾಡಿ ಬಾಳನ್ನು ಅನುಗೊಳಿಸಬಹುದು.

ಈ ರೀತಿ ರಾವಣನಿಗೂ ಶ್ರೀ ರಾಮಚಂದ್ರನಿಗೂ ಇರುವ ಒಳ್ಳೆಯ ಕೆಟ್ಟದ್ದನ್ನು ಕಂಡವನಂತೆ ವಿಭೀಷಣನು ಅನಂತರವೂ ರಾವಣನ ಕೀಳುತನವನ್ನು ಶ್ರೀ ರಾಮಚಂದ್ರನ ಪೌರುಷವನ್ನು ಚೆನ್ನಾಗಿ ತಿಳಿದಿರುತ್ತಾನೆ; ಆದ್ದರಿಂದಲೇ ಅಂತಃಕರಣ ಪೂರ್ವಕವಾಗಿಯೇ ಪರಮ ಪುರುಷನನ್ನು ಆಶ್ರಯಿಸಿ ಬಂದು ಸೇರಿದನು ಬರುವುದಕ್ಕೆ ಈ ಸ್ಥಳವೂ ಕಾಲವೂ ಏನೂ ಅಡ್ಡಿಯಿಲ್ಲ.

" ಸ ಏಷ ದೇಶಃ ಕಾಲಶ್ಚ ಭವತೀಹ ಯಥಾ ತಥಾ ।
ಪುರುಷಾತ್ಪುರುಷಂ ಪ್ರಾಪ್ಯ ತಥಾ ದೋಷ ಗುಣಾವಪಿ ॥
ದೌರಾತ್ಮ್ಯಂ ರಾವಣೇ ದೃಷ್ಟ್ವಾ ವಿಕ್ರಮಂ ಚ ತಥಾ ತ್ವಯಿ ।
ಯುಕ್ತಮಾಗಮನಂ ತಸ್ಯ ಸದೃಶಂ ತಸ್ಯ ಬುದ್ಧಿತಃ ॥ " ಎನ್ನುವುದು.

ಒಬ್ಬನು ಕರ್ಮಯೋಗವನ್ನು ಮಾಡುತ್ತಾನೆ. ಆ ಕರ್ಮಯೋಗವಾಗಿರುವ ಧರ್ಮ ಪರಿಶುದ್ಧವಾದ ಸ್ಥಳದಲ್ಲಿ ಮಾಡಲ್ಪಟ್ಟದ್ದೇ ಆದರೆ ಅದಕ್ಕೆ ನಲ್ಮೆ ಉಂಟು, ಅದರಿಂದುಂಟಾಗುವ ಫಲವೂ ದೊರೆಯುತ್ತದೆ. ಈ ಧರ್ಮದ ಹಾಗೆ ಸ್ಥಳ ಕಾಲ ಮುಂತಾದವುಗಳಿಂದ ಭಗವಂತನಾದ ಧರ್ಮಕ್ಕೆ ಉಂಟಾಗುವ ನಲ್ಮೆಯ ಫಲವನ್ನು ಹೇಳಲು ಶಾಸ್ತ್ರವು ಅವಕಾಶ ಕೊಡಲಿಲ್ಲವಲ್ಲವೇ ?

ಶ್ರೀ ರಾಮ ಪ್ರಭುವಾದ ಧರ್ಮವನ್ನೇ ಆಶ್ರಯವಾಗಿ ಪಡೆಯಲು ಬಂದ ವಿಭೀಷಣನಿಗೆ, ಆ ರೀತಿ ಆಶ್ರಯಿಸುವ ಸಮಯದಲ್ಲಿ ಯಾವುದಾದರೊಂದು ಸ್ಥಳವೂ, ಕಾಲವೂ ದೊರೆಯುವುದಾದರೆ ಇಂತಹ ಕಾಲ ಇಂತಹ ಸಮಯ ಎನ್ನುವುದಿಲ್ಲ. ವಾಲ್ಮೀಕಿ ಮುನಿಗಳು ಈ ಸತ್ಯತೆಯನ್ನು ಹನುಮಂತನ ಮುಖಾಂತರ ಪ್ರಕಟಪಡಿಸುತ್ತಾರೆ. ಕರ್ಮಯೋಗ ಯಾವುದು ? ಭಗವಂತನ ಮನಸಂತೋಷ ಪಡುವ ಹಾಗೆ ತನಗೆ ಸೇರಿದ ಧರ್ಮವನ್ನು ಶಾಸ್ತ್ರ ರೀತಿಯನ್ನನುಸರಿಸಿ ಮಾಡುವುದು. ಈ ರೀತಿ ಜಾಂಬವಂತನ ವಿಚಾರಕ್ಕೆ ದೋಷವನ್ನು ಹೇಳಿ ಮೈಂದನ ವಿಚಾರಕ್ಕೂ ದೋಷವನ್ನು ಹೇಳಿರುತ್ತಾನೆ ಹನುಮಂತ. ಆ ಕೊರತೆ ಏನು ? ಈ ವಿಭೀಷಣನನ್ನು ಒಂದು ಕೆಲಸದಲ್ಲಿ ನಿಯೋಜಿಸಿ ಆ ಕಾರ್ಯವನ್ನು ಮಾಡಿಸಿ ಅದರಿಂದ ಇವನ ಅಭಿಪ್ರಾಯವನ್ನು ತಿಳಿಯಬಹುದು. ಎನ್ನುವ ವಿಚಾರವೂ ಉತ್ತಮವಾದುದಲ್ಲ. ಏತಕ್ಕೆಂದರೆ ಎದುರು ಪಕ್ಷದವನು ತನ್ನ ಕೆಲಸದಲ್ಲಿ ಚತುರನಾಗಿದ್ದರೆ ತನ್ನ ಅಭಿಪ್ರಾಯವನ್ನು ಪ್ರಕಟಪಡಿಸದೆ ನಡೆದುಕೊಳ್ಳುತ್ತಾನೆ. ಆದ್ದರಿಂದ ತಕ್ಷಣ ಅವನ ನಡತೆಯನ್ನು ತಿಳಿದುಕೊಳ್ಳಲಾಗುವುದಿಲ್ಲ.

“ಅಶಕ್ಯ ಸ್ಸಾಹಸಾ ರಾಜನ್ ಭಾವೋವೇತ್ತುಂ ಪರಸ್ಯವೈ” ಎಂದು. ಈ ರೀತಿ ಅಂಗದ ಮುಂತಾದವರ ವಿಚಾರಕ್ಕೆ ಕೊರತೆಯನ್ನು ಹೇಳಿ ಹನುಮಂತನು ತನ್ನ ಅಭಿಪ್ರಾಯವನ್ನು ಚೆನ್ನಾಗಿ ತಿಳಿಸಿರುತ್ತಾನೆ.

ಈ ವಿಭೀಷಣನನ್ನು ಹೇಳುವಾಗ, ಇವನಿಂದಾದ ದೋಷಗಳನ್ನು ಹೇಳುವ ಕಾರ್ಯ ಯಾವುದೂ ಕಂಡು ಬರಲಿಲ್ಲ. ಬಹಳ ಪೆಟ್ಟು ತಿಂದವನು ತಾಯಿಯ ಹತ್ತಿರ ಬರುವ ಹಾಗೆ ಇವನ ಮುಖವು ಶಾಂತಿಯಿಂದಿರುವ ಹಾಗೆ ಕಂಡು ಬರುತ್ತದೆ. ಇವನು ಕೆಟ್ಟವನಾಗಿದ್ದರೆ ಇವನಿಗೆ ವಿರೋಧವನ್ನು ಮಾಡಲು ಪ್ರಯತ್ನಿಸಿದ ವಾನರರನ್ನು ಪ್ರವಾಹರೂಪವಾದ ಪ್ರೀತಿ ಉಳ್ಳವನಾಗಿ ಈ ರೀತಿಯಾದ ಮಾತುಗಳನ್ನು ಹೇಳಲು ಅವಕಾಶವುಂಟೇ ? ಹೇಳುತ್ತಿದ್ದನೋ ? ಇವನ ಧ್ವನಿಯು ಗದ್ಗದಿತವಾಗಿದೆಯೇ ? ಆದರೆ, ಆ ಅಭಿಪ್ರಾಯವನ್ನು ಮರೆಸಲು ಯತ್ನಿಸಿದರೂ ಅದನ್ನು ಅವನ ಮುಖ ಪ್ರಕಟ ಪಡಿಸಿ ಬಿಡುತ್ತದೆಯಲ್ಲವೇ ? ಆದ್ದರಿಂದ ಇವನು ಕಷ್ಟಕ್ಕೊಳಗಾಗಿರುವವನೇ ಆಗಿರುತ್ತಾನೆ.

ಬೇರೆಯವರಿಗೆ ಅಸಾಧ್ಯವಾದ ಶ್ರೀ ರಾಮನ ಪ್ರಯತ್ನವನ್ನು. ರಾವಣನ ಕೆಟ್ಟ ಚರಿತ್ರೆಯನ್ನು ಚೆನ್ನಾಗಿ ತಿಳಿದು, ದುಷ್ಟನಾದ ವಾಲಿಯನ್ನು ಕೊಂದು ಕಿಷ್ಕಿಂಧಾ ರಾಜ್ಯವನ್ನು ಸುಗ್ರೀವನಿಗೆ ವಶಮಾಡಿ ಕೊಟ್ಟಿದ್ದನ್ನು ಕೇಳಿ ಅದೇ ರೀತಿ ರಾವಣನನ್ನು ಕೊಂದು ಲಂಕಾ ರಾಜ್ಯವನ್ನು ತನಗೆ ವಶಪಡಿಸಿ ಕೊಡುತ್ತಾನೆಂದು ದೃಢವಾಗಿ ನಂಬಿ, ಈ ವಿಭೀಷಣನು ಇಲ್ಲಿಗೆ ಬಂದನೆಂಬುದು ನನ್ನ ಅಭಿಪ್ರಾಯ. ಇವನ ಸ್ಥಿತಿಯನ್ನು ನಿಜವಾಗಿಯೂ ತಿಳಿದರೆ ಇವನನ್ನು ಸ್ವೀಕರಿಸಲು ತಕ್ಕವನೇ. ಇದೇ ಹನುಮಂತನು ಹೇಳಿದ ವಿಚಾರ. ಇಲ್ಲಿ ಹನುಮಂತನ ಮಾತುಗಳು ಕೆಳಕಂಡಂತೆ :—

“ಉದ್ಯೋಗಂ ತವ ಸಂಪ್ರೇಕ್ಷ್ಯ ಮಿಥ್ಯಾವೃತ್ತಂ ಚ ರಾವಣಮ್ ।
ವಾಲಿನಂ ಚ ಹತಂ ಶ್ರುತ್ವಾ ಸುಗ್ರೀವಂ ಚಾಭಿಷೇಚಿತಂ ॥
ರಾಜ್ಯಂ ಪ್ರಾರ್ಥಯಮಾನಸ್ತು ಬುದ್ಧಿಪೂರ್ವಂ ಇಹಾಗತಃ ।
ಏತಾವತ್ತು ಪುರಸ್ಕೃತ್ಯ ವಿದ್ಯತೇತಸ್ಯ ಸಂಗ್ರಹಃ ।”

ಈ ರೀತಿ ಹನುಮಂತನು ಹೇಳಿರುವ ಮಾತುಗಳನ್ನು ಕಪಿಯಾರೇ ಕೇಳಿ ಸುಗ್ರೀವನೇ ಮೊದಲಾದವರು, ಶರಣು ಹೊಂದಿದ ವಿಭೀಷಣನನ್ನು ಸ್ವೀಕರಿಸಕೂಡದು ಎಂದು ಹೇಳಿದಾಗ ಶ್ರೀ ರಾಮಚಂದ್ರನು ಮನಸ್ಸಮಾಧಾನವನ್ನು ಹೊಂದಿದನು.

ಇಲ್ಲಿ “ ಅಥರಾಮಃ ಪ್ರಸನ್ನಾತ್ಮಾ ” ಎನ್ನುವ ವಾಲ್ಮೀಕಿ ಮುನಿಯ ವಾಕ್ಯವೂ “ ಅಥರಾಮಃ ” ಅನಂತರ ಭಗವಂತನು ಸಮಾಧಾನ ಹೊಂದಿದನು. ಹನುಮಂತನ ಮಾತಿನಿಂದ ಸಂತುಷ್ಟನಾದನು, ಪ್ರಸನ್ನನಾದನು.

ಧರ್ಮಿ ಉಂಟಾದರೆ ಧರ್ಮವೂ ಉಂಟಾಗುತ್ತದೆಯೆನ್ನುವ ಪೆರಿಯವಾಚ್ಚಾನ್ ರವರ ಸಿರಿನುಡಿಯನ್ನು ಅನುಭವಿಸತಕ್ಕದ್ದು.

ಇನ್ನು ಶ್ರೀ ರಾಮಚಂದ್ರನ ಅಭಿಪ್ರಾಯವನ್ನು ನೋಡೋಣ—

ಶ್ರೀ ರಾಮಚಂದ್ರನು ಅಂಗದ ಮುಂತಾದವರನ್ನು ಕುರಿತು ತನ್ನ ಅಭಿಪ್ರಾಯವನ್ನು ಹೇಳುವುದಕ್ಕೆ ಮೊದಲು, ತನ್ನ ಶ್ರೇಷ್ಠ ಗುಣಗಳಿಗನುಸಾರವಾಗಿ—"ನಿಮ್ಮ ಮಾತುಗಳನ್ನು ನಾನು ಕೇಳಿದ ಹಾಗೆಯೇ, ಈ ವಿಭೀಷಣನನ್ನು ಕುರಿತು ನಾನು ಹೇಳುವ ಮಾತುಗಳನ್ನು ನೀವೂ ಕಿವಿಯಾರೆ ಕೇಳಬೇಕು" ಎಂದು ವಿನಯದಿಂದ ಕೇಳಿಕೊಂಡಿರುತ್ತಾನೆ. ಹೀಗೆ ಕರುಣಾ ಭರಿತವಾಗಿ ಶ್ರೀ ರಾಮನು ಕೇಳಿಕೊಂಡ ಮಾತುಗಳು ಯಾವುವೆಂದರೆ—

"ಮಿತ್ರ ಭಾವೇನ ಸಂಪ್ರಾಪ್ತಂ ನ ತ್ಯಜೇಯಂ ಕಥಂಚನ ।
ದೋಷೋ ಯದ್ಯಪಿ ತಸ್ಯಸ್ಯಾತ್ ಸತಾ ಮೇತದ ಗರ್ಹಿತಂ ॥ ಎನ್ನುವುದು.

ಶ್ರೀ ರಾಮ ಪ್ರಭುವು ಸಮುದ್ರ ತೀರದಲ್ಲಿ ವಾನರರ ಗುಂಪಿನಲ್ಲಿ ಹೇಳಿದ "ಮಿತ್ರಭಾವೇನ" ಎನ್ನುವ ಈ ಮಾತುಗಳು ಶ್ರೀ ಕೃಷ್ಣನು ಭಗವದ್ಗೀತೆಯ ಅಂತ್ಯದಲ್ಲಿ ಹೇಳಿರುವ "ಸರ್ವಧರ್ಮಾನ್" ಎನ್ನುವ ಮಾತಿನ ಹಾಗೆ ಇದೆ.

ಶ್ರೀ ಕೃಷ್ಣ ಭಗವಂತನು ಗೀತೆಯಲ್ಲಿ ಕರ್ಮಯೋಗ (ಭಗವಂತನ ಮುಖೋಲ್ಲಾಸಕ್ಕಾಗಿ ಮಾಡುವ ಜೀವನಾಗಿರುವ ತನಗೆ ಸೇರದ ಧರ್ಮ) ಜ್ಞಾನಯೋಗ (ಅಂತಃಕರಣವಾಗಿ ಕಷ್ಟ ಹೊಂದಿದವನು ಚಿಂತಿಸುವ ಜೀವಾತ್ಮನನ್ನು ಕುರಿತು ಚಿಂತನೆ) ಭಕ್ತಿಯೋಗ (ಪರಮಾತ್ಮನನ್ನು ಕುರಿತಾದ ಚಿಂತನೆ) ಆದ ಈ ಉಪಾಯಗಳನ್ನು ವಿಸ್ತರಿಸಿ ಹೇಳಿ ಕೊನೆಯಲ್ಲಿ ಇವುಗಳನ್ನು ಬಿಟ್ಟು ಬಿಟ್ಟು ಪರಮಾತ್ಮನಾಗಿರುವ ತನ್ನನ್ನೇ ಪಡೆಯುವಂತೆ ಆಜ್ಞೆ ಮಾಡಿರುತ್ತಾನೆ.

ಶ್ರೀ ರಾಮಚಂದ್ರನು ಇಲ್ಲಿ ಅಂಗದನು, ಶರಭನು ಹೇಳಿದ ಅಭಿಪ್ರಾಯವನ್ನು ತಳ್ಳಿಹಾಕಿ ಅಂತ್ಯದಲ್ಲಿ ತನಗೇ ಸೇರಿದ ಶ್ರೇಷ್ಠ ಅಭಿಮತವನ್ನು ನಿರ್ದಿಷ್ಟವಾಗಿ ತಿಳಿಸಿರುತ್ತಾನೆ.

ಶ್ರೀ ಕೃಷ್ಣನು ಸಂಪತ್ತನ್ನು ಕಳೆದುಕೊಂಡ ಅರ್ಜುನನನ್ನು ಶ್ರೇಷ್ಠನನ್ನಾಗಿ ಮಾಡಿ ಕೊನೆಯಲ್ಲಿ "ಸರ್ವಧರ್ಮಾನ್" ಎಂದು ಹೇಳಿದ ಹಾಗೆ ಶ್ರೀ ರಾಮಚಂದ್ರನೂ ಲಂಕೆಯನ್ನು ತೊರೆದ ವಿಭೀಷಣನನ್ನು ಲಂಕೆಯನ್ನು ಪಡೆಯುವಂತೆ ಮಾಡುವ ಕೊನೆಯ ವಾಕ್ಯ "ಮಿತ್ರ ಭಾವೇನ" ಎಂದು ಹೇಳಿರುತ್ತಾನೆ.

ಅಲ್ಲಿ ಶ್ರೀ ಕೃಷ್ಣನು ಸೇನೆಯ ಮಧ್ಯದಲ್ಲಿ ಅರ್ಜುನನ ಶೋಕವು ನಿವೃತ್ತಿಯಾಗಲು ಆ ಮಾತನ್ನು ಹೇಳಿರುವ ಹಾಗೆ ಇಲ್ಲಿಯೂ, ಶ್ರೀ ರಾಮಚಂದ್ರನು ಸೇನೆಯ ಮಧ್ಯದಲ್ಲಿ ವಿಭೀಷಣನ ಶೋಕವು ದೂರವಾಗಲು ಈ ಮಾತುಗಳನ್ನು ಹೇಳಿರುತ್ತಾನೆ.

ನಮ್ಮ ಆಚಾರ್ಯರುಗಳು "ತಿರುತ್ತೇರ್ ತಟ್ಟಿಲ್ ವಾರ್ತೈ" "ಕಡಲ್ಕರೈ ವಾರ್ತೈ" ಎನ್ನುವ (ಶ್ರೀ ಕೃಷ್ಣ ಭಗವಾನ್, ಶ್ರೀ ರಾಮಚಂದ್ರ ಈ ಇಬ್ಬರು ಅವತಾರ ಪುರುಷರುಗಳು) ಈ ಎರಡು ಮಾತುಗಳನ್ನೂ ಎಲ್ಲಾ ಚೇತನರುಗಳ ಕ್ಷೇಮವನ್ನು ಅಭಿವೃದ್ಧಿಪಡಿಸುವ ಹಿರಿಮೆಯುಳ್ಳವನು. ಮೇಲೆ ಹೇಳಿರುವ ಹಾಗೆ ಐಕಮತ್ಯವುಳ್ಳವ

ರಾಷ್ಟ್ರರಿಂದ, ಪ್ರೀತಿಯಿಂದ ತಾವೂ ಆದರಿಸಿ ತಮ್ಮ ಚರಣಾರವಿಂದಗಳಲ್ಲಿ ಸಂಬಂಧ ಪಡೆದವರಿಗೆ ಉಪದೇಶ ಮಾಡಿಯೂ ಇರುತ್ತಾರೆ ಎನ್ನುವುದನ್ನು "ಯಾವ ಚೇತನನಿಗೆ" ಈ ಎರಡು ಭಾಗಗಳಲ್ಲಿ ಒಳ್ಳೆಯ ಗೌರವವುಂಟೋ ಆ ಚೇತನನೇ ಶ್ರೀ ವೈಷ್ಣವನು ಎಂದು ಪ್ರಶಂಸಿಸಲ್ಪಡುತ್ತಾನೆ ಎನ್ನುವುದನ್ನು ನಾವು ಇಲ್ಲಿ ತಿಳಿಯುವುದು ಆವಶ್ಯಕ.

ನಿಜಸ್ಥಿತಿಯು ಈ ರೀತಿಯಾದರೂ, ಪೆರಿಯವಾಚ್ಚಾನ್ ಪಿಳ್ಳೈ ಶ್ರೀ ರಾಮ ಚಂದ್ರನ ಮಾತಿಗೆ ಹೆಚ್ಚು ಶ್ರೇಷ್ಠತೆಯನ್ನು ಮನಸ್ಸಿನಲ್ಲಿಟ್ಟು ಹೇಳಿರುತ್ತಾರೆ.

ಅಲ್ಲಿ "ಶರಣಾಗತಾತ್ಮವಸಾಯಮ್" ಹೇಳಿಯಿಟ್ಟು, ಇಲ್ಲಿ "ಶರಣ್ಯಾತ್ಮವಸಾಯವುಮ್" ಹೇಳಲ್ಪಡುತ್ತದೆ. ಅಲ್ಲಿ ಶರಣಾಗತರನ್ನು ಪಾಪಗಳಿಂದ ಬಿಡಿಸುತ್ತೇನೆ ಎಂದು ಹೇಳುತ್ತದೆ. ಇಲ್ಲಿ ನಾನು ಬಿಟ್ಟೆನು ಎಂದು ಹೇಳುತ್ತದೆ ಎನ್ನುವ ಪೆರಿಯವಾಚ್ಚಾನ್ ಪಿಳ್ಳೈಯವರ ಸಿರಿನುಡಿಗಳನ್ನು ಅವಶ್ಯವಾಗಿ ಅನುಭವಕ್ಕೆ ತೆಗೆದುಕೊಳ್ಳಬೇಕು.

ಈ ಮಾತುಗಳ ಅಭಿಪ್ರಾಯವನ್ನು ಸ್ವಲ್ಪ ವಿವರಿಸಿ ಹೇಳುತ್ತೇವೆ:—ಭಗವಂತನನ್ನು ಪಡೆಯಲು ಯಾವನು ಆ ಭಗವಂತನನ್ನೇ ಕಾರಣವಾಗಿ ಹೊಂದುತ್ತಾನೋ, ಅವನನ್ನು ಶರಣಾಗತನೆನ್ನುತ್ತಾರೆ. ಆ ಶರಣಾಗತನಿಗೆ ಸೇರಿದ ದೃಢವಾದ ಅಭಿಪ್ರಾಯವನ್ನು (ಭಗವಂತನು ಈ ವಸ್ತುವನ್ನು ಯಾವತ್ತಿಗೂ ಬಿಡುವುದಿಲ್ಲ) ನಿರೀಕ್ಷಿಸಿಯೇ ತೀರುತ್ತಾನೆ, ಎಂಬ ಅಭಿಪ್ರಾಯವನ್ನು "ಅಧ್ಯವಸಾಯ" ಎಂದು ಹೇಳುವರು.

ಈ ಅಭಿಪ್ರಾಯವು ಭಗವಂತನ ಚರಣಾರವಿಂದಗಳನ್ನು ಉಪಾಯವಾಗಿ ಆಶ್ರಯಿಸಿ ಪುರುಷಾರ್ಥವನ್ನು ಪಡೆಯುವವನಿಗೆ ಸಂಭವವಾಗಿರುತ್ತದೆ. ಈ ಸೌಕರ್ಯವನ್ನು ಕೆಳಕಂಡಂತೆ ನಾವು ತಿಳಿಯಬಹುದು.

ಒಬ್ಬನು ಹಡಗಿನಲ್ಲಿ ಸಮುದ್ರವನ್ನು ದಾಟಿ, ತಾನು ಇಷ್ಟಪಟ್ಟ ಸ್ಥಳಕ್ಕೆ ಹೋಗುತ್ತಾನೆ. ಆ ರೀತಿ ಹೋಗುವವನಿಗೆ ಸಹಾಯವಾಗಿ (ಈ ಹಡಗು ಅತ್ಯಾವಶ್ಯಕವಾದುದು. ಇದು ನಮ್ಮನ್ನು ಇಚ್ಛಿಸಿದ ಸ್ಥಳಕ್ಕೆ ಕರೆದುಕೊಂಡು ಹೋಗಿ ಸೇರಿಸಿ ಬಿಡುತ್ತದೆ ಎಂದು) ಕಾಣುತ್ತೇವೆ ಅಲ್ಲವೆ ?

ಇದರ ಹಾಗೆಯೇ, ಈ ಜೀವನು ಭಗವಂತನೆಂಬ ಹಡಗನ್ನು ಹತ್ತಿ ಸಂಸಾರವೆಂಬ ಮಹಾಸಾಗರವನ್ನು ದಾಟಿ, ತಾನು ಅಪೇಕ್ಷಿಸಿದ ಶ್ರೀ ವೈಕುಂಠವಾದ ಪರಮಪದಕ್ಕೆ ಹೋಗಬೇಕಾಗಿರುವುದರಿಂದ, ಪರಮಾತ್ಮನಾದ ಹಡಗು ಅತ್ಯಾವಶ್ಯಕವಾದದ್ದು. ಈ ಹಡಗು ನಮ್ಮನ್ನು ಪರಮಪದಕ್ಕೆ ಕರೆದುಕೊಂಡು ಹೋಗಿ ಸೇರಿಸುತ್ತದೆ ಎನ್ನುವ ದೃಢವಾದ ಅಭಿಪ್ರಾಯವನ್ನು ಇಟ್ಟುಕೊಂಡವನಲ್ಲವೆ ?

ಇಲ್ಲಿ ಒಂದು ಬುತ್ತಿಯಲ್ಲಿ ನಂಬಿಕೆ ಇಟ್ಟುಕೊಂಡು ಆರು ತಿಂಗಳಿಗೆ ಬೇಕಾದ ಊಟ, ನೀರುಗಳನ್ನು ತೆಗೆದುಕೊಂಡು ಸಮುದ್ರದಲ್ಲಿ ಪ್ರವೇಶಿಸುತ್ತಾನೆ. ಹಾಗೆಯೇ ಮೋಕ್ಷಕ್ಕೆ ಹೋಗಲು ನಮಗೆ ಭಗವದ್ವಿಷಯವೆಂಬ ಸಾಧನೆ ಬೇಕಲ್ಲವೆ? ನಂಬಿಳ್ಳೈಯವರ ವಿಚಾರವನ್ನು ಗ್ರಹಿಸತಕ್ಕದ್ದು.

ಈ ವಿಷಯವನ್ನು ಅರಿಯುವಾಗ "ಭಗವಂತನಾದ ಹಡಗನ್ನು ಹತ್ತಿ ಹೋಗು

ಜೀವನಿಗೆ ಅತ್ಯಂತ ದೃಢವಾದ ಅಭಿಪ್ರಾಯವಿರಬೇಕು. ಆ ಮನಸ್ಸು ಈ ಜೀವನ ಸ್ಥಿತಿಯನ್ನು ನೋಡುವಲ್ಲಿ ದೃಢತೆ ಉಂಟಾಗುವುದು ಕಷ್ಟ.

ಆದರೂ ಸಹ ಆಳವಾದ ಸಮುದ್ರವನ್ನು ದಾಟುವಾಗ ಆ ರೀತಿ ದಾಟುವುದಕ್ಕೆ ಸಾಧನವಾದ ಹಡಗಿನಲ್ಲಿ ಇಟ್ಟಿರುವ ನಂಬಿಕೆಯು ಹಾಗಿರುವ ವಿಶ್ವಾಸವಾದರೂ, ಈ ಜೀವನಿಗಿರುವುದು ಅವಶ್ಯವಲ್ಲವೆ ?

'' ಈ ದೃಢವಾದ ಅಭಿಪ್ರಾಯವು ಪರಮ ಪುರುಷನಾಗಿರುವ ನನ್ನನ್ನು ಆಶ್ರಯಿಸಿರುವವನಿಗೆ (ಶರಣಾಗತನಿಗೆ) ಸಾಧ್ಯವಾಗುತ್ತೆ ಎಂಬುದನ್ನು ತಿಳಿಯ ಪಡಿಸಿರುತ್ತಾರೆ.'' '' ಸರ್ವಧರ್ಮಾನ್ '' ಎನ್ನುವ ಮಾತಿನಲ್ಲಿ ಶ್ರೀಕೃಷ್ಣ ಪರಮಾತ್ಮ ಎನ್ನುವ ತತ್ವವು ಅಡಗಿದೆ.

ನಂತರವೂ ಆ ಕೃಷ್ಣ ಪರಮಾತ್ಮನು ಮೇಲೆ ಹೇಳಿರುವ ಮಾತುಗಳಿಂದಲೇ, ಈ ರೀತಿ ದೃಢವಾದ ಅಭಿಪ್ರಾಯವಿರುವ ಚೇತನನನ್ನು, ನನ್ನನ್ನು ಹೊಂದದಂತೆ ತಡೆಯುವ ಪಾಪಗಳಿಂದಲೂ ಬಿಡುಗಡೆ ಮಾಡುತ್ತೇನೆ ಎಂದೂ ಉಪದೇಶ ಮಾಡಿರುತ್ತಾನೆ.

ಇದುವರೆವಿಗೂ ''ಶರಣಾಗತಾಧ್ಯವಸಾಯಂ'' ಹೇಳಿದ್ದಾಯಿತು. ಶರಣಾಗತನನ್ನು ಪಾಪಗಳಿಂದಲೂ ವಿಮುಕ್ತಗೊಳಿಸುತ್ತೇನೆ ಎನ್ನುವ ಭಾಗದ ತಾತ್ಪರ್ಯವನ್ನು ಕಂಡೆವು. ಇನ್ನು '' ಶರಣ್ಯಾಧ್ಯವಸಾಯಂ '' ಎನ್ನುವುದರ ಸಾರಾಂಶವನ್ನು ನೋಡೋಣ.

'' ಶರಣ್ಯಂ '' ಎನ್ನುವುದಕ್ಕೆ ದುಃಖ ನಿವೃತ್ತಿ ಮಾಡಿ ಸುಖವನ್ನು ನೀಡುತ್ತಾನೆ. ಭಗವಂತ ಎಂದು ಅರ್ಥ ಆ ಪರಮಾತ್ಮನ ದೃಢವಾದ ವಿಚಾರವನ್ನು (ಈ ಜೀವವನ್ನು ಯಾವತ್ತಿಗೂ ಬಿಡಲಾರೆನು ರಕ್ಷಿಸಿಯೇ ತೀರುತ್ತೇನೆ) ಎನ್ನುವ ಭಗವಂತನ ಅನುಗ್ರಹವನ್ನು '' ಶರಣ್ಯಾಧ್ಯವಸಾಯಂ '' ಎಂದು ಹೇಳುವರು.

ಈ ಅಧ್ಯವಸಾಯವನ್ನು '' ಈ ಜೀವವನ್ನು ಪರಮಾತ್ಮನಾದ ನಾನು ಬಿಡುವುದಿಲ್ಲ '' ಎಂದು ಹೇಳುವುದನ್ನು ಇಲ್ಲಿ ಶ್ರೀ ರಾಮಚಂದ್ರನ ಮಾತಿನಲ್ಲಿ ನಾವು ಚೆನ್ನಾಗಿ ತಿಳಿಯಬಹುದು.

ಜೀವನ ದೃಢವಾದ ಅಭಿಪ್ರಾಯ, ಭಗವಂತನ ದೃಢಸಂಕಲ್ಪ, ಇವು ಎರಡೂ ಈ ಜೀವನು ಪುರುಷಾರ್ಥವನ್ನು ಪಡೆಯುವಾಗ ಅವಶ್ಯಕ ಎಂದರೂ, ಇವನ ಅಭಿಪ್ರಾಯಕ್ಕಿಂತಲೂ ಅವನ ಸಂಕಲ್ಪ ಅತಿಮುಖ್ಯವಾದುದಲ್ಲವೇ ?

ಈ ಚೇತನನು '' ಭಗವಂತನು ಈ ವಸ್ತುವನ್ನು ರಕ್ಷಿಸದೆ ಬಿಟ್ಟು ಬಿಡುವುದಿಲ್ಲ, ರಕ್ಷಿಸಿಯೇ ತೀರುತ್ತಾನೆ '' ಎನ್ನುವ ನಂಬಿಕೆ ಇಟ್ಟಿದ್ದರೂ, ಭಗವಂತನ ಇಚ್ಛೆಯಿಂದಲೇ ಇವನಿಗೆ ಕ್ಷೇಮವಾಗುವುದು ನಿಶ್ಚಯವಲ್ಲವೇ ?

ಈ ಚೇತನನು '' ಭಗವಂತನು ಈ ವಸ್ತುವನ್ನು ರಕ್ಷಿಸಿಯೇ ತೀರಬೇಕು '' ಎಂದು ಸಂಕಲ್ಪಿಸದೆ ಇರಬಹುದು. ಇವನು ಮೋಕ್ಷವನ್ನು ಪಡೆಯಲಾಗುತ್ತದೆಯೇ? ಆಗುವುದಿಲ್ಲವಲ್ಲವೇ ? ಇವರ ಹಾಗೆ ಪಾಪಮುಕ್ತನನ್ನಾಗಿ ಮಾಡಲು ಭಗವಂತನು ಇವನನ್ನೂ ಬಿಡದೆ ಇರುವುದು ಅತಿ ಮುಖ್ಯವಾದ ವಿಷಯ.

ಇಲ್ಲಿ ನಿನ್ನ ಮನಸ್ಸಿನಿಂದ ಏನನ್ನು ನೆನಸಿದ್ದೆ.
"ಉನ್ ಮನತ್ತಾಲ್ ಎನ್ನಿನೈಂದಿರುಂದಾಯ್ ಇಹಪೆಂಡ್ಡೈ ಎಂದೈಪಿರಾನೇ," ಎನ್ನುವ ತಿರುಮಂಗೈ ಆಳ್ವಾರವರ ಸಿರಿನುಡಿಗಳನ್ನು ತಿಳಿದುಕೊಳ್ಳಬೇಕು.

ನಿಜ ಸ್ಥಿತಿಯು ಹೀಗಿರಲು "ಶ್ರೀ ಕೃಷ್ಣ ಪರಮಾತ್ಮನ ಮಾತಿಗಿಂತಲೂ" ಶ್ರೀ ರಾಮಚಂದ್ರನ ಮಾತಿಗೆ ಹಿರಿಮೆಯುಂಟು" ಎನ್ನುವುದು ಚೆನ್ನಾಗಿ ತಿಳಿಯುತ್ತದೆ.

ಇದುವರೆವಿಗೂ "ಮಿತ್ರಭಾವೇನ" ಎನ್ನುವ ಈ ಮಾತಿನ ಶ್ರೇಷ್ಠತೆಯನ್ನು ಕಂಡೆವು. ಇನ್ನು ಈ ಮಾತಿನ ತಾತ್ಪರ್ಯವನ್ನು ಸಂಕ್ಷಿಪ್ತವಾಗಿ ನೋಡೋಣ.

"ನಂಬುವಂತಹ ಕಾರ್ಯಗಳಿಂದ ನಮ್ಮನ್ನು ಆಶ್ರಯಿಸಿ ಬಂದ ಈ ವಿಭೀಷಣನನ್ನು ಯಾವರೀತಿಯಿಂದಲೂ, ಕೇವಲ ಊಹಾಮಾತ್ರದಿಂದಲೂ ಬಿಡಲು ನನಗೆ ಇಷ್ಟವಿಲ್ಲ. ಈ ವಿಭೀಷಣನಿಗೆ ದೋಷಗಳಿದ್ದರೂ ಇವನು ನೆನಸಿದ ಕಾರ್ಯವನ್ನು ಪಡೆಯುವನಾಗುತ್ತಾನೆ. ಇವನನ್ನು ಸ್ವೀಕರಿಸುವುದು ಹಿರಿಯರಿಗೆ ನಿಂದಿಸಲು ತಕ್ಕುದಲ್ಲವಂತೆ" ಎನ್ನುವುದು ಮೇಲೆ ಹೇಳಿರುವ ಮನಸ್ಸಿನ ತಾತ್ಪರ್ಯ.

ಈ ರೀತಿ ತನ್ನ ಮನಸ್ಸಿನ ಇಚ್ಛೆಯನ್ನು ತಿಳಿಸಿಯೂ, ಅತ್ಯಧಿಕ ಪ್ರೇಮಾತಿಶಯವನ್ನು ಪಡೆದಿರುವ ಸುಗ್ರೀವನು ಸ್ವಲ್ಪ ಮಾತ್ರವೂ ತಿಳಿವನ್ನು ಹೊಂದದೆ, ಆ ರಾಮಚಂದ್ರನ ಎದುರಿಗೆ "ವಿಭೀಷಣನನ್ನು ಸ್ವೀಕರಿಸಲು ಯೋಗ್ಯನಲ್ಲ" ಎಂಬುದು ಕೆಲವು ನೀತಿಗಳಿಂದ ನಿರೂಪಿಸಿ ತಿಳಿಸಿರುತ್ತಾನೆ.

ಆ ಹೇಳಿಕೆಗೆ ಶ್ರೀ ರಾಮನು ಉತ್ತರ ಹೇಳುವಾಗ, ಆ ಪರಮಾತ್ಮನ ವಾಣಿಯಿಂದ ಹೊರಟ "ಮಿತ್ರಭಾವೇನ" ಎನ್ನುವ ಮಾತಿನಂತಹ ಅತಿ ಶ್ರೇಷ್ಠವಾದದ್ದು ಎಲ್ಲಾ ಚೇತನರಿಗೂ ಮೋಕ್ಷವನ್ನುಂಟು ಮಾಡುವಂತಹುದೂ ಆದ ವಾಕ್ಯಗಳು.

"ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ ।
ಅಭಯಂ ಸರ್ವಭೂತೇಭ್ಯಃ ದದಾಮ್ಯೇತದ್ವ್ರತಂ ಮಮ ॥

ಈ ವಾಕ್ಯಾಂಶಗಳ ಸಾರಾಂಶವನ್ನು ನೋಡುವಾಗ, ಸುಗ್ರೀವನ ಪ್ರಶ್ನೆಗಳಿಗೆ ಶ್ರೀ ರಾಮಚಂದ್ರನು ಉತ್ತರ ಕೊಟ್ಟಿರುವುದನ್ನು ನಾವು ನೋಡಿದರೆ ಉತ್ತಮ.

ಸುಗ್ರೀವನು ಶ್ರೀ ರಾಮಚಂದ್ರನನ್ನು ನೋಡಿ "ಹೇ ರಾಮಾ! ನೀನು ಪುರುಷೋತ್ತಮನು. ನಿನ್ನನ್ನು ನ್ಯಾಯ ರೀತಿಯಿಂದ ಉಪಾಯವಾಗಿ ಹೊಂದಿದವನನ್ನು ರಕ್ಷಿಸುವುದು ನಿನಗೆ ತಕ್ಕ ಧರ್ಮವೇ ಆಗಿದೆ. ಶಾಸ್ತ್ರವು ಶರಣಾಗತಿಯನ್ನು ಒಂದು ಸಮಯ ಮಾಡಿದರೆ ಒಳ್ಳೆಯದು, ಅನೇಕ ಸಾರಿ ಮಾಡಬಾರದು ಎಂದು ಹೇಳಿದೆ. ಈ ವಿಭೀಷಣನೋ ಶಾಸ್ತ್ರವು ಹೇಳುವ ರೀತಿಯನ್ನು ಅನುಸರಿಸದೆ "ರಾಘವಂ ಶರಣಂ ಗತಃ," "ಭವಂತಂ ಶರಣಂ ಗತಃ" "ಪಾದಯೋಃ ಶರಣಾನ್ವೇಷೀ ನಿಪಪಾತ" ಎಂದು ಮೂರು ಸಾರಿ ಶರಣವನ್ನು ಆಶ್ರಯಿಸಿರುವನಲ್ಲವೇ. ಆದ್ದರಿಂದ ಇವನು ಸ್ವೀಕರಿಸಲು ತಕ್ಕವನಲ್ಲ ಎಂದು ಹೇಳಿದನು.

ಇದಕ್ಕೆ ಶ್ರೀ ರಾಮನು ಹೇಳಿದ ಉತ್ತರ :-

"ಸಕೃದೇವ" ಈ ವಿಭೀಷಣನು ನೀತಿಯಿಂದಲೇ ನಮ್ಮನ್ನು ಆಶ್ರಯಿಸಿದವನೇ ಆಗುವನು. ಹೇಗೆ? ಎಂದರೆ, ರಾವಣನಿಂದ ಅತ್ಯಧಿಕ ಅವಮಾನಿತನಾದ ವಿಭೀಷಣನು ನಮ್ಮನ್ನು ಕುರಿತು, ನಾಲ್ಕು ಜನ ರಾಕ್ಷಸರೊಂದಿಗೆ ಆಕಾಶದಲ್ಲಿ ಹೊರಟಾಗಲೇ ನೀವು ಅವನನ್ನು ಶತ್ರುವೆಂದು ತಿಳಿದು ಸಂದೇಹಪಡಲು ನಿಮಗೆ ಆ ಸಂದೇಹ ನಿವೃತ್ತಿಯಾಗಬೇಕೆಂದು ಎಣಿಸಿ, ನನ್ನನ್ನು ಶತ್ರುವಾಗಿ ತಿಳಿಯಬಾರದು. ನಾನು ಶ್ರೀ ರಾಮನನ್ನು ಶರಣು ಹೊಂದಲು ಬಂದವನು ಎನ್ನುವ ನಿಜಸ್ಥಿತಿಯ ಮಾತುಗಳನ್ನು ನಿಮಗೆ ತಿಳಿಯಪಡಿಸಿದ ಮಾತುಗಳೇ "ರಾಘವಂ ಶರಣಂಗತಃ" ನಿಮ್ಮ ಮಾತುಗಳಿಂದ ನಾವುಗಳು ಸಂದೇಹ ಪಟ್ಟೆವೇ? ಎಂದು ಶಂಕಿಸಿ ನಮ್ಮನ್ನು ಜಾಗ್ರತಗೊಳಿಸಲು ಹೇಳಿದ ಮಾತುಗಳು "ಭವಂತಂ ಶರಣಂ ಗತಃ" ಎನ್ನುವುದು.

ಸತ್ಯತೆಯಲ್ಲಿ ನೀತಿಯನ್ನು ತಪ್ಪದೆ ನಮ್ಮನ್ನು ಶರಣು ಹೊಂದುವಾಗ ಹೇಳಿದ ಮಾತುಗಳು "ಪಾದಯೋಃ ಶರಣಾನ್ವೇಷಿ ನಿಪಪಾತ" ಎನ್ನುವುದು. ಆದ್ದರಿಂದ ಇವನನ್ನು ಸ್ವೀಕರಿಸಲು ತಕ್ಕವನೇ ಆಗಿರುವನು.

ಇದನ್ನು ಕೇಳಿಸಿಕೊಂಡ ನಂತರವೂ ಸುಗ್ರೀವನು ಹೇಳಿದ ವಿಚಾರ :-

"ಈ ವಿಭೀಷಣನು ಸ್ವಾಮಿಯವರನ್ನು ಶರಣಾಗತಿ ಮಾಡಿದವನಲ್ಲ. ಹೇಗೆ? ಎಂದರೆ ವಧೆ ಮಾಡಬೇಕೆಂಬ ನಮ್ಮ ಮಾತುಗಳನ್ನು ಕೇಳಿ "ಪೇರಟಿ" ಕೂಗಿ ಹೋಗಲು ನಿಂತವನಲ್ಲವೇ? ಇವನು! ಆದ್ದರಿಂದ ಇವನು ಸ್ವೀಕರಿಸಲು ಯೋಗ್ಯನಲ್ಲ.

ಇದಕ್ಕೆ ಶ್ರೀ ರಾಮಚಂದ್ರನ ಉತ್ತರ :-

"ಪ್ರಪನ್ನಾಯೈವ" ನಾವು ಈ ರೀತಿ ಇವನನ್ನು ಸ್ವೀಕರಿಸುವುದು ನ್ಯಾಯವೋ, ನ್ಯಾಯವಲ್ಲವೋ, ಎಂದು ಅಸಮಂಜಸಕ್ಕೊಳಪಡಬೇಕಾಗಿಲ್ಲ. ದೃಢವಾಗಿ ನಮ್ಮನ್ನೇ ಆಶ್ರಯಿಸಿ ಇರುವವನು ಇವನು.

ಇದನ್ನು ಕೇಳಿಕೊಂಡ ಸುಗ್ರೀವನು ಈ ವಿಭೀಷಣನು ಸ್ವಾಮಿಯವರನ್ನು ಅತ್ಯಧಿಕ ಹಿತೈಷಿಯೆಂದು ಎಣಿಸದೆ, ಲಂಕೆಯನ್ನು ಪಡೆಯಲು ಅಪೇಕ್ಷಿಸಿ ಬಂದವನಲ್ಲವೇ? ಸ್ವಾಮಿಯವರಿಗೆ ದಾಸನಾದ ಹನುಮಂತನಲ್ಲವೇ "ರಾಜ್ಯಂ ಪ್ರಾರ್ಥಯಮಾನಶ್ಚ" ಎಂದು ಈ ವಿಭೀಷಣನಿಗಿರುವ ಸ್ಥಿತಿಯನ್ನು (ಲಂಕೆಯಲ್ಲಿ ತಿಳಿಸಿರುವ ವಿಷಯಗಳನ್ನು) ಸ್ಪಷ್ಟವಾಗಿ ತಿಳುಹಿಸಿ, ತನ್ನ ಆಸೆಗಳನ್ನು ಮೊದಲು ಪ್ರಕಟಪಡಿಸಿರುತ್ತಾರೆ. ಆದ್ದರಿಂದ ಇವನು ಸ್ವೀಕಾರ ಮಾಡಲು ಯೋಗ್ಯನಲ್ಲ ಎನ್ನುತ್ತಾನೆ.

ಇದಕ್ಕೆ ಶ್ರೀ ರಾಮಚಂದ್ರನು ಹೇಳಿದ ಮಾತು "ತವಾಸ್ಮೀತಿ ಚಯಾಚತೇ" ಹನುಮಂತನು ರಾವಣನ ಎದುರಿಗೆ ನಮ್ಮ ಹಿರಿಮೆಯನ್ನು ಹೇಳುವಾಗ, ಆ ರಾವಣನು ಅದನ್ನು ಸಹಿಸಲಾರದೆ ಆ ಹನುಮಂತನನ್ನು ಕೊಲ್ಲಬೇಕೆಂದು ತನ್ನ ಸೇವಕರಿಗೆ ಆಜ್ಞೆ ಮಾಡಿದನು. ಆ ಸಮಯದಲ್ಲಿ ಇದ್ದ ವಿಭೀಷಣನು "ದೂತನನ್ನು ಕೊಲ್ಲಬಾರದು" ಎಂದು ತಡೆದನು. ಆ ರೀತಿ ತಡೆದು ತನಗೆ ಸಹಾಯವನ್ನು ಮಾಡಿರುವವರನ್ನು ಅರಿತ ಹನುಮಂತನು ಲಂಕಾ ರಾಜ್ಯವನ್ನು ವಿಭೀಷಣನಿಗೆ ಕೊಡಬೇಕೆಂದು

ತಾನು ಅಪೇಕ್ಷಿಸಿ " ರಾಜ್ಯಂ ಪ್ರಾರ್ಥಯೇ ಭವನತ್ವ " ಎಂದು ಹೇಳಿರುವನೇ ಹೊರತು ವಿಭೀಷಣನು ಸಾಮ್ರಾಜ್ಯವನ್ನು ಅಪೇಕ್ಷಿಸಲಿಲ್ಲ.

ಅನಂತರವೂ ನಮ್ಮ ತಮ್ಮನಾದ ಲಕ್ಷ್ಮಣನು ನಮ್ಮನ್ನು ಅಪೇಕ್ಷಿಸಿ, ನಮ್ಮನ್ನು ಅಗಲದೆ ನಮ್ಮೊಂದಿಗೆ ಇದ್ದು ನಮಗೆ ಮನಸ್ಸಂತೋಷವಾಗುವ ಹಾಗೆ, ನಮ್ಮನ್ನೇ ಶ್ರೇಷ್ಠ ಫಲವಾಗಿ ಪಡೆಯುತ್ತಾನೋ ಹಾಗೆಯೇ ಈ ವಿಭೀಷಣನೂ ಸಹ ನಮ್ಮನ್ನೇ ಶ್ರೇಷ್ಠ ಫಲವಾಗಿ ಅಪೇಕ್ಷಿಸಿ ನಮಗೇ ಸೇವೆ ಮಾಡಲು ಬಂದವನಾಗಿರುತ್ತಾನೆ (ತವ, ಚ, ಅಸ್ಮಿ ಇತಿ ಯಾಚಿತೇ) ಎನ್ನುವ ಪದಗಳನ್ನು " ಚ ", ಎನ್ನುವ ನುಡಿಯನ್ನು " ವ " ಕಾರದ ವಸ್ತುವಿನಲ್ಲಿ ತೆಗೆದುಕೊಂಡು ನೋಡಿದ, " ಶ್ರೀ ರಾಮನಾಗಿರುವ ನಿನಗೆ, ದಾಸನಾಗಿರುತ್ತೇನೆ. ಎಂದು ಅಪೇಕ್ಷಿಸುವವನು " ಪೊರಟ್ಟು " ಅದಕ್ಕಾಗಿ ಎನ್ನುವ ವಸ್ತು ಇಲ್ಲಿ ದೊರೆಯುತ್ತದೆಯಲ್ಲವೇ ?

ಇದನ್ನು ಕೇಳಿದ ಸುಗ್ರೀವನು ನಂತರವೂ ಶ್ರೀ ರಾಮನನ್ನು ಕುರಿತು " ಹೇ ರಾಘವಾ ! ವಿಭೀಷಣನ ಶರಣಾಗತಿ ನ್ಯಾಯ ವಿರುದ್ಧವಾದುದು " ಎಂದು ನಾನು ಹೇಳಿದ್ದಕ್ಕೆ ನೀನು ಉತ್ತರವನ್ನು ತಿಳಿಸಿದೆ. ನೀನು " ಅನುಗ್ರಹಿಸುವ ಫಲ ಯಾವುದು " ಎಂದನು.

ಇದನ್ನು ಕೇಳಿದ ಶ್ರೀ ರಾಮಚಂದ್ರನು " ದೇವತೆಗಳು ಮನುಷ್ಯರು ಮುಂತಾದ ಎಲ್ಲಾ ಜಂತುಗಳಿಂದಲೂ, ಭಯವನ್ನು ದೂರಗೊಳಿಸಿ ಒಳ್ಳೆಯದನ್ನುಂಟು ಮಾಡುತ್ತೇನೆ, " ಎಂದು ಹೇಳಿ ಈ ಪ್ರಪಂಚದಲ್ಲಿರುವವರೆಲ್ಲರಿಗೂ ದುಃಖ ನಿವೃತ್ತಿಯಾಗಿ ಸುಖವನ್ನುಂಟು ಮಾಡುವುದು ನಮಗೇ ಸೇರಿದ ಧರ್ಮವಲ್ಲವೇ ! ಸುಗ್ರೀವಾ ಇದನ್ನು ನೀನು ಪಾಲಿಸಿದರೆ ಉತ್ತಮ " ಎಂದು ಹೇಳಿರುತ್ತಾನೆ. (ಅಭಯಂ ಸರ್ವ ಭೂತೇಭ್ಯಃ ದದಾಮಿ ಏತದ್ವ್ರತಂ ಮಮ).

ಈ ರೀತಿ ತನ್ನ ದೃಢವಾದ ಸಂಕಲ್ಪವನ್ನು ಪ್ರಕಟ ಪಡಿಸಿದ ಸ್ಥಳದಲ್ಲಿಯೂ, ಸುಗ್ರೀವನಿಗೆ ಸಮಾಧಾನವಾಗಲಿಲ್ಲ. ಆ ಸಮಯದಲ್ಲಿ ತನ್ನ " ವಿಡುಕ್ಕೈಯುಂ " ಸಾಮರ್ಥ್ಯವನ್ನೂ ಅವನ ಮನಸ್ಸಿಗೆ ತಿಳಿಯುವ ಹಾಗೆ ಶೋಕ ನಿವೃತ್ತಿಯಾಗಲು ಹೇಳಿರುತ್ತಾನೆ.

" ಪಿಶಾಚಾನ್ ದಾನವಾನ್ ಯಕ್ಷಾನ್ ಪೃಥಿವ್ಯಾಂ ಚೈವ ರಾಕ್ಷಸಾನ್ ।
ಅಂಗುಲ್ಯಗ್ರೇಣ ತಾನ್ ಹನ್ಯಾಮಿಚ್ಛನ್ ಹರಿಗಣೇಶ್ವರ " ॥ ಎನ್ನುವುದು ದೃಢತೆಯನ್ನು ತಿಳಿಸುವ ವಾಕ್ಯಗಳು.

ಇದರ ತಾತ್ಪರ್ಯ :- " ಸುಗ್ರೀವ ! ಪಿಶಾಚಿಗಳನ್ನೂ, ರಾಕ್ಷಸರುಗಳನ್ನೂ, ಅಸುರರುಗಳನ್ನೂ ಈ ಭೂಮಿಯಲ್ಲಿರುವ ರಾಕ್ಷಸರುಗಳನ್ನೂ ಇವರೆಲ್ಲರನ್ನು ನಾಶ ಮಾಡುವುದಕ್ಕೆ ನಮ್ಮ ಬಲವೆಲ್ಲಾ ಬೇಡ, ಆಯುಧವೂ ಬೇಡ, ನನ್ನ ಕಿರು ಬೆರಳೂ ಬೇಡ, ಕಿರುಬೆಟ್ಟಿನ ತುದಿಯೇ ಸಾಕು. ಆದರೆ ನಮ್ಮ ವಿರೋಧಿಗಳ ಗುಂಪು ಆಗಿಂದ ಇರುವ

ದೇತಕ್ಕೆ ? ಎನ್ನಬಹುದು. ಪ್ರೇಮದಿಂದಲ್ಲ, ನಾನು ಮಾಡಬೇಕೆಂದು ಸಂಕಲ್ಪಿಸಿಲ್ಲ, ಹಾಗಿದ್ದದ್ದರಿಂದ ಆ ಗುಂಪು ನಾಶವಾಗದೆ ಇರಲು ಕಾರಣ.

ನನ್ನ ಪ್ರಾಣವನ್ನು ತೊಂದರೆಗೀಡು ಮಾಡಿದ ರಾವಣನನ್ನು ಕೊಲ್ಲದೆ ಇರಲು ಕಾರಣವೇನು ? ಎಂದು ಕೇಳಬಹುದು. ಈ ವಿಭೀಷಣನ ಹಾಗೆ ಜೀವದೊಂದಿಗೆ ತಲೆ ಬಾಗಿದರೆ ಅವನೂ, ಅವನನ್ನು ಸೇರಿದವರೂ ಬಾಳಬಹುದಲ್ಲವೆ ? ಇದೇ ಆ ರೀತಿ ಇರಲು ಕಾರಣವಾಗಿದೆ. ವಾಲಿಯನ್ನು ಹೊಡೆದು ಸಾಯಿಸಿದಾಗ ತಾನೇ ಕಿಷ್ಕಿಂಧೆಯ ಸಾಮ್ರಾಜ್ಯವನ್ನು ನೀನು ಪಡೆದು ವಾನರ ಸೈನ್ಯಕ್ಕೆ ರಾಜನಾದದ್ದು, ಎನ್ನುವದಾಗಿದೆ. ಇಲ್ಲಿ ಕೆಳ ಕಂಡಂತೆ ಸತ್ಯವನ್ನು ಕಾಣತಕ್ಕದ್ದು ಯಾವನು ತನ್ನ ಇಚ್ಛೆಯಿಂದ ಈ ಪ್ರಪಂಚವನ್ನು ಸೃಷ್ಟಿಸಿ. ಸ್ಥಿತಿಯಲ್ಲಿಟ್ಟು ಸಂಹಾರ ಮಾಡುತ್ತಾನೋ, ಅವನೇ ಅತ್ಯಂತ ಶ್ರೇಷ್ಠದೈವ '' ಎನ್ನುವುದು ವೇದಾಂತಗಳ ಸತ್ಯ ಸಂಗತಿಯಾಗಿರುತ್ತದೆ. ಆ ರೀತಿ ಸರ್ವಶ್ರೇಷ್ಠದೈವ ಶ್ರೀ ರಾಮಚಂದ್ರ ಎನ್ನುವುದನ್ನು ಈ ಪ್ರಸಂಗ ತಿಳಿಸದೇ ಇದೆ. ಆ ರಾಮಚಂದ್ರನಿಗೆ '' ಈ ರಾವಣನನ್ನೂ ಲಂಕೆಯನ್ನೂ ನಾಶಮಾಡುವುದು ವಿಷಯವೇ ''.

ದೇವತೆಗಳ ಬೇಡಿಕೆಗೆ ವಶಪಟ್ಟು, ತನ್ನ ಹಿರಿಮೆಯನ್ನು ಇತರರು ತಿಳಿಯದೆ ಇರುವಂತೆ. ಮಾನವ ಶರೀರದಂತಹ ತನ್ನ ಶರೀರವನ್ನು ಮರೆಸಿಕೊಂಡಿರುವವನಾದ, ರಾವಣ ವಧೆಯಾದ ನಂತರವೂ, ಬ್ರಹ್ಮ, ಶಿವ, ಮೊದಲಾದವರು ಹೇ ರಾಮಾ ! ನೀನು ನಾರಾಯಣನೆಂದು ನಿಜವನ್ನು ತಿಳಿದು ಹೇಳುವಾಗ ತನ್ನನ್ನು ಮನುಷ್ಯನೆಂದೇ ಹೇಳಿಕೊಂಡವನೂ, ಪರದೇವತೆಯೂ, ಪರಮ ಪುರುಷನೂ ಆದ ಶ್ರೀ ರಾಮಚಂದ್ರನು ತಾನಾಗಿಯೇ ಇರುವ ಧರ್ಮವನ್ನು ಸ್ಥಾಪಿಸುವ ಸ್ಥಳದಲ್ಲಿ '' ಮಿತ್ರಭಾವೇನ '' ಎನ್ನುವ ಮಾತಿನ ಮುಖಾಂತರ ತನ್ನ ದೃಢವಾದ ಅಭಿಪ್ರಾಯವನ್ನು ಹೇಳಿರುವಷ್ಟರಲ್ಲಿಯೇ ಇಲ್ಲದೆ ತನ್ನ ಇಚ್ಛೆಯಿಂದಲೇ ಈ ಪ್ರಪಂಚವನ್ನು ಸೃಷ್ಟಿಸಿ, ಪಾಲಿಸಿ, ನಾಶಮಾಡಲು ಸಮರ್ಥನಾದವನಿಗೆ ಲಂಕೆಯನ್ನೂ, ರಾವಣನನ್ನೂ ಸಂಹಾರ ಮಾಡಲು ಕಷ್ಟವೇ ? ತನಗೆ ಇರುವ ಶ್ರೇಷ್ಠ ಹಿರಿಮೆಯನ್ನು ಪ್ರಕಟ ಪಡಿಸಿ ಹೇಳಿ ಈ ರೀತಿಯಿಂದ ''ಸುಗ್ರೀವನಾಗಿರುವ ಆಶ್ರಿತನಿಗೆ ತಾನು ವಶಪಟ್ಟಿರುವುದು '' ಎನ್ನುವುದು ತನಗಿರುವ ಶ್ರೇಷ್ಠತೆಯನ್ನು ಕಳೆದುಕೊಳ್ಳದೆ ತಡೆದು, ತನಗೆ ಸೇರಿದ ಧರ್ಮದ ಮಹಿಮೆಯನ್ನು ಸ್ಥಾಪಿಸಿ ವಿಭೀಷಣನನ್ನು ಕಾಪಾಡಿದ ಚರಿತ್ರೆಯು ಅತ್ಯಂತ ಆಶ್ಚರ್ಯಕರವಾದುದಲ್ಲವೇ ?

ಶ್ರೀ ರಾಮನು ಈ ರೀತಿ ಹೇಳಿದ ನಂತರವೂ

'' ಆನಯೈನಂ ಹರಿಶ್ರೇಷ್ಠ ದತ್ತಮಸ್ಯಾಭಯಂ ಮಯಾ ।

ವಿಭೀಷಣೋ ವಾ ಸುಗ್ರೀವ ಯದಿ ವಾ ರಾವಣಃ ಸ್ವಯಮ್ '' ಎನ್ನುವುದು ಈ ಮಾತುಗಳ ಅರ್ಥವನ್ನು ನಿರ್ದಿಷ್ಟವಾದ ವಿಷಯದಲ್ಲಿ ನ್ಯಾಯವಾಗಿ ಇಲ್ಲಿ ನೋಡೋಣ '' ಸುಗ್ರೀವನೇ ! ತನ್ನ ಆಗಮನವನ್ನು ರಾಘವನಾಗಿರುವ ನನ್ನ ಹತ್ತಿರ ತಿಳಿಸುವಂತೆ ಈ ವಿಭೀಷಣನು ಬೇಡಿಕೊಂಡಿರುವನಲ್ಲವೆ ! ಇವನ ಮನಸ್ಸಿನ ಸಂಕಟ ದೂರವಾಗಿ ನಮ್ಮ ಹತ್ತಿರವೇ ಸೇರಲು ನಾವು ಅವನನ್ನು ಸ್ವೀಕರಿಸುವುದಕ್ಕೆ ನೀನು ಹೋಗಿ ಅವನನ್ನು

ಕರೆವವರಲ್ಲವೆ ? ಆದ್ದರಿಂದ ಅವನನ್ನು ಕರೆದುಕೊಂಡು ಬರಬೇಕು. ತ್ಯಜಿಸಬೇಕಾದ ಎಲ್ಲಾ ವಸ್ತುಗಳನ್ನು ಬಿಟ್ಟು ನಮ್ಮನ್ನು ಶರಣು ಹೊಂದಿರುವ ಇವನಿಗೆ ನಮ್ಮಿಂದಾದ ಒಳ್ಳೆಯದನ್ನು ಮಾಡಬೇಕು.

ಹೀಗೆ ಹೇಳಿದನಂತರ ವಿಭೀಷಣನನ್ನು ಕರೆದುಕೊಂಡು ಬರಲು ಹೋದ ಸುಗ್ರೀವನನ್ನು ಕುರಿತು ಪುನಃ ಶ್ರೀ ರಾಮನು ಹೇಳಿದ ವಿಷಯ ಯಾವುದು ? ವಿಭೀಷಣನನ್ನು ತಾನೇ ಕರೆದುಕೊಂಡು ಬರುವಂತೆ ಹೇಳಿದನೆಂದಲ್ಲವೆ ?—ಹೀಗಿರುಗಲೆ ರಾವಣನೇ ಆಗಿದ್ದರೂ ಕರೆದುಕೊಂಡು ಬರಬೇಕು. ವಿಭೀಷಣನನ್ನು ನಮ್ಮವನನ್ನಾಗಿ ಮಾಡಿಕೊಂಡದ್ದೇ ಆದರೆ, ನಮ್ಮ ಹತ್ತಿರ ಪುಣ್ಯವಂತನನ್ನು ಪಡೆದುಕೊಂಡವರಾಗುತ್ತೇವೆ. ಈ ವಿಭೀಷಣನೊಂದಿಗೆ ಬಂದ ನಾಲ್ಕು ರಾಕ್ಷಸರೂ ರಕ್ಷಿಸಲ್ಪಡುತ್ತಾರೆ. ಬಂದವನು ಸತ್ಯತೆಯಲ್ಲಿ ರಾವಣನಾಗಿದ್ದರೆ, ಆ ರಾವಣನನ್ನು ಸ್ವೀಕರಿಸಿದರೆ, ಶ್ರೀ ರಾಮನಾದ ನನಗೆ ಅತಿಶಯವಾಗುತ್ತದೆ. ಲಂಕೆಯಲ್ಲಿರುವ ಎಲ್ಲಾ ರಾಕ್ಷಸರೂ ಬದುಕಿಕೊಳ್ಳಲೆಂದು ಅಪೇಕ್ಷಿಸುವವರಾಗುತ್ತೇವೆ. ನಮಗೆ ಬರುವ ಎಲ್ಲಾ ಹಿರಿಮೆಯೂ ಪ್ರಿಯ ಮಿತ್ರನಾದ ನಿನ್ನದಲ್ಲವೇ, ಎನ್ನುವ ಹೋಲಿ ಹೇಳಿರುವ ಮಾತಿನ ನಿಜವಾದ ಅಭಿಪ್ರಾಯವಾಗಿದೆ.

ಇಲ್ಲಿ ಸುಗ್ರೀವನು ಒಳಪಟ್ಟಿದ್ದು. ಶ್ರೀ ರಾಮಚಂದ್ರನು ತಾನೇ ಸ್ವತಃ ವಿಭೀಷಣನನ್ನು ಕರೆದು ಸ್ವೀಕರಿಸದೆ, ಸುಗ್ರೀವನನ್ನು ಕಳುಹಿಸಿಯೇ ಕರೆದುಕೊಂಡು ಬರಲು ಆಜ್ಞೆ ಮಾಡಿರುವುದಕ್ಕೆ ಅಭಿಪ್ರಾಯವೇನು ಎಂದರೆ,

"ಶ್ರೀ ರಾಮನಿಗೆ ಆಶ್ರಿತ ಪಾರತಂತ್ರ್ಯ" ಎಂಬ ಹಿರಿಮೆ ಉಂಟು. ಅದು ಏನೆಂದರೆ ತನ್ನನ್ನು ಆಶ್ರಯಿಸಿದವನಿಗೆ ವಶಪಟ್ಟಿರುವುದಂತೆ. ಎಂದು ಈ ಪ್ರಬಂಧದಲ್ಲಿ ಆಗಾಗ್ಗೆ ಹೇಳಿರುತ್ತೇವೆ ಅಲ್ಲವೇ ? ತಾನಾಗಿಯೇ ವಿಭೀಷಣನನ್ನು ಕರೆದು ಸ್ವೀಕರಿಸುವಾಗ, ಆ ಹಿರಿಮೆ ಅವನಲ್ಲಿ ಸ್ಥಿರಪಟ್ಟಿರುವುದೋ ; ನಾಶವಾಗಿ ಅಳಿದು ಹೋಗುವುದಲ್ಲವೇ ? ಆದ್ದರಿಂದ ಸುಗ್ರೀವನನ್ನು ಕಳುಹಿಸಿಯೇ ಸ್ವೀಕರಿಸಿದನು. ಇದು ನಮ್ಮ ಆಚಾರ್ಯರುಗಳಿಂದಲೇ ಇಲ್ಲಿ ಸಮಾಧಾನವಾಗಿ ಹೇಳಿರುವಂತಹ ಒಂದು ಸತ್ಯ ಸಂಗತಿ.

ಅನಂತರವೂ ವಿಭೀಷಣನು ಶ್ರೀ ರಾಮಚಂದ್ರನಲ್ಲಿ ಅತ್ಯಧಿಕ ಪ್ರೀತಿ ಉಳ್ಳವನು "ಆ ವಿಭೀಷಣನನ್ನು ಕೊಲ್ಲಬೇಕು" ಎಂದು ಸುಗ್ರೀವನು ಹೇಳಿದ್ದು ಆ ಸುಗ್ರೀವನಿಗೆ ಮಹಾಪಾಪವಲ್ಲವೆ ? ತನ್ನನ್ನು ಬಿಟ್ಟು ಬಿಟ್ಟು ತನ್ನ ದಾಸರ ಹತ್ತಿರ ಪ್ರೇಮ ಮಾಡುವುದು ಒಳ್ಳೆಯದು ಎನ್ನುವುದು ಆ ರೀತಿ ಪ್ರೇಮ ಮಾಡದೆ ಇದ್ದರೆ "ಮಹಾಪಾಪ" ಎನ್ನುವುದೂ, ಆ ಪಾಪವುಳ್ಳವನು ಮಾತ್ರವಲ್ಲದೆ, ಅವನೊಂದಿಗೆ ವ್ಯವಹಾರವನ್ನು ಇಟ್ಟುಕೊಂಡಿರುವ ಈ ಪ್ರಪಂಚವೂ ನಾಶವಾಗಿ ಬಿಡುತ್ತದೆ ಎನ್ನುವುದೂ ಪರಮ ಪುರುಷನಿಂದ ಹೇಳಲ್ಪಟ್ಟ ಶ್ರೇಷ್ಠ ಸಂಗತಿ.

ಸತ್ಯತೆಯು ಈ ರೀತಿ ಇರಲು "ಸುಗ್ರೀವನು ವಿಭೀಷಣನನ್ನು ಕೊಲ್ಲಬೇಕು" ಎಂದು ಹೇಳಿರುವುದು ಅತ್ಯಗಾಧವಾದ ಮಹಾಪಾಪವಲ್ಲವೇ ? ಶ್ರೀ ರಾಮ ಪ್ರಭುವು ಆಶ್ರಿತರಲ್ಲಿ ಅತ್ಯಧಿಕ ಪ್ರೇಮವುಳ್ಳವನಾಗಿರುವುದರಿಂದಲೂ, ಸುಗ್ರೀವನು ಆ ಆಶ್ರಿತ

ರಲ್ಲಿ ಒಬ್ಬನಾದ್ದರಿಂದಲೂ, ಆ ಸುಗ್ರೀವನ ಪಾಪ ನಿವೃತ್ತಿಯಾಗಿ, ಸಖ್ಯವನ್ನು ಪಡೆಯಬೇಕೆಂಬ ಇಚ್ಛೆಯುಳ್ಳವನಾಗಿ ಆ ಸುಗ್ರೀವನನ್ನೇ ಕರೆದುಕೊಂಡು ಬರಲು ಆಜ್ಞಾಪಿಸಿದನು ಎನ್ನುವುದು ಇಲ್ಲಿ ಒಂದು ನಿಜವಾದ ತಾತ್ಪರ್ಯ.

ಮತ್ತೂ ಇಲ್ಲಿ ತಿಳಿಯಬೇಕಾದ ಒಂದು ಸತ್ಯ ಉಂಟು. ಭಗವಂತನನ್ನು ಜೀವನು ಪಡೆಯುವ ಪುರುಷಾರ್ಥ "ಸ್ವಗತ ಸ್ವೀಕಾರ" ಎನ್ನಲ್ಪಡುತ್ತದೆ. ಭಗವಂತನು ಒಬ್ಬ ಚೇತನನನ್ನು ತನಗೇ ಕಷ್ಟವೆಂದು ನಿರೀಕ್ಷಿಸಲ್ಪಡುವವನ ಹಾಗೆ ಅಪೇಕ್ಷಿಸಿ, ಅವನೇ ಇವನನ್ನು ಮೇಲೆ ಬಿದ್ದು ಹೊಂದುವುದು ಎನ್ನುವುದನ್ನು "ಪರಗತ ಸ್ವೀಕಾರ" ಎಂದು ವಿವರಿಸುತ್ತಾನೆ.

ಇಲ್ಲಿ ಮೊದಲಿನದಕ್ಕೆ "ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ" ಎನ್ನುವ ವಾಕ್ಯವೂ, ನಂತರದಕ್ಕೆ "ಯಮೇವೈಷ ವೃಣುತೇ ತೇನ ಲಭ್ಯಃ"—ಯಾವ ಚೇತನನನ್ನು ಭಗವಂತನೇ ಅನುಗ್ರಹಿಸಿ ಅಪೇಕ್ಷಿಸುತ್ತಾನೋ, ಅವನಿಂದ ಆ ಭಗವಂತನನ್ನು ಪಡೆಯಬಹುದು ಎನ್ನುವ ವಾಕ್ಯವೂ ತಕ್ಕ ಉದಾಹರಣೆಗಳಾಗಿವೆ.

"ಜೀವನು ಭಗವಂತನನ್ನು ಪಡೆಯುವಾಗ, ಹೇಗೆ ಮಹಾಲಕ್ಷ್ಮಿಯನ್ನು ಪುರುಷಕಾರವಾಗಿ ಮುಂದಿಟ್ಟುಕೊಂಡು ಪಡೆಯುತ್ತಾನೋ ಹಾಗೆಯೇ ಭಗವಂತನೂ ಒಬ್ಬ ಚೇತನನನ್ನು ತಾನಾಗಿಯೇ ಸ್ವೀಕರಿಸುವಾಗ ಮಹಾಲಕ್ಷ್ಮಿಯಾದ ಶ್ರೀದೇವಿಯನ್ನೇ ಅಲ್ಲವೆ ಮಾತೆಯ ಸ್ಥಾನದಲ್ಲಿರುವ ಒಬ್ಬ ಭಾಗವತೋತ್ತಮನನ್ನೇ ಮುಂದಿಟ್ಟುಕೊಂಡೇ ಸ್ವೀಕರಿಸುತ್ತಾನೆ ಎಂಬುದೂ ಸಹ ಒಂದು ಶ್ರೇಷ್ಠ ಸತ್ಯ.

ಈ ರೀತಿಯನ್ನು ಈ ರಾಮಾಯಣದಲ್ಲಿ ಅನೇಕ ಸ್ಥಳಗಳಲ್ಲಿ ನಾವು ಕಾಣಬಹುದು.

ಸೀತಾದೇವಿಯನ್ನು ಮುಂದಿಟ್ಟು ಶೃಂಗಿಬೇರಪುರದಲ್ಲಿ ಗುಹನನ್ನು ಸ್ವೀಕರಿಸಿರುವುದನ್ನು ನಾವು ಕಾಣಬಹುದು.

"ಗುಹೇನ ಸಹಿತೋ ರಾಮಃ" ಎನ್ನುವ ವಾಕ್ಯ ಇಲ್ಲಿ ನೋಡತಕ್ಕದ್ದು. ಈ ವಾಕ್ಯದಲ್ಲಿ ಗುಹನು ಶ್ರೀ ರಾಮಚಂದ್ರನೊಡನೆ ಸೇರಿದನು ಎಂದು ಹೇಳಿಲ್ಲ. ಶ್ರೀ ರಾಮಚಂದ್ರನು ಗುಹನು ಇರುವ ಕಡೆ ದಯಮಾಡಿಸಿ ಆ ಗುಹನೊಂದಿಗೆ ಸೇರಿದನು ಎಂದೇ ಹೇಳಿದೆ. ಇದರಿಂದ "ಭಗವಂತನು ಚೇತನನನ್ನು ಅವನಿರುವ ಸ್ಥಳದಲ್ಲಿ ದಯಮಾಡಿಸಿ ಪ್ರೀತಿಸಿ ಸ್ವೀಕರಿಸುತ್ತಾನೆ ಎನ್ನುವುದು ಸುಸ್ಪಷ್ಟ, ಹೀಗೆ ಸ್ವೀಕರಿಸುವಲ್ಲಿ ಸೀತಾದೇವಿಯನ್ನು ಮುಂದಿಟ್ಟುಕೊಂಡೇ ಸ್ವೀಕರಿಸಿದನು, ಶ್ರೀ ರಾಮಚಂದ್ರ ಎನ್ನುವುದನ್ನು ತಿರುಮಂಗೈ ಆಳ್ವಾರವರು "ವಾಳ್ವರ್ಪಡನೋಕ್ಕಿ" ಎನ್ನುವ ವಾಕ್ಯದಿಂದ ಅನುಗ್ರಹಿಸಿರುವುದನ್ನು ಕಾಣಬಹುದು.

ಈ ಗುಹನ ಚರಿತ್ರೆಯು ಹಾಗೆಯೇ ಈ ವಿಭೀಷಣನ ಚರಿತ್ರೆಯೂ ಇದೆ "ವಿಭೀಷಣೇನಾಪಿ ಜಗಾಮಸಂಗಮಮ್" ಎನ್ನುವುದು ಇಲ್ಲಿ ವಾಕ್ಯ. ಈ ವಾಕ್ಯದಲ್ಲಿಯೂ ಶ್ರೀ ರಾಮಚಂದ್ರನೂ ವಿಭೀಷಣನೊಂದಿಗೆ ಸೇರಿದ ಹಾಗೆಯೇ ಹೇಳಿರುತ್ತದೆ. ಇಲ್ಲಿ ಸೀತಾದೇವಿಯ ಸ್ಥಾನದಲ್ಲಿರುವ ಸುಗ್ರೀವನನ್ನು ಮುಂದಿಟ್ಟುಕೊಂಡು ವಿಭೀಷಣ

ನನ್ನು ಸ್ವೀಕರಿಸುವುದು ಸತ್ಯ "ಅನಘ್ಯಂ ಪರಿತ್ಯಜೇತ್" ಎನ್ನುವ ಮಾತಿನಿಂದ ಸುಸ್ಪಷ್ಟ.

ಆದರೆ "ಜೀವಾತ್ಮಾ ಭಗವಂತನನ್ನು ಪಡೆಯುವಾಗ ತಾನು ಅಪಾರ ದೋಷವುಳ್ಳವನಾಗಿರುವುದರಿಂದ ಪುರುಷಕಾರಭೂತೆಯಾದ ಮಹಾಲಕ್ಷ್ಮಿಯನ್ನು ಮುಂದಿಟ್ಟು ಕೊಳ್ಳುವುದು ಆ ದೋಷಗಳನ್ನು ಸಹಿಸುವುದು" ಎನ್ನಬಹುದು. ಭಗವಂತನು ಚೇತನನನ್ನು ತನಗಾಗಿ ನಿರೀಕ್ಷಿಸುವುದಾಗಿ ಅಭಿಪ್ರಾಯ ಪಟ್ಟು ತಾನಾಗಿಯೇ ಸ್ವೀಕರಿಸುವಾಗ ದೇವಿಯನ್ನೋ ಅಥವಾ ಆಸ್ಥಾನದಲ್ಲಿರುವ ಒಬ್ಬ ಭಾಗವತೋತ್ತಮನನ್ನೋ ಮುಂದೆ ಕಳುಹಿಸುವುದು ಯಾವ ಫಲವನ್ನು ಅಪೇಕ್ಷಿಸಿಯೋ ಈ ಪರಮಾತ್ಮನಿಗೆ ಕಿಂಚಿತ್ತೂ ದೋಷವಿಲ್ಲವಲ್ಲವೇ ? ಎಂದು ಕೆಲವರಿಗೆ ಇಲ್ಲಿ ಸಂದೇಹ ಉಂಟಾಗಬಹುದು ಅದಕ್ಕೆ ಪರಿಹಾರ :—

ಭಗವಂತನಿಗೂ ಕೊರತೆ ಉಂಟು. ಆ ಪಾಪವು ಯಾವುದು ಎಂದರೆ ಭಗವಂತನಿಗೂ ಚೇತನನಿಗೂ ಇರುವ ಸಂಬಂಧ ವ್ಯಾಪ್ತಿಗೂ ಉಂಟು. ನಾಶಮಾಡಿದರೂ ಅಳಿಯದೆ ಇರುವುದೆ ಈ ವಿಧವಾದ ಸಂಬಂಧವನ್ನೂ ತನ್ನ ಕರುಣಾಭರಿತವಾದ ಗುಣಗಳನ್ನು ಇದುವರೆಗೂ ನೋಡದೆ ಈ ಚೇತನನು ಮಾಡಿದ ಪಾಪಗಳನ್ನು ಕಂಡು ಇವನನ್ನು ತೊರೆದು ಸಂಸಾರದಲ್ಲಿ ಇಟ್ಟಿರುವವನಾದ್ದರಿಂದ ಈಗ ಮುಂದೆ ಬಂದು ಸ್ವೀಕರಿಸಲು ಶಕ್ಯವಾಗಿದ್ದರೂ, ಪರಮಾತ್ಮನನ್ನು ಈ ಚೇತನನು ತಿರಸ್ಕರಿಸಿ ಆಗಲಬಹುದಲ್ಲವೆ ?

ಈ ರೀತಿ ಆಗಲಿದೆ ಈ ಚೇತನನು ತನ್ನ ವಶದಲ್ಲಿ ಬರಬೇಕಾದರೆ, ಭಗವಂತನಿಗೂ ಮಹಾಲಕ್ಷ್ಮಿಯನ್ನೋ ಅಥವಾ ಅವರ ಸ್ಥಾನದಲ್ಲಿರುವವರನ್ನೋ ಮುಂದೆ ಕಳುಹಿಸುವುದು ಹಿತಕರವಾಗಿರುತ್ತದೆ.

ಇಲ್ಲಿ "ಇವನು ಮುಂದೆ ಮಾಡುವವರನ್ನು ಅವನು ಮುಂದಿಡುತ್ತಾನೆ ಎನ್ನುವುದನ್ನು ಅಭಯಪ್ರದಾನದಲ್ಲಿಯೂ ಕಾಣಬಹುದು. ಇವರಿಬ್ಬರು ಮುಂದೆ ಮಾಡುವುದೂ ತಮ್ಮ ತಮ್ಮ ದೋಷಗಳನ್ನು ಶಮನಗೊಳಿಸುವುದಕ್ಕಾಗಿಯೇ" ಎನ್ನುವ ಪಿಳ್ಳೈಲೋಕಾಚಾರ್ಯರ ಸಿರಿನುಡಿಗಳನ್ನು ಸ್ಮರಿಸತಕ್ಕದ್ದು.

ಈ ರೀತಿ ಶ್ರೀ ರಾಮಚಂದ್ರನು ವಿಭೀಷಣನನ್ನು ತಾನಾಗಿಯೇ ಸ್ವೀಕರಿಸದೆ "ಸುಗ್ರೀವನನ್ನು ಕರೆದುಕೊಂಡು ಬಾ" ಎಂದು ಅನುಗ್ರಹಿಸಿರುವುದಕ್ಕೆ ಅನೇಕ ಸತ್ಯ ವಿಷಯಗಳನ್ನು ನೋಡಿದೆವು.

ಈ ಸ್ಥಳದಲ್ಲಿ ಸುಗ್ರೀವನು ಶ್ರೀ ರಾಮಚಂದ್ರನ ಅನುಮತಿಯಂತೆ ಕರೆದುಕೊಂಡು ಬರಲು ವಿಭೀಷಣನು ಬಂದು ಪರಮಾತ್ಮನಾದ ಶ್ರೀ ರಾಮನನ್ನು ಆಶ್ರಯಿಸಿ, ನಮಸ್ಕರಿಸಿ ಬಾಳಿದನೆಂಬುದು ಚರಿತ್ರಾರ್ಹವಾದ ಸತ್ಯ. ಇಲ್ಲಿ ಭಗವಂತನಾದ ಧರ್ಮವು ಸ್ಥಿರವಾಗಿರುವುದನ್ನು ಕಂಡೆವು ?

ಹಾಗೆ ಶ್ರೀದೇವಿಗೆ ಪತಿಯಾದ ಭಗವಂತನು ಈ ಪ್ರಪಂಚದಲ್ಲಿ ಮಾಡಿರುವ

ಅವತಾರಗಳಲ್ಲಿ ಸರ್ವಶ್ರೇಷ್ಠವಾದ ಅವತಾರ ರಾಮಾವತಾರ ಎಂಬುದು ಹಾಗೆ ಆ ಪರಮಾತ್ಮನು ಉತ್ಕೃಷ್ಟವಾದ ಅವತಾರ ಮಾಡಿದಾಗ ಅವನನ್ನು ಸ್ತುತಿಸುವ ವೇದವೂ ವಾಲ್ಮೀಕಿ ಮುನಿಯ ಹತ್ತಿರದಿಂದ ಶ್ರೀ ರಾಮಾಯಣವಾಗಿ ಅವತಾರ ಮಾಡಿದೆ.

ಆ ರಾಮಾಯಣವು ಅತ್ಯಧಿಕ ಶ್ರೇಷ್ಠತೆ ಉಳ್ಳದ್ದು. ಮೋಕ್ಷ ಪುರುಷಾರ್ಥಗಳನ್ನು ಅಪೇಕ್ಷಿಸುವವರು ಅವಶ್ಯವಾಗಿ ತಿಳಿದುಕೊಳ್ಳಬೇಕಾದ ವಿಷಯ ಐದು. ಅವು ಪರಮಾತ್ಮಾ, ಜೀವಾತ್ಮಾ, ಉಪೇಯ, ವಿರೋಧಿ, ಉಪಾಯ, ಎನ್ನುವುದು.

ನಾರಾಯಣನು ಪರಮಾತ್ಮನು. ಆ ಪರಮಾತ್ಮನಿಗೆ ಶೇಷನಾಗಿಯೂ, ಪರತಂತ್ರನಾಗಿಯೂ ಇರುವವನು ಜೀವನು. ಆ ಪರಮಾತ್ಮನ ಮನಸ್ಸಂತೋಷಗೊಳ್ಳುವಂತೆ (ಸೇವೆ) ಕೈಂಕರ್ಯವನ್ನು ಮಾಡುವುದೇ ಮೋಕ್ಷ ಪುರುಷಾರ್ಥವೆನ್ನುವ ಉಪೇಯ. ಆ ಪುರುಷಾರ್ಥವನ್ನು ಇದುವರೆಗೂ ಜೀವನು ಪಡೆಯಲಾರದಂತೆ ಅಡ್ಡಿಮಾಡಿರುವ ಅಜ್ಞಾನ ಮುಂತಾದ ವಿರೋಧಿ. ಈ ವಿರೋಧಿಯನ್ನು ದೂರಗೊಳಿಸುವುದಕ್ಕೆ ತಕ್ಕ ಸಾಧನ ಭಕ್ತಿ–ಪ್ರಪತ್ತಿಗಳು ಎಂದು ವೇದಾಂತವು ಹೇಳುತ್ತದೆ. ವೇದದ ಶ್ರೇಷ್ಠ ಅವತಾರವಾದ ರಾಮಾಯಣವು ವೇದಾಂತವು ಹೇಳುವ ಹಾಗೆ ಐದು ವಸ್ತುಗಳನ್ನು ಚೆನ್ನಾಗಿ ಪ್ರಕಟಪಡಿಸುತ್ತೆ. ವೇದಾಂತವು ಮಾತ್ರ ತಾನು ಅತ್ಯಧಿಕ ಶ್ರೇಷ್ಠ ಪ್ರಮಾಣವಾಗಿದ್ದೂ, ಈ ಐದು ವಸ್ತುಗಳನ್ನು ಸ್ವಲ್ಪ ಮಾತ್ರವೂ ಸಂದೇಹವಿಲ್ಲದೆ ತಿಳಿಯಪಡಿಸಲಾರದ್ದರಿಂದ ಆ ವೇದಾಂತವು ಮೀಮಾಂಸಾ ಶಾಸ್ತ್ರ, ಇತಿಹಾಸವಾದ ರಾಮಾಯಣ ಮುಂತಾದವುಗಳ ಸಹಾಯವನ್ನು ಅಪೇಕ್ಷಿಸುತ್ತದೆ.

ಮೀಮಾಂಸಾ ಶಾಸ್ತ್ರವು ಮಾಡುವ ಸಹಾಯ ಶ್ರೇಷ್ಠವಾಗಿದ್ದರೂ ವೇದಾವಿಗಳಿಗೆ ಮಾತ್ರ ಅದು ಉಪಯೋಗಕ್ಕೆ ಬರುತ್ತದೆ. ಶ್ರೀ ರಾಮಾಯಣವು ಮೇಲೆ ಹೇಳಿರುವ ಐದು ವಸ್ತುಗಳನ್ನು ಚೆನ್ನಾಗಿ ತಿಳಿಯ ಪಡಿಸುವುದಾಗಿದ್ದರೂ, ಶರಣಾಗತಿ ಎನ್ನುವ ಉಪಾಯವನ್ನೇ ಪ್ರಶಸ್ತವಾಗಿ, ಸ್ಪಷ್ಟವಾಗಿ ಹೇಳುವುದರಲ್ಲಿ ಅಧಿಕ ಅಭಿಲಾಷೆಯುಳ್ಳದ್ದಾಗಿದೆ. ಆದ್ದರಿಂದಲೇ

"ಶರಣಾಗತಿಶಾಸ್ತ್ರಮ್" ಎಂದು ಶ್ರೀ ರಾಮಾಯಣವು ಪ್ರಸಿದ್ಧಿ ಪಡೆದಿರುತ್ತದೆ. ಶರಣಾಗತಿ ಧರ್ಮವನ್ನು ಕುರಿತಾದ ಅನೇಕ ಸತ್ಯಗಳನ್ನು ಶ್ರೀ ರಾಮಾಯಣವು ಆಯಾ ಸ್ಥಳಗಳಲ್ಲಿ ವಿಸ್ತಾರವಾಗಿಯೂ, ಸ್ಪಷ್ಟವಾಗಿಯೂ, ಸುಂದರವಾಗಿಯೂ ವಿವರಿಸುತ್ತದೆ. ಈ ಪ್ರಬಂಧದ ಅನೇಕ ಭಾಗಗಳಲ್ಲಿ ತಿಳಿದುಕೊಳ್ಳಬಹುದು.

ಭಕ್ತಾಮೃತ

ಶ್ರೀ ರಾಮಾವತಾರವೆಂದರೆ ಶ್ರೀ ಪರಾಶರ ಭಟ್ಟರಿಗೆ ಅಪರಿಮಿತವಾದ ಪಕ್ಷಪಾತ. ಶ್ರೀ ರಾಮ ಪಕ್ಷಪಾತಿಗಳಾದ ಭಟ್ಟರು ತಮ್ಮ ಸಹಸ್ರನಾಮ ಭಾಷ್ಯದಲ್ಲಿ ರಾಮೋ ವಿರಾಮೋ ವಿರತಃ " ಇತ್ಯಾದಿಯಾದ ದಿವ್ಯನಾಮಗಳಿಗೆ ಮೊದಲು " ಪರರ್ದ್ಧಿಃ ಪರಮ ಸ್ಪಷ್ಟಃ" ಎನ್ನುವ ಸ್ಥಳದಲ್ಲಿ " ಇತೋ ರಾಮಾಮೃತ ಸಂಜೀವನಂ ರಾಮಚರಿತಂ " ಎಂದು ಅನುಗ್ರಹಿಸಿರುವರು. ಪರರ್ದ್ಧಿಃ ಎನ್ನುವ ಶ್ರೇಷ್ಠವಾದ ಹೆಸರು ಮೊದಲಾದುದು ಮೃತಸಂಜೀವಿನಿಯಾದ ರಾಮ ಕಥೆಯನ್ನು ಹೇಳುತ್ತದೆ ಎನ್ನುವ ಹಾಗೆ ಪರರ್ದ್ಧಿಃ ಪರಮ ಸ್ಪಷ್ಟಃ ತುಷ್ಟಃ ಪುಷ್ಟಃ ಶುಭೇಕ್ಷಣಃ ರಾಮಃ ವಿರಾಮಃ ವಿರತಃ ಮಾರ್ಗಃ ನೇಯಃ ನಯಃ ಅನಯಃ ವೀರಃ ಶಕ್ತಿಮತಾಂಶ್ರೇಷ್ಠಃ ಧರ್ಮಃ ಧರ್ಮವಿದುತ್ತಮಃ " ಎನ್ನುವ ಹದಿನಾರು ದಿವ್ಯನಾಮಗಳು ರಾಮಚರಿತ್ರೆಯನ್ನು ತಿಳಿಸುತ್ತವೆಂಬುದು ಮನಸ್ಸಿಗೆ ಬಂದಿದ್ದರಿಂದ ಈ ಶ್ರೇಷ್ಠವಾದ ಹೆಸರುಗಳನ್ನು ತಿಳಿಸುವ ಮುಖಾಂತರ ಶ್ರೀ ರಾಮ ಗುಣಾನುಭವವನ್ನು ಮಾಡುತ್ತೇನೆ. ಆದ್ದರಿಂದಲೇ ಈ ಪ್ರಬಂಧಕ್ಕೆ " ಭಕ್ತಾಮೃತ " ಎಂದು ಹೆಸರು ಇಟ್ಟಿರುತ್ತೇನೆ.

1. **ಪರರ್ದ್ಧಿಃ** — ಪರಾಋದ್ಧಿಃ ಯಸ್ಯಾಸಃ — ಪರರ್ದ್ಧಿಃ — ಋದ್ಧಿಯಾದದ್ದು ಸಮೃದ್ಧಿ ಅತ್ಯಧಿಕ ಸಮೃದ್ಧಿಯುಳ್ಳವನು ಎಂಬಂತೆ, ಸಂಪತ್ತಿನಿಂದ ಕೂಡಿರುವವನೆಂದು ಆಳ್ವಾರ್ಗಳು ಅನೇಕ ಸ್ಥಳಗಳಲ್ಲಿ " ಶೆಲ್ವಂ ಮಲ್ಕುಡಿ ತಿರುವಿಣ್ಣಗರ್ " " ಶೆಲ್ವಮ್ ಮಲ್ಲಿಯುಮನ್‌ಕಿಡಂದ ತಿರುಕ್ಕೋಳೂರ್ " " ಶೆಲ್ವಮಲ್ಕುಕೆನ್ ತಿರುಕುಡಂದೈ " ಎಂದು ವಿವರಿಸುತ್ತಾರೆ. ಈ ಸ್ಥಳಗಳಲ್ಲಿ ಕಲ್ಯಾಣಗುಣ ಸಮೃದ್ಧಿಯನ್ನೇ ಮುಖ್ಯವಾದ ಐಶ್ವರ್ಯವನ್ನಾಗಿ ವ್ಯಾಖ್ಯಾನಮಾಡಿ ಅನುಗ್ರಹಿಸುತ್ತಾರೆ.

"ಭವಾಃ ಸರ್ವತ್ರೈವ ತು ಅಗಣಿತ ಮಹಾ ಮಂಗಲ ಗುಣಾಃ" ಎಂದು ಆಳ್ವಾರುಗಳು ಕೂರೇಶರ ಮಾತಿನಂತೆ ಹೇಳಿರುವ ಹಾಗೆ ಪರಮಾತ್ಮನ ರೂಪಗಳೆಲ್ಲದರಲ್ಲಿಯೂ ಗುಣಪೂರ್ತಿ ಕಡಿಮೆ ಇಲ್ಲದಿದ್ದರೂ ಶ್ರೀ ರಾಮಾವತಾರದಲ್ಲಿ ಮಾತ್ರ ಗುಣಪೌಷ್ಕಲ್ಯವನ್ನು ಅತ್ಯಧಿಕವಾಗಿ ಕಾಣಬಹುದಾಗಿದೆ. ಶ್ರೀ ರಾಮಾಯಣದಲ್ಲಿ ನಾಲು ಹಾಕಿ ಯಾವ ಸ್ಥಳದಲ್ಲಿ ನೋಡಿದರೂ ಅದೂ ಸ್ಥಳವೆಲ್ಲಾ ಗುಣಕೀರ್ತನ ಪ್ರಚುರವಾಗಿಯೇ ಕಂಡು ಬರುತ್ತದೆ.

ಶ್ರೀ ರಾಮಾಯಣದ ಪ್ರಾರಂಭವೇ ಗುಣಗಳನ್ನು ಕುರಿತಾದ ಪ್ರಶ್ನೋತ್ತರ. ಚಕ್ರವರ್ತಿಯು ಮಗನಿಗೆ ರಾಜ್ಯಾಭಿಷೇಕವನ್ನು ಮಾಡಿ ತಾನು ತಪಸ್ಸಿಗೆ ಹೋಗಬೇಕೆಂದು ಅಪೇಕ್ಷಿಸಿ, ಬೃಹತ್ಸಭೆಯನ್ನು ಸೇರಿಸಿ ಪ್ರಜೆಗಳ ಅಭಿಪ್ರಾಯವನ್ನು ಕೇಳುವಾಗ ಅನೇಕ ವರ್ಷ ಸಹಸ್ರೋ ವೃದ್ಧಸ್ತ್ವಮಸಿ ಪಾರ್ಥಿವ! " ವೃದ್ಧನೇ! ತೊಲಗಿ ಹೋಗು,

ವೃದ್ಧ ತೊಲಗಿ ಹೋಗು'' ಎನ್ನುತ್ತಾರೆ. ಅನಂತರ ಚಕ್ರವರ್ತಿಯು ಪ್ರಜೆಗಳನ್ನು ಕುರಿತು, ನಿಮ್ಮನ್ನು ಕೇಳದೆಯೇ ನಾನು ವಸಿಷ್ಠಾದಿಗಳೊಂದಿಗೆ ನಿರ್ಣಯಿಸ ಬಹುದಾಗಿದ್ದರೂ ಕೂಡ ನಿಮಗೆ ಒಂದು ಹೆಮ್ಮೆಯನ್ನುಂಟು ಮಾಡಲು ಕೇಳಿದೆನು ; ನೀವುಗಳು ಕೂಡ ಹಿರಿಮೆಯಿಂದ ಉತ್ತರವನ್ನು ಹೇಳಬಹುದಾಗಿದ್ದಿತು. ''ನಿಮ್ಮ ಇಷ್ಟದ ಹಾಗೆ ಮಾಡಬಹುದು'' ಎಂದು ವಿನಯದಿಂದ ಹೇಳ ಬಹುದಾಗಿದ್ದಿತು. ಅದನ್ನು ಬಿಟ್ಟು ಇದುವರೆವಿಗೂ ನಾನು ಅಧರ್ಮವಾಗಿ ರಾಜ್ಯವನ್ನು ಆಳಿದ ಹಾಗೂ, ನೀವು ನನ್ನಿಂದ ಬಿಡುಗಡೆ ಹೊಂದಲು ಸಮಯವನ್ನು ಕಾದು ನೋಡುತ್ತಿರುವ ಹಾಗೂ, ತೋರಿಸಿ ನನ್ನ ಹತ್ತಿರ ಅತ್ಯಂತ ತಿರಸ್ಕಾರವಾಗಿ ಮಾತನಾಡಿದಿರಲ್ಲ. ನಾನು ಮಾಡಿದ ತಪ್ಪು ಯಾವುದು ? ಎಂದು ಕೇಳುತ್ತಾನೆ. ಅದಕ್ಕೆ ಪ್ರಜೆಗಳ ಪ್ರತ್ಯುತ್ತರವೇನೆಂದರೆ, (ಬಹವೋ ನೃಪಕಲ್ಯಾಣ ಗುಣಾಃ ಪುತ್ರಸ್ಯ ಸಂತಿತೇ) ಮಹಾ ಪ್ರಭೋ ! ತಮ್ಮ ಹತ್ತಿರ ಯಾವ ದೋಷವನ್ನೂ ಕಂಡು ಹೇಳಲಿಲ್ಲ. ನಿಮ್ಮ ಹಿರಿಯ ಪುತ್ರನು ''ಗುಣಾನಾಮಾಕರೋ ಮಹಾನ್'' ಎನ್ನುವ ಹಾಗೆ ಇರುವುದರಿಂದ ಅವನ ಆಶ್ರಯದಲ್ಲಿ ಬಾಳ ಬೇಕೆಂಬ ಆಸೆಯಲ್ಲದೆ ಮತ್ತೇನೂ ಇಲ್ಲ ಎನ್ನುತ್ತಾರೆ. ಶ್ರೀ ರಾಮನ ಗುಣಗಳನ್ನು ಬಾಯಿಂದ ಹೇಳಿ ಆನಂದ ಬಾಷ್ಪವನ್ನು ಸುರಿಸುತ್ತಾರೆ. (ಅಯೋಧ್ಯಾಕಾಂಡ ೨ ನೇ ಸರ್ಗ) ಈ ರೀತಿಯಾಗಿ ಪ್ರತಿಯೊಂದು ಕಾಂಡದಲ್ಲಿಯೂ, ರಾಮನ ಗುಣಗಳನ್ನು ಒಂದೊಂದು ಸರ್ಗದಲ್ಲಿಯೂ, ಪ್ರತಿಯೊಬ್ಬರ ಬಾಯಿಯಲ್ಲಿಯೂ ಹೇಳಲ್ಪಡುವುದರಿಂದ ಈ ರೀತಿಯಾದ ಗುಣ ಸಮೃದ್ಧಿಯನ್ನು ತೋರಿಸಿ ಪರರ್ದ್ಧಿಃ ಎನ್ನಲಾಗುತ್ತದೆ. ಇನ್ನು ''ಪರೇಷ್ವಾಪತ್ಸು ಹೃಷ್ಟ ದೇವ (ಸ್ವಸ್ಯ) ವೃದ್ಧೌ ಯಸ್ಯ'' ಎಂದುಕೊಂಡು ಪರಸಮೃದ್ಧಿಯೇ ಪುರುಷಾರ್ಥವೆಂದು ಇರುವವನು ರಾಮನು ಎಂದು ಅಭಿಪ್ರಾಯ ಪಡಬಹುದು. ಸುಗ್ರೀವ ವಿಭೀಷಣಾದಿಗಳಿಗೆ ಪಟ್ಟಾಭಿಷೇಕ ನಡೆಸಿದ ತಾನು ಅಭಿಷಿಕ್ತನಾಗುವುದಿಲ್ಲವೆಂದು ಇದ್ದುದರಿಂದ ಈ ಶ್ರೇಷ್ಠಗುಣವು ಚೆನ್ನಾಗಿ ಪ್ರಕಾಶಿಸುತ್ತದೆ.

''ತ್ವಯಿ ಕಿಂಚಿತ್ ಸಮಾಪನ್ನೇ ಕಿಂ ಕಾರ್ಯಂ ಸೀತಯಾ ಮಮ'' ಎನ್ನುವ ಸ್ಥಳ ಪರಸಮೃದ್ಧಿಯನ್ನೇ ಅಪೇಕ್ಷಿಸುವನು ಭಗವಂತ ಎನ್ನುವುದಕ್ಕೆ ತಕ್ಕ ಉದಾಹರಣೆಯಾಗಿದೆ.

ಲಂಕಾದ್ವಾರದಲ್ಲಿ ಶ್ರೀ ರಾಮಚಂದ್ರನು ನಿಲ್ಲುವಲ್ಲಿ ರಾವಣನು ಗೋಪುರದ ಶಿಖರದಲ್ಲಿ ಕಾಣಿಸಿಕೊಂಡಾಗ ''ರಾಜ ದ್ರೋಹಿಯಾದವನು ಪರಮಾತ್ಮನ ಎದುರಿಗೆ ನಿಲ್ಲುವುದೇಕೆ ?'' ಎಂದು ಸುಗ್ರೀವ ಮಹಾರಾಜನು ಅವನ ಮೇಲೆ ಎರಗಿಬಿದ್ದು ಅವನನ್ನು ಗೆದ್ದು ಬಂದಾಗ ಪರಮಾತ್ಮನು (ಏವಂ ಸಾಹಸಯುಕ್ತಾನಿ ನ ಕುರ್ವಂತಿ ಜನೇಶ್ವರಾಃ) ಕೆಲವರನ್ನು ಎದುರಿಸ ಬೇಕಾದರೆ ಪರಿಜನರನ್ನಲ್ಲದೇ ಕಳುಹಿಸಬೇಕು, ಮುಂಚಿಂದಲೇ ಮೇಲೆ ಬೀಳುವುದೇ ? (ತ್ವಯಿ ಕಿಂಚಿತ್ ಸಮಾಪನ್ನೇ ಕಿಂ ಕಾರ್ಯಂ ಸೀತಯಾ ಮಮ ?) ಸೀತಾದೇವಿಯನ್ನು ಪಡೆಯುವುದಕ್ಕಲ್ಲವೇ ನಾವು ಇಷ್ಟು ಕಷ್ಟ ಪಡುವುದು ; ನಿಮ್ಮ ಬಿರುದಿಗೆ ಏನಾದರೂ ಕುಂದುಂಟಾಗಿದ್ದೇ ಆದರೆ ಆ ದೇವಿಯಿಂದ

ತಾನೇ ನನಗೇನು ? ಎಂದು ಹೇಳುತ್ತಾನೆ. ಇಲ್ಲಿ ಭಗವಂತನು ಪರಸಮೃದ್ಧಿಗೆ ವಿರೋಧವಿಲ್ಲದೆ ಸ್ವಸಮೃದ್ಧಿಯನ್ನು ಅಪೇಕ್ಷಿಸುವವನೆಂದು ಪ್ರಕಟವಾಗುತ್ತದೆ. ಈ ದಿವ್ಯನಾಮದ ಮಹಿಮೆಯನ್ನು ಇನ್ನೂ ವರ್ಣಿಸ ಬಹುದು. ಆದರೆ ಇಷ್ಟು ಮಾತ್ರ ಸಾಕು.

2. **ಪರಮಸ್ಪಷ್ಟಃ**—'' ನ ಚಕ್ಷುಷಾ ಪಶ್ಯತಿ ಕಶ್ಚನೈನಂ '' '' ನ ಮಾಂಸ ಚಕ್ಷುರಭಿವೀಕ್ಷತೇ ತಮ್ '' '' ಎನ್ನೇನಂ ಕಳಕಣ್ಣಾಲ್ ಕಾಣಾದ ಅಪ್ಪರೆ '' ಮುಂತಾದ ಯಾರ ಕಣ್ಣಿಗೂ ಕಾಣದಿರುವ ಆಕಾರವನ್ನು ಎಲ್ಲರೂ ಕಂಡು ಸಂತುಷ್ಟರಾಗುವ ಹಾಗೆ ಅತ್ಯಂತ ಸ್ಪಷ್ಟ ಮಾಡಿಕೊಟ್ಟವನೆಂದು ಆಳ್ವಾರ್ ಅತಿಮಾನುಷಸ್ತವದಲ್ಲಿ (10) '' ಕ್ಷೋದೀಯಸಿ ಸೋಽಪಿ ಹಿ ಜನಸ್ಯ ಕೃತೇ ಕೃತೀತ್ವಮ್ ಆತ್ಮಾವತೀರ್ಯ ನನು ಲೋಚನ ಗೋಚರೋ ಭೂ'' ಎಂದು ಹೇಳಿರುವುದನ್ನು ಇಲ್ಲಿ ಸ್ಮರಿಸಬೇಕು. ''ಸ್ಪಷ್ಟಃ'' ಎನ್ನುವ ಪದಕ್ಕೆ ಪರಮ ತತ್ವವನ್ನು ಸ್ಪಷ್ಟವಾಗಿ ಪಡೆದವರು ಎಂಬ ಅರ್ಥ ಭಟ್ಟರ ಭಾಷ್ಯದಲ್ಲಿ ಪ್ರಕಾಶಿಸುತ್ತದೆ. ಪರತತ್ವವನ್ನು ಬಿಟ್ಟು ಬಂದು ಅವತಾರಮಾಡಿರುವುದು ಕೆಲವರಿಗೆ ಸ್ಪಷ್ಟವಾಗಿ ತಿಳಿಯದೆ ಇರುವುದೆಂಬುದನ್ನು ರಾಮಾಯಣದಿಂದ ತಿಳಿಯುತ್ತೇವೆ. ಪರಮಾತ್ಮನ ಅರಣ್ಯವಾಸ ಪ್ರಸಂಗದಲ್ಲಿ ದುಃಖಿತಳಾದ ಕೌಸಲ್ಯಾದೇವಿಯನ್ನು ಸಮಾಧಾನ ಪಡಿಸುವ ಸುಮಿತ್ರೆ '' ಸೂರ್ಯಸ್ಯಾಪಿ ಭವೇತ್ ಸೂರ್ಯಃ......ದೈವತಂ ದೇವತಾನಾಂಚ '' ಇತ್ಯಾದಿಗಳಿಂದ ಪರಮಾತ್ಮನ ಪರತ್ವವನ್ನು ತಾನು ಸ್ಪಷ್ಟವಾಗಿ ತಿಳಿದು ಮಾತನಾಡುತ್ತಾಳೆ. ರಾವಣನು ಮರಣ ಹೊಂದಿದ ಸ್ಮಶಾನ ಭೂಮಿಯಲ್ಲಿ ಬಂದು ಪ್ರಲಾಪಿಸುವ ಮಂಡೋದರಿ—''ವ್ಯಕ್ತಮೇಷ ಮಹಾಯೋಗೀ ಪರಮಾತ್ಮಾ ಸನಾತನಃ...ಅನಾದಿಮಧ್ಯ ನಿಧನಃ...ತಮಸಃ ಪರಮೋ ಧಾತಾ....ಶಂಖ ಚಕ್ರ ಗದಾಧರಃ ಶ್ರೀವತ್ಸವಕ್ಷಾ ನಿತ್ಯಶ್ರೀಃ ಅಜಯ್ಯಃ ಶಾಶ್ವತೋ ಧ್ರುವಃ ಮಾನುಷಂ ರೂಪಮಾಸ್ಥಾಯ ವಿಷ್ಣುಸ್ಸತ್ಯ ಪರಾಕ್ರಮಃ '' ಮುಂತಾದ ವಾಕ್ಯಗಳಿಂದ ಪರಮಾತ್ಮನ ಪರತ್ವವನ್ನು ಅತ್ಯಂತ ಸ್ಪಷ್ಟವಾಗಿ ಕಂಡು ಹೇಳುತ್ತಾಳೆ. ಪಂಪಾ ತೀರದಲ್ಲಿ ಮೊಟ್ಟಮೊದಲು ಕಾಣಲು ಬಂದ ಹನುಮಂತನು '' ಆಯತಾಶ್ಚ ಸುವೃತ್ತಾಶ್ಚ ಬಾಹವಃ ಪರಿಗೋಪಮಾಃ ಸರ್ವ ಭೂಷಣ ಭೂಷಾರ್ಹಾಃ ಕಿಮರ್ಥಂ ನ ವಿಭೂಷಿತಾನ್'' ? ಎಂದು ಕೇಳುತ್ತಾನೆ. ಇಲ್ಲಿ ''ಆಯತಾಶ್ಚ, ಸುವೃತ್ತಾಶ್ಚ, ಬಾಹವಃ ತೇ ಪರಿಘೋಪಮಾ'' ಎಂಬ ದ್ವಿವಚನವಾಗಿ ಶ್ಲೋಕವು ಹೊಂದಿರುವುದರಿಂದ ಬಹುವಚನದಿಂದ ಹೇಳಿರುವುದನ್ನು ಕುರಿತು ಗೋವಿಂದರಾಜರು ಬರೆಯುತ್ತಾರೆ, '' ಹನುಮತೋ ಭಕ್ತ್ಯತಿಶಯೇನ ತಸ್ಯ ಚತುರ್ಭುಜಾವೇಕ್ಷಣ ವ್ಯಕ್ತಿಶ್ಚಾ ಭವತ್ '' ಎಂದು. ಅದೇನೆಂದರೆ ಹನುಮಂತನು ಪರಮ ಭಕ್ತನಾದ್ದರಿಂದ ಅವನಿಗೆ ನಿಜರೂಪವನ್ನು ತೋರಿಸಿದರೆಂದು. ಅತ ಆ ದಿನವೂ ಕೂಡ ಸಮುದ್ರ ಶರಣಾಗತಿ ಪ್ರಕರಣದಲ್ಲಿ ಪರಮಾತ್ಮನು ತಲೆದಿಂಬಾಗಿ ಇಟ್ಟುಕೊಂಡ ಬಾಹುವನ್ನು ವರ್ಣಿಸುವ ವಾಲ್ಮೀಕಿಮುನಿಯು '' ಭುಜೈಃ ಪರಮನಾರೀಣಾಂ ಅಭಿಮೃಷ್ಟ ಮನೇಕಧಾ '' ಎನ್ನುತ್ತಾರೆ. ಇಲ್ಲಿ ಪರಮನಾರಿಗಳೆನ್ನಾಗಿ ಹೇಳಿದ ಶ್ರೀದೇವಿ

ಭೂದೇವಿ ನೀಳಾದೇವಿಗಳೇ ಎಂದು ವ್ಯಾಖ್ಯಾನ. ಆದ್ದರಿಂದಲೇ ವಾಲ್ಮೀಕಿ ಮುನಿಯೂ ಭಗವಂತನ ಪರತ್ವ ವೇಷವನ್ನು ಸ್ಪಷ್ಟವಾಗಿ ಕಂಡವರೆಂದು ತಿಳಿಯುತ್ತದೆ. ಈ ರೀತಿಯಾಗಿ ಭಗವಂತನ ಪರಮ ಸ್ಪಷ್ಟತ್ವವು ನಿರೂಪಿತವಾಯಿತು.

3. **ತುಷ್ಟಃ**–ಸಂತುಷ್ಟ ಎನ್ನುವ ಹಾಗೆ ಪರಮಾತ್ಮನ ಅವತಾರವನ್ನು ವರ್ಣಿಸುವ ನಮ್ಮಾಳ್ವಾರ್ "ನಾಟ್ಟಿಲ್ ಪಿರಂದು ಪಡಾದನ ಪಟ್ಟು ಮನಿಸರಕ್ಕಾಯ್" ಎನ್ನುತ್ತಾರೆ. "ಕರ್ಮ ಪರತಂತ್ರರುಗಳಾದ ಸಂಸಾರಿಗಳಿಗೂ ಪಡಾದ ಕಷ್ಟಂಗಳೆಲ್ಲಾಂ ಪಟ್ಟು" ಎನ್ನುತ್ತಾರೆ ವ್ಯಾಖ್ಯಾತರುಗಳು. "ದುಃಖ ಸಂವೇದನಾಯೈವ ರಾಮೇ ಚೈತನ್ಯ ಮಾಹಿತಂ" (ಉತ್ತರ ರಾಮ ಚರಿತೆ) ಭಗವಂತನು ತಾನೇ ಹೇಳಿದ್ದಾಗಿ ಭವಭೂತಿ ಕವಿ ಬರೆಯುತ್ತಾನೆ. ಇದರಿಂದ ಪರಮಾತ್ಮನ ಮನಸ್ಸು ಸಂತೋಷವುಳ್ಳದಾಗಿದೆಯೆಂದು ತಿಳಿಯಲು ಅವಕಾಶವುಂಟು. ಸತ್ಯತೆಯು ಆ ರೀತಿ ಇಲ್ಲ. ಸಂಸಾರಿಗಳ ಸಮುಜ್ಜೀವನಾರ್ಥವಾಗಿ ಬಂದು ಅವತರಿಸಿದವೆಂದು ಮನಸ್ಸಂತೋಷದಿಂದಲೇ ಇರುತ್ತಾರೆ. ಕಿರೀಟ ಧಾರಣೆ ಮಾಡಿಕೊಂಡು ರಾಜ್ಯವಾಳುತ್ತೇನೆಂದು ಇರುವಾಗ, ಜಡೆಯನ್ನು ಧರಿಸಿ ನಾರುಮಡಿಯನ್ನುಟ್ಟು ಕಾಡಿಗೆ ಹೋಗಲು ಆಜ್ಞಾಪಿಸಿದಾಗ, ಎಷ್ಟೋ ದುಃಖದಿಂದ ಇದ್ದದ್ದಾಗಿ ಕೆಲವರು ತಿಳಿಯಬಹುದು. ಆದರೆ ಪರಮ ಸಂತೋಷವಾಗಿಯೇ ಭಗವಂತನು ಇದ್ದನು.

"ರಾಜ್ಯಂ ವಾ ವನವಾಸೋವಾ ವನವಾಸೋ ಮಹೋದಯಃ" ಎಂದನಲ್ಲವೇ ಪರಮಾತ್ಮ! ಇಲ್ಲಿ ಕಂಬರ ಮಾತು ಅತ್ಯದ್ಭುತವಾಗಿದೆ. ವನವಾಸದ ಆಜ್ಞೆಯನ್ನು ಪಡೆಯುವುದಕ್ಕೆ ಮೊದಲು ಶ್ರೀ ರಾಮಚಂದ್ರನ ಮುಖಮಂಡಲವು ತಾವರೆಯ ಹೂವಿನಂತೆ ಇತ್ತಂತೆ. ವನವಾಸದ ಆಜ್ಞೆಯನ್ನು ಪಡೆದನಂತರ ಆ ಮುಖ ಮಂಡಲವು ಆಗ ತಾನೇ ವಿಕಸಿತವಾದ ಕೆಂದಾವರೆಯನ್ನು ಮೀರಿದ ಪ್ರಫುಲ್ಲತೆಯುಂಟಿತ್ತು. ಕಠೋರವಾದ ವನಕ್ಕೆ ಹೋಗಬೇಕಾಯಿತೆಂದು ಸ್ವಲ್ಪ ಮಾತ್ರವೂ ದುಃಖಿಸದೆ ಪುಣ್ಯಕರವಾದ ವನಗಿರಿಗಳಲ್ಲಿ ಸತ್ಪುರುಷರ ಸೇವೆ ಮಾಡಲು ಅವಕಾಶ ದೊರೆತದ್ದಕ್ಕಾಗಿ ಪರಮ ಸಂತೋಷಗೊಂಡನೆಂಬುದೇ ಆಗಿದೆ. "ಉತ್ಸವೇಷು ಚ ಸರ್ವೇಷು ಪಿತೇವ ಪರಿತುಷ್ಯತಿ" ಎಂದು ಪ್ರಜೆಗಳ ಎದುರಿಗೆ ಕಂಡು ಹೇಳಿದ ಹಾಗೆ ತನ್ನ ದೇಶದಲ್ಲಿರುವವರಿಗೆ ಉಂಟಾಗುವ ಸಂತೋಷವನ್ನು ತನ್ನ ಸಂತೋಷವನ್ನಾಗಿ ತೆಗೆದುಕೊಂಡು ಆನಂದಿಸುವವನು. "ಅಭಿಷಿಚ್ಯ ವಿಭೀಷಣಂ ವಿಜ್ವರಃ ಪ್ರಮುಮೋದಹ" ಎನ್ನುವ ಹಾಗೆಯೇ ಪ್ರೀತಿಯುಳ್ಳವರನ್ನು ಸಂತೋಷ ಪಡಿಸಿ ತಾನು ಸಂತೋಷಾತಿಶಯವನ್ನು ಹೊಂದುವವನು.

4. **ಪುಷ್ಟಃ**–ಇದು ಕೂಡ ಮೇಲೆ ತುಷ್ಟಃ ಎಂಬ ಶ್ರೇಷ್ಠ ಹೆಸರಿನಿಂದ ಹೇಳಿದ ಸಂತುಷ್ಟಿಯನ್ನೇ ಚೆನ್ನಾಗಿ ಸ್ಥಿರ ಪಡಿಸುತ್ತದೆ. ಅಂದರೆ ತಾನು ಹೊಂದುವ ಸಂತೋಷದಿಂದ ಪ್ರಸನ್ನನಾಗುವವನು "ಉಳ್ಳತ್ತಿನ್ ಮಹಿಳ್ಚ್ಚಿ ಉಡಲಿಲೇ ತೆರಿಯುಂ" ಎನ್ನು

ವುದರಿಂದ ಪೃಥಕ್ತವಾದ ಸಂತೋಷವನ್ನು ಮುಖ ಮಂಡಲವು ಪ್ರಕಟಿಸುವುದಾಗಿರುತ್ತೆ. ವನವಾಸದ ಆಜ್ಞೆಯನ್ನು ಪಡೆದಾಗ "ವನವಾಸೋಮಹೋದಯಃ" ಎಂದು ಹೇಳಿದ್ದು ಕೃತ್ರಿಮವೆಂದು ನೆನೆಸದಂತೆ ಮುಖಮಂಡಲದಲ್ಲಿ ಪ್ರಫುಲ್ಲತೆಯು ತೋರುತ್ತಿತ್ತು. ವನವಾಸ ಪ್ರಾಪ್ತವಾದದ್ದು ಪರಮ ಸಂತೋಷಕ್ಕೆ ಹೇತುವೆಂದು ಹೇಳಿರುವುದನ್ನು ಸ್ವಲ್ಪ ವಿಚಾರ ಮಾಡಿದರೆ ಅಪೋಕ್ತಿಯೇ ಹೊರತು ಸತ್ಯತೋಕ್ತಿಯಲ್ಲವೆಂದು ಹೇಳಬಹುದಾಗಿದೆ. (ಹೇಗೆ ಎಂದರೆ) ಅನಂತರ ಅರಣ್ಯ ಕಾಂಡದಲ್ಲಿ ಸೀತಾವಿಯೋಗ ಪ್ರಾಪ್ತವಾದಾಗ ದುಃಖದಿಂದ ಪರಿತಪಿಸುವ ಪರಮಾತ್ಮನು "ರಾಜ್ಯಾತ್ ಭ್ರಂಶೋ ವನೇವಾಸೋ ನಷ್ಟಾ ಸೀತಾ ಹತೋ ದ್ವಿಜಃ ಈದೃಶೀಯಂ ಮಮಾ ಲಕ್ಷ್ಮೀಃ ನಿರ್ದಹೇತ್ ಅಪಿ ಪಾವಕಂ" ಎಂದು ಹೇಳಿ ಪ್ರಲಾಪಿಸುತ್ತಾನೆ. "ಅಯ್ಯೋ! ರಾಜ್ಯವನ್ನು ತೊರೆದೆನಲ್ಲ! ಕಾಡಿನಲ್ಲಿ ಬಂದು ವನವಾಸ ಮಾಡಬೇಕಾಯಿತಲ್ಲ!" ಎಂದು ಹೇಳುವುದು "ವನವಾಸೋಮಹೋದಯಃ" ಎನ್ನುವುದಕ್ಕೆ ನೇರ ವಿರೋಧವಲ್ಲವೆ? ವನವಾಸದ ಆಜ್ಞೆ ಸಂತೋಷಕರವಾಗಿದ್ದರೆ "ರಾಜ್ಯಾತ್ ಭ್ರಂಶಃ" ಎಂದೂ, ವನೇವಾಸಃ ಎಂದು ಹೇಳಲು ಮಾತು ಹೊರಡುತ್ತದೆಯೇ—ಈದೃಶೀ ಇಯಂ ಮಮಲಕ್ಷ್ಮೀಃ ಎಂದು ರಾಜ್ಯಭ್ರಂಶ ವನವಾಸಗಳನ್ನು ದೌರ್ಭಾಗ್ಯವೆಂದಲ್ಲವೇ? ಇದು ಹೊಂದುವುದು ಹೇಗೆ "ರಾಜ್ಯನಾಶೋಪಕರ್ಷತಿ" "ವನವಾಸೋಮಹೋದಯಃ" ಎಂದು ಹೇಳಿ ಹೋದ ಆ ರಾಮನು ಈಗ ಅನರ್ಥವೆಂದು ಹೇಳುವುದೇಕೆಂದರೆ, ಆಶ್ರಿತ ಸಂರಕ್ಷಣಕ್ಕೂ ಋಷಿಗಳನ್ನು ರಕ್ಷಿಸುವುದಕ್ಕೆಂದೇ ವನಕ್ಕೆ ಹೋಗಿದ್ದುದರಿಂದ ಅದಕ್ಕೆ ವಿರೋಧವಾಗಿದ್ದುದರಿಂದ ಹೀಗೆ ಹೇಳಿರುತ್ತಾರೆ. ದೇವಿಯ ವಿಯೋಗದಿಂದಲೂ, ಹಿರಿಯನಾದ ಜಟಾಯುವನ್ನು ಕಳೆದುಕೊಂಡದ್ದೂ ಇದಕ್ಕೆ ಮೂಲ ಕಾರಣ; ಈಗ ಅನರ್ಥವಾಗಿ ತೋರಿತು-ಎನ್ನುವುದು ನಂಜೀಯರವರ ಶ್ರೀಸೂಕ್ತಿ. ಇದನ್ನು ಸ್ವಲ್ಪ ವಿವರಿಸುತ್ತೇನೆ. ವನಕ್ಕೆ ಹೊರಡುವಾಗ ಏತಕ್ಕೆ ಸಂತೋಷವೆಂದರೆ-ದೇವಿಯೊಂದಿಗೆ ಏಕಾಂತವಾಸ ಮಾಡುತ್ತೇನೆ. ಪರಮ ಭಾಗವತರೊಂದಿಗೆ ಸಹವಾಸವನ್ನು ಮಾಡುತ್ತೇನೆ ಎಂದು. ಈ ರೀತಿಯಾದ ಮನೋರಥದಿಂದ ರಾಮನಿಗೆ ಸಂತೋಷವುಂಟಾಯಿತು. ನೆನೆಸಿಕೊಂಡ ಹಾಗೆಯೇ ಪುರುಷಾರ್ಥವು ದೊರೆಯುತ್ತಾ ಬಂದಿತು. "ವೈದೇಹೀ ರಮಸೇ ಕಚ್ಚಿತ್ ಚಿತ್ರಕೂಟೇ ಮಯಾ ಸಹ" ಎಂದು ಮನಸ್ಸಂತೋಷವುಂಟಾಗುವ ಹಾಗೆ ದೇವಿಯೊಂದಿಗೆ ಸೇರಿ ಇದ್ದು ಸಂತೋಷವುಂಟಾಯಿತು "ಇಹಪತ್ಸ್ಯಾಮಿ ಸೌಮಿತ್ರೇ! ಸಾರ್ಧಮೇತೇನ ಪಕ್ಷಿಣಾ" ಎಂದು ಜಟಾಯು ಮಹಾರಾಜನ ಪಕ್ಷದ ಛಾಯೆಯಲ್ಲಿ ಅಡಗಿಕೊಂಡಿರಲೂ ಒದಗಿತು, ಈ ಸ್ಥಿತಿಯಲ್ಲಿ "ಹಾ ನಾಥ ಹಂತ ನಳಿನೀಂ ಗಜ ಉದ್ಬ್ರಹಾರ" ಎನ್ನುವಂತೆ ದೇವಿಯನ್ನು ಅಗಲಿ ಜಟಾಯು ಮಹಾರಾಜರನ್ನು ಪೂರ್ಣವಾಗಿ ತೊರೆಯ ಬೇಕಾಗಿ ಬಂದಿತು, ಈ ದುಃಖವು ಹೇಳಿಸಿದ ಮಾತಲ್ಲವೆ "ರಾಜ್ಯಾತ್ ಭ್ರಂಶೋ ವನೇವಾಸಃ" ಎನ್ನುವುದು? ಇದರಿಂದ ಕಾಡಿಗೆ ಹೊರಡುವಾಗಲೇ ಸಂತೋಷವಿಲ್ಲದೆ ವ್ಯಸನದಿಂದ ಹೊರಟಿದ್ದಾಗಿ ಎಣಿಸಲು ಯೋಗ್ಯವೆ? ಪರಮ ಕುತೂಹಲದಿಂದ ಮಹೋತ್ಸವವನ್ನು ದರ್ಶನ ಮಾಡಬೇಕೆಂದು

ದಿವ್ಯ ಕ್ಷೇತ್ರಕ್ಕೆ ಹೋದವರು ಅಲ್ಲಿ ಸ್ಥಳವೂ, ಊಟ, ಕುಡಿಯಲು ನೀರೂ ದೊರೆಯದೆ, ಬಿಸಿಲಿನಲ್ಲೂ, ಮಳೆಯಲ್ಲೂ ಪರಿತಪಿಸ ಬೇಕಾಯಿತೆಂದುಕೊಳ್ಳೋಣ. ಆಗ ಏಕೆ ಮನೆಯನ್ನು ಬಿಟ್ಟು ಇಲ್ಲಿ ಬಂದು ದುಃಖಿಸುತ್ತೇವೆ! ಹಾಗೆಂದು ಬಳಲಿದರೆ ಇದರಿಂದ ಊರನ್ನು ಬಿಟ್ಟು ಹೊರಡುವಾಗ ಇದ್ದ ಕುತೂಹಲವನ್ನು ಇಲ್ಲವೆನ್ನುವುದಕ್ಕಾಗುತ್ತದೆಯೇ ? ಲಂಕೆಗೆ ಹೋದ ಹನುಮಂತನು ಅಶೋಕವನದಲ್ಲಿ ಸೀತಾದೇವಿಯನ್ನು ನೋಡಿದ ತಕ್ಷಣ " ಅನಯಾಹೀನಃ ಪ್ರಭುಃ ಧಾರಯತಿ ಆತ್ಮನೋ ದೇಹಂ ನ ಶೋಕೇನ ಅವಸೀದತಿ " ಎಂದು ಹೇಳಿದ್ದು ಪರಮಾತ್ಮನನ್ನು ಗ್ರಹಿಸುವುದರ ಹಾಗೆ ಇದ್ದರೂ ಬಾಡದೆ ಕೃಶಿಸದೆ ಪುಷ್ಟರಾಗಿಯೇ ಇದ್ದಾರೆ ಎಂದು ತೋರಿಸಿದ ಹಾಗೆ ತೆಗೆದುಕೊಳ್ಳಬಹುದು. ಇಲ್ಲವಾದರೆ "ಜೀವತಿ" ಎಂದು ಮೊದಲಿನ ವಾಕ್ಯದೊಂದಿಗೆ ಮುಗಿಸದೆ "ಧಾರಯತಿ ಆತ್ಮನೋ ದೇಹಂ" ಎನ್ನುವ ಅಸಾಧಾರಣ ದೇಹಪುಷ್ಟಿಯನ್ನು ಅಂತರಂಗವಾಗಿ ತೋರಿಸುವ ಹಾಗೆ ಇದೆ.

5. **ಶುಭೇಕ್ಷಣಃ**–ಪರಮಾತ್ಮನ ನೇತ್ರ ಸೌಂದರ್ಯದಲ್ಲಿ ಮುಗ್ಧರಾದವರಲ್ಲಿ ಚಕ್ರವರ್ತಿ, ಶಬರಿ, ಹನುಮಂತ ಮೊದಲಾದವರು. "ಏನೋವೇಕ್ಷ್ಯಯ್ಯಕ್ಕಾಕ್ಕ" ನಿನ್ನ ಪುತ್ರನನ್ನು ಹೋಗಗೊಡೆ ಎಂದು ವಿಶ್ವಾಮಿತ್ರ ಮುನಿಯವರು ಬೇಡಿದಾಗ "ಊನಷೋಡಶವರ್ಷೋ ಮೇ ರಾಮೋ ರಾಜೀವ ಲೋಚನಃ" ಎಂದು ಉತ್ತರ ಹೇಳಿದ ಚಕ್ರವರ್ತಿಯ ಅಭಿಪ್ರಾಯ ಹಲವಿಧವುಂಟು. ಅವುಗಳಲ್ಲಿ ಒಂದು ತಾತ್ಪರ್ಯ ಈ ನಯನಾಭಿರಾಮನನ್ನು ಬಿಟ್ಟು ಅಗಲಿ ಹೇಗೆ ತಾನೇ ಜೀವಿಸಿರಲಿ ಎಂದು. ಶಬರಿಯು ತನ್ನಾಶ್ರಮಕ್ಕೆ ಬರುತ್ತಿರುವ ಪರಮಾತ್ಮನನ್ನು ಕಂಡಕ್ಷಣವೇ "ಚಕ್ಷುಷಾ ತವ ಸೌಮ್ಯೇನ ಪೂತಾಸ್ಮಿ ರಘುನಂದನ !" ಎಂದು ಅವರ ನೇತ್ರ ಸೌಂದರ್ಯದಲ್ಲಿ ತಾನು ಆಕರ್ಷಿತಳಾದುದನ್ನು ತಿಳಿಸಿದಳು. ಹನುಮಂತನೊಂದಿಗೆ "ಯಾನಿ ರಾಮಸ್ಯ ಚಿಹ್ನಾನಿ...ತಾನಿ ಭೂಯಃ ಸಮಾಚಕ್ಷ್ವ" ಎಂದು ಪರಮಾತ್ಮನ ಪರಿಚಯವನ್ನು ಹೇಳುವಂತೆ ಕೇಳಿದಾಗಲೇ ಹನುಮಂತನು ಮೊಟ್ಟಮೊದಲು "ರಾಮಃ ಕಮಲ ಪತ್ರಾಕ್ಷಃ" ಎನ್ನುತ್ತಾನೆ. ಆ ನೇತ್ರ ಸೌಂದರ್ಯವು ಮಾಡುವುದೇನು ? ಎಂದರೆ [ಸರ್ವ ಸತ್ತ್ವ ಮನೋಹರಃ] ಪ್ರಾಣಿಗಳೆಂದು ಹೆಸರು ಪಡೆದವರೆಲ್ಲರ ಹೃದಯವನ್ನು ಸೂರೆಮಾಡುವಂಥದ್ದು ಆ ಸೌಂದರ್ಯವೆನ್ನುತ್ತಾರೆ. ಹನುಮಂತನು ಪರಮಾತ್ಮನ ಕಣ್ಣಿನ ಸೌಂದರ್ಯವನ್ನು ಒಂದು ದೊಡ್ಡ ನಗರದಲ್ಲಿ ಕಾಣಲಿಲ್ಲ, 'ಜನವಾದ ಒಂದು ವನದ ಮೂಲೆಯಲ್ಲಿ ಕಂಡು "ಸರ್ವ ಸತ್ತ್ವ ಮನೋಹರಃ" ಎಂದು ಯಾವುದನ್ನು ನೋಡಿ ಹೇಳಿದರೆಂದು ಆಲೋಚಿಸಬೇಕು. ನಂಜೀಯರವರು ಅನುಗ್ರಹಿಸುವುದು : "ತಿರ್ಯಕ್ ಜಾತಿಯವನಾಗಿ ವನವನದಲ್ಲಿ ರೆಂಬೆಯಿಂದ ರೆಂಬೆಗೆ ಸಂಚರಿಸುವ ನನ್ನ ಹೃದಯವನ್ನು ಅಪಹರಿಸಿತು" ಎಂದು ಇದರಿಂದ ಭಗವಂತನ ಕಣ್ಣಿನ ಸೌಂದರ್ಯವು ಸರ್ವ ಸತ್ತ್ವಮನೋಹರವೆನ್ನುವ ಸ್ಥಳ ಕೈಮುದಿತ ನ್ಯಾಯ ಸಿದ್ಧವು ಇದನ್ನು ಪರಿಗಣಿಸಿಯೇ ಕಟಿಬರು, ಹನುಮಂತನು

ಶ್ರೀ ರಾಮನನ್ನು ಕಾಣುವಾಗಲೇ "ಮುಂಜಿನ ತಿರಂಡಕೋಲ ಮೇನಿಯು!" ಎಂದು ಹೇಳಿರುವುದಾಗಿ ಹಾಡಿದರು. (ಶುಭೇಕ್ಷಣಃ) ಇದಕ್ಕೆ ಭಾಷ್ಯವನ್ನು ವಿವರಿಸದೇ ಇದ್ದ ಭಟ್ಟರು "ಸ್ವಕರ್ತೃಕಂ ಸ್ವಕರ್ಮಕಂಚ ದರ್ಶನಂ ಅತಿಶುಭಂ ಅಸ್ಯ" ಎನ್ನುವುದೊಂದು ಅರ್ಥವನ್ನು ಹೇಳುತ್ತಾರೆ. ಶ್ರೀ ರಾಮನನ್ನು ಬೇರೆಯವರು ನೋಡುವುದು ಮಧುರ, ಶ್ರೀ ರಾಮನು ಮತ್ತೊಬ್ಬರನ್ನು ನೋಡುವುದು ಅತಿಮಧುರ ಎನ್ನುವುದಾಯಿತು. ಈಕ್ಷಣ ಶಬ್ದವಾದದ್ದು ಕಣ್ಣು ಎಂಬ ಅರ್ಥವನ್ನು ಮತ್ತು ನೋಡುವುದು ಎಂಬ ಅರ್ಥವನ್ನು ತೆಗೆದುಕೊಂಡು ಮೇಲೆ ವಿವರಣವನ್ನು ಮಾಡಿದರು. ಈಗ ಕಾಣುವುದು ಎಂಬುವ ಅರ್ಥವನ್ನು ತೆಗೆದುಕೊಂಡು ವಿವರಿಸುತ್ತೇನೆ. (ಯಶ್ಚ ರಾಮಂ ನ ಪಶ್ಯೇತ್ತು ಯಂಚ ರಾಮೋನ ಪಶ್ಯತಿ । ನಿಂದಿತ ಸ್ಸವಸೇಲ್ಲೋಕೇ ಸ್ವಾತ್ಮಾಪ್ಯೇನಂ ವಿಗರ್ಹತೇ) ಶ್ರೀ ರಾಮಾಯಣ ಅಯೋಧ್ಯಾಕಾಂಡ 17-14) ಶ್ರೀ ರಾಮನನ್ನು ಕಾಣದವನು ಶ್ರೀ ರಾಮನಿಂದ ಕಾಣಲ್ಪಡದವನು ಪ್ರಪಂಚದಲ್ಲಿ ನಿಂದಿಸಲ್ಪಟ್ಟವನಂತೆ. ಲೋಕದಲ್ಲಿ ನಿಂದಿಸುವವರು ಇರಲಿ, ತನ್ನನ್ನು ತಾನೇ ನಿಂದಿಸಿಕೊಳ್ಳಬೇಕಾಗುತ್ತದೆ, ಎನ್ನುವ ಹಾಗೆ. ಇದರಿಂದ ಶ್ರೀ ರಾಮನನ್ನು ಕಾಣುವ ಹಾಗೆ, ಶ್ರೀ ರಾಮನಿಂದ ನೋಡಲ್ಪಡುವುದು ಪುರುಷಾರ್ಥವೆಂದು ನಿರ್ಧರಿಸಲ್ಪಡುವುದರಿಂದ "ಶುಭೇಕ್ಷಣ" ಎನ್ನುವುದಕ್ಕೆ ಎರಡು ವಿಧವಾದ ಅರ್ಥವನ್ನು ಭಟ್ಟರು ಉದ್ಧರಿಸಿರುವುದು ಅತ್ಯಂತ ಸಮರ್ಪಕವಾಗಿದೆ. ಅಶೋಕವನದಲ್ಲಿ ಪರವಶ ಸಂತ್ರಿರುವ ದೇವಿಯು "ತಂ ಪದ್ಮದಳ ಪತ್ರಾಕ್ಷಂ ಸಿಂಹವಿಕ್ರಾಂತ ಗಾಮಿನಂ, ಧನ್ಯಾಃ ಪಶ್ಯಂತಿ ಮೇ ನಾಥಂ ಕೃತಜ್ಞಮ್ ಪ್ರಿಯವಾದಿನಂ" ಎಂದು ಹೇಳಿರುವ ಈ ಶ್ಲೋಕವು ಆಲೋಚಿಸಲು ಯೋಗ್ಯವಾದದ್ದು. ಇದರಲ್ಲಿ ಪದ್ಮದಳ ಪತ್ರಾಕ್ಷನ ಬದಲಾಗಿ ಇಲ್ಲಿ ಪದ್ಮದಳವೆಂದೋ, ಪದ್ಮಪತ್ರವೆಂದೋ ಒಂದು ಹೇಳಿದರೆ ಸಾಕು! "ಪತ್ರಂ ಪಲಾಶಂ ಛದನಂ ದಳಂ ಪರ್ಣಂ ಛದಃ ಪುಮಾನ್" ಎಂದು ಅಮರ ಕೋಶದಲ್ಲಿರುವ ಹಾಗೆ, ದಳ ಪತ್ರವು ಪರ್ಯಾಯವಾದ್ದರಿಂದ ದಳ ಪತ್ರಾಕ್ಷ ಎಂದು ಎರಡನ್ನು ಸೇರಿಸಿ ಹೇಳುವುದು ಪುನರುಕ್ತಿಯಾಗಲಿಲ್ಲವೇ ? ಎಂದು ಕೆಲವರು ಸಂದೇಹ ಪಡುವುದುಂಟು. ಸಂದೇಹವು ಯೋಗ್ಯವಾದದ್ದೇ. ಇಲ್ಲಿ ಹಿರಿಯರು ಹೇಳುವ ಸಮಾಧಾನ ಕೂಡ ರಸಯುಕ್ತವಾಗಿದೆ. ಸಂಸ್ಕೃತ ಭಾಷೆಯಲ್ಲಿ ಅಕ್ಷವೆನ್ನುವ ಶಬ್ದಕ್ಕೆ "ಅಕ್ಷಮಿಂದ್ರಿಯೆ ಕಾಯಯೋಃ" ಎನ್ನುವ ನಿಘಂಟಿನಂತೆ, ಕಣ್ಣೆಂದೂ ಶರೀರವೆಂದೂ, ಎರಡರ್ಥಗಳಿವೆ. ಎರಡನ್ನು ಸೇರಿಸಿ ಹೇಳುವ ತಮಿಳು ಸಂಪ್ರದಾಯದಿಂದ ಪದ್ಮದಳ ಪತ್ರಾಕ್ಷವೆನ್ನುವ ಈ ಸ್ಥಳದಲ್ಲಿ ಅಕ್ಷಪದಕ್ಕೆ ಈ ಎರಡರ್ಥಗಳನ್ನೂ ತೆಗೆದುಕೊಂಡು "ಪದ್ಮದಳದ ಹಾಗೆ ವಿಶಾಲವಾದ ಕಣ್ಣಿನ ಸೌಂದರ್ಯವುಳ್ಳವನು, ಪದ್ಮ ಪತ್ರದ ಹಾಗೆ (ತಾವರೆ ಎಲೆಯ ಹಾಗೆ) ಆರ್ದ್ರಕಾಂತಿಯುಳ್ಳ ಮುಖಮಂಡಲವುಳ್ಳವನೆಂದು ತೆಗೆದುಕೊಳ್ಳಬೇಕು. ನಮ್ಮಾಳ್ವಾರ್ ತಿರುವಾಯ್‌ಮೊಳಿಯಲ್ಲಿ "ಕೆಕ್ಕಮಲತ್ತಲರ್ ಪೋಲುಂ ಕಣ್, ಕೈ, ಕಾಲ್, ಶೆಂಗನಿವಾಯ್ ಅಕ್ಕಮಲತ್ತಿಲೈ ಪೋಲುಂ ತಿರುಮೇನಿ" ಎಂದು ಅನುಗ್ರಹಿಸಿರುವುದು ಮೇಲೆ ವಿವರಿಸಿರುವ ಅರ್ಥವನ್ನು ಕುರಿತೇ ಆಗಿದೆ.

೯. **ರಾಮಃ**–"ರಮಯತೇ ಇತಿ ರಾಮಃ". ರಮು–ಕ್ರೀಡಾಯಾಂ ಎಂಬ ಧಾತುವಾದ್ದರಿಂದ ಆಟವಾಡುವವನು ಎಂದು ಅರ್ಥವಾಗುತ್ತದೆ. "ತ್ವಂ ಸ್ವಚ್ಛಂದಿತ್ಯೈರು ತಂತುಭಿಃ ಕರ್ಮಸೂತ್ರೋತ್ಥೈಃ ಹ್ಯಾದಿತ್ಯೈಃ ಹರೇ! ವಿಹರಸಿ ಕ್ರೀಡಾಕಂದು ಕೈರಿವ ಜಂತುಭಿಃ" ಎಂದು ನಾರದಮಹರ್ಷಿಯು ಹೇಳುವ ಹಾಗೆಯೇ, ಚಿಕ್ಕವರು ಚೆಂಡನ್ನು ತೆಗೆದುಕೊಂಡು, ಆಟವಾಡುವ ಭಗವಂತನು ಪ್ರಾಣಿಗಳನ್ನು ಇಟ್ಟುಕೊಂಡು ಆಟವಾಡುತ್ತಾನೆ. ಚೆಂಡಾದದ್ದು, ಬಿಳುಪು, ಕಪ್ಪು, ಕೆಂಪುದಾರವಾಗಿರುವ ಮೂರು ಬಣ್ಣದ ದಾರದಿಂದ ಕಟ್ಟಲ್ಪಟ್ಟಿರುವ ಹಾಗೆಯೇ ಪ್ರಾಣಿಗಳೂ ಸತ್ವ, ರಜಸ್, ತಮೋಗುಣಗಳೆಂಬಿರುವ ಮೂರು ಬಣ್ಣವುಳ್ಳ ಗುಣಗಳನ್ನು ಪಡೆದಿರುತ್ತವೆ. ಚೆಂಡಾದದ್ದು ವಿಹಾರ ಕಾಲದಲ್ಲಿ ಮೇಲೆ ಹೋಗುವುದು ಕೆಳಗೆ ಬೀಳುವುದಾಗಿರುವ ಹಾಗೆ, ಪ್ರಾಣಿಗಳೂ "ತೇ ತಂ ಭುಕ್ತ್ವಾ ಸ್ವರ್ಗಲೋಕಂ ವಿಶಾಲಂ ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ" ಎನ್ನುವ ಹಾಗೆಯೇ ಮೇಲೆ ಹೋಗುವುದು ಕೆಳಗೆ ಬೀಳುವುದಾಗಿರುತ್ತದೆ. ಈ ರೀತಿ ಆಟವಾಡುವ ಪರಮ ಪುರುಷನು ಶ್ರೀ ರಾಮನಾಗಿ ಅವತರಿಸಿ "ರಾಮಸ್ತು ಸೀತಯಾ (ಸಾರ್ಧಂ) ವಿಜಹಾರ ಬಹೂನ್ ಋತೂನ್" ಎಂದು ಹೇಳುವ ಹಾಗೆ ದೇವಿಯೊಬ್ಬಳೊಂದಿಗೆ ಆಟವಾಡಿದನು. ರಾಮಸ್ತು ಸೀತಯಾ ಸಾರ್ಧಂ ಎಂದರೆ ರಾಮಸ್ತು ಎನ್ನುವುದು ಸಾಭಿಪ್ರಾಯ. "ತು" ಎನ್ನುವ ಅವ್ಯಯ ವ್ಯಾವೃತ್ತಿಯನ್ನು ಹೇಳುತ್ತದೆ. ಇದುವರೆಗೂ ಭಗವಂತನು ವಿಶ್ವ ಶುಶ್ರೂಷೆಯಲ್ಲಿಯೂ ಪ್ರಶಂಸೆ ಪಡೆದಿದ್ದನು. ಈಗ ದೇವಿಯೊಂದಿಗೆ ಸೇರಿದ್ದರಿಂದ ಬೇರೆಯಾದನು. ಶೃಂಗಾರ ಕೇಳಿಗಳಲ್ಲಿ ಪರಮ ರಸಿಕನೆಂದು ಪ್ರಶಂಸಿಸುವುದನ್ನು ಹೇಳುತ್ತಾರೆ.

ಅಸ್ರಿಯೋ ರಾಮಃ–ರಮ್ಯತೇ ಎನ್ನುವುದಕ್ಕೆ ಮನಸ್ಸು ತಂಪಾಗಿರುವರೆಂಬ ಅರ್ಥವಾಗುವುದರಿಂದ ಆ ಅರ್ಥವನ್ನು ತೆಗೆದುಕೊಂಡು ಅನುಭವಿಸುವುದು ಯುಕ್ತ. ಪ್ರೀತಿಯುಳ್ಳವರೊಂದಿಗೆ ಸೇರಿ ಇದ್ದು ಪ್ರೇಮ ಉಳ್ಳವರ ಕೆಲಸವನ್ನು ಮಾಡಿಯೂ ಮನಸ್ಸು ಶಾಂತವಾಗಿರುವವನು ಪರಮಾತ್ಮ (ಗುಹೇ ಸಹಿತೋ ರಾಮಃ) ರಾಮನು ಗುಹನೊಂದಿಗೆ ಸೇರಿದ ನಂತರ ರಾಮನಾದನೆಂದೂ ಗುಹನೊಂದಿಗೆ ಸೇರಿ ಮನಶ್ಶಾಂತಿಯನ್ನು ಪಡೆದನೆಂದು ಆಚಾರ್ಯರುಗಳು ನಿರೂಪಿಸುತ್ತಾರೆ. ಮತ್ತೊಂದು ಸ್ಥಳವನ್ನು ನೋಡೋಣ. (ಕೃತ ಕೃತ್ಯಸ್ತದಾ ರಾಮಃ) ಅಭಿಷಿಚ್ಯ ಚ ಲಂಕಾಯಾಂ ರಾಕ್ಷಸೇಂದ್ರಂ ವಿಭೀಷಣಂ, ಕೃತಕೃತ್ಯಸ್ತದಾ ರಾಮಃ) ವಿಭೀಷಣಾಳ್ವಾರ್‌ರಿಗೆ ರಾಜ್ಯಾಭಿಷೇಕ ಮಾಡಿ ತನ್ನ ಕೆಲಸ ಪೂರ್ತಿಯಾಯಿತೆಂದು ಬೆಳೆಸಿ (ತದಾ ರಾಮಃ) ಆಗಲೇ ಆನಂದವನ್ನು ಹೊಂದಿದ ರಾಮನೆಂದು ಪರಮಾತ್ಮನು ಮಾಡಿರುವ ಪ್ರತಿಯೊಂದು ಕಾರ್ಯವೂ ಅವನು ತನ್ನ ಮನಸ್ಸನ್ನು ಶಾಂತಪಡಿಸುವುದೇ ಆಗಿರುತ್ತದೆ. ಅನುಗ್ರಹ ವಿಶೇಷದಿಂದ ಮನಸ್ಸಂತೋಷ ಹೊಂದುವ ಹಾಗೆ ಆಗಿತ್ತು. ಗುಹ, ಸುಗ್ರೀವ, ಮಾರುತಿ, ವಿಭೀಷಣಾದಿಗಳ ಹತ್ತಿರ ತೋರಿಸಿದ ಅನುಗ್ರಹ ವಿಶೇಷದಿಂದಾಗಿ ಮನಸ್ಸು ಶಾಂತವಾದ

ಹಾಗೆ ತಾಟಕಾ, ತಾಟಕೇಯ, ವಿರಾಧ, ಖರದೂಷಣ, ರಾವಣಾದಿಗಳ ಹತ್ತಿರ ತೋರಿಸಿದ ನಿಗ್ರಹದಿಂದಲೂ, ಆಶ್ರಿತ ವಿರೋಧಿಗಳನ್ನು ತೊಲಗಿಸುವೆಂದು ಮನಸ್ಸು ನೆಮ್ಮದಿಯಾಗಿರಲು ಅವಕಾಶವಿಲ್ಲ. "ರಮಂತೇ ಇತಿ ರಾಮಃ" ಎನ್ನುವ ವ್ಯುತ್ಪತ್ತಿಗೆ ಶ್ರೀ ರಾಮಾಯಣದಲ್ಲಿ ಅನೇಕ ಪ್ರಮಾಣಗಳೂ ಸಂಗ್ರಹಿತವಾಗುತ್ತವೆ.

ರಾಮಃ—"ರಮಯತೀತಿ ರಾಮಃ" ವ್ಯುತ್ಪತ್ತಿಯೂ ಹೊಂದುತ್ತದೆ. ತನ್ನನ್ನು ನೋಡುವವರನ್ನು, ತನ್ನ ಚರಿತೆಯನ್ನು ಕೇಳುವವರನ್ನು ಆನಂದಗೊಳಿಸುತ್ತಾನೆ ಪರಮಾತ್ಮ. ಪ್ರಪಂಚದಲ್ಲಿ ಅಧಿಕಾರಿಗಳು ಬೇರೆ ಬೇರೆ ತರಹದವರಾಗಿರುವುದರಿಂದ ಒಂದೇ ಗುಣದಿಂದ ಎಲ್ಲರನ್ನೂ ಏಕರೂಪವಾಗಿ ಸಂತೋಷಗೊಳಿಸಲಾಗುವುದಿಲ್ಲ. "ಸತ್ಯೇನ ಲೋಕಾನ್ ಜಯತಿ ದೀನಾನ್ ದಾನೇನ ರಾಘವಃ, ಗುರೂನ್ ಶುಶ್ರೂಷಯಾ ವೀರಃ ಧನುಷಾಯುಧಿ ಶಾತ್ರವಾನ್" ಎನ್ನುವ ಹಾಗೆ ಒಬ್ಬೊಬ್ಬರ ಸವಿಷಯದಲ್ಲಿ ಒಂದೊಂದು ಗುಣವನ್ನು ತೋರಿಸಿ ಸಂತೋಷಗೊಳಿಸುವುದು ರಾಮಾಯಣದ ಪ್ರಸಿದ್ಧಿ. ಸೌಶೀಲ್ಯ, ಸೌಲಭ್ಯ, ಸೌಂದರ್ಯ, ಸಹನೆ, ದಯೆ, ವಾತ್ಸಲ್ಯ, ಶೌರ್ಯ ಎನ್ನುವ ಇವೆಲ್ಲಾ ಬಿಟ್ಟು ಅನೇಕ ಗುಣಗಳು ಸಾಗರದೋಪಾದಿಯಲ್ಲಿ ಉಳ್ಳ ಪರಮಾತ್ಮನು ವೈಕುಂಠದಲ್ಲಿ ಪ್ರಯೋಜನ ಪಡೆಯದೆ ಇರುವ ಶ್ರೇಷ್ಠಗುಣಗಳನ್ನು ಅನುಕೂಲ್ಯವನ್ನಾಗಿ ಮಾಡುವುದಕ್ಕಾಗಿಯೋ ಈ ಮರ್ತ್ಯ ಲೋಕದಲ್ಲಿ ಬಂದು ಅವತರಿಸಿದ್ದರಿಂದ ಆ ಶ್ರೇಷ್ಠ ಗುಣಗಳಿಂದ ಅವರನ್ನು ಆಕರ್ಷಿಸಿ ಆನಂದಪಡಿಸಿರುವುದನ್ನು ವಿವರಿಸಬೇಕೇ ? ಗುಹನನ್ನು ಸೌಶೀಲ್ಯದಿಂದ ಸಂತುಷ್ಟಗೊಳಿಸಿದನು. ಸೌಶೀಲ್ಯವೆಂದರೆ ಮಹೋನ್ನತ ಪದಗಳು ಮೇಲ್ಪಟ್ಟು ನೋಡದೆ ಸಾಧಾರಣ ಜನರೊಂದಿಗೆ ಸೇರಿ ವ್ಯವಹರಿಸುವುದು ಶೀಲ ಗುಣದ ಕಾರ್ಯ. ಈ ಗುಣದಿಂದ ಕಾರ್ಯವನ್ನು ಮಾಡಿರುವುದು ಶ್ರೀ ರಾಮಾಯಣದಲ್ಲಿ ಹುಟ್ಟು. ಸೌಂದರ್ಯ ಸೌಕುಮಾರ್ಯಗಳಿಂದ ದಂಡಕಾರಣ್ಯವಾಸಿಗಳಾದ ಮಹರ್ಷಿಗಳನ್ನು ಆಕರ್ಷಿಸಿದ್ದು ಹೆಚ್ಚೇನೂ ಅಲ್ಲ. ಕಿವಿ ಮೂಗನ್ನು ಕತ್ತರಿಸಿಕೊಂಡು ಪ್ರಲಾಪಿಸಿ ಓಡಿಸುತ್ತಲೇ ಖರದೂಷಣಾದಿಗಳ ಹತ್ತಿರ ಹೋದ ಶೂರ್ಪಣಖಿ "ತರುಣೌ ರೂಪಸಂಪನ್ನೌ ಸುಕುಮಾರೌ ಮಹಾಬಲೌ ಪುಂಡರೀಕ ವಿಶಾಲಾಕ್ಷೌ ಚೀರ ಕೃಷ್ಣಾಜಿನಾಂಬರೌ, ಗಂಧರ್ವರಾಜ ಪ್ರತಿಮೌ ಪಾರ್ಥಿವ ವ್ಯಂಜನಾನ್ವಿತೌ" ಎಂದು ಹೇಳಿ ಹೇಳಿ ಪ್ರಲಾಪಿಸುವುದೇ ಹಿರಿಮೆಯುಳ್ಳದ್ದಾಗಿದೆ. ಈ ರೀತಿ ಒಂದೊಂದು ಗುಣಗಳನ್ನು ತೋರಿಸಿ ಒಬ್ಬೊಬ್ಬರನ್ನು ಆನಂದಗೊಳಿಸಿದ್ದನ್ನು ವಿಸ್ತಾರವಾಗಿ ಹೇಳಿದರೆ ಭಾರತವಾಗುತ್ತೆ.

7. **ವಿರಾಮಃ**—"ರಮಯತೀತಿ ರಾಮಃ" ಎನ್ನುವ ಹಾಗೆ "ವಿರಮಯತೀತಿ ವಿರಾಮಃ" ಎಂದಾಗುತ್ತದೆ. ವಿರಾಮವೆಂದರೆ ವಿಶ್ರಾಂತಿ. ಇತರರ ಶೌರ್ಯ, ವೀರ್ಯ, ಪರಾಕ್ರಮವನ್ನು ಶಮನಗೊಳಿಸುತ್ತಾನೆ. ಒಬ್ಬೊಬ್ಬರ

ವಾದವನ್ನು ನಿರ್ಮೂಲ ಮಾಡುತ್ತಾನೆಂದು ಎರಡು ಅರ್ಥವನ್ನು ತೆಗೆದುಕೊಳ್ಳಬಹುದು. ಮೊದಲಿನ ಅರ್ಥಕ್ಕೆ ವಿಶೇಷವಾಗಿ ವಿವರಣೆಯನ್ನು ತೋರಿಸಬೇಕಾದ ಅವಶ್ಯಕತೆ ಇದೆಯೇ ? ಇದಕ್ಕೆ " ಬ್ರಹ್ಮಾ ಸ್ವಯಂಭೂ ಚತುರಾನನೋ ವಾ ರುದ್ರಃ ತ್ರಿನೇತ್ರಃ ತ್ರಿಪುರಾಂತಕೋ ವಾ । ಇಂದ್ರೋ ಮಹೇಂದ್ರಃ ಸುರನಾಯಕೋ ವಾ ತ್ರಾತುಂ ನ ಶಕ್ತಾ ಯುಧಿ ರಾಮವಧ್ಯಂ " ಎನ್ನುವ ಹನುಮಂತನ ವಾಕ್ಯವೊಂದೇ ಸಾಕು. ಇತರರ ವಾದವನ್ನು ನಾಶಪಡಿಸುವಂತಹವರು ಎರಡನೆಯ ಅರ್ಥಕ್ಕೆ ಸೇರಿದ ಹಾಗೆ ಕೆಲವು ಸ್ಥಳಗಳನ್ನು ಉಲ್ಲೇಖಿಸುತ್ತೇವೆ. (ಅರಣ್ಯಕಾಂಡ ಆರನೆಯ ಸರ್ಗದಲ್ಲಿ) ದಂಡಕಾರಣ್ಯವಾಸಿಗಳಾದ ಮುನಿಗಳು ರಾಕ್ಷಸರುಗಳಿಂದ ತಮಗೆ ಒದಗಿದ ಕಷ್ಟಗಳನ್ನು ಶ್ರೀ ರಾಮಚಂದ್ರನಲ್ಲಿ ವಿಜ್ಞಾಪಿಸಿ ಶರಣು ಹೊಂದಿದಾಗ ರಾಮನು ಆ ಮುನಿಗಳಿಗೆ ಅಭಯಪ್ರದಾನ ಮಾಡಿದ ವೃತ್ತಾಂತವನ್ನು ವರ್ಣಿಸಲಾಗಿರುತ್ತೆ. ಪುನಃ ಒಂಭತ್ತನೆಯ ಸರ್ಗದಲ್ಲಿ ಸೀತಾದೇವಿಯು ರಾಘವನನ್ನು ನೋಡಿ ತರ್ಕ ಮಾತನಾಡಿದಳು. (ಅದು ಏನೆಂದರೆ) " ನೀವು ಮುನಿ ವೇಷವನ್ನು ಧರಿಸಿ ಕಾಡಿಗೆ ಬಂದಿರುತ್ತೀರಿ. ಪುಣ್ಯ ಕಾರ್ಯಗಳನ್ನು ಮಾಡಿ ಸುಖವಾಗಿ ಅಯೋಧ್ಯೆಗೆ ಹಿಂತಿರುಗಿ ಹೋಗಿ ಸೇರಬೇಕಾಗಿರುವ ಸಮಯವಿದು. ಹಾಗಿರುವಾಗ ಋಷಿಗಳ ಮುಂದೆಯೇ ಪರಹಿಂಸೆ ಮಾಡುವುದಾಗಿ ಪ್ರತಿಜ್ಞೆ ಮಾಡಿದ್ದು ನನಗೆ ಸ್ವಲ್ಪಮಾತ್ರವೂ ಹಿಡಿಸಲಿಲ್ಲ. ಕ್ಷತ್ರಿಯರುಗಳಿಗೆ ಇದು ಧರ್ಮವಾದರೂ ಈಗ ತಾವು ಕ್ಷತ್ರಿಯ ಧರ್ಮವನ್ನು ಪಾಲಿಸುವ ಸ್ಥಿತಿಯಲ್ಲಿ ಇಲ್ಲದೆ ಕಾಡಿಗೆ ಬಂದಿರುವುದರಿಂದ, ಆಯುಧವನ್ನು ತೆಗೆದುಕೊಂಡು ಮಹಾಪಾತಕದ ಕಾರ್ಯವನ್ನು ನೀವು ಮನಸ್ಸಿನಲ್ಲಿಯೂ ನೆನೆಸಲು ಉಚಿತವಲ್ಲ ; ನಿಮಗೆ ತಿಳಿಯದ್ದು ಒಂದೂ ಇಲ್ಲ. ನಿಮಗೆ ನಾನು ಧರ್ಮೋಪದೇಶ ಮಾಡುವುದಕ್ಕಾಗಿ ಬಂದೆನೆಂದು ತಿಳಿಯಬೇಡಿ ; ತಮ್ಮನೊಂದಿಗೆ ಆಲೋಚಿಸಿ ಯುಕ್ತವಾದದ್ದನ್ನು ಮಾಡಬಹುದು "........ ಎಂದು ಹೇಳಿದಳು. ಇದನ್ನು ಕೇಳಿದ ರಾಮನು (ಹತ್ತನೆಯ ಸರ್ಗದಲ್ಲಿ) ಆ ಸೀತಾದೇವಿಯ ವಾದಕ್ಕೆ ವಿರಾಮವನ್ನು ಮಾಡಿರುವುದನ್ನು ನೋಡಬೇಕು. ಅದರಲ್ಲಿ ಸಾರವಾದ ವಿಷಯ ಇಷ್ಟೇ. "ಅಪ್ಯಹಂ ಜೀವಿತಂ ಜಹ್ಯಾಂ ತ್ವಾಂ ವಾ ಸೀತೇ ! ಸಲಕ್ಷ್ಮಣಾಂ॥ ನಹಿ ಪ್ರತಿಜ್ಞಾಂ ಸಂಶ್ರುತ್ಯ ಬ್ರಾಹ್ಮಣೇಭ್ಯೋ ವಿಶೇಷತಃ" ಇತ್ಯಾದಿಗಳನ್ನು ಹೇಳಿ ಅವಳ ವಾದವನ್ನು ನಿಲ್ಲಿಸಿದನು.

೮. ವಿರತಃ–ತಮ್ಮ ಸಮೀಚೀನ ವಾದಗಳಿಂದ ಬೇರೆಯವರ ವಾದವನ್ನು ವಿರಾಮಗೊಳಿಸುವುದರಿಂದ " ವಿರಾಮಃ " ಎಂದು ಮೇಲೆ ಹೇಳಿದ ಶುಭನಾಮದಿಂದ ಅನುಭವವಾಯಿತು. ಇತರರ ಅನುಚಿತವಾದ ವಾದಗಳಿಂದ ತಾವು ವಿರಾಮ ಹೊಂದುವುದು ಭಗವಂತನ ಹತ್ತಿರ ಕಾಣಬಹುದು. ತಾವು ಹೇಳಿದ್ದೇ ಸರಿ ಎನ್ನುವ ಹಠವಿಲ್ಲದೆ " ಯುಕ್ತಿಯುಕ್ತಂ ವಚೋಗ್ರಾಹ್ಯಂ " ಎಂದುಕೊಂಡು ತಮ್ಮವಾದಕ್ಕೆ ವಿಶ್ರಾಂತಿಯನ್ನುಂಟು ಮಾಡುತ್ತಾನೆ ಸರ್ವಾತ್ಮ. ಕಾರಣ ವಿಶೇಷದಿಂದ ತಾವು ನಿಗ್ರಹ

ಮಾಡಲು ಹೊರಟರೂ, ತಕ್ಷಣ ಒಳ್ಳೆಯದನ್ನು ಕಂಡು ನಿಗ್ರಹದಲ್ಲಿ ತೊಡಗಿದ್ದರೂ ವಿರತನಾಗಿ ಅನುಗ್ರಹವನ್ನು ಮಾಡುತ್ತಾನೆ, ಎಂಬುದನ್ನು ನೋಡಬಹುದು. ಈ ಎರಡನ್ನು ಸೇರಿಸಿಯೇ ವಿವರಿಸುತ್ತೇವೆ. ಅಯೋಧ್ಯಾಕಾಂಡ ಇಪ್ಪತ್ತಾರನೆಯ ಸರ್ಗದಲ್ಲಿ ಶ್ರೀ ರಾಮಚಂದ್ರನು ತಾಯಿ–ತಂದೆಯ ಮಾತಿನಂತೆ ಕಾಡಿಗೆ ಹೊರಡಬೇಕಾದುದನ್ನು ಸೀತಾದೇವಿಗೆ ಹೇಳಿ ಅವಳನ್ನು ನಗರದಲ್ಲಿಯೇ ಇರಲು ಏರ್ಪಡಿಸಬೇಕೆಂದು, (ಸರ್ಗ 27) ಅದಕ್ಕೆ ಸೀತಾದೇವಿಯು ತನ್ನನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗಬೇಕೆಂದು ನಿರ್ಬಂಧಿಸಲು (ಸರ್ಗ 28) ಅವಳಿಗೆ ರಾಮನು ಕಾಡಿನ ಕಷ್ಟಗಳನ್ನು ಹೇಳಿ "ನೀನು ಕಾಡಿಗೆ ಬರಲು ಸಾಧ್ಯವೇ ಇಲ್ಲ" ಎಂದು ದೃಢವಾಗಿ ತರ್ಕಿಸಿದನು. ಆದಾದ ನಂತರ ದೇವಿಯು (29.30) ಸರ್ಗಗಳಲ್ಲಿ ಪ್ರಣಯ ರೋಷವತ್ಯಧಿಕವಾಗಲು "ರಾಮ ನಿನ್ನ ಹತ್ತಿರ ಸೌಂದರ್ಯ ಮಾತ್ರ ಇದೆ; ಅದನ್ನು ಕಂಡು ಎಲ್ಲರೂ ಮುಗ್ಧರಾಗಿ ಬಿಡುತ್ತಾರೆ. ನಿನಗೆ ಪುರುಷತ್ವವು ಸ್ವಲ್ಪ ಮಾತ್ರವೂ ಇಲ್ಲ. ನನ್ನೊಬ್ಬಳನ್ನು ರಕ್ಷಿಸಲಾರದೆ ನನ್ನನ್ನು ಬಿಟ್ಟು ನೀನು ಕಾಡಿಗೆ ಹೋದೆಯೆಂದು ನನ್ನ ತಂದೆಯವರು ಕೇಳಿದ್ದೇ ಆದರೆ ಹಾ! ಪುರುಷ ವೇಷ ಹಾಕಿಕೊಂಡು ಬಂದ ಒಬ್ಬ ಹೆಣ್ಣಿಗನಿಗೆ ನನ್ನ ಮಗಳನ್ನು ಕೊಟ್ಟೆ! ಎಂದು ಅತ್ಯಂತ ಮನನೊಂದು ಕೊಳ್ಳುತ್ತಾರೆ! ನನ್ನನ್ನು ಕಾಡಿನಲ್ಲಿ ರಕ್ಷಿಸಲಾರದ ಕಾಪುರುಷನು ನೀನು? ಎಂದು ಅನೇಕವಾಗಿ ತರ್ಕಿಸಲು, ಶ್ರೀ ರಾಮನು ತನ್ನ ಹಠವಾದವನ್ನು ಬಿಟ್ಟು ಅವಳನ್ನು ತನ್ನೊಡನೆ ಕರೆದುಕೊಂಡು ಹೋಗಲು ಒಪ್ಪಿಕೊಂಡನು.

ಕಾರಣ ವಿಶೇಷದಿಂದ ನಿಗ್ರಹಿಸಲು ಹೊರಟು ನಿಗ್ರಹದಲ್ಲಿ ತೊಡಗಿದ್ದರೂ ತಟಸ್ಥನಾಗುವುದನ್ನು ಎರಡು ಸ್ಥಳಗಳಲ್ಲಿ ತೋರಿಸುತ್ತೇವೆ. ಕಿಷ್ಕಿಂಧಾಕಾಂಡದಲ್ಲಿ (ಸರ್ಗ 30) ಸುಗ್ರೀವ ಮಹಾರಾಜರು ವರ್ಷಾಕಾಲದಲ್ಲಿ ಪರಮಾತ್ಮನು ವಿಶ್ರಾಂತಿಯನ್ನು ಕೊಟ್ಟದ್ದೇ ನೆಪವಾಗಿ ವಿಷಯ ಭೋಗಗಳಲ್ಲಿ ಮುಳುಗಿ ಇರಲು, ಕಾಲಕಳೆದರೂ ಸೈನ್ಯಗಳನ್ನು ಸೇರಿಸಿಕೊಂಡು ಬರದೇ ಇರುವುದನ್ನು ಕಂಡು ಭಗವಂತನು ಕ್ರೋಧಗೊಂಡು ನಿಗ್ರಹಿಸಲು ನಿಶ್ಚಯಿಸಿದಂತೆಯೇ, ಲಕ್ಷ್ಮಣನ ಮುಖಾಂತರ ತಿಳಿಸಬೇಕೆಂದೆಣಿಸಿ "ನ ಚ ಸಂಕುಚಿತಃ ಪಂಥಾಯೇನ ವಾಲೀ ಹತೋಗತಃ" "ಮಾ ವಾಲಿ ಪಥಮನ್ವಗಾಃ", "ಹನಿಷ್ಯಾಮಿ ಸ ಬಾಂಧವಂ" ಮುಂತಾಗಿ ಹೇಳಿ ಭಯಪಡಿಸಿದರು. ಸುಗ್ರೀವನು ಕುಟುಂಬ ಸಮೇತನಾಗಿ ನಾಶವಾಗಿ ಬಿಟ್ಟನೆಂದೇ ನೆನೆಸಬೇಕಾಯಿತು. ಈ ಪ್ರಬಲವಾದ ನಿಗ್ರಹ ಸಂಕಲ್ಪವು ಏನಾಯಿತು? "ರಾಮ ಸುಗ್ರೀವಯೋರೈಕ್ಯಂ ದೇವ್ಯೇವಂ ಸಮಜಾಯತ" ಎಂದು ದೇವಿಯು ಸಮೀಪದಲ್ಲಿ ಹೇಳುವಂತಲ್ಲವೆ ಆಯಿತು?

"ವಾನರಾಣಾಂ ನರಾಣಾಂಚ ಕಥಮಾಸೀತ್ ಸಮಾಗಮಃ?" ಎಂದು ದೇವಿಯು ಹನುಮಂತನನ್ನು ಕೇಳಿದಳು. ಕಾಡುಮೇಡುಗಳಲ್ಲಿ ತಿರುಗುವ ಕಪಿಗಳಿಗೂ ಪುರುಷೋತ್ತಮರುಗಳಿಗೂ ಹೊಂದಿಕೆ ಉಂಟಾಗಿದ್ದು ಹೇಗೆ? ಎಂದು ಕೇಳಿದಳು. ಅದಕ್ಕೆ ಮಾರುತಿಯು ಹೇಳಿದ್ದು, " ಕೇವಲ ಸಮಾಗಮವಲ್ಲ; ರಾಮನೂ ಸುಗ್ರೀವನೂ ಏಕ

ತತ್ತ್ವವನ್ನು ಎಂತಲ್ಲವೆ ಹೊಂದಿಕೊಂಡಿರುತ್ತಾರೆ ?'' ಎಂಬುವುದು ಅದ್ದರಿಂದ ವಿಗ್ರಹದಲ್ಲಿ ಸಿಂಹಾ ವಿರಾಮವನ್ನು ಹೊಂದಿದ್ದರಿಂದ ''ವಿರತ'' ನೆನ್ನುವುದು ಒಪ್ಪುತ್ತದೆ. ಮತ್ತೊಂದು ಸ್ಥಳ ಯುದ್ಧಕಾಂಡದಲ್ಲಿ ಸಮುದ್ರ ಶರಣಾಗತಿ ಪ್ರಕರಣವಾಗುತ್ತದೆ.

''ಬಾಹುಂ ಭುಜಗ ಭೋಗಾಭಮುಪಧಾಯಾರಿ ಸೂದನಃ ಅಂಜಲಿಂ ಪ್ರಾಙ್ಮುಖಃ ಕೃತ್ವಾ ಪ್ರತಿಶಿಶ್ಯೇ ಮಹೋದಧೇಃ'' ಎನ್ನುವಂತೆ ಸಮುದ್ರ ರಾಜನನ್ನು ಮಾರ್ಗವನ್ನು ಕೋರಿ ಧರಾಶಾಯಿಯಾಗಿ ಇದ್ದರು ಪರಮಾತ್ಮ. ಅವನೋ ಮುಖ ತೋರಿಸಲಿಲ್ಲ. ''ಚಾಪಮಾನಯ ಸೌಮಿತ್ರೇ ಶರಾಂಶ್ಚ ಆಶೀವಿಷೋಪಮಾನ್, ಸಾಗರಂ ಶೋಷಯಿಷ್ಯಾಮಿ, ಪದ್ಭ್ಯಾಂ ಯಾಂತು ಪ್ಲವಂಗಮಾಃ'' ಎಂದು ಅನೇಕವಾಗಿ ಹೇಳಿ ಪ್ರಪಂಚದಲ್ಲಿ ಜಲತತ್ತ್ವವೇ ಇಲ್ಲದ ಹಾಗೆ ಮಾಡಿಬಿಡುತ್ತೇನೆಂದು ಕೋಪಾವೇಶದ ತುಟ್ಟತುದಿಯಲ್ಲಿ ನಿಂತನು ಭಗವಂತ. ಅನಂತರ ಏನಾಯಿತು ? ಆ ಸಮುದ್ರ ರಾಜನು ಸ್ವಲ್ಪ ವಿನೀತನಾಗಿ ಅಭಿಮುಖ ತೋರಿಸಿದನು. ''ಸಮುದ್ರ ರಾಜನೇ ! ಈ ಬಾಣವು ನಿನಗಾಗಿ ನಾಣೇರಿಸಿದಲ್ಲಿ ನಿನ್ನ ಶತ್ರುಗಳ ಮೇಲೆ ಪ್ರಯೋಗಿಸಲು ಮಾಡಿದ್ದೇವೆ ; ನಿನ್ನ ಶತ್ರುಗಳನ್ನು ತೋರಿಸಿಕೊಡು'' ಎಂದು ಹೇಳಿ ಅವನು ತೋರಿಸಿಕೊಟ್ಟ ದ್ರುಮ ಕುಲ್ಯ ಎನ್ನುವ ಸ್ಥಳದಲ್ಲಿ ಬಾಣವನ್ನು ಬಿಟ್ಟು ಅನುಗ್ರಹಶೀಲರಾಗಿ ನಿಗ್ರಹದಲ್ಲಿ ತೊಡಗಿದ್ದರೂ ವಿರತರಾದರು (ಯುದ್ಧಕಾಂಡ ಸರ್ಗ 22)...ಅನಂತರ ಘೋರಯುದ್ಧವು ರಾವಣನೊಂದಿಗೆ ನಡೆಯುವಾಗ ಅವನು ''ಚಚಾಲ ಚಾಪಂಚ ಮುಮೋಚವೀರಃ'' ಎನ್ನುವ ಹಾಗೆ ಬಳಲಿ ನಿಂತ ''ಗಚ್ಛಾನುಜಾನಾಮಿ'' ಎಂದು ಆಜ್ಞಾಪಿಸಿ ಹೋಗಲು ಬಿಟ್ಟು ಆಗ ಯುದ್ಧದಲ್ಲಿ ನಿಂತು ವಿರತರಾದರು. ಪರಮಾತ್ಮ—ಎನ್ನುವುದನ್ನು ಇಲ್ಲಿ ''ವಿರತಃ'' ಎನ್ನುವ ಶಬ್ದನಾಮಕ್ಕೆ ಅರ್ಥವಾಗಿ ತೆಗೆದುಕೊಳ್ಳಬಹುದು. ಇನ್ನು ಮುಂದಿನ ದಿವ್ಯ ಮಂಗಳವಾದ ಹೆಸರನ್ನು ನೋಡೋಣ.

9. **ಮಾರ್ಗಃ**—''ಮಾರ್ಗ್ಯತೇ ಇತಿ ಮಾರ್ಗಃ'' ಮಾರ್ಗಣವಾದುದು. ಹುಡುಕುವುದು. ಅರಸುವವನು ಎನ್ನುವ ಹಾಗೆ ಅರಸಲ್ಪಡುವವನು ಎನ್ನುವ ಅರ್ಥವೂ ಬರುತ್ತದೆ. ಹುಡುಕುವವರನ್ನು ಕೊಡಲು ವಿವರಿಸುತ್ತೇನೆ. ವೇದಾಂತಗಳಲ್ಲಿ ''ಸೋಽನ್ವೇಷ್ಟವ್ಯಃ'' ಎಂದು ಹೇಳಲ್ಪಟ್ಟಿವೆ. ಭಗವಂತನು ಹುಡುಕ ಬೇಕಾದವನು ಎನ್ನುವ ಹಾಗೆ ಈ ಶ್ರುತಿಯ ಆಧಾರದಿಂದಲೇ ತಿರುಮಂಗೈ ಆಳ್ವಾರ್ ''ನಾನ್ ಮಾರ್ಕೈಪಳ್ ತೇಡಿ ನೋಡುಂ ಶೆಲ್ವನ್'' ನಾನ್ ಮಾರ್ಕೈಪಳ್ ತೇಡಿಯುಂ ಕಾಣ ಮಾಟ್ಟಾನ್ ಶೆಲ್ವನ್...ಎಂದು ವಿವರಿಸುತ್ತಾರೆ. ಉತ್ತರ ಶ್ರೀ ರಾಮಾಯಣದಲ್ಲಿ ಶೂದ್ರ ಕವಿತೆ ಎಂದೊಂದು ಘಟ್ಟದಲ್ಲಿ ತಪಸ್ಸು ಮಾಡದ ಜಾತಿಯಲ್ಲಿ ಹುಟ್ಟಿದವನೊಬ್ಬ, ದಂಡಕಾರಣ್ಯದಲ್ಲಿ ಕಠೋರವಾದ ತಪಸ್ಸುಮಾಡಲು, ಅದರಿಂದ ಅಯೋಧ್ಯೆಯಲ್ಲಿ ಒಬ್ಬ ಬ್ರಾಹ್ಮಣನ ಶಿಶುವು ಮೃತಿ ಹೊಂದಲು, ಆ ಶೂದ್ರ ತಪಸ್ವಿಯನ್ನು ಕೊಲ್ಲದೆ ಈ ಬ್ರಾಹ್ಮಣ ಶಿಶು ಜೀವಿಸಲಾರದೆಂದು ಪರಮಾತ್ಮನು ಅವನನ್ನು ವಧಿಸಲು

ನಿಶ್ಚಯಿಸಿ ಕೈಯಲ್ಲಿ ಕತ್ತಿಯನ್ನು ಹಿಡಿದು ದಂಡಕಾರಣ್ಯಕ್ಕೆ ಹೋದನು. ಕಾಡಿಗೆ ಹೊರಟು ನಿಂತ ಭಗವಂತನು ಶಂಬೂಕನೆನ್ನುವ ಶೂದ್ರನು ತಪಸ್ಸುಮಾಡುತ್ತಾನಂತಲ್ಲ; ಎಲ್ಲಿ ಎಲ್ಲಿ? ಕೇಳಿಕೊಂಡೇ ಅವನನ್ನು ಹುಡುಕಿಕೊಂಡೇ ಹೋಗುತ್ತಾನೆ. ಹೋಗಿ ಅವನನ್ನು ಕೊಲ್ಲಲು ಹೋದಾಗ ಅವನು ಹೇಳುತ್ತಾನೆ. "ಅನ್ವೇಷ್ಟವ್ಯೋ...ಭುವನೇ ಲೋಕನಾಥಃ ಶರಣ್ಯಃ ಮಾಂ ಅನ್ವಿಷ್ಯ (ಉತ್ತರ ರಾಮಚರಿತೆ ಭವಭೂತಿ)" ಎನ್ನುತ್ತಾನೆ. "ಜಗತ್ತಿನಿಂದ ಹುಡುಕಲ್ಪಡುವವನಾಗಿರುವನೆಂದು ವೇದಗಳಲ್ಲಿ ಹೇಳಿರುವ ಮಹಾಪ್ರಭುವೇ! ನೀನು ನನ್ನನ್ನು ಹುಡುಕಿಕೊಂಡು ಬಂದೆಯಲ್ಲ! ನಾನು ಎಷ್ಟು ಭಾಗ್ಯಶಾಲಿ," ಎನ್ನುತ್ತಾನೆ. ಇಲ್ಲಿ ಕರ್ತರಿ ಅರ್ಥ ಕರ್ಮಣಿ ಅರ್ಥ ಎರಡು ತಾತ್ಪರ್ಯಗಳನ್ನೂ ಕಾಣಬಹುದು. ಮಾರೀಚ ಮಾಯಾಮೃಗವನ್ನು ವಧೆಮಾಡಿ ಹಿಂತಿರುಗಿದ ನಂತರ ಪರ್ಣಶಾಲೆಯಲ್ಲಿ ದೇವಿಯನ್ನು ಕಾಣದೆ ಅವಳನ್ನು ಹುಡುಕಿ ಕೊಂಡು ತಿರುಗಿ ರಾಕ್ಷಸನಾದ ಕಬಂಧನ ಮಾತಿನಂತೆ ಶಬರಿಯನ್ನು ಸುಗ್ರೀವನನ್ನು ಹುಡುಕಿಕೊಂಡು ಹೋಗಿದ್ದನ್ನೂ ಹೇಳಬಹುದು. ಮಾರ್ಗ ಎನ್ನುವುದಕ್ಕೆ ದಾರಿಯಾಗಿರುವವನು, ಮಾರ್ಗದರ್ಶಕನೆಂಬ ಅರ್ಥವನ್ನೂ ತೆಗೆದುಕೊಳ್ಳಬಹುದು. ಮಾರ್ಗ ಎಂದರೇ ಉಪಾಯ (ನೆರಿ) ಎಂಬುದೂ ಪರ್ಯಾಯ. ನಮ್ಮಾಳ್ವಾರ್ರು ಪೆರಿಯತಿರು ವಂದಾದಿಯಲ್ಲಿ "ನೆರಿಕಾಟ್ಟಿನೀಕ್ಕುದಿಯೋನ್" ಎನ್ನುವ ಪಾಶುರದಲ್ಲಿ (ಶ್ಲೋಕದಲ್ಲಿ) ಉಪಾಯವೆಂಬ ಅರ್ಥದಲ್ಲಿ "ನೆರಿ" ಎಂಬ ನುಡಿಯನ್ನು ಪ್ರಯೋಗಿಸುವುದರಿಂದ ಮಾರ್ಗ ಎನ್ನುವ ಉತ್ತರದ ಮಾತೂ ಉಪಾಯವಾಚಕವಾಗುವುದರಲ್ಲಿ ಏನೂ ಆಶ್ಚರ್ಯವಿಲ್ಲ. ಮುಕುಂದ ಮಾಲೆಯಲ್ಲಿ "ಕರಚರಣ ಸರೋಜೇ ಕಾಂತಿಮನ್ನೇತ್ರ ಮೀನೇ ಶ್ರಮಮುಷಿ ಭುಜವೀಚಿ ವ್ಯಾಕುಲೇಗಾಧಮಾರ್ಗೇ ಹರಿಸರಸಿ ವಿಗಾಹ್ಯ"... ಎನ್ನುವ ಶ್ಲೋಕದಲ್ಲಿ "ಅಗಾಧಮಾರ್ಗೇ" ಎನ್ನುವ ಸ್ಥಳದಲ್ಲಿ ಮಾರ್ಗ ಶಬ್ದವು ಉಪಾಯಾರ್ಥವಾಗಿಯೇ ಪ್ರಯೋಗಿಸಲ್ಪಟ್ಟಿದೆ. "ಉಪಾಯೋಪೇಯತ್ವೇ ತದಿಹ ತವ ತತ್ತ್ವಂ ನತು ಗುಣೌ" ಎಂದು ಶ್ರೀರಂಗರಾಜಸ್ತವದಲ್ಲಿ ಭಟ್ಟರು ಹೇಳಿರುವ ಹಾಗೆ ಭಗವಂತನಿಗೆ ಉಪಾಯತ್ವ ಸ್ವರೂಪವಾದ್ದರಿಂದ, ಉಪೇಯ ಭೂತನಾದ ತಾನೇ ಉಪಾಯವೂ ಆಗಿರುವ ರೀತಿಯನ್ನು ಹೇಳಲಾಗಿದೆ. ರಾವಣವಧೆಯಾದ ನಂತರ ಬ್ರಹ್ಮದೇವನು ಬಂದು ಮಾಡುವ ಸ್ತುತಿಯಲ್ಲಿ "ಶರಣ್ಯಂ ಶರಣಂ ಚ ತ್ವಾಂ ಆಹುರ್ ದಿವ್ಯಾ ಮಹರ್ಷಯಃ" ಎಂಬುವುದರಿಂದ ವಿವರಿಸಲ್ಪಟ್ಟ ಅರ್ಥವೇ ಅಲ್ಲವೇ ಇದು. ಇನ್ನು ಮಾರ್ಗದರ್ಶಕ ಎನ್ನುವ ಅರ್ಥಕ್ಕೆ ಸಮನ್ವಯ ಜಟಾಯುವಿನ ಹತ್ತಿರ ನೋಡಬಹುದು. "ಮಯಾತ್ವಂ ಸಮನುಜ್ಞಾತಃ ಗಚ್ಛ ಲೋಕಾನ್ ಅನುತ್ತಮಾನ್" ಎಂದು ಹೇಳಿ ಜಟಾಯುವಿಗೆ ವೈಕುಂಠಕ್ಕೆ ಹೋಗಲು ಮಾರ್ಗದರ್ಶನ ಮಾಡಿದನಲ್ಲವೇ ಭಗವಂತ! "ಯಾ ಗತಿರ್ಯಜ್ಞಶೀಲಾನಾಂ" ಮುಂಚಿತವಾಗಿ ಹೇಳಿರುವ ರಾಮವಾಕ್ಯದಲ್ಲಿ "ಗತಿಃ" ಎನ್ನುವುದಕ್ಕೆ ಮಾರ್ಗವೆನ್ನುವುದೇ ತಾತ್ಪರ್ಯ.

ಭಗವದ್ಗೀತೆಯಲ್ಲಿ (8-26) "ಶುಕ್ಲಕೃಷ್ಣೇಗತೀಹ್ಯೇತೇ" ಎನ್ನುವ ಸ್ಥಳದಲ್ಲಿ ಗತಿ ಶಬ್ದಾರ್ಥ ಮಾರ್ಗವೇ ಇನ್ನು ಮತ್ತೊಂದು ಶ್ರೇಷ್ಠ ಹೆಸರನ್ನು ಅನುಸಂಧಾನ ಮಾಡುವೆವು.

10. **ನೇಯಃ**–ನಾಯಕನೆನ್ನುವ ಅರ್ಥದಲ್ಲಿ ನೇತಾ ಎಂದು ಹೇಳುವ ಮಾತಿಗೆ ವಿರೋಧವಾದ ನುಡಿ "ನೇಯಃ" ಎನ್ನುವುದು. ಆಜ್ಞೆಮಾಡಿದವನನ್ನು (ನೇತಾ) ಮುಖಂಡನೆನ್ನುತ್ತೇವೆ. "ಯಸ್ಯ ವಿಶ್ವ ಉಪಾಸತೇ ಪ್ರಶಿಷಂ ಯಸ್ಯದೇವಾಃ" ಎಂದು ವೇದವು ಹೇಳಿರುವ ಪ್ರಕಾರವೂ ಆಳ್ವಾರ್ ಹೇಳಿರುವ ಹಾಗೂ "ಮನುಷ್ಯರಿಗೆ ದೇವರು ಹಾಗೆ ದೇವತೆಗಳಿಗೆ ದೇವನಾಗಿರುವ ತಾನು, ಸಕಲ ದೇವತೆಗಳಿಗೂ ಆಜ್ಞೆಮಾಡಿ ಸೇವೆ ಮಾಡಿಸಿಕೊಳ್ಳಲು ತಕ್ಕವನಾಗಿದ್ದರೂ, ಇತರರು ತನಗೆ ಆಜ್ಞೆಮಾಡುವ ಹಾಗೆ ಆಯಿತು ಶ್ರೀ ರಾಮಾವತಾರದಲ್ಲಿ. ವಿಶ್ವಾಮಿತ್ರ ಮುನಿವರು ತಾನು ಒಂದು ಯಾಗ ಮಾಡುವುದಾಗಿ ಪ್ರಾರಂಭಿಸಿ ಅದು ನಿರ್ವಿಘ್ನವಾಗಿ ನಡೆಸಲೆಂದು ದಶರಥ ಚಕ್ರವರ್ತಿಯು ಹತ್ತಿರ ಬಂದು ರಾಮನನ್ನು ಕಳುಹಿಸು ಎಂದು ಕೇಳಿದನು. ಅದಕ್ಕೆ ರಾಜನು ಒಪ್ಪಲಿಲ್ಲ. ರಾಕ್ಷಸರೊಂದಿಗೆ ಯುದ್ಧ ಮಾಡಲು ತಕ್ಕ ಮನಸ್ಸಿಲ್ಲದೆ ಇರುವುದರಿಂದ ಅತ್ಯಂತ ಚಿಕ್ಕವರಾದ ನನ್ನ ಕುಮಾರರನ್ನು ನಾನು ನಿಮ್ಮೊಂದಿಗೂ ಕೂಡ ಕಳುಹಿಸುವುದಿಲ್ಲ ಎನ್ನುತ್ತಾನೆ. ಅವಕ್ಕೆ ಮುನಿವರನು ರಾಜನನ್ನು ಕುರಿತು, "ಇವನ ಹಿರಿಮೆಯನ್ನು ನೀನು ತಿಳಿದಿಲ್ಲ. ಅತ್ಯಧಿಕ ಹಿರಿಯನಾದ ಇವನನ್ನು ಅತ್ಯಂತ ಚಿಕ್ಕವನೆಂದು ಮಾತ್ರ ನೀನು ತಿಳಿದಿರುವೆ. "ವೇದಾಹ ಮೇತಂಪುರುಷಂ ಮಹಾಂತಂ" ಎಂದು ವೇದವು ಹೇಳಿರುವ ಹಿರಿಮೆಯುಳ್ಳ ಮಹಾಪುರುಷನಲ್ಲವೇ ಇವನು. ಇವನನ್ನು ನಿಜಸ್ಥಿತಿಯಲ್ಲಿ ನಾನು ತಿಳಿದಿರುವೆನು, ನಾನು ಮಾತ್ರವಲ್ಲ, ನಿನ್ನ ಎದುರಿನಲ್ಲಿ ಕುಳಿತಿರುವ ತಪಸ್ವಿಗಳಾದ ಮಹಾಮುನಿಗಳು ಚೆನ್ನಾಗಿ ತಿಳಿದಿರುತ್ತಾರೆ ಎಂದು ಅನೇಕ ವಿಧವಾಗಿ ಹೇಳಿ, ಶ್ರೀ ರಾಮ ಲಕ್ಷ್ಮಣರುಗಳನ್ನು ಕರೆದುಕೊಂಡು ಹೋದನು. ತಂದೆಯೊಂದಿಗೆ ಋಷಿಯು ಈ ರೀತಿ ಮಾತನಾಡಿದ್ದನ್ನೆಲ್ಲಾ ಏಕಾಂತವಾಗಿ ಕೇಳಿಕೊಂಡಿದ್ದ ಶ್ರೀ ರಾಮಚಂದ್ರನು "ಶೇಷಭೂತನಾಗಿ ಪರತಂತ್ರನಾಗಿ ಹುಟ್ಟಬೇಕೆಂದು ಆಸೆಪಟ್ಟು ಬಂದ ನಮ್ಮನ್ನು ಪರಮಾತ್ಮನೆಂದು ಪ್ರಕಟಪಡಿಸಿ ಬಿಟ್ಟರಲ್ಲಾ ! ಇದು ನಮ್ಮ ಸಂಕಲ್ಪಕ್ಕೆ ಯೋಗ್ಯವಾದುದಲ್ಲ। ಅನಂತರವೂ ಈ ವಿಶ್ವಾಮಿತ್ರರು ಇದುವರೆಗೂ ಎಷ್ಟೋ ಅದ್ಭುತವಾದ ಶ್ರೇಷ್ಠಯಾಗಗಳನ್ನೂ, ತಪಸ್ಸನ್ನೂ ಮಾಡಿರುತ್ತಾರೆ, ಆಗ ಯಾರನ್ನು ಜೊತೆಗೆ ಬೇಡಿದವರಲ್ಲ ಇವರು. ಈಗ ಇವರು ಅತ್ಯಂತ ಚಿಕ್ಕದಾಗಿ ಮಾಡಲು ಅಪೇಕ್ಷಿಸಿರುವ ಆರು ದಿನದ ಯಾಗಕ್ಕೆ ಜೊತೆ ಬೇಕೆಂದು ಬಂದಿರುವುದು ಸಾಧಾರಣವಲ್ಲ. ನಮ್ಮ ತಂದೆಯವರು ಚತುರಂಗ ಬಲದೊಂದಿಗೆ ತಾವು ಬಂದು ಲೀಲಾಜಾಲವಾಗಿ ಯಾಗ ಸಂರಕ್ಷಣ ಮಾಡುವುದಾಗಿ ಹೇಳಿದರೂ ಅದನ್ನು ಒಪ್ಪದೆ ನಮ್ಮನ್ನೇ ಬೇಡಿದ ಈ ಮುನಿವರಿಗೆ ಏನೋ ಒಂದು ವಿಶೇಷವಾದ ಅಭಿಪ್ರಾಯವಿರಬಹುದು. ನಮ್ಮನ್ನು ಹೊಂದಿ ಕೆಲಸವನ್ನು ಮಾಡಲು

ಅಪೇಕ್ಷಿಸಿದೆಯೋ (ಅದು ಯಾವುದು ? ನಾವು ಆಸೆಪಟ್ಟ ಶೇಷತ್ವವನ್ನು ಪ್ರಪಂಚಕ್ಕೆ ತಿಳಿಯುವಂತೆ ಮಾಡಲು ಅಪೇಕ್ಷಿಸಿಯೇ) ನಮ್ಮನ್ನು ಪ್ರಾರ್ಥಿಸಿ ತಂದಿರುವರೆಂಬ (ಬಂದಿರುವರೆಂಬ) ರಹಸ್ಯವನ್ನು ತಿಳಿದುಕೊಂಡು ಶ್ರೀ ರಾಮನು ಆ ಮುನಿವರರಿಗೆ ಕೈಮುಗಿದು ಪ್ರಾರ್ಥಿಸುತ್ತಾನೆ. ಮುನಿಸಾರ್ವಭೌಮರೇ ! ನಾನು ಮತ್ತು ನನ್ನ ತಮ್ಮನಾದ ಲಕ್ಷ್ಮಣನೂ ನಿಮ್ಮ ಆಜ್ಞೆಯ ಪ್ರಕಾರ ನಡೆಯಲು ಬಂದವರು. ಯಾವಾಗಲೂ ನಿಮ್ಮ ಹತ್ತಿರವೇ ಇದ್ದು ನೀವು ಆಜ್ಞಾಪಿಸುವ ಕೆಲಸಗಳನ್ನು ಮಾಡಲು ನಾವಿಬ್ಬರೂ ಕಾದಿರುತ್ತೇವೆ. ನೀವು ಸಂಕೋಚವಿಲ್ಲದೆ ನಮಗೆ ಯಾವ ವಿಧವಾದ ಆಜ್ಞೆಯನ್ನು ಬೇಕಾದರೂ ಮಾಡಬಹುದು, ನಿಮಗೆ ಯಾವ ಸೇವೆಯನ್ನು ಮಾಡಬೇಕೆಂದು ನಿರೀಕ್ಷಿಸಿರುತ್ತೇವೆ ಎಂದನು. ಆದ್ದರಿಂದ, ಆಜ್ಞಾಪಕನಾದ ತಾನು ಆಜ್ಞಾಪಿತನಾಗುವುದಕ್ಕೆ ಆಸೆಪಟ್ಟಿದ್ದೇ "ನೇಯಃ" ಎನ್ನುವುದು ತಿಳಿಸುತ್ತದೆ. ಇನ್ನು ಮುಂದಿನ ದಿವ್ಯನಾಮದ ಕಡೆಗೆ ಗಮನಿಸೋಣ.

11. **ನಯಃ**—"ಅಸ್ಮಾನ್ ಸರ್ವಾನ್ ಸ್ವಯಂ ನಯತೀತಿ ನಯಃ." ಬೇರೆಯವರ ಆಜ್ಞೆಯನ್ನು ತಾನು ಎದುರು ನೋಡದ ಹಾಗೆಯೇ ನಡೆದುಕೊಳ್ಳುವದಾಗಿ ಮೇಲೆ ಹೇಳಿರುವ ಶುಭನಾಮವು ತೋರಿಸಿತು ("ಪತಿಂ ವಿಶ್ವಸ್ಯಾತ್ಮೇಶ್ವರಂ"). ಸ್ವೇಚ್ಛೆಯಿಂದಾದದ್ದು ನಿರುಪಾಧಿಕವಾಗಿ ಉಳ್ಳ ಹಿರಿಮೆಯನ್ನು ಹೇಳುವ ಸ್ಥಳದಲ್ಲಿ ಸರ್ವನಿರ್ವಾಹಕತ್ವವೇ ಅಲ್ಲವೇ ಅಸಾಧಾರಣವಾಗಿ ಹೇಳುವುದು ? ಶ್ರೀ ರಾಮಚಂದ್ರನು ತನ್ನನ್ನು ಕುರಿತು ತನ್ನ ಮಾತಿನಿಂದಲೇ ಹೇಳಿಕೊಳ್ಳುವಾಗ "ಆತ್ಮಾನಂ ಮಾನುಷಂ ಮನ್ಯೇ ರಾಮಂ ದಶರಥಾತ್ಮಜಂ" ಮುಂತಾಗಿ ಎಷ್ಟೇ ಹೇಳಿಕೊಂಡರೂ ಇತರರು ಹೇಳುವಾಗ ಅವನ ಹಿರಿಮೆಯನ್ನು ವಿಸ್ತಾರವಾಗಿ ಹೇಳಿರುವವರಲ್ಲವೆ ? "ಶರಣ್ಯಂ ಶರಣಂ ಚ ತ್ವಾಂ ಆಹುರ್ ದಿವ್ಯಾ ಮಹರ್ಷಯಃ.........ಜಗತ್ ಸರ್ವಂ ಶರೀರಂ ತೇ "..........ಮುಂತಾಗಿಯಲ್ಲವೆ ಭಗವಂತನನ್ನು ಹೇಳಿರುವುದು. ಆದ್ದರಿಂದ "ನೇಯಃ" ಎನ್ನುವ ಮೇಲೆ ಹೇಳಿರುವ ಶ್ರೇಷ್ಠವಾದ ಹೆಸರಿಗೆ ನೇರ ವಿರೋಧವಾದ ನೇತಾ ಎನ್ನುವ ಶುಭನಾಮದ ಅರ್ಥವೇ "ನಯಃ" ಎನ್ನುವುದನ್ನು ತೆಗೆದುಕೊಳ್ಳಬಹುದು. ಹಾಗಿರುವುದರಿಂದ "ನಯತೀತಿ ನಯಃ"—ತೆಗೆದುಕೊಂಡು ಹೋಗುವವನು ಎನ್ನುವ ಹಾಗೆ ಶ್ರೀ ರಾಮನು ತನ್ನ ಸ್ಥಳಕ್ಕೆ ಹೊರಡುವಾಗ ತಾನು ಒಬ್ಬನೇ ಹೋಗಲಿಲ್ಲವಲ್ಲ "ಅನ್ರುಚರಾಚರಂಗಳೈ ವೈಕುಂದತ್ತೇತ್ತಿ" ಎಂದು ಶ್ರೀ ಕುಲಶೇಖರ ಆಳ್ವಾರ್ರು, ಹೇಳಿರುವ ಹಾಗೆ ಚರಾಚರಗಳನ್ನು ಅಲ್ಲವೆ ಜೊತೆಯಲ್ಲಿ ಕರೆದುಕೊಂಡು ಹೋದರು ! ಇದನ್ನು ಸ್ವಲ್ಪ ವಿವರಿಸುತ್ತೇನೆ. ಲಕ್ಷ್ಮಣನನ್ನು ಬಿಟ್ಟು ವಿಯೋಗ ದುಃಖವನ್ನು ಸಹಿಸಲಾರದೆ, ಕ್ಲೇಶಗೊಂಡ ಶ್ರೀ ರಾಮನು ರಾಜ್ಯವನ್ನು ಬಿಟ್ಟು ಹೊರಡುವಾಗ ಅಯೋಧ್ಯಾನಗರದ ಜೀವಿಗಳೆಲ್ಲಾ ಪರಮಾತ್ಮನನ್ನು ಶರಣು ಹೊಂದಿ "ಸ್ವಾಮಿಯವರು ಎಲ್ಲಿ ಹೋದರೂ ನಮ್ಮೆಲ್ಲರನ್ನೂ ಜೊತೆಯಲ್ಲಿಯೇ ಕರೆದುಕೊಂಡು ಹೋಗ

ಬೇಕು-ಎಂದು ಪ್ರಾರ್ಥಿಸಲು ಶ್ರೀರಾಮನು ಅವರ ಅತ್ಯದ್ಭುತವಾದ ಪ್ರೇಮವನ್ನು ಕಂಡು " ಹಾಗೆಯೇ ಆಗಲಿ " ಎಂದು ಅನುಗ್ರಹಿಸಿ ಎಲ್ಲರೂ ತಮ್ಮನ್ನು ಹಿಂಬಾಲಿಸುವಂತೆ ನಿರ್ಣಯಿಸಿ ಪ್ರಯಾಣ ಹೊರಟರು. ಆ ನಗರದಲ್ಲಿದ್ದ ಮನುಷ್ಯರೇ ಅಲ್ಲ, ಪ್ರಾಣಿ, ಪಕ್ಷಿ ಮೊದಲಾದ ಜೀವ ಜಂತುಗಳೆಲ್ಲಾ ಸಂಭ್ರಮದಿಂದ ಭಗವಂತನನ್ನು ಹಿಂಬಾಲಿಸಲು. ಈ ರೀತಿ ಪ್ರಜೆಗಳಾದಿ ಸರ್ವರೊಂದಿಗೆ ಪರಮಾತ್ಮನು ಸರಯೂ ನದಿಯಲ್ಲಿ ಮುಳುಗಿ ಶರೀರವನ್ನು ತೊರೆದ ಎಲ್ಲಾ ಜೀವಿಗಳಿಗೂ ಬ್ರಹ್ಮಲೋಕಕ್ಕೆ ಮೇಲಾದ ಸಾಂತಾನಿಕವೆನ್ನುವ ಲೋಕವನ್ನು ಅನುಗ್ರಹಿಸಿದನೆಂಬುದು ಚರಿತ್ರೆ. ಹೀಗೆ (ನಯನಂ) ಉದ್ಧಾರ ಮಾಡಿರುವುದನ್ನು ವಿವರಿಸುವ "ನಯಃ" ಎನ್ನುವುದು ದಿವ್ಯ ನಾಮವು. ವರಾಹ ಚರಮ ಶ್ಲೋಕದಲ್ಲಿ "ಅಹಂ ಸ್ಮರಾಮಿ ಮದ್ಭಕ್ತಂ ನಯಾಮಿ ಪರಮಾಂ ಗತಿಂ" ಎಂದು ಹೇಳಿದ್ದಲ್ಲವೇ ?

12. **ಅನಯಃ**-ಇದಕ್ಕೆ ಭಾಷ್ಯದಲ್ಲಿ ಭಟ್ಟರು ಹೇಳಿರುವ ರಸವತ್ತಾದ ತಾತ್ಪರ್ಯವನ್ನು ಮೊದಲು ವಿವರಿಸುತ್ತೇನೆ. " ಅಯಃ ಶುಭಾವಹೋ ವಿಧಿಃ ಸಃ ಅಸ್ಮಾತ್ ಅನ್ಯಃ ಜಗತಾಂ ನಾಸ್ತಿ ಇತಿ ಅನಯಃ " ಎನ್ನುವುದು ಭಗವದ್ಗುಣದರ್ಪಣ ಶ್ರೀಸೂಕ್ತಿ. ಅಮರ ಕೋಶದಲ್ಲಿ "ಅಯಃ ಶುಭಾವಹೋ ವಿಧಿಃ" ಎಂದಿದೆ. ಮೇಲ್ಮೆಯನ್ನುಂಟು ಮಾಡುವ ಕಾರ್ಯಕ್ಕೆ ಅಯವೆಂದು ಹೆಸರು. ಶ್ರೀ ರಾಮನಿಗಿಂತಲೂ ಮೇಲ್ಮೆಯನ್ನುಂಟುಮಾಡುವವರು ಮತ್ತ್ಯಾರೂ ಇಲ್ಲವೆಂಬುದು ತಾತ್ಪರ್ಯವಾಗಿ ನಿರೂಪಿತವಾಗಿದೆ. ಸ್ತೋತ್ರರತ್ನದಲ್ಲಿ " ಅನುತ್ತಮಂ ಪಾತ್ರಮಿದಂ ದಯಾಯಾಃ" ಎನ್ನುವ ಸ್ಥಳದಲ್ಲಿ "ಅನುತ್ತಮಂ" ಎನ್ನುವ ಹಾಗೆ ಇಲ್ಲಿ "ಅನಯಃ" ಎನ್ನುವುದಕ್ಕೆ ಪಂಚಮೀ ಬಹುವ್ರೀಹಿ ಸಮಾಸ ಸರಿ ಹೊಂದುವುದೇ ಆಗಿದೆ. ಕೇಡನ್ನುಂಟುಮಾಡುವವರಿಗೂ ಒಳ್ಳೆಯದನ್ನೇ ಮಾಡುವಂತಹ ಹಿರಿಮೆಯುಳ್ಳವರಲ್ಲವೇ ಪರಮಾತ್ಮ !

" ನ ಸ್ಮರತ್ಯಪಕಾರಾಣಾಂ ಶತಮಪ್ಯಾತ್ಮವತ್ತಯಾ, ಕಥಂಚಿದುಪಕಾರೇಣ ಕೃತೇನೈಕೇನ ತುಷ್ಯತಿ " ಎಂದಲ್ಲವೆ ಅಯೋಧ್ಯಾವಾಸಿಗಳು ರಾಮ ಗುಣಕೀರ್ತನ ಮಾಡಿರುವುದು ! ಮೇಲೆ ಹೇಳಿರುವ ಶ್ಲೋಕದಲ್ಲಿ-" ಕಥಂ ಚಿದುಪಕಾರೇಣ " ಎನ್ನುವುದರ ಅರ್ಥವನ್ನು ಗಹನವಾಗಿ ಯೋಚಿಸಿ ತಿಳಿಯಬೇಕು. ಇತರರು ಮಾಡುವುದು ನಿಜ ಸ್ಥಿತಿಯಲ್ಲಿ ಉಪಕಾರವಲ್ಲ. ಅವರು ಮಾಡಿದ್ದು ಅಪಕಾರವಾಗಿದ್ದರೂ ಕಥಂಚಿತ್ ಉಪಕಾರವಾಗಿ ಮಾಡಿ ಕೊಳ್ಳಲ್ಪಡುವುದೆಂಬುದಾಗಿದೆ. ಇದನ್ನು ಶ್ರೀವಚನ ಭೂಷಣದಲ್ಲಿ (4-1) " ನನ್ಮೈಯೆನ್ನು ಪೇರಿಡಲಾಮಪಡಿ ತೀಮೈಯುಂ ಕಾಣಾದೇ .....ತನಕ್ಕೇರ ಇದಂ ಪೆತ್ತುವಳಿವರ್ " ಎನ್ನುರ್ಕ್ಕೆ ತೋನ್ನಾಯ್ಯ ಎನ್ ಪೇರ್ಕ್ಕೆ ಶೋಪ್ಪಾಯ್ "ಎನ್ನಡಿಯಾರ್ಕ್ಕೆನೋಕ್ಕನಾಯ್ ಅವರಹಳವಿತಾಯ್ಯ ತೀರ್ಪ್ಪಾಯ್,

ಅಪರಾಧಂಗಳಂಕ್ಕೊಂಡಂಗೆ ನೆಳಲ್ಕೊಡುತ್ತಾಯ್ ''...ಇತ್ಯಾದಿ ದಿವ್ಯ ಸೂಕ್ತಿಗಳಿಂದ ತಿಳಿಯಬೇಕು.

ಇದು ರಾಮಾವತಾರದಲ್ಲಿ ಏನಾಯಿತೋ ಎಂದರೆ, ಅದಕ್ಕೆ ಒಂದು ಸ್ಥಳವನ್ನು ತೋರಿಸುತ್ತೇವೆ. ಆಳವಂದಾರ್ ಸ್ತೋತ್ರದಲ್ಲಿ ವಾಯಸ ರಕ್ಷಣವನ್ನು ಹೇಳುವ ಸ್ಥಳದಲ್ಲಿ '' ಶಾದ್ಯತೋ ವಾಯಸಸ್ಯ ದಯಾಲುಃ '' ಎಂದು ಹೇಳಿದ (ಪ್ರಣತೆ ಇತಿ ದಯಾಲುಃ) ಎನ್ನುವ ಗೂಢಾರ್ಥವನ್ನು ತಿಳಿದು ಸ್ತೋತ್ರ ಭಾಷ್ಯದಲ್ಲಿ ಪ್ರಕಟಿಸಿರುವುದು— '' ದಯಾರ್ದ್ರ ಬುದ್ಧ್ಯಾ ಪ್ರಣತತ್ವೇನ ಪರಿಗೃಹ್ಯ ಇತ್ಯರ್ಥಃ '' ಎಂದು, ಅದೇನೆಂದರೆ, ಪ್ರಣತಿಯನ್ನು ಉದ್ದೇಶಿಸಿ ಕಾಕಾಸುರನು ಬಂದುದಲ್ಲ. ಎಲ್ಲೆಲ್ಲಿಯೂ ಸುತ್ತಿ ಕಾರ್ಯವಾಗದೆ ಆಶ್ರಯ ಹೀನನಾಗಿ ಬಂದು ಬಿದ್ದಿದ್ದೇ ಆಗಿದೆ. ನಿರ್ಗತಿಯನ್ನೇ ಪ್ರಣತಿಯಾಗಿ ಭಗವಂತನು ರಕ್ಷಿಸಿದನು ಎನ್ನುವುದು ತಿಳಿದುಕೊಳ್ಳಬಹುದು. ವಿಭೀಷಣನ ಅಭಯ ಪ್ರದಾನ ಪ್ರಕರಣದಲ್ಲಿ ''ಯದ್ಯೇವಂ ಕಥಂಚನ'' ಎಂದುಕೊಂಡು ನೀತಿ ಇಲ್ಲದವರು ಎನ್ನುವ ಅರ್ಥವನ್ನು ತೆಗೆದುಕೊಳ್ಳಬಹುದು. ನಯವೆಂದರೆ ನೀತಿ. ಶ್ರೀ ರಾಮನನ್ನು ನೀತಿ ಇಲ್ಲದವನೆಂದು ಹೇಳಬಹುದೇ ? ಗೋಪಿಗಳು ಕೃಷ್ಣನನ್ನು ಕುರಿತು '' ನೇರಿಲೀ ನಿನ್ನು ಅಯಕ್ಕನ್ನೋ ನೀತಿಯುಳ್ಳಾದನಳಿಯಾಧಾಯ್ '' ಎನ್ನುತ್ತಾರೆ. ಹಾಗೆ ರಾಘವನನ್ನು ಕುರಿತು ಯಾರೂ ಹೇಳಿಲ್ಲ: ವಾಲಿಯಂಥವರು ಹೇಳುವುದು ಪರಮಾರ್ಥವಾಗಿ ತೆಗೆದುಕೊಳ್ಳಲು ಉಚಿತವೇ ? ಎಂಬ ಸಂದೇಹವುಂಟಾಗುತ್ತದೆ. ಅದಕ್ಕೆ ಅನ್ಯಾಯವಾದ ಕಾರ್ಯವ ಮಾಡುವರೆಂದು ಅರ್ಥವಲ್ಲ. ನೀತಿ ಎಂದರೆ ''ನಿಯತಿ'' ಶ್ರೀ ರಾಮನ ಕಾರ್ಯವು ಒಂದು ನಿಯತಿ (ವ್ಯವಸ್ಥೆಯಲ್ಲಿ) ಒಳಪಡುವುದಲ್ಲ, ಎಂದು ತಾತ್ಪರ್ಯವನ್ನು ತೆಗೆದುಕೊಳ್ಳಬೇಕು. (ಇದರ ವಿವರಣೆಯನ್ನು ಕೇಳಿ). ಪರಮ ಪೂಜ್ಯರಾದ ಭರದ್ವಾಜ ಮಹರ್ಷಿಯ ಆಶ್ರಮದಲ್ಲಿ ಭೋಜನವನ್ನು ಮಾಡಿದರೆಂದು ಕೇಳಿದ ಹಾಗೆ ಶಬರಿಯ ಕೈಯಲ್ಲೂ ಭುಜಿಸಿದರೆನ್ನುವುದನ್ನು ಕೇಳಿದ್ದೇವೆ. ವಿಶ್ವಾಮಿತ್ರ ಮುನಿಯನ್ನು (ನಾಥ) ಯಜಮಾನನಾಗಿ ಪಡೆದದನ್ನುವ ಹಾಗೆ '' ಸುಗ್ರೀವಂ ನಾಥ ಮಿಚ್ಛತಿ '' ''ಸುಗ್ರೀವಂ ಶರಣಂಗತಃ'' ಎನ್ನುವುದನ್ನು ಕೇಳಿರುತ್ತೇವೆ. ಈ ರೀತಿಯಾಗಿ ಒಂದು ನಿಯತಿ (ವ್ಯವಸ್ಥೆ ಇಲ್ಲದ) ಹೋಯಿತು ರಾಮಕಾರ್ಯಗಳಲ್ಲಿ. ''ಸಂಕಲ್ಪ ಸೂರ್ಯೋದಯದಲ್ಲಿ'' ''ಭಗವತಿ ಭಾರದ್ವಾಜೇ ಭಕ್ತಿಸ್ತದಾ ಶಬರೀ ಕಥೇ'' ಎಂದು ವಿವರಿಸಿರುವುದನ್ನು ತೆಗೆದುಕೊಂಡು ರಸಿಕ ಹೃದಯಂಗಮವಾಗಿ ನಿರ್ವಹಿಸಬಹುದು.

13. ವೀರಃ—ಭಗವಂತನ ಶ್ರೇಷ್ಠ ಗುಣಗಳಲ್ಲಿ ವೀರ್ಯ, ಶೌರ್ಯ, ಪರಾಕ್ರಮ ಎಂದು ಸೇರಿಸಿ ಅನುಸಂಧಾನ ಮಾಡುವುದುಂಟು. ಆ ಮೂರು ಶಬ್ದಗಳಿಗೂ ಅರ್ಥದಲ್ಲಿ ಸಂಬಂಧವಿಲ್ಲದ ಹಾಗೆ ತೋರಿದರೂ ಸಂಬಂಧವುಂಟು. ಶತ್ರುಗಳ ಸೈನ್ಯ ಎಷ್ಟು ಪ್ರಬಲವಾಗಿದ್ದರೂ ಅದನ್ನು ಕಂಡು ಹೆದರದಿರುವುದು ವೀರ್ಯ. ಆ ಸೈನ್ಯ

ದೊಳಗೆ ಒಬ್ಬನೇ ಹೋಗಿ ವೈರಿಗಳನ್ನು ಅನಾಯಾಸವಾಗಿ ಕೊಂದು ಮುಗಿಸಬಲ್ಲ ಶಕ್ತಿ ಶೌರ್ಯ. ಆ ರೀತಿ ಮಾಡುವಲ್ಲಿ ತನಗೆ ಕಿಂಚಿತ್ತೂ ಭಂಗ ಬಾರದಂತೆ ಸಕಲ ವಿಧವಾದ ಅಪಮಾನಗಳೂ ಶತ್ರುವಿಗೇ ಉಂಟಾಗುವುದು ಪರಾಕ್ರಮ ಎಂದು ಈ ರೀತಿಯಾಗಿ ಮೂರು ವಿಧವಾದ ಆಕ್ಷೇಪಣೆಗಳಿಗೆ ಸಮಾಧಾನ.

ಘೋರ ಯುದ್ಧಮಾಡುವ ವೀರರುಗಳಿಗೆ ಇರಬೇಕಾದ ಈ ಮೂರನ್ನೂ ಹೇಳುವ ನುಡಿಗಳಾಗಿ, ವೀರ್ಯ, ಶೌರ್ಯ, ಪರಾಕ್ರಮ ಶಬ್ದಗಳನ್ನಾಗಿ ತೆಗೆದುಕೊಳ್ಳಬಹುದು. ಇಲ್ಲಿ "ವೀರಃ" ಎಂದು ವೀರ್ಯವೊಂದು ಮಾತ್ರವೇ ಹೇಳಲ್ಪಟ್ಟಿದ್ದರೂ ಮತ್ತೆರಡನ್ನು ಉಪಲಕ್ಷಣವಾಗಿ ತೆಗೆದುಕೊಳ್ಳತಕ್ಕದ್ದು. ಅಥವಾ ಆ ನುಡಿಯಲ್ಲಿಯೇ (ಅದಾವುದೆಂದರೆ ವೀರಃ ಎನ್ನುವ ನುಡಿಯಲ್ಲಿಯೇ) ಆ ಮೂರು ಅರ್ಥಗಳನ್ನು ಸೇರಿಸಿ ಅನುಸಂಧಾನ ಮಾಡಬಹುದು. ಶ್ರೀ ರಾಮಾಯಣದಲ್ಲಿಯೂ ಮತ್ತು ಈ ರಾಮಭದ್ರನನ್ನು ಕುರಿತು ಹೇಳುವ ಅನೇಕ ಗ್ರಂಥಗಳಲ್ಲಿಯೂ, ಶ್ರೀ ರಾಮನನ್ನು ವೀರನೆಂದೂ, ಶೂರನೆಂದೂ, ಪರಾಕ್ರಮಶಾಲಿ ಎಂದೂ ಪ್ರಶಂಸಿಸಿ ಹೇಳುವುದನ್ನು ವಿಶೇಷವಾಗಿ ಕಾಣಬಹುದು. ಶ್ರೀ ರಾಮಚಂದ್ರನಿಗೆ ಮಹಾವೀರನೆಂಬ ಒಂದು ದಿವ್ಯನಾಮವುಂಟು. "ಜಯ ಜಯ ಮಹಾವೀರ" ಎಂದೇ ರಘುವೀರ ಗದ್ಯದ ಪ್ರಾರಂಭ. ವೀರ ರಾಘವನೆಂದೇ ಒಂದು ದೇಶದಲ್ಲಿ ಹೆಸರಿನಿಂದ ಪ್ರಕಾಶಿಸುವುದು ಪ್ರಸಿದ್ಧ. ಭವಭೂತಿ ಮಹಾಕವಿ ಮಹಾವೀರ ಚರಿತವೆಂದೇ ಹೆಸರಿಟ್ಟು ಗ್ರಂಥರಚನೆ ಮಾಡಿದ್ದಾರೆ. ಆಳ್ವಾರುಗಳು ಶ್ರೀ ರಾಮನ ಕಾರ್ಯಗಳನ್ನು ಹೇಳಿ ಹೇಳಿ ವೀರನೆಂದೇ ಉರು ಹಾಕುತ್ತಾರೆ.

ರಾವಣನೇ ಅದ್ಭುತವಾದ ವೀರ್ಯವು ರಾಮನದು ಎನ್ನುತ್ತಾನೆ (ವಾಲ್ಮೀಕಿ ರಾಮಾಯಣ ಯುದ್ಧಕಾಂಡ 106-6) "ತತೋಃ ಪ್ರಖ್ಯಾತ ವೀರ್ಯಸ್ಯ ರಂಜನೀಯಸ್ಯ ವಿಕ್ರಮೈಃ" ಎನ್ನುವುದು ರಾವಣನ ಮಾತು. ಶ್ರೀ ರಾಮನನ್ನು ಪ್ರಸಿದ್ಧನಾದ ವೀರನೆಂದು ರಾವಣನು ತನ್ನ ಬಾಯಿಂದ ರಣರಂಗದಲ್ಲಿ ಹೇಳುವುದೇಕೆಂದರೆ ; ಆ ವೀರ್ಯವನ್ನು ಚೆನ್ನಾಗಿ ಅನುಭವಿಸಿದ್ದರಿಂದಲ್ಲವೇ. "ವಿಕ್ರಮೈಃ ರಂಜನೀಯಸ್ಯ" ಎಂದು ನಂತರ ಹೇಳುತ್ತಾನೆ. ಈ ರೀತಿ ಹೇಳುವ ಹಾಗೆ ಶ್ರೀ ರಾಮನು ಮಾಡಿರುವ ವೀರಕಾರ್ಯಗಳು ಅನೇಕವಾಗಿದ್ದರೂ ಒಂದನ್ನು ಮಾತ್ರ ಇಲ್ಲಿ ತೆಗೆದು ತೋರಿಸುತ್ತೇವೆ. ಯುದ್ಧಕಾಂಡದಲ್ಲಿ ತೊಂಭತ್ತನಾಲ್ಕನೆಯ ಸರ್ಗವನ್ನು ನೋಡಿ. ಅಲ್ಲಿ ಮೂಲ ಬಲವು ನುಗ್ಗಿ ಬಂದು ಶ್ರೀ ರಾಮನ ಅತಿಮಾನುಷ ಯುದ್ಧಚಾತುರ್ಯವನ್ನು ಹೇಳಲು ವಾಲ್ಮೀಕಿ ಮುನಿವರರೂ ತಡವರಿಸುತ್ತಾರೆ, "ಭಿನ್ನಂ ಭಿನ್ನಂ ಶರೈರ್ ದಗ್ಧಂ ಪ್ರಭಗ್ನಂ ಶಸ್ತ್ರ ಪೀಡಿತಂ ॥ ಬಲಂ ರಾಮೇಣ ದದೃಶು ನ ರಾಮಂ ಶೀಘ್ರಕಾರಿಣಂ" ಎಂದು ರಾಮನಿಂದ ಅನೇಕವಾಗಿ ಕಷ್ಟಕ್ಕೊಳಗಾದ ರಾಕ್ಷಸ ಸೇನೆಗಳನ್ನು ನೋಡಿದರೇ ಹೊರತು ಬಂಬರದ ಹಾಗೆ ಸುತ್ತಿರುವ ರಾಮನನ್ನು ಒಬ್ಬರೂ ಕಂಡವರಿಲ್ಲ, ಎನ್ನುತ್ತಾರೆ. ಅನಂತರ "ಶತಂ ರಾಮ ಸಹಸ್ರಾಣಿ ರಣೇ ಪಶ್ಯಂತಿ ರಾಕ್ಷಸಾಃ" ಎಂದು ಸಹಸ್ರಾರು ರಾಮಮೂರ್ತಿಗಳನ್ನು ಕಂಡವೆನ್ನುತ್ತಾರೆ. ತಕ್ಷಣ "ಪುನಃ ಪಶ್ಯಂತಿ ಕಾಕುತ್ಸ್ಥಂ ಏಕ

ಮೇವ ಮಹಾಹವೇ" ಎಂದು ಆ ಯುದ್ಧ ಭೂಮಿಯಲ್ಲಿ ರಾಮನೊಬ್ಬನನ್ನೇ ನೋಡಿದೆವೆನ್ನುತ್ತಾರೆ. ರಾಮನನ್ನು ಕಾಣಲೇ ಇಲ್ಲ ಎನ್ನುವುದು, ಸಹಸ್ರಾರು ರಾಮನನ್ನು ಕಂಡೆವೆನ್ನುವುದು. ಒಬ್ಬ ರಾಮನನ್ನೇ ಕಂಡೆವೆನ್ನುವುದು. ಹೀಗೆ ಈ ರೀತಿ ಒಂದರೊಂದಿಗೆ ಒಂದು ಹೋಲಿಕೆಯಿಲ್ಲದ ಮಾತನಾಡುವಂತಲ್ಲವೆ ಭಗವಂತನು ಅತ್ಯಂತ ವಿಚಿತ್ರವಾಗಿ ಯುದ್ಧ ಕಾರ್ಯವನ್ನು ನಡೆಸಿದ್ದು!

ತಿರುವಾಯ್ ಮೊಳಿಯಲ್ಲಿ (8–6–3) "ಒರುವರಿರುವರೋರ್ ಮೂವರೆನ ನಿನ್ರುದುಂ ಉರುವು ಕರಂದುವವ್ ಉಳ್ಳುಂತೋರುಂ ತಿತ್ತಿಪ್ಪಾನ್" ಎನ್ನುವ ಪಾಶುರಕ್ಕೆ ಪೂರ್ವಾಚಾರ್ಯರುಗಳು ಅರ್ಥವನ್ನು ವಿವರಿಸಿರುವುದು ಇತರ ಪಂಡಿತರುಗಳ ಬುದ್ಧಿಗೆ ಸ್ವಲ್ಪ ಮಾತ್ರವೂ ಗೋಚರಿಸಲಾರದು.

ಒಬ್ಬರಿಬ್ಬರೊಂದಿಗೆ ಮೂವರೆಂದು ನಿಂತಮೇಲೆ ಆಕಾರ ವಿಲೀನವಾದದ್ದು ಯಾವಾಗ ಎಂಬುದು ತಿಳಿದುಕೊಳ್ಳಲಾಗದಂತೆ ಆಳ್ವಾರ್ ಪಾಶುರ ತಿಳಿಸುತ್ತವೆ. ಇದಕ್ಕೆ ಒಂದು ಗೀತೆ— "ಶಿರಂಕ್ಕಡತ್ತ ಕ್ಕನ್ನುತಿಗ್ಗೈತ್ತ ವರಕೆರ್ರ್ಯ ಉರುಕ್ಕೈಡವಾಳಿ ಪೊಳಿಂದ ಪೊರುಪನೇ" ಎಂದು ಹಾಡಿದಿರುತ್ತೆ. ಕೆಳಗಿನ ಮೊದಲ ನುಡಿಗಳಿಗೆ ಮೇಲಿನ ಹಾಡಿನ ಹಿನ್ನುಡಿಗಳೊಂದಿಗೆ ಅನ್ವಯವೆಂದು ಕಂಡು ತಾತ್ಪರ್ಯವನ್ನು ವಿವರಿಸುತ್ತಾರೆ. ಇಲ್ಲಿ ಪೆರಿಯವಾಚ್ಚಾನ್ ಪಿಳ್ಳೈ ವ್ಯಾಖ್ಯಾನ ಶ್ರೀ ಸೂಕ್ತಿಗಳನ್ನು ನೋಡಿ— "ಒರುವರಿರುವರೋರ್ ಮೂವರೆನ ನಿನ್ರು ಉರುವುಕರಂದು—ಉರುಕ್ಕೈಡವಾಳಿ ಪೊಳಿಂದ ಪೊರುಪನ್" ಎಂದು ಮೇಲಿನದರೊಂದಿಗೆ ಅನ್ವಿತವಾಗುತ್ತದೆ. ಮೂಲ ಬಲ ನಾಶವಾಗುವ ಹಾಗೆ ಮಾಡುವಾಗ ಮೂರು ಒಂದಾಗಿ ಕಾಣಿಸಿಕೊಂಡು ಪರಿಕ್ರಮದ ವೇಗವು ಅಧಿಕರಿಸಲು, ಇಬ್ಬರೂ ಮೂವರಾಗಿ ಕಂಡು, ವೇಗವು ಮಿತಿಮೀರಿದ್ದರಿಂದ ಇಂದ್ರಿಯ ಸಂಯೋಗಕ್ಕೆ ಸ್ಥಳವಿಲ್ಲದ ಹಾಗಾಗಿದ್ದುದರಿಂದ ರೂಪಗ್ರಹಣವು ಕುಂದಿ "ಉರುಕ್ಕೈಡವಾಪೊಳಿಂದ" ಬಿಟ್ಟೆಂದು ಅನ್ವಯ ವ್ಯಾಖ್ಯಿಸುತ್ತಿದ್ದುದರಿಂದ ರೂಪವು ಕಣ್ಣಿಗೆ ನಿಲುಗಡೆಯಿಲ್ಲದೆ ಇತ್ತು. ಇದರಿಂದ ಶ್ರೀ ರಾಮ ಶೌರ್ಯವು ಬಹಳ ಗೋಚರವೆಂದಾಯಿತು.

14. **ಶಕ್ತಿಮತಾಂ ಶ್ರೇಷ್ಠಃ**-ಎಂದರೆ ಅಪರಿಮಿತವಾದ ಶಕ್ತಿ ಉಳ್ಳವನೆಂದು. ಶ್ರೀ ರಾಮನು ಮಹಾಶಕ್ತಿಯುಳ್ಳವನಾಗಿರುವಾಗ ರಾವಣನನ್ನು ಒಂದು ಕ್ಷಣದಲ್ಲಿ ಕೊಂದಿರಬಹುದು! ಹಾಗೆ ಕೊಲ್ಲದೆ ಬಹಳ ಪ್ರಯಾಸ ಪಟ್ಟಿರುವುದು ತಿಳಿಯುತ್ತದೆಯಲ್ಲ! ಅದು ಏಕೆ? ಎಂದು ಕೆಲವರು ಕೇಳಬಹುದು. ಕೇಳಿ "ಪೊಲ್ಲಾವರಕ್ಕನೈ ಕಿಳ್ಳಿಕ್ಕಳೈಂದಾನೈ" ಎಂದು ಆಂಡಾಳ್ಳು, "ಚತುರ ಮಾಮದಿಳ್ ಶೂಳ್ ಇಲಂಕೈ ಕಿರೈವನ್ ತಲೈಪತ್ತು ದಿರವೊಟ್ಟಿ ಒರ್ ವೆಂಕಣೆಯುಯುತ್ತವನ್" ಎಂದು ತಿರುಪ್ಪಾಣಾಳ್ವಾರ್ ಹೇಳಿರುವ ಹಾಗೆಯೇ ರಾವಣ ಸಂಹಾರವನ್ನು ಭಗವಂತನು ಲೀಲಾಜಾಲವಾಗಿಯೇ ಮಾಡಿದನು. ಅದರಲ್ಲಿ ಸಂದೇಹವೇನೂ ಇಲ್ಲ.

ಹೇಗಾದರೂ ರಾವಣನು ಒಡಂಬಟ್ಟು ದಾರಿಗೆ ಬರುವುದುಂಟೋ ಎನ್ನುವ ಚಪಲ ಭಗವಂತನಿಗೆ ಇದ್ದುದರಿಂದಲೇ ಅವನನ್ನು ಸಂಹಾರ ಮಾಡುವುದಕ್ಕೆ ತಾಮಸ ಮಾಡಿದರೆಂಬ ತತ್ವವನ್ನು ತಿಳಿಯಲು ಯೋಗ್ಯ. ರಾವಣನಿಗಿಂತಲೂ ಅತ್ಯಧಿಕ ಬಲಶಾಲಿ ಯೆಂದು ಪ್ರಸಿದ್ಧನಾಗಿದ್ದ ವಾಲಿಯನ್ನು ಅನಾಯಾಸವಾಗಿ ವಧಿಸಿದವನು ಪರಮಾತ್ಮನಾದ ರಾಮ. (ಸುಂದರ ಕಾಂಡ ಸರ್ಗ 51 ಶ್ಲೋಕ 11). ಹನುಮಂತನು ರಾವಣನಿಗೆ ಹಿತೋಪದೇಶ ಮಾಡುವಲ್ಲಿ "ತ್ವಯಾ ವಿಜ್ಞಾತ ಪೂರ್ವಶ್ಚ ವಾಲೀ ವಾನರ ಪುಂಗವಃ ರಾಮೇಣ ನಿಹತ ಸಂಖ್ಯೇ ಶರೇಣೈಕೇನ ವಾನರಃ" ಎಂದು "ಅಪ್ಪಾ! ರಾವಣಾ! ವಾಲೀ ಎನ್ನುವ ವಾನರೇಶ್ವರನನ್ನು ನೀನು ಚೆನ್ನಾಗಿ ತಿಳಿದಿರುವೆಯಲ್ಲಾ! ಅವರು ಶ್ರೀ ರಾಮನ ಒಂದೇ ಬಾಣದಿಂದ ಮರಣ ಹೊಂದಿದರು" ಎನ್ನುತ್ತಾನೆ. ಹಾಗೂ ರಾವಣನನ್ನು ಹಲವಾರು ಬಗೆಯಲ್ಲಿ ಭಂಗಗೊಳಿಸಿದವನು ಕಾರ್ತವೀರ್ಯಾರ್ಜುನನು. ಅವನನ್ನು ಪರಶುರಾಮನು ತನ್ನ ಕೊಡಲಿ ಸೈನ್ಯದಿಂದ ಸಾವಿರ ಕೈಗಳನ್ನು ಕಡಿದು ಕೊಂದವರು. ಆ ಪರಶುರಾಮನು ಶ್ರೀ ರಾಮನಲ್ಲಿ ಪಟ್ಟಪಾಡು ತಿಳಿದಿದ್ದೇ—ಈ ರೀತಿ ಯಾಗಿ ಶಕ್ತಿಯುಳ್ಳವನಾದ ರಾಘವನು ರಾವಣನನ್ನು ಕೊಲ್ಲಲು ಶ್ರಮಪಡಬೇಕೇ? ಶ್ರಮಪಟ್ಟಿರುವುದಾಗಿ ಕಥೆಯಲ್ಲಿದ್ದರೂ ಸತ್ಯ ಸಂಕಲ್ಪನೂ ಮಹಾವೀರನೂ ಆದ ರಾಮನು ಏತಕ್ಕಾಗಿ ಶ್ರಮಪಟ್ಟನೆಂದು ಆಲೋಚಿಸಬೇಕಲ್ಲವೇ! ಶೂರ್ಪಣಖಿಯು ಮೂಗನ್ನು ಕುಯಿಸಿಕೊಂಡು ಜನಸ್ಥಾನದಲ್ಲಿರುವ ತನ್ನ ಅಣ್ಣನಾದ ಖರನ ಹತ್ತಿರ ಹೋಗಿ ವಿಷಯವನ್ನು ತಿಳಿಸಿ ಹೊರಳಾಡಿ ಅತ್ತು ಅವನಿಗೆ ಕೋಪವನ್ನುಂಟು ಮಾಡಲು, ಅವನು ಹದಿನಾಲ್ಕು ಸಾವಿರ ಸೇನಾಧಿಪತಿಗಳನ್ನು ಸೈನ್ಯಗಳನ್ನು ಶ್ರೀ ರಾಮನೊಂದಿಗೆ ಯುದ್ಧಮಾಡಲು ಕಳುಹಿಸಲು ರಾಘವನು ಅವರುಗಳೆಲ್ಲರನ್ನು ತಾನೊಬ್ಬನೇ ಕೊಂದು ಗೆದ್ದದ್ದರಿಂದ ಅನಂತರ ಖರನು ತಾನೇ ಎದುರಿಗೆ ಬಂದು ಎದುರಿಸಲು ರಾಮನು "ಅಸಹಾಯಶೂರ!" ಎಂದು ರಘುವೀರ ಗದ್ಯದಲ್ಲಿ ವಿವರಿಸಿರುವ ಹಾಗೆ ಲಕ್ಷ್ಮಣ ನನ್ನೂ ಜೊತೆಗೆ ಕರೆದುಕೊಳ್ಳದೆ ಏಕಾಕಿಯಾಗಿ ಅವನ ತಲೆಯನ್ನು ಕತ್ತರಿಸಿದ್ದು ಪ್ರಸಿದ್ಧ. "ಚತುರ್ದಶ ಸಹಸ್ರಾಣಿ ರಕ್ಷಸಾಂ ಭೀಮಕರ್ಮಣಾಂ ॥ ಏಕಶ್ಚ ರಾಮೋ ಧರ್ಮಾತ್ಮಾ ಕಥಂ ಯುದ್ಧಂ ಭವಿಷ್ಯತಿ ॥" ಎಂದು ಮಹಾತ್ಮರಾದ ಋಷಿಗಳೂ ಆಶ್ಚರ್ಯಪಡುವಂತೆ ಲೀಲಾಜಾಲವಾಗಿಲ್ಲವೇ ರಾಮನು ಮಾಡಿದ್ದು. ಆ ರೀತಿ ಅತ್ಯಧಿಕ ಪರಾಕ್ರಮಶಾಲಿಗೆ ರಾವಣನು ಒಬ್ಬ ಮನುಷ್ಯನೇ? ಒಂದೇ ಕ್ಷಣದಲ್ಲಿ ಅವನನ್ನು ನಾಶಪಡಿಸಲಾಗದೆ ಇಲ್ಲ. ಯಾವರೀತಿಯಿಂದಾಗಲಿ ಅವನು ಅಭಿಮುಖ ನಾಗಿ ಬರುತ್ತಾನೋ ಎಂದು ನೋಡುತ್ತಿದ್ದನಷ್ಟೆ. ಇನ್ನು ಮುಂದಿನ ಮಂಗಳಕರವಾದ ನಾಮ ಮಹಿಮೆಯನ್ನು ನೋಡೋಣ.

15. **ಧರ್ಮೀ**—ಶ್ರೀ ರಾಮಚಂದ್ರನನ್ನು ಧರ್ಮಿಯಾಗಿ ಹೇಳಿದೆ. ಅನೇಕ ಸ್ಥಳಗಳಲ್ಲಿ ರಾವಣನು ಲಂಕೆಯಿಂದ ಪಂಚವಟಿಗೆ ಓಡಿ ಬಂದು ಸೀತಾಪಹಾರಕ್ಕೆ ಮಾರೀಚ

ನನ್ನು ಸಹಾಯ ಬೇಡಿದಾಗ ಅವನು ರಾವಣನಿಗೆ ಅನೇಕ ರೀತಿಯಲ್ಲಿ ಹಿತೋಪದೇಶ ಮಾಡುತ್ತಾನೆ. ಅದರ ಮಧ್ಯೆ (ಅರಣ್ಯ 37-13) "ರಾಮೋ ವಿಗ್ರಹವಾನ್ ಧರ್ಮಃ" ಎನ್ನುತ್ತಾನೆ, ಕೈಕಾಲುಗಳೊಡನೆ ನಡೆದಾಡುವ "ಧರ್ಮವೇ ರಾಮನು" ಎಂದು ಅಸುರ ಪ್ರಕೃತಿಯಾದ ಮಾರೀಚನು ಹೇಳುತ್ತಾನೆ. ರಾವಣ ವಧೆಯಾದ ನಂತರ ಲಂಕೆಗೆ ಬಂದು ಸ್ತುತಿಸುವ ದೇವ ವರ್ಗದಲ್ಲಿ ಬ್ರಹ್ಮನು "ಭಗವಾನ್ ನಾರಾಯಣೋದೇವಃ" ಎಂದ ಮೇಲೆ "ಲೋಕಾನಾಂ ತ್ವಂ ಪರೋಧರ್ಮಃ" ಎನ್ನುತ್ತಾನೆ. ಗೀತೆಯಲ್ಲಿ "ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ" ಎಂದು ಧರ್ಮ ಸಂಸ್ಥಾಪನೆಗಾಗಿ ತಾನು ಅವತರಿಸುವುದಾಗಿ ಹೇಳಿದ ಪರಮ ಪುರುಷನು "ಸರ್ವಧರ್ಮಾನ್ ಪರಿತ್ಯಜ್ಯ" ಎಂದು ಸಕಲ ಧರ್ಮಗಳನ್ನೂ ಬಿಡು ಎಂದು ಹೇಳಿದ್ದು–ಬೇಡ ಬಿಟ್ಟು ಬಿಡು ಎನ್ನುವುದರೊಂದಿಗೆ ನಿಲ್ಲದೆ "ಮಾಮೇಕಂ ಶರಣಂ ವ್ರಜ" ಎಂದು ತನ್ನನ್ನು ಹೊಂದುವಂತೆ ಹೇಳುವುದರಿಂದ, ಸಾಕ್ಷಾತ್ ಧರ್ಮ ಎನ್ನುವ ತತ್ವವನ್ನು ಪ್ರಕಾಶ ಪಡಿಸಿದ್ದಾಗಿದೆಯಲ್ಲವೇ ? ನಾವು ಶ್ರಮಪಟ್ಟು ಸಾಧಿಸಬೇಕಾದ ಧರ್ಮ ಸಾಧ್ಯ ಧರ್ಮವೆನ್ನಲ್ಪಡುತ್ತದೆ. ಹಾಗಲ್ಲದೆ ಯಾವಾಗಲೂ ಸಿದ್ಧವಾಗಿರುವ ಧರ್ಮ ಪರಮಾತ್ಮ. ಸಾಧ್ಯ ಧರ್ಮವು ಅಪಾಯ ಬಹಳವೆಂದೂ, ಸಿದ್ಧಾಂತ ಧರ್ಮ ನಿರಪಾಯವೆಂದು ತಿಳಿಯತಕ್ಕದ್ದು. ದಶರಥ ಚಕ್ರವರ್ತಿ ಶ್ರೀ ರಾಮಚಂದ್ರನನ್ನು ಪುತ್ರನನ್ನಾಗಿ ಪಡೆದ ಭಾಗ್ಯಶಾಲಿಯಾಗಿದ್ದೂ ಒಂದು ದೌರ್ಭಾಗ್ಯವುಳ್ಳವನಾಗಿದ್ದನು. ಅಸುರ ಪ್ರಕೃತಿಯಾದ ಮಾರೀಚನಿಗೆ ತಿಳಿದ ತತ್ವ ಅವನಿಗೆ ತಿಳಿಯದೆ ಹೋಯಿತು. "ರಾಮೋ ವಿಗ್ರಹವಾನ್ ಧರ್ಮಃ" ಎಂದು ಅವನು ಹೇಳಿದ ಹಾಗೆ ಪ್ರತ್ಯಕ್ಷವಾದ ಸಿದ್ಧ ಧರ್ಮವಾದ ರಾಮನೊಂದಿಗೆ ಕೂಡಿ ಬಾಳುವುದನ್ನು ಬಿಟ್ಟು, ಆಭಾಸ ಧರ್ಮವಾದ ಸತ್ಯವಚನವನ್ನು ಕುರಿತು ನಿಂತು ಮೃತನಾದನಲ್ಲವೆ! ಆ ಚಕ್ರವರ್ತಿಯು ಮುಮುಕ್ಷುಪಡಿ (ತಿರುಮಂತ್ರ) ಸರ್ವಧರ್ಮಾನ್ ಪರಿತ್ಯಜ್ಯ ಎನ್ನುವ ಸ್ಥಳದಲ್ಲಿ (ಚಕ್ರವರ್ತಿಯು ಹಾಗೆ ಕಳೆದುಕೊಳ್ಳುವುದಕ್ಕೆ ಉದಾಹರಣೆ) ಮಣವಾಳ ಮಾಮುನಿಗಳ ಶ್ರೀ ಸೂಕ್ತಿ ರತ್ನವನ್ನು ಅನುಭವಿಸುವುದು. ಕೃಷ್ಣಾವತಾರದಲ್ಲಿ ದಧಿ ಭಾಂಡನ ಕಥೆಯನ್ನು ತಿಳಿಯದವರಿಲ್ಲ; ತಾಯಿಯ ಕೈಯ ಚಿಕ್ಕ ಕೋಲಿಗೆ ಭಯಪಟ್ಟು ಓಡಿಬಂದ ಕೃಷ್ಣನನ್ನು ಮರೆಸಿಟ್ಟು "ನಿನ್ನ ಮಗನು ಇಲ್ಲಿ ಇಲ್ಲ" ಎಂದು ಸುಳ್ಳು ಹೇಳಿ ಸಪರಿಕರನಾಗಿ ಮೋಕ್ಷವನ್ನು ಪಡೆದು ಹೋದನು. ದಶರಥನು ಸತ್ಯವಾದಿಯೆಂದು ಹೆಸರು ಪಡೆದು ನರಕ ಪರ್ಯಾಯವಾದ ಸ್ವರ್ಗವನ್ನೇ ಪಡೆದು ನಿಂತನು. ರಾಮನೇ ಸಾಕ್ಷಾತ್ ಧರ್ಮವೆಂದು ತಿಳಿಯಲಾರದ್ದರಿಂದಲ್ಲವೇ ಹೀಗೆ.

ಭಗವಂತನು ದೇವಿಯೊಂದಿಗೆ ಕೂಡಿ ಇರುವಾಗ ಮಾಡಿದ ಉಪನ್ಯಾಸಗಳಲ್ಲಿ ಶ್ರೇಷ್ಠವಾದ ಒಂದು ಉಪನ್ಯಾಸವನ್ನು ಹನುಮಂತನ ಹತ್ತಿರ ಹೇಳುತ್ತಾನೆ. "ಆನೃಶಂಸ್ಯಂ ಪರೋಧರ್ಮಃ ತ್ವತ್ತ ಏವಮಯಾ ಶ್ರುತಃ" ಎಂದು. "ಆನೃಶಂಸ್ಯ" ಯಾವುದು ? ಕನಿಕರ. ಅದೇ ಪರಮ ಧರ್ಮವೆಂದು ಉಪನ್ಯಾಸಿಸುವುದು ಅಭ್ಯಾಸವಂತೆ.

'' ಕರುಣೆಯೇ ರೂಪವನ್ನು ಧರಿಸಿ ಬಂದವನು ಕಾಕುತ್ಸ್ಥ '' ಎಂದು ಪ್ರಸಿದ್ಧಿ. ದಶಾವತಾರ ಸ್ತೋತ್ರದಲ್ಲಿ '' ಇಚ್ಛಾಮೀನ ವಿಹಾರ ಕಚ್ಛಪೇತ್ಯಾದಿ '' ಶ್ಲೋಕದಲ್ಲಿ ಒಂದೊಂದವತಾರದಲ್ಲಿ ಒಂದೊಂದು ವಿಶೇಷಣವನ್ನು ಕುರಿತು ಹೇಳಿಕೊಂಡು ಬರುವಲ್ಲಿ ರಾಮನನ್ನು '' ಕರುಣಾಕಾಕುತ್ಸ್ಥ '' ಎಂದು ಹೇಳಿರುವುದು ಗುರುತಿಸತಕ್ಕದ್ದು. ವಾಲಿ ವಧೆಯಾದ ನಂತರ '' ಸಂಜಾತ ಬಾಷ್ಪಃ ಪರವೀರ ಹಂತಾ ರಾಮೋ ಮುಹೂರ್ತಂ ವಿಮನಾ ಬಭೂವ '' ಎನ್ನುವಂತೆ ನಿಂತ ಭಗವಂತನನ್ನು ''ಕರುಣಾಕಾಕುತ್ಸ್ಥ '' ಎಂದೇ ಹೇಳಬೇಕು. ಇನ್ನು ಮುಂದಿನ ದಿವ್ಯನಾಮವನ್ನು ಗಮನಿಸೋಣ.

16. **ಧರ್ಮವಿದುತ್ತಮಃ**--ಧರ್ಮಜ್ಞರುಗಳಲ್ಲಿ ಹಿರಿಯವನು ಶ್ರೀ ರಾಮಚಂದ್ರ ಎನ್ನುವಂತೆ. ಧರ್ಮವನ್ನು ಚೆನ್ನಾಗಿ ತಿಳಿದವನೆಂದು ಗೋದಾದೇವಿಯು ಶ್ರೀ ಕೃಷ್ಣಪರಮಾತ್ಮನಿಗೆ '' ಧರ್ಮಪರಿಯಾ ಕುಡುಂಬಿ '' ಯೆಂದು ಬಿರುದುಕೊಟ್ಟಳು. ಹಾಗೆಂದರೆ, ಧರ್ಮವನ್ನು ತಿಳಿಯದವನು ಎಂದು. ಅದಕ್ಕೆ ವಿರೋಧವಾಗಿ ರಾಮಚಂದ್ರನು ಧರ್ಮಜ್ಞರುಗಳಲ್ಲಿ ಮುಖಂಡನಾಗಿರುವವನು. ಸೀತಾದೇವಿಯು ರಾವಣನಿಗೆ ಹಿತವನ್ನು ಉಪದೇಶಿಸುವ ಕಾಲದಲ್ಲಿ '' ವಿದಿತ ಸ್ಸ ಹಿ ಧರ್ಮಜ್ಞಃ '' ಎಂದು ಪರಮಾತ್ಮನನ್ನು ಧರ್ಮಜ್ಞನೆಂದು ಹೇಳಿರುವುದು ಪ್ರಸಿದ್ಧ. ಅವಳ ಮನಸ್ಸಿನಲ್ಲಿ ನೆನಸಿದ ಧರ್ಮ ಇಂತಹುದೆಂಬುದನ್ನು ಅವಳು ತಾನೇ ಮುಂದೆ ಹೇಳುತ್ತಾಳೆ. '' ಶರಣಾಗತ ವತ್ಸಲಃ '' ಎನ್ನುವುದರಿಂದ ಶರಣಾಗತರ ಹತ್ತಿರ ಪ್ರೀತಿಯನ್ನಿಟ್ಟಿರುವುದೇ ಪರಮಾತ್ಮನ ಪರ್ಯವಸಿತ ಧರ್ಮವೆಂದು ಅದನ್ನು ಅವರು ಚೆನ್ನಾಗಿ ತಿಳಿದಿರುವರೆಂದೂ ಹೇಳಿದಂತಾಯಿತು. ಚೆನ್ನಾಗಿ ತಿಳಿದವರೆಂದರೆ ತಿಳಿದಿರುವುದೆಂದರ್ಥವಲ್ಲ. ತಿಳಿಯುವುದಕ್ಕೆ ಫಲವಾದ ಅನುಷ್ಠಾನವಾದ್ದರಿಂದ ಆ ಧರ್ಮವನ್ನು ಚೆನ್ನಾಗಿ ಆಚರಿಸುವವರು ಎನ್ನುವುದೇ ತಾತ್ಪರ್ಯವಾಗುತ್ತದೆ. ಶ್ರೀ ರಾಮಾಯಣದಲ್ಲಿ ಶರಣಾಗತಿ ಮಾಡಿದವರು ಯಾರು ಯಾರು ? ಅವರುಗಳ ಹತ್ತಿರ ಪರಮಾತ್ಮನು ತೋರಿಸಿದ ವಾತ್ಸಲ್ಯ ಎಂತಹುದೆಂದು ವಿಮರ್ಶಿಸಬೇಕು.

ಇದಕ್ಕೆ ಮೊದಲು ಶರಣಾಗತಿಯೆಂದರೇನು ? ಎನ್ನುವ ವಿಮರ್ಶೆ ಅತ್ಯಂತ ಮುಖ್ಯವಾದದ್ದು. ಸಾರವಾಗಿ ತಿಳಿಸುತ್ತೇನೆ ಇಲ್ಲಿ. ಶರಣಾಗತಿ ಎಂದರೂ ಪ್ರಪತ್ತಿ ಎಂದರೂ ಒಂದೇ. ನೂರು ಆಕಾಂಕ್ಷೆಗಳನ್ನು ಉಂಟುಮಾಡಿ ಆಳವಾಗಿ ನೋಡುವಲ್ಲಿ. ಭಗವತ್ಪ್ರವೃತ್ತಿ ವಿರೋಧಿ ಸ್ವಪ್ರವೃತ್ತಿ ನಿವೃತ್ತಿ ಮಾತ್ರ ಪ್ರಪತ್ತಿಯಾಗಿ ಆಚರಿಸಲ್ಪಡುತ್ತದೆ. ಗಜೇಂದ್ರಾಳ್ವಾರ್ರು ಪ್ರಪನ್ನರು. ದ್ರೌಪದಿ ಪ್ರಪನ್ನೆ ಎನ್ನುತ್ತೇವೆ. ಇವರ ಹತ್ತಿರ ಮೇಲೆ ಹೇಳಿದ ಲಕ್ಷಣವೇ ಸಮನ್ವಿತವಾಗುತ್ತದೆ. '' ಗಜ ಆಕರ್ಷತೇ ತೀರೇ ಗ್ರಾಹ ಆಕರ್ಷತೇ ಜಲೇ '' ಎನ್ನುವಂತೆ ಗಜೇಂದ್ರಾಳ್ವಾರ್ರು ತನ್ನನ್ನು ತಾನು ರಕ್ಷಿಸಿಕೊಳ್ಳುವುದಾಗಿ ಸ್ವಪ್ರವೃತ್ತಿ ಪರನಾಗಿರುವವರೆಗೂ ಅವನ ಮೇಲೆ ಕರುಣೆ ಪ್ರಸರಿಸಿರಲಿಲ್ಲ. ಆ ಪ್ರವೃತ್ತಿ ಅಡಗಿದ ನಂತರವೇ ತನ್ನ ನಿಲುವನ್ನೂ ಲಕ್ಷಿಸದೆ, ಶಿವೆ, ವಸ್ತ್ರಗಳ

ಪರಿವೆಯೂ ಇಲ್ಲದೆ ಓಡಿಬರುವ ಆತುರ ಪರಮಾತ್ಮನಿಗುಂಟಾಯಿತು. ದ್ರೌಪದಿಯ ಪಕ್ಷದಲ್ಲೂ ಈ ಹಿರಿಮೆಯನ್ನು ನೋಡೋಣ. " ಇರುಕ್ಕೈಯುಂ ವಿಟ್ಟೇನೋ ದ್ರೌಪದಿಯೈ ಪೋಲೆ " ಎನ್ನುವಂತಹ ಸ್ಥಿತಿ ಅವಳಿಗೆ ಉಂಟಾದ ನಂತರವೇ ಅವಳು ರಕ್ಷಣೆಯನ್ನು ಹೊಂದಿದಳು. ತನ್ನ ಮಾನವನ್ನು ತಾನೇ ಕಾಪಾಡಿಕೊಳ್ಳುವವಳಾಗಿ ಪ್ರಯತ್ನಿಸಿ ತನ್ನ ಸೀರೆಯನ್ನು ತಾನು ಬಿಗಿಯಾಗಿ ಹಿಡಿದುಕೊಂಡ ಸ್ಥಿತಿಯುಂಟಲ್ಲ. ಅದೇನೇ ಭಗವತ್ಪ್ರವೃತ್ತಿ ವಿರೋಧಿಯಾದ ಸ್ವಪ್ರವೃತ್ತಿಯಾಯಿತು. ಅದು ದೂರವಾದ ನಂತರವಲ್ಲವೇ ಸೀರೆಯು ವಿಸ್ತೃತವಾಗುವಂತೆ ಭಗವತ್ಕೃಪೆ ಕಾಣಿಸಿಕೊಂಡಿತು.

ಈ ರಹಸ್ಯವನ್ನು ರಾಮಾಯಣದಲ್ಲಿ ತೋರಿಸುತ್ತೇನೆ, ನೋಡಿ. ಕಾಕಾಸುರನು ಶರಣಾಗತಿ ಮಾಡಿದ್ದಾಗಿ ಹೇಳಲ್ಪಡುತ್ತದೆ. ಆ ಶರಣಾಗತಿಯ ಹಿರಿಮೆಯನ್ನು ವಿಮರ್ಶಿಸಿ ನೋಡಿದರೆ ಮೇಲೆ ವಿವರಿಸಲ್ಪಟ್ಟ ರೀತಿಯೇ ಕಂಡು ಬರುತ್ತದೆ " ಸ ತಂ ನಿಪತಿತಂ ಭೂಮೌ " ಎನ್ನುವಂತೆ ಎಲ್ಲಿಯೂ ಸಹಾಯ ದೊರೆಯದೆ ಧರಾಶಾಯಿಯಾಗಿ ಬಿದ್ದನಲ್ಲಾ. ಅದೇ ಅಲ್ಲವೇ ಅವನ ಶರಣಾಗತಿಯಾಗಿ ಆಚಾರ್ಯರುಗಳಿಂದ ನಿರ್ಣಯಿಸಲ್ಪಟ್ಟಿತು. ಅವನಿಗೂ ರಕ್ಷಣೆ ದೊರಕಿತು.

ಕಾಕಾಸುರನಿಗಾದ ಈ ಸ್ಥಿತಿ ರಾವಣನಿಗೂ ಉಂಟು. ಪ್ರಬಲವಾದ ಯುದ್ಧವು ನಡೆಯುವ ಕಾಲದಲ್ಲಿ " ಯೋ ವಜ್ರ ಬಾಧಾಶ.........ನಿ ಜ್ವಾಲ ಚಾಪಂ ಮುಮೋಚ ವೀರಃ " ಎನ್ನುವಂತಹ ಸ್ಥಿತಿ ರಾವಣನಿಗೆ ಉಂಟಾಯಿತು. ಆಗ ಪರಮಾತ್ಮನು " ಗಚ್ಛಾನುಜಾನಾಮಿ " " ಹೊರಟು ಹೋಗು. ಅಪ್ಪಣೆಯನ್ನು ಕೊಡುತ್ತೇನೆ " ಎಂದು ಹೇಳಿ ಬಿಟ್ಟಿರುವುದುಂಟೋ—ಅದು ತತ್ಕಾಲ ರಕ್ಷಣೆಯಲ್ಲಿ ಸೇರಿದ್ದೇ ಆಗುತ್ತದೆ. ಆತ್ಯಂತಿಕ ರಕ್ಷಣೆಯನ್ನೇ ಮಾಡಬೇಕೆಂಬ ಇಚ್ಛೆ ಭಗವಂತನಿಗೆ ಇದ್ದಿದ್ದುಂಟು. ಅವನು ವಿಧಿ ವಶದಿಂದ ಪುನಃ ಯುದ್ಧದಲ್ಲಿ ತೊಡಗಿ ಭಗವತ್ ಪ್ರವೃತ್ತಿ ವಿರೋಧಿ, ಸ್ವಪ್ರವೃತ್ತಿ ನಿಷ್ಠನಾಗಿ ನಾಶವಾಗಿ ಹೋದನು. ಅವನಿಗೂ ರಕ್ಷಣೆಯನ್ನೇ ಉಂಟು ಮಾಡಿ ಅನುಗ್ರಹಿಸಿದನು. ಪರಮಾತ್ಮನೆಂಬುದು ಶ್ರೀ ರಾಮಾಯಣದಲ್ಲಿ ಅಂತರಂಗ ಪರಮಾರ್ಥ. ಅವನಿಗೆ ಚರಮ ಸಂಸ್ಕಾರ ಮಾಡುವುದಿಲ್ಲವೆಂದು ಹಠವಾಗಿ ಇದ್ದ ವಿಭೀಷಣಾಳ್ವಾರ್‌ರನ್ನು ನಿರ್ಬಂಧ ಪಡಿಸಿ ಅದನ್ನು ಮಾಡುವ ಹಾಗೆ ಆಜ್ಞೆಮಾಡಿದ ಭಗವಂತನು " ಅವನ ದೇಹಕ್ಕೆ ಒಳ್ಳೆಯದನ್ನು ಮಾಡಲು ನಿಶ್ಚಯಿಸಿದ ನಮ್ಮ ಸಂಕಲ್ಪವು ನೆರವೇರದೆ ಉಳಿದರೂ ಅವನ ಆತ್ಮನಿಗಾದರೂ ಮೋಕ್ಷವನ್ನುಂಟು ಮಾಡಿದೆವಲ್ಲ ಎಂದು ಆನಂದ ಪಟ್ಟಿರುವುದನ್ನು ನೆನಸುವುದು," " ಮರಣಾಂತಾನಿ ವೈರಾಣಿ ನಿವೃತ್ತಂ ನಃ ಪ್ರಯೋಜನಂ" "ಕ್ರಿಯತಾಮಸ್ಯ ಸಂಸ್ಕಾರಃ ಯಥಾಪ್ಯೇಷ ತಥಾ ಮಮ " ಎನ್ನುವ ಪರಮಾತ್ಮನ ಶ್ಲೋಕಕ್ಕೆ ನಂಬಿಳ್ಳೆಯವರ ರಸಭರಿತವಾದ ವ್ಯಾಖ್ಯಾನವನ್ನು ಕಾಣಬಹುದು.

ಮಂಗಳಂ